ಮೈಸೂರು ವಿಶ್ವವಿದ್ಯಾನಿಲಯ

ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು– ಸಾಂಸ್ಕೃತಿಕ ಅಧ್ಯಯನ

ಪಿಎಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು

ಸ್ಮಿತಾ.ಎ.ಪಿ
ಸಂಶೋಧನಾ ವಿದ್ಯಾರ್ಥಿ
ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮಾರ್ಗದರ್ಶಕರು

ಡಾ.ಕೆ.ತಿಮ್ಮಯ್ಯ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮಹಾರಾಜ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

2015

ಮೈಸೂರು ವಿಶ್ವವಿದ್ಯಾನಿಲಯ

ಕನ್ನಡ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–05.

ಪ್ರಾಂಶುಪಾಲರ ದೃಢೀಕರಣ ಪತ್ರ

ಸ್ಮಿತಾ.ಎ.ಪಿ., ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–05. ಇವರು ಡಾ.ಕೆ.ತಿಮ್ಮಯ್ಯ, ಸಹಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇವರ ಮಾರ್ಗದರ್ಶನದಲ್ಲಿ **'ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು–ಸಾಂಸ್ಕೃತಿಕ ಅಧ್ಯಯನ'** ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಮಹಾಪ್ರಬಂಧವನ್ನು ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಸಂಶೋಧನೆಯು ಇವರ ಸ್ವಂತ ಪರಿಶ್ರಮದಿಂದ ಕೂಡಿರುವುದಾಗಿದ್ದು, ಇದನ್ನು ಯಾವುದೇ ವಿಶ್ವವಿದ್ಯಾನಿಲಯದ ಎಂ.ಎ., ಎಂ.ಫಿಲ್., ಪಿಎಚ್.ಡಿ. ಅಥವಾ ಯಾವುದೇ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಾಗಿ ಭಾಗಶಃವಾಗಿಯಾಗಲಿ, ಪೂರ್ಣ–ಪ್ರಮಾಣವಾಗಿಯಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಮೈಸೂರು

ದಿನಾಂಕ :

ಪ್ರಾಂಶುಪಾಲರು

ಮೈಸೂರು ವಿಶ್ವವಿದ್ಯಾನಿಲಯ

ಡಾ.ಕೆ.ತಿಮ್ಮಯ್ಯ
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಮಾರ್ಗದರ್ಶಕರ ದೃಢೀಕರಣ ಪತ್ರ

ಸ್ಮಿತಾ.ಎ.ಪಿ., ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–05. ಇವರು 'ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು–ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಮಹಾಪ್ರಬಂಧವನ್ನು ಸಿದ್ಧಪಡಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸುತ್ತಿದ್ದಾರೆ.

ಈ ಸಂಶೋಧನೆಯು ಇವರ ಸ್ವಂತ ಪರಿಶ್ರಮದಿಂದ ಕೂಡಿರುವುದಾಗಿದ್ದು, ಇದನ್ನು ಯಾವುದೇ ವಿಶ್ವವಿದ್ಯಾನಿಲಯದ ಎಂ.ಎ., ಎಂ.ಫಿಲ್., ಪಿಎಚ್.ಡಿ. ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಾಗಿ ಭಾಗಶಃವಾಗಿಯಾಗಲಿ, ಪೂರ್ಣಪ್ರಮಾಣವಾಗಿಯಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು

ದಿನಾಂಕ :

ಡಾ.ಕೆ.ತಿಮ್ಮಯ್ಯ

ಪ್ರಮಾಣ ಪತ್ರ

ಸ್ಮಿತಾ.ಎ.ಪಿ., ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–05. ಆದ ನಾನು ಡಾ.ಕೆ.ತಿಮ್ಮಯ್ಯ, ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇವರ ಮಾರ್ಗದರ್ಶನದಲ್ಲಿ **'ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು–ಸಾಂಸ್ಕೃತಿಕ ಅಧ್ಯಯನ'** ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಮಹಾಪ್ರಬಂಧವನ್ನು ಕನ್ನಡ ಪಿಎಚ್.ಡಿ. ಪದವಿಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸಿದ್ಧಪಡಿಸಿರುತ್ತೇನೆ.

ಈ ಸಂಶೋಧನಾ ಮಹಾಪ್ರಬಂಧವನ್ನು ನನ್ನ ಸ್ವಂತ ಪರಿಶ್ರಮದಿಂದ ಸಿದ್ಧಪಡಿಸಲಾಗಿದ್ದು, ಇದನ್ನು ಯಾವುದೇ ವಿಶ್ವವಿದ್ಯಾನಿಲಯದ ಎಂ.ಎ., ಎಂ.ಫಿಲ್., ಪಿಎಚ್.ಡಿ. ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಾಗಿ ಭಾಗಶಃವಾಗಿಯಾಗಲಿ, ಪೂರ್ಣ ಪ್ರಮಾಣವಾಗಿಯಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು
ದಿನಾಂಕ :

ಸ್ಮಿತಾ.ಎ.ಪಿ
ಸಂಶೋಧಕರು

ಅರಿಕೆ

ಸಂಶೋಧನೆ ಎಂಬುದು ಒಬ್ಬರ ಕೆಲಸವಾದರು ಅದಕ್ಕೊಂದು ನಿರ್ದಿಷ್ಟ ರೂಪ ಬರಲು ಹಲವರ ಸಲಹೆ, ಸಹಕಾರ, ಮಾರ್ಗದರ್ಶನ ತುಂಬಾ ಅವಶ್ಯಕ. ಸಂಶೋಧನಾ ಮಹಾಪ್ರಬಂಧ ರೂಪುಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಅಂತಹವರನ್ನು ನೆನೆಯಬೇಕಾದುದು ನನ್ನ ಆದ್ಯ ಕರ್ತವ್ಯ.

ಸಂಶೋಧನೆಯ ನನ್ನ ಆಸಕ್ತಿಗೆ ಮಾರ್ಗದರ್ಶಕರಾಗಿ ಒಪ್ಪಿಗೆ ಸೂಚಿಸುವುದರೊಂದಿಗೆ ಪ್ರಸ್ತುತ ಸಂಶೋಧನಾ ಮಹಾಪ್ರಬಂಧಕ್ಕೆ ವಿಷಯವನ್ನು ಸೂಚಿಸಿ ಉಪಯುಕ್ತವಾದ ಹಲವು ಸಲಹೆ-ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ **ಡಾ.ಕೆ.ತಿಮ್ಮಯ್ಯ,** ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇವರಿಗೆ ಹಾಗೂ ನಾನು ಸಂಶೋಧನೆಯಲ್ಲಿ ತೊಡಗಲು ಅನುವು ಮಾಡಿಕೊಟ್ಟಂತಹ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ನಿರ್ದೇಶಕರಾದ **ಪ್ರೊ.ಗಂಗಾನಾಯಕ್** ಅವರಿಗೆ ಗೌರವಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಸಂಶೋಧನಾ ಕಾರ್ಯದಲ್ಲಿ ತೊಡಗಿದಾಗ ನೆರವಾದ ನನ್ನ ಗುರುಗಳಾದ ಪ್ರೊ.ಬಸವರಾಜ ಕಲ್ಗುಡಿ, ಟಿ.ಬಿ.ನೇತ್ರಾವತಿಗೌಡ ಮತ್ತು ಮಧುಸೂದನ್ ಜೋಶಿ ಅವರ ಸಹಾಯವನ್ನು ಮರೆಯುವಂತಿಲ್ಲ.

ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮಾಹಿತಿ ನೀಡಿ ಸಹಕರಿಸಿದ ಚನ್ನಪಟ್ಟಣ ತಾಲ್ಲೂಕಿನ ಎಲ್ಲಾ ಗ್ರಾಮದ ಜನರಿಗೆ ನನ್ನ ಕೃತಜ್ಞತೆಗಳು. ಕ್ಷೇತ್ರ ಕಾರ್ಯದಲ್ಲಿ ನನ್ನೊಡನೆ ಗ್ರಾಮಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ಸಹಕಾರ ನೀಡಿದ ನನ್ನ ಎಲ್ಲಾ ಸ್ನೇಹಿತರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಾನು ಉನ್ನತ ವ್ಯಾಸಂಗವನ್ನು ಮಾಡಬೇಕೆಂದು ನಿರಂತರವಾಗಿ ಪ್ರೋತ್ಸಾಹ ನೀಡಿದ ನನ್ನ ತಂದೆ ಎ.ಪಿ.ಪುಟ್ಟರಾಜು, ತಾಯಿ ಶ್ರೀಮತಿ ಸುಕನ್ಯಾ, ತಂಗಿ ಯೋಗಿತ ಮತ್ತು ತಮ್ಮ ಚೇತನ್‌ಗೌಡ ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನಾ ಪ್ರಬಂಧವನ್ನು ಪೂರ್ಣಗೊಳಿಸಲು ಸಹಕರಿಸಿದ ಪತಿ ವರುಣ್.ಎಂ. ಹಾಗೂ ಅತ್ತೆಯವರಾದ ಟಿ.ಎನ್.ಸರೋಜ ಮತ್ತು ಮಾವನವರಾದ ಮಾದೇಗೌಡ ಅವರನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಈ ಮಹಾಪ್ರಬಂಧವನ್ನು ಬೆರಳಚ್ಚು ಮಾಡಿಕೊಟ್ಟ ಸತೀಶ್ ಹಾಗೂ ಸುರೇಂದ್ರ.ಸಿ. ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಸ್ಥಳ : ಮೈಸೂರು

ದಿನಾಂಕ: **ಸ್ಮಿತಾ.ಎ.ಪಿ.**

ಪರಿವಿಡಿ

ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು – ಸಾಂಸ್ಕೃತಿಕ ಅಧ್ಯಯನ

ಪೀಠಿಕೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – 1 : ಸ್ಥಳನಾಮಗಳ ಉಗಮ ಮತ್ತು ವಿಕಾಸ

1.1 ಸ್ಥಳನಾಮಗಳ ಅರ್ಥ ಮತ್ತು ಸ್ವರೂಪ

1.2 ಸ್ಥಳನಾಮಗಳ ಅಧ್ಯಯನದ ಇತಿಹಾಸ

ಅಧ್ಯಾಯ – 2 : ಚನ್ನಪಟ್ಟಣ ತಾಲ್ಲೂಕಿನ ಪಕ್ಷಿನೋಟ

2.1 ಚನ್ನಪಟ್ಟಣ ತಾಲ್ಲೂಕಿನ ಭೌಗೋಳಿಕ ಹಿನ್ನೆಲೆ

2.2 ಚನ್ನಪಟ್ಟಣ ತಾಲ್ಲೂಕಿನ ಚಾರಿತ್ರಿಕ ಹಿನ್ನೆಲೆ

2.3 ಚನ್ನಪಟ್ಟಣ ತಾಲ್ಲೂಕಿನ ಸಾಮಾಜಿಕ ಹಿನ್ನೆಲೆ

2.4 ಚನ್ನಪಟ್ಟಣ ತಾಲ್ಲೂಕಿನ ಸಾಹಿತ್ಯಕ ಹಿನ್ನೆಲೆ

2.5 ಚನ್ನಪಟ್ಟಣ ತಾಲ್ಲೂಕಿನ ರಾಜಕೀಯ ಹಿನ್ನೆಲೆ

2.6 ಚನ್ನಪಟ್ಟಣ ತಾಲ್ಲೂಕಿನ ಧಾರ್ಮಿಕ ಹಿನ್ನೆಲೆ

ಅಧ್ಯಾಯ –3 : ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು

3.1 ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಸ್ವರೂಪ

3.2 ಸ್ಥಳನಾಮಗಳ ವರ್ಗೀಕರಣ

3.3 ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ವರ್ಗೀಕರಣ

3.4 ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಸಾಂಸ್ಕೃತಿಕ ಸಂಗತಿಗಳು

ಅಧ್ಯಾಯ –4 : ಶಾಸನೋಕ್ತ ಸ್ಥಳನಾಮಗಳು

ಅಧ್ಯಾಯ –5 : ಜನಪದ ಸಾಹಿತ್ಯದ ನೆಲೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು

5.1 ಐತಿಹ್ಯಗಳಲ್ಲಿ ಸ್ಥಳನಾಮಗಳು

5.2 ಜನಪದ ಕಥೆಗಳಲ್ಲಿ ಸ್ಥಳನಾಮಗಳು

5.3 ಗಾದೆಗಳಲ್ಲಿ ಸ್ಥಳನಾಮಗಳು

5.4 ಒಗಟುಗಳಲ್ಲಿ ಸ್ಥಳನಾಮಗಳು

5.5 ಜನಪದಗೀತೆಗಳಲ್ಲಿ ಸ್ಥಳನಾಮಗಳು

ಅಧ್ಯಾಯ – 6 : ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಭಾಷಿಕ ವಿಶ್ಲೇಷಣೆ

6.1 ಸ್ಥಳನಾಮಗಳ ರಚನಾತ್ಮಕ ಅಂಶಗಳು

6.2 ಸ್ಥಳನಾಮಗಳ ಸಂಧಿ ವಿವರ

6.3 ಸ್ಥಳನಾಮಗಳ ಸಮಾಸ ವಿವರ

6.4 ಭಾಷಾ ವೈಜ್ಞಾನಿಕ ಪರಿಶೀಲನೆಗಳು

6.5 ಸ್ಥಳನಾಮಗಳ ನಿಷ್ಪತ್ತಿ

ಸಮಾರೋಪ

ಅನುಬಂಧಗಳು :

1. ಗ್ರಂಥಸೂಚಿ
2. ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಅಕಾರಾದಿ ಪಟ್ಟಿ
3. ವಕ್ತೃಗಳ ವಿವರ
4. ಪ್ರಶ್ನಾವಳಿ
5. ತಾಲ್ಲೂಕಿನ ನಕ್ಷೆ
6. ಛಾಯಾಚಿತ್ರಗಳು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ:

ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ನಡೆಯಬೇಕಾದ ಅಧ್ಯಯನಗಳ ವಿಷಯದಲ್ಲಿ ಸ್ಥಳನಾಮಗಳ ಅಧ್ಯಯನವು ಮುಖ್ಯವಾದುದು. ಒಂದು ಸ್ಥಳನಾಮದ ಅಧ್ಯಯನವು ಅಲ್ಲಿನ ಸುತ್ತಮುತ್ತಲಿನ ಗ್ರಾಮಗಳನ್ನಾಳಿದ ಪಾಳೇಗಾರರು, ರಾಜರು, ನಾಡನ್ನು ಕಟ್ಟಿದ ವೀರರು, ಕೆರೆ–ಕಟ್ಟೆಗಳನ್ನು ನಿರ್ಮಿಸಿದ ಗ್ರಾಮದ ಗಾವುಂಡರ ಇತಿಹಾಸವನ್ನು ಹೇಳುವುದೇ ಆಗಿರುತ್ತದೆ. ಯಾವುದೇ ಸಂಸ್ಕೃತಿಯ ತಳಹದಿ ಗ್ರಾಮಗಳೇ ಆಗಿವೆ. ಗ್ರಾಮಗಳಲ್ಲಿ ಏನಿಲ್ಲವೆಂಬುದಿಲ್ಲ. ಎಲ್ಲಾ ಐತಿಹಾಸಿಕ ವಿವರಗಳು, ಸಾಹಿತ್ಯಕ ವಿಚಾರಗಳು, ಸಾಂಸ್ಕೃತಿಕ ಮಾಹಿತಿಗಳು ಗ್ರಾಮಗಳಿಂದ ದೊರೆಯುವುದುಂಟು. ಕೃಷಿ ಕ್ಷೇತ್ರದಿಂದ ಹಿಡಿದು ಆಧುನಿಕ ವಿಜ್ಞಾನದ ಪ್ರಗತಿಯವರೆಗಿನ ಎಲ್ಲಾ ಹಂತಗಳು ಗ್ರಾಮಗಳಿಂದಲೇ ಜನ್ಮ ತಳೆದಂತಹವು. ಗ್ರಾಮಗಳಿಂದಲೇ ಒಂದು ದೇಶದ, ರಾಜ್ಯದ ಪ್ರಗತಿ ಮತ್ತು ಅಭಿವೃದ್ಧಿ, ಅವನತಿಗಳನ್ನು ಗುರುತಿಸಬಹುದು.

ಒಂದು ಸ್ಥಳನಾಮದ ಅಧ್ಯಯನವೆಂದರೆ ಮಾನವ ಪೂರ್ವ ಇತಿಹಾಸವನ್ನು, ಶಿಲಾಯುಗದ ಜನಜೀವನವನ್ನು ತಿಳಿಯುವುದಾಗಿದೆ. ಅಲ್ಲಿ ಆಹಾರಕ್ಕಾಗಿ ಕಾಡು–ಮೇಡು ಅಲೆದಾಡುತ್ತಿದ್ದ ಮಾನವನ ಪ್ರಾಥಮಿಕ ಆಸರೆಯ ವಾಸ್ತವ್ಯ ಮರದ ಪೊಟರೆ, ಕಲ್ಲಿನ ಗುಹೆಗಳಾಗಿದ್ದಿರಬೇಕು. ಕಾಲಾನಂತರದಲ್ಲಿ ಆಹಾರದ ಉತ್ಪಾದನೆ ಮನಗಂಡು ಕಾಡನ್ನು ಕಡಿದು, ಭೂಮಿ ಹಸನು ಮಾಡಿ, ವ್ಯವಸಾಯ ಮಾಡುವುದನ್ನು ಕಲಿತಿದ್ದಿರಬೇಕು. ಅದರ ಹಿಂದೆಯೇ ಕೃಷಿಗಾಗಿ ಪ್ರಾಣಿಗಳನ್ನು ವಿಶೇಷವಾಗಿ ಹಸು, ಎತ್ತು, ಎಮ್ಮೆ, ಕೋಣಗಳನ್ನು ಉಳುಮೆ ಮಾಡಲು ಬಳಸಿಕೊಂಡು ನಾಗರೀಕತೆಯತ್ತ ದಾಪುಗಾಲು ಹಾಕಿರಬೇಕು. ಇಷ್ಟೆಲ್ಲಾ ವ್ಯವಸ್ಥಿತ ಬದುಕಿಗೆ ಒಂದು ನೆಲೆಯಲ್ಲಿ ನಿಂತು ಪ್ರಕೃತಿಯಿಂದ ರಕ್ಷಣೆ ಪಡೆದುಕೊಳ್ಳಲು ಪ್ರಯತ್ನಿಸಿ ಗುಡಿಸಲನ್ನು ಕಟ್ಟಿಕೊಳ್ಳುವ ಯೋಚನೆ ಮಾಡಿದ್ದರಿಂದ ಅವುಗಳ ನಿರ್ಮಾಣ ಅಸ್ತಿತ್ವಕ್ಕೆ ಬಂದವು. ಇಂಥ ನೆಲೆಗಳ ನಿರ್ಮಾಣ ಸಹಜವಾಗಿ ಭೌಗೋಳಿಕ ಪರಿಸರ ಅಂದರೆ ಗುಡ್ಡ, ಕಾಡು, ಹೊಳೆ, ನದಿ, ಹಳ್ಳ, ಫಲವತ್ತಾದ ಭೂಮಿಯ ಹತ್ತಿರದಲ್ಲಿ ಆಶ್ರಯ ಪಡೆದದ್ದೆ ಆಗಿದೆ. ಅವುಗಳೇ ಮಾನವನ ಆರಂಭಿಕ ನೆಲೆಗಳಾದ ಊರು, ಕೊಪ್ಪ, ಗ್ರಾಮ, ಹಳ್ಳಿ, ಪುರ, "ಖೇಡ, ಖರ್ವಡ, ಪತ್ತನ, ಮಡಂಬ, ದ್ರೋಣಾಮುಖ"[1]ಗಳೆಂಬ ಹೆಸರು ಪಡೆದು ಚಲಾವಣೆಗೊಂಡವು. ಕೃಷಿ ಅಭಿವೃದ್ಧಿಯಾದಂತೆ ವಿವಿಧ ಕಸುಬುಗಳ ಅವಶ್ಯಕತೆ ಇದ್ದುದರಿಂದ ಗ್ರಾಮ ಸ್ವಲ್ಪ ಸ್ವಲ್ಪವಾಗಿ ಅಭಿವೃದ್ಧಿಯತ್ತ ಅಂಬೆಗಾಲಿಕ್ಕುವ ಹಂತ ತಲುಪಿರಬೇಕು. ಋತುಮಾನಗಳು ಬದಲಾದಂತೆ

ಮಾನವನು ಪ್ರಕೃತಿಯಿಂದ ರಕ್ಷಣೆ ಪಡೆಯಲು ಮಣ್ಣಿನ ಗೋಡೆಯ ನಿರ್ಮಾಣ, ಮರ ಅಥವಾ ಬಿದರಿನ ನಾರುಗಳನ್ನು ಮೇಲ್ಭಾವಣಿಗೆ ಹಾಕಿ ಅವುಗಳ ಮೇಲೆ ಮಣ್ಣಿನಿಂದ ತಯಾರು ಮಾಡಿದ ಹೆಂಚನ್ನು ಹೊದಿಸಿ ವ್ಯವಸ್ಥಿತ ಬದುಕನ್ನು ರೂಢಿಸಿಕೊಂಡಿರಬೇಕು. ಅಂಥ ರಚನಾತ್ಮಕ ಹಟ್ಟಿಗಳೇ ಮುಂದೆ ಗ್ರಾಮಗಳಾಗಿ ಪ್ರಚಾರಕ್ಕೆ ಬಂದವು.

ಹೆಸರುಗಳು ಅಥವಾ ನಾಮಗಳು ಮನುಷ್ಯನ ಜೀವನದಲ್ಲಿ ಬಹು ಮಹತ್ವದ ಪಾತ್ರವನ್ನು ವಹಿಸುತ್ತವೆ. ಮನುಷ್ಯ ಸಮಾಜಜೀವಿ. ದೈನಂದಿನ ಸಾಮಾಜಿಕ ಚಟುವಟಿಕೆಗಳಲ್ಲಿ ಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳುವ ಆತನಿಗೆ ವ್ಯಕ್ತಿ ಮತ್ತು ವಸ್ತುಗಳ ಸಂಪರ್ಕ ಅನಿವಾರ್ಯವಾಗಿರುತ್ತದೆ. ಆತನ ದಿನನಿತ್ಯದ ವ್ಯವಹಾರ ಸುಗಮವಾಗಿ ಸಾಗಬೇಕಾದಲ್ಲಿ ಆತ ತನ್ನ ಸುತ್ತಣ ಪ್ರಪಂಚದಲ್ಲಿ ಗುರುತಿಸಿಕೊಳ್ಳುವ ಕ್ರಿಯೆ ತುಂಬಾ ಮುಖ್ಯವಾದದ್ದು. ಸಮೂಹದಿಂದ ವ್ಯಕ್ತಿಯನ್ನು, ವಸ್ತುವನ್ನು ಪ್ರತ್ಯೇಕಿಸಿಕೊಳ್ಳುವುದು ಹಾಗೂ ಗುರುತಿಸಿಕೊಳ್ಳುವುದು ನಾಮಗಳ ಪ್ರಮುಖ ಉದ್ದೇಶವಾಗಿದೆ.

ಹೆಸರುಗಳಿರುವುದರಿಂದ ವ್ಯಕ್ತಿಗಳನ್ನು, ವಸ್ತುಗಳನ್ನು, ಸ್ಥಳಗಳನ್ನು ಖಚಿತವಾಗಿ ಗುರುತಿಸಬಹುದು. ವ್ಯಕ್ತಿಗಳಿಗಾಗಲಿ, ವಸ್ತುಗಳಿಗಾಗಲಿ ಹೆಸರುಗಳನ್ನಿಡುವ ಪದ್ಧತಿ ಅಥವಾ ರೂಢಿ ಗೊತ್ತಿಲ್ಲದೆ ಹೋಗಿದ್ದರೆ ಬಹುಶಃ ಮನುಷ್ಯರ ನಡುವಿನ ಆಲೋಚನಾ ಸಂಪರ್ಕಕ್ಕೆ ತುಂಬಾ ತೊಂದರೆಯಾಗುತ್ತಿತ್ತು. 'ನಾಮೋಲ್ಲೇಖ ವಸ್ತು ವ್ಯವಹಾರಹೇತು' ಎಂಬಲ್ಲಿ ನಾಮದ ಉಲ್ಲೇಖವೆ ಎಲ್ಲ ವ್ಯವಹಾರಗಳಿಗೂ ಮೂಲ ಕಾರಣವೆಂದು ಬೃಹಸ್ಪತಿ ಹೇಳುತ್ತಾನೆ. ಅಂತೆಯೇ ಮಾನವನು ಆದಿಮ ಸಂಸ್ಕೃತಿಯಿಂದಲೂ ಇಂತಹ ಹೆಸರುಗಳ ಉಪಯೋಗವನ್ನು ಮನಗಂಡು ಸುತ್ತಲಿನ ಪ್ರಪಂಚದಲ್ಲಿ ತನ್ನ ಸಾಮಾಜಿಕ ವ್ಯವಹಾರಗಳಿಗೆ ಅವಶ್ಯಕವೆನಿಸಿದವುಗಳಿಗೆ ನಾಮಗಳನ್ನಿಟ್ಟುಕೊಂಡು ಬಂದಿದ್ದಾನೆ.

ಮಾನವನ ವ್ಯಾವಹಾರಿಕ ಜೀವನದಲ್ಲಿ ತುಂಬ ಉಪಯುಕ್ತವಾಗಿರುವ ನಾಮಗಳ ಮೂಲ ಬದಲಾವಣೆ ಮುಂತಾದವುಗಳ ಬಗ್ಗೆ ಸಮಾಜ ವಿಜ್ಞಾನಿಗಳು, ಭಾಷಾಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ವಿವೇಚಿಸುತ್ತಿದ್ದಾರೆ. ಏಕೆಂದರೆ ಪ್ರತ್ಯೇಕಿಕರಣ ಅಥವಾ ಬರಿ ಗುರುತಿಸುವಿಕೆ ಹೆಸರಿನ ಸಾರ ಸರ್ವಸ್ವವಾಗಿರುತ್ತಿದ್ದರೆ ಸಂಸ್ಕೃತಿಯ ಅಭ್ಯಾಸಿಗಳಾದ ನಾವು ಅದರಿಂದ ಏನು ಪ್ರಯೋಜನ ಪಡೆಯುವಂತಹುದು ಉಳಿಯುತ್ತಿರಲಿಲ್ಲ. ನಾಮಕರಣದೊಂದಿಗೆ ನಾಮಕರಣಗೊಂಡ ವ್ಯಕ್ತಿಯ, ವಸ್ತುವಿನ ಅಥವಾ ಸ್ಥಳಗಳ ಗುಣ ಸ್ವರೂಪವನ್ನು ಅನ್ಯ ವೈಶಿಷ್ಟ್ಯವನ್ನೂ, ಆಂತರಿಕ ಸತ್ವವನ್ನು ಆ ಹೆಸರು ಸಂವಹನ ಮಾಡುತ್ತದೆ. ಹೀಗಾಗಿ ನಾಮಗಳ

ಅಧ್ಯಯನವು ಭಾಷೆ, ಚರಿತ್ರೆ, ಸಂಸ್ಕೃತಿ ಮೊದಲಾದ ವಿಷಯಗಳ ಬಗ್ಗೆ ಅತ್ಯಮೂಲ್ಯ ಮಾಹಿತಿಯನ್ನು ದೊರಕಿಸಿಕೊಡುತ್ತದೆ.

ಇಷ್ಟೊಂದು ಮಹತ್ವಪೂರ್ಣ ಮಾಹಿತಿಗಳನ್ನು ಗರ್ಭದಲ್ಲಡಗಿಸಿಕೊಂಡಿರುವ ಹೆಸರುಗಳ ಬಗೆಗಿನ ಅಧ್ಯಯನ ಇತ್ತೀಚಿನ ದಿನಗಳಲ್ಲಿ ವಿಶೇಷ ಆಸಕ್ತಿಗೆ ಕಾರಣವಾಗಿದೆ. ಇತ್ತೀಚಿನ ಅಧ್ಯಯನಗಳು ಹೆಸರುಗಳ ಮಹತ್ವವನ್ನು ಮನಗಂಡು ಇವುಗಳ ಬಗೆಗಿನ ಅಧ್ಯಯನದಲ್ಲಿ ವಿಶೇಷ ಕಾಳಜಿಯನ್ನು ವಹಿಸಿವೆ. ಹೆಸರುಗಳನ್ನು ಕುರಿತ ಅಧ್ಯಯನವನ್ನು **'ನಾಮ ವಿಜ್ಞಾನ'** ಎಂದು ಕರೆಯಲಾಗಿದೆ. ಇದು ಎರಡು ಮುಖ್ಯ ಅಂಗಗಳನ್ನು ಒಳಗೊಂಡಿದೆ. ಅವುಗಳೆಂದರೆ **'ವ್ಯಕ್ತಿ ನಾಮವಿಜ್ಞಾನ'** ಮತ್ತು **'ಸ್ಥಳನಾಮ ವಿಜ್ಞಾನ'**. ವ್ಯಕ್ತಿಗಳ ಹೆಸರುಗಳೇ ವ್ಯಕ್ತಿನಾಮಗಳು. ವ್ಯಕ್ತಿನಾಮಗಳ ಬಗೆಗಿನ ಅಧ್ಯಯನವೇ **'ವ್ಯಕ್ತಿನಾಮ ವಿಜ್ಞಾನ'**. ಸ್ಥಳಗಳ ಹೆಸರುಗಳೇ ಸ್ಥಳನಾಮಗಳು. ಅವುಗಳ ಬಗೆಗಿನ ಅಧ್ಯಯನವನ್ನು **'ಸ್ಥಳನಾಮ ವಿಜ್ಞಾನ'** ಎಂದು ಕರೆಯಲಾಗುತ್ತದೆ.

ಸ್ಥಳನಾಮ ವಿಜ್ಞಾನದಲ್ಲಿ **'ವಸತಿ ಸ್ಥಳನಾಮಗಳು'** ಹಾಗೂ **'ನಿರ್ವಸತಿ ಸ್ಥಳನಾಮಗಳು'** ಎಂಬ ಎರಡು ವಿಧಗಳಿವೆ. ಸಾಮಾನ್ಯವಾಗಿ ನಾಮವಿಜ್ಞಾನಿಗಳು ಈ ಎರಡರಲ್ಲಿ ಮೊದಲನೆಯದಾದ **'ವಸತಿ ಸ್ಥಳನಾಮ'** ಅಧ್ಯಯನಕ್ಕೆ ಹೆಚ್ಚು ಒಲವು ತೋರಿಸುತ್ತಾ ಬಂದಿರುವುದು ಕಂಡುಬರುತ್ತದೆ. ಇಂದು ನಾಮವಿಜ್ಞಾನವೆಂದರೆ ಸ್ಥಳನಾಮ ವಿಜ್ಞಾನ ಎನ್ನುವಷ್ಟರ ಮಟ್ಟಿಗೆ ಇದರ ಬಗ್ಗೆ ಜಗತ್ತಿನಲ್ಲೆಲ್ಲಾ ವ್ಯಾಪಕ ಅಧ್ಯಯನ ನಡೆಯುತ್ತಿದೆ. ಕಾಲಗಣನೆಯ ದೃಷ್ಟಿಯಿಂದ ಸ್ಥಳನಾಮಗಳು ವ್ಯಕ್ತಿನಾಮಗಳಿಗಿಂತ ಈಗಿನವುಗಳಾಗಿದ್ದರೂ, ತುಂಬಾ ಕುತೂಹಲ ಹಾಗೂ ಸ್ವಾರಸ್ಯಭರಿತವಾಗಿರುವ ಸ್ಥಳನಾಮಗಳ ಅಧ್ಯಯನ ಇಂದು ವ್ಯಕ್ತಿನಾಮಗಳಿಗಿಂತ ಹೆಚ್ಚು ಜನಪ್ರಿಯ ಅಧ್ಯಯನವಾಗಿ ಮಾರ್ಪಟ್ಟಿದೆ.

ಸ್ಥಳನಾಮಗಳು ಮೇಲುನೋಟಕ್ಕೆ ಸಾಮಾನ್ಯ ಗುರುತಿನ ಚಿಹ್ನೆಗಳಾಗಿ ಕಂಡುಬಂದರೂ, ಭಾಷಾಶಾಸ್ತ್ರಜ್ಞನೊ, ಇತಿಹಾಸಕಾರನೊ, ಪುರಾತತ್ವಕಾರನೊ ಅವುಗಳನ್ನು ಶಾಸ್ತ್ರಕ್ಕನುಗುಣವಾಗಿ ಒರೆಯಿಕ್ಕಿ ನೋಡಿದಾಗ ಅವುಗಳಿಂದ ಅತ್ಯಂತ ಕುತೂಹಲಕಾರಿ ಸಂಗತಿಗಳು ಹೊರಬರುತ್ತವೆ. ನಮ್ಮ ಹಿಂದಿನ ತಲೆಮಾರಿನವರ ಭಾಷೆ, ಜೀವನ ವಿಧಾನ, ಭೌಗೋಳಿಕ ಹಾಗೂ ಚಾರಿತ್ರಿಕ ಅಂಶಗಳ ಮೇಲೆ ಸ್ಪಷ್ಟ ಬೆಳಕನ್ನು ಚೆಲ್ಲುತ್ತವೆ. ಸ್ಥಳನಾಮಗಳಲ್ಲಿ ಪರಸ್ಪರ ಹೋಲಿಕೆ ಇಲ್ಲವೆ ಸಾಮ್ಯತೆ ಕಂಡುಬಂದರೆ ಅಂತಹ ಸ್ಥಳನಾಮಗಳು ಪ್ರಪಂಚದ ಯಾವುದೇ ಭಾಗದಲ್ಲಿರಲ್ಲಿ ಅಲ್ಲಿ ಒಂದೇ ರೀತಿಯ ಅಥವಾ ಹೋಲಿಕೆಯುಳ್ಳ ನಾಗರೀಕತೆಯ ಕುರುಹುಗಳನ್ನು ಕಾಣಬಹುದು.

ಮಾನವನ ನಾಗರೀಕತೆಯಲ್ಲಿ ಭಾಷೆಗೆ ವಿಶಿಷ್ಟ ಸ್ಥಾನವಿದೆ. ಮಾನವ ನಿರ್ಮಿತ ಕೋಟೆ ಕೊತ್ತಲಗಳು, ದೇವಾಲಯಗಳು, ಶಿಲ್ಪಕಲೆ, ಅಮೂಲ್ಯ ಆಭರಣಗಳು, ದಾಖಲೆಗಳು ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಹೇಳಲು ಹೆಸರಿಲ್ಲದೆ ಹೋಗಬಹುದು. ಆದರೆ ನಾವು ಬಳಸುವ ಭಾಷೆ ಗತಕಾಲ ಮತ್ತು ವರ್ತಮಾನದ ಚಲನಶೀಲತೆಯ ಭಾಗವಾಗಿದೆ. ಹೆಚ್ಚೆಂದರೆ ಪರಿಸರಕ್ಕೆ ಹೊಂದಿಕೊಂಡು ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಉಂಟಾಗುವುದಲ್ಲದೆ ಆಮೂಲಾಗ್ರವಾಗಿ ನಶಿಸಿಹೋಗುವ ಸಾಧ್ಯತೆಗಳು ತೀರಾ ಕಡಿಮೆ. ಗತಕಾಲದ ಘಟನೆ, ನೆನಪು ಇವುಗಳು ಸ್ಥಳನಾಮಗಳ ಮೂಲಕ ಹರಿದು ಬಂದಿರುವುದನ್ನು ಕಾಣುತ್ತೇವೆ. ಪ್ರಾಚೀನ ಭಾಷೆಯಲ್ಲಿ ರೂಢಿಯಲ್ಲಿದ್ದು, ಈಗ ರೂಢಿಯಲ್ಲಿ ಬಿಟ್ಟು ಹೋಗಿರುವ ಪದಗಳು, ಭಾಷಾಬಳಕೆ, ಇವು ಸ್ಥಳನಾಮಗಳ ಮೂಲಕ ವ್ಯಕ್ತವಾಗುತ್ತವೆ. ಜೊತೆಗೆ ಉಪಭಾಷೆಗಳನ್ನು ಗುರುತಿಸುವಲ್ಲಿ ಭಾಷಾಶಾಸ್ತ್ರಜ್ಞನಿಗೆ ಸ್ಥಳನಾಮಗಳು ಮುಖ್ಯ ಸಾಮಾಗ್ರಿಯಾಗಿ ಒದಗಿ ಬರುತ್ತವೆ. ಆದುದರಿಂದ ಸ್ಥಳನಾಮಗಳ ಅಧ್ಯಯನ ಭಾಷಾಶಾಸ್ತ್ರದ ದೃಷ್ಟಿಯಿಂದ ತುಂಬಾ ಮಹತ್ವದ್ದು.

"ಪ್ರಾಚೀನ ಸ್ಥಳನಾಮಗಳಲ್ಲಿ ಬಹುಪಾಲು ಅರ್ಥಗರ್ಭಿತವಾದವುಗಳು. ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ, ಗಿಡ, ದೇವಾಲಯ ಮುಂತಾದವು ಆ ಪ್ರದೇಶದ ಚರಿತ್ರೆಯನ್ನು ಹೇಳಲು ಹೇಗೆ ಸಹಾಯಕವಾಗುತ್ತವೆಯೋ ಹಾಗೆಯೇ ಅಲ್ಲಿನ ಸ್ಥಳನಾಮಗಳು ಅನೇಕ ಮಾಹಿತಿಗಳನ್ನು ಒದಗಿಸಿಕೊಡುತ್ತವೆ. ಆದುದರಿಂದ ಸ್ಥಳನಾಮಗಳಿಗೆ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಾಧಾನ್ಯಕ್ಕಿಂತ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾಗಿದೆ. ನಮ್ಮ ಪೂರ್ವಿಕರ ವಿದ್ಯಾಸಂಪನ್ನತೆ, ಸೌಂದರ್ಯಪ್ರಜ್ಞೆ, ಧಾರ್ಮಿಕದೃಷ್ಟಿ, ಮೂಢನಂಬಿಕೆಗಳು, ಆಳರಸರ ಹಾಗೂ ಮೂಲನಿವಾಸಿಗಳ ಬಗೆಗೆ ಮಹತ್ವದ ವಿಚಾರಗಳು ಅಂದಿನ ವೃತ್ತಿ, ನೈಸರ್ಗಿಕ ಸಂಪತ್ತು, ಮಾನವಶಾಸ್ತ್ರ ಮುಂತಾದ ಅನೇಕ ವಿಷಯಗಳನ್ನು ಗರ್ಭದಲ್ಲಡಗಿಸಿಕೊಂಡಿರುವ ಅನುಲ್ಲೇಖಿತ ಗ್ರಂಥಗಳಾಗಿವೆ ಈ ಸ್ಥಳನಾಮಗಳು"[2] ಹಾಗಾಗಿ ಸ್ಥಳನಾಮ ಹೆಚ್ಚಾಗಿ ಭಾಷೆಗೆ ಸಂಬಂಧಪಟ್ಟ ವಿಷಯವಾದರೂ ಪ್ರಾಚೀನ ಸಂಸ್ಕೃತಿಯನ್ನು ಪುನಾರಚಿಸುವಲ್ಲಿ ಶಾಸನ, ಕಾವ್ಯಗಳಂತೆ ಸ್ಥಳನಾಮಗಳು ಕೂಡಾ ಮಹತ್ವಪೂರ್ಣ ಸಹಾಯಕ ಸಾಮಗ್ರಿಗಳಾಗಿರುವುದನ್ನು ಕಾಣಬಹುದು. ಇವುಗಳ ಶಾಸ್ತ್ರೀಯ ಅಧ್ಯಯನದಿಂದ ಅನೇಕ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ, ವಿಷಯಗಳು ತಿಳಿದು ಬರುತ್ತವೆ. ಆದುದರಿಂದ ಭಾಷಾಶಾಸ್ತ್ರದ ದೃಷ್ಟಿಯಿಂದ ಮಾತ್ರವಲ್ಲದೆ ಎಲ್ಲಾ ದೃಷ್ಟಿಯಿಂದಲೂ ಇಂತಹ ಅಧ್ಯಯನದ ಅವಶ್ಯಕತೆಯಿದೆ.

ಸ್ಥಳನಾಮಗಳು ರಾಜಕೀಯ ಇತಿಹಾಸದ ಬಗ್ಗೆ ಹಲವಾರು ಹೊಸ ಸಂಗತಿಗಳನ್ನು ತಿಳಿಸಿಕೊಡುತ್ತವೆ. ಈಗಾಗಲೇ ತಿಳಿದಿರುವ ಸಂಗತಿಗಳನ್ನು ಸಮರ್ಥಿಸುತ್ತವೆ ಅಥವಾ ಅವುಗಳಿಗೆ ಪೂರಕ ಸಾಮಗ್ರಿಗಳನ್ನು ಒದಗಿಸಿಕೊಡುತ್ತವೆ. ಇದಕ್ಕೆ ಒಂದು ಒಳ್ಳೆಯ ನಿದರ್ಶನವೆಂದರೆ 'ಮಂಗಲ' ಎಂಬುದರಿಂದ ಕೊನೆಯಾಗುವ ಸ್ಥಳನಾಮಗಳು. 'ಮಂಗಲ' ಶಬ್ದವು ಅಗ್ರಹಾರವನ್ನು ಸೂಚಿಸುತ್ತದೆಯಾದರೂ, ಅದರಿಂದ ಕೊನೆಯಾಗುವ ಹೆಸರುಗಳು ಬಹುತೇಕ ಕೋಲಾರ, ಚಿತ್ರದುರ್ಗ, ಬೆಂಗಳೂರು, ತುಮಕೂರು, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿವೆ. [ಉದಾ : ಐತಮಂಗಲ, ಕನ್ನಮಂಗಲ, ನಾಗಮಂಗಲ, ನೆಲಮಂಗಲ, ಬೇತಮಂಗಲ ಇತ್ಯಾದಿ] ಇವು ಈಗಿನ ತಮಿಳುನಾಡಿಗೆ ಮತ್ತು ಅಕ್ಕಪಕ್ಕದ ಆಂಧ್ರಪ್ರದೇಶಗಳಿಗೆ ಹೊಂದಿಕೊಂಡಿರುವ ಭೂಪ್ರದೇಶಗಳು. ಚೋಳರ ಕಾಲದಲ್ಲಿ ಅಗ್ರಹಾರಗಳನ್ನು 'ಚತುರ್ವೇದಿ ಮಂಗಲಂ'ಗಳೆಂದು ಕರೆಯುತ್ತಿದ್ದರು. "ಅಗ್ರಹಾರ ಎಂಬುದು ಬ್ರಾಹ್ಮಣರಿಗೆ ನೀಡಲಾದ ಗ್ರಾಮಗಳನ್ನು ಹೇಳುತ್ತದೆ. ಮತ್ತು ಈ ಶಬ್ದದ ಬಳಕೆ ಕರ್ನಾಟಕದ ಬಹು ಕಡೆಯಲ್ಲಿ ದೊರಕುತ್ತದೆ. ಮತ್ತು ಮೇಲೆ ಹೇಳಿದ ಕನ್ನಡ ಪ್ರದೇಶಗಳು ಚೋಳರ ಅಧಿಪತ್ಯಕ್ಕೆ ಒಳಗಾಗಿದ್ದುವೆಂಬುದಕ್ಕೆ ಅಲ್ಲಿ ದೊರಕುವ ನೂರಾರು ತಮಿಳು, ಕನ್ನಡ ಶಾಸನಗಳು ಆಧಾರವನ್ನು ಒದಗಿಸಿಕೊಡುತ್ತವೆ. ಆದ್ದರಿಂದ 'ಮಂಗಲ' ಎಂದು ಕೊನೆಯಾಗುವ ಊರುಗಳು ಅಗ್ರಹಾರಗಳಾಗಿದ್ದು, ಒಂದು ಕಾಲಕ್ಕೆ ಚೋಳರ ಆಡಳಿತದ ಸೂಚನೆಗಳಾಗಿವೆ. ಮತ್ತು ಆ ಊರುಗಳನ್ನು ಭೂಪಟದ ಮೇಲೆ ಎಚ್ಚರಿಕೆಯಿಂದ ಗುರುತಿಸಿದರೆ ಚೋಳರ ಅಧೀನದಲ್ಲಿದ್ದ ಕನ್ನಡನಾಡಿನ ಪ್ರದೇಶದ ಚಿತ್ರಣವನ್ನು ಕೊಡುತ್ತವೆ."[3]

ಸ್ಥಳನಾಮಗಳು ಆಯಾ ಸ್ಥಳಗಳ ಚರಿತ್ರೆಗೆ ಪೂರಕವಾಗುವಂತಹ ಮಾಹಿತಿಗಳನ್ನು ಒದಗಿಸುವಂತೆಯೇ, ಸಾಮಾಜಿಕ ಸ್ಥಿತಿ–ಗತಿಗಳನ್ನು ವಿವರಿಸಲು ಸಹಾಯಕವಾಗಿವೆ. ಹಾಗೆಯೇ ಧರ್ಮ, ಮತ, ವೃತ್ತಿ, ಜಾತಿ ಇಲ್ಲವೇ ದೇವತೆಗಳ ಹೆಸರನ್ನು ಸೂಚಿಸುವ ಕೆಲವು ಸ್ಥಳನಾಮಗಳು ಆ ಪ್ರದೇಶಗಳ ಧಾರ್ಮಿಕ ನಂಬಿಕೆಗಳ ಬಗೆಗೆ ವಿಶ್ವಾಸನೀಯ ಮಾಹಿತಿಗಳನ್ನು ಸಂಗ್ರಹಿಸಿಕೊಡುತ್ತವೆ. ಅಲ್ಲದೆ ಗಿರಿಕಂದರಗಳನ್ನು ಸೂಚಿಸುವ ಹೆಸರುಗಳು ಅಲ್ಲಿನ ಭೌಗೋಳಿಕ ಲಕ್ಷಣಗಳ ಬಗ್ಗೆ ತಿಳಿಸಿಕೊಡುತ್ತವೆ. ಆದ್ದರಿಂದಲೇ ಸ್ಥಳನಾಮಗಳನ್ನು ಸಾಮಾನ್ಯವಾಗಿ **'ಜೀವಂತ ಪಳೆಯುಳಿಕೆಗಳು'** ಎಂದು ಕರೆಯುವುದು.

ಇಷ್ಟೊಂದು ಮಹತ್ವಪೂರ್ಣ ಅಂಶಗಳನ್ನು ತನ್ನ ಒಡಲೊಳಗೆ ಹುದುಗಿಸಿಕೊಂಡಿರುವ ಸ್ಥಳನಾಮಗಳ ಬಗ್ಗೆ ಸಮಗ್ರ ಅಧ್ಯಯನ ಇತ್ತೀಚಿನ ದಿನಗಳಲ್ಲಿ ಭಾರತದ ಎಲ್ಲಾ

ಪ್ರದೇಶಗಳಲ್ಲಿಯೂ ಆರಂಭವಾಗಿದೆ. ಸ್ಥಳನಾಮಗಳ ಪೂರ್ಣಲಾಭ ಪಡೆಯಬೇಕಾದರೆ ಅವುಗಳ ಶಾಸ್ತ್ರೀಯ ಅಧ್ಯಯನದ ಬಗ್ಗೆ ಹೆಚ್ಚು ಆಸಕ್ತಿವಹಿಸಬೇಕಾಗಿದೆ. ಸ್ಥಳನಾಮಗಳಿಂದ ದೊರಕುವ ವಿವರಗಳ ಪೂರ್ಣ ಪ್ರಯೋಜನ ಪಡೆಯಬೇಕಾದಲ್ಲಿ ನಾವು ಇಡೀ ದೇಶದ, ರಾಜ್ಯದ ಸ್ಥಳನಾಮಗಳನ್ನು ಒಟ್ಟಾಗಿ ಅಭ್ಯಾಸ ಮಾಡುವುದರ ಬದಲಾಗಿ ಕೆಲವು ಘಟಕಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಬೇಕಾಗಿದೆ. ಅಂದರೆ ಜಿಲ್ಲಾವಾರು, ತಾಲ್ಲೂಕುವಾರುಗಳಾಗಿ ವಿಭಾಗಿಸಿಕೊಂಡು ಸ್ಥಳನಾಮಗಳನ್ನು ಅಧ್ಯಯನ ಮಾಡುವುದರಿಂದ ಒಂದು ಪ್ರದೇಶದ ಭಾಷಿಕ, ಸಾಮಾಜಿಕ, ಚಾರಿತ್ರಿಕ, ಧಾರ್ಮಿಕ ಮುಂತಾದ ವಿಷಯಗಳ ಬಗ್ಗೆ ಸ್ಥಳನಾಮಗಳು ಒದಗಿಸಬಹುದಾದ ಎಲ್ಲಾ ವಿಷಯಗಳನ್ನು ಗ್ರಹಿಸಲು ಸಾಧ್ಯವಾಗುವುದು ಅಂತಹ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಇತಿಹಾಸ ರಚನೆಗೂ ನೆರವಾಗುವ ಆಕರ ಸಾಮಗ್ರಿಗಳಲ್ಲಿ ಸ್ಥಳನಾಮಗಳು ಪ್ರಮುಖ ಸಾಧನಗಳಾಗಿವೆ. ನಮ್ಮ ಹಿರಿಯರ ಜೀವನ ಶೈಲಿಗೆ ಸಾಕ್ಷಿಯಾಗಿ ಪ್ರತಿ ತಾಲ್ಲೂಕುಗಳಲ್ಲಿಯೂ ಇದು ಹೇರಳ ಸಂಖ್ಯೆಯಲ್ಲಿ ಸಿಗುತ್ತವೆ. ಹಿರಿಯ ತಲೆಮಾರಿನ ಇತಿಹಾಸಕಾರರು ತಮ್ಮ ಅಧ್ಯಯನದಲ್ಲಿ ಸ್ಥಳನಾಮಗಳನ್ನು ಬಳಸಿಕೊಂಡಿದ್ದರೂ ಅವುಗಳಲ್ಲಿನ ರಾಜಕೀಯ ಮಹತ್ವವನ್ನು ಮಾತ್ರ ಗುರುತಿಸಲು ಪ್ರಯತ್ನಿಸಿದರು. ಇದರಿಂದಾಗಿ ಇತಿಹಾಸವು ಕೇವಲ ರಾಜ–ಮಹಾರಾಜರ ವಿವರಗಳಿಂದ ತುಂಬಿ ಹೋಯಿತು. ಕಳೆದ ದಶಕದಿಂದ ಇತಿಹಾಸವನ್ನು ನೋಡುವ ದೃಷ್ಟಿ ಗಮನಾರ್ಹವಾದ ಬದಲಾವಣೆಯನ್ನು ಪಡೆಯುತ್ತಿದೆ. ಇತಿಹಾಸ ರಚನೆಯ ಆಕರಗಳನ್ನು ಹೊಸ ರೀತಿಯಿಂದ ನೋಡುವ ದೃಷ್ಟಿ ಬೆಳೆದಿದೆ.

ನಮ್ಮ ನಾಡಿನ ಜನಜೀವನವನ್ನರಿಯಬೇಕಾದರೆ ಸ್ಥಳನಾಮಗಳು ನೆರವಾಗುತ್ತವೆ. ನಮ್ಮ ಜನರ ದಿನನಿತ್ಯದ ಬದುಕನ್ನು, ಅವರ ಸಂಪ್ರದಾಯ, ರೀತಿ–ನೀತಿಗಳನ್ನು, ಅವರ ಬದುಕಿನ ಏಳು–ಬೀಳಿನ ಹಾದಿಯನ್ನು ಅಲ್ಲದೆ ಆಯಾ ಕಾಲದ ಪ್ರಮುಖ ಘಟನೆಗಳನ್ನು, ಸಾಂಸ್ಕೃತಿಕ ಎಳೆಗಳ ಅಂಶಗಳನ್ನು ಸ್ಥಳನಾಮಗಳು ವ್ಯಕ್ತಪಡಿಸುತ್ತವೆ. ಸ್ಥಳನಾಮಗಳು ಮಾನವನ ಸಂಸ್ಕೃತಿಯ ನೆಲೆಯಲ್ಲಿಯೇ ಮೂಡಿ ಬಂದಿರುವುದರಿಂದ ಅನೇಕ ರೀತಿಯ ಸಾಂಸ್ಕೃತಿಕ ವಿವರಗಳು ನಮಗೆ ಲಭ್ಯವಾಗುತ್ತವೆ. ಮಾನವನ ವೇಷ ಭೂಷಣಗಳು, ಬಳಸುವ ವಸ್ತುಗಳು, ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತು ಹೋದ ಅನೇಕ ರೀತಿಯ ವಿವರಗಳನ್ನು ಪೂರ್ಣವಾಗಿ ಸೆರೆ ಹಿಡಿದಿವೆ ಎಂದು ಹೇಳಲಾಗದಿದ್ದರೂ ಸಾಕಷ್ಟುಮಟ್ಟಿಗೆ ನಮಗೆ ವಿವರಗಳನ್ನು ಕಟ್ಟಿಕೊಡುತ್ತವೆ.

ಸ್ಥಳನಾಮಗಳನ್ನು ಅಧ್ಯಯನ ಮಾಡುವುದಕ್ಕಿಂತ ಮೊದಲು ಸ್ಥಳನಾಮ ಎಂದರೇನು? ಈ ಅಧ್ಯಯನದ ಕ್ರಮ ಹಾಗೂ ಮಹತ್ವವನ್ನು ಸ್ವಲ್ಪದರಲ್ಲಿ ನೋಡಬಹುದು. **'ಸ್ಥಳನಾಮ'** ಎಂದರೆ ಊರ ಹೆಸರುಗಳು. ಗ್ರೀಕ್ ಭಾಷೆಯಲ್ಲಿ **'ಟಪೋಸ್'** ಅಂದರೆ ಸ್ಥಳಗಳು; **'ನೋಮೋಸ್'** ಎಂದರೆ ಹೆಸರುಗಳು. ಆದ್ದರಿಂದ ಸ್ಥಳಗಳ ಹೆಸರುಗಳನ್ನು ಅಧ್ಯಯನ ಮಾಡುವ ವಿಚಾರಕ್ಕೆ **'ಟೋಪೋನೋಮಿ'** ಎಂದು ಕರೆಯಲಾಗಿದೆ. **'ಟೋಪೋಸ'** ಮೂಲತಃ ಭೂ ವಿವರವನ್ನು ಸೂಚಿಸುವ ಅರ್ಥ ಹೊಂದಿದ್ದರೂ ಇಲ್ಲಿ ಪಾರಿಭಾಷಿಕವಾಗಿ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ವೈಲಕ್ಷಣಗಳನ್ನು ಇದು ಒಳಗೊಂಡಿದೆ. ಭಾರತದಲ್ಲಿ ಇಂಥ ಭೌಗೋಳಿಕ ನಾಮ ಅಥವಾ ದೇಶನಾಮಗಳಿಗೆ ಪ್ರಾದೇಶಿಕ ಭಾಷೆಗಳಲ್ಲಿ 'ಗ್ರಾಮನಾಮ' (ಹಿಂದೂಸ್ಥಾನಿ), 'ಊರ್ಲಪೇರ್ಲು' (ತೆಲುಗು), 'ಇಡಂಪೆಯರ್' (ತಮಿಳು), 'ಊರ ಹೆಸರು' (ಕನ್ನಡ) ಮುಂತಾದ ಪರ್ಯಾಯ ಪದಗಳನ್ನು ಬಳಸಲಾಗಿದೆ.

ಊರು, ಗ್ರಾಮ, ದೇಶ ಮುಂತಾದ ಪದಗಳಿಗೆ ಪಾರಂಪಾರಿಕವಾದ ಸೀಮಿತ ಅರ್ಥಗಳಿರುವುದರಿಂದ ಉಳಿದ ಸಾಮುದಾಯಿಕ ಮಾನವನ ನೆಲೆಗಳ ಅರ್ಥವನ್ನು ಅವು ಒಳಗೊಳ್ಳುವುದಿಲ್ಲ. ಹೀಗಾಗಿ ಇಲ್ಲಿ ಹೊಸದಾಗಿ ಬಳಕೆಗೆ ಬಂದಿರುವ ಸ್ಥಳನಾಮವೆಂಬ ಪದವನ್ನು ಹೆಚ್ಚು ಸಮರ್ಪಕವೆಂದು ಬಳಸಲಾಗಿದೆ. ಸ್ಥಳನಾಮಗಳು ಮಾನವನ ಸಣ್ಣ ನೆಲೆಯಿಂದ ಆರಂಭಿಸಿ ಅತಿ ದೊಡ್ಡ ಮಾನವ ವಸಾಹತು ನೆಲೆಗಳ ಅರ್ಥವನ್ನು ಹೊಂದಿದೆ.

ಸ್ಥಳನಾಮಗಳನ್ನು ಎರಡು ರೀತಿಯಲ್ಲಿ ಅರ್ಥೈಸಬಹುದಾಗಿದೆ. ಒಂದು 'ಭೌಗೋಳಿಕ ವೈಲಕ್ಷಣವನ್ನು' ಸೂಚಿಸುವ ಸಾಮಾನ್ಯಾರ್ಥ. ಈ ಬಗೆಯ ಹೆಸರುಗಳು ಹೆಚ್ಚಾಗಿ ರೂಢನಾಮಗಳ ಸ್ವರೂಪದಲ್ಲಿ ಮಾತ್ರ ಉಳಿಯುತ್ತವೆ. ಎರಡು 'ಸಾಂಸ್ಕೃತಿಕ ವೈಶಿಷ್ಟ್ಯ'ವನ್ನು ಸೂಚಿಸುವ ವಿಶೇಷಾರ್ಥ. ಆಯಾ ಜನ ಸಮುದಾಯವು ನೆಲೆನಿಂತ ಒಂದೊಂದು ಸ್ಥಳದ ವಿಸ್ತೀರ್ಣ, ಅಲ್ಲಿನ ಜನಸಂಖ್ಯೆ ಮುಂತಾದ ಆಧಾರಗಳ ಮೇಲಿಂದ ಅದನ್ನು ಒಂದು ಹಳ್ಳಿ, ಊರು, ಗ್ರಾಮ, ನಗರ, ಖೇಡ, ಪುರ, ಪಟ್ಟಣ ಎಂದು ಮುಂತಾಗಿ ಕರೆಯಲಾಗುತ್ತದೆ. ಇದರೊಂದಿಗೆ ಆಯಾ ಸ್ಥಳಕ್ಕೆ ಪ್ರಾಪ್ತವಾದ ಒಂದು ರೀತಿಯ ವಿಶಿಷ್ಟ ಘಟಕಗಳು ಬರುತ್ತವೆ. ಇಂಥ ನಿರ್ದಿಷ್ಟ ಹೆಸರುಗಳುಳ್ಳ ಪದಗಳೇ ಸ್ಥಳನಾಮಗಳು. ನಿರ್ದಿಷ್ಟ ಮತ್ತು ವಾರ್ಗಿಕ ಎಂಬೆರಡು ಘಟಕಗಳು ಕೂಡಿ ಸಾಮಾನ್ಯವಾಗಿ ಸ್ಥಳನಾಮಗಳು ಸಿದ್ಧಗೊಳ್ಳುತ್ತವೆ. ಎರಡಕ್ಕಿಂತ ಹೆಚ್ಚು ಘಟಕಗಳೂ ಅದರಲ್ಲಿರಬಹುದು ಇವೆಲ್ಲಾ ಒಂದೇ ಘಟಕವೂ ಕೂಡ ಇರಬಹುದು.

ಸ್ಥಳನಾಮಾಧ್ಯಯನಕ್ಕೆ ವಿದೇಶಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ದೊರಕಿದೆ. ಭಾರತದಲ್ಲೂ ತಕ್ಕಮಟ್ಟಿಗೆ ಈ ಅಧ್ಯಯನ ನಡೆದಿದೆ. ಕನ್ನಡದಲ್ಲೂ ಈ ವಿಷಯ ಕುರಿತು ಅಧ್ಯಯನವನ್ನು ಡಾ.ದೇ.ಜವರೇಗೌಡ, ಶಂಬಾಜೋಶಿ, ಡಾ.ಎಂ.ಚಿದಾನಂದಮೂರ್ತಿ, ಡಾ.ಎಂ.ಎಂ.ಕಲಬುರ್ಗಿ, ಡಾ.ಆರ್.ಕೆ.ಮಣಿಪಾಲ, ವಿ.ಗೋಪಾಲಕೃಷ್ಣ, ಡಾ.ಚನ್ನಣ್ಣವಾಲಿಕಾರ, ಎಂ.ಜಿ.ನಾಗರಾಜ್ ಮುಂತಾದವರು ನಡೆಸಿದ್ದಾರೆ. ಆದರೆ ಕನ್ನಡವು ಇನ್ನೂ 'ಸ್ಥಳನಾಮ ವಿಜ್ಞಾನ' ಎಂಬ ಪ್ರತ್ಯೇಕ ಅಧ್ಯಯನ ಶಾಖೆಯನ್ನೇನೂ ಹೊಂದಿಲ್ಲ; ಹೊಂದಬೇಕಾಗಿದೆ. ಹೀಗಾಗಿ ಈ ಅಧ್ಯಯನ ನಿಜಕ್ಕೂ ಮಹತ್ವಪೂರ್ಣವಾದುದಾಗಿದೆ.

ಸ್ಥಳನಾಮದ ಹಿಂದೆ ಒಂದು ಊರಿನ ಇತಿಹಾಸವೇ ಅಡಗಿರಬಹುದು. ಪ್ರತಿಯೊಂದು ಊರ ಹೆಸರಿನ ಹಿಂದೆ ಸಾಮಾನ್ಯವಾಗಿ ಒಂದು ವಿಧದ ವಿಶೇಷತೆ ಇರುತ್ತದೆ. ಜನತೆಯ ಜೀವನ ವಿಧಾನ, ಅವರ ಸಂಸ್ಕೃತಿ ಅದರಲ್ಲಿ ಅಡಗಿರುತ್ತದೆ. ಒಂದು ಊರಿಗೆ ಅಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಅಥವಾ ರಾಜಕೀಯ ಇತ್ಯಾದಿ ವಿಶೇಷ ಘಟನೆಯ ನೆನಪಿಗಾಗಿ ಹೆಸರು ಇಟ್ಟಿರಲು ಸಾಧ್ಯವಿದೆ.

ಊರುಗಳಿಗೆ ಆಯಾ ಹೆಸರುಗಳು ಬರಬೇಕಾದರೆ ಏನಾದರೂ ಐತಿಹ್ಯಗಳು, ದಂತಕತೆಗಳು, ಪುರಾಣ ಕತೆಗಳು ಕಾರಣವಾಗಬಹುದು. ಅಲ್ಲಿನ ಮಣ್ಣು, ಕಲ್ಲು, ಪೈರು, ಗುಡ್ಡ, ಹೊಳೆ, ತೊರೆ ಮುಂತಾದ ನೈಸರ್ಗಿಕ ಹಿನ್ನೆಲೆಯನ್ನು ಅವು ಹೊಂದಿರಬಹುದು. ಹಾಗೂ ಯಾರಾದರೂ ರಾಜ, ರಾಣಿ, ಮಂತ್ರಿ, ಧಾರ್ಮಿಕ ಮಹಾಪುರುಷರು, ಸಾಧು ಸತ್ಪುರುಷರು ಅಲ್ಲಿ ಹಾದು ಹೋಗಿದ್ದರೆ, ಅವರ ಪ್ರಭಾವವಾಗಿದ್ದರೆ; ದೇವರ ಜಾತ್ರೆ, ಉತ್ಸವ ವಿಶೇಷವಾಗಿ ನಡೆಯುತ್ತಿದ್ದರೆ ಸಾಮಾನ್ಯವಾಗಿ ಇವೆಲ್ಲಾ ಆಯಾ ಊರುಗಳಿಗೆ ಹೆಸರುಗಳು ಬರಲು ಕಾರಣವಾಗಿರುತ್ತವೆ. ಊರುಗಳಿಗೆ ಹೆಸರುಗಳು ಬರಲು ಇಂಥವೇ ಕಾರಣಗಳಿರುತ್ತವೆಂದು ಖಚಿತವಾಗಿ ಹೇಳಲಿಕ್ಕಾಗುವುದಿಲ್ಲ. ಆದರೂ ಕೆಲವಾದರೂ ಊರುಗಳಿಗೆ ಆಯಾ ಹೆಸರುಗಳು ಹೇಗೆ ಬಂದವು ಎಂಬುದನ್ನು ಅಧ್ಯಯನ ಮಾಡಿದರೆ ಅದೊಂದು ರೀತಿಯಲ್ಲಿ ಆ ಊರಿನ ಹಿನ್ನೆಲೆಯನ್ನು, ಸಂಸ್ಕೃತಿಯನ್ನು ತಿಳಿದುಕೊಂಡಾಗುತ್ತದೆ. ಭಾಷಾದೃಷ್ಟಿಯಿಂದ ಅಧ್ಯಯನ ಮಾಡಿದಾಗಲಂತೂ ಆ ಊರ ಹೆಸರಿನ ಮೇಲೆ ಹೊಸ ಬೆಳಕು ಚೆಲ್ಲಿದಂತಾಗುತ್ತದೆ.

'ನೀನ್ಯಾಕೊ ನಿನ್ನ ಹಂಗ್ಯಾಕೊ ನಿನ್ನ ನಾಮದ ಬಲವೊಂದಿದ್ದರೆ ಸಾಕು' ಎಂಬ ದಾಸವಾಣಿ ನಾಮದ ಮಹಿಮೆಯನ್ನು ಎತ್ತಿ ಹಿಡಿಯುತ್ತದೆ. 'ನಾಮ' ಗುರ್ತಿಸುವಿಕೆಯ ಸಾಧನವಾಗಿ, ಐತಿಹಾಸಿಕ, ಸಾಂಸ್ಕೃತಿಕ ಸಾರಗಳ ಸೂಚಕವಾಗಿ ಮುಖ್ಯವಾಗುತ್ತವೆ. 'ನಾಮರಹಿತ

ಸಮಾಜ'ವನ್ನು ಕಲ್ಪಿಸಿಕೊಳ್ಳಲಾಗದು. ಅದು ಸೃಷ್ಟಿಸುವ ಗೊಂದಲ ವರ್ಣಿಸಲಾಗದು. 'ನಾಮ' ವ್ಯಕ್ತಿ, ಸ್ಥಳಗಳ ಸೂಚಿ ಜೊತೆಗೆ ಜಾತಿ, ಧರ್ಮಗಳ, ಉಪಪಂಗಡಗಳ ಸೂಚಕವೂ ಆಗಿದೆ. ಉದ್ದನಾಮ ಒಂದು ಜಾತಿಯಾದರೆ, ಅಡ್ಡನಾಮ ಮತ್ತೊಂದು. ಪ್ರಸ್ತುತ ಅಧ್ಯಯನದಲ್ಲಿ 'ಹೆಸರು' ಅಥವಾ 'ಸೂಚಕ' ಎಂಬರ್ಥದ ನಾಮವನ್ನು ಆದರಿಸಲಾಗಿದೆ.

ರೂಢ, ಅಂಕಿತ, ಅನ್ವರ್ಥಕ ಎಂಬ 3 ಬಗೆಯ ನಾಮಗಳಿವೆ. ಬಳಕೆಯಲ್ಲಿ ಬಂದದ್ದು ರೂಢನಾಮ. ಯಾರೊ ಇಟ್ಟದ್ದು ಅಂಕಿತ. ಇಟ್ಟ ನಾಮಕ್ಕೆ ಅರ್ಥ ಅನ್ವಯಿಸಿದರೆ ಅವು ಅನ್ವರ್ಥಕ ಸ್ಥಳನಾಮಗಳು. ಅನ್ವರ್ಥಕವಾಗಿ ಅಂಕಿತಕ್ಕೊಳಪಟ್ಟು ರೂಢಿಯಲ್ಲಿ ಬಂದವು ವಿಶಿಷ್ಟನಾಮಗಳು. ಎಲ್ಲ ಸಂದರ್ಭದಲ್ಲಿ ಅರ್ಥಗಳು ಅನ್ವಯಿಸುವುದಿಲ್ಲ. ಉದಾ : ಭದ್ರೆಯನ್ನು ಹೊಂದಿರುವ ಊರು ಭದ್ರಾವತಿ; ಹಾಗಂತ ಗಂಗಾವತಿಯಲ್ಲಿ ಗಂಗೆ ಇಲ್ಲ. ಅನ್ವರ್ಥವಾಗದಿದ್ದರೂ ಅನರ್ಥಕವಾಗದೇ ಯಾವುದೋ ಕಾರಣದಿಂದ ಅಂಕಿತ ಪಡೆದು ರೂಢಿಯಲ್ಲಿ ಬಂದ ಸ್ಥಳನಾಮಗಳ ಅಧ್ಯಯನ ಅತ್ಯಂತ ಕುತೂಹಲಕರವಾಗಿದೆ.

ಆದಿವಾಸಿ ಅಲೆಮಾರಿಯಾಗಿದ್ದ ಮಾನವ ಬುಡಕಟ್ಟು ಹಂತದಲ್ಲಿ ನೆಲೆ ಕಂಡುಕೊಂಡ. ನೆಲೆಗೊಂದು ಸಂಕೇತಬೇಕಾದಾಗ ಸ್ಥಳನಾಮಗಳು ಹುಟ್ಟಿಕೊಂಡವು. ವಿಶೇಷವಾಗಿ ಸಂಸ್ಕೃತಿಯ ಸೂಚಕಗಳಾಗಿ ನಾಮಗಳು ಇವೆ. ಇವುಗಳ ನಿಷ್ಪತ್ತಿ [ಮೂಲ ರೂಪ] ಕುತೂಹಲಕರವಾಗಿದೆ. ಇತಿಹಾಸ, ಸಂಸ್ಕೃತಿ, ಭೌಗೋಳಿಕ ಮಹತ್ವ ಹೀಗೆ ಏನೆಲ್ಲವನ್ನೂ ಸ್ಥಳನಾಮಗಳು ಒಳಗೊಳ್ಳುತ್ತವೆ.

ವಿಶ್ವಕ್ಕೆ ಗುರುವಾಗಿದ್ದ ಭಾರತಕ್ಕೆ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಇದೆ. ಆ ಪರಂಪರೆಯ ಮಹತ್ವವನ್ನು ಸ್ಥಳನಾಮಗಳು ಸೂಚಿಸುತ್ತವೆ. ರಾಮಾಯಣ, ಮಹಾಭಾರತಗಳೊಂದಿಗೆ ಇಲ್ಲಿನ ಹಲವು ಹಳ್ಳಿಗಳು ತಳುಕು ಹಾಕಿಕೊಂಡಿರುವುದನ್ನು ಕಾಣಬಹುದು. ಅಕ್ಷರಗಳಿಗೂ ಅರ್ಥವಿರುವ ವಿಶ್ವದಲ್ಲೇ ಶ್ರೀಮಂತ ಭಾಷೆಯಾದ ಸಂಸ್ಕೃತ ಮೂಲದಿಂದ ಬರುವ ಹೆಸರುಗಳು ಇನ್ನೂ ಕುತೂಹಲಕರವಾಗಿವೆ. ಪ್ರದೇಶದಿಂದ ಅಲ್ಲಿನ ಪ್ರಮುಖ ವ್ಯಕ್ತಿಗಳಿಗೆ ನಾಮ ವಿಶೇಷಣಗಳು ಸೇರುತ್ತವೆ. ಜನಕನ ಮಗಳಾದ ಜಾನಕಿ, ಮಿಥಿಲೆ ದೇಶದವಳಾದ್ದರಿಂದ ಮೈಥಿಲಿ ಎಂದೂ, ವಿದೇಹ ಎಂಬ ಹೆಸರೂ ಅದಕ್ಕಿದ್ದರಿಂದ ವೈದೇಹಿ ಎಂದು ಹೆಸರಾಗಿದ್ದಾಳೆ. ಜಹ್ನು ಭಗೀರಥರಿಂದ ಬಂದ ಗಂಗೆ ಜಾಹ್ನವಿ ಭಾಗೀರಥಿಯಾದಂತೆ. ವ್ಯಕ್ತಿನಾಮಗಳಿಗಿರುವಷ್ಟೆ ಕುತೂಹಲಕರ ಹಿನ್ನೆಲೆ ಸ್ಥಳನಾಮಗಳಿಗೂ ಇದೆ.

'ಭಾಷ್' ಎಂದರೆ ಹೊಳೆ, ಪ್ರಕಾಶಿಸು ಎಂದರ್ಥ. ಬೆಳಕು ಬೀರುವ ಶಕ್ತಿಯಾದ ಭಾಷೆ ಮನುಷ್ಯನ ಪ್ರಬಲ ಅಸ್ತ್ರ. ಭಾಷೆ ಕಲಿತಾದ ನಂತರ ಮನುಷ್ಯ ನಾಮಗಳ ಬಗ್ಗೆ ಆಸಕ್ತಿ ತಾಳಿದನು. ನಾಮಗಳಿಗಿರುವ ವೈವಿಧ್ಯತೆ ಗಮನಾರ್ಹ. ಸಾಮಾಜಿಕ ಸಂಪರ್ಕಕ್ಕೆ ಗುರ್ತಿಸುವಿಕೆ ಮೂಲಕ ನೆರವಾಗುವ ನಾಮಗಳು ವ್ಯಕ್ತಿ, ವಸ್ತು, ಸ್ಥಳಗಳನ್ನು ಮುಖ್ಯವಾಗಿ ಸೂಚಿಸುತ್ತವೆ. ನಾಮವಿಲ್ಲದೆ ವ್ಯವಹಾರ ಅಸಾಧ್ಯವಾಗಿ ಸಮಾಜ ಗೊಂದಲ ಮಯವಾಗುತ್ತಿತ್ತು. ಸಾಮಾಜಿಕ ವ್ಯವಹಾರಕ್ಕೆ ಅವಶ್ಯಕ ಸಾಧನ ನಾಮ. ಸ್ಥಳನಾಮಗಳ ಅಧ್ಯಯನ ಏಕ ಕಾಲಕ್ಕೆ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ಅಧ್ಯಯನವೂ ಆಗುತ್ತದೆ. ಇತ್ತೀಚೆಗೆ ಸ್ಥಳನಾಮಗಳ ಅಧ್ಯಯನ ಆಕರ್ಷಕವಾಗುತ್ತಾ ಆಸಕ್ತಿಯನ್ನು ಸೆಳೆಯುತ್ತಿದೆ. ವ್ಯಕ್ತಿ ಮತ್ತು ಸ್ಥಳನಾಮಗಳು ಮುಖ್ಯವಾಗಿದ್ದು ಅದರಲ್ಲೂ ವಸತಿ ಸ್ಥಳನಾಮಗಳು ಅಧ್ಯಯನಕ್ಕೆ ಒಳಗಾಗುತ್ತಿವೆ.

ಸಂಕೇತಿಸುವ ಸಾಧನಗಳಾದ ನಾಮಗಳು ವಿಶಿಷ್ಟ ಅಂಶಗಳನ್ನು ಒಳಗೊಂಡಿವೆ. ಹಲವು ವ್ಯಕ್ತಿಗಳ ನಾಮಗಳು ಒಂದೇ ಆಗಿರುವಂತೆ, ಹಲವು ಊರಿನ ಹೆಸರುಗಳೂ ಒಂದೇ ಆಗಿದ್ದಾಗ ಅದಕ್ಕೆ ಬೇರೆ ವೈಶಿಷ್ಟ್ಯ ಗಮನಿಸಿ ಸಂಕೇತಾಕ್ಷರ ಕೊಡುವುದೂ ಉಂಟು. ಉದಾ : 'ವಿಠಲೇನಹಳ್ಳಿ' ಹೆಸರಿನ 2 ಹಳ್ಳಿಗಳಿದ್ದರೆ ಎ, ಬಿ ಎಂದು ಸೂಚಿಸುವುದುಂಟು. ಉತ್ತರ ಕರ್ನಾಟಕದಲ್ಲಿ 'ಕೆಲ್ಲೂರು' ಹೆಸರಿನ 3 ಗ್ರಾಮಗಳು ಒಂದೇ ತಾಲ್ಲೂಕಿನಲ್ಲಿದ್ದು ಸಂತೆ ನಡೆಯುವುದು ಸಂತೆಕೆಲ್ಲೂರು, ದಿಬ್ಬದ ಮೇಲಿರೋದು ಮಿಟ್ಟಿಕೆಲ್ಲೂರು, ತಗ್ಗಿನಲ್ಲಿ ಇರುವುದು ಕುಣಿಕೆಲ್ಲೂರು ಆಗಿದೆ. ಇಂಥ ಅನೇಕ ಆಸಕ್ತಿಕರ ಅಂಶಗಳು ಸ್ಥಳನಾಮಗಳ ಅಧ್ಯಯನದಲ್ಲಿ ಕಂಡುಬರುತ್ತದೆ.

ಸ್ಥಳನಾಮಗಳು ಆ ಪ್ರದೇಶದ ಮಾಹಿತಿ ಸೂಚಕಗಳೂ ಆಗುತ್ತವೆ. ನಮ್ಮವರ ಸೌಂದರ್ಯ ಪ್ರಜ್ಞೆ, ಬುದ್ಧಿಮತ್ತೆಗಳನ್ನು ಇವು ಸೂಚಿಸುತ್ತವೆ. ನೈಸರ್ಗಿಕ ಮತ್ತು ವೃತ್ತಿ ವಿಶೇಷತೆಗಳನ್ನೂ ಕೆಲವೊಮ್ಮೆ ಒಳಗೊಳ್ಳುತ್ತವೆ. ಸ್ಥಳನಾಮಗಳ ಬದಲಾವಣೆ ಕೂಡ ಅಷ್ಟೇ ಆಸಕ್ತಿಕರವಾಗಿದೆ. ಉದಾ : ಮದ್ರಾಸ್–ಚೆನ್ನೈ, ಬ್ಯಾಂಗ್ಲೂರ್–ಬೆಂಗಳೂರು, ಕೊಲ್ಕತ್ತಾ–ಕಲಕತ್ತಾ ಮುಂತಾದವು. ತ್ರವೇಂದ್ರಂ–ತಿರುವನಂತಪುರಂ, ತ್ರಿಚಿ–ತಿರುಚನಾಪಳ್ಳಿ ಇಂಥ ವ್ಯತ್ಯಾಸಗಳು ಗಮನಾರ್ಹ. ವ್ಯಕ್ತಿನಾಮಗಳೂ ಪ್ರದೇಶವಾಚಿಯಾಗುವುದುಂಟು. ಮುನಿಯಪ್ಪ–ಮುನಿಯಮ್ಮ ಚಿಕ್ಕಬಳ್ಳಾಪುರ, ಕೋಲಾರಗಳನ್ನು ಪ್ರತಿನಿಧಿಸಿದರೆ; ತಿಪ್ಪೇಶ, ರುದ್ರ, ತಿಪ್ಪಯ್ಯಗಳು ಚಿತ್ರದುರ್ಗವನ್ನು; ಬಸವಣ್ಣ–ಬಸವಮ್ಮಗಳು ಬೀದರನ್ನು ಪ್ರತಿನಿಧಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಇದಕ್ಕೆ ಅಪವಾದವೂ ಇಲ್ಲದಿಲ್ಲ.

ಗುಲ್‌ಮೊಹರ್‌ಗಳ ಬಾಗ್(ತೋಟ) ಗುಲಬರ್ಗವಾದರೆ, ಹೈದರ್‌ನ ಊರು(ಬಾದ್) ಹೈದರಾಬಾದ್ ಆಗಿದೆ. ಉಸ್ಮಾನಾಬಾದ್, ನಿಜಾಮಾಬಾದ್, ಔರಂಗಬಾದಗಳು ಹೀಗೆ ಅಂಕಿತವಾಗಿ ಸ್ಥಳನಾಮಗಳು ಜನಜೀವನ ವಿಧಾನದ ಸೂಚಕಗಳೂ ಆಗುತ್ತವೆ. ಪ್ರಾದೇಶಿಕ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಇವು ನೆರವಾಗುತ್ತವೆ. ಆಕರ ಸಾಮಗ್ರಿಗಳಾಗಿ ಆಹಾರವನ್ನು ಒದಗಿಸುತ್ತವೆ. ಅನೇಕ ಮಹತ್ವದ ಅಂಶಗಳನ್ನು ಒಡಲಲ್ಲಿಟ್ಟುಕೊಂಡವುಗಳು ಸ್ಥಳನಾಮಗಳು.

ಸ್ಥಳನಾಮಗಳೆಂದರೆ ಕೇವಲ ಊರುಗಳ ಹೆಸರುಗಳಲ್ಲ. ಅವು ಆಯಾ ಪ್ರದೇಶಗಳ ಭೌಗೋಳಿಕ, ಐತಿಹಾಸಿಕ ಹಾಗೂ ಸಾಮಾಜಿಕ ವಿಷಯಗಳನ್ನೊಳಗೊಂಡಂಥ ಜೀವಂತ ಪಳೆಯುಳಿಕೆಗಳು, ಸಾಂಸ್ಕೃತಿಕ ಘಟಕಗಳಾಗಿವೆ. ತಂದೆ–ತಾಯಿಗಳು ತಮ್ಮ ಮಕ್ಕಳಿಗೆ ಹೆಸರನ್ನಿಡುವಾಗ ಅವರ ಮನೋದೃಷ್ಟಿ ವ್ಯಕ್ತಗೊಂಡಂತೆ ಒಂದು ಊರಿಗೆ ಒಂದು ಹೆಸರು ಪ್ರಾಪ್ತವಾಗಬೇಕಾದರೆ ಅಲ್ಲಿ ಮೂಲ ನಿವಾಸಿಗಳ ಯಥಾರ್ಥ ಬಿಂಬ ಗ್ರಹಣವಾಗಿರುವಂತಿರುತ್ತದೆ. ಒಂದು ಜನಾಂಗದ ಏಳು–ಬೀಳು, ಕಷ್ಟ–ಸುಖ, ಪ್ರಾಕೃತಿಕ–ಸಾಂಸ್ಕೃತಿಕ ಕಾರಣಗಳು ಊರ ಹೆಸರು ಬರಲು ಪ್ರೇರಕವಾಗಿರುತ್ತವೆ. ಅಲ್ಲದೆ ದಾನಿಗಳ, ವೀರರ, ತ್ಯಾಗಿಗಳ, ರಾಜ–ರಾಣಿ–ಮಂತ್ರಿಗಳ, ಮಹಾಪುರುಷರ ಸ್ಮರಣೆಗಾಗಿಯು ಕೆಲವು ಊರ ಹೆಸರುಗಳು ಬಂದಿರುತ್ತವೆ. ಚರಿತ್ರೆಯ ದೃಷ್ಟಿಯಿಂದ ಅಧ್ಯಯನ ಮಾಡುವುದಾದರೆ ಸ್ಥಳನಾಮಗಳು ತುಂಬಿದ ಗಣಿಗಳಾಗಿವೆ. **'ಚರಿತ್ರೆ ಮೌನತಾಳಿದಲ್ಲಿ ಸ್ಥಳನಾಮಗಳು ಮಾತನಾಡುತ್ತವೆ'** ಎಂಬ ಮಾತು ಚನ್ನಪಟ್ಟಣ ತಾಲ್ಲೂಕಿನ ಅನೇಕ ಸ್ಥಳನಾಮಗಳಿಗೆ ಅಕ್ಷರಶಃ ಅನ್ವಯಿಸುತ್ತದೆ. ಈ ತಾಲ್ಲೂಕಿನ ಹಲವಾರು ಸ್ಥಳನಾಮಗಳು ಐತಿಹಾಸಿಕ ಘಟನೆಗಳನ್ನು, ಸಾಂಸ್ಕೃತಿಕ ವಿವರಗಳನ್ನು, ಧಾರ್ಮಿಕ ಪುರುಷರನ್ನು ದಾಖಲೆ ರೂಪದಲ್ಲಿ ಉಳಿಸಿಕೊಂಡು ಬಂದಿವೆ. ಆದ್ದರಿಂದ ಸ್ಥಳನಾಮಗಳು ಸಾಂಸ್ಕೃತಿಕ ಅಧ್ಯಯನಕ್ಕಂತೂ ಅಮೂಲ್ಯ ಆಕರಗಳಾಗಬಲ್ಲವು. ಕೆಲವರು ಈ ತಾಲ್ಲೂಕಿನ ಸ್ಥಳನಾಮಗಳನ್ನು ಅಲ್ಲಲ್ಲಿ ಉಲ್ಲೇಖಿಸಿರುವುದುಂಟು. ಆದರೆ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನೇ ಪ್ರಮುಖವಾಗಿ ಆಧರಿಸಿ ಇದುವರೆವಿಗೂ ಯಾರೂ ವ್ಯಾಪಕವಾದ ಅಧ್ಯಯನ ಮಾಡಿಲ್ಲ. ಈ ಕೊರತೆಯನ್ನು ಮನಗಂಡು ಹತ್ತು ಹಲವು ರಹಸ್ಯಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಸ್ಥಳನಾಮಗಳನ್ನೇ ಪ್ರಮುಖವಾಗಿ ಬಳಸಿಕೊಂಡು ಅಧ್ಯಯನ ಮಾಡುವ ಉದ್ದೇಶದಿಂದ **'ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು–ಸಾಂಸ್ಕೃತಿಕ ಅಧ್ಯಯನ'** ಎಂಬ ವಿಷಯವನ್ನು ಪಿಎಚ್.ಡಿ ಮಹಾಪ್ರಬಂಧದ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಸ್ಥಳನಾಮಗಳು ಸಂಶೋಧಕನಿಗೆ ಹಲವು ಕುತೂಹಲಕರವಾದ ಸವಾಲುಗಳನ್ನು ಒಡ್ಡುತ್ತವೆ. ಇಂತಹ ಸವಾಲುಗಳನ್ನು ಸ್ವೀಕರಿಸಿ,

ಉತ್ತರ ಹುಡುಕುವುದು ನನ್ನ ಸಂಶೋಧನೆಯ ಉದ್ದೇಶವಾಗಿದೆ. ಇದರ ಜೊತೆಯಲ್ಲಿಯೇ ಪ್ರಾಚೀನ ಸಂಸ್ಕೃತಿಯ ಅಧ್ಯಯನಕ್ಕೆ ಪೂರಕವಾಗಿ ಸ್ಥಳನಾಮಗಳು ಹೇಗೆ ನೆರವನ್ನು ನೀಡುತ್ತವೆ ಎಂಬುದನ್ನು ತಿಳಿಯುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಅಧ್ಯಯನದ ಸಂದರ್ಭದಲ್ಲಿ ಕ್ಷೇತ್ರ ಕಾರ್ಯವನ್ನೇ ಪ್ರಧಾನವಾಗಿ ಕೈಗೊಂಡು ಮಾಹಿತಿ ಸಂಗ್ರಹಿಸಿ ಸಾಂಸ್ಕೃತಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಮೂರು ಹೋಬಳಿಗಳಲ್ಲಿ ಬರುವ ಪ್ರಮುಖ ಊರುಗಳ ಹೆಸರುಗಳನ್ನು ಅಂದರೆ ಸ್ಥಳನಾಮಗಳನ್ನು ಅಧ್ಯಯನ ಮಾಡುವುದು ನನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಐತಿಹಾಸಿಕವಾಗಿ ಮಹತ್ವವುಳ್ಳ ಹಾಗೂ ಸಾಂಸ್ಕೃತಿಕವಾಗಿ ವೈಶಿಷ್ಟ್ಯತೆ ಪಡೆದ ಕೆಲವು ಪ್ರಾತಿನಿದಿಕ ಸ್ಥಳಗಳನ್ನು ಆಧರಿಸಿ ಈ ಅಧ್ಯಯನ ನಡೆಸಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು–ಸಾಂಸ್ಕೃತಿಕ ಅಧ್ಯಯನ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

- v **ಅಧ್ಯಯನ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ**ಯಲ್ಲಿ ಆದಿ ಮಾನವ ಅಲೆಮಾರಿ ಜೀವನಕ್ಕೆ ತಿಲಾಂಜಲಿ ಹೇಳಿ, ಒಂದೆಡೆ ನಿಂತು ಬದುಕುವ ಕಲೆಯ ಜೊತೆಗೆ ತಾನು ನೆಲೆವೂರಿದ ಸ್ಥಳಕ್ಕೆ ಹೆಸರಿಟ್ಟ ಪರಿಯನ್ನು ತಿಳಿಸಲಾಗಿದೆ. ಕಾಲಾನಂತರದಲ್ಲಿ ವ್ಯವಹಾರಿಕ ಉದ್ದೇಶಗಳಿಗಾಗಿ ಸ್ಥಳನಾಮಗಳು ವಿಕಾಸಗೊಂಡ ಬಗೆಯನ್ನು ವಿವರಿಸಲಾಗಿದೆ.
- Ø **ಸ್ಥಳನಾಮಗಳ ಉಗಮ ಮತ್ತು ವಿಕಾಸ** ಎಂಬ ಮೊದಲ ಅಧ್ಯಾಯದಲ್ಲಿ ಸ್ಥಳನಾಮದ ಸ್ವರೂಪ ಮತ್ತು ಸ್ಥಳನಾಮ ಅಧ್ಯಯನದ ಇತಿಹಾಸವನ್ನು ಗಮನಿಸಲಾಗಿದೆ. ಸ್ಥಳನಾಮ ಸಂಶೋಧಕನಾದವನು ಈ ಕ್ಷೇತ್ರದಲ್ಲಾಗಿರುವ ಕೃತಿಗಳನ್ನು ಅರಿಯುವುದು ಅತೀ ಅವಶ್ಯಕವಾಗಿದೆ. ಆದ್ದರಿಂದ ಸ್ಥಳನಾಮ ಅಧ್ಯಯನ ಶಾಸ್ತ್ರವು ಮೊದಲಿಗೆ ಪಾಶ್ಚಾತ್ಯರು ಜ್ಞಾನ ಶಿಸ್ತಾಗಿ ಬೆಳೆಸಿದರು. ಅವರ ಸ್ಥಳನಾಮಾಧ್ಯಯನದ ಮೇಲಿನ ಕಾಳಜಿ, ಕಳಕಳಿಯನ್ನು ತಿಳಿಸುವುದರೊಂದಿಗೆ ದೇಶದ ವಿವಿಧ ಭಾಗಗಳಲ್ಲಾಗಿರುವ ಅಧ್ಯಯನದ ವಿವರಗಳನ್ನು ಹಾಗೂ ಕರ್ನಾಟಕದ ನೆಲದಲ್ಲಿ ಆಗಿರುವ ಅಧ್ಯಯನದ ವಿವರಗಳನ್ನು, ಸ್ಥಳನಾಮ ವಿದ್ವಾಂಸರ ಕೊಡುಗೆಗಳನ್ನು ಕಾಲಾನುಕ್ರಮದಲ್ಲಿ ಗ್ರಹಿಸಿ ಸ್ಥಳನಾಮ ಅಧ್ಯಯನದ ಚರಿತ್ರೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಲ್ಲದೇ ಸ್ಥಳನಾಮ ಅಧ್ಯಯನ ಕ್ಷೇತ್ರದಲ್ಲಿ ಸಂಶೋಧನೆ ಮಾಡಿದ ಮಹನೀಯರು ಹಾಗೂ ಅವರ ಕೊಡುಗೆಗಳನ್ನು ಗಮನಿಸಲಾಗಿದೆ.

- **ಚನ್ನಪಟ್ಟಣ ತಾಲ್ಲೂಕಿನ ಪಕ್ಷಿನೋಟ** ಎಂಬ ಎರಡನೇ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನು ಭೌಗೋಳಿಕ, ಚಾರಿತ್ರಿಕ, ಸಾಮಾಜಿಕ, ಸಾಹಿತ್ಯಕ, ಧಾರ್ಮಿಕ, ರಾಜಕೀಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.
- **ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು** ಎಂಬ ಮೂರನೇ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಸ್ವರೂಪ ಮತ್ತು ವರ್ಗೀಕರಣವನ್ನು ಮಾಡಲಾಗಿದೆ. ಸ್ಥಳನಾಮಗಳ ಅಧ್ಯಯನವನ್ನು ಮಾಡಿದ ಬಹುತೇಕ ವಿದ್ವಾಂಸರು ಸ್ಥಳನಾಮಗಳನ್ನು ಹಲವಾರು ವರ್ಗಗಳಾಗಿ ಗುರುತಿಸಿ, ಅಧ್ಯಯನ ಸುಗಮಗೊಳಿಸಲು ಪ್ರಯತ್ನಿಸಿದ್ದಾರೆ. ಈ ಪ್ರಚಲಿತವಾದ ವರ್ಗೀಕರಣವು ಜಗತ್ತಿನ ಯಾವುದೇ ಭಾಗದ, ಭಾಷೆಯ, ಪ್ರದೇಶಕ್ಕೆ ಅನ್ವಯಿಸುವಂತಿದ್ದು ಸಾರ್ವಕಾಲಿಕ ಮಾನ್ಯತೆಯನ್ನು ಪಡೆದಿರುವುದನ್ನು ಹೇಳಿದ್ದಾರೆ. ತಾಲ್ಲೂಕಿನ ಒಟ್ಟು ಸ್ಥಳನಾಮಗಳನ್ನು ನಿರ್ದಿಷ್ಟಕ್ಕನುಗುಣವಾಗಿ, ವಾರ್ಗಿಕಕ್ಕನುಗುಣವಾಗಿ ಮತ್ತು ಸಂಕೀರ್ಣ ಸ್ಥಳನಾಮಗಳೆಂದು ಮೂರು ರೀತಿಯ ವರ್ಗೀಕರಣವನ್ನು ಮಾಡಲಾಗಿದೆ.
- **ಶಾಸನೋಕ್ತ ಸ್ಥಳನಾಮಗಳ ಅಧ್ಯಯನ** ಎಂಬ ನಾಲ್ಕನೇ ಅಧ್ಯಾಯದಲ್ಲಿ, ಶಾಸನಗಳಲ್ಲಿ ದೊರೆಯುವ ಗ್ರಾಮನಾಮಗಳ ರೂಪ, ಅವುಗಳ ಹಿಂದಿನ ಅರ್ಥ ಮತ್ತು ಬದಲಾದ ಸ್ಥಳನಾಮಗಳು, ಅವುಗಳ ನಿಷ್ಪತ್ತಿಯ ವಿವರಗಳನ್ನು ಕೊಡಲಾಗಿದೆ. ಪ್ರಾಚೀನ ಮತ್ತು ಇಂದಿನ ಸ್ಥಳನಾಮಗಳ ರೂಪದ ಪಟ್ಟಿಯನ್ನು ಸಹ ಕೊಡಲಾಗಿದೆ.
- **ಜನಪದ ಸಾಹಿತ್ಯದ ನೆಲೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು** ಎಂಬ ಐದನೇ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಂಡುಬರುವ ಜನಪದ ಅಂಶಗಳಾದ ಐತಿಹ್ಯ, ಕಥೆ, ಗೀತೆ, ಗಾದೆ ಮತ್ತು ಒಗಟುಗಳು ಸ್ಥಳನಾಮಗಳ ಮೇಲೆ ಬೀರಿರುವ ಪರಿಣಾಮವನ್ನು ಹಾಗೂ ಸ್ಥಳನಾಮಕರಣ ಪ್ರಕ್ರಿಯೆಯಲ್ಲಿ ಜನಪದರ ಒಲವು ನಿಲುವುಗಳೇನು? ಎಂಬ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಲಾಗಿದೆ.
- **ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಭಾಷಿಕ ವಿಶ್ಲೇಷಣೆ** ಎಂಬ ಆರನೇ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನು ಭಾಷಿಕ ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ. ಜೊತೆಗೆ ತಾಲ್ಲೂಕಿನ ಸ್ಥಳನಾಮಗಳ ರಾಚನಿಕ ಸ್ವರೂಪವನ್ನು ಗಮನಿಸಲಾಗಿದೆ. ಇದರಲ್ಲಿ ಏಕ ಘಟಕಾಧಾರಿತ, ದ್ವಿಘಟಕಾಧಾರಿತ ಮತ್ತು ಬಹುಘಟಕಾಧಾರಿತ ಸ್ಥಳನಾಮಗಳನ್ನು ಕಾಣಲು ಸಾಧ್ಯ. ಭಾಷಾ ವೈಜ್ಞಾನಿಕ ಪರಿಶೀಲನೆಯನ್ನು ನಡೆಸಲಾಗಿದೆ. ವ್ಯಾಕರಣಾಂಶಗಳಾದ ಸಂಧಿ, ಸಮಾಸ ಮೊದಲಾದ ಭಾಷಿಕ ಅಂಶಗಳನ್ನು ಚರ್ಚಿಸಲಾಗಿದೆ. 'ಅ'ಕಾರದಿಪಟ್ಟಿ

ಮತ್ತು ಅವುಗಳ ನಿಷ್ಪತ್ತಿಯ ವಿವರಗಳನ್ನು, ಸ್ಥಳನಾಮಗಳ ಹುಟ್ಟಿಗೆ ಕಾರಣವಾಗುವ ಕಸುಬುಗಳು ಮತ್ತು ಕಸುಬನ್ನು ನಡೆಸುವ ಜನರ ಜೀವನ ವಿಧಾನ, ಈ ನೆಲದ ಮೂಲ ನಿವಾಸಿಗಳು, ದೈವವಾಚಕ, ಜಲವಾಚಕ, ಭೂವಾಚಕ, ವ್ಯಕ್ತಿವಾಚಕ, ಪ್ರಾಣಿವಾಚಕ ಮೊದಲಾದ ಸ್ಥಳನಾಮಗಳ ನಿಷ್ಪತ್ತಿಯನ್ನು ತಿಳಿಸಲಾಗಿದೆ.

V ಸಮಾರೋಪ ಭಾಗದಲ್ಲಿ ಮಹಾಪ್ರಬಂಧದ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟು ಫಲಿತಗಳು ಹಾಗೂ ಮುಂದಿನ ಅಧ್ಯಯನಗಳ ಸಾಧ್ಯತೆಯನ್ನು ಸೂಚಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನುಬಂಧಗಳನ್ನು ನೀಡಲಾಗಿದ್ದು ಇಡೀ ತಾಲ್ಲೂಕಿನ ಸ್ಥಳನಾಮಗಳನ್ನು ಅಕಾರಾದಿಯಾಗಿ ನೀಡಲಾಗಿದೆ. ಕ್ಷೇತ್ರಕಾರ್ಯಕ್ಕೆ ಸಿದ್ದಪಡಿಸಿದ ಪ್ರಶ್ನಾವಳಿರೂಪ, ಕ್ಷೇತ್ರಕಾರ್ಯದಲ್ಲಿ ಭೇಟಿ ಮಾಡಿದ ವಕ್ತೃಗಳ ವಿವರ, ಅಧ್ಯಯನಕ್ಕಾಗಿ ಆಧಾರವಾದ ಗ್ರಂಥಸೂಚಿ, ನಿಯತಕಾಲಿಕೆಗಳ ಪಟ್ಟಿ, ವಿವಿಧ ನಿಘಂಟುಗಳು ಹಾಗೂ ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳ ವಿವರಗಳನ್ನು ಹಾಗೂ ಛಾಯಚಿತ್ರಗಳನ್ನು ನೀಡಲಾಗಿದೆ. ಹೀಗೆ ಒಟ್ಟಂದದ ರೂಪದಲ್ಲಿ **ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು–ಸಾಂಸ್ಕೃತಿಕ ಅಧ್ಯಯನ** ಎಂಬ ಮಹಾಪ್ರಬಂಧವನ್ನು ಸಿದ್ದಪಡಿಸಲಾಗಿದೆ.

** ** ** ** **

ಕೊನೆ ಟಿಪ್ಪಣಿಗಳು :

1) ಡಾ.ಡಿ.ಎಲ್.ನರಸಿಂಹಾಚಾರ್ : ವಡ್ಡಾರಾಧನೆ, ಪುಟ–242
2) ವಿ.ಗೋಪಾಲಕೃಷ್ಣ : ಸ್ಥಳನಾಮ ಅಧ್ಯಯನಗಳು, ಪುಟ–1
3) ಡಾ.ಎಂ.ಚಿದಾನಂದಮೂರ್ತಿ : ಕರ್ನಾಟಕ ಸ್ಥಳನಾಮಗಳು, ಪುಟ–27–28

** ** ** ** **

ಅಧ್ಯಾಯ – 1

ಸ್ಥಳನಾಮಗಳ ಉಗಮ ಮತ್ತು ವಿಕಾಸ

ಈ ಭೂಮಿಯ ಮೇಲೆ ಮನುಕುಲ ಸೃಷ್ಟಿಯಾಗುತ್ತಿದ್ದಂತೆಯೇ ಆತನ ಜೀವನಕ್ಕೆ ಒಂದು ನಿಶ್ಚಿತ ನೆಲೆ ಕಂಡುಕೊಳ್ಳಬೇಕಾಯಿತು. ಆತ ಒಂದು ಕಡೆ ನೆಲೆ ನಿಲ್ಲಲು ಗುರುತಿಸಿದ ಊರು, ವ್ಯವಸಾಯಕ್ಕೋಸ್ಕರ ನಿರ್ಮಿಸಿದ ಕೆರೆ, ಕಟ್ಟೆ, ಏರಿಗಳನ್ನು ತನ್ನ ಆಸರೆಗಾಗಿ ನಿರ್ಮಿಸಿಕೊಳ್ಳುತ್ತಾ ಬಂದಿದ್ದಾನೆ. ಹೀಗೆ ಮನುಷ್ಯ ತನ್ನ ವಸತಿ ಸ್ಥಳಗಳನ್ನು ರೂಪಿಸಿಕೊಂಡ ನಂತರ ಅದನ್ನು ಗುರುತಿಸಲು ಹೆಸರಿಡುವುದು ಅನಿವಾರ್ಯವಾಯಿತು. ಆಗ ಆತನ ಆಲೋಚನೆ, ಕಲ್ಪನೆ, ನಂಬಿಕೆ, ಇತಿಹಾಸ ಮೊದಲಾದುವುಗಳು ಕೆಲಸ ಮಾಡಿದಂತೆ ಕಾಣುತ್ತದೆ. ಹೀಗೆ ರೂಪುಗೊಂಡ ಸ್ಥಳನಾಮಗಳು ಮುಂದಿನ ತಲೆಮಾರಿಗೆ ಕುತೂಹಲಕರವಾಗಿ ಕಂಡವು. ಎಲ್ಲವನ್ನು ತಿಳಿಯಬೇಕೆಂಬ ಕಲಿಗಾಲದ ಮಾನವ ಈ ಬಗೆಯ ಅಧ್ಯಯನಗಳನ್ನು ಕೈಗೊಂಡ. ಆದರೆ ಸ್ಥಳನಾಮದ ಅರ್ಥ ವಿವರಣೆಯ ಆರಂಭದ ಪ್ರಯತ್ನಗಳು ಕ್ರಮಬದ್ಧವಾಗಿ ಇರಲಿಲ್ಲ; ಅಸಮಂಜಸವಾಗಿತ್ತು. ಸುಮಾರು 1840ರ ನಂತರ ಐರೋಪ್ಯ ರಾಷ್ಟ್ರಗಳಲ್ಲಿ ಸ್ಥಳನಾಮದ ಕ್ರಮಬದ್ಧ ಅಧ್ಯಯನವನ್ನು ಪ್ರಾರಂಭಿಸಲಾಯಿತು.

“ಜರ್ಮನಿಯ ಗಾಟ್‌ಫ್ರೀಡ್ ವಿಲ್‌ಹೆಲ್ಮ್ ಲಿಬ್ನಿಜ ಎಂಬ ವಿದ್ವಾಂಸ 1768ರಲ್ಲಿ ಸ್ಥಳನಾಮ ಅರ್ಥಗರ್ಭಿತವಾದವುಗಳೆಂದು ಅವುಗಳ ಪ್ರಾಚೀನ ರೂಪಗಳಿಂದ ಅರ್ಥ ನಿರ್ಣಯಿಸಬೇಕಾದರೆ ಅಧ್ಯಯನವು ವ್ಯವಸ್ಥಿತ ಕ್ರಮದಲ್ಲಿ ನಡೆಯಬೇಕೆಂದು ಪ್ರಪ್ರಥಮವಾಗಿ ಸಾರಿದನು.”[1] ಹಾಗಾಗಿ ಈತನೇ **‘ಸ್ಥಳನಾಮದ ಪಿತಾಮಹ’** ಎಂದು ಕೆಮ್ತೂರು ರಘುಪತಿ ಭಟ್ಟ ಅವರು ‘ತುಳುನಾಡಿನ ಸ್ಥಳನಾಮಗಳು’ ಎಂಬ ಗ್ರಂಥದಲ್ಲಿ ಸೂಚಿಸಿದ್ದಾರೆ.

ಈ ಅವಧಿಯ ಚೊಚ್ಚಲ ಕೊಡುಗೆಗಳಾಗಿ ಫಾಯರ್ ಸ್ಟೆಮ್ಯಾನನ “A Itdeutches nemen buch ಮತ್ತು ಐಸಾಕ್ ಟೇಲರನ words and places ಉಲ್ಲೇಖಗಳು ಪ್ರಮುಖವಾದವುಗಳು.”[2]

ಒಂದು ಸ್ಥಳದ ಹೆಸರಿನ ಅಧ್ಯಯನ ಮಾಡುವ ವ್ಯಕ್ತಿ ಆ ಸ್ಥಳದ ಪ್ರಾಕೃತಿಕ ಲಕ್ಷಣ, ಭೌಗೋಳಿಕ ಪರಿಸರವನ್ನು ಮನಗಾಣಲೇಬೇಕು. ಆ ಸ್ಥಳದ ಮೂಲವನ್ನು ತಿಳಿಯಲು ಆತ ಪ್ರಯತ್ನಿಸಬೇಕು. ಒಂದು ನಿರ್ದಿಷ್ಟ ಕಾಲದಲ್ಲಿ ತಲೆಯೆತ್ತಿದ ಸ್ಥಳನಾಮಗಳ ಹೆಸರಿನಲ್ಲಿ ಆ ಸ್ಥಳದ

ಭೂವಿಶೇಷತೆ ಅಚ್ಚೊತ್ತಿದ್ದು ಇನ್ನೊಂದು ಸ್ಥಳದ ಹೆಸರನ್ನು ಪ್ರತ್ಯೇಕಿಸಲು ಅವಕಾಶ ಮಾಡಿಕೊಡುವಂತಾಗುತ್ತದೆ. ಈ ಪ್ರಧಾನ ಅಂಶವೇ ಸ್ಥಳನಾಮಗಳ ಹುಟ್ಟಿಗೆ ಕಾರಣವಾಗಿದೆ.

ವ್ಯಕ್ತಿ–ವಸ್ತು–ಸ್ಥಳಗಳ ಅನನ್ಯತೆಯನ್ನು ವಿಶೇಷವಾಗಿ ಗುರುತಿಸಲು ನೆರವಾಗುವಂತೆ ಅವುಗಳ ವಿಭಿನ್ನತೆ ವೈಶಿಷ್ಟ್ಯತೆಗಳನ್ನು ಸಂಕೇತಿಸಲು ಸ್ಥಳನಾಮಗಳನ್ನು ಇಡಲಾಗುತ್ತದೆ. ಆ ಕಾರಣಕ್ಕೆ 'ನಾಮಕರಣ' ಪ್ರಕ್ರಿಯೆ ಮುಖ್ಯವಾಗುತ್ತದೆ. ಮಗು ಹುಟ್ಟಿದೊಡನೆ ಹೆಸರಿನ ಹುಡುಕಾಟದ ಆರಂಭ, ವಸ್ತುವೊಂದನ್ನು ಸಂಶೋಧಿಸಿದೊಡನೆ ಅದರ ರೂಪ–ಕಾರ್ಯ–ವೈಖರಿ ಸ್ವಭಾವಗಳನ್ನು ಆಧರಿಸಿ ಹೆಸರಿಸುವ ಪ್ರಯತ್ನವನ್ನು ಆರಂಭಿಸುವ ಆಸೆಯೇ ಸ್ಥಳನಾಮಗಳ ಉಗಮಕ್ಕೆ ಕಾರಣವಾಯಿತು.

ಸ್ಥಳನಾಮಗಳು ತಮ್ಮದೇ ಆದ ವಿಶಿಷ್ಟ ರೀತಿಯ ಹೆಸರುಗಳಿಂದ ಕೂಡಿರುತ್ತವೆ. ಕೆಲವು ಸ್ಥಳನಾಮಗಳ ಹೆಸರನ್ನು ಕೇಳುತ್ತಿದ್ದಂತೆಯೇ ಅವು ಸ್ಫೂರ್ತಿಯ ಬುಗ್ಗೆಗಳಾಗಿ ಹೊರಹೊಮ್ಮುತ್ತವೆ. ಜೊತೆಗೆ ಸ್ಥಳನಾಮಗಳು ಭೌಗೋಳಿಕ, ಸಾಂಸ್ಕೃತಿಕ, ಚಾರಿತ್ರಿಕ, ಸ್ವಾಭಾವಿಕ ವಿಶೇಷಗಳನ್ನು ದಾಖಲಿಸುತ್ತವೆ. ಅಂಥ ಸ್ಥಳನಾಮಗಳು ಕೇವಲ ವ್ಯಕ್ತಿಗಷ್ಟೇ ಸೀಮಿತವಲ್ಲ; ವ್ಯಕ್ತಿ, ವಸ್ತು, ಸ್ಥಳ, ನಗರ, ಹಳ್ಳ, ನದಿ, ಬೆಟ್ಟ, ಊರು, ಗುಡ್ಡ, ಕಣಿವೆ, ಬಯಲು, ಸರೋವರ, ಕಂದರ, ಪರ್ವತ ಎಲ್ಲವೂ ನಾಮಕರಣಗೊಳ್ಳುತ್ತವೆ. ಅಸ್ತಿತ್ವಕ್ಕೊಂದು ಅರ್ಥವನ್ನು ತಂದುಕೊಡುವ ಉದ್ದೇಶದಿಂದ ಸ್ಥಳದ ನಾಮಕರಣ ಶುರುವಾಯಿತು.

ಆದಿವಾಸಿ ಮಾನವ ಬುಡಕಟ್ಟು ಸ್ಥಿತಿಗೆ ಬಂದಾಗ ನಾಮಕರಣ ಪ್ರಕ್ರಿಯೆ ಪ್ರಾರಂಭವಾಯಿತು. ಒಂದು ಕಡೆ ನೆಲೆ ನಿಲ್ಲುವ ನೆಲ, ಭದ್ರವಾಗಿ ಬೇರೂರುವ ಊರು, ವ್ಯವಸಾಯಕ್ಕೆ ಸಂಬಂಧಿಸಿದ ಗದ್ದೆ, ತೋಟ, ಹೊಲ, ಜಲಾಶಯಕ್ಕೆ ಸಂಬಂಧಿಸಿದ ಕೆರೆ, ಕಟ್ಟೆ, ಕಾಲುವೆ, ಕಣಿವೆ, ಸಮುದ್ರ, ಸರೋವರ, ಆಸರೆಗಾಗಿ ನಿರ್ಮಿಸಿಕೊಂಡ ಮನೆ, ಹಳ್ಳಿ, ಊರು, ಗ್ರಾಮ, ಪುರ, ಪತ್ತನ, ದ್ರೋಣಾಮುಖ ಮುಂತಾದವುಗಳು ಮಾನವನ ಜೀವನ ವಿಕಾಸದ ಚಾರಿತ್ರಿಕ ಹಂತಗಳನ್ನು ಹಾದುಹೋದ ಕುರುಹುಗಳು. ಮಾನವ ವಿಕಾಸವಾದಂತೆಲ್ಲ ಹಳ್ಳಿಗಳಿಂದ ನಗರದೆಡೆಗೆ ಸಾಗಿದ. ಮಾನವ ಆಧುನಿಕನಾದಂತೆ, ನಾಗರೀಕತೆಯೂ ಬೆಳೆದಂತೆಲ್ಲ ನಾಮಗಳೂ ಆಧುನೀಕರಣ ಪ್ರಕ್ರಿಯೆಗೆ ಒಳಗಾದವು. ಪ್ಯಾಷನ್ [ಆಧುನಿಕತೆಯ ಅನುಕರಣೆ] ನಾಮಗಳ ಮೇಲೂ ಪ್ರಭಾವ ಬೀರುತ್ತದೆ. ನಿಶಾ, ತಮಸನಂತಹ ಅಸಮಂಜಸ ನಾಮಗಳು ಆಧುನಿಕತೆಗೆ ಉದಾಹರಣೆಗಳಾಗಿವೆ.

ಈ ಭೂಮಿಯ ಮೇಲೆ ಮನುಕುಲದ ಸೃಷ್ಟಿಯಾದ ಮೇಲೆ ಆತನ ಜೀವನಕ್ಕೆ ಒಂದು ನಿಶ್ಚಿತ ನೆಲೆ ಕಂಡುಕೊಳ್ಳಬೇಕಾಯಿತು. ಆ ನೆಲೆಯೇ ಕಾಡು, ಮೇಡು, ಹಳ್ಳ, ಹೊಳೆ, ನದಿ ತಟಗಳಾದವು. ಕೃಷಿನಿರತನಾದ ಮಾನವ ಅನಂತರದಲ್ಲಿ ಅನಾಗರೀಕತೆಯ ಜೀವನದಿಂದ ನಾಗರಿಕತೆಯ ಹೊಸ್ತಿಲಲ್ಲಿ ಸಾಗತೊಡಗಿದ ತನ್ನ ಜೀವನವನ್ನು ವ್ಯವಸ್ಥಿತವಾಗಿ ನಡೆಸಲು ವಿವಿಧ ವೃತ್ತಿಯನ್ನು ಕೈಗೊಂಡನು. ಕೃಷಿಯಿಂದ ಬೇರೆ ಬೇರೆ ಉದ್ಯೋಗಗಳನ್ನು ಕಲಿತ ಮಾನವ ಅದಕ್ಕೂ ಹೆಸರಿಡುತ್ತ ಬಂದ. ಕಬ್ಬಿಣದ ಕೆಲಸದವ ಕಮ್ಮಾರನಾದರೆ, ಕುಂಬದ ಕೆಲಸದವನು ಕುಂಬಾರನಾದ; ಕಟ್ಟಿಗೆ ಕೆಲಸದವನು ಬಡಗಿಯಾದ. ಗಾಣಿಗ, ಪರಿವಾರ, ಪೂಜಾರಿ, ಈಡಿಗ, ಮಡಿವಾಳ, ಸೋನಗಾರ, ಹಾವಾಡಿಗ, ಕಂಚುಗಾರ, ಬಿಲ್ವಗಾರ ಮುಂತಾದವರಿಗೆ ಅವರವರ ವೃತ್ತಿಗಳನ್ನಾಧರಿಸಿಯೇ ಊರ ಹೆಸರುಗಳು, ಕೇರಿ ಹೆಸರುಗಳು ಕಂಡುಬರುತ್ತವೆ. ಹೀಗೆ ಪ್ರಾಮುಖ್ಯತೆ ಪಡೆದುಕೊಂಡ ವಿವಿಧ ವೃತ್ತಿಯ ಜನರು ನೆಲಸುವ ಸ್ಥಳಗಳೇ ಅರ್ಚಕರಹಳ್ಳಿ, ಗಾಣಿಗನೂರು, ಚಿನಿವಾರಕೇರಿ, ಕಮ್ಮಾರಕೊಪ್ಪಲು, ಕುಂಬಾರಹಳ್ಳಿ, ಬಡಗಿಕೊಪ್ಪಲು, ಗಾಣಿಗನೂರು, ಪರಿವಾರದಹಳ್ಳಿ, ಪೂಜಾರಿಮನೆ, ಈಡಿಗನೂರು, ಮಡಿವಾಳ, ಸೋನಗಾರನಹಳ್ಳಿ, ಹಾವಾಡಿಗನೂರು, ಕಂಚಿಗನೂರು ಎಂದು ಹೆಸರು ಪಡೆದುಕೊಂಡು, ಆ ವೃತ್ತಿಯ ಜನರು ಸತ್ತನಂತರವೂ ಹಾಗೇ ಉಳಿದುಕೊಂಡು ಬಂದವು. ಇಂಥ ಅನೇಕ ವಿಸ್ಮಯಗಳು ಸ್ಥಳನಾಮಗಳಲ್ಲಿ ಕಂಡುಬರುತ್ತವೆ.

"ವೇದಕಾಲದ ಸುಮಾರಿಗೆ ಜಗತ್ತಿನ ಬಹುಪಾಲು ಜನರು ಕೃಷಿಕರಾಗಿದ್ದರೂ ಅವರ ವಾಸಸ್ಥಳ ಕಾಡೇ ಆಗಿದ್ದಿತು. ಆಗಿನ್ನೂ ಜನವಸತಿಯ ಪ್ರದೇಶಗಳು ಕಂಡುಬಂದಿರಲಿಲ್ಲವೆಂದೇ ಹೇಳಬಹುದು. ಏಕೆಂದರೆ ಬದುಕು ಸಾಗಿಸುವುದೇ ಅವರ ಪ್ರಮುಖ ಉದ್ದೇಶವಲ್ಲದೇ ಆಹಾರನ್ವೇಷಣೆ ಮೂಲಭೂತ ಪ್ರವೃತ್ತಿಯಾಗಿತ್ತು. ನದಿಯ ಸಮೀಪದಲ್ಲಿ ನೆಲೆನಿಂತು ಮೀನು ಹಿಡಿದು ಜನರು ವಾಸಿಸುವ ನದಿತಟಗಳು 'ಬೆಸ್ತರ' ಕೇರಿಯಾದವು. ಅಂಥ ಜನರು ಹೊಳೆ, ಸಮುದ್ರ, ಸಾಗರಗಳ ಆಜು ಬಾಜಿನಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸತೊಡಗಿದರು. ಸ್ಥಳನಾಮಗಳ ಉಗಮದಲ್ಲಿ ವ್ಯಕ್ತಿನಾಮಗಳಷ್ಟೆ ಪ್ರಭಾವ ಬೀರುತ್ತವೆ. ರಾಮಾಯಣ, ಮಹಾಭಾರತದಲ್ಲಿ ಬರುವ ರಾಮ, ಸೀತೆ, ಲಕ್ಷ್ಮಣ, ಕುಂತಿ, ಭೀಮ, ಅರ್ಜುನ, ಧರ್ಮರಾಯ, ಶಕುನಿ ಇತ್ಯಾದಿ ವ್ಯಕ್ತಿಗಳ ಹೆಸರು ಪ್ರಚಾರದಲ್ಲಿವೆ. ಹನುಮಂತನ ಹೆಸರು ಕೂಡಾ ಕಂಡು ಬರುತ್ತವೆ."[3]

ವ್ಯಕ್ತಿನಾಮ, ನೈಸರ್ಗಿಕ ಸ್ಥಳನಾಮ, ಪರಿಸರದ ಸ್ಥಳನಾಮ, ಐತಿಹಾಸಿಕ ಸ್ಥಳನಾಮ, ಪುರಾಣ ಸ್ಥಳನಾಮಗಳು ಪ್ರಚಾರಕ್ಕೆ ಬಂದಿವೆ. ಸಾಹಿತಿಗಳು, ಇತಿಹಾಸಕಾರರು, ರಾಜಕಾರಣಿಯರ ಹೆಸರುಗಳೂ ಕೂಡಾ ಸ್ಥಳನಾಮಗಳ ಉಗಮಕ್ಕೆ ಕಾರಣವಾಗುತ್ತವೆ. ಉದಾ : ಕುವೆಂಪುನಗರ, ಚಾಮರಾಜನಗರ, ಇಂದಿರಾನಗರ, ಪಂಪಾಕ್ಷೇತ್ರ, ಕೃಷ್ಣರಾಜಸಾಗರ, ಅಂಬೇಡ್ಕರ್ ನಗರ ಇತ್ಯಾದಿ.

ಕೃಷಿ ಸಂಸ್ಕೃತಿ ವಿಕಾಸವಾದಂತೆಲ್ಲ ಅವರ ಮೂಲಭೂತ ಭಾವನೆಗಳಲ್ಲಿ ವ್ಯತ್ಯಾಸ ತಲೆದೋರಿ ಅವರ ಜೀವನ ವಿಧಾನವೂ ಪರಿವರ್ತನೆಗೊಳ್ಳುತ್ತಾ ಬಂದಿದೆ. ಪ್ರತ್ಯೇಕತೆ 'ನಾಮ'ಗಳ ಅವಶ್ಯಕತೆಯನ್ನು ಪ್ರಸ್ತಾಪಿಸಿತು. ಹೀಗೆ ಸ್ಥಳನಾಮಗಳು ಹುಟ್ಟಿ ಬೆಳೆಯ ತೊಡಗಿದವು. ಹೊಸತೊಂದು ಸೃಷ್ಟಿಯಾದೊಡನೆ 'ನಾಮ' ಅದನ್ನು ಹಿಂಬಾಲಿಸುತ್ತದೆ. ದೂರದ್ದನ್ನು ತೋರಿಸುವುದು ದೂರದರ್ಶನವಾದರೆ, ಬಾನಿನಿಂದ ಬರುವ ಧ್ವನಿ ಬಾನುಲಿಯಾಗುತ್ತದೆ. ಗಣಿಸುವಯಂತ್ರ ಗಣಕಯಂತ್ರವಾಗುತ್ತದೆ. ಕೃಷಿಗೆ ಸಂಬಂಧಿಸಿದ್ದು ಹಸಿರು ಕ್ರಾಂತಿಯಾದರೆ, ಹಾಲಿಗೆ ಸಂಬಂಧಿಸಿದ್ದು ಬಿಳಿ ಕ್ರಾಂತಿಯಾಗುತ್ತದೆ, ಕ್ಷೀರಕ್ರಾಂತಿಯಾಗುತ್ತದೆ. ಕೃಷಿ ಕೇಂದ್ರಿತ ಸಂಘಗಳು ಹಸಿರು ಸೇನೆಯಾಗುತ್ತವೆ. ಕರು+ನಾಡುಗಳಿಂದ ಕನ್ನಡ, ಕನ್ನಡನಾಡು ನಿಷ್ಪನ್ನಗೊಂಡಿದೆ. ಕರು ಎಂದರೆ ಕಪ್ಪು, ಸುವಾಸನೆ ಎಂಬೆರಡು ಅರ್ಥ ಇವೆ. ಫಲವತ್ತಾದ ಭೂಮಿ, ಗಂಧದಗುಡಿ ಎಂಬರ್ಥಗಳು ಭೌಗೋಳಿಕ ಮತ್ತು ನೈಸರ್ಗಿಕ ಶ್ರೀಮಂತಿಕೆಯ ಪ್ರತಿನಿಧಿಗಳಾಗಿವೆ.

"ವ್ಯಕ್ತಿನಾಮಗಳಲ್ಲದೆ ಕುಲನಾಮ, ಜಾತಿನಾಮ, ಸಂಸ್ಥೆ, ಮಠಮಾನ್ಯಗಳ ಹೆಸರು, ನದಿ, ನಾಲೆ, ಕೆರೆಗಳ ಹೆಸರು, ಲಾಂಛನ ನಾಮಗಳು **'ಅಭಿದಾನ ವಿಜ್ಞಾನ'** ಎಂಬ ಹೆಸರಿನಿಂದ ಪ್ರಚಾರಗೊಳ್ಳುತ್ತಿವೆ. ಕಾಲಗಣನೆಯ ದೃಷ್ಟಿಯಿಂದ ವ್ಯಕ್ತಿನಾಮಗಳಿಗಿಂತ ಸ್ಥಳನಾಮಗಳು ಈಚಿನವೆಂದೇ ಹೇಳಬೇಕಾಗುತ್ತದೆ. ಆದಿ ಮಾನವ ವನ್ಯಜೀವಿಯಂತೆ ಉದರ ಪೋಷಣೆ, ದೇಹ ರಕ್ಷಣೆಗೆಲ್ಲಾ ನಿಸರ್ಗವನ್ನು ಅವಲಂಬಿಸಿದ್ದನು. ಅವನ ಜೀವನ ವ್ಯಾಪಾರ ಏಕಕ್ಷೇತ್ರಕ್ಕೆ ಸೀಮಿತವಾಗಿರಲಿಲ್ಲ. ಹಳ್ಳಕೊಳ್ಳಗಳು ಒಣಗಿದಂತೆಲ್ಲ, ಹಣ್ಣುಹಂಪಲು ಬೇಗ ಕ್ಷಯಿಸಿದಂತೆಲ್ಲ, ಬೇಟೆಯ ಮಿಕಗಳು ಮುಗಿದಂತೆಲ್ಲ, ಅವರು ಬೇರೆ ಬೇರೆ ಕಡೆಗೆ ಹೋಗುತ್ತಿದ್ದರು. ಇದು ನಮ್ಮ ನಾಡು, ಅದು ನಮ್ಮ ನಾಡೆಂಬುದಾಗಿ ಆ ಅಲೆಮಾರಿಗಳು ಎಳೆಕಟ್ಟಿಕೊಂಡಿರಲಿಲ್ಲ. ಜಗತ್ತು ಭಗವಂತನದು ಅದರ ಅನುಭೋಗ ಅವನ ಮಕ್ಕಳಿಗೆಲ್ಲ ಸಲ್ಲತಕ್ಕದೆಂಬ ಭಾವನೆ ಅವರಲ್ಲಿ ರಕ್ತಗತವಾಗಿತ್ತು. ಆದ್ದರಿಂದ ಆ ಅಲೆಮಾರಿಗಳಿಗೆ ಮನೆ ಮಠ ಮಾರುಗಳಿರಲಿಲ್ಲ. ಕೃಷಿ ಸಂಸ್ಕೃತಿ ವಿಕಾಸವಾದಂತೆಲ್ಲ ಅವರ ಮೂಲಭೂತ ಭಾವನೆಗಳಲ್ಲಿ ವ್ಯತ್ಯಾಸ ತಲೆದೋರಿ, ಅವರ ಜೀವನ

ವಿಧಾನವೂ ಪರಿವರ್ತನೆಗೊಳ್ಳುತ್ತಿತ್ತು. ಕಣಿವೆಗಳಲ್ಲಿಯೋ, ನದಿತಟಗಳಲ್ಲಿಯೋ, ಕೆರೆತಟಾಕಗಳ ಬಳಿಯೋ ನೆಲೆ ನಿಲ್ಲಲು ಅವರು ಮಾಡುತ್ತಿದ್ದ ಹವಣೆ ಆ ಪ್ರಮುಖ ವ್ಯತ್ಯಾಸಗಳಲ್ಲೊಂದಾಗಿತ್ತು. ಆದರೂ ಕೃಷಿ ಪ್ರಾರಂಭದ ಸಮಯದಲ್ಲಿ ಅಲೆಮಾರಿ ಜೀವನದ ಪ್ರಭಾವದಿಂದಾಗಿ ಅವನು ಒಂದು ಕಡೆ ಸೀಮಿತವಾಗಿ ನಿಲ್ಲುತ್ತಿರಲಿಲ್ಲ. ಈಗಿನ ಹಕ್ಕಿ ಪಿಕ್ಕಿಯವರಂತೆಯೋ, ಕುರಿಗಾಹಿಗಳಂತೆಯೋ, ನಾಲ್ಕಾರು ದಿನ ಒಂದೆಡೆಯಲ್ಲಿದ್ದು ಮಡಿಕೆ ಕುಡಿಕೆ ತಟ್ಟೆಮುಟ್ಟೆಗಳನ್ನು ಹೊತ್ತುಕೊಂಡು ದನ, ಕುರಿ, ನಾಯಿಗಳನ್ನು ಹಿಡಿದುಕೊಂಡು ಮುಂದೆ ಮುಂದೆ ಸಾಗುತ್ತಿದ್ದರು".[4]

ಹಟ್ಟಿಗಳಿಂದ ಹಳ್ಳಿಗಳು, ಹಳ್ಳಿಗಳಿಂದ ನಗರಗಳು ಬೆಳೆದಂತೆ ಸ್ಥಳನಾಮಗಳು ಬೆಳೆಯುತ್ತ ಬಂದವು. "ಹಟ್ಟಿಗಳೇ ಆರಂಭಕಾಲದ ವಸತಿಗಳು. ಇವು ಪಟ್ಟಿ ಪಡುಧಾತುವಿನಿಂದ ಬಂದದ್ದು. ಪಟ್ಟಿ–ಹಟ್ಟಿಯಾದರೆ, ಪಾಡಿ–ಹಾಡಿಯಾಯಿತು, ಪಳ್ಳಿ–ಹಳ್ಳಿ ಪಾಳಿ, ಪಾಳ್ಯಗಳಾಗಿಯೂ ಹೆಸರಾಯಿತು. ಪಟ್ಟಿಗೆ ಕಿಟಲ್ ಕೋಶದಲ್ಲಿ ಈ ಅರ್ಥಗಳಿವೆ. A place of laying down; a pen or fold, an abode, a hamlet. ತಮಿಳಿನಲ್ಲಿ ಹೀಗಿದೆ. 1. Cow stall; sheep fold, 2. A measure of land as sufficient for a sheep fold, 3. Hamlet, village ಹಾಗೆಯೇ ಪಟ್ಟಿ ಹಟ್ಟಿಯೆಂದರೆ ಮನೆ, ಹಳ್ಳಿ ಎಂಬ ಅರ್ಥವುಂಟೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ."[5] ಅಲ್ಲದೆ ಪಟ್ಟಿ–ಹಟ್ಟಿ ರೂಪಗಳ ವ್ಯತ್ಯಾಸವನ್ನು ಹೀಗೆ ಹೇಳಿದ್ದಾರೆ :

"ಪಾಡು, ಪಾಡಿ, ಪಟ್ಟಿ, ಪಟ್ಟು, ಪಟ್ಟಣ, ಪಾಟಣ, ಪಾಟಣಾ

ಪಟ್ಟಿ, ಪಾಟಕ, ಪಟ್ಟಾರ (ಪೇಠಾ)

ಪಾಡು, ಪಾಡಾ, ಪಾರಾ, ಹಾರಾ, ಹಾರ, ಹರ, ಆರ

ಪಾಡು–ಆಡು; ಪಾಡಿ–ಆಡಿ

ಪಾಡು, ಬಾಡು, ಬಾಡ, ಬಾಳು, ಬಾಳ

ಪಾಡು, ವಾಡು, ವಾಡ, ವಾಡಾ, ವಾಡೆ, ವಡ, ವಡಿಗೆ

ವಾಡ, ವಾಳ, ವಳ, ವಲ

ಪಟ್ಟಿ, ಪಾಟ, ಪಡಿ, ನಾಟ, ನಾಟಕ, ವಾಟಿ, ವಾಟಿಕಾ, ವಠ್ಠಾರ, ವಠಾರ

ಪಟ್ಟಿ, ಪಾಟಿ, ಪ್ಯಾಟಿ, ಪಾಟ, ಹಾಟ, ಪಾಟಕ, ಹಾಟಕ

ಪಾಡಿ, ಹಾಡಿ, ಪಾಡು, ಹಾಡು, ಹಾಡ

ಪಾಡು, ಪಾಳು, ಹಾಳು, ಹಾಳು..... ಆಳ..... ಆಲ

ಪಟ್ಟಿ, ಪಾಡಿ–ಪಳ್ಳಿ, ಪಾಳಿ (ಮರ್ಹಾಟಿ.... ಪಾಳ್ಯ)

ಪಟ್ಟಿ, ಪಾಡಿ, ಪಳ್ಳಿ, ಹಳ್ಳಿ, ಪಲ್ಲಿ, ಪಲ್ಯ

ಪಳ್ಳಿ, ವಳ್ಳಿ..... ಓಳಿ..... ಳಿ..... ಲಿ

ಪಟ್ಟಿಪಾಡಿ ಎಂಬುದರಲ್ಲಿ ಅಡಕವಾಗಿರುವ ಮಾನವನ ಪ್ರಾಥಮಿಕ ಸ್ಥಿತಿ ದರ್ಶಕವಾದ ಅರ್ಥವು ಗ್ರಾಮವಾಚಕಗಳಾದ ಬೇರೆ ಇನ್ಯಾವ ಪದಗಳಲ್ಲಿಯೂ ಇಲ್ಲ. ಪಟ್ಟಿ, ಪಾಡಿ ಎಂದರೆ ಪಟ್ಟಿರುವ ಎಡೆ, ಪಡು ಎಂದರೆ ಅನುಭವಿಸು. ಇರು, ಜೀವನದ ಸಿಹಿಕಹಿಗಳನ್ನು ಅನುಭವಿಸುವ ಇರುವ ಇಕ್ಕೆ ನಿವಾಸವೇ ಪಟ್ಟಿ, ಪಾಡಿ. ಪಾಡು ಎಂದರೆ ಜೀವನ, ಬದುಕು, ಪಾಡು, ಬಾಡು, ಬಾಳು ಎಲ್ಲವೂ ಮೂಲದಲ್ಲಿ ಒಂದೆ."[6]

ಹೀಗೆ ಊರು ಕೇರಿಗಳು, ಹಳ್ಳಿ ಪಳ್ಳಿಗಳು ವಸತಿ ಸೂಚಕಗಳಾದ ಮೇಲೆ ಗ್ರಾಮಕ್ಕೊಬ್ಬ ಪ್ರಮುಖ ವ್ಯಕ್ತಿಯಿರುತ್ತಿದ್ದನು. ಬುಡಕಟ್ಟು ಹಳ್ಳಿಗಳಾದಂತೆ, ಅವರ ಒಡೆಯರಾಗಿ ಬೆಳೆದವರನ್ನು ಗ್ರಾಮವೃದ್ಧ, ಗಾಮುಂಡ, ಗಾವುಂಡ, ಗೌಡ, ಗೌಳ ಮುಂತಾಗಿ ಕರೆಯ ತೊಡಗಿದರು. ಗ್ರಾಮದ ಮುಖಂಡ ಗೌಡ. ಅದು ಹುದ್ದೆ ವಾಚಿಯಾಗಿತ್ತು. ಇರು ಅನುಭವಿಸು ಅರ್ಥಗಳ ಪಡು ಪಾಡು ಆಗಿ, ಪಳ್ಳಿ ಆಗಿ, ಹಳ್ಳಿ ಆಗಿ, ಇರುವಿಕೆ ಅನುಭವಗಳ ಸೂಚಕವಾದರೆ; ಕೃಷಿ ಸೂಚಕವಾಗಿ ಕುಡಿ ಕುಡು ನಾಮಗಳು ನಿಷ್ಪನ್ನಗೊಂಡವು. ಕುಡಿಯರ ಕೂಸು, ಕುಡಿಯರ ಕೇರಿ ಮುಂತಾದ ನಾಮಗಳಿವೆ. ಹೀಗೆ ಸ್ಥಳನಾಮಗಳು ಬೆಳೆಯತೊಡಗಿದವು. 'ಕುಳ'ದ ಮೂಲ ಕುಡುವ, ಒಕ್ಕಲಿಗ, ಅವನ ಸಾಧನವೇ ಕುಳವಾಯಿತು. ಮುಂದೆ 'ಉಳ್ಳವ' ಎಂಬ ಅರ್ಥವನ್ನು 'ಕುಳ' ಪಡೆಯಿತು. ಕುಡಿ ಗುಡಿಯಾಗಿ ಗುಡಿಸಲು ಆದದ್ದೂ ಉಂಟು. ಮುಂದೆ ಪೊಲ (ಹೊಲ)ಗಳು, ಅವು ಬೆಳೆದಂತೆ ಪೋಲಿಲ್ (ಪಟ್ಟಣ)ಗಳು ಬಳಕೆಗೆ ಬಂದವು. ಹೊಲ, ಪೊಳಲು ಎಂದರೆ ತಮಿಳಿನಲ್ಲಿ ತೋಟವೆಂದರ್ಥ. ಕೆರೆಕಟ್ಟೆ, ಕುಂಟೆ, ಗುಂಟೆ, ಕೊಳ, ಹೊಳೆ, ಹಳ್ಳ, ಕೆರೆ, ತೊರೆ, ಝರಿ, ಬಾವಿ, ಹೊಂಡ ಮೊದಲಾದವು ಒಕ್ಕಲುತನಕ್ಕೆ ಅನುಕೂಲವಾದ ಜಲಾಶಯಗಳ ಗುಂಟ ಊರುಗಳು ಬೆಳೆದು ಬಂದ ಬಗ್ಗೆ ಹೇಳುತ್ತವೆ. ಕುಡುವರು ಏಳ್ಗೆಯಾದಂತೆ ನಾಡಿನಲ್ಲಿ ಧಾನ್ಯಾದಿಗಳು ಸಮೃದ್ಧಿಯಾಗಿ, ವ್ಯಾಪಾರ ಹಂತ ತಲುಪಿದಾಗ ಸ್ವಾಭಾವಿಕವಾಗಿ ಪಟ್ಟಿಯೇ ಪೇಟೆಯಾಯಿತು.

ಹಟ್ಟಿಗಳು ಅಲೆಮಾರಿತನಕ್ಕೆ ಅಂತ್ಯ ಹಾಡಿದವು. ಸಂಘ, ಸಮಾಜಗಳ ಪರಿಕಲ್ಪನೆ ಬೆಳೆಯಿತು. ಹೀಗೆ ಮನುಷ್ಯನ ವಿಕಾಸದೊಂದಿಗೆ ನಾಮಗಳೂ, ಭಾಷೆಯೂ ವಿಕಾಸಗೊಳ್ಳುತ್ತ ಸಾಗಿದವು.

ನೈಸರ್ಗಿಕ ವೈಶಿಷ್ಟ್ಯಗಳು, ಐತಿಹ್ಯಗಳನ್ನು ಆಧರಿಸಿ ಸ್ಥಳನಾಮಗಳು ರೂಪಗೊಂಡದ್ದು ಉಂಟು. ಪೌರಾಣಿಕ ವ್ಯಕ್ತಿಗಳ ಹೆಸರುಗಳೂ ಸ್ಥಳನಾಮಗಳಲ್ಲಿ ಬಳಕೆಯಾಗಿವೆ. ರಾಮಪುರ, ಹನುಮನಹಳ್ಳಿ, ಶಿವಪುರ, ಮಹಿಷಪುರ–ಮಹೀಸೂರು–ಮೈಸೂರು ಹೀಗೆ ಮುಂತಾದ ಉದಾಹರಣೆಗಳಿವೆ. ಚಾಮರಾಜನಗರದಂಥ ಸ್ಥಳವು ಆಳಿದ ಅರಸರ ಸ್ಮರಣೆಗಳಾಗುತ್ತವೆ. ಸ್ಥಳನಾಮಗಳ ಸುತ್ತ ಸಂಸ್ಕೃತಿ, ಇತಿಹಾಸ, ರಾಜಕೀಯ, ಪುರಾಣ, ನಿಸರ್ಗ ಎಲ್ಲವೂ ಆವರಿಸಿವೆ. ಒಂದಿಲ್ಲೊಂದು ಕಾರಣದಿಂದ ಸ್ಥಳನಾಮಗಳು ಅನ್ವರ್ಥಕಗಳಾಗುತ್ತವೆ. ಉತ್ತರ ಕರ್ನಾಟಕದಲ್ಲಿ ಜಾತಿ, ವೃತ್ತಿನಿಷ್ಠವಾಗಿ ಕೇರಿಗಳು ಗುರುತಿಸಲ್ಪಡುತ್ತವೆ. ಉದಾ : ಹಾರೋಗೇರಿ (ಹಾರುವರು, ಬ್ರಾಹ್ಮಣ ಕೇರಿ) ಕುಂಬಾರರ ಬಾಣಿ, ಕಮ್ಮಾರರ ಬಾಣಿ, ಚಿನಿವಾರ ಬಾಣಿ ಮುಂತಾದವು. ಬೇಡರ ಕಾಲದ ಕುಂಟೆ ಎಂಬ ಊರು ಒಂದೇ ಜಾತಿಯವರು ಒಂದೂರಲ್ಲಿದ್ದದನ್ನು ಸೂಚಿಸುತ್ತದೆ ಅಥವಾ ಅವರೇ ಬಹುಸಂಖ್ಯಾತರಾಗಿರುವ ಸಾಧ್ಯತೆಯನ್ನು ಸೂಚಿಸುತ್ತದೆ.

ಸ್ಥಳನಾಮಗಳು ಹಲವು ಕಾರಣಗಳಿಂದ ನಿಷ್ಪನ್ನಗೊಂಡು ವೈವಿಧ್ಯಮಯ ಅರ್ಥಗಳನ್ನು ಪಡೆದುಕೊಂಡು ಬೆಳೆದು ಬಂದ ಬಗೆ ರೋಚಕವಾಗಿದೆ. ಬೆಂದಕಾಳೂರು ಬೆಂಗಳೂರು ಆದರೆ ಕ್ಲೋಸಪೇಟೆ ರಾಮನಗರವಾಗುತ್ತದೆ. ಇಂಥ ಬದಲಾವಣೆಗಳು ಕುತೂಹಲಕರವಾಗಿವೆ.

ಪೌರಾಣಿಕ ಪ್ರಸಿದ್ದ ಗ್ರಾಮ, ನಗರಗಳ ಸ್ಥಳನಾಮಗಳ ಚರಿತ್ರೆ ಕುತೂಹಲಕರವಾಗಿರುತ್ತದೆ. ಸಂಸ್ಕೃತದಲ್ಲಿ ಅದೇ ಹೆಸರು ಬಳಕೆಯಲ್ಲಿದ್ದು ಮಿಕ್ಕ ಭಾಷೆಗಳಲ್ಲಿ ಬದಲಾಗುವುದೂ ಉಂಟು. ಉದಾ : ಚನ್ನಪಟ್ಟಣಕ್ಕೆ ಪೌರಾಣಿಕವಾಗಿ ಜ್ಞಾನಮಂಟಪ ಎಂಬ ಹೆಸರು ಗ್ರಂಥಗಳಲ್ಲಿ ಉಲ್ಲೇಖವಾದರೆ, ಬಳಕೆಯಲ್ಲಿ ಚನ್ನಪಟ್ಟಣ ಎಂದಾಗಿದೆ. ಕಿಷ್ಕಿಂದ ಆನೆಗೊಂದಿಯಾಗಿದೆ; ಇಂದ್ರಪ್ರಸ್ಥ ದೆಹಲಿಯಾಗಿದೆ ಇಂಥ ಅನೇಕ ಉದಾಹರಣೆಗಳಿವೆ.

ಸ್ಥಳನಾಮದ ಉಗಮದ ಬಗ್ಗೆ ವಿದ್ವಾಂಸರ ಅಭಿಪ್ರಾಯ ಹೀಗಿದೆ. "ಶಿಷ್ಟ ಸಂಪ್ರದಾಯದ ಸಾಹಿತ್ಯ ವಿಜ್ಞಾನಗಳು ರೂಪಿಕ್ಕುವ ಮುನ್ನವೇ ಜನಪದರು ಹಟ್ಟಿಗಳನ್ನು ಕಟ್ಟಿಕೊಂಡು ಊರುಗಳಲ್ಲಿ ನೆಲಸಿ ಅಲೆಮಾರಿತನಕ್ಕೆ ವಿರಾಮ ಹಾಕಿರಬೇಕು. ಅಂದ ಮೇಲೆ ಸಾಮಾಜಿಕ ಕಲ್ಪನೆಗೆ ರಾಜಕೀಯ ಸಂಸ್ಥೆಗಳ ಉಗಮಕ್ಕೆ, ಇತಿಹಾಸದ ವಿಕಾಸಕ್ಕೆ ಮೇಲಾಗಿ ಸಂಸ್ಕೃತಿ ನಾಗರಿಕತೆಯ ಪ್ರಾದುರ್ಭಾವಕ್ಕೆ ಹಟ್ಟಿಪಾಡಿ ಊರುಗಳೇ ಮೂಲ ಅವುಗಳಲ್ಲಿ ಕೆಲವಾದರೂ ಪ್ರಾಕ್ಕಾಲಕ್ಕೆ ಸೇರಿದವರೆಂದು ಹೇಳಬೇಕಾಗುತ್ತದೆ. ಊರುಗಳ ಬೆಳವಣಿಗೆಯೊಡನೆ ಭಾಷೆಯೂ ವಿಕಾಸಗೊಳ್ಳುತ್ತಿತ್ತೆಂಬುದರಲ್ಲಿ ಸಂದೇಹವೇ ಇಲ್ಲ. ಜ್ಞಾನ ವಿಜ್ಞಾನ ವಿಚಾರಗಳ ಪ್ರಚಾರದೊಡನೆ ಅಂತೆಯೇ ಭಿನ್ನ ಭಿನ್ನ ಜನಾಂಗಗಳ ಸಂಪರ್ಕದೊಡನೆ ಸೌಕರ್ಯ ವಿಚಾರಗಳಿಗೆ ಪಕ್ಕಾಗಿ

ಕಸಿಗೊಂಡು ಸಮೃದ್ಧಿಯಾಗಿ ಬೆಳೆಯುತ್ತದೆ. ಕಾಲವಾಹಿನಿಯೊಡನೆ ಊರುಗಳ ಹೆಸರುಗಳು ಸಹ ರೂಪುಗೊಳ್ಳುತ್ತವೆ."[8]

ಸ್ಥಳನಾಮಗಳ ಉಗಮವು ಈ ಕೆಳಗಿನ ಕಾರಣಗಳಿಂದ ಆಗಿರಬಹುದು :

1) ಪುರಾಣ, ಐತಿಹ್ಯಾತ್ಮಕ ಕಾರಣಗಳು
2) ಪ್ರಾಕೃತಿಕ ಕಾರಣಗಳು
3) ಜನಾಂಗೀಯ ಕಾರಣಗಳು
4) ವ್ಯಕ್ತಿಗತವಾಗಿ ಬಂದ ಸ್ಥಳನಾಮಗಳು
5) ಕಸುಬಿನ ಕಾರಣಗಳು
6) ವ್ಯವಹಾರಿಕ ಕಾರಣಗಳು
7) ಜಾತಿ, ಕುಲ, ಧರ್ಮ ಇತ್ಯಾದಿ ಕಾರಣಗಳು
8) ಆಡಳಿತಾತ್ಮಕ ಕಾರಣಗಳು

ಹೀಗೆ ಸ್ಥಳನಾಮಗಳ ಉಗಮಕ್ಕೆ ಹಲವು ಕಾರಣಗಳಿವೆ. ಐತಿಹಾಸಿಕ ಘಟನೆಗಳ ಗುರುತು, ಸಾಂಸ್ಕೃತಿಕ ಕೊಡುಗೆ, ಜನಪದರ ಬದುಕಿನ ಸಾಧನೆ, ಸಿದ್ದಿ ಇವೆಲ್ಲವೂ ಸ್ಥಳನಾಮಗಳಿಗೆ ಕಾರಣವಾಗಿರುತ್ತವೆ. ಸ್ಥಳನಾಮಗಳ ಹುಟ್ಟು ಮತ್ತು ಪ್ರಸರಣ ವೈವಿಧ್ಯತೆಯಿಂದ ಕೂಡಿರುತ್ತದೆ. ಭೌಗೋಳಿಕ ಮತ್ತು ಪ್ರಾಕೃತಿಕ ಅಂಶಗಳೇ ಪ್ರಧಾನವಾಗಿ ಕಂಡುಬರುವ ಸ್ಥಳನಾಮಗಳು ವಾಸ್ತವ ಸತ್ಯದ ಪದರುಗಳನ್ನು ನೇರವಾಗಿ ಬಿಡಿಸಿ ಹೇಳುತ್ತವೆ. ಆದರೆ ಜಾನಪದೀಯ ಅಂಶಗಳಿಂದ ಉಗಮವಾದ ಸ್ಥಳನಾಮಗಳ ಸೃಷ್ಟಿ, ವ್ಯಷ್ಟಿ ಸಮಷ್ಟಿ ಸೃಷ್ಟಿಯಾಗಿರುತ್ತದೆ. ಅಲ್ಲದೆ ಜನರ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಕರ್ಣಾಕರ್ಣಿಯಾಗಿ ಹರಿದುಬಂದು ಒಂದು ನಿಶ್ಚಿತ ರೂಪ ಪಡೆದುಕೊಳ್ಳುತ್ತವೆ. ಅವುಗಳ ಹಿನ್ನೆಲೆಯೇ ಐತಿಹ್ಯ, ಪುರಾಣ ಮತ್ತು ಜನಪದ ನಿರುಕ್ತಗಳಾಗಿರುತ್ತವೆ. ಒಬ್ಬ ಪ್ರಸಿದ್ಧ ವ್ಯಕ್ತಿ, ದೇವತೆಗಳು, ಚಾರಿತ್ರಿಕ ಘಟನೆಗಳು, ಪ್ರಕೃತಿಯ ಭೌತಿಕ ಹರವು ಮತ್ತು ವಿಸ್ತಾರ ಪಂಡಿತರ ಬೌದ್ಧಿಕಮಟ್ಟ, ರಾಜಕಾರಣಿಗಳ ಉತ್ತಮ ಸೇವೆ, ಕಾರ್ಖಾನೆಗಳ ಬೆಳವಣಿಗೆ, ಆರ್ಥಿಕ ಅಭಿವೃದ್ಧಿ ಸಾಮಾಜಿಕ ಕ್ರಾಂತಿ ಮುಂತಾದ ಅಂಶಗಳಿಂದ ಸ್ಥಳನಾಮಗಳು ಜನ್ಮ ತಳೆಯುತ್ತವೆ.

ಸಾಹಿತ್ಯ, ಸಂಗೀತ, ಕಲೆ, ನೃತ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಖಗೋಳಶಾಸ್ತ್ರಜ್ಞರ ಹೆಸರಿನಲ್ಲಿ ಬೀದಿ, ವೃತ್ತ, ಚೌಕ, ಮೊಹಲ್ಲಗಳ ಹೆಸರುಗಳು ಅಂಕಿತವಾಗಿ ರೂಪ ಪಡೆಯುತ್ತವೆ. ಹೀಗೆ ಬದಲಾದ ಯುಗಧರ್ಮ, ಮನೋಧರ್ಮ, ರಾಜರ ಆಳ್ವಿಕೆ ಮುಂತಾದ ಕಾರಣಗಳು

ಸ್ಥಳನಾಮಗಳು ಬದಲಾಗಲು ಕಾರಣಗಳಾಗುತ್ತವೆ. ಒಟ್ಟಿನಲ್ಲಿ ಸ್ಥಳನಾಮಗಳ ಉಗಮ ಎಷ್ಟು ವಿಸ್ಮಯವೋ, ವಿಕಾಸದ ಹಂತದಲ್ಲಿ ಅವುಗಳಲ್ಲಾದ ಪರಿವರ್ತನೆಗಳು ಅಷ್ಟೇ ಸೋಜಿಗಮಯವಾಗಿವೆ.

ಒಟ್ಟಾರೆಯಾಗಿ ಚನ್ನಪಟ್ಟಣದ ಸ್ಥಳನಾಮಗಳು ಅಂದಿನಿಂದ ಇಂದಿನವರೆಗೆ ಐತಿಹಾಸಿಕವಾಗಿ, ಪ್ರಾಕೃತಿಕವಾಗಿ ನಿರ್ಮಾಣಗೊಂಡು, ಆಧುನಿಕತೆಯ ಪ್ರಭಾವದಿಂದ ಬದಲಾವಣೆ ಹೊಂದಿರುವುದನ್ನು ನೋಡಬಹುದಾಗಿದೆ. ಇಲ್ಲಿನ ಸ್ಥಳನಾಮದ ಐತಿಹ್ಯ ಮತ್ತು ಉಗಮವನ್ನು ಜನಪದ ಗೀತೆ, ಲಾವಣಿಗಳಲ್ಲಿ ಮೂಡಿ ಬಂದಿರುವ ಸ್ವಾರಸ್ಯಕರ ಕಥೆಗಳನ್ನು ಸ್ಥಳನಾಮಗಳ ಜನಪದ ಹಿನ್ನೆಲೆ ಎಂಬ ಅಧ್ಯಾಯದಲ್ಲಿ ಕೊಡಲಾಗಿದೆ.

1.1 ಸ್ಥಳನಾಮಗಳ ಅರ್ಥ ಮತ್ತು ಸ್ವರೂಪ

ಶಿಲಾಯುಗದ ಕಾಲದಲ್ಲಿ ಮಾನವನು ಗುಹೆಗಳಲ್ಲಿ ಮತ್ತು ಸೊಪ್ಪಿನ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ. ಆ ಕಾಲದ ಮಾನವನು ಬೇಟೆಯಾಡಿ ಮಾಂಸಾಹಾರ ಸೇವಿಸುತ್ತಿದ್ದನು. ಶಿಲಾಯುಗದ ಮಾನವನ ಆಯುಧಗಳು ಮೊನಚಾದ ಆಕಾರಗಳಿಂದ ಕೂಡಿದ್ದವು. ಮರದ ತುಂಡು ಅಥವಾ ಎಲುಬಿನ ತುಂಡುಗಳನ್ನು ಜೋಡಿಸಿ ಬಾಣ, ಕತ್ತಿ, ಕುಡುಗೋಲು ಮುಂತಾದ ಸಲಕರಣೆಗಳನ್ನು ತಯಾರು ಮಾಡಿಕೊಳ್ಳುತ್ತಿದ್ದನು.

ಸ್ಥಳನಾಮಗಳ ಅಧ್ಯಯನ ಕೈಗೊಂಡಾಗ ಪುರಾತನ ಮಾನವನು ಊರು–ಕೇರಿಗಳನ್ನು ಏರ್ಪಡಿಸಿಕೊಂಡ ಬಗೆ, ಸ್ಥಳನಾಮವನ್ನು ನಿರ್ದೇಶಿಸುವ ಕಾರಣ, ಪ್ರಯೋಜನ ಇವೆಲ್ಲ ಒಮ್ಮೆಲೆ ಮನದಟ್ಟಾಗುವುವು. ಮನುಷ್ಯ ಕಲ್ಲಿನ ಗುಹೆಗಳಲ್ಲಿ ವಾಸ ಮಾಡುವ ಕಾಲವೊಂದಿತ್ತು. ಕಾಲ ಕ್ರಮೇಣ ವ್ಯವಸಾಯ ಕಲಿತ ಮಾನವ ತನ್ನ ವಾಸಕ್ಕಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ವ್ಯವಸ್ಥಿತ ಜೀವನ ರೂಢಿಸಿಕೊಂಡ ಫಲವಾಗಿಯೇ ಊರು–ಕೇರಿಗಳು ನಿರ್ಮಾಣವಾದವು. ಹೀಗೆ ಊರು–ಕೇರಿಗಳು ನಿರ್ಮಾಣವಾದ ಮೇಲೆ ತನ್ನ ಆಹಾರಕ್ಕಾಗಿ ಶೋಧನೆ ನಡೆಸತೊಡಗಿದ ಮಾನವ ಗೆಡ್ಡೆ ಗೆಣಸು ತಿಂದು ಬದುಕತೊಡಗಿದ. ಮರದ ಪೊಟರೆ ಮತ್ತು ಕಲ್ಲಿನ ಗುಹೆಗಳೇ ಅವನ ನಿಜವಾದ ವಾಸಸ್ಥಾನಗಳಾದವು. ಹಾಗೆಯೇ ದಿನಗಳುರುಳಿದಂತೆ ಪ್ರಾಣಿ–ಪಶು–ಪಕ್ಷಿಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ತಿನ್ನತೊಡಗಿದ ಅವನು ಬೇಟೆಯಾಡುವಾಗ ಕಲ್ಲಿನ ಆಯುಧವೇ ಪ್ರಮುಖ ಸಾಧನವಾಗಿತ್ತು.

ಅಲೆಮಾರಿ ಮಾನವ ಕಲ್ಲಿನ ಗುಹೆಗಳಿಂದ ಹೊರ ಬಂದು ಕೃಷಿ ಕಲಿತು ಬೆಂಕಿಯನ್ನು ಸಂಶೋಧಿಸಿ ನಾಗರಿಕತೆಯೆಡೆಗೆ ಹೆಜ್ಜೆ ಹಾಕತೊಡಗಿದ್ದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಹರಪ್ಪ ಮೊಹೆಂಜೊದಾರೊ ಸಂಸ್ಕೃತಿ/ನಾಗರಿಕತೆ ಇಂಥ ಸಂಕ್ರಮಣ ಕಾಲದ (ಪರಿವರ್ತನಾಯುಗದ) ಪಳೆಯುಳಿಕೆಯಾಗಿದೆ. ಬದುಕು ಬೆಳೆದಂತೆ ಅವಶ್ಯಕತೆಗಳು ಹೆಚ್ಚಿದಂತೆ ಅನ್ವೇಷಣೆಗಳು ಸಾಗಿದಂತೆ ಫಲಗಳು ಸಿಗತೊಡಗಿದವು. ಬದುಕಿನ ವ್ಯಾಪ್ತಿ ವಿಸ್ತಾರಗೊಂಡಂತೆ ಪ್ರತ್ಯೇಕತೆ ವೈಶಿಷ್ಟ್ಯಗಳು ಅವತರಿಸುತ್ತಾ ಹೋದಂತೆ ನಾಮಕರಣಗಳು ಅನಿವಾರ್ಯವಾದವು. ಪ್ರಾಣಿಭಾಷೆಗಳನ್ನು ಅನುಕರಿಸುತ್ತಾ ಸಾಗಿ, ಮಿದುಳಿನ ಎಡಭಾಗದ ನರಕೋಶದ ನೆರವಿನಿಂದ ತನ್ನದೇ ಆದ ಭಾಷೆಯನ್ನು ಮನುಷ್ಯ ರೂಪಿಸಿಕೊಳ್ಳತೊಡಗಿದನು. ಹಾಗೆ ರಚನೆಯಾದ ಭಾಷೆ ಸ್ಥಳನಾಮಗಳ ಸೃಷ್ಟಿಗೆ ನೆರವಾಯಿತು. ಧ್ವನಿಗಳಿಂದ ಶಬ್ದ, ಅವುಗಳಿಂದ ಅರ್ಥಹೊಮ್ಮಿ ವಾಕ್ಯದ ಹಂತಕ್ಕೆ ಭಾಷೆ ಪರಿಪೂರ್ಣಗೊಂಡಾಗ ನಾಮ, ಸರ್ವನಾಮ ಮುಂತಾದವು ಅದರ ಘಟಕಗಳಾದವು ಹೀಗೆ ಸೂಚಿಸುವ ಎಲ್ಲವೂ ನಾಮಗಳೇ.

“ಮಾನವನು ಜೀವನೋಪಾಯಕೋಸ್ಕರ ದೇಶ ವಿದೇಶ ಪರ್ಯಟನೆ ತೊರೆದು ಬೆಂಕಿಯ ಬಳಕೆಯನ್ನು ಅರಿತುಕೊಂಡು ನೇಗಿಲಗೆರೆಯಲ್ಲಿ ಸಂಸ್ಕೃತಿಯ ಶಿಶುವನ್ನು ಭವಿಷ್ಯತ್ ಲೋಕದ ಸಿದ್ದಿಯನ್ನು ಕಂಡುಕೊಂಡಾಗ ಹಚ್ಚನೆಯ ಹಸಿರು ತಿಳಿನೀರ ಹೊನಲುಗಳನ್ನು ಕಂಡಾಗ ಹಳ್ಳಿಗಳು ಹುಟ್ಟಿಕೊಂಡವು. ಭರತಖಂಡದ ಉತ್ತರಭಾಗವನ್ನೆಲ್ಲ ಆಕ್ರಮಿಸಿಕೊಂಡು ಕಾಡು ಕಡಿದು ನೆಲೆಯಾಗಿ ನಿಂತು ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯನ್ನು ಬೆಳೆಸಿದರು. ಆಗಲೇ ಅವರ ಮುಂದಾಳು ರಾಜನಾಗಿದ್ದನು. ಆತನು ಸುಭದ್ರವಾದ ಮನೆಯಲ್ಲಿ ವಾಸಿಸುತ್ತಿದ್ದನು. ಜನರು ಕೊಪ್ಪಲು, ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಆದರೆ ನಗರಗಳಿರಲಿಲ್ಲ ಅವರಿಗೆ ವ್ಯವಸಾಯ ಚೆನ್ನಾಗಿ ಗೊತ್ತಿತ್ತು”[9] ಎಂದು ಕಾಲ್ಡ್‌ವೆಲ್ ಅಭಿಪ್ರಾಯಪಟ್ಟಿರುವುದಾಗಿ ದೇಜಗೌ ಹೇಳಿದ್ದಾರೆ.

ವ್ಯವಸಾಯ ಮಾಡುವ ಪದ್ಧತಿಯನ್ನು ಮಾನವ ಯಾವಾಗ ಮನಗಂಡನೋ ಅಂದೇ ಪ್ರಕೃತಿಗೆ ಅನುಗುಣವಾಗಿ ಬದುಕು ಸಾಗಿಸುವುದನ್ನು ಕಲಿತ. ಕೆರೆ, ಹಳ್ಳ, ಹೊಳೆ, ಬೆಟ್ಟ, ಗುಡ್ಡ ಮತ್ತು ಬಯಲು ಪ್ರದೇಶಗಳಲ್ಲಿ ನೆಲೆ ನಿಲ್ಲಲ್ಲು ಹವಣಿಸಿದ. “ಮಾನವ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು ಪ್ರಕೃತಿಯನ್ನು ಪಳಗಿಸಿ ತನ್ನ ಬದುಕಿಗೆ ಒಗ್ಗಿಕೊಳ್ಳುವುದು ಸಾಧ್ಯವೆಂದು ಯಾವಾಗ ತಿಳಿದನೋ ಆಗ ಊರು ಹಳ್ಳಿಗಳ ಉಗಮವಾಯಿತು. ನೆಲದೊಂದಿಗಿನ ಈ ಹೋರಾಟದ ಪ್ರಕ್ರಿಯೆಯಲ್ಲಿ ತಾನು ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತಾನು

ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿಟ್ಟ. ಆ ಸ್ಥಳವೇ ಅವನ ಬದುಕಿನಲ್ಲಿ ಹಾದು ಹೋದ ಕುರುಹಾಗಿ ಒಂದು ಹೆಸರು ಜನ್ಮತಳೆಯಿತು. ಕ್ರಮೇಣ ಅಲ್ಲಿ ಜನವಸತಿ ಇರಲಿ ಇಲ್ಲದಿರಲಿ ಒಂದು ಜನಾಂಗದ ಸಂಸ್ಕೃತಿಯನ್ನು ಹೊತ್ತ ಆ ಗುರುತುಪಟ್ಟಿ ಹಾಗೆಯೇ ಬಳಕೆಯಾಗುತ್ತಿತ್ತು. ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತವಾಗಿ ಬೆಳೆಯುವ ಸಂಸ್ಕೃತಿಯ ಒಂದು ಕೊಂಡಿ ಅನಿಸಿತು ಈ ಕೊಂಡಿಯೇ ಸ್ಥಳನಾಮ."[10]

ಸ್ಥಳನಾಮ ಪದದ ಅರ್ಥ:– ಇಂಗ್ಲೀಷ್ ಭಾಷೆಯಲ್ಲಿ ಸ್ಥಳನಾಮಶಾಸ್ತ್ರಕ್ಕೆ **'ಟೊಪಾನಮಿ'** (Toponomy) ಎಂಬ ಹೆಸರಿದೆ. ಇದು ಮೂಲತಃ ಗ್ರೀಕ್‌ನ Topos + Nomos ಎಂಬೆರಡು ಸಂಯುಕ್ತ ಪದಗಳಿಂದ ಬಂದದ್ದಾಗಿದೆ. ಅಲ್ಲದೆ ಇದನ್ನು Toponomy ಎಂದು ಇಂಗ್ಲೀಷ್ ಕನ್ನಡ ನಿಘಂಟಿನ ಪುಟ 1332ರಲ್ಲಿ ಉಲ್ಲೇಖಿಸಲಾಗಿದೆ. ಇದರ ಅರ್ಥ ಒಂದು ಪ್ರದೇಶದ ಸ್ಥಳಗಳ ಹೆಸರುಗಳು, ಸ್ಥಳನಾಮ, ಊರ ಹೆಸರುಗಳೆಂದಿದೆ.

"Topos + Nomos ಎಂಬುದು Toponomy ಆಗಿ, ಇದೀಗ Toponomy ಎಂಬ ರೂಪ ತಳೆಯಲು ಬಹುಶಃ ಸ್ವರಸಾಮರಸ್ಯ ಅಥವಾ ಸ್ವರಾಮರೂಪ್ಯ ನಿಯಮವು ಅನ್ವಯವಾಗಿರುವುದೇ ಕಾರಣವಿರಬೇಕೆಂದು, 'Topos' ಅಂದರೆ 'Place' ಸ್ಥಳವಾದರೆ, 'Nomos' ಅಂದರೆ 'a study of' ಎಂದು ಸ್ಥಳನಾಮ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ."[11]

ಗ್ರೀಕ್‌ನಲ್ಲಿ ಸ್ಥಳನಾಮ ಕುರಿತ ಅಧ್ಯಯನವನ್ನು Toponomy ಎನ್ನುತ್ತಾರೆ. ವ್ಯಕ್ತಿ–ವಸ್ತು–ಸ್ಥಳಗಳ ಹೆಸರು ನಾಮಪದಗಳಾದರೆ, ಅವನ್ನು ಪ್ರತಿನಿಧಿಸುವ ಪದಗಳು ಸರ್ವನಾಮಗಳಾದವು. Topos ಶಬ್ದ ಸ್ಥಳ ಎಂಬರ್ಥ ಕೊಟ್ಟರೆ, Nomos ಎಂಬುದು ಅಧ್ಯಯನ ಎಂಬರ್ಥ ಹೊಂದಿದೆ. ಒಟ್ಟಾರೆಯಾಗಿ Toponomy ಸ್ಥಳನಾಮಗಳ ಅಧ್ಯಯನವಾಗುತ್ತದೆ. ಒಂದು ಪ್ರದೇಶದ ಊರು, ಕೇರಿಗಳ, ವೃತ್ತ, ಚೌಕಗಳ ಹೆಸರುಗಳೆಲ್ಲವೂ ಇಲ್ಲಿ ಅಧ್ಯಯನಕ್ಕೆ ಒಳವಡುತ್ತವೆ. ಗಾಂಧೀಜಿ ಬಂದು ಹೋದ ಸ್ಮರಣೆಗೆ ಕಟ್ಟಿಸಿದ ಕಟ್ಟಡಕ್ಕೆ 'ಗಾಂಧಿಭವನ' ಎಂಬ ಹೆಸರು. ಭೀಮಸೇನ ಜೋಶಿ ರಂಗಮಂದಿರ, ಅನಿಲ್‌ಕುಂಬ್ಳೆ ರಸ್ತೆ, ಡಾ.ರಾಜ್‌ಕುಮಾರ್ ರಸ್ತೆ ಮುಂತಾದ ನಾಮಕರಣಗಳನ್ನು ಗಮನಿಸಬಹುದು. ಸಾಧನೆಗಳ, ಸ್ಮೃತಿಗಳ ದಾಖಲೆಗಳಾಗಿ ಕೂಡಾ ಸ್ಥಳನಾಮಗಳು ಕಂಡುಬರುತ್ತವೆ. ಅಭಿಮಾನಪೂರ್ವಕವಾಗಿ ಕಾಣುವ ಇಂಥ ಸ್ಥಳನಾಮಗಳು

ಹೆಮ್ಮೆಯ ಸಾಧಕರನ್ನು ಅಮರರಾಗಿಸುತ್ತವೆ. ಅನಿಲ್‌ಕುಂಬ್ಳೆ ಪಾಕಿಸ್ತಾನದ 10 ವಿಕೆಟ್‌ಗಳನ್ನು ಪಡೆದಾಗ ಬೆಂಗಳೂರಿನ ಒಂದು ವೃತ್ತಕ್ಕೆ ಅನಿಲ್‌ಕುಂಬ್ಳೆ ಎಂಬ ಹೆಸರನ್ನು ಇಡಲಾಯಿತು. ಇಂಥವುಗಳ ಅಧ್ಯಯನ ಕುತೂಹಲಕರವಾಗುತ್ತದೆ.

ಸ್ಥಳನಾಮಗಳಿಗೆ ಸಂಬಂಧಿಸಿದಂತೆ ವಿವಿಧ ನಿಘಂಟಿನಲ್ಲಿ ಅನೇಕ ರೀತಿಯ ಮಾಹಿತಿಗಳು ಲಭ್ಯವಾಗುತ್ತವೆ. ನ್ಯೂ ಎನ್ಸೈಕ್ಲೊಪೀಡಿಯಾ ಆಫ್ ಬ್ರಿಟಾನಿಯಾದಲ್ಲಿ Place Name ಬಗ್ಗೆ ಹೀಗೆ ಹೇಳಿದೆ. “Designation of a Geographical locality, as a town, river or mountain. The origins of such names are uaried some derived from description of physical features.”[12] ಎಂದು ಉಲ್ಲೇಖಿತವಾಗಿರುವುದಾಗಿ ವಿಶ್ವನಾಥ ಅವರು ದಾಖಲಿಸುತ್ತಾರೆ.

“ಸ್ಥಳನಾಮಗಳ ಭೌತಿಕ ಮತ್ತು ಭೌಗೋಳಿಕವಾಗಿ ಸ್ಥಳನಾಮಗಳನ್ನು ಅಭ್ಯಾಸಿಸುವ ವಿಧಾನಕ್ಕೆ ‘ಟಪೋಗ್ರಫಿ’ ಎಂದು ಅರ್ಥವಿದೆ. ಅಲ್ಲದೆ ‘ಟೊಪಾಗ್ರಫ್’ (Topograph) ಎಂದು ಕರೆಯುವುದುಂಟು. ಇದು ಸ್ಥಳ ವಾಸ್ತವ್ಯವನ್ನು ತಿಳಿಸುತ್ತದೆ. ಅಲ್ಲದೆ ಟೂಪ್+ಗ್ರಫಿ (Topp + Grafi) ಟಾಪೊಲಜಿ, ಟಾಪೊನಿಮಿ, ಒನಾಮಸ್ಟಿಕ್ ಎಂದು ಕರೆಯುವುದುಂಟು”[13] ಇಲ್ಲಿ ಅನೇಕ ವಿಸ್ಮಯಕರ ಅಂಶಗಳು ಕಂಡು ಬರುತ್ತವೆ. ಪಾಶ್ಚಾತ್ಯರ ಪ್ರಭಾವದಿಂದ ನಮ್ಮಲ್ಲಿ ಸ್ಥಳನಾಮಗಳ ಅಧ್ಯಯನ ಅತ್ಯಂತ ವ್ಯವಸ್ಥಿತವಾಗಿ ಇತ್ತೀಚಿನ ದಶಕಗಳಲ್ಲಿ ನಡೆದಿದೆ. ಆ ಮೂಲಕ ನಮ್ಮನ್ನು, ನಮ್ಮ ನಾಡಿನ ವೈಶಿಷ್ಟ್ಯವನ್ನು ಅರಿತು ಪ್ರಚಾರ ಪಡಿಸುವಂಥ ಸ್ತುತ್ಯರ್ಹ ಕೆಲಸಗಳು ಸಾಗುತ್ತಿರುವುದು ನೆಮ್ಮದಿಯ ಅಂಶವಾಗಿದೆ.

“ಮನುಷ್ಯ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು ಕೃಷಿ ಕೆಲಸಕ್ಕಾಗಿ ಒಂದೆಡೆ ನೆಲೆನಿಂತು ಮನೆಗಳನ್ನು ಕಟ್ಟಿಕೊಂಡನು. ಇಂಥ ಸಂದರ್ಭದಲ್ಲಿ ಮನೆಕಟ್ಟಿಕೊಳ್ಳಲು ಸ್ಥಳದ ಅಗತ್ಯತೆಯುಂಟಾಯಿತು. ವ್ಯವಸಾಯ ಪೂರ್ವಯುಗದ, ಶಿಲಾಯುಗದವು ಎನ್ನಬಹುದಾದ ಸ್ಥಳನಾಮಗಳು ದುರ್ಲಭವಾಗಿರವುದು ಹೀಗೆ ವಿಚಾರ ಮಾಡುವಂತೆ ಪ್ರೇರೇಪಿಸುತ್ತದೆ. ಎಲ್ಲಿ ಹೆಸರುಗಳು ಹುಟ್ಟಿರುವುದು ಮನುಷ್ಯನ ಅಗತ್ಯ ಪೂರೈಸುವುದಕ್ಕಾಗಿಯೇ ವಸ್ತುಗಳ ಅನನ್ಯತೆ ಮತ್ತು ಪ್ರಾಯೋಗಿಕ ಮಹತ್ವ ಅವುಗಳ ಹೆಸರುಗಳ ಮುಲಸೂತ್ರವಾಗಿದೆ.”[14]

“ಮಾನವನು ಪ್ರಾಥಮಿಕ ಸ್ಥಿತಿಯಲ್ಲಿ ಆಹಾರ ಸಂಚಯಕ್ಕಾಗಿ ಅಲೆಯಬೇಕಾಗಿತ್ತು. ಈ ಪ್ರಾಥಮಿಕ ಸ್ಥಿತಿಯಲ್ಲಿ ಎರಡು ಗುಂಪುಗಳಿದ್ದವು. ಒಂದನೆಯದು ದನಗಾರಿಕೆ, ಮತ್ತೊಂದು ಬೇಟೆಯಾಡಿ ಬದುಕುವುದು, ಹೀಗೆ ಬೇಟೆಯಾಡಿ ಬದುಕುವುದು ತೀರಾ ಆರಂಭಕಾಲದ ಸ್ಥಿತಿಯಾಗಿತ್ತು. ಮಾನವನಿಗೆ ತನ್ನ ಸುತ್ತಲಿನ ಪ್ರಾಣಿಗಳ ಪರಿಚಯ ಹೆಚ್ಚಾದಂತೆ ಅವುಗಳಲ್ಲಿ ಕೆಲವು ಉಪಯುಕ್ತವಾದವನ್ನು ಸಾಕಲು ಕಲಿತ. ಅಲ್ಲದೆ ತನ್ನ ಜೀವನ ಮತ್ತು ಪ್ರಾಣಿಗಳ ಆಹಾರಕ್ಕಾಗಿ ಗುಡ್ಡ, ನದಿ, ಹೊಳೆ, ಹಳ್ಳ ಮತ್ತು ಹುಲ್ಲುಗಾವಲುಗಳ ಕಡೆಗೆ ಹೋಗಿ ನೆಲಸಲು ನಿರ್ಧರಿಸಿದ. ಇಂಥ ಸಂದರ್ಭದಲ್ಲಿ ಆರಂಭದ ವಸತಿ ಸೂಚಕಗಳಾದ ಹಟ್ಟಿ, ಮನೆ, ಊರು, ಕೇರಿಗಳ ಉಗಮವಾಗಿರಬಹುದು. ಬೀಡು, ಬೀಡಿ, ಬೀಡ ಎಂಬ ಹೆಸರಿನ ಸ್ಥಳನಾಮಗಳು ಆರಂಭಕಾಲದ ವಸತಿ ಸೂಚಕ”[15] ಗಳೆಂದು ಶಂಬಾಜೋಶಿಯವರು ಅಭಿಪ್ರಾಯಪಡುತ್ತಾರೆ.

ಸ್ಥಳನಾಮಗಳ ಕುರುಹನ್ನು ತಿಳಿಯಲು ತಮ್ಮ ನೆಲೆಯ ಕೆರೆಕಟ್ಟೆ, ಬಾವಿ, ಗಿಡಮರಗಳ, ಪ್ರಾಣಿಗಳ ಸೂಚಕ ಸ್ಥಳಗಳನ್ನು ಹೀಗೆ ಗುರುತಿಸಬಹುದಾಗಿದೆ.

1) **ಜಲವಾಚಿ ಸ್ಥಳನಾಮಗಳು :–** ಕೆರೆ ಸಮೀಪದಲ್ಲಿ ಮಾನವ ನೆಲೆ ನಿರ್ಮಾಣ ಮಾಡಿಕೊಂಡಿರುವುದಕ್ಕೆ ಕೆರೆ, ಗೆರೆ, ಗೇರಾ, ಕಟ್ಟೆ, ಬಾವಿ, ಹೊಳೆ, ಎರಿ, ಸಂದ್ರ, ಸಾಗರ ಎಂಬ ಹೆಸರುಗಳನ್ನು ಕುರುಹುಗಳಾಗಿ ಬಳಸಿದ್ದಾನೆ. ಇದಕ್ಕೆ ಜಲವಾಚಿ ಸ್ಥಳನಾಮಗಳೆಂದು ಕರೆಯುವರು.
2) **ಸಸ್ಯವಾಚಿ ಸ್ಥಳನಾಮಗಳು :–** ಗಿಡಮರ, ಕಳ್ಳಿ, ಬೇರು, ಪೊದೆ, ತೋಪುಗಳ ಹತ್ತಿರ ನೆಲೆಯನ್ನು ಕಂಡುಕೊಂಡಿರುವುದರ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ನಿರ್ಮಾಣ ಮಾಡಿರುತ್ತಾರೆ.
3) **ಭೂವಾಚಿ ಸ್ಥಳನಾಮಗಳು :–** ಕಾಡು, ಗುಡ್ಡ, ಬೆಟ್ಟ, ತಗ್ಗು, ದಿಣ್ಣೆ, ಕುಪ್ಪೆ, ಕೊಪ್ಪ, ಕೊಪ್ಪಲು, ಘಟ್ಟ, ಕುಂದ, ಗುಂದ ಹೀಗೆ ಬರುವ ಸ್ಥಳನಾಮಗಳು ಆ ಸ್ಥಳದ ನಿರ್ದಿಷ್ಟ ಊರುಗಳನ್ನು ಗುರುತಿಸಲು ಸಹಕಾರಿಯಾಗುವಂತೆ ಭೂವಾಚಿಗಳನ್ನು ಬಳಸಿದ್ದಾರೆ.
4) **ವ್ಯಕ್ತಿವಾಚಿ ಸ್ಥಳನಾಮಗಳು :–** ಮಾನವ ನಾಗರಿಕನಾಗುತ್ತಾ ಬಂದಂತೆ ಹಳ್ಳಿ ಅಥವಾ ಗ್ರಾಮಗಳನ್ನು ಕಟ್ಟಿದಂತ ವ್ಯಕ್ತಿಯ ಅಥವಾ ಆ ಹಳ್ಳಿಯ ಮುಖಂಡನ, ನಾಯಕರುಗಳ ಹೆಸರುಗಳನ್ನು ಇಟ್ಟು ಕರೆಯುತ್ತಾ ಬಂದಿದ್ದಾರೆ.

ಹೀಗೆ ಸ್ಥಳನಾಮಗಳು ಜಲವಾಚಿ, ಸಸ್ಯವಾಚಿ, ಪ್ರಾದೇಶಿಕ ವೈಲಕ್ಷಣ, ವ್ಯಾಪಾರ, ಜನಾಂಗೀಯ, ವ್ಯಕ್ತಿನಾಮ, ವಸತಿಸೂಚಕ, ಪ್ರಾಣಿವಾಚಕ ಮುಂತಾದ ವಿಚಾರಗಳಿಂದ ನೆಲೆ, ಊರುಗಳ ಸ್ವರೂಪವನ್ನು ತಿಳಿಯಲು ಸಾಧ್ಯವಾಗಿದೆ.

1.2 ಸ್ಥಳನಾಮಗಳ ಅಧ್ಯಯನದ ಇತಿಹಾಸ

'ಇತಿ' ಎಂದರೆ ಇದು ಹೀಗೆ ಎಂದರ್ಥ. ಇದು ಹೀಗೆ ನಡೆದದ್ದು ಎಂದು ತಿಳಿಸಿಕೊಡುವುದೇ ಇತಿಹಾಸ. ಪ್ರತಿಯೊಂದಕ್ಕೂ ತನ್ನದೇ ಆದ ಇತಿಹಾಸ ಇರುತ್ತದೆ. ಇತಿಹಾಸ ಮರೆತವರು ಇತಿಹಾಸ (ದಾಖಲೆ) ಸೃಷ್ಟಿಸಲಾರರು ಎಂಬ ಮಾತು ಇತಿಹಾಸಕ್ಕಿರುವ ಅರ್ಥ ವ್ಯಾಪ್ತಿಯನ್ನು ಸೂಚಿಸುತ್ತದೆ. ಹಾಗೆಯೇ ಸ್ಥಳನಾಮಗಳಿಗೂ ಅದರದೇ ಆದ ಅನನ್ಯವಾದ ಇತಿಹಾಸ ಕುತೂಹಲಕರವಾಗಿದೆ. ಇತಿಹಾಸವನ್ನು ಮುಖ್ಯವಾಗಿ ಆಧರಿಸಿಯೇ ಸ್ಥಳನಾಮಗಳ ಅಧ್ಯಯನ ಇತ್ತೀಚೆಗೆ ಹೆಚ್ಚಾಗಿ ಸಾಗುತ್ತಿದೆ. Toponomy (ಸ್ಥಳನಾಮಗಳ ಅಧ್ಯಯನ) ಹಿನ್ನೆಲೆಯಲ್ಲಿ ಇದನ್ನು ನಾವು ಕಾಣಬಹುದಾಗಿದೆ.

ಇಂಗ್ಲೀಷ್‌ನಲ್ಲಿ ಸ್ಥಳನಾಮ ಶಾಸ್ತ್ರವನ್ನು Toponomy ಎಂದು ಕರೆಯುತ್ತಾರೆ. ಇದು ಮೂಲತಃ ಗ್ರೀಕ್‌ನ Topos ಮತ್ತು Namos ಎಂಬ ಎರಡು ಸಂಯುಕ್ತ ಪದಗಳಿಂದ ಬಂದುದಾಗಿದೆ. ಇತ್ತೀಚೆಗೆ ಇದೊಂದು ವಿಜ್ಞಾನದ ಶಾಖೆಯಾಗಿ ಸುವ್ಯವಸ್ಥಿತ ಶಾಸ್ತ್ರವಾಗಿ ಬೆಳೆದು ಬಂದಿದೆ. ಆದ್ದರಿಂದ ಅದನ್ನು "A Science of places, place names"[16] ಸ್ಥಳಗಳನ್ನು, ಸ್ಥಳನಾಮಗಳನ್ನು ಕುರಿತ ಅಧ್ಯಯನ ಮಾಡುವ ವಿಜ್ಞಾನ ಎಂದೇ ಹೇಳಬಹುದು.

"ಮಾನವಿಕ (ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಇತಿಹಾಸ, ಮಾನವಶಾಸ್ತ್ರ, ಮನೋವಿಜ್ಞಾನ, ಮನಃಶಾಸ್ತ್ರ)ಗಳಿಗೆ ಇತಿಹಾಸವಿರುವಂತೆ ಸ್ಥಳನಾಮ ಶಾಸ್ತ್ರಕ್ಕೆ ತನ್ನದೇ ಆದ ಇತಿಹಾಸವಿದೆ. ಈ ಸ್ಥಳನಾಮಶಾಸ್ತ್ರಕ್ಕೆ ಎರಡು ಶತಮಾನಗಳ ಚರಿತ್ರೆ ಇರುವುದು ನಿಜವಾದರೂ ಅದೊಂದು ಶಾಸ್ತ್ರ ಪ್ರಕಾರವಾಗಿ ಭದ್ರವಾದ ತಳಹದಿಯನ್ನು ಪಡೆದದ್ದು ಒಂದು ಶತಮಾನದ ಹಿಂದೆಯಷ್ಟೆ."[17]

"ಸಾಹಿತ್ಯ, ಕಲೆ, ಧರ್ಮ, ವೈದ್ಯ, ಸಂಸ್ಕೃತಿ, ಜನಜೀವನ, ಕ್ರೀಡೆ, ವಿಜ್ಞಾನ ಮುಂತಾದವುಗಳಿಗೆ ಸ್ಥಳನಾಮಗಳು ಕೂಡಾ ಒಂದು ವಿಜ್ಞಾನವಾಗಿ ಹೊರಹೊಮ್ಮಿ ಶಾಸ್ತ್ರದ ಭಾಗವಾಗಿದೆ. ಸ್ಥಳನಾಮಗಳ ಅಧ್ಯಯನ ವೈಜ್ಞಾನಿಕವಾಗಿ ಪ್ರಾರಂಭಗೊಂಡದ್ದು ಹತ್ತೊಂಬತ್ತನೆಯ

ಶತಮಾನದ ಉತ್ತರಾರ್ಧದಲ್ಲಿ. ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಪಾಣಿನಿ ಸ್ಥಳನಾಮಗಳ ಸಾಂಸ್ಕೃತಿಕ ಲಕ್ಷಣಗಳನ್ನು ಗುರುತಿಸಿದ."[18]

ನಾಡು, ನುಡಿ, ವ್ಯಕ್ತಿ, ವಂಶ, ಊರು, ನದಿ, ಬೆಟ್ಟ ಎಲ್ಲದಕ್ಕೂ ತನ್ನದೇ ಆದ ಇತಿಹಾಸ ಇರುತ್ತದೆ. ಆ ಇತಿಹಾಸವನ್ನು ಆಧರಿಸಿಯೇ ವರ್ತಮಾನ ನಿರ್ಮಾಣಗೊಂಡು ಭವಿಷ್ಯದೆಡೆಗೆ ಬದುಕನ್ನು ಕೊಂಡೊಯ್ಯುತ್ತದೆ. ಸ್ಥಳನಾಮ ಅಧ್ಯಯನದ ಬೆಳವಣಿಗೆ ಇತ್ತೀಚಿನ ದಶಕಗಳಲ್ಲಿ ಬೆಳೆದುಕೊಂಡು ಬಂದಿದೆ. ನಮ್ಮ ದೇಶದ ಮಟ್ಟಿಗಂತೂ ತೀರಾ ಹೊಸತಾದುದು ಎನ್ನಬೇಕು. ಬಹುಪಾಲು ಅರ್ಥಗರ್ಭಿತವಾಗಿರುವ ಸ್ಥಳನಾಮಗಳ ಅಧ್ಯಯನ ವೈಜ್ಞಾನಿಕವಾಗಿ ಪ್ರಾರಂಭಗೊಂಡದ್ದೇ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ. ಅಲ್ಲಿಂದೀಚೆಗೆ ಸ್ಥಳನಾಮಗಳ ಉಲ್ಲೇಖ ಸಾಹಿತ್ಯ ಗ್ರಂಥಗಳಲ್ಲಿ ಕಾಣಿಸಿಕೊಂಡರೂ ಸರ್ಕಾರಿ ಕಡತ ಹಾಗೂ ದಾಖಲೆಗಳಲ್ಲಿ ಅವುಗಳ ಪಟ್ಟಿ ಪ್ರಕಟಗೊಂಡರೂ, ಅವುಗಳ ಉಪಯುಕ್ತತೆಯನ್ನು ಕಂಡುಕೊಂಡಿರಲಿಲ್ಲ. ಆದರೆ ಸ್ಥಳನಾಮಗಳ ಅರ್ಥ ಶ್ರೀಮಂತಿಕೆ ಅದನ್ನು ಅರಿಯುವ ಅವಶ್ಯಕತೆ ಅದರ ಹಿಂದೆ ಬಿಚ್ಚಿಕೊಳ್ಳುವ ಅರ್ಥಪರಂಪರೆ, ಇತಿಹಾಸ, ಸಂಸ್ಕೃತಿ, ರಾಜಕೀಯಗಳ ಅಂಶಗಳು ಕುತೂಹಲವನ್ನು ಹುಟ್ಟಿಸುತ್ತಾ ಹೋದಂತೆ ಅವುಗಳ ಅಧ್ಯಯನ ವಿಸ್ತೃತಗೊಳ್ಳತೊಡಗಿತು.

ಸ್ಥಳನಾಮ ಅಧ್ಯಯನದ ಇತಿಹಾಸ ಸಾಗಿಬಂದ ರೀತಿಯನ್ನು ಈ ಕೆಳಕಂಡ ವಿಭಾಗಗಳ ಹಿನ್ನಲೆಯಲ್ಲಿ ವಿವರಿಸಲಾಗಿದೆ:

1) ಪಾಶ್ಚಾತ್ಯ ಸ್ಥಳನಾಮಾಧ್ಯಯನದ ಇತಿಹಾಸ
2) ಭಾರತೀಯ ಸ್ಥಳನಾಮಾಧ್ಯಯನದ ಇತಿಹಾಸ
3) ಕನ್ನಡ ಸ್ಥಳನಾಮಾಧ್ಯಯನದ ಇತಿಹಾಸ

1) ಪಾಶ್ಚಾತ್ಯ ಸ್ಥಳನಾಮಾಧ್ಯಯನದ ಇತಿಹಾಸ

ಪಾಶ್ಚಿಮಾತ್ಯರಲ್ಲಿ ಸ್ಥಳನಾಮ ಅಧ್ಯಯನ ಪ್ರಾರಂಭವಾದುದು ಸುಮಾರು ಎರಡುನೂರು ವರ್ಷಗಳ ಹಿಂದೆ. ಸ್ಥಳನಾಮಗಳಲ್ಲಿರುವ ಸಾಂಸ್ಕೃತಿಕ ಸಂಗತಿಗಳನ್ನು ಮನಗಂಡು ಅವುಗಳ ಅಧ್ಯಯನದ ಅಗತ್ಯತೆಯನ್ನು, ಮಹತ್ವವನ್ನು ಅರಿತು ಅಧ್ಯಯನದಲ್ಲಿ ತೊಡಗಿದರು. ಆದರೆ ಅದೊಂದು ಶಾಸ್ತ್ರವಾಗಿ, ವೈಜ್ಞಾನಿಕವಾದ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಟ್ಟಿದ್ದು ಮಾತ್ರ ಒಂದು ಶತಮಾನದ ಹಿಂದೆಯಷ್ಟೆ. ಯುರೋಪಿನ ರಾಷ್ಟ್ರಗಳಾದ ಜರ್ಮನಿ, ಫ್ರಾನ್ಸ್, ಡೆನ್ಮಾರ್ಕ್,

ನಾರ್ವೆಗಳಲ್ಲಿ ಸ್ಥಳನಾಮಗಳ ಅಧ್ಯಯನಗಳು ಗಣನೀಯವಾಗಿ ನಡೆದವು. ಆದರೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಆಗಿರುವ ಕಾರ್ಯವನ್ನು ಗಮನಿಸಿದರೆ ವಿಸ್ಮಯವಾಗದೇ ಇರದು.

"ಸ್ಥಳನಾಮಗಳು ಅರ್ಥಗರ್ಭಿತವಾದವುಗಳೆಂದೂ ಅವುಗಳಿಗೆ ಒಂದು ಮಹತ್ವದ ಅರ್ಥ ಇದೆಯೆಂದೂ, ಅವುಗಳ ಪ್ರಾಚೀನ ರೂಪಗಳನ್ನು ಪರಿಶೀಲಿಸುವ ಮೂಲಕ ಅರ್ಥವನ್ನು ನಿರ್ಣಯಿಸಬಹುದೆಂದು ಮೊತ್ತ ಮೊದಲು ತೋರಿಸಿಕೊಟ್ಟ ಕೀರ್ತಿ 1768ರಲ್ಲಿ ಜರ್ಮನಿಯ **ಗಾಟ್‌ಫ್ರೀಡ್ ವಿಲ್‌ಹೆಲ್ ಲೀಬ್ನಿಜ್**‌ಗೆ ಸಲ್ಲುತ್ತದೆ. ಇವನು ಆಂಗ್ಲ ಸ್ಥಳನಾಮಗಳ ಅಧ್ಯಯನಕ್ಕೆ ಖ್ಯಾತರಾಗಿದ್ದಾರೆ. ಆದ್ದರಿಂದ ಈತನನ್ನು **'ಸ್ಥಳನಾಮಶಾಸ್ತ್ರದ ಪಿತಾಮಹ'**ನೆಂದು ಕರೆಯಲಾಗಿದೆ. ಆದರೂ ಸ್ಥಳನಾಮಾರ್ಥ ವಿವರಣೆಯ ಆರಂಭದ ಯತ್ನಗಳು ಕ್ರಮಬದ್ಧವಾಗಿರದೆ ಅವೈಜ್ಞಾನಿಕವಾಗಿದ್ದವು. ಸ್ಥಳನಾಮದ ವ್ಯವಸ್ಥಿತವಾದ ಅಧ್ಯಯನ ಯತ್ನಗಳು ಪ್ರಾರಂಭವಾದದ್ದು 1814ರಿಂದ ಈಚೆಗೆ. ಇಂತಹ ಸಮಯದಲ್ಲಿ ಸ್ಥಳನಾಮ ವಿಜ್ಞಾನದ ವಿಕಾಸಕ್ಕೆ ಭದ್ರ ಬುನಾದಿಯನ್ನು ಹಾಕಿದವನೇ ಇಂಗ್ಲೆಂಡಿನ **ಸ್ಕೀಟ್** ಎಂಬ ಸ್ಥಳನಾಮತಜ್ಞ, **ಎ.ಎಚ್.ಸ್ಮಿತ್, ಇಕ್ವಾಲ್, ಗಾರ್ಡಿನರ್, ಅಟ್ಲಿ, ಸ್ಕ್ಯೂಟನ್ ಡೌತ, ಅಡಾಲ್ಫಬ್ಯಾಚ**ನಂತಹ ವಿದ್ವಾಂಸರು ಸ್ಥಳನಾಮಶಾಸ್ತ್ರಕ್ಕೆ ಅಥವಾ ಸ್ಥಳನಾಮಶಾಸ್ತ್ರದ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ಒದಗಿಸಿದರು. ಜರ್ಮನಿಯ **ಫಾರ್ ಸ್ಟೀಮನ್, ಫ್ರಾನ್ಸ್‌ನಲಾಂಗ್ಮನ್, ನಾರ್ವೆಯರೈ,** ಸ್ವೀಡನ್ನಿನ **ನೋರಿನ್** ಆ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಗೆ ಕಾರಣರಾದರು. ಸ್ಥಳನಾಮ ಸಂಶೋಧನೆಯಲ್ಲಿ ಹೆಸರುಗಳ ಐತಿಹಾಸಿಕ ವಿಕಾಸಕ್ಕೂ, ಭೌಗೋಳಿಕ ಪರಿಸ್ಥಿತಿ ಸನ್ನಿವೇಶಗಳ ವಿವರಣೆಗೂ ಆದ್ಯಗಮನ ನೀಡತಕ್ಕದೆಂದು ಅವರು ಸ್ಪಷ್ಟಪಡಿಸಿದರು. ಅವುಗಳ ಅಧ್ಯಯನದಿಂದ ಸಾಂಸ್ಕೃತಿಕ ಲಾಭಮಾತ್ರವಲ್ಲ, ಹಲವಾರು ಜ್ಞಾನಶಾಖೆಗಳಿಗೆ ಪ್ರಯೋಜನವಾಗುತ್ತದೆಂದು ಅವರು ಸೂಚಿಸಿದರು."[19]

"ಪಾಶ್ಚಾತ್ಯರಲ್ಲಿ ಸ್ಥಳನಾಮಗಳ ಅಧ್ಯಯನ 19ನೇ ಶತಮಾನದ ಪೂರ್ವಾರ್ಧದಿಂದಲೇ ಪ್ರಾರಂಭಗೊಂಡಿತು. ಆರಂಭದಲ್ಲಿ ಶಿಸ್ತುಬದ್ಧತೆ ಅಷ್ಟಾಗಿ ಕಂಡುಬರದಿದ್ದರೂ ಸ್ಥಳನಾಮಗಳನ್ನು ಅಧ್ಯಯನಕ್ಕೆ ಅಳವಡಿಸಬಹುದೆಂಬುದನ್ನು ತೋರಿಸಿಕೊಟ್ಟದ್ದೇ ಆ ಕಾಲದ ಮಹಾತ್ಸಾಧನೆಯಾಗಿದೆ. ಚಾರಿತ್ರಿಕ, ಭೌಗೋಳಿಕ ಅಂಶಗಳಿಗೆ ಆರಂಭದ ಹಂತದಲ್ಲಿ ಹೆಚ್ಚು ಒತ್ತನ್ನು ಕೊಡಲಾಯಿತು. ಸ್ಟೀಮನ್, ಲಾಂಗ್ಮನ್‌ರಂಥವರ ಪ್ರಯತ್ನ ಈ ನಿಟ್ಟಿನಲ್ಲಿ ಸ್ಮರಣೀಯವಾಗಿದೆ. ಈ ಅವಧಿಯ ಚೊಚ್ಚಲ ಕೊಡುಗೆಗಳ ಪೈಕಿ ಫಾಯರ್‌ಸ್ಟೆಮ್ಯಾನನ A Le

deatches nemen buch ಮತ್ತು ಐಸಾಕ್‌ಟೇಲರನ words and places ಗಮನಾರ್ಹ ಕೃತಿಗಳಾಗಿವೆ."[20]

ನಮ್ಮವರಿಗೆ ಹಲವು ಜ್ಞಾನ ಶಾಖೆಗಳ ಪರಿಚಯವಾಗಿದ್ದೇ ಆಂಗ್ಲ ಶಿಕ್ಷಣ ದೊರೆತ ನಂತರ. ಬ್ರಿಟೀಷರ ಆಗಮನ ಹಲವು ದುಷ್ಪರಿಣಾಮಗಳ ನಡುವೆಯೇ ಆಧುನಿಕ ಜ್ಞಾನ ಶಾಖೆಗಳ ಕೀಲಿ ಕೈಯಾದ ಆಂಗ್ಲಭಾಷೆ ನಮ್ಮ ಕೈಗೆಟುಕಿದ ಅಂಶ ಮಹತ್ವಪೂರ್ಣವಾಗಿದೆ. ವಿಶ್ವದ ವಿದ್ಯೆಗಳಿಗೆ ನಮ್ಮನ್ನು ತೆರೆದುಕೊಳ್ಳಲು ಸಾಧ್ಯವಾದ ನಂತರ ನಮ್ಮಲ್ಲೂ ಸ್ಥಳನಾಮಗಳ ಅಧ್ಯಯನ ಆರಂಭವಾಗಿ ವ್ಯವಸ್ಥಿತವಾಗಿ ಮುನ್ನಡೆಯಿತು.

ಕ್ರಿ.ಶ.1871–85ರ ಅವಧಿಯನ್ನು **ಎಗ್ಲಿ** ಎಂಬ ವಿದ್ವಾಂಸ ಸ್ಥಳನಾಮಶಾಸ್ತ್ರದ ಗತಿಶೀಲ ಬೆಳವಣಿಗೆಯ ಕಾಲ ಎಂದು ಕರೆದಿದ್ದಾನೆ. ಇಂಗ್ಲೆಂಡಿನಲ್ಲಿ ಸ್ಥಳನಾಮಗಳ ಅಧ್ಯಯನ ಕ್ಷೇತ್ರದಲ್ಲಿ ಇವರು ಗಣನೀಯ ಸೇವೆ ಮಾಡಿದ್ದಾರೆ. ಆದ್ದರಿಂದಲೇ **ಎಗ್ಲಿಯನ್ನು ‘ಇಂಗ್ಲೀಷ್ ಸ್ಥಳನಾಮ ಶಾಸ್ತ್ರದ ಮೂಲ ಪುರುಷ’**ನೆಂದು ಕರೆಯಲಾಗಿದೆ.

ಇಂಗ್ಲೆಂಡಿನಲ್ಲಿ ಎಗ್ಲಿಯ ಅನಂತರ ಸ್ಥಳನಾಮಾಧ್ಯಯನದ ಪ್ರಯತ್ನಗಳು ನಿರಂತರವಾಗಿ ವ್ಯಾಪಕವಾಗಿ ನಡೆದವು. ಯುರೋಪಿನಲ್ಲಿ ವಿದ್ವಾಂಸರಿಂದ ಸ್ವತಂತ್ರವಾಗಿ ಅಥವಾ ಸ್ಥಳನಾಮಗಳಲ್ಲಿನ ಭೌಗೋಳಿಕ ಹೆಸರುಗಳನ್ನು ವ್ಯವಸ್ಥೀಕರಿಸಲು, ಪ್ರಾಮಾಣೀಕರಿಸಲು ಸ್ಥಳನಾಮಗಳು ಸ್ಥಾಪಿತವಾದವು.

ಯುರೋಪಿನ ವಿದ್ವಾಂಸರಿಗೆ ಸಂಸ್ಕೃತ ಭಾಷೆಯ ಪರಿಚಯದಿಂದಾಗಿ ಭಾಷೆ–ಭಾಷೆಗಳ ನಡುವೆ ತೌಲನಿಕ ಅಧ್ಯಯನ ನಡೆಸಿದ ನಂತರ ಸ್ಥಳನಾಮ ಅಧ್ಯಯನಕ್ಕೆ ಪುರಸ್ಕಾರ ದೊರೆಯಿತು. ಅಲ್ಲದೆ ವೈಜ್ಞಾನಿಕ ಸಂಶೋಧನೆಯು ಆರಂಭವಾಯಿತೆನ್ನಬಹುದು. **ವಾರನ್‌ಅಪ್‌ಹ್ಯಾಮ್, ಲೂಯಿಸ್ ಪೌಂಡ್** ಮೊದಲಾದವರ ಮಾರ್ಗದರ್ಶನ ಮತ್ತು ಪ್ರೋತ್ಸಾಹಗಳಿಂದ ಆರಂಭವಾದ ಈ ಮಹಾಕಾರ್ಯ ದೇಶದ ಉದ್ದಗಲಕ್ಕೂ ವ್ಯಾಪಿಸಿ ವಿಶ್ವವಿದ್ಯಾಲಯಗಳ ವಿದ್ವಾಂಸರಷ್ಟೇ ಅಲ್ಲ ಸಂಶೋಧನಾಸಕ್ತಿಯುಳ್ಳ ಹವ್ಯಾಸಿಗಳನ್ನು ಸೆಳೆಯಲು ಕಾರಣವಾಯಿತು.

ಇಂಗ್ಲೆಂಡಿನಲ್ಲಿ 8ನೇ ಶತಮಾನದಲ್ಲಿ ಜೀವಿಸಿದ್ದ **ಬೀಡೆ** (Bede) ತನ್ನ ಧಾರ್ಮಿಕ ಇತಿಹಾಸ ಗ್ರಂಥದಲ್ಲಿ ಕೆಲವು ಸ್ಥಳನಾಮಗಳ ವಿವರಣೆಯನ್ನು ಲ್ಯಾಟಿನ್ ಭಾಷೆಯಲ್ಲಿ ಕೊಡುತ್ತಾನೆ.

ಸೀಲ್ ದ್ವೀಪವೆಂಬುದು ಅವನ ಅಭಿಪ್ರಾಯವಾಗಿತ್ತು. 10ನೇ ಶತಮಾನದ **ಅಸರ್** (Asser) ತಾನು ರಚಿಸಿದ ಆಲ್‌ಫ್ರೆಡ್ ದೊರೆಯ ಜೀವನ ಚರಿತ್ರೆಯಲ್ಲಿ ಕೆಲವು ಸ್ಥಳನಾಮ ನಿಷ್ಪತ್ತಿಗಳನ್ನು ವಿವರಿಸುತ್ತಾ 'Sheppey' ಎನ್ನುವುದು ಕುರಿಗಳ ದ್ವೀಪವೆಂದು ಲ್ಯಾಟೀನ್ ಭಾಷೆಯ ಮೂಲಕ ವಿವರಿಸುತ್ತಾನೆ. 12ನೇ ಶತಮಾನದ ಇತಿಹಾಸಕಾರನಾದ **ಹಂಟಿಂಗ್, ಡನ್ನಿನ ಹೆನ್ರಿ** ಮತ್ತು **ಮಾಲ್ಮೆಸ್ ಬರಿಯ ವಿಲಿಯಂ** ಮುಂತಾದವರು ಸ್ಥಳನಾಮಗಳ ಬಗ್ಗೆ ಆಸಕ್ತಿಯನ್ನು ತೋರಿಸುತ್ತಾರೆ. ಹೆನ್ರಿಯ 'ಹಂಟಿಂಗ್‌ಡನ್' ಎಂಬ ನಿಷ್ಪತ್ತಿ ಕುರಿತಂತೆ 'ಬೇಟೆಗಾರರ ಬೆಟ್ಟ' ವೆಂದು ತಿಳಿಸುತ್ತಾನೆ.

"1921ರಲ್ಲಿ **'ಆಂಗ್ಲ ಸ್ಥಳನಾಮ ಸಂಶೋಧನಾ ಮಂಡಳಿ'** ಸ್ಥಾಪಿತವಾಯಿತು. ಇದು ಸ್ಥಳನಾಮ ವಿಜ್ಞಾನದ ಇತಿಹಾಸದಲ್ಲಿ ಮೈಲಿಗಲ್ಲು ಎನ್ನಬಹುದು. ಪುರಾತತ್ವಶಾಸ್ತ್ರಜ್ಞರ, ಭಾಷಾವಿಜ್ಞಾನಿಗಳ, ಇತಿಹಾಸಕಾರರ ಅಂತೆಯೇ ಇತರ ಪರಿಣಿತರ ನೆರವು ಪಡೆದು ಸ್ಥಳನಾಮಗಳ ಅಧ್ಯಯನಕ್ಕೆ ವೈಜ್ಞಾನಿಕ ಸ್ವರೂಪ ನೀಡುವುದರಲ್ಲಿ ಅದು ಯಶಸ್ವಿಯಾಯಿತು. ಸಾಂಸ್ಕೃತಿಕ ರಚನೆಗೆ ಇಂತಹ ಅಧ್ಯಯನ ಅನಿವಾರ್ಯ ಎಂಬುದನ್ನು ಅದು ಸ್ಪಷ್ಟಪಡಿಸಿತು. ಎಲ್ಲಾ ಜಿಲ್ಲೆಗಳ ಸ್ಥಳನಾಮಗಳನ್ನು ಸಂಗ್ರಹಿಸಿ ವಿವಿಧ ದೃಷ್ಟಿಗಳಿಂದ ಅಧ್ಯಯನ ನಡೆಸಿ ವರ್ಗೀಕರಣ ತತ್ವಗಳನ್ನು ರೂಪಿಸಿ ತಂತ್ರ ವಿಧಾನಗಳನ್ನು ಅಳವಡಿಸಿಕೊಂಡು ಪ್ರಚಾರಕ್ಕೆ ಬಂದಿತು. ಸ್ಥಳನಾಮಗಳ ಅಧ್ಯಯನದಲ್ಲಿ ಭೌಗೋಳಿಕ ಅಂಶಗಳು ಮುಖ್ಯವಾಗಿ ಪರಿಗಣನೆಗೆ ಒಳಪಟ್ಟವು. ಪುರಾತತ್ವ ಶಾಸ್ತ್ರಗಳಲ್ಲಿ ಆಸಕ್ತರಾದವರು ಭಾಷಾ ವಿಜ್ಞಾನಿಗಳು, ಸಮಾಜವಿಜ್ಞಾನಿಗಳು ಕ್ರಮೇಣ ಈ ಅಧ್ಯಯನವನ್ನು ಬೆಳೆಸತೊಡಗಿದರು. ಸಾಂಸ್ಕೃತಿಕ ಸಂಕಥನಗಳ ರಚನೆಯಲ್ಲೂ ಸ್ಥಳನಾಮಗಳು ಮಹತ್ವದ ಪಾತ್ರ ವಹಿಸುವುದಲ್ಲದೆ ಸ್ಥಳನಾಮ ನಿಷ್ಪತ್ತಿಯ ಬಗ್ಗೆ ಭಾಷಾ ವಿಜ್ಞಾನದ ಪರಿಕರಗಳನ್ನು ಐತಿಹಾಸಿಕ ವಿಧಾನವನ್ನು ಬಳಸಿಕೊಂಡು ಸಿದ್ದಪಡಿಸಿರುವ ಇ. **ಎಕ್ವಾಲ್** ಸಿದ್ದಪಡಿಸಿದ **ಆಂಗ್ಲ ಸ್ಥಳನಾಮ ನಿಘಂಟು** ಎಲ್ಲ ವಿದ್ವಾಂಸರಿಗೆ ಕೈದೀವಿಗೆಯಾಗಿದೆ".[21]

ಇಂದು ಇಂಗ್ಲೆಂಡ್ ಮಾತ್ರವಲ್ಲದೆ, ಅಮೇರಿಕಾ, ಸ್ಕಾಟ್ಲೆಂಡ್ ಮುಂತಾದ ರಾಷ್ಟ್ರಗಳು ಸ್ಥಳನಾಮ ಸಂಘಗಳನ್ನು ಸ್ಥಾಪಿಸಿ, ಸ್ಥಳನಾಮ ಸಮೀಕ್ಷೆಯ ಕಾರ್ಯವೆಸಗುತ್ತಿವೆ.

ಸ್ಥಳನಾಮ ವಿಜ್ಞಾನಿಗಳ ಬೌದ್ಧಿಕ ಜಾಗೃತಿಗಾಗಿ ಹಾಗೂ ಅವರುಗಳೊಡನೆ ಅಭಿಪ್ರಾಯ ವಿನಿಮಯಕ್ಕೆ ಅವಕಾಶ ಒದಗಿಸಿಕೊಡುವುದಕ್ಕಾಗಿ ಬೆಲ್ಜಿಯಂನ ಲೂವೈನಿನಲ್ಲಿ 1949ರಲ್ಲಿ

ಯುನೆಸ್ಕೋ ಅಂಗ ಸಂಸ್ಥೆಯಾದ ಅಂತರರಾಷ್ಟ್ರೀಯ ಸ್ಥಳನಾಮ ವಿಜ್ಞಾನಿಗಳ ಸಮಿತಿಯನ್ನು ರಚಿಸಿ ಆ ಮೂಲಕ ಸ್ಥಳನಾಮಶಾಸ್ತ್ರದ ಪ್ರಗತಿಗಾಗಿ ಶ್ರಮಿಸುತ್ತಿದೆ.

2) ಭಾರತೀಯ ಸ್ಥಳನಾಮಾಧ್ಯಯನದ ಇತಿಹಾಸ

ಪ್ರಾಚೀನ ಭಾರತೀಯರಿಗೆ ಶಾಸ್ತ್ರೀಯವಾದ ಸ್ಥಳನಾಮ ಅಧ್ಯಯನದ ವಿಧಾನ ತಿಳಿದಿರಲಿಲ್ಲವೆಂದರೂ ಅವರಿಗೆ ಸ್ಥಳನಾಮಗಳ ಮಹತ್ವ ತಿಳಿದಿರಲಿಲ್ಲ ಎಂದು ಅರ್ಥವಲ್ಲ. ಅದಕ್ಕೆ ನಿದರ್ಶನವೆಂದರೆ ನಮ್ಮ ಜನಪದರು ತಾವು ಬದುಕಿ ಬಾಳುತ್ತಿರುವ ನೆಲೆಗೆ ಒಂದು ಮಹತ್ವವನ್ನು ದೊರಕಿಸಿಕೊಡಬೇಕೆಂಬ ಹಂಬಲ ಅವರಲ್ಲಿತ್ತು ಎಂಬುದಕ್ಕೆ ಪ್ರತಿಯೊಂದು ನೆಲೆಗೂ ಒಂದಲ್ಲ ಒಂದು ಸ್ಥಳಪುರಾಣವೋ, ಐತಿಹ್ಯವೋ ಇರುವುದು ಸಾಕ್ಷಿ. ಆ ಸ್ಥಳಪುರಾಣಗಳೇ ರಾಮಾಯಣ, ಮಹಾಭಾರತ, ಪುರಾಣ ವ್ಯಕ್ತಿಗಳೊಂದಿಗೆ, ಕತೆಯೊಂದಿಗೆ ತಳುಕು ಹಾಕಿಕೊಂಡಿರುವುದು. ಐತಿಹ್ಯಗಳೋ ತನ್ನ ಹಿಂದಿನ ಪರಿಸರ ಐತಿಹಾಸಿಕ ಪುರುಷನೋ ವೀರನೊಂದಿಗೆ ತಳಕು ಹಾಕಿಕೊಂಡಿರುವುದನ್ನು ಗಮನಿಸಿದರೆ ತಮ್ಮ ನೆಲೆಗೆ ಒಂದು ಮಹತ್ವ ಕೊಡುವುದೇ ಈ ಪೌರಾಣಿಕ ಮತ್ತು ಐತಿಹ್ಯಗಳ ಸೃಷ್ಟಿಗೆ ಕಾರಣ ಆಗಿದೆ. ಇನ್ನು ಬೃಹಸ್ಪತಿ 'ನಾಮಾಖಿಲಸ್ಯ ವ್ಯವಹಾರ ಹೇತು' ಎಂಬ ಹೇಳಿಕೆ ಕೊಡುತ್ತಾನೆ. ಎಲ್ಲ ವ್ಯವಹಾರಗಳಿಗೂ ಹೆಸರು ಮೂಲ ಕಾರಣವಾಗುತ್ತದೆ ಎಂಬುದು ಮೇಲಿನ ಹೇಳಿಕೆಯ ಅರ್ಥ. ಈ ಹೇಳಿಕೆಯ ಹಿನ್ನೆಲೆಯಲ್ಲಿ ನಾಮದ ಬಲದ ಅರಿವು ಅವನಿಗಿತ್ತು ಎಂಬುದು ವೇದ್ಯವಾಗುತ್ತದೆ.

ಋಗ್ವೇದದಲ್ಲಿ ಬರುವ 'ರಾಷ್ಟ್ರ' ಎಂಬ ಪದ ಸ್ಥಳನಾಮದ ವಿಚಾರದಲ್ಲಿ ಬಹುಮುಖ್ಯವಾದದ್ದು. ರಾಷ್ಟ್ರ ಪದಕ್ಕೆ ಸಮಾನಾರ್ಥವಾಗಿ 'ಜನಪದ' ಮತ್ತು 'ವಿಷಯ' ಎಂಬ ಪದಗಳು ಬಳಕೆಯಾಗುತ್ತಿದ್ದವು. ಬ್ರಾಹ್ಮಣಕಗಳು ರಚನೆಯಾದ ಕಾಲದಲ್ಲಿ 'ಗ್ರಾಮ' ಎಂಬ ಪದ ಬಳಕೆಯ ಅರ್ಥವೆಂದರೆ ಒಂದೆಡೆ ನೆಲೆನಿಂತ ಜನ ಸಮುದಾಯ ಎನ್ನುತ್ತಿದ್ದರು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಜನಪದವೆಂದರೆ ಒಂದು ನಿರ್ದಿಷ್ಟ ಮಂಡಲಿಗಳ ಅಧೀನ ಪ್ರದೇಶ ಎಂಬುದು ಅವನ ಅಭಿಪ್ರಾಯವಾಗಿತ್ತು.

"ಭಾರತದಲ್ಲಿ ಯಾಸ್ಕ, ಪಾಣಿನಿ ಮುಂತಾದ ಪ್ರಾಚೀನ ಮಹಾವಿದ್ವಾಂಸರು ಭಾಷೆ ಪ್ರತಿಯೊಂದು ಪದಕ್ಕೂ, ನಿರುಕ್ತ ಹೇಳುವ ಸಂಕಲ್ಪ ಹೊಂದಿದ್ದರಷ್ಟೆ. ಅವರು ಭೌಗೋಳಿಕ ನಾಮಗಳಿಗೂ ಅರ್ಥ ಹೇಳುವ ಪರಿಪಾಠವನ್ನಿಟ್ಟುಕೊಂಡಿದ್ದರು. ಪಾಣಿನಿಯಂತೂ ಅನೇಕ ಸ್ಥಳನಾಮಗಳಿಗೆ ನಿರುಕ್ತ ನೀಡಿದ್ದುಂಟು. ಅವನ ಕಾಲದಲ್ಲಿ ಕಾಡು, ಪೊದೆ, ಕಣಿವೆ, ನದಿ, ಬೆಟ್ಟ,

ಬಂಡೆ ಮೊದಲಾದ ನೈಸರ್ಗಿಕ ಕೋಟೆಗಳ ಗ್ರಾಮಗಳ ಮೇರೆಗಳಾಗಿದ್ದವು. ರೈತರ ಮನೆಗಳ ಚಾವಣಿಗೆಗೆ ಹುಲ್ಲು, ಗರಿ, ಮಡಿಕೆಗಳನ್ನು ಬಳಸಲಾಗುತ್ತಿತ್ತು. ಚಾರಿತ್ರಿಕ ಸ್ಥಿತಿಗಳ ಪರಿಣಾಮವಾಗಿ ಉದ್ಭವಗೊಂಡ ಅರ್ಥಘಟ್ಟಗಳೆಂಬುದು ಪಾಣಿನಿಯ ಅಭಿಪ್ರಾಯವಾಗಿತ್ತು."[22]

"ಇಂದು ಸರ್ಕಾರಿ ಕಡತಗಳಲ್ಲಿ, ಜನಗಣತಿಯಲ್ಲಿ, ಬಖೈರು, ಕೈಫಿಯತ್ತುಗಳಲ್ಲಿ, ಗೆಜೆಟಿಯರುಗಳಲ್ಲಿ ಸ್ಥಳನಾಮಗಳ ಪಟ್ಟಿ ಸಿಗುವುದಾದರೂ ಅವುಗಳ ವಿಚಾರ ಕ್ವಚಿತ್ತಾಗಿ ಮಾತ್ರ ದೊರಕುತ್ತದೆ. ಭಾರತದಲ್ಲಿ ಮೊದಲಿನಿಂದಲೂ ಸ್ಥಳಪುರಾಣಗಳೇನೋ ಹುಟ್ಟಿಕೊಂಡಿದ್ದರೂ ಇವು ಬಹಳ ಸಲ, ಆ ಸ್ಥಳವನ್ನು ವೈಭವೀಕರಿಸುವ ಕಟ್ಟು ಕತೆಗಳಾಗಿವೆ ಇಲ್ಲವೆ ಸ್ಥಳನಾಮಗಳನ್ನು ಸಂಸ್ಕೃತೀಕರಣಗೊಳಿಸಿ ಅವುಗಳನ್ನು ಯಾವುದೇ ದೇವತೆ ಇಲ್ಲವೆ ಋಷಿ ಮೂಲಕ್ಕೆ ಅಂಟಿಸುವ ತಪ್ಪು ವಿವರಣೆಗಳಾಗಿವೆ. ಆದುದರಿಂದ ಇಂದು ವಿಪುಲ ಸಂಖ್ಯೆಯಲ್ಲಿ ಈ ಸ್ಥಳಪುರಾಣಗಳು ಸ್ಥಳನಾಮ ಶಾಸ್ತ್ರಗಳಿಗೆ ಸಿಗುತ್ತಿದ್ದರೂ ನಿರಾಸೆ ಹುಟ್ಟಿಸುತ್ತದೆ".[23]

ನಮ್ಮ ದೇಶದಲ್ಲಿ ಸ್ಥಳನಾಮಶಾಸ್ತ್ರದ ಅಧ್ಯಯನ ಪ್ರಾರಂಭವಾದುದು ಇತ್ತೀಚೆಗೆ. ಅದು ಆಧುನಿಕ ಶಾಸ್ತ್ರಗಳೆಲ್ಲದರಂತೆ ಪಶ್ಚಿಮದ ಪ್ರಭಾವದಿಂದಲೇ ಪ್ರಾರಂಭವಾಯಿತು. ಭಾರತೀಯ ಸ್ಥಳನಾಮಗಳನ್ನು ಕುರಿತಂತೆ ಅಧ್ಯಯನ ನಡೆಸಿದವರಲ್ಲಿ ಪಾಶ್ಚಾತ್ಯರು ಮೊದಲಿಗರು. ಇವರಲ್ಲಿ ಪ್ರಮುಖರಾದವರೆಂದರೆ ಎಚ್.ಬ್ಲಾಕ್‌ಮನ್, ಕರ್ನಲ್ ಆರ್.ಬಿ.ಬ್ರಾನ್‌ಫಿಲ್, ಆರ್.ಎಸ್.ವ್ಲೇಟ್, ಜೆ.ಎಫ್.ಫ್ಲೀಟ್ ಮೊದಲಾದವರು.

ಸ್ಥಳನಾಮಗಳ ಅಧ್ಯಯನವನ್ನು ಆರಂಭಿಸಿದ ಮೊದಲ ಭಾರತೀಯರೆಂದರೆ **ಎಚ್.ಡಿ.ಸಂಕಾಲಿಯ**. ಇವರ ಸ್ಥಳನಾಮಗಳನ್ನು ಕುರಿತ ಪ್ರಬುದ್ಧ ಲೇಖನಗಳು ಐದಾರು ದಶಕಗಳಿಂದ ವಿರಳ ವಿರಳವಾಗಿ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದರೂ, ಅವುಗಳ ಅಧ್ಯಯನಕ್ಕೆ ಪೂರ್ಣ ಸ್ವರೂಪವನ್ನು ನೀಡಿ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕರ್ನಾಟಕದಲ್ಲಿ ಸ್ಥಳನಾಮಗಳ ಅಧ್ಯಯನಕ್ಕೆ ಮೀಸಲಾಗಿ ಮಾಸಿಕ, ವಾರ್ಷಿಕ ಪತ್ರಿಕೆಗಳು ಇರುವುದನ್ನು ಕಾಣುತ್ತೇವೆ. ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ತಮಿಳುನಾಡು, ಗುಜರಾತಿನಲ್ಲೂ ಇಂಥ ಪ್ರಯತ್ನಗಳು ನಡೆದಿವೆ. ಕರ್ನಾಟಕದಲ್ಲಿ ಸ್ಥಳನಾಮಗಳ ಆರಂಭಿಕ ಅಧ್ಯಯನ ಸ್ಥಳ ಪುರಾಣಗಳನ್ನು ಆಧರಿಸಿಯೇ ನಡೆಯಿತು. ದೈವಿ ಹಿನ್ನೆಲೆಯೇ ಶ್ರೇಷ್ಠ ಎಂಬ ಭಾವನೆ ಇಂಥಲ್ಲಿ ಕಂಡು ಬರುತ್ತದೆ. ರಾಮಾಯಣ, ಮಹಾಭಾರತಗಳ ಪ್ರಸಂಗಗಳಿಗೆ ಬಹುತೇಕ ಸ್ಥಳನಾಮಗಳು ತಳುಕು ಹಾಕಿಕೊಳ್ಳುವುದನ್ನು ಕಾಣುತ್ತೇವೆ.

"ಸ್ಥಳನಾಮಗಳ ಪೂರ್ವಾಪರ ಪ್ರತ್ಯಯಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಧಾರ್ಮಿಕ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಅವುಗಳನ್ನು ವಿಶ್ಲೇಷಿಸುವುದಾದರೆ, ಜನಾಂಗೀಯ, ಭೌಗೋಳಿಕ ವಿವರಣೆ ಸಾಧ್ಯವೆಂಬುದನ್ನು ಚಿದಾನಂದಮೂರ್ತಿರವರು ತೋರಿಸಿಕೊಟ್ಟರು. ಜೊತೆಗೆ ಆಯಾಯ ಕಾಲದ ಭಾಷೆಯ ಸ್ಥಿತಿಗತಿಗಳನ್ನು ನಿರ್ಣಯಿಸುವಲ್ಲಿ, ರಾಜಕೀಯ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗ್ರಹಿಸುವಲ್ಲಿ ವಿಶೇಷ ಲಾಭವೊದಗುತ್ತದೆಂದು ಅವರು ವಿಷದಪಡಿಸಿದರು."[24]

ನಂತರ ತಮ್ಮ ಮಟ್ಟಿನ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಬಂಗಾಳಿ ಸ್ಥಳನಾಮಗಳನ್ನು ಅಧ್ಯಯನ ಮಾಡಿದವರು ಅಂತರ್‌ರಾಷ್ಟ್ರೀಯ ಖ್ಯಾತಿ ಪಡೆದ **ಎಚ್.ಕೆ.ಚಟರ್ಜಿ**ಯವರು.

1893ರಲ್ಲಿ ಪ್ರಕಟವಾದ **'ಮದ್ರಾಸಿನ ಆಡಳಿತಕೋಶ'**ದಲ್ಲಿ ಕೆಲವು ಸ್ಥಳನಾಮಗಳ ವ್ಯುತ್ಪತ್ತಿಯನ್ನು ನಿರೂಪಿಸಿ, ಸ್ಥಳನಾಮಗಳ ಉತ್ತರಾಂಶಗಳ ಬಗ್ಗೆ ವಿಚಾರ ಮಾಡಲಾಗಿದೆ. 1902ರಲ್ಲಿ ಕೆ.ಪಿ.ಪದ್ಮನಾಭ ಮೆನನ್ ಅವರು ಮಲಬಾರ್ ಸ್ಥಳನಾಮಗಳನ್ನು ಕುರಿತ ಲೇಖನದಲ್ಲಿ ಪ್ರಚಲಿತ ದಂತಕಥೆ, ಸಂಪ್ರದಾಯಗಳ ಆಧಾರದಡಿಯಲ್ಲಿ ಸ್ಥಳನಾಮಗಳನ್ನು ವಿವರಿಸಿದ್ದಾರೆ. ಇಲ್ಲೆಲ್ಲಾ ವೈಜ್ಞಾನಿಕವಾದ ಮಾದರಿಯನ್ನು ಅನುಸರಿಸದೇ ಇರುವುದನ್ನು ಕಾಣಬಹುದು.

ರೆವರೆಂಟ್ ಫೆರಾರ್ಡ್ ಹಾನ್‌ರವರು 1903ರಲ್ಲಿ 'Dravidian and Kolorian Place Names' ಎಂಬ ಲೇಖನ ಮಹತ್ವಪೂರ್ಣವಾದದ್ದು. ತಮಿಳುನಾಡಿನ ಎನ್.ಜ್ಞಾನಪ್ರಕಾಶ್ 1916ರಲ್ಲಿ ಶ್ರೀಲಂಕಾದಲ್ಲಿ ತಮಿಳು ಭಾಷಿಕರು ನೆಲೆಸಿರುವ ನೆಲೆಗಳ ಮೇಲೆ ಬಂದ ಲೇಖನ 'Sinhalese Place Names in Jaffna Peninsulla' ಹಾಗೂ 1917ರಲ್ಲಿ ಬಿ.ಹಾರ್ಸ್‌ಬರ್ಗ್‌ರವರ 'Place Names in Jaffna' ಪ್ರಮುಖವಾದವು.

'The Origin and Development of Bangali Language' ಕೃತಿಯಲ್ಲಿ ಐದು ಭಾಗಗಳಾಗಿ ಸ್ಥಳನಾಮಗಳನ್ನು ವರ್ಗೀಕರಿಸಿ, ಭಾರತದಲ್ಲಿ ಸ್ಥಳನಾಮಗಳ ಅಧ್ಯಯನದ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ(1926). 1931ರಲ್ಲಿ ಹಿರಾಲಾಲ್ 'Indian Antiquary'ಯಲ್ಲಿ ಸ್ಥಳನಾಮಗಳನ್ನು ಮೂರು ರೀತಿಯಲ್ಲಿ ವರ್ಗೀಕರಣ ಮಾಡಿದ್ದಾರೆ. ಹಾಗೂ ವಿ.ರಾಮವಿಶರೋಡಿಯವರು 'Journal of Madras Geographical Association' ಲೇಖನದಲ್ಲಿ ಸ್ಥಳನಾಮಗಳನ್ನು ತುಂಬಾ ವಿವರವಾಗಿ ಚರ್ಚಿಸಿದ್ದಾರೆ.

ತೆಲುಗು ಭಾಷೆಯಲ್ಲಿ ಸ್ಥಳನಾಮ ಅಧ್ಯಯನ ಕಾರ್ಯ ಕೈಗೊಂಡವರಲ್ಲಿ ಡಾ.ಚಿಲಕೂರಿ ನಾರಾಯಣರಾವ್ ಒಬ್ಬರು. ಇವರು 1935ರಲ್ಲಿ 'A Study of Place Names of Ananthapuram District' ಲೇಖನದಲ್ಲಿ ಸ್ಥಳನಾಮಗಳಿಂದ ಶಬ್ಧ ವ್ಯುತ್ಪತ್ತಿ ನಿರ್ಣಯಿಸುವಲ್ಲಿ, ಭೌಗೋಳಿಕ ಲಕ್ಷಣ ತಿಳಿಸುವಲ್ಲಿ ನಾಗರೀಕತೆಯ ಇತಿಹಾಸದ ವ್ಯಾಪ್ತಿಯನ್ನು ತಿಳಿಸುವಲ್ಲಿ ಸಹಾಯಕ ಎಂದು ಗ್ರಾಮನಾಮ ಪರಿಶೋಧನೆಯ ಮಹತ್ವವನ್ನು ತಿಳಿಸಿಕೊಟ್ಟರು. ಹಾಗೂ ದ್ರಾವಿಡ ಭಾಷೆಗಳ ಮೇಲಾಗಿರುವ ಸಂಸ್ಕೃತದ ಪ್ರಭಾವ ಗುರುತಿಸಿದರು. ಸ್ಥಳನಾಮಗಳನ್ನು ಹತ್ತೊಂಬತ್ತು ಬಗೆಯಾಗಿ ವರ್ಗೀಕರಿಸಿ, ಐತಿಹಾಸಿಕ ಮತ್ತು ಭಾಷಾ ವೈಜ್ಞಾನಿಕ ವಿಧಾನಗಳಿಂದ ಸ್ಥಳನಾಮಗಳ ಅಧ್ಯಯನ ಮಾಡಬೇಕೆನ್ನುತ್ತಾರೆ.

ರಾವ್‌ಬಹದ್ದೂರ್ ರಾಮಚಂದ್ರ ಚೆಟ್ಟಿಯಾರ್ ಅವರು 'Place Names of Selam District' ಎಂಬ ಲೇಖನದಲ್ಲಿ ಸ್ಥಳನಾಮಗಳನ್ನು 6 ರೀತಿಯಲ್ಲಿ ವರ್ಗೀಕರಿಸಿದ್ದಾರೆ. 1936ರಲ್ಲಿ 'The Original Name of Maxzcvhabalipuram' ಹಾಗೂ 1935ರಲ್ಲಿ 'Place Names if South Canara District' ಮತ್ತು 1939ರಲ್ಲಿ 'Places Names is Tamil Nadu' ಎಂಬ ವಿಚಾರ ಪೂರ್ಣವಾದ ಲೇಖನಗಳನ್ನು ಬರೆದಿದ್ದಾರೆ. ಇವರು ಮುಖ್ಯವಾಗಿ ಭೌಗೋಳಿಕ ಅಂಶಗಳಿಗೆ ಕೇಂದ್ರೀಕರಿಸಿಕೊಂಡು ಅಧ್ಯಯನ ಮಾಡಿರುವುದು ಕಂಡುಬರುತ್ತದೆ. ಭೌಗೋಳಿಕ ಅಂಶಗಳ ನಂತರ ಐತಿಹಾಸಿಕ ಆಧಾರಗಳಿಂದ ಸ್ಥಳನಾಮಗಳನ್ನು ಅಧ್ಯಯನ ಮಾಡಬೇಕೆನ್ನುತ್ತಾರೆ.

1937ರಲ್ಲಿ ಆಂಧ್ರಪ್ರದೇಶದ **ಚಿಲಕೂರಿ ನಾರಾಯಣರಾಯರು 'ಆಂಧ್ರಭಾಷಾ ಚರಿತ್ರೆ'**ಯಲ್ಲಿ ಸ್ಥಳನಾಮ ಅಧ್ಯಯನ ಕಾರ್ಯದ ಸಮಸ್ಯೆಗಳು ಮತ್ತು ಅದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ.

ಕೆ.ಅಚ್ಯುತ ಮೆನನ್ ಅವರು 1943ರಲ್ಲಿ **'ಕೊಚ್ಚಿಯಲೆ ಸ್ಥೂಲ್ ನಾಮ್‌ಗಳ್'** ಎಂಬ ಗ್ರಂಥವನ್ನು ಪ್ರಕಟಿಸಿದರು. ಕಾಳಿದಾಸನ ರಘುವಂಶವನ್ನು ಆಧಾರವಾಗಿಟ್ಟುಕೊಂಡು ರಘು ಮಹಾರಾಜನು ದಿಗ್ವಿಜಯ ಕೈಗೊಂಡ ಸ್ಥಳಗಳ ಆಧಾರದ ಮೇಲೆ ಪ್ರಾಚೀನ ಭಾರತದ ಗಡಿರೇಖೆಗಳನ್ನು ಗುರುತಿಸುವ ಪ್ರಯತ್ನ ಮಾಡಿ; ಇಂದಿನ ಬಲೂಚಿಸ್ಥಾನ ಮತ್ತು ಅಫ್ಘಾನಿಸ್ಥಾನ ಪ್ರಾಚೀನ ಭಾರತದ ಭಾಗವಾಗಿದ್ದವು ಎಂದು ಸ್ಪಷ್ಟಪಡಿಸಿದ್ದಾರೆ.

1944ರಲ್ಲಿ ಟಿ.ಲಕ್ಷಣಪಿಳ್ಳೆ ಮತ್ತು 1956ರಲ್ಲಿ ಟಿ.ಕೆ.ಜೋಸೆಫ್ ಅವರುಗಳು 'ಕೇರಳ ಸ್ಥಳನಾಮದಲ್ಲಿ ಭೌಗೋಳಿಕತೆಯ ಅವಶ್ಯಕತೆ ಮತ್ತು ತೌಲನಿಕ ಅಧ್ಯಯನದ ಅವಶ್ಯಕತೆ' ಎಂಬ ಲೇಖನಗಳನ್ನು ಪ್ರಕಟಿಸಿದರು. ಪ್ರೊ.ಎಲಂಕುಲಂ ಕುಂಜನ್‌ಪಿಳ್ಳೈ, ಪ್ರೊ.ತಿರನಲ್ಲೂರ್ ಕರುಣಾಕರ್ ಹಾಗೂ ಇತರೆ ವಿದ್ವಾಂಸರು ಕೇರಳದ ಇತಿಹಾಸದ ಪುನರ್ ರಚನೆಯಲ್ಲಿ ಸ್ಥಳ ನಿರ್ಮಾಣದ ಮಹತ್ವವನ್ನು ಕುರಿತು ಲೇಖನಗಳನ್ನು ಬರೆದರು. ವಿ.ವಿ.ಕೆ.ವಲತ್ ಅವರು 1969 ಹಾಗೂ 1978ರಲ್ಲಿ ಕೇರಳ ಸ್ಥಳನಾಮ ಕುರಿತು ಎಂದು ಅತ್ಯುತ್ತಮ ಗ್ರಂಥಗಳನ್ನು ಪ್ರಕಟಿಸಿದರು. ಟಿ.ಬಾಲಕೃಷ್ಣನ್ ನಾಯಕ್, ಎನ್.ಪಿ.ಕೃಷ್ಣ ವಾರಿಯರ್, ಎನ್.ಆರ್.ಗೋಪಿನಾಥ್ ಪಿಳ್ಳೈ, ಎಂ.ಆರ್.ರಾಘವ ವಾರಿಯರ್, ಎಂ.ಜಿ.ಎನ್.ನಾರಾಯಣನ್, ಕೇಶ್ವನ್, ಡಾ.ಪುದುಚೇರಿ ರಾಮಚಂದ್ರನ್ ಮೊದಲಾದವರು ಸ್ಥಳನಾಮ ಸಂಶೋಧನೆ ಒಂದು ಹೊಸ ಶಾಖೆಯಾಗಿ ಸಂಶೋಧನಾ ಕ್ಷೇತ್ರದಲ್ಲಿ ಗುರುತಿಸಿಕೊಂಡರು. ಅದೇ ರೀತಿ ಡಾ.ಕೆ.ಎಂ.ಜಾರ್ಜ್ 'Place Name of Southern India and A. Generic Approach to Toponymy' ಲೇಖನಗಳು ಈ ಕ್ಷೇತ್ರಕ್ಕೆ ನೀಡಿದ ಅತ್ಯುತ್ತಮ ಕೊಡುಗೆಗಳಾಗಿವೆ.

ನೆರೆಯ ಆಂಧ್ರಪ್ರದೇಶದಲ್ಲೂ ಕೂಡ ಸ್ಥಳನಾಮ ಕುರಿತ ಅಧ್ಯಯನ ಸಂಗೋಪಸಾಂಗವಾಗಿ ನಡೆದವು. ಎಂ.ಸೋಮಯಾಜಲು 1945ರಲ್ಲಿ 'ಜನ ಪದಮುಲು', 1957ರಲ್ಲಿ ಶ್ರೀಮತಿ ಎಸ್.ಕೃಷ್ಣಕುಮಾರಿ 'ತೆಲುಗು ಊರ್ಲು ಪೇರ್ಲು', 1969ರಲ್ಲಿ ಟಿ.ಡೋಣಪ್ಪ 'ಪಚ್ಚಣಾರು ಪೇರ್ಲು' ಹಾಗೂ 'ಪೂರ್ವೋತ್ತರಲು' ಲೇಖನಗಳ ಮೂಲಕ ಸ್ಥಳನಾಮ ಅಧ್ಯಯನ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಈ ಕ್ಷೇತ್ರ ವಿಸ್ತರಿಸಲು ಕಾರಣೀಭೂತರಾಗಿದ್ದಾರೆ.

1921ರಲ್ಲಿ ಡಾ.ಬಿ.ರಾಧಾಕೃಷ್ಣಮೂರ್ತಿಯವರು, 'Early Telugu Inscription' ಎಂಬ ಲೇಖನ ಪ್ರಕಟಿಸಿ ಅದರಲ್ಲಿ ತೆಲುಗು ಸ್ಥಳನಾಮಗಳ ಮೂಲ ನಿಷ್ಪತ್ತಿ ಕುರಿತು ಚರ್ಚಿಸಿದ್ದಾರೆ. ಇವರ ಪಿಎಚ್.ಡಿ. ಮಹಾಪ್ರಬಂಧವಾದ 'A Histroical and Caparative Grammer of Early Telugu Inscription' (1964) ನಲ್ಲಿ ಐತಿಹಾಸಿಕ ಸ್ಥಳನಾಮಗಳ ಬಗ್ಗೆ ಹೆಚ್ಚು ಒತ್ತು ನೀಡಿ ಚರ್ಚಿಸಿದ್ದಾರೆ.

ಭಾಷಾಶಾಸ್ತ್ರದ ದೃಷ್ಟಿಯಿಂದ ತಮಿಳು ಸ್ಥಳನಾಮಗಳ ಕ್ಷೇತ್ರದಲ್ಲಿ ಗುರುತಿಸಿಕೊಂಡ ವಿದ್ವಾಂಸರಲ್ಲಿ ಆರ್.ಪಿ.ಸೇತುಪಿಳ್ಳೆಯವರಿಗೆ ಅಗ್ರಸ್ಥಾನ ಸಲ್ಲುತ್ತದೆ. 'Tomil Kamurum Perum' ಹಾಗೂ 'ಸಂಗಂ ಸಾಹಿತ್ಯದ ಕವಿಗಳು ಮತ್ತು ಸ್ಥಳಗಳು' ಎಂಬ ಲೇಖನ

ಬಹುಮುಖ್ಯವಾದವು. 1956ರಲ್ಲಿ ಸ್ಥಳನಾಮ ಕುರಿತಾದ ಅವರ ಮಹಾಗ್ರಂಥ 'ತಮಿಗಂ ಊರುಂ ಪೇರುಂ' ಅಚ್ಚಾಯಿತು. ಉತ್ತರಾಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ಥಳನಾಮಗಳನ್ನು ಹನ್ನೊಂದು ವಿಧವಾಗಿ ವರ್ಗೀಕರಿಸಿದ್ದಾರೆ. ಕನ್ನಡ, ತೆಲುಗು, ಮಲಯಾಳಂ, ತುಳು ಮೊದಲಾದ ದ್ರಾವಿಡ ಭಾಷಾ ವೃಂದದ ಸ್ಥಳನಾಮಗಳನ್ನು ಗಮನದಲ್ಲಿಟ್ಟುಕೊಂಡು ತೌಲನಿಕ ಅಧ್ಯಯನ ನಡೆಸಿದ್ದಾರೆ. ಇವರ ಮಾರ್ಗದರ್ಶನದಲ್ಲಿಯೇ 'History Place of Ancient Tamilnadu' ಎಂಬ ಮಹಾನಿಬಂಧಕ್ಕೆ ಟಿ.ಎ.ಚೊಕ್ಕಲಿಂಗಂ ಎಂಲಿಟ್ ಪದವಿ ಗಳಿಸಿದ್ದರೆ; ಡಾ.ಎಸ್.ವಿ.ಐ.ಸುಬ್ರಮಣ್ಯಂ ಅವರ ಮಾರ್ಗದರ್ಶನದಲ್ಲಿ ಡಾ.ಎಸ್.ಜ್ಞಾನಿಮುತ್ತು 1972ರಲ್ಲಿ 'Place Names of Kenyakumari District' ವಿಷಯದಡಿಯಲ್ಲಿ ಕೇರಳ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದುಕೊಂಡರು.

ಇದರಲ್ಲಿ ತಿರುವಾಂಕೂರು ಜಿಲ್ಲೆಯ ಸುಮಾರು 1200 ಸ್ಥಳನಾಮಗಳನ್ನು, ಕನ್ಯಾಕುಮಾರಿ ಜಿಲ್ಲೆಯ ಸ್ಥಳನಾಮಗಳೊಡನೆ ಹೋಲಿಸಿ ಸಾಮ್ಯ ವೈಷಮ್ಯಗಳನ್ನು ಗುರುತಿಸಿ, ಅನೇಕ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸಿಕೊಟ್ಟಿದ್ದಾರೆ. ಇವರು ಸ್ಥಳನಾಮಗಳನ್ನು ಮೂರು ಬಗೆಯಲ್ಲಿ ವರ್ಗೀಕರಿಸಿದ್ದಾರೆ.

ಡಾ.ಸುಬ್ಬುರಾಯಲು ಅವರು 'Political Geography of the Chola Country' (1973) ಮಹಾನಿಬಂಧಕ್ಕೆ ಪಿಎಚ್.ಡಿ ಪದವಿ ಪಡೆದರು. ಇದರಲ್ಲಿ ಕ್ರಿ.ಶ.800 ರಿಂದ 1200ರ ವರೆಗಿನ ಶಾಸನೋಕ್ತ ಸ್ಥಳನಾಮ ಘಟಕಗಳ ಅಧ್ಯಯನವನ್ನು ಗಮನಿಸಲಾಗಿದೆ. ಇದೇ ರೀತಿಯಲ್ಲಿ ಕೆ.ಎಲ್.ವೈದ್ಯನಾಥನ್ ಅವರ 'The Ancient Geography of the Konga Country' ನಿಬಂಧ ಗಮನಾರ್ಹವಾದುದಾಗಿದೆ.

ಅಷ್ಟೇ ಅಲ್ಲದೆ ತಮಿಳುನಾಡಿನ ವಿದ್ವಾಂಸರಾದ ಎಂ.ಭಾಸ್ಕರ್ ತೊಂಡೈಮನ್, ಎಸ್.ಸುಬ್ಬಯ್ಯ, ಡಾ.ಎಸ್.ಸುಬ್ಬುರೆಡ್ಡಿಯಾರ್, ಎ.ರಾಜೇಂದ್ರನ್ ಅವರು ತಮಿಳುನಾಡಿನ ಪುಣ್ಯಕ್ಷೇತ್ರಗಳ, ಐತಿಹಾಸಿಕ ಮತ್ತು ಧಾರ್ಮಿಕ ಸ್ಥಳಗಳ ಮಹತ್ವವನ್ನು ಗುರುತಿಸುವ ಕಾರ್ಯ ಮಾಡಿದ್ದಾರೆ.

ಕೇರಳ ವಿಶ್ವವಿದ್ಯಾಲಯದ ತಮಿಳು ವಿಭಾಗದ ಅಧ್ಯಾಪಕರಾದ ಕೆ.ನಚ್ಚಿಮುತ್ತು ಅವರು ಕೊಯಮತ್ತೂರು ಜಿಲ್ಲೆಯ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. 1971ರಲ್ಲಿ

‘ಪಾಳೆಯಂ’ ಎಂಬ ದ್ವಿತೀಯಾಂಶದ ನಿಷ್ಪತ್ತಿಯ ಬಗೆಗೆ ಒಂದು ಪ್ರೌಢ ನಿಬಂಧವನ್ನು ಪ್ರಕಟಿಸಿದ್ದಾರೆ. ಹಾಗೂ ‘Methodlogy is Place Names Studies’ ಗ್ರಂಥವನ್ನು ಹೊರ ತಂದಿದ್ದಾರೆ.

1976ರಲ್ಲಿ ಕೇತು ವಿಶ್ವನಾಥರೆಡ್ಡಿಯವರು ಪ್ರಕಟಿಸಿರುವ ಕಡಪ ಜಿಲ್ಲೆಯ ಸ್ಥಳನಾಮ ಕುರಿತ ಮಹಾನಿಬಂಧವು ಭಾರತೀಯ ಸ್ಥಳನಾಮ ಸಂಶೋಧಕರಿಗೆ ಕ್ಷೇತ್ರಕಾರ್ಯ, ನಾಮ ಸಂಗ್ರಹ, ವಿಶ್ಲೇಷಣೆ, ಕೋಶ ಸಿದ್ಧತೆ ಮೊದಲಾದವುಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಕೊಡುವ ಅತ್ಯುತ್ತಮ ಗ್ರಂಥವಾಗಿದೆ.

1978ರಲ್ಲಿ ಮೈಸೂರಿನಲ್ಲಿ ಸ್ಥಾಪಿತವಾಗಿರುವ **‘ಭಾರತೀಯ ಸ್ಥಳನಾಮ ಸಂಸ್ಥೆ’** ಸ್ಥಳನಾಮ ಅಧ್ಯಯನಕ್ಕೆ ಸಹಾಯಕವಾಗಿದೆ. ಇದರ ಸಂಸ್ಥಾಪಕರು ಪ್ರೊ. ದೇ.ಜವರೇಗೌಡರು. ಈ ಸಂಸ್ಥೆ ಈಗಾಗಲೇ ಅನೇಕ ವಾರ್ಷಿಕ ಸಂಚಿಕೆಯನ್ನು ಹೊರತಂದಿದ್ದು, ಆ ಸಂಚಿಕೆಗಳು ನಾಡಿನ ಸಂಶೋಧನ ವಿದ್ಯಾರ್ಥಿಗಳಿಗೆ ಬಹುಮುಖ ಉಪಯೋಗಿಯಾದ ಕೃತಿಗಳೆನಿಸಿವೆ. ಈ ಸಂಸ್ಥೆಯು ಸ್ಥಳನಾಮಗಳನ್ನು ಕುರಿತ ವಿಚಾರಗೋಷ್ಠಿಗಳನ್ನು ನಡೆಸುತ್ತ ಬಂದಿದೆ. 1978ರಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಕೆಲವು ಧ್ಯೇಯೋದ್ದೇಶಗಳನ್ನಿಟ್ಟುಕೊಂಡಿದೆ. ಅವುಗಳು ಈ ಕೆಳಗಿನಂತಿವೆ:

1. “ಸ್ಥಳ ಮತ್ತು ವ್ಯಕ್ತಿನಾಮಗಳ ಕುರಿತಾದ ಸಂಶೋಧನೆ ಕೈಗೊಳ್ಳುವುದು ಅಲ್ಲದೆ ಪ್ರೋತ್ಸಾಹಿಸುವುದು.
2. ಸ್ಥಳನಾಮ ಹಾಗೂ ವ್ಯಕ್ತಿನಾಮಗಳನ್ನು ವೈಜ್ಞಾನಿಕ ರೀತಿಯಲ್ಲಿ ಅಧ್ಯಯನ ಮಾಡಲು ಆಸಕ್ತರಾದವರನ್ನು ಒಂದು ಕಡೆ ಸೇರುವಂತೆ ಮಾಡುವುದು.
3. ಸ್ಥಳನಾಮಗಳು ಹಾಗೂ ವ್ಯಕ್ತಿನಾಮಗಳಿಗೆ ಸಂಬಂಧಿಸಿದ ಏಕ ಪ್ರಕಾರ ವಿಷಯಗಳನ್ನೊಳಗೊಂಡ ಗ್ರಂಥಗಳನ್ನು ಪ್ರಕಟಿಸುವುದು.
4. ಪರಿಷತ್ತಿನ ಆಶ್ರಯದಲ್ಲಿ ವಾರ್ಷಿಕ ಸಂಚಿಕೆಯನ್ನು ಹೊರತರುವುದು.
5. ಪ್ರತಿವರ್ಷ ಭಾರತೀಯ ಭಾಷೆಗೆ ಸಂಬಂಧಿಸಿದಂತೆ ಸ್ಥಳನಾಮಗಳ ವಿಚಾರಗೋಷ್ಠಿ, ಅಧಿವೇಶನಗಳನ್ನು ನಡೆಸುವುದು.
6. ಸ್ಥಳನಾಮ ಸಂಶೋಧನೆಯಲ್ಲಿ ವಿದ್ಯಾರ್ಥಿ ಮತ್ತು ಪಂಡಿತರನ್ನು ತೊಡಗಿಸುವುದು.”[25]

ಇದೇ ಸಂಸ್ಥೆಯು ತಿರುವನಂತಪುರದಲ್ಲಿ ಒಂದು ಮಾಸಿಕ ಪತ್ರಿಕೆಯನ್ನು ಹೊರತರುತ್ತಿದೆ. ಗುಜರಾತಿನ ಬರೋಡ ನಗರದಲ್ಲಿ **‘ಗುಜರಾತಿ ಸ್ಥಳನಾಮ ಸಂಸ್ಥೆಯು’** ಈ ನಿಟ್ಟಿನಲ್ಲಿ ಉಪಯುಕ್ತ

ಕೆಲಸವನ್ನು ಸಾಧಿಸುತ್ತಾ ಬಂದಿದೆ. ತಮಿಳುನಾಡು, ಆಂಧ್ರ ಮುಂತಾದ ರಾಜ್ಯಗಳ ವಿಶ್ವವಿದ್ಯಾಲಯಗಳ ಭಾಷಾ ವಿಭಾಗಗಳಲ್ಲಿ ಪದವಿಗಳಿಗಾಗಿ ವ್ಯಾಪಕವಾಗಿ ಅಧ್ಯಯನಗಳು ನಡೆಯುತ್ತಿವೆ. ವಿಷಯದ ವೈವಿಧ್ಯದ ದೃಷ್ಟಿಯಿಂದ ಈಗ ನಡೆಯುತ್ತಿರುವ ಪ್ರಗತಿ ತೀರಾ ಕಡಿಮೆ ಎನಿಸುತ್ತದೆ. ಇನ್ನಷ್ಟು ವೇಗವಾಗಿ, ವ್ಯಾಪಕವಾಗಿ ಸ್ಥಳನಾಮ ಅಧ್ಯಯನಗಳು ನಡೆಯದಿದ್ದರೆ ಈ ಕ್ಷೇತ್ರದಲ್ಲಿ ಭಾರತ ಹಿಂದುಳಿಯ ಬೇಕಾಗುತ್ತದೆ.

1987ರಲ್ಲಿ ಪಿ.ರಾಮಚಂದ್ರನ್ ಮತ್ತು ಡಾ.ಕೆ.ನಾಚಿಮುತ್ತು ಅವರು 'Perspective is Indian Place Names' ಎಂಬ ಕೃತಿಯನ್ನು ಪ್ರಕಟಿಸಿ ಭಾರತದಲ್ಲಿ ಸದ್ಯ ನಡೆಯುತ್ತಿರುವ ಸ್ಥಳನಾಮಾಧ್ಯಯನಗಳ ಸಮಗ್ರ ಆಲೋಚನೆ ಮತ್ತು ಸಂಶೋಧನಾ ವಿಧಾನಗಳನ್ನು ತಿಳಿಸಿಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ಸ್ಥಳನಾಮಗಳನ್ನು ಕುರಿತಂತೆ ಅಧ್ಯಯನ ಪ್ರಾರಂಭವಾದುದು ಇತ್ತೀಚೆಗಷ್ಟೆ. ತಮಿಳು, ತೆಲುಗು, ಮಲಯಾಳಂ ಭಾಷೆಗಳಲ್ಲಿ ನಡೆದಿರುವ ಸ್ಥಳನಾಮ ಅಧ್ಯಯನಗಳೊಡನೆ ಹೋಲಿಸಿದಾಗ ಕನ್ನಡದಲ್ಲಿ ನಡೆದಿರುವ ಇಂತಹ ಅಧ್ಯಯನಗಳು ತೀರಾ ಕಡಿಮೆ ಎಂದೇ ಹೇಳಬೇಕಾಗುತ್ತದೆ.

3) ಕನ್ನಡ ಸ್ಥಳನಾಮಾಧ್ಯಯನದ ಇತಿಹಾಸ

ಭಾರತದಲ್ಲಿ ಸ್ಥಳನಾಮ ಅಧ್ಯಯನವು ಒಂದು ಹೊಸದಾದ ಜ್ಞಾನಶಾಖೆಯಾಗಿ ಐದಾರು ದಶಕಗಳಿಂದಲೂ ಅಧ್ಯಯನಕ್ಕೆ ಒಳಪಡುತ್ತಲಿದೆ. ಅದರಂತೆಯೇ ಕರ್ನಾಟಕದ ಸ್ಥಳನಾಮ ಅಧ್ಯಯನಕ್ಕೂ ಐದಾರು ದಶಕಗಳ ಇತಿಹಾಸವಿರುವುದುಂಟು. ಇದಕ್ಕಿಂತ ಮೊದಲು ಸ್ಥಳನಾಮಗಳು ಅಧ್ಯಯನಕ್ಕೆ ಯೋಗ್ಯವಾದ ವಸ್ತುವಲ್ಲ ಎಂಬ ಶಂಕೆ ಮೂಡಿರಬಹುದು. ನಂತರದಲ್ಲಿ ಪಾಶ್ಚಿಮಾತ್ಯರ ಪ್ರೇರಣೆಗೆ ಒಳಗಾಗಿ ಇದನ್ನು ಸಹ ಉಳಿದ ಜ್ಞಾನ ಶಿಸ್ತುಗಳಂತೆ ಅಧ್ಯಯನಕ್ಕೆ ಒಳಪಡಿಸಲಿಲ್ಲವಾದರೂ ಆರಂಭಿಕ ಕಾರ್ಯವನ್ನು ಮೆಚ್ಚಲೇಬೇಕಾದುದು ಅವಶ್ಯಕ.

ಈ ಹಿನ್ನೆಲೆಯಿಂದ ನೋಡಿದಾಗ ಕರ್ನಲ್ ಮೆಕೆಂಜಿ ಗ್ರಾಮಚರಿತ್ರೆಗಳಾದ ಕೈಫಿಯತ್ತುಗಳನ್ನು ಬರೆಸಿದರೂ ಇವು ಅಲ್ಲಿಯ ಶಾನುಭೋಗರೋ, ಅಕ್ಷರತಜ್ಞರೋ ಬರೆದುಕೊಟ್ಟವುಗಳಾಗಿದ್ದು, ಅವರು ಅಲ್ಲಿಯ ಸ್ಥಳನಾಮ ಪುರಾಣಗಳನ್ನೋ, ಪ್ರಚಲಿತ ವದಂತಿಗಳನ್ನೋ ಅವಲಂಬಿಸಿರುವುದರಿಂದ ಈ ಘಟ್ಟದಲ್ಲಿಯೂ ಗ್ರಾಮನಾಮ ವ್ಯಾಸಂಗಕ್ಕೆ ಉಪಯೋಗ ಬೀಳುವ ಮಾಹಿತಿ ಹುಟ್ಟಿರಲಿಲ್ಲವೆಂದೇ ಹೇಳಬೇಕು. ಕಿಟಲ್ ನಿಘಂಟು ಕೆಲವು

ಊರುಗಳ ಹೆಸರುಗಳನ್ನು ಗುರುತಿಸಿದರೂ ಅವುಗಳ ನಿಷ್ಪತ್ತಿಯ ಬಗ್ಗೆ ತಟಸ್ಥವಾಗಿದೆ. ಹೀಗಾಗಿ ಸಿ.ಹಯವದನರಾಯರು ಮೈಸೂರು ಗೆಜೆಟಿಯರ್‌ನಲ್ಲಿ ಕೆಲವು ನಾಮಗಳನ್ನು ಕುರಿತು ನಡೆಸಿರುವ ವಿಶ್ಲೇಷಣೆ ಸಮರ್ಪಕವಾಗಿಲ್ಲದಿದ್ದರೂ ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಮಾರ್ಗದರ್ಶನ ಸೂಚನೆಗಳು ದೊರೆಯುತ್ತವೆಂಬುದು ನಿಜ. ಆದರೆ ಈ ದಿಸೆಯಲ್ಲಿ ಸ್ತುತ್ಯಾರ್ಹ ಸಂಶೋಧನೆ ನಡೆಸಿ ಕರ್ನಾಟಕದ ಸ್ಥಳನಾಮಗಳ ಬಗ್ಗೆ ಮೊದಲು ಬಹು ಪ್ರಮಾಣದಲ್ಲಿ ಕ್ಷ-ಕಿರಣ ಬೀರಿದವರೆಂದರೆ ಶಂ.ಬಾ.ಜೋಶಿಯವರು. ಇವರು ತಮ್ಮ 'ಕಂನಾಡ ಕಥೆಯಲ್ಲಿ' ಸ್ಥಳನಾಮಗಳ ಅಧ್ಯಯನದ ತತ್ವಗಳನ್ನು ಪ್ರತಿಪಾದಿಸಿದ್ದಾರಲ್ಲದೆ ಅವುಗಳ ಹಿನ್ನೆಲೆಯಲ್ಲಿ ಇತಿಹಾಸ, ಪುರಾಣ, ಧರ್ಮ, ಜನಾಂಗ ಮತ್ತು ಸಂಸ್ಕೃತಿಗಳ ಮೇಲೆ ಮಹತ್ವ ಪೂರ್ಣ ಬೆಳಕನ್ನು ಚೆಲ್ಲಿದ್ದಾರೆ. ಉತ್ತರ ಭಾರತದ ಸ್ಥಳನಾಮಗಳಲ್ಲಿ ಕನ್ನಡದ ಹೆಜ್ಜೆಗಳನ್ನು ಗುರುತಿಸಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಕರ್ನಾಟಕದ ಸ್ಥಳನಾಮಗಳನ್ನು ಇಪ್ಪತ್ತೆರಡು ವರ್ಗಗಳನ್ನಾಗಿ ವಿಂಗಡಿಸಿದ್ದಾರೆ. ಇವುಗಳ ತರುವಾಯ ಡಾ.ಎಂ.ಚಿದಾನಂದಮೂರ್ತಿ, ದೇ.ಜ.ಗೌ, ಕೆಮ್ತೂರುರಘುಪತಿಭಟ್ಟ, ವಿ.ಗೋಪಾಲಕೃಷ್ಣ, ಡಾ.ಎಂ.ಎಂ.ಕಲ್ಬುರ್ಗಿ ಇನ್ನೂ ಮುಂತಾದವರ ಕೃತಿಗಳು ಗಮನಾರ್ಹವಾಗಿವೆ.

ಇದುವರೆವಿಗೂ ಕನ್ನಡದಲ್ಲಿ ಸ್ಥಳನಾಮಗಳ ಕುರಿತು ನಡೆದ ಅಧ್ಯಯನಗಳು ಹಾಗೂ ಸಂಶೋಧನೆಗಳ ಸ್ಥೂಲ ಪರಿಚಯವನ್ನು ಈ ಕೆಳಗಿನಂತೆ ಮಾಡಿಕೊಡಲಾಗಿದೆ.

1) ಎಡೆಗಳು ಹೇಳುವ ಕಂನಾಡ ಕತೆ – ಡಾ.ಶಂ.ಬಾ.ಜೋಶಿ, 1947 :

'ಎಡೆಗಳು ಹೇಳುವ ಕಂನಾಡ ಕತೆ' ಶಂ.ಬಾ. ಅವರ ಮಹತ್ವದ ಕೃತಿಯಾಗಿದೆ. ಎಡೆಗಳ ಹೆಸರಿನ ಹಿನ್ನೆಲೆಯಲ್ಲಿ ನಮ್ಮ ನಾಡಿನ ಇತಿಹಾಸ, ಪುರಾಣ, ರೂಢಿ, ಸಂಪ್ರದಾಯ ಮತ್ತು ಪೂರ್ವ ಪರಂಪರೆಗಳನ್ನು ಮಾನವ ಸಮಾಜ ವಿಕಾಸ ಶಾಸ್ತ್ರದ ಬೆಂಬಲದಿಂದ ಹೊಂದಿಸಿ ಹೇಳುವುದೇ ಈ ಕೃತಿಯ ವೈಶಿಷ್ಟ್ಯ. ಸ್ಥಳನಾಮಗಳು ಸಾಮಾಜಿಕ ಇತಿಹಾಸದಲ್ಲಿ ಮನುಷ್ಯನನ್ನು ಅರಿಯುವುದಕ್ಕೆ ಹೇಗೆ ಮಹತ್ವದ್ದಾಗಿದೆ ಎಂಬುದನ್ನು ಶಂಬಾ ವಿವರಿಸುತ್ತಾರೆ. ಪಟ್ಟಿ, ಪಾಡಿ, ವಾಡ–ಹಟ್ಟಿ ಮೊದಲಾದವು ಗ್ರಾಮ ನಾಮದ ರೂಪಗಳು, ಜನಾಂಗದ ವಾಸಸ್ಥಾನ ಸೂಚಕಗಳು ಎಂದು ಶಂಬಾ ಅಭಿಪ್ರಾಯ ಪಡುತ್ತಾರೆ. ಹೀಗೆ ಕನ್ನಡ ನಾಡಿನಲ್ಲಿ ಸ್ಥಳನಾಮದ ಅಧ್ಯಯನದ ಬುನಾದಿಯನ್ನು ಶಂ.ಬಾ.ಜೋಶಿಯವರು ಹಾಕಿದರು. ಆ ಮೂಲಕ ಕನ್ನಡ ಸಂಸ್ಕೃತಿಯನ್ನು ಉತ್ತರ ಭಾರತದಲ್ಲಿಯೂ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ನಾಮಾಧ್ಯಯನಕ್ಕೆ 'ಎಡೆಗಳು ಹೇಳುವ ಕಂನಾಡ ಕತೆ' ಮೊದಲ ಆಕರ ಗ್ರಂಥವಾಗಿದೆ. ಈ ದೃಷ್ಟಿಯಿಂದ ನಾಮಾಧ್ಯಯನಕ್ಕೆ ಜೋಶಿಯವರ ಈ ಕೃತಿ ಬಹುಮುಖ್ಯ ಆಕರಗಳೆಂದು ನಾವು ಗುರುತಿಸಬಹುದು.

2) **ವಾಗರ್ಥ – ಡಾ.ಎಂ.ಚಿದಾನಂದಮೂರ್ತಿ, 1981 :**

ಸ್ಥಳನಾಮ ಅಧ್ಯಯನ ಕ್ಷೇತ್ರಕ್ಕೆ ಮುಖ್ಯವಾದ ಆಕರ ಗ್ರಂಥವಿದು. ಇಲ್ಲಿ ಸ್ಥಳನಾಮಕ್ಕೆ ಸಂಬಂಧಿಸಿದ ಐದು ಲೇಖನಗಳಿವೆ. ಕರ್ನಾಟಕದ ಸ್ಥಳನಾಮಗಳು ಎಂಬಲ್ಲಿ ಅಧ್ಯಯನದ ಇತಿಹಾಸ, ವಾರ್ಗಿಕ, ನಿರ್ದಿಷ್ಟಕಗಳ ವೈಜ್ಞಾನಿಕ ವರ್ಗೀಕರಣ, ಸ್ಥಳನಾಮಗಳ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ಮಹತ್ವ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಊರ ಹೆಸರುಗಳ ಸೂಚಕಾಂಶಗಳು ಎಂಬಲ್ಲಿ ಬ್ರಾಹ್ಮಣ, ಅಗ್ರಹಾರ, ಮಂಗಲ, ಆಲ, ಬೊಮ್ಮ, ಶ್ರೋತ್ರಿಯ, ಮಹಾಜನ, ಹಾರೋ ಮುಂತಾದ ಪದಗಳು ಪದಾದಿ ಅಥವಾ ಪದಾಂತ್ಯದಲ್ಲಿದ್ದರೆ ಅವು ಬ್ರಾಹ್ಮಣರಿಗೆ ದಾನವಾಗಿ ನೀಡಿದ ಊರುಗಳು ಎಂದಿದ್ದಾರೆ. ದೇಕಬ್ಬೆ ಶಾಸನದ ಸ್ಥಳನಾಮಗಳನ್ನು ಕುರಿತು ಎಂಬ ಲೇಖನದಲ್ಲಿ ಕೆಲವು ಶಾಸನೋಕ್ತ ಐತಿಹಾಸಿಕ ಪ್ರಸಿದ್ಧ ನಾಡುಗಳ ಉಲ್ಲೇಖವಿದೆ. ಈ ಕೃತಿಯ 5 ಲೇಖನಗಳು ಸ್ಥಳನಾಮ ವಿಜ್ಞಾನದ ಪ್ರತಿಯೊಂದು ಅಂಶವನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ. ಈ ದೃಷ್ಟಿಯಿಂದ ಇದೊಂದು ದಾರಿದೀಪ ಕೃತಿಯೆಂದರೆ ತಪ್ಪೇನಿಲ್ಲ.

3) **ಸ್ಥಳನಾಮ ಅಧ್ಯಯನಗಳು – ವಿ.ಗೋಪಾಲಕೃಷ್ಣ, 1987 :**

ಈ ಕೃತಿಯಲ್ಲಿ ಎಂಟು ಲೇಖನಗಳಿದ್ದು, ಸ್ಥಳನಾಮ ಅಧ್ಯಯನ ಸಮಸ್ಯೆಗಳು ಹಾಗೂ ನಿವಾರಣೆ ಎಂಬಲ್ಲಿ ಅಧ್ಯಯನದ ರೀತಿ, ಸ್ಥಳನಾಮ ಆಕರಗಳ ಶೇಖರಣೆ ಮುಂತಾದವುದರ ಬಗ್ಗೆ ಚರ್ಚಿಸುತ್ತಾ, ಕೋಲಾರದ ಸ್ಥಳನಾಮಗಳ ಸಮೀಕ್ಷೆಯನ್ನು ಮಾಡುತ್ತ, ಸ್ಥಳನಾಮಗಳ ವರ್ಗೀಕರಣ ಮಾಡಿದ್ದಾರೆ. ಪುನರ್ನಾಮಕರಣದಲ್ಲಿ ಸಂಸ್ಕೃತದ ಪ್ರಭಾವ ಇತ್ಯಾದಿ ವಿಷಯವಿದೆ. ಇದೊಂದು ಉತ್ತಮ ಆಕರ ಗ್ರಂಥ.

4) ಕನ್ನಡ ನಾಮ ವಿಜ್ಞಾನ – ಡಾ.ಎಂ.ಎಂ.ಕಲಬುರ್ಗಿ, 1989 :

ಕನ್ನಡದ ನಾಮಾಧ್ಯಯನ ಕ್ಷೇತ್ರಕ್ಕೆ ಕೊಡುಗೆಯಾಗಿ ಎಂ.ಎಂ.ಕಲ್ಬುರ್ಗಿಯವರ ಈ ಕೃತಿ ವೈಜ್ಞಾನಿಕವಾಗಿ ಮೂಡಿ ಬಂದಿದೆ. ಅಧ್ಯಯನದ ಇತಿಹಾಸವನ್ನು ಹೇಳುತ್ತಾ ಈ ಕ್ಷೇತ್ರಕ್ಕೆ ಕಾಲಿಡುವವರಿಗೆ ಶಾಸನ, ಕೈಫಿಯತ್ತು, ಸ್ಥಳಪುರಾಣಗಳು, ಭೌಗೋಳಿಕ ಪರಿಸರ, ಜಾನಪದ ಪರಂಪರೆಯ ಜ್ಞಾನ ಬಹುಮುಖ್ಯವೆಂದು ಹೇಳಿದ್ದಾರೆ. ಸ್ಥಳನಾಮಗಳ ನಿಷ್ಪತ್ತಿಯನ್ನು ಪಾಮರನಿಷ್ಪತ್ತಿ, ಪಂಡಿತನಿಷ್ಪತ್ತಿ, ನಿಜನಿಷ್ಪತ್ತಿ ಎಂದು ಮೂರು ಬಗೆಯಲ್ಲಿ ವಿವರಿಸಿಕೊಂಡಲ್ಲಿ

ಪ್ರಾಮಾಣಿಕ ಅಧ್ಯಯನ ಸಾಧ್ಯವೆಂದು ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ. ಸಂಸ್ಕೃತೀಕರಣ ಮುಂತಾದ ವಿಷಯಗಳನ್ನು ಬಹು ಖಚಿತವಾಗಿ ನಿರೂಪಿಸಿದ್ದಾರೆ.

5) ಸ್ಥಳನಾಮ ವ್ಯಾಸಂಗ – ದೇಜಗೌ, 1990 :

ಸ್ಥಳನಾಮಗಳಿಗೆ ಸಂಬಂಧಿಸಿದ 10 ಲೇಖನಗಳು ಈ ಕೃತಿಯಲ್ಲಿವೆ. ಸ್ಥಳನಾಮಗಳ ಉಗಮ, ಸ್ಥಳನಾಮ ವಿಜ್ಞಾನದ ವ್ಯಾಪ್ತಿ, ಸ್ವಭಾವ, ಇತಿಹಾಸ, ಸಂಶೋಧನಾ ವಿಧಾನ, ವರ್ಗೀಕರಣ, ಸ್ಥಳನಾಮಗಳ ಜಾಯಮಾನ ಹಾಗೂ ಬದಲಾವಣೆ, ಕ್ಷೇತ್ರ ಕಾರ್ಯ, ಗ್ರಾಮನಾಮ ಜಾನಪದ ಹಾಗೂ ಮೈಸೂರು ನಗರದ ಬೀದಿಯ ಹೆಸರುಗಳು ಮುಂತಾದವನ್ನು ವೈಜ್ಞಾನಿಕವಾಗಿ ಸ್ಥಳನಾಮ ವಿಜ್ಞಾನಿಗಳಾದ ದೇಜಗೌ ವಿವರಿಸಿದ್ದಾರೆ.

6) ಕರ್ನಾಟಕ ಗ್ರಾಮಸೂಚಿ – 1985 :

ಇದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹೊರಬಂದಿರುವ ಅಪರೂಪದ ಕೃತಿಯಾಗಿದೆ. ಕರ್ನಾಟಕ ರಾಜ್ಯ ಗ್ರಾಮಗಳ ಜಿಲ್ಲಾ ಹಾಗೂ ತಾಲ್ಲೂಕುವಾರು ವರ್ಣಾನುಕ್ರಮ ಪಟ್ಟಿಯೂ ಇಲ್ಲಿದೆ. ಇದು ಮುಖ್ಯವಾಗಿ ಸಂಶೋಧಕರಿಗೆ, ಆಸಕ್ತರಿಗೆ ಒಂದೆಡೆ ಗ್ರಾಮನಾಮಗಳು ದೊರೆಯಲು ಸಹಾಯಮಾಡುತ್ತದೆ.

7) ಜಾನಪದ ಜಗತ್ತು – ಸಂ.ಪ್ರೊ.ಡಿ.ಲಿಂಗಯ್ಯ ಮತ್ತು ಡಾ.ಚಕ್ಕರೆ ಶಿವಶಂಕರ, 1996 :

ಈ ಸಂಚಿಕೆಯಲ್ಲಿ 19 ಲೇಖನಗಳಿವೆ. ಕರ್ನಾಟಕದ ವಿವಿಧ ಪ್ರದೇಶಕ್ಕೆ ವ್ಯಾಪಿಸಿಕೊಂಡ ಇಲ್ಲಿನ ಲೇಖನಗಳು ಸ್ಥಳನಾಮ ಅಧ್ಯಯನಗಳು ನಡೆದು ಬಂದ ದಾರಿ, ಕನ್ನಡನಾಡಿನಲ್ಲಿ ಅದರ ಬೆಳವಣಿಗೆ, ಅಧ್ಯಯನ ರೂಪರೇಷಗಳು, ಸಮಸ್ಯೆ ನಿವಾರಣೆಗಳು, ಪ್ರಯೋಜನ ಮಹತ್ವ, ಕನ್ನಡ ಗ್ರಾಮನಾಮಗಳ ಮೇಲೆ ತೆಲುಗು ಮರಾಠಿ ಮುಂತಾದ ಅನ್ಯ ಭಾಷೆಯ ಪ್ರಭಾವ, ಭಾಷಾ ವೈಜ್ಞಾನಿಕ ಚರ್ಚೆ ಇಲ್ಲಿದೆ. ನಮ್ಮ ನಾಡಿನ ಮೂಲ ಸೆಲೆಯಾದ ಜಾನಪದದ ನೆಲೆಯಲ್ಲಿ ಸ್ಥಳನಾಮಗಳಿಗೆ ಅಂಟಿಕೊಂಡ ಪುರಾಣ, ಐತಿಹ್ಯ, ಕಾವ್ಯ, ಲಾವಣಿ ಮತ್ತವುಗಳ ಸೊಗಸು, ಶಿಷ್ಟ ಜನರಿಂದಾದ ಸಂಸ್ಕೃತೀಕರಣದ ಛಾಯೆಗಳು, ಜಾನಪದ ನಿಷ್ಪತ್ತಿಗೆ ಹಿಂದಿರುಗುವ ಗ್ರಾಮೀಣ ಜನತೆಯ ಪರಂಪರೆಯ ನಿಷ್ಠೆ, ಒಂದೊಂದು ಊರು ಕತೆಯಿಂದಲೇ ಆರಂಭವಾಗುವ ಬಗೆ, ಒಂದು ಊರಿನ ಹೆಸರು ಹೇಗೆ ಬಂತು ಎಂಬುದಕ್ಕೆ ಜಾನಪದರು ಒಂದು ಸಂಪೂರ್ಣ ಲಾವಣಿಯನ್ನು ಕಟ್ಟಿ ಹಾಡುವ ರೀತಿ, ಹೈದ್ರಾಬಾದ್ ಕರ್ನಾಟಕದಂಥ ಗಡಿ ಪ್ರದೇಶದಲ್ಲಿ ಸ್ಥಳನಾಮಗಳ ಮೇಲಾದ ತೆಲುಗು ಮತ್ತು ಉರ್ದುವಿನ ಪ್ರಭಾವದಿಂದ ಕನ್ನಡ ಗ್ರಾಮನಾಮಗಳ

ಮೇಲಾದ ವಿಶಿಷ್ಟ ಪ್ರಭಾವ, ಪ್ರೇರಣೆ, ಭಾಷಿಕ ಕ್ರಿಯೆಗಳು ಮುಂತಾದ ಬಗೆಗೆ ಇಲ್ಲಿನ ಲೇಖನಗಳು ವಿಶೇಷ ಮಾಹಿತಿಯನ್ನು ನೀಡುತ್ತವೆ. ವಿವಿಧ ಆಯಾಮಗಳಲ್ಲಿ ಬರೆಯಲ್ಪಟ್ಟ ಈ ವಿಶೇಷ ಲೇಖನಗಳು ತುಂಬಾ ಮಹತ್ವವನ್ನು ಪಡೆದಿವೆ.

8) ತುಳುನಾಡಿನ ಸ್ಥಳನಾಮಗಳು – ಕೆಮ್ತೂರು ರಘುಪತಿಭಟ್ಟ, 1979 :

ಈ ಕೃತಿಯು ಸ್ಥಳನಾಮ ವಿಜ್ಞಾನದಲ್ಲಿ ಸಂಶೋಧನಾ ಪದವಿಗೆಂದು ಸಿದ್ಧಪಡಿಸಿದ ಸಂಶೋಧನ ಪ್ರಬಂಧವಾಗಿದೆ. 70ರ ದಶಕದ ಅತ್ಯಂತ ಮಹತ್ವದ ಸಂಶೋಧನೆ ಇದು. ಕನ್ನಡದ ಸ್ಥಳನಾಮ ಕುರಿತ ಮೊದಲ ವೈಜ್ಞಾನಿಕ ಸಂಶೋಧನಾ ಕೃತಿಯಾಗಿದೆ. ಈ ಕೃತಿಯನ್ನು ಭಟ್ಟರು ತುಳುನಾಡಿಗೆ ಸೀಮಿತಪಡಿಸಿ ಜೊತೆಗೆ ಸಾರ್ವತ್ರಿಕ ಎನ್ನಬಹುದಾದ ಅನೇಕ ನಿಯಮಗಳನ್ನು ವಿಶ್ಲೇಷಿಸಿದ್ದಾರೆ. ಒಂಬತ್ತು ವಿಭಾಗ ಮಾಡಿಕೊಂಡು ಪ್ರವೇಶ ಜಾಗದಲ್ಲಿ ಸ್ಥಳನಾಮದ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಿದ್ದಾರೆ. ಸ್ಥಳನಾಮ ಸ್ವರೂಪದಲ್ಲಿ ವಾರ್ಗಿಕ, ನಿರ್ದಿಷ್ಟಗಳ ಸ್ಥಾನ ಮತ್ತು ಸ್ಥಳನಾಮಗಳೆಂದು ವರ್ಗೀಕರಿಸುತ್ತಾರೆ. ಜೊತೆಗೆ ಸಂಸ್ಕೃತೀಕರಣ, ಹೆಸರಿನ ಬದಲಾವಣೆ ಮುಂತಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡು ತುಳುನಾಡಿನ ಒಟ್ಟು ಸ್ಥಳನಾಮ ಘಟಕಗಳನ್ನು 3ನೇ ವಿಭಾಗದಲ್ಲಿ ಪಟ್ಟಿ ಮಾಡಿದ್ದಾರೆ. ಸ್ಥಳವಾಚಕಗಳಲ್ಲಿ ಶಿಲಾವಾಚಿ, ಸಸ್ಯವಾಚಿ, ಕ್ಷೇತ್ರವಾಚಕ, ದಿಗ್ವಾಚಕ, ಸಾಂಸ್ಕೃತಿಕ ಎಂದು ಪರಿಚಯಿಸಿದ್ದಾರೆ. ಕೊನೆಯಲ್ಲಿ ತುಳು ಶಬ್ದದ ಕುರಿತಾದ ದೀರ್ಘ ಚರ್ಚೆ, ಪ್ರತಿ ನಾಮಕರಣ ಈವರೆಗೆ ನಡೆದ ತುಳುನಾಡಿನ ನಾಮಾಧ್ಯಯನಗಳ ವಿವಿಧ ಮಜಲುಗಳನ್ನು ತಿಳಿಸುವಲ್ಲಿ ಸಫಲರಾಗಿದ್ದಾರೆ. ಇಂದಿಗೂ ಪ್ರಸ್ತುತವೆನಿಸುವ ಇವರ ತಾತ್ವಿಕ ನಿಲುವುಗಳು ಸಂಶೋಧನಾ ವಿಧಿ ವಿಧಾನಗಳಲ್ಲಿ ವರ್ಣನಾತ್ಮಕತೆಯನ್ನು ಬಿಂಬಿಸುತ್ತವೆ. ಸಾಂಸ್ಕೃತಿಕ ಅಂಶಗಳನ್ನು ಹೇಳುತ್ತಲೇ ಅನೇಕ ಹೊಸ ಸಾಧ್ಯತೆಗಳ ಕಡೆ ಈ ಕೃತಿಯು ಸುಳಿವನ್ನು ನೀಡುತ್ತದೆ.

9) ಬೀದರ್ ಜಿಲ್ಲೆಯ ಸ್ಥಳನಾಮಗಳು – ಭಂಡೆ ವೈಜನಾಥ, 1990 :

ಇದು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪಿಎಚ್.ಡಿ ನಿಬಂಧ. 16 ಅಧ್ಯಯಗಳಲ್ಲಿ ವಿಸ್ತರಿಕೊಂಡ ಈ ನಿಬಂಧಗಳಲ್ಲಿ 3 ಭಾಗಗಳನ್ನು ಮಾಡಿಕೊಂಡು ಸ್ಥಳನಾಮದ ವಿಜ್ಞಾನ ಇತಿಹಾಸ, ಸ್ವರೂಪ ವಿವೇಚನೆ, ಬೀದರ್ ಜಿಲ್ಲೆಯ ಪರಿಚಯ, ಸ್ಥಳನಾಮ ದಾಖಲಾತಿ ಮತ್ತು ನೊಂದಾವಣಿ, ಸ್ಥಳನಾಮಗಳ ಭಾಷಿಕ ಹಿನ್ನಲೆ, ಇದರಲ್ಲಿ ಪದ ಧ್ವನಿಮಾವ್ಯವಸ್ಥೆ, ಸಂಧಿ ಮತ್ತು ಆಕೃತಿ ಧ್ವನಿಮಾ ವ್ಯವಸ್ಥೆ, ಧ್ವನಿ ವ್ಯತ್ಯಯಗಳು, ಆಕೃತಿಮಾ ವ್ಯವಸ್ಥೆ ಹಾಗೂ ಆವರ್ತನೆ,

ಸ್ಥಳನಾಮ ಪ್ರಕ್ರಿಯೆಗಳು ಒಳಗೊಂಡಿದ್ದು, ಭಾಗ 7ರಲ್ಲಿ ಸ್ಥಳನಾಮಗಳ ಸಂಸ್ಕೃತಿಗಳ ಅಧ್ಯಯನ ಮತ್ತು ವರ್ಗೀಕರಣ ಜಾನಪದದಲ್ಲಿ ಸ್ಥಳನಾಮಗಳು : ಸ್ಥಳನಾಮ ಪ್ರಕಟಣೆ, ಉಪಸಂಹಾರವನ್ನು ಒಳಗೊಂಡಿದೆ.

ಇದು ಸಂಪೂರ್ಣ ವರ್ಣನಾತ್ಮಕ ಮಾದರಿಯನ್ನು ಅನುಸರಿಸಿದೆ. ಜೊತೆಗೆ ಸ್ಥಳನಾಮದ ನಿಷ್ಪತ್ತಿಯ ಕಡೆಗೆ ಗಮನ ಹರಿಸಿಲ್ಲ. ಸುಮಾರು 500 ಪುಟಕ್ಕೆ ಮೀರಿ ವ್ಯಾಪಿಸಿದ ಈ ನಿಬಂಧ ಸ್ಥಳನಾಮ ಅಧ್ಯಯನಕ್ಕೆ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ನೆರವಾಗಬಲ್ಲ ಕೆಲವು ಅಂಶಗಳನ್ನು ನಿರ್ಲಕ್ಷಿಸುವಂತಿಲ್ಲ.

10) ಸಕಲೇಶಪುರ ಪರಿಸರದ ಸ್ಥಳನಾಮಗಳು – ಡಾ.ವಿಶ್ವನಾಥ, 1996 :

ಈ ಕೃತಿಯು ಪಿಎಚ್.ಡಿ ಪದವಿಗೆಂದು ಸಿದ್ದಪಡಿಸಿದ ಸಂಶೋಧನಾ ಪ್ರಬಂಧವಾಗಿದೆ. ಈ ನಿಬಂಧದಲ್ಲಿ 7 ಅಧ್ಯಾಯಗಳಿವೆ. ಸಕಲೇಶಪುರ ಸ್ಥಳದ ಪರಿಸರವನ್ನು ವಿವರಿಸಿದ್ದಾರೆ. ಸಕಲೇಶಪುರದ ಸ್ಥಳಗಳನ್ನು ಐತಿಹಾಸಿಕ, ಸಾಮಾಜಿಕ, ಜಾನಪದೀಯ, ಸಾಂಸ್ಕೃತಿಕ, ಶಾಸನ ಮತ್ತು ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಭಾಷಿಕವಾದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಹಾಗೇ ಸಕಲೇಶಪುರದ ಸ್ಥಳನಾಮಗಳನ್ನು ಭಾಷಿಕ ವೈಜ್ಞಾನಿಕ ಅಧ್ಯಯನದಿಂದ ವರ್ಣಮಾಲೆ, ಸಂಧಿ, ಧ್ವನಿವ್ಯತ್ಯಾಸ, ಅರ್ಥ ಪರಿಶೀಲನೆ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಸಕಲೇಶಪುರದ ಸ್ಥಳನಾಮಗಳನ್ನು ಅಕರಾದಿ ಪಟ್ಟಿಯನ್ನು ನೀಡಿ ಅಲ್ಲಿನ ನಿಷ್ಪತ್ತಿಯನ್ನು ವಿವರಿಸಿದ್ದಾರೆ. ಸಕಲೇಶಪುರದ ಸ್ಥಳನಾಮಗಳನ್ನು ಭಾಷಿಕ ಹಿನ್ನೆಲೆಗೆ ಹೆಚ್ಚಿನ ಮಹತ್ವ ನೀಡಿ ವಿವರಿಸಿದ್ದಾರೆ. ಈ ನಿಬಂಧವು ಮುಂದಿನ ಸ್ಥಳನಾಮಗಳ ಅಧ್ಯಯನಕ್ಕೆ ಅದರಲ್ಲಿಯು ಭಾಷಿಕ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ಅಧ್ಯಯನ ಮಾಡಲು ತುಂಬಾ ಸಹಕಾರಿಯಾಗಿದೆ.

11) ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು – ಡಾ.ಕೆ.ಎಂ.ವೀರಭದ್ರಶರ್ಮ, 1996 :

ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ಮಾಡಿದ ಅಪ್ರಕಟಿತ ಕೃತಿ ಇದು. ನಿಬಂಧದಲ್ಲಿ 10 ಅಧ್ಯಾಯಗಳಿವೆ. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಸರದ ಸ್ವರೂಪವನ್ನು ಮತ್ತು ಆ ಜಿಲ್ಲೆಯನ್ನಾಳಿದ ವಿವಿಧ ರಾಜವಂಶಗಳನ್ನು ಹೇಳಿದ್ದಾರೆ. ನಂತರ ಗ್ರಾಮನಾಮಗಳನ್ನು ಭೌಗೋಳಿಕ, ಸಾಂಸ್ಕೃತಿಕ, ಜನಾಂಗಿಕ ಎಂದು ವರ್ಗೀಕರಿಸಿದ್ದಾರೆ. ಸ್ಥಳನಾಮಗಳ ಹಿನ್ನೆಲೆಯಲ್ಲಿ ಬೌದ್ಧ, ಜೈನ, ವೈಷ್ಣವ, ಶೈವ ಮುಂತಾಗಿ ತರ್ಕಬದ್ಧವಾದ ವಿಚಾರಗಳನ್ನು ಮಂಡಿಸುವ ಮೂಲಕ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಹೇಳಿದ್ದಾರೆ. ಕೃತಿಯು ಸ್ಥಳನಾಮಗಳ ಶಬ್ದಕೋಶವನ್ನು

ಒಳಗೊಂಡಿದೆ. ಸ್ಥಳನಾಮಗಳ ದಾಖಲಾತಿಗಳಿಗಾಗಿ ಶಾಸನ ಮತ್ತಿತರ ಹಳೆಯ ದಾಖಲೆಗಳನ್ನು ದೀರ್ಘವಾಗಿ ನೀಡಲಾಗಿದೆ. ಹೈದ್ರಾಬಾದ್ ಕರ್ನಾಟಕ ಸ್ಥಳನಾಮ ಅಧ್ಯಯನಕಾರರಿಗೆ ಉಪಯುಕ್ತವಾದ ನಿಬಂಧವಾಗಿದೆ.

12) ಪಿರಿಯಾಪಟ್ಟಣ ತಾಲ್ಲೂಕು ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ –ಡಾ.ಎಸ್.ಕೃಷ್ಣಪ್ಪ, 2007:

ಈ ಕೃತಿಯು ಪಿಎಚ್.ಡಿ ಪದವಿಗೆಂದು ಸಿದ್ದಪಡಿಸಿದ ಸಂಶೋಧನಾ ಪ್ರಬಂಧ. ಈ ನಿಬಂಧದಲ್ಲಿ 6 ಅಧ್ಯಾಯಗಳಿವೆ. ಪಿರಿಯಾಪಟ್ಟಣ ತಾಲ್ಲೂಕಿನ ಪರಿಸರವನ್ನು ಮತ್ತು ಆ ತಾಲ್ಲೂಕನ್ನಾಳಿದ ವಿವಿಧ ರಾಜಮನೆತನಗಳನ್ನು ತಿಳಿಸಿದ್ದಾರೆ. ನಂತರ ಗ್ರಾಮಗಳನ್ನು ಸಾಮಾಜಿಕ, ಐತಿಹಾಸಿಕ, ಭೌಗೋಳಿಕ, ಜಾನಪದೀಯ, ಸಾಂಸ್ಕೃತಿಕ, ಭಾಷಿಕವಾಗಿ ವಿಭಾಗ ಮಾಡಿಕೊಂಡು ಅಧ್ಯಯನ ಮಾಡಿದ್ದಾರೆ. ಈ ಕೃತಿಯು ಸ್ಥಳನಾಮಗಳಿಗೆ ಸಂಬಂಧಿಸಿದ ಶಬ್ದಕೋಶವನ್ನು ಒಳಗೊಂಡಿದೆ. ಭಾಷಿಕ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ನೋಡುವಾಗ 'ಪ'ಕಾರಕ್ಕೆ 'ಹ'ಕಾರ ಬಂದಿರುವ ಸ್ಥಳಗಳನ್ನು ವಿವರಿಸಿದ್ದಾರೆ. ಅಲ್ಲಿನ ಜನರಲ್ಲಿ ಕಂಡು ಬರುವಂತಹ ಧ್ವನಿ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಈ ನಿಬಂಧದಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನ ಸ್ಥಳಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಇದು ಮುಂದಿನ ಸ್ಥಳನಾಮಗಳ ಅಧ್ಯಯನಕ್ಕೆ ಉಪಯುಕ್ತವಾದ ನಿಬಂಧವಾಗಿದೆ.

13) ಗೊಂಬೆ ಚಿತ್ತಾರದ ಮಡೆಕಡೆದೊ – ಡಾ.ಕೂಡ್ಲೂರು ವೆಂಕಟಪ್ಪ, 2009 :

ಈ ಕೃತಿಯು ಪಿಎಚ್.ಡಿ ಪದವಿಗಾಗಿ ಸಿದ್ದಪಡಿಸಿದ ಸಂಶೋಧನಾ ಪ್ರಬಂಧವಾಗಿದೆ. ಈ ಕೃತಿಯಲ್ಲಿ 13 ಅಧ್ಯಾಯಗಳಿವೆ. ಇದು ಚನ್ನಪಟ್ಟಣ ತಾಲ್ಲೂಕಿನ ಸ್ಥಳವಾದ ಕೂಡ್ಲೂರು ಎಂಬ ಊರಿಗೆ ಸಂಬಂಧಿಸಿದ್ದು. ಈ ಸ್ಥಳದ ಸಂಪೂರ್ಣ ವಿವರವನ್ನು ನೀಡಿದ್ದಾರೆ. ಆ ಸ್ಥಳದ ಭೌಗೋಳಿಕ ಹಾಗೂ ನೈಸರ್ಗಿಕ ವಿವರಗಳನ್ನು ನೀಡಿದ್ದಾರೆ. ಈ ಊರಿನಲ್ಲಿ ಕಂಡುಬರುವ ಜಾತಿಪದ್ದತಿ, ಆರ್ಥಿಕ ವ್ಯವಸ್ಥೆಯನ್ನೂ ವಿವರಿಸಿದ್ದಾರೆ. ಊರಿನ ಜನರು ಆಚರಿಸುವ ಸಂಪ್ರದಾಯ, ಹಬ್ಬ–ಹರಿದಿನ, ಜಾತ್ರೆ, ಉತ್ಸವಗಳನ್ನು ವಿವರಿಸಿದ್ದಾರೆ. ಈ ಊರಿನಲ್ಲಿ ಕಂಡುಬರುವಂತಹ ದೇವಾಲಯಗಳು, ಆ ದೇವಾಲಯಗಳ ಐತಿಹ್ಯಗಳನ್ನು ತಿಳಿಸಿದ್ದಾರೆ. ಇದರ ಜೊತೆಗೆ ಆ ಸ್ಥಳದಲ್ಲಿ ಕಂಡುಬರುವಂತಹ ಜಾನಪದ ವೈದ್ಯ ಪದ್ಧತಿಯನ್ನು ತಿಳಿಸಿದ್ದಾರೆ. ಆ ಸ್ಥಳದ ಸಂಪೂರ್ಣ ಇತಿಹಾಸವನ್ನು ತಿಳಿಸುವುದರ ಜೊತೆಗೆ ಆಧುನಿಕತೆಯ ಪ್ರಭಾವದಿಂದ ಆ ಸ್ಥಳವು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಹೇಗೆ ಬದಲಾವಣೆ

ಹೊಂದಿದೆ ಎಂಬುದನ್ನು ವಿವರಿಸಿದ್ದಾರೆ. ಹೀಗೆ ಈ ಕೃತಿಯು ಒಂದು ಸ್ಥಳದ ಸಂಪೂರ್ಣ ಇತಿಹಾಸವನ್ನು ತಿಳಿಸಲು ಸಹಕಾರಿಯಾಗಿದೆ.

14) ರಾಮನಗರ ಜಿಲ್ಲೆಯ ಸ್ಥಳನಾಮಗಳು – ಕೆ.ಸಿ.ಸುರೇಶ, 2011 :

ಈ ಕೃತಿಯು ಕನ್ನಡದಲ್ಲಿ ಪಿಎಚ್.ಡಿ ಪದವಿಗೆಂದು ಸಿದ್ಧಪಡಿಸಿದ ನಿಬಂಧವಾಗಿದೆ. ಈ ನಿಬಂಧದಲ್ಲಿ 8 ಅಧ್ಯಾಯಗಳಿವೆ. ಇದು ರಾಮನಗರ ಜಿಲ್ಲೆಯ ಸ್ಥಳನಾಮಗಳಿಗೆ ಸಂಬಂಧಿಸಿರುವುದಾಗಿದೆ. ರಾಮನಗರ ಜಿಲ್ಲೆಯಲ್ಲಿ 4 ತಾಲ್ಲೂಕುಗಳಿದ್ದು, ಆ ನಾಲ್ಕು ತಾಲ್ಲೂಕಿನ ಸ್ಥಳಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಸ್ಥಳನಾಮದ ಇತಿಹಾಸವನ್ನು ಕೂಲಂಕಷವಾಗಿ ವಿವರಿಸಿದ್ದಾರೆ. ರಾಮನಗರ ಜಿಲ್ಲೆಯನ್ನು ನಿರ್ದಿಷ್ಟ, ವಾರ್ಗಿಕ, ಸಂಕೀರ್ಣವಾಗಿ ವಿಭಾಗ ಮಾಡಿಕೊಂಡು ಅಧ್ಯಯನ ಮಾಡಿದ್ದಾರೆ. ಹಾಗೇ ರಾಮನಗರ ಜಿಲ್ಲೆಯ ಸ್ಥಳಗಳ ಹಿಂದೆ ಕಂಡುಬರುವಂತಹ ಐತಿಹ್ಯ, ಪುರಾಣ, ಗಾದೆ, ಒಗಟು ಸಾಂಸ್ಕೃತಿಕ ಸಮೀಕ್ಷೆಯನ್ನು ವಿವರಿಸಿದ್ದಾರೆ. ಈ ನಿಬಂಧವು ಮುಂದಿನ ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಉಪಯುಕ್ತವಾದ ನಿಬಂಧವಾಗಿದೆ.

ಈ ಮೇಲ್ಕಂಡ ಎಲ್ಲ ಕೃತಿಗಳು, ಮಹಾಪ್ರಬಂಧಗಳು ಸ್ಥಳನಾಮಗಳ ಬಗ್ಗೆ ಬಂದಂತಹ ಕೃತಿಗಳಾಗಿವೆ. ಒಂದು ಸ್ಥಳದ ಇತಿಹಾಸವನ್ನು ತಿಳಿಯಲು ಆ ಸ್ಥಳವನ್ನು ಭೌಗೋಳಿಕ, ಸಾಂಸ್ಕೃತಿಕ, ಜಾನಪದೀಯ ಹಾಗೂ ಭಾಷಿಕ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಈ ಕೃತಿಗಳು ಮಾರ್ಗದರ್ಶಿಯಾಗಿವೆ.

ಸ್ಥಳನಾಮ ಅಧ್ಯಯನದ ಇತಿಹಾಸ ಹದಿನೆಂಟನೆಯ ಶತಮಾನದಲ್ಲಿ ಪ್ರಾರಂಭವಾದರೂ ಇಪ್ಪತ್ತೊಂದನೆಯ ಶತಮಾನದಲ್ಲಿ ತಕ್ಕಮಟ್ಟಿಗೆ ತನ್ನ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ. ಅಲ್ಲದೆಯೂ ಪ್ರಮುಖವಾದ ದ್ರಾವಿಡ ಭಾಷೆಗಳಲ್ಲಿ ಸ್ಥಳನಾಮ ಅಧ್ಯಯನದ ಕೆಲಸ ಹೆಚ್ಚಾಗಿ ನಡೆದಿದೆ. ಅನೇಕ ಕೃತಿಗಳು, ಸಂಘಸಂಸ್ಥೆಗಳು ಸ್ಥಳನಾಮಗಳ ಬಗ್ಗೆ ವಿಚಾರಗೋಷ್ಠಿಗಳನ್ನು ನಡೆಸಿ ನಿಯತಕಾಲಿಕೆ ಹೊರತರುತ್ತಿರುವುದು ಸ್ಥಳನಾಮ ಸಂಶೋಧಕರಿಗೆ ಹೆಚ್ಚು ಉಪಯುಕ್ತವಾಗಿದೆ.

ಸ್ಥಳನಾಮಗಳ ಅಧ್ಯಯನ ಪಾಶ್ಚಾತ್ಯ ಪಂಡಿತರ ಪ್ರಭಾವದಿಂದ ನಮ್ಮಲ್ಲೂ ಇತ್ತೀಚೆಗೆ ಮೈತುಂಬಿಕೊಳ್ಳುತ್ತ ಸಾಗುತ್ತಿದೆ. ನಮ್ಮ ಗತಕಾಲದ ವೈಭವವನ್ನು ನಮ್ಮೆದುರಿಗೆ ತೆರೆದಿಡುವಲ್ಲಿ

ಇಂಥ ಅಧ್ಯಯನಗಳು ಯಶಸ್ವಿಯಾಗುತ್ತವೆ ಎಂಬುದನ್ನು ಇಲ್ಲಿ ಗಮನಿಸಬೇಕು. ಈ ನಿಟ್ಟಿನಲ್ಲಿ ಮತ್ತಷ್ಟು ಪ್ರಾಮಾಣಿಕ ಪ್ರಯತ್ನಗಳು ಸಾಗಬೇಕಾದ ಅವಶ್ಯಕತೆ ಇದೆ.

ಪಿಎಚ್.ಡಿ ಪದವಿಗಾಗಿ ಭಾರತದಲ್ಲಿ ಸ್ಥಳನಾಮಗಳ ಅಧ್ಯಯನ ಆರಂಭಗೊಂಡ ನಂತರ ಆ ಕ್ಷೇತ್ರ ಇತರರಲ್ಲೂ ಆಸಕ್ತಿಯನ್ನು ಬೆಳೆಸತೊಡಗಿತ್ತು. ಒಂದು ಕ್ರಮಬದ್ಧವಾದ ಅಧ್ಯಯನ ಇದರಿಂದ ಬೆಳೆಯಿತು. ಸ್ಥಳನಾಮಗಳ ಸಮೀಕ್ಷೆ ಬೆಳೆಯುತ್ತ ಬಂದಂತೆ ಜಾಗತಿಕ ಮಟ್ಟದಲ್ಲಿ ಜನಪ್ರಿಯವಾಗ ತೊಡಗಿತು.

** ** ** ** **

ಕೊನೆ ಟಿಪ್ಪಣಿಗಳು :

1. ಕೆಮ್ತೂರು ರಘುಪತಿಭಟ್ಟ : ತುಳುನಾಡಿನ ಸ್ಥಳನಾಮಗಳು, ಪುಟ–1
2. ಅದೇ : ಪುಟ–2
3. ಡಾ.ವಿಶ್ವನಾಥ : ಸಕಲೇಶಪುರ ಪರಿಸರದ ಸ್ಥಳನಾಮಗಳು, ಪುಟ–11
4. ದೇ.ಜ.ಗೌ : ಸ್ಥಳನಾಮ ವ್ಯಾಸಂಗ, ಪುಟ–17
5. ಡಾ.ವಿಶ್ವನಾಥ : ಸಕಲೇಶಪುರ ಪರಿಸರದ ಸ್ಥಳನಾಮಗಳು, ಪುಟ–12
6. ಅದೇ : ಪುಟ–13
7. ಶಂ.ಬಾ.ಜೋಶಿ : ಎಡೆಗಳು ಹೇಳುವ ಕಂನಾಡ ಕತೆ, ಪುಟ–45
8. ದೇ.ಜ.ಗೌ : ಸ್ಥಳನಾಮ ವ್ಯಾಸಂಗ, ಪುಟ–18
9. ದೇ.ಜ.ಗೌ : ಬೆರಕೆಸೊಪ್ಪು, ಪುಟ–7
10. ಕೆಮ್ತೂರು ರಘುಪತಿಭಟ್ಟ : ಹೆಸರಿನಲ್ಲೇನಿದೆ, ಪುಟ–1
11. ಕೆಮ್ತೂರು ರಘುಪತಿಭಟ್ಟ : ತುಳುನಾಡಿನ ಸ್ಥಳನಾಮಗಳು, ಪುಟ–1
12. ಡಾ.ವಿಶ್ವನಾಥ : ಸಕಲೇಶಪುರ ಪರಿಸರದ ಸ್ಥಳನಾಮಗಳು, ಪುಟ–4
13. ಅದೇ : ಪುಟ–4
14. ಅದೇ : ಪುಟ–5
15. ಶಂ.ಬಾ.ಜೋಶಿ : ಎಡೆಗಳು ಹೇಳುವ ಕಂನಾಡಕತೆ, ಪುಟ–38

16. ಕೆಮ್ತೂರು ರಘುಪತಿಭಟ್ಟ : ತುಳುನಾಡಿನ ಸ್ಥಳನಾಮಗಳು, ಪುಟ–1

17. ಕೆಮ್ತೂರು ರಘುಪತಿಭಟ್ಟ : ಹೆಸರಿನಲ್ಲೇನಿದೆ, ಪುಟ–2

18. ದೇ.ಜ.ಗೌ : ಸ್ಥಳನಾಮ ವ್ಯಾಸಂಗ, ಪುಟ–30

19. ಅದೇ : ಪುಟ–31

20. ಕೆಮ್ತೂರು ರಘುಪತಿಭಟ್ಟ : ತುಡುನಾಡಿನ ಸ್ಥಳನಾಮಗಳು, ಪುಟ–2

21. ವಿಶ್ವನಾಥ : ಸಕಲೇಶಪುರ ಪರಿಸರದ ಸ್ಥಳನಾಮಗಳು, ಪುಟ–29

22. ದೇ.ಜ.ಗೌ : ಸ್ಥಳನಾಮ ವ್ಯಾಸಂಗ, ಪುಟ–35

23. ಅದೇ : ಪುಟ–36, 37

24. ಡಾ.ಎಂ.ಚಿದಾನಂದಮೂರ್ತಿ : ವಾಗರ್ಥ, ಪುಟ–9

25. ವಿಶ್ವನಾಥ : ಸಕಲೇಶಪುರ ಪರಿಸರದ ಸ್ಥಳನಾಮಗಳು, ಪುಟ–39

** ** ** ** **

ಅಧ್ಯಾಯ – 2

ಚನ್ನಪಟ್ಟಣ ತಾಲ್ಲೂಕಿನ ಪಕ್ಷಿನೋಟ

ಭಾರತ ಕಿರು ವಿಶ್ವವಾದರೆ, ಕರ್ನಾಟಕ ಕಿರು ಭಾರತವಾಗಿದೆ. ದೇಶದ ಎಲ್ಲಾ ಸಂಸ್ಕೃತಿ, ಭಾಷೆ, ಧರ್ಮಗಳಿಗೆ ಆಶ್ರಯ ನೀಡಿದ ಕರುನಾಡು, ಸಾಂಸ್ಕೃತಿಕ ಶ್ರೀಮಂತಿಕೆಗೆ ಹೆಸರಾಗಿ ಮೆರೆದಿದೆ. ಅದ್ದೂರಿಯಾದ ಕಲಾತ್ಮಕ ಅಭಿವ್ಯಕ್ತಿ ಈ ಮಣ್ಣಲ್ಲಿ ಮೆರೆದಿದೆ. ಪ್ರಾದೇಶಿಕ ವೈವಿಧ್ಯತೆ, ವೈಶಿಷ್ಟ್ಯತೆ, ಅನನ್ಯತೆಗೆ ಹೆಸರಾದ ಕನ್ನಡನಾಡು ಕಲೆ, ಸಂಗೀತ, ಸಾಹಿತ್ಯ, ವಿಜ್ಞಾನ ಎಲ್ಲಾ ಕ್ಷೇತ್ರಗಳಲ್ಲೂ ದಾಪುಗಾಲಿಕ್ಕಿ ಸಾಗುತ್ತಿದೆ. ಇಂಥ ಅನೇಕ ವೈಶಿಷ್ಟ್ಯತೆಗಳ ಗಣಿಯಾದ ಈ ನಾಡಿನಲ್ಲಿ ಒಂದೊಂದು ತಾಲ್ಲೂಕು, ಜಿಲ್ಲೆಗಳು ಒಂದೊಂದು ಕ್ಷೇತ್ರದಲ್ಲಿ ಅನನ್ಯತೆಯನ್ನು, ಅಸ್ಮಿತೆಯನ್ನು ಕಾಯ್ದುಕೊಂಡು ಬಂದಿದೆ.

ಬೆಂಗಳೂರು, ಮೈಸೂರೆಂಬ ರಾಜಕೀಯ ಹಾಗೂ ಸಾಂಸ್ಕೃತಿಕ ರಾಜಧಾನಿಗಳ ನಡುವೆ ವಿಭಿನ್ನ ಅಸ್ತಿತ್ವ ಪಡೆದುಕೊಂಡಿರುವ ಚನ್ನಪಟ್ಟಣ 'ಚಂದದಪಟ್ಟಣ'ವೇ ಹೌದು. ಕಲೆ, ಸಂಗೀತ, ಸಾಹಿತ್ಯ, ರಂಗಭೂಮಿ, ವಿಜ್ಞಾನ ಹೀಗೆ ಸಮಾಜದ ಎಲ್ಲಾ ಕ್ಷೇತ್ರಗಳಿಗೂ ಈ ತಾಲ್ಲೂಕು ಅಮೂಲ್ಯ ಕೊಡುಗೆಗಳನ್ನು ನೀಡಿದೆ. ಆಧುನಿಕ ಸಂದರ್ಭದಲ್ಲಿ ಬೊಂಬೆಗಳಿಗೆ ವಿಶ್ವಮಟ್ಟದಲ್ಲಿ ಪ್ರಖ್ಯಾತಿಗಳಿಸಿರುವ ಹೆಮ್ಮೆ ಈ ತಾಲ್ಲೂಕಿಗಿದೆ. ಇದರ ಗಡಿಗೆ ತಾಕಿರುವ ತಾಲ್ಲೂಕುಗಳು ಹೆಮ್ಮೆಯ ಪ್ರದೇಶಗಳೇ ಆಗಿವೆ. ಮಾಗಡಿ, ಕೆಂಪೇಗೌಡನನ್ನು ಈ ನಾಡಿಗೆ ನೀಡಿದರೆ; ರಾಮನಗರ, ರೇಷ್ಮೆಗೆ ಪ್ರಖ್ಯಾತಿಯಾಗಿದೆ; ಮದ್ದೂರು, ವಡೆಗೆ ಹೆಸರು ಪಡೆದಿದೆ. ಇವುಗಳ ನಡುವೆ ಬೆಳೆದ ಚನ್ನಪಟ್ಟಣ ವೈಶಿಷ್ಟ್ಯತೆಗಳ ಗಣಿಯೇ ಆಗಿದೆ.

ರಾಮನಗರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಚನ್ನಪಟ್ಟಣ ತಾಲ್ಲೂಕು ಒಂದು. ತಾಲ್ಲೂಕಿನ ಕೇಂದ್ರವಾದ ಚನ್ನಪಟ್ಟಣ, ಕರ್ನಾಟಕದ ರಾಜಧಾನಿಯಾದ ಬೆಂಗಳೂರಿಗೆ ಕೇವಲ 59 ಕಿ.ಮೀ ದೂರದಲ್ಲಿದ್ದರೆ, ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ 81 ಕಿ.ಮೀ ದೂರದಲ್ಲಿದೆ. ಬೆಂಗಳೂರು–ಮೈಸೂರು ಹೆದ್ದಾರಿ ಚನ್ನಪಟ್ಟಣದ ಮೂಲಕವೇ ಸಾಗಿದೆ. ಪಟ್ಟಣದ ಪೂರ್ವ ದಿಕ್ಕಿಗೆ ರಾಮನಗರ ಜಿಲ್ಲೆಯ ರಾಮನಗರ, ಪಶ್ಚಿಮಕ್ಕೆ ಮದ್ದೂರು, ಉತ್ತರಕ್ಕೆ ಕುಣಿಗಲ್, ದಕ್ಷಿಣಕ್ಕೆ ಕನಕಪುರ ತಾಲ್ಲೂಕನ್ನು ಒಳಗೊಂಡಿದೆ. ಪಟ್ಟಣದ ಹೃದಯಭಾಗಕ್ಕೆ 14 ಕಿ.ಮೀ ಅಂತರದಲ್ಲಿ ಕಣ್ವನದಿ ದಕ್ಷಿಣಾಭಿಮುಖವಾಗಿ ಹರಿಯುತ್ತಿದೆ. ಕಣ್ವ ನದಿಯ ಇಕ್ಕೆಲಗಳಲ್ಲಿ ಹಸಿರು ಸಿರಿಯೇ

ಮೈಮೆತ್ತಂತಿರುವ ತೆಂಗು, ತಾಲ್ಲೂಕಿನ ಒಳಭಾಗದಲ್ಲಿ ಕಣ್ವ ಜಲಾಶಯದ ನೀರಿನಿಂದ ಬೆಳೆಯುವ ಭತ್ತ, ರಾಗಿ, ಕಬ್ಬು, ರೇಷ್ಮೆ, ವೀಳ್ಯೆದೆಲೆ ಮುಂತಾದವುಗಳಿಂದ ಚಂದಾಗಿ ಕಾಣುತ್ತಿದ್ದ ಕಾರಣ 'ಚಂದದಪಟ್ಟಣ'ವೆಂದು ಹೆಸರಿದ್ದು, ಕಾಲಾನಂತರದಲ್ಲಿ ಚನ್ನಪಟ್ಟಣವಾಗಿರಬೇಕೆಂದು ಊಹಿಸಲಾಗುತ್ತದೆ.

ಈ ತಾಲ್ಲೂಕು 535 ಚದರ ಕಿ.ಮೀ ವಿಸ್ತಾರ ಹೊಂದಿದ್ದು, 125 ಗ್ರಾಮಗಳನ್ನು (ಇದರಲ್ಲಿ 12 ಬೇಚರಕ್) ಒಳಗೊಂಡಿದೆ. ಪ್ರಸ್ತುತ ಕಸಬಾ, ಮಳೂರು ಮತ್ತು ವಿರುಪಾಕ್ಷಿಪುರವೆಂಬ 3 ಹೋಬಳಿಗಳನ್ನು ಹೊಂದಿದ್ದು, ವಿರುಪಾಕ್ಷಿಪುರ ಹೋಬಳಿಯ ಕೆಲವು ಹಳ್ಳಿಗಳು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳಿಗೂ ಮತ್ತೆ ಕೆಲವು ಹಳ್ಳಿಗಳು ಸಾತನೂರು ವಿಧಾನಸಭಾ ಕ್ಷೇತ್ರಕ್ಕೂ ಸೇರುತ್ತವೆ.

1991ರ ಜನಗಣತಿಯ ಪ್ರಕಾರ ಈ ತಾಲ್ಲೂಕಿನ ಜನಸಂಖ್ಯೆ 1,72,990. ಇದರಲ್ಲಿ ಚನ್ನಪಟ್ಟಣ ಟೌನ್‌ನಲ್ಲಿಯೇ 55,209 ಜನಸಂಖ್ಯೆಯಿತ್ತು. 2011ರ ಪ್ರಕಾರ ತಾಲ್ಲೂಕಿನ ಜನಸಂಖ್ಯೆ 4,90,200 ಆಗಿದ್ದು. ಈಗಿನ ಅಂದಾಜಿನ ಪ್ರಕಾರ ತಾಲ್ಲೂಕಿನ ಒಟ್ಟು ಜನಸಂಖ್ಯೆ 5 ಲಕ್ಷ ದಾಟಿದೆ.

ತಾಲ್ಲೂಕಿನಲ್ಲಿ ಒಕ್ಕಲಿಗ ಜನಾಂಗವೇ ಪ್ರಧಾನವಾಗಿದ್ದರೂ ಎರಡನೆಯ ಸ್ಥಾನವನ್ನು ಮುಸ್ಲಿಮರು ಪಡೆದಿದ್ದಾರೆ. ತಾಲ್ಲೂಕಿನ ಎಂ.ಕೆ.ದೊಡ್ಡಿ, ಹೊಂಗನೂರು, ಕೋಡಂಬಳ್ಳಿ ಬಿಟ್ಟರೆ ಅತಿ ಹೆಚ್ಚು ಮುಸ್ಲಿಮರು ವಾಸಿಸುವ ಸ್ಥಳ ಚನ್ನಪಟ್ಟಣ ಟೌನ್. ಬ್ರಾಹ್ಮಣ, ವೀರಶೈವ, ಬೆಸ್ತ, ದಾಸಬಣಜಿಗ, ಕುರುಬ, ಉಪ್ಪಾರ, ತಿಗಳ, ಲಂಬಾಣಿ, ಕ್ರೈಸ್ತರು, ಅರಸುಗಳು (ಪಳ್ಳಗರು), ಅಗಸ, ಕುಂಬಾರರೇ ಮುಂತಾಗಿ ಇರಳಿಗರು ಜಾತಿಗಳೇ ಅಲ್ಲದೆ ಪರಿಶಿಷ್ಟ ಜಾತಿಯ ಇಲ್ಲಿಗರು ಈ ತಾಲ್ಲೂಕಿನಲ್ಲಿದ್ದಾರೆ.

ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ 32 ಗ್ರಾಮ ಪಂಚಾಯ್ತಿಗಳಿದ್ದು 458 ಸದಸ್ಯರಿದ್ದಾರೆ. 19 ತಾಲ್ಲೂಕು ಪಂಚಾಯ್ತಿ ಸದಸ್ಯರು, 5 ಜಿಲ್ಲಾ ಪಂಚಾಯ್ತಿ ಸದಸ್ಯರು, ಒಬ್ಬ ವಿಧಾನಸಭಾ ಸದಸ್ಯರು ಇದ್ದಾರೆ. ಒಂದು ನಗರ ಸಭೆ ಇದೆ.

ಬೆಂಗಳೂರು, ಮೈಸೂರು ನಡುವೆ ಚನ್ನಪಟ್ಟಣದಲ್ಲಿ ಮಾತ್ರವೇ ಇದ್ದ ಸರ್ಕಾರಿ ಪ್ರೌಢಶಾಲೆ ಇಂದು ಸಂಯುಕ್ತ ಪದವಿಪೂರ್ವ ಕಾಲೇಜಾಗಿ ಮಾರ್ಪಟ್ಟಿದೆ. ಈ ಸಂಸ್ಥೆಯಲ್ಲಿ ಕೆ.ವಿ.ಶಂಕರಗೌಡ, ಹೆಚ್.ಕೆ. ವೀರಣ್ಣಗೌಡ ಮುಂತಾದ ಮುತ್ಸದ್ಧಿ ರಾಜಕಾರಣಿಗಳೇ ಅಲ್ಲದೆ,

ಪ್ರೊ.ದೇಜಗೌ, ಡಾ.ಹೆಚ್.ಎಲ್. ನಾಗೇಗೌಡರಂಥ ಸಾಹಿತಿಗಳು ವಿದ್ಯಾಭ್ಯಾಸ ಮಾಡಿದ್ದಾರೆ. ಇದನ್ನು ಒಳಗೊಂಡಂತೆ ತಾಲ್ಲೂಕಿನಲ್ಲಿ 11 ಪದವಿಪೂರ್ವ ಕಾಲೇಜುಗಳು, 2 ಪ್ರಥಮ ದರ್ಜೆ ಕಾಲೇಜುಗಳು, 2 ಪದವಿ ಕಾಲೇಜುಗಳು, 37 ಪ್ರೌಢಶಾಲೆಗಳು, 1 ತಾಂತ್ರಿಕ ಕಾಲೇಜು, 1 ಶಿಕ್ಷಕರ ತರಬೇತಿ ಕಾಲೇಜು, 1 ದೈಹಿಕ ಶಿಕ್ಷಕರ ತರಬೇತಿ ಕಾಲೇಜು, 254 ಪ್ರಾಥಮಿಕ ಶಾಲೆಗಳೇ ಅಲ್ಲದೇ ಅನೇಕ ರೇಷ್ಮೆ, ತೋಟಗಾರಿಕೆ ಮುಂತಾದ ವೃತ್ತಿ ಶಿಕ್ಷಣ ತರಗತಿಗಳೂ ಇವೆ. ತಾಲ್ಲೂಕಿನಲ್ಲಿ ಒಟ್ಟು 13 ಗ್ರಂಥಾಲಯಗಳಿವೆ.

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಘರ್ಷ ಸಮಿತಿ ಮುಂತಾಗಿ ಕನ್ನಡ ಸಾಹಿತ್ಯ, ಸಂಸ್ಕೃತಿಪರ ಸಂಘಟನೆಗಳಲ್ಲದೆ ರೋಟರಿ ಲಯನ್ಸ್, ಪಾಲ್‌ಸ್ಪೋರ್ಟ್ಸ್ ಮತ್ತು ಕಲ್ಚರಲ್ ಕ್ಲಬ್, ಭಾರತ ವಿಕಾಸ ಪರಿಷತ್‌ನಂತಹ ಸಮಾಜಸೇವಾ ಸಂಸ್ಥೆಗಳು ಕ್ರಿಯಾತ್ಮಕವಾಗಿ ಕೆಲಸ ಮಾಡುತ್ತಿವೆ. ಸುಮಾರು 25 ವರ್ಷಗಳಷ್ಟು ಹಳೆಯದಾದ ಕನ್ನಡ ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ದುಡಿಯುತ್ತಿದ್ದ 'ಕನ್ನಡ ಮಿತ್ರ ಸಂಘ' ಈಗ ಅಸ್ತಿತ್ವದಲಿಲ್ಲ. ಹಿರಿಯ ತಲೆಯಾದ, ಸಾಹಿತ್ಯ ಮತ್ತು ಸಂಸ್ಕೃತಿ ಪ್ರಿಯರಾಗಿದ್ದ ಬಿ.ಪಿ.ಎಸ್.ಶರ್ಮರಂಥವರ ವಿಶೇಷ ಆಸಕ್ತಿಯ ಫಲವಾಗಿ ತಲೆಯೆತ್ತಿ ಸಾಕಷ್ಟು ಕೆಲಸ ಮಾಡಿದ 'ದಿವ್ಯ ಜೀವನ ಸಂಘ' ಕೂಡ ಇಂದು ಇಲ್ಲ. ಆದರೆ ಅದರ ಸೇವೆ ಇಂದಿಗೂ ಸ್ಮರಣಾರ್ಹ. 'ಗಮಕಕಲಾ ಪರಿಷತ್ತು' ಇತ್ತೀಚೆಗೆ ಇಲ್ಲಿ ಶಾಖೆ ಹೊಂದಿದ್ದು ಗಮಕದ ಮೂಲಕ ಸಂಸ್ಕೃತಿಯ ರಕ್ಷಣೆ ಉದ್ದೇಶ ಹೊಂದಿದೆ.

ಈ ತಾಲ್ಲೂಕು ಕೈಗಾರಿಕೆಯಲ್ಲಿ (ಬೃಹತ್ ಕೈಗಾರಿಕೆಯಲ್ಲಿ) ಸ್ವಲ್ಪ ಹಿಂದೆ ಇದೆ. ಸ್ವಲ್ಪವೇನು ಹಾಗೆ ನೋಡಿದರೆ ಕೈಗಾರಿಕೆಯಲ್ಲಿ ಸಾಕಷ್ಟು ಹಿಂದೆ ಇದೆ. ಆದರೂ ಇಲ್ಲಿನ ಸನ್‌ಸಿಲ್ಕ್‌ಮಿಲ್ ಸಾಕಷ್ಟು ಜನರಿಗೆ ಉದ್ಯೋಗ ನೀಡಿದ್ದರೂ ಈಗ ಮುಚ್ಚುವ ಸ್ಥಿತಿಯಲ್ಲಿದೆ. ಎಲೆಕೇರಿಯ ಕೈ ಮಗ್ಗದ ರೇಷ್ಮೆ ಸೀರೆಗಳು, ಕೆ.ಎಸ್.ಐಸ್.ಸಿ.ಯ ರೇಷ್ಮೆ ಸೀರೆಗಳಿಗೆ ಪರ್ಯಾಯವಾಗಿವೆ. ಇಲ್ಲಿನ ಕರಕುಶಲ ಕಲೆ ಜಗತ್ಪ್ರಸಿದ್ಧ. ಬಣ್ಣದ ಆಟಿಕೆಗಳು, ಬಳೆಗಳು ಈಗ ಯಂತ್ರದಲ್ಲೇ ತಯಾರಾಗುತ್ತಿವೆ. ಹರಳು ತಯಾರಿಕೆ, ಬಿದಿರಿನಲ್ಲಿ ಬಳೆ ಮಾಡುವುದು, ಬೇವೂರಿನ ಕುಡಿಕೆ, ಮಡಿಕೆಯ ಕುಂಭಗಾರಿಕೆ ಇಲ್ಲಿದೆ. ಇಲ್ಲಿನ ಮಣ್ಣಿನ ಗಂಟೆ ಜಗತ್ಪ್ರಸಿದ್ಧವಾದುದು. 3–4 ತೆಂಗಿನ ನಾರಿನ ಕೈಗಾರಿಕೆಗಳು ಇದೆ. ಅನೇಕ ಸಣ್ಣ ಪ್ರಮಾಣದ ತೆಂಗಿನನಾರು ತಯಾರಿಕಾ ಘಟಕಗಳಿವೆ. ಹಲವಾರು ಇಟ್ಟಿಗೆ ತಯಾರಿಕಾ ಕೇಂದ್ರಗಳಲ್ಲದೆ ಮೊಜಾಯಿಕ್ ತಯಾರಿಕಾ ಘಟಕವೂ ಇದೆ.

42 ವರ್ಷಗಳಿಂದ ನಿರಂತರವಾಗಿ ವಾರ ಪತ್ರಿಕೆಯಾಗಿ ಈಗ ದಿನ ಪತ್ರಿಕೆಯಾಗಿ 'ಬಯಲುಸೀಮೆ' ಪತ್ರಿಕೆ ಬರುತ್ತಿದೆ. ವಾರ ಪತ್ರಿಕೆಯಾಗಿ 'ತೊರೆ', 'ಕೆಂಗಲ್‌ಪತ್ರಿಕೆ',

‘ದಿನೇಶ್‌ಪತ್ರಿಕೆ’, ‘ಸುದ್ದಿಸಲಗ’ ಗಮನಾರ್ಹವಾಗಿದೆ. ಇದೀಗ ಪಾಕ್ಷಿಕ ಪತ್ರಿಕೆಯಾಗಿ ‘ರೇಷ್ಮೆಸೀಮೆ’ ದಾಖಲಿಸಬಹುದಾಗಿದ್ದು, ಪತ್ರಿಕೋದ್ಯಮಿಯಾಗಿ ರಾಮಣ್ಣ ಕೋಡಿಹೊಸಹಳ್ಳಿ, ಗೋವಿಂದಹಳ್ಳಿ ದೇವೇಗೌಡ ಗಮನಾರ್ಹರು.

ಏಕಕಾಲದಲ್ಲಿ ಹಲವಾರು ಕಲೆಗಳನ್ನು ಗುರುತಿಸಬಹುದಾದ ಮತ್ತು ಜೀವಂತಿಕೆಯಲ್ಲಿರುವ ಕಲೆಗಳ ಊರು ನಾಗವಾರ. ಇಲ್ಲಿ ಸೋಬಾನೆ, ಕೋಲಾಟ, ಪಟ್ಟದಕುಣಿತ, ಒನಕೆಕುಣಿತ, ಪೂಜಾಕುಣಿತ, ಭಾಗವಂತಿಕೆ, ಪಾಳೆಗಾರರ ವೇಷವೇ ಮುಂತಾದ ಕಲೆಗಳ ಜೊತೆಗೆ ಮೂಡಲಪಾಯ ಯಕ್ಷಗಾನದ ಕಲಾವಿದರೂ ಇನ್ನು ಜೀವಂತವಾಗಿದ್ದಾರೆ. ‘ಸಾರಂಗಧಾರ’(ಮೂಡಲಪಾಯ)ನ ಕಥೆ ಈ ತಾಲ್ಲೂಕಿನ ಪರಿಶಿಷ್ಟಜಾತಿಯ ಜನರೇ ಇರುವ ಕುಂತೂರು ದೊಡ್ಡಿಯಲ್ಲಿ ಇನ್ನು ಜೀವಂತವಾಗಿದೆ. ಕರಿಯಪ್ಪನ ದೊಡ್ಡಿಯ ಗೊರವರ ಕುಣಿತ ರಾಷ್ಟ್ರಮಟ್ಟದಲ್ಲಿ ಖ್ಯಾತಿ ಪಡೆದಿದೆ. ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಕೋಲಾಟ, ಪೂಜಾಕುಣಿತ ಚಾಲ್ತಿಯಲ್ಲಿದೆ. ಮೆಣಸಿಗನಹಳ್ಳಿಯಲ್ಲಿ ಭಾಗವಂತಿಕೆ ಇನ್ನು ಉಳಿದು ಬಂದಿದೆ. ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ‘ಜಾನಪದ ಲೋಕ’ವಿದ್ದರೂ ಈ ತಾಲ್ಲೂಕಿನ ಹಲವಾರು ಕಲಾವಿದರನ್ನು ಕರೆಸಿಕೊಂಡು ಅವರಿಗೆ ಉತ್ತೇಜನ ನೀಡುವುದೇ ಅಲ್ಲದೆ ಕಲಾಸಕ್ತರಿಗೆ ತರಬೇತಿ ಕೂಡ ನೀಡಲಾಗುತ್ತಿದೆ.

ಇಷ್ಟೇ ಅಲ್ಲದೆ ಚನ್ನಪಟ್ಟಣ ತಾಲ್ಲೂಕು ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಹಿತ್ಯಕವಾಗಿ ವಿಶಿಷ್ಟತೆಯಿಂದ ಕೂಡಿದ್ದು ರಾಜ್ಯದಲ್ಲಿ ತನ್ನದೇ ಆದ ಹಿರಿಮೆಯನ್ನು ಗಳಿಸಿಕೊಂಡಿದೆ.

2.1 ಚನ್ನಪಟ್ಟಣ ತಾಲ್ಲೂಕಿನ ಭೌಗೋಳಿಕ ಹಿನ್ನೆಲೆ :

ಕರ್ನಾಟಕದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾಲಘಟ್ಟದಲ್ಲಿ ಚನ್ನಪಟ್ಟಣ ತಾಲ್ಲೂಕು ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸಿದೆ. ಕರ್ನಾಟಕದ ವೈವಿಧ್ಯಮಯ ಸಾಂಸ್ಕೃತಿಕ ದಾಖಲೆಗಳಲ್ಲಿ ತನ್ನ ಕಾಣಿಕೆಯ ಇರುವಿಕೆಯನ್ನು ಪಡಿಮೂಡಿಸಿ, ‘ಬಣ್ಣದ ಬೊಂಬೆಯ ನಗರ’ ಎಂದೇ ಖ್ಯಾತಿ ಹೊಂದಿರುವ ಇದು ಜಗತ್ತಿನಲ್ಲೆ ಆಟದ ಸಾಮಾನುಗಳಲ್ಲಿ ವಿಶಿಷ್ಟತೆ, ಸೊಬಗನ್ನು ಮೆರೆದಿದೆ. ಪೌರಾಣಿಕ ಮಹತ್ವವನ್ನು ಹೊಂದಿರುವುದಲ್ಲದೆ ಐತಿಹಾಸಿಕವಾಗಿ, ವಿಶಿಷ್ಟ ಪಾತ್ರವನ್ನು ನಿರ್ವಹಿಸಿದೆ. ಸಂಗೀತಗಾರರಿಗೆ, ವಿದ್ವಾಂಸರುಗಳಿಗೆ, ಕವಿಗಳಿಗೆ, ದಾರ್ಶನಿಕರಿಗೆ ಜನ್ಮ ನೀಡಿತಲ್ಲದೆ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಭಿನ್ನ ಪರಂಪರೆಯನ್ನೆ

ಸೃಷ್ಟಿಸಿದೆ. ಅರೆ ಮಲೆನಾಡಿನಂತಿರುವ ಚನ್ನಪಟ್ಟಣ ತಾಲ್ಲೂಕು ಕೃಷಿ, ಕರಕುಶಲ ಹಾಗೂ ಗೃಹ ಕೈಗಾರಿಕೆಯಲ್ಲೂ ಪ್ರಸಿದ್ಧಿಯನ್ನು ಪಡೆದಿದೆ.

ಕ್ರಿಸ್ತಪೂರ್ವದಿಂದಲೇ ಆರಂಭಗೊಳ್ಳುವ ಕನ್ನಡ ನಾಡಿನ ಇತಿಹಾಸದ ದಾರಿಯುದ್ದಕ್ಕೂ ವೈಶಿಷ್ಟ್ಯತೆಗಳ ಮೈಲುಗಲ್ಲನ್ನೇ ನಿರ್ಮಿಸುತ್ತಾ ಬಂದಿದೆ. ಸಂಸ್ಕೃತ, ಪ್ರಾಕೃತ, ತಮಿಳಿನಂಥ ದೇಶಿ ಭಾಷೆಯ ಕೃತಿಗಳಲ್ಲದೆ ಗ್ರೀಕ್ ಪ್ರವಾಸಿ ಟಾಲೆಮಿಯ ಪ್ರವಾಸ ಕಥನ ಕೂಡಾ ಈ ನಾಡು ನುಡಿಗಳ ಪ್ರಾಚೀನತೆಗೆ ಪುರಾವೆ ಒದಗಿಸಿದೆ.

ರಾಮಾಯಣ, ಮಹಾಭಾರತಗಳ ಅನೇಕ ಘಟನೆಗಳು ಕರ್ನಾಟಕದ ಅನೇಕ ಊರುಗಳೊಂದಿಗೆ ತಳುಕು ಹಾಕಿಕೊಂಡಿದೆ. ಬಳ್ಳಾರಿ ಜಿಲ್ಲೆಯ ಆನೆಗೊಂದಿ (ಕಿಷ್ಕಿಂದೆ) ಸುಗ್ರೀವನ ರಾಜಧಾನಿಯಾದರೆ, ದೇವದುರ್ಗ ತಾಲ್ಲೂಕಿನ ಗಬ್ಬೂರು (ದೇವಾಲಯಗಳ ಊರು) ಬಭ್ರುವಾಹನನ ಮಣಿಪುರವಾಗಿತ್ತು. ಇಂಥ ಪೌರಾಣಿಕ/ಚಾರಿತ್ರಿಕ ಹಿನ್ನೆಲೆಯುಳ್ಳ ಕನ್ನಡನಾಡು ನುಡಿಗಳಿಗೆ ಸಂಬಂಧಿಸಿದ ಅಧ್ಯಯನ ಕುತೂಹಲಕರವಾಗಿದೆ.

'ಕರು' ಎಂದರೆ ಕಪ್ಪು, ಸುವಾಸನೆ ಎಂಬರ್ಥಗಳಿವೆ. ಅಂದರೆ ಕರುನಾಡು ಫಲವತ್ತಾದ ಸುಗಂಧ ಭರಿತವಾದ ಪ್ರದೇಶ. ಫಲವತ್ತತೆ ಮತ್ತು ಪರಿಮಳದಂಥ ಸಮೃದ್ಧಿ ಅಪರೂಪದ ಅಂಶ. ಇಂಥ ಚಾರಿತ್ರಿಕ/ ಸಾಂಸ್ಕೃತಿಕ/ ಭಾಷಿಕ/ ಐತಿಹಾಸಿಕ ವೈವಿಧ್ಯತೆಗಳಲ್ಲಿನ ಏಕತೆಯಿಂದಾಗಿ ಕರುನಾಡು 'ಮಿನಿಭಾರತ' ಎಂಬ ಹಿರಿಮೆಗೆ ಪಾತ್ರವಾಗಿದೆ. ಇಂಥ ಹಿರಿಮೆಯ ನಾಡಿನ ಹೆಮ್ಮೆಯ ಭಾಗವಾದ ಚನ್ನಪಟ್ಟಣ ಭೌಗೋಳಿಕವಾಗಿ ವಿಭಿನ್ನವಾದ ಹಿನ್ನೆಲೆ ಹೊಂದಿದೆ. ಈ ಪ್ರದೇಶದ ಮೇಲ್ಮೈ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಈ ತಾಲ್ಲೂಕನ್ನು ಎರಡು ಭಾಗವಾಗಿ ವಿಂಗಡಿಸಬಹುದು.

1) "ಉತ್ತರ ಮತ್ತು ವಾಯುವ್ಯ ಭಾಗಗಳಲ್ಲಿ ಹಲವು ಬೆಟ್ಟಗಳ ಸಾಲುಗಳು ಇದ್ದು ಹೆಚ್ಚಾಗಿ ಬೆಂಗಾಡು ಹಾಗೂ ಕುರುಚಲು ಕಾಡುಗಳನ್ನು ಹೊಂದಿರುವ ಪ್ರದೇಶಗಳು ಕಂಡುಬರುತ್ತವೆ. ಇಲ್ಲಿ ಕೆರೆಗಳು ಮತ್ತು ನೀರಾವರಿ ಸಾಧನಗಳಾವುವು ಕಂಡು ಬರುವುದಿಲ್ಲ.
2) ದಕ್ಷಿಣ ಮತ್ತು ನೈರುತ್ಯ ಭಾಗಗಳು ಮೈದಾನ ಪ್ರದೇಶವಾಗಿದ್ದು ಜನಭರಿತ ಗ್ರಾಮಗಳು ಹಾಗೂ ಕೆಲವು ಮುಖ್ಯ ಕೆರೆಗಳಿಂದ ಕೂಡಿವೆ. ಈ ತಾಲ್ಲೂಕಿನ ಒಳನಾಡು ಮಲೆನಾಡನ್ನು ನೆನಪಿಸುತ್ತವೆ. ಸಮೃದ್ಧವಾದ ತೆಂಗಿನ ಮರಗಳು, ಕೆರೆಗಳು, ದಟ್ಟವಾದ

ಅರಣ್ಯದಂಥ ಪ್ರದೇಶ ನಿಸರ್ಗ ಸಮೃದ್ಧಿಗೆ ಸಾಕ್ಷಿಯಾಗಿವೆ. ಹಿತಮಿತವಾದ ವಾತಾವರಣ, ಅತಿ ಬಿಸಿಲು ಅಲ್ಲದ, ಅತಿ ಮಳೆಯ ಕಾಟವೂ ಇಲ್ಲದ, ಅತಿಶೀತದ ಬಾಧೆ ಕಾಡದ ತಾಲ್ಲೂಕು ಚನ್ನಪಟ್ಟಣ."[1]

ಐದು ಲಕ್ಷ ಜನಸಂಖ್ಯೆಯ ಈ ತಾಲ್ಲೂಕು ಪರಿಶ್ರಮ ಜೀವಿಗಳಿಂದ ತುಂಬಿದೆ. ಕರಕುಶಲ ಕರ್ಮಿಗಳು, ರೈತರು, ಕಾರ್ಮಿಕರು ಇಲ್ಲಿ ಬಹುಸಂಖ್ಯಾತರಾಗಿದ್ದಾರೆ. ಅಪ್ಪಟ ಗ್ರಾಮೀಣ ಪರಿಸರದಿಂದ ಆವೃತವಾಗಿರುವ ಚನ್ನಪಟ್ಟಣ ಭೌಗೋಳಿಕವಾಗಿ ರಾಜ್ಯ ಹೆದ್ದಾರಿಯ (ಬೆಂಗಳೂರು–ಮೈಸೂರು) ನಡುವಣ ಮಹತ್ವದ ಸ್ಥಳವಾಗಿದೆ.

ಕಣ್ವನದಿ ಈ ತಾಲ್ಲೂಕಿನ ಜೀವನಾಡಿಯಾಗಿದ್ದು, ಕಣ್ವ ಜಲಾಶಯ ವಿಶಿಷ್ಟವಾದ ಕ್ರಸ್ಟ್‌ಗೇಟ್ ಅಳವಡಿಕೆ ಹೊಂದಿದೆ. ಇದು ಮಾಗಡಿ ತಾಲ್ಲೂಕಿನ ಶ್ರೀಪತಿಹಳ್ಳಿ ಎಂಬ ಗ್ರಾಮದ ಸಮೀಪದಲ್ಲಿ ಹುಟ್ಟಿ, ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. ಈ ನದಿ ಹರಿಯುವ ಪ್ರದೇಶ ಸಮುದ್ರ ಮಟ್ಟಕ್ಕಿಂತ ಸುಮಾರು 625 ಮೀ ಎತ್ತರದಲ್ಲಿದೆ. ಜಲಾನಯನದ ಪ್ರದೇಶ ಸುಮಾರು 215 ಚ.ಕಿ.ಮೀ ಚನ್ನಪಟ್ಟಣ ತಾಲ್ಲೂಕಿನ ಎಲ್ಲೆಯಿಂದ ಹರಿಯುವ ಈ ನದಿಯ ಭಾಗದ ಉದ್ದ 34 ಕಿ.ಮೀ. ಇದು ತಾಲ್ಲೂಕಿನ ಎಲ್ಲೆಯಿಂದ ಸುಮಾರು 1 ಕಿ.ಮೀ. ದೂರದಲ್ಲಿ ಸರಗೂರು ಗ್ರಾಮದ ಹತ್ತಿರ ಶಿಂಷಾ ನದಿಯನ್ನು ಸೇರುವ ಕಣ್ವ ನದಿ ಈ ತಾಲ್ಲೂಕಿನ ಕೃಷಿಯ ಬೆನ್ನೆಲುಬಾಗಿದೆ. ನಮ್ಮ ರಾಷ್ಟ್ರವೇ ಭೌಗೋಳಿಕವಾಗಿ ದೈವದತ್ತವಾದ ಹಿನ್ನೆಲೆ ಹೊಂದಿದೆ. ಮೂರು ಕಡೆ ನೀರು ಒಂದು ಕಡೆ ಭೂಮಿ ಇದ್ದು, ಪರ್ಯಾಯ ದ್ವೀಪವಾಗಿ ಹೆಸರಾದ ನಾಡು ಭಾರತ. ಇಂಥ ಸಮೃದ್ಧಿ ಇಂದು ಪರಿಸರ ಮಾಲಿನ್ಯದಿಂದ ಹನಿ ನೀರಿಗಾಗಿ ಬಾಯ್ಬಿಡುವ ಸ್ಥಿತಿಗೆ ನಮ್ಮನ್ನು ತಂದು ನಿಲ್ಲಿಸಿದೆ. ತೆಂಗು, ಕಬ್ಬು, ಬಾಳೆಯಂಥ ವಾಣಿಜ್ಯಕ ಬೆಳೆಗೆ ಚನ್ನಪಟ್ಟಣ ಹೆಸರಾಗಿದೆ. 50 ಸಾವಿರ ಎಕರೆ ಪ್ರದೇಶ ನೀರಾವರಿಗೆ ಒಳಪಟ್ಟಿದ್ದು ಫಲವತ್ತಾದ ಮಣ್ಣು ರೈತರ ಬದುಕನ್ನು ಹಸಿರಾಗಿಸಿದೆ. ವಿಶ್ವದಾದ್ಯಂತ ಕಾಡುತ್ತಿರುವ ಪರಿಸರ ಮಾಲಿನ್ಯದಿಂದಾಗಿ ಮಾನವ ನಿರ್ಮಿತ 'ಜಲಕ್ಷಾಮ' ಈ ತಾಲ್ಲೂಕನ್ನು ಕಂಗೆಡಿಸುತ್ತಿದೆ. 1000 ಅಡಿಗಿಳಿದಿರುವ ಅಂತರ್ಜಲ ಭವಿಷ್ಯದ ಬಗ್ಗೆ ಭಯ ಹುಟ್ಟಿಸುತ್ತದೆ. ಅಲ್ಲಿಗಿಳಿದರೂ ನೀರು ಸಿಗುವ ಭರವಸೆ ಇಲ್ಲ.

ಕೆರೆಗಳು, ಬೆಟ್ಟಗಳು ಈ ತಾಲ್ಲೂಕಿನ ವಿಶಿಷ್ಟ ಅಂಶಗಳು. ರಾಮಮ್ಮನ ಕೆರೆ, ಕೂಡ್ಲೂರು ಕೆರೆ ಮಳೂರುಪಟ್ಟಣದ ಕೆರೆ, ಹೊಂಗನೂರು ಕೆರೆ, ಮಳೂರು ಕೆರೆ, ಮೊಗೇನಹಳ್ಳಿ ಕೆರೆ, ಹರೂರು ಕೆರೆ, ಇನ್ನು ಮುಂತಾಗಿ ಹಲವಾರು ಸಣ್ಣ–ಪುಟ್ಟ ಕೆರೆಗಳನ್ನು ತಾಲ್ಲೂಕಿನಾದ್ಯಂತ ಗುರುತಿಸಬಹುದು. ಚನ್ನಪಟ್ಟಣದಿಂದ 8 ಕಿ.ಮೀ ದೂರದಲ್ಲಿರುವ ಅಬ್ಬೂರಿನ ಬಳಿ ನದಿಗೆ

ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಲಾಗಿದೆ. ಇದು 1940–46ರ ಅವಧಿಯಲ್ಲಿ ನಿರ್ಮಾಣಗೊಂಡಿದೆ. 30 ಗ್ರಾಮಗಳ ವ್ಯಾಪ್ತಿಗೆ ನೀರಾವರಿ ಸೌಕರ್ಯ ಕಲ್ಪಿಸಿ ಇಲ್ಲಿನ ಜನತೆಯ ಜೀವನಾಡಿ ಎನಿಸಿದೆ.

ಈ ತಾಲ್ಲೂಕಿನ ಪ್ರದೇಶದ ಭೂಮಿಯ ಮಣ್ಣು ಸಾಕಷ್ಟು ವೈವಿಧ್ಯಮಯವಾಗಿದ್ದು ಭತ್ತ, ಕಬ್ಬು, ರಾಗಿ, ಬಾಳೆ, ಮಾವು, ಅಡಕೆ, ವೀಳ್ಯೆದೆಲೆ, ಶುಂಠಿ, ಕಾಫಿ ಮುಂತಾದ ಬೆಳೆ ಬೆಳೆಯಲು ಸಹಕಾರಿಯಾಗಿದೆ. ಕಬ್ಬು ಪ್ರಮುಖ ಬೆಳೆಯಲ್ಲದಿದ್ದರೂ ಪಟ್ಟಣದ ಸುತ್ತಮುತ್ತ ಬೆಳೆಯುವ 'ಪಟಾವಳಿ' ಕಬ್ಬು ಸಂಕ್ರಾಂತಿ ಹಬ್ಬದಲ್ಲಿ ಎಲ್ಲರ ಮನಸೆಳೆಯುತ್ತದೆ. ಅಂಬಾಡಹಳ್ಳಿ ಸುತ್ತಮುತ್ತ ಬೆಳೆಯುವ 'ದೇವರ ತುಳಸಿ' ಬೆಂಗಳೂರು ನಗರದಲ್ಲಿ ಪ್ರಸಿದ್ಧಿ ಪಡೆದಿದೆ. ಇತ್ತೀಚೆಗೆ ತರಕಾರಿಯನ್ನು, ಸೊಪ್ಪುಗಳನ್ನು ಸಾಕಷ್ಟು ಬೆಳೆಯತೊಡಗಿದ್ದಾರೆ. ಡಾ.ಮರೀಗೌಡರ ವಿಶೇಷ ಕಳಕಳಿಯಿಂದ ಭೈರಾಪಟ್ಟಣದ ದೊಂಬರ ಕೊಡುಗೆ ಜಮೀನು ತೋಟಗಾರಿಕೆ ಇಲಾಖೆಗೆ ಸೇರಿ ಸೀಬೆ, ಸಪೋಟ ಹಣ್ಣುಗಳನ್ನು ಸಮೃದ್ಧವಾಗಿ ಬೆಳೆಯಲಾಗುತ್ತಿದೆ.

ಇಲ್ಲಿನ ಅರಣ್ಯ ಪ್ರದೇಶವು ಸುಮಾರು 9131 ಹೆಕ್ಟೆರ್ ವಿಸ್ತೀರ್ಣ ಹೊಂದಿದ್ದು ಬಿದಿರು, ನೀಲಗಿರಿ ಇತರ ಕುರುಚಲು ಸಸ್ಯವರ್ಗದಿಂದ ಕೂಡಿದೆ. 16 ಕಿ.ಮೀ ರಾಜ್ಯ ಹೆದ್ದಾರಿ, 11 ಕಿ.ಮೀ ಮೀಟರ್ ಗೇಜ್ ರೈಲ್ವೆ ಮಾರ್ಗವನ್ನು, 69 ಕಿ.ಮೀ ಜಿಲ್ಲಾ ಮುಖ್ಯ ರಸ್ತೆಯನ್ನು, 338 ಕಿ.ಮೀ ಹಳ್ಳಿ ರಸ್ತೆ ಸಾರಿಗೆಯನ್ನು ಹೊಂದಿದೆ.

ಗವಿರಂಗಸ್ವಾಮಿ ಬೆಟ್ಟ, ಹಿತ್ತಲಗುಡ್ಡ, ಕರಡಿಕಲ್ಲು, ಚಿಕ್ಕಗುಡ್ಡ, ಬಸವನಕಲ್ಲು ಮಾಕಳಿ, ಕೆಂಗಲ್, ನರಸಿಂಹಸ್ವಾಮಿ ಬೆಟ್ಟಗಳು ಪ್ರಮುಖ ಬೆಟ್ಟಗಳಾಗಿವೆ. ತಾಲ್ಲೂಕು ರೇಷ್ಮೆ ಬೆಳೆ ಬೆಳೆಯುವುದಕ್ಕೆ ಮತ್ತು ರೇಷ್ಮೆ ಕೈಗಾರಿಕೆಗೂ ಪ್ರಸಿದ್ಧಿ ಹೊಂದಿದೆ. ಮೃದುವಾದ ಆಲೆಮರ ಹೆಚ್ಚಾಗಿ ದೊರಕುವುದರಿಂದ ಬಣ್ಣದ ಸಾಮಾನುಗಳು, ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆಯಲ್ಲದೆ ಅಮೇರಿಕಾ, ಹಾಲೆಂಡ್, ಡೆನ್ಮಾರ್ಕ್, ಜಪಾನ್, ಚೀನಾ ಹಾಗೂ ಜರ್ಮನ್ ಮುಂತಾದ ರಾಷ್ಟ್ರಗಳಿಗೆ ಬಣ್ಣದ ಸಾಮಾನುಗಳನ್ನು ರಫ್ತು ಮಾಡುತ್ತಿದೆ.

ಚನ್ನಪಟ್ಟಣವೂ ಒಂದು ವ್ಯಾಪಾರ ಕೇಂದ್ರವಾಗಿ ಮನ್ನಣೆ ಪಡೆದಿತ್ತು. ದಟ್ಟವಾದ ಜನವಸತಿ ಇರುವುದು ಮಂಗಳವಾರಪೇಟೆಯಲ್ಲಿ. ಮೃದುವಾದ ಆಲೆಮರದ ಬಣ್ಣದ ಸಾಮಾನುಗಳು ತಯಾರಾಗುವುದು ಇಲ್ಲೇ. ಇವು ಇಂದಿಗೂ ವಿಶ್ವವಿಖ್ಯಾತವಾಗಿದ್ದು ಹೊರದೇಶಗಳಿಗೆ ರಫ್ತಾಗುತ್ತಿವೆ. ವೀಣೆಯ ತಂತಿಗಳು, ಬಳೆಗಳು ಹಿಂದೆ ಇಲ್ಲೇ ತಯಾರಾಗುತ್ತಿದ್ದವು. ಈಗ ಈ ಕೈಗಾರಿಕೆಗಳು ನಶಿಸುತ್ತಿವೆ. ಸುಂದರ ತಾಣವಾದ ಈ ಊರು

ವ್ಯಾಸತೀರ್ಥರ ಕಾಲದಲ್ಲಿ 'ಚಂದಪಟ್ಟಣ' ವೆಂದು ಹೆಸರಾಯಿತೆಂದು ಆನಂತರ ಇದು ಚನ್ನಪಟ್ಟಣ ಎಂದಾಯಿತೆಂದೂ ಹೇಳಲಾಗಿದೆ.

ತಾಲ್ಲೂಕಿನಲ್ಲಿ ಮಳೆ ಆಶ್ರಯದಲ್ಲಿ ಬೆಳೆಯುವ ಬೆಳೆಗಳೇ ಅಧಿಕ. ಒಟ್ಟು ಹಿಡುವಳಿ ಭೂಮಿಯಲ್ಲಿ ಕಾಲು ಭಾಗದಷ್ಟು ಮಾತ್ರ ನೀರಾವರಿ ಇದೆ. ತಾಲ್ಲೂಕಿನಲ್ಲೇ ದೊಡ್ಡ ಕೆರೆ ಎಂದರೆ ಕಣ್ವಕೆರೆ. ಇಷ್ಟೇ ಅಲ್ಲದೆ 27 ದೊಡ್ಡ ಕೆರೆಗಳು, 15 ಸಣ್ಣ ಕೆರೆಗಳು ನೂರಾರು ನೀರಾವರಿ ಮೂಲಗಳು ಈ ತಾಲ್ಲೂಕಿನಲ್ಲಿ ಇವೆ.

ಹೀಗೆ ಭೌಗೋಳಿಕವಾಗಿ ವಿಭಿನ್ನ ನೆಲೆಯನ್ನು ಹೊಂದಿರುವ ಚನ್ನಪಟ್ಟಣ ತಾಲ್ಲೂಕಿನ ಸುತ್ತಲ ಸ್ಥಳವು ವೈವಿಧ್ಯಮಯವಾಗಿದೆ.

2.2 ಚನ್ನಪಟ್ಟಣ ತಾಲ್ಲೂಕಿನ ಚಾರಿತ್ರಿಕ ಹಿನ್ನೆಲೆ :

ಚನ್ನಪಟ್ಟಣ ತಾಲ್ಲೂಕು ಚಾರಿತ್ರಿಕ ದೃಷ್ಟಿಯಿಂದ ವಿಶಿಷ್ಟತೆ ಮೆರೆದಿದೆ. ಕವಿಯೊಬ್ಬರು ವರ್ಣಿಸಿರುವಂತೆ;

"ಭುವನ ಜನಮೋಹಿತಮಾದಿ ಪುರಿಯ ಕೃತಯುಗದ
ವಿಜಯಪಾಲ ತ್ರೇತೆಯ ಕಣ್ವಮೇಣ್
ದ್ವಾಪರದ ಲಂಬಕರ್ಣ ಕಲಿಯ ಯಜ್ಞವಲ್ಕ್ಯಸ್ಮತಿಯ ಭಾಷ್ಯ
ಕುರ. ಶ್ರೀ ವಿಜ್ಞಾನೇಶ್ವರ ಮಹಾರಾಜರ ನಿವಾಸಸ್ಥಾನ
ಮೆನಿಸಿ ಪಂಚಕ್ರೋಶ. ಚತುರ್ವೇದಪುರ ಜ್ಞಾನಮಂಟಪ ತೆಂಕಣ
ದಯೋಧ್ಯೇತ್ಯಾದಿ ನಾಮಗಳಿಂ ರಂಜಿಸಿ ವ್ಯಾಸತೀರ್ಥರ
ಕಾಲದ ಚಂದಪಟ್ಟಣ ಪೆಸರ್ವೆರೆದು ಅತಿ ಪ್ರಾಚೀನವತಿ ಅಂದ
ಮಾಗಿರ್ದು ಕಂಗೊಳಿಸುತಿಹುದು"[2]

ಇದು ಪೌರಾಣಿಕ ಪ್ರಸಿದ್ಧಿಯನ್ನು ಪಡೆದಿತ್ತು. ತಾಲ್ಲೂಕಿನ ಚಾರಿತ್ರಿಕ ಹಿನ್ನೆಲೆಯನ್ನು ತಿಳಿದುಕೊಳ್ಳಲು ನಮಗಿರುವ ಮುಖ್ಯ ಆಕರಗಳೆಂದರೆ ಶಾಸನಗಳು, ಇಂಗ್ಲೀಷ್ ಮತ್ತು ಮರಾಠರ ದಾಖಲೆಗಳು, ಅಲ್ಪಸ್ವಲ್ಪ ಸಿಗುವ ಸಾಹಿತ್ಯಕ ದಾಖಲೆಗಳು ಹಾಗೂ ಇಲ್ಲಿನ ಪ್ರಾಚೀನ ಸ್ಮಾರಕ ಮತ್ತು ಜಾನಪದ ಕಥಾನಕಗಳು.

ಚನ್ನಪಟ್ಟಣ ಹಲವಾರು ಹೆಸರುಗಳಿಂದ ವರ್ಣಿಸಲ್ಪಟ್ಟಿದೆ. ಚನ್ನಪಟ್ಟಣವೆಂದು, ವ್ಯಾಸತೀರ್ಥರ ಕಾಲದಲ್ಲಿ ತನ್ನ ಆವರಣ ಸೌಂದರ್ಯದಿಂದ ಪ್ರಖ್ಯಾತವಾಗಿದ್ದು, ಚಂದಾಪುರ, ಪಂಚಕೋಶ, ಚತುರ್ವೇದಪುರ, ಜ್ಞಾನಮಂಟಪಕ್ಷೇತ್ರ, ತೆಂಕಣ ಆಯೋಧ್ಯಾ ಎಂದು ವಿವಿಧ ಹೆಸರುಗಳಿಂದ ವರ್ಣಿಸಲ್ಪಟ್ಟಿದೆ.

1800ರ ಜುಲೈ ತಿಂಗಳಲ್ಲಿ ಬೆಂಗಳೂರು ಜಿಲ್ಲೆಯನ್ನು ಸಂದರ್ಶಿಸಿದ ಬ್ರಿಟೀಷ್ ಅಧಿಕಾರಿ ಡಾ. ಪ್ರಾನ್ಸಿಸ್ ಬುಕೆನಾನ್ ಇದನ್ನು "A Very Beautiful Country" ಎಂದು ವರ್ಣಿಸಿ "ಚಿನಪಟಂ ತೆಂಗು, ಅಡಿಕೆ, ಕಬ್ಬು, ಬಾಳೆತೋಟಗಳಿಂದ ಇಲ್ಲಿನ ಹಸಿರು ಗದ್ದೆಗಳಿಂದ ಕಂಗೊಳಿಸುತ್ತದೆ. ಇಲ್ಲಿ ಬಿದಿರು ಸಾಮಾನ್ಯ, ಸಾವಿರಾರು ಮನೆಗಳಿದ್ದು ಗ್ಲಾಸು, ಬಳೆ, ಸ್ಟೀಲ್, ವೈರ್, ಬಿಳಿಸಕ್ಕರೆ ಕಾರ್ಖಾನೆಗಳಿವೆ"[3] ಎಂದಿರುವುದನ್ನು ಅರ್ಕಾವತಿ ಸ್ಮರಣ ಸಂಚಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಚಾರಿತ್ರಿಕವಾಗಿ ಚನ್ನಪಟ್ಟಣ ಕುತೂಹಲಕರ ಅಂಶಗಳ ಹಿನ್ನೆಲೆ ಹೊಂದಿದೆ. ಗಂಗರ ರಾಜಧಾನಿಯಾಗಿ ಇಲ್ಲಿನ ಮಂಕುಂದ ಹೆಸರಾಗಿದೆ. ಕನ್ನಡ ನಾಡಿನ ಆದ್ಯ ಸಾಮ್ರಾಜ್ಯಗಳು ಎರಡು; ಗಂಗರು ಮತ್ತು ಕದಂಬರು. ಅವುಗಳಲ್ಲಿ ಒಂದರ ರಾಜಧಾನಿ ಈ ತಾಲ್ಲೂಕಿಗೆ ಸೇರಿದೆ. ಸಂಸ್ಕೃತ ವ್ಯಾಕರಣ ಗ್ರಂಥವಾದ ಮಿತಾಕ್ಷರವನ್ನು ಬರೆದ ವಿಜ್ಞಾನೇಶ್ವರ ಇಲ್ಲಿನ ಮಳೂರಿನಲ್ಲಿ ನೆಲೆಸಿದ್ದನು. ನಿವೃತ್ತ ನ್ಯಾಯಾಧೀಶರಾದ ಎಂ.ರಾಮಾಜೋಯಿಸರ ಸಂಶೋಧನಾತ್ಮಕ ಕೃತಿಯಲ್ಲಿ ಈ ಬಗ್ಗೆ ವಿವರಗಳಿವೆ. ದೊಡ್ಡಮಳೂರಿನ ಸುಪ್ರಸಿದ್ಧವಾದ ಅಪ್ರಮೇಯ ದೇವಸ್ಥಾನ ಚರಿತ್ರೆಯಲ್ಲೂ ಈ ಅಂಶ ದಾಖಲಾಗಿದೆ. ಈ ತಾಲ್ಲೂಕಿನ ಅಬ್ಬೂರು ಚಾರಿತ್ರಿಕವಾಗಿ, ಧಾರ್ಮಿಕವಾಗಿ ಪ್ರಸಿದ್ಧ ವ್ಯಕ್ತಿಗಳಿಗೆ ಜನ್ಮ ನೀಡಿದೆ. ಇಲ್ಲಿನ ಪುರುಷೋತ್ತಮ ತೀರ್ಥರು, ಬ್ರಹ್ಮಣ್ಯತೀರ್ಥರು ಮಾಧ್ವಯುತಗಳ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದರೆ, ಶ್ರೀಪಾದರಾಜರು 'ರಂಗವಿಠಲ' ಅಂಕಿತದಿಂದ ದೇವರನಾಮಗಳನ್ನು ರಚಿಸಿ ಪೂಜಾಕಾಲದಲ್ಲಿ ಹಾಡಿ, ನರ್ತಿಸಿ ಮೆರೆದು ಕನ್ನಡ ನಾಡಿನಲ್ಲಿ ಪ್ರಬಲವಾದ ಹರಿದಾಸರ ಪರಂಪರೆಯನ್ನು ಹುಟ್ಟು ಹಾಕಿ, ದಾಸ ಸಾಹಿತ್ಯ ಸಾಮ್ರಾಜ್ಯ ಸ್ಥಾಪಕರೆಂದೇ ಪ್ರಖ್ಯಾತರಾಗಿ ಪ್ರಾತಃ ಸ್ಮರಣೀಯರಾಗಿದ್ದಾರೆ. ಇಲ್ಲಿನ ಮಳೂರು ವಿಶಿಷ್ಟಾದ್ವೈತದ ಪ್ರಮುಖ ಕೇಂದ್ರವಾದರೆ, ಅಬ್ಬೂರು, ಬ್ರಹ್ಮಣಿಪುರಗಳು ಮಾಧ್ವಕೇಂದ್ರಗಳಾಗಿ ಹೆಸರಾಗಿವೆ. ಕನ್ನಡನಾಡಿಗೆ ಪುರಂದರದಾಸರಂಥ ದಾಸಶ್ರೇಷ್ಠರನ್ನು, ಕನಕದಾಸರಂಥ ಭಕ್ತ ಶ್ರೀಕೃಷ್ಣರನ್ನು ಕಾಣಿಕೆಯಾಗಿ ನೀಡಿ, ವ್ಯಾಸಕೂಟ ದಾಸಕೂಟಗಳನ್ನು ಸ್ಥಾಪಿಸಿ 'ಸಿರಿಕೃಷ್ಣ' ಅಂಕಿತದಿಂದ ಹೆಸರಾದ ವ್ಯಾಸರಾಜರು ಇಲ್ಲಿನ ಅಬ್ಬೂರಿನಲ್ಲಿ ನೆಲೆಸಿ

ಬ್ರಹ್ಮಣ್ಯತೀರ್ಥರ ಶಿಷ್ಯರಾಗಿ, ಶ್ರೀಪಾದರಾಜರ ಶಿಷ್ಯರಾಗಿ ಬೆಳೆದವರು. ಪುರಂದರದಾಸರ 'ಜಗದೋದ್ದಾರನ' ಕೃತಿ ರಚನೆಯಾಗಿದ್ದು ಇಲ್ಲಿನ ಮಳೂರಿನ ಅಪ್ರಮೇಯ ದೇವಸ್ಥಾನದ ಒಂದು ಪಾರ್ಶ್ವದಲ್ಲಿರುವ ಸಂತಾನ ಕೃಷ್ಣನ ಸನ್ನಿಧಿಯಲ್ಲಿ. ಇಲ್ಲಿನ ಕೋಟೆಯ ವರದರಾಜಸ್ವಾಮಿ ದೇವಸ್ಥಾನ, ಚೋಳರ ಕಾಲದಲ್ಲಿ ನಿರ್ಮಾಣಗೊಂಡ ಭವ್ಯದೇಗುಲ.

ಚಂದಪಟ್ಟಣ, ಜ್ಞಾನಮಂಟಪ, ಚತುರ್ವೇದಪುರ ಮುಂತಾದ ಹೆಸರುಗಳನ್ನು ಹೊಂದಿದ ಈ ನಾಡಿನ ಚಾರಿತ್ರಿಕ ಹಿನ್ನೆಲೆಯ ಬಗ್ಗೆ ಐತಿಹ್ಯಗಳು, ಶಾಸನಗಳು ಜೊತೆಗೆ ಬ್ರಿಟೀಷರ ದಾಖಲೆಗಳು ಆಕರ ಸಾಮಗ್ರಿಗಳಾಗಿವೆ.

ಗಂಗರ ಕಾಲದಲ್ಲಿ ಚನ್ನಪಟ್ಟಣ ಪ್ರಸಿದ್ಧಿಗೆ ಬಂದಿತು. ಗಂಗರ ಕಾಲದಲ್ಲಿ ಗಂಗವಾಡಿ 9600 ಪ್ರದೇಶದಲ್ಲಿ ಶಿಂಷಾ ಕಣಿವೆಯನ್ನು ಚಿಕ್ಕಗಂಗವಾಡಿ ಎಂದು ಕರೆಯುತ್ತಿದ್ದರು. ಹೊಂಗನೂರು ಅದರ ಉಪರಾಜಧಾನಿಯಾಗಿಯೂ, ಮಂಕುಂದ ರಾಜಧಾನಿಯಾಗಿಯೂ ಪ್ರಸಿದ್ಧಿಗೆ ಬಂದಿತು. ಗಂಗರ ದೊರೆ ಭೂವಿಕ್ರಮ ಮತ್ತು ಶ್ರೀಪುರುಷರ ಕಾಲದಲ್ಲಿ ಚನ್ನಪಟ್ಟಣ ಆರ್ಥಿಕ ಮತ್ತು ಸೈನಿಕ ದೃಷ್ಟಿಯಿಂದಲೂ ಆಯಕಟ್ಟಿನ ಸ್ಥಳವಾಗಿತ್ತು. ಆ ಕಾರಣದಿಂದಲೇ ಮಂಕುಂದ ರಾಜಧಾನಿಯಾಗಿರಬೇಕು. ಚೋಳ ಮತ್ತು ಚಾಲುಕ್ಯರ ಆಕ್ರಮಣಗಳಿಂದ ರಕ್ಷಿಸಿಕೊಳ್ಳುವ ಉದ್ದೇಶವಿದ್ದಿರಬೇಕು. ಮುಂದೆ ಈ ಸ್ಥಳ ಚೋಳರ ಆಕ್ರಮಣಗಳಿಗೆ ತುತ್ತಾಗಿ ಕೆಲವಾರು ವರ್ಷ ಅವರ ಆಳ್ವಿಕೆಗೆ ಒಳಪಟ್ಟಿತ್ತು. ಇದೇ ಅವಧಿಯಲ್ಲಿ ಮಳೂರು, ಮಳೂರುಪಟ್ಟಣ, ಅಬ್ಬೂರು, ಕೂಡ್ಲೂರು, ಬ್ರಹ್ಮಣಿಪುರ ಇತರ ಸ್ಥಳಗಳು ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರಗಳಾಗಿ ಪ್ರಸಿದ್ದಿಗೆ ಬಂದವು. ಚನ್ನಪಟ್ಟಣ ತಾಲ್ಲೂಕಿನ ಸಿದ್ದಾಪುರದಲ್ಲಿ ಮಧ್ಯಶಿಲಾಯುಗದ ಅವಶೇಷಗಳು ಕಂಡುಬಂದಿವೆ. ವಿಠೇಲನಹಳ್ಳಿಯಲ್ಲಿಯೂ ಶಿಲಾಯುಗದ ಅವಶೇಷಗಳು ಇವೆ. ಇವು ಕ್ರಿ.ಪೂ. 10,000 ದಿಂದ 8,000 ಕಾಲಕ್ಕೆ ಸೇರಿದಂತವು. ಇಲ್ಲಿ ಕೈಗೊಡಲಿಗಳು ಇತರ ಪುರಾತನ ಅವಶೇಷಗಳು ಲಭ್ಯವಾಗಿದೆ.

ಗಂಗರ ಕಾಲದ ಮಂಕುಂದ ರಾಜಧಾನಿಯಾಗಿತ್ತಲ್ಲದೆ 'ಕಿಲಾಲೈನಾಡು'ವಿನ ಮುಖ್ಯ ಕೇಂದ್ರ ಸ್ಥಳವಾಗಿತ್ತು. ಅಂದರೆ ಚೋಳರ ಕಾಲದಲ್ಲಿ ಇದನ್ನು ಜಯಗೊಂಡು 'ಚೋಳಪುರಂ'[4] ಎಂದು ಹೆಸರಿಸಲಾಯಿತು.

ಮೊಗೇನಹಳ್ಳಿ ಶಾಸನ'[5] ಕ್ರಿ.ಶ. 1,000ರಲ್ಲಿ ಉಲ್ಲೇಖಿತವಾಗಿರುವಂತೆ 'ಪುಂಗನೂರು ಅಗ್ರಹಾರ' ಅಸ್ತಿತ್ವಕ್ಕೆ ಬಂದಿತು. ಇದನ್ನು ರಾಜರಾಜನ ಹೆಂಡತಿಯ ಹೆಸರಿನಲ್ಲಿ

'ತ್ರೈಲೋಕ್ಯಮಹಾದೇವಿ, ಚತುರ್ವೇದಿ ಮಂಗಳಂ' ಎಂದು ಕರೆಯಲಾಯಿತು. ಕ್ರಿ.ಶ. 1007ರಲ್ಲಿ 'ಮಳೂರುಪಟ್ಟಣ'ದಲ್ಲಿ ಅಗ್ರಹಾರ ಸ್ಥಾಪಿತವಾಯಿತು. ಇದನ್ನು ರಾಜರಾಜ ಚೋಳನು ಸ್ಥಾಪಿಸಿ 'ಜಯದೊಂಡಚೋಳ ವಿನ್ನಾಗರ್' ಎಂದು ಕರೆಯಲಾಯಿತು. ಇದೇ ಅವಧಿಯಲ್ಲಿ ಮಳೂರಿನ ಅಗ್ರಹಾರ 'ರಾಜರಾಜಚತುರ್ವೇದಿ ಮಂಗಲಂ' ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಿತು. ಕ್ರಿ.ಶ. 1020ರ **ತಾಮ್ರ ಶಾಸನದಲ್ಲಿ**[6] ಕೊಡ್ಲೂರು ಅಗ್ರಹಾರ ರಾಜರಾಜಚೋಳನ ಹೆಸರಿನಲ್ಲಿ ಸ್ಥಾಪಿಸಲಾಯಿತು.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಚೋಳದೊರೆಗಳು ಪ್ರಾಬಲ್ಯಗೊಂಡಂತೆ ಅಗ್ರಹಾರಗಳನ್ನು ಸ್ಥಾಪಿಸುವ ಮೂಲಕ ವೈಷ್ಣವ ಮತವನ್ನು ಮತ್ತಷ್ಟು ಬಲಿಷ್ಟಗೊಳಿಸಿದರು. ಆಳ್ವಾರರು ತಮಿಳುನಾಡಿನಿಂದ ಬಂದು ಇಲ್ಲಿ ನೆಲೆಸಿದ ವಿಚಾರ ಇದರಿಂದ ವೇದ್ಯವಾಗುತ್ತದೆ. ಮಳೂರು ಪಟ್ಟಣದ ನಾರಾಯಣಸ್ವಾಮಿ ದೇವಸ್ಥಾನ, ಮನ ಊರು ಅಥವಾ ಮಳೂರಿನ ಅಪ್ರಮೇಯ ಸ್ವಾಮಿ ದೇವಸ್ಥಾನ ಇದೇ ಅವಧಿಯಲ್ಲಿ ನಿರ್ಮಾಣಗೊಂಡವು.

ಕ್ರಿ.ಶ. 1018ರಲ್ಲಿ ರಾಜೇಂದ್ರ ಚೋಳನು ಹೊಂಗನೂರಿಗೆ ಭೇಟಿಕೊಟ್ಟು ಸ್ವಲ್ಪ ಕಾಲ ತಂಗಿದ್ದ ವಿಚಾರವನ್ನು **ಹೊಂಗನೂರಿನ ಶಾಸನ**[7]ವೊಂದು ಉಲ್ಲೇಖಿಸುತ್ತದೆ. ಪುಂಗನೂರಿನ ಕುಂದೈವನ್ನಾಗರ್ ಆಳ್ವಾರ್ ದೇವರಿಗೆ ದಾನ ಬಿಟ್ಟ ಸಂಗತಿಯನ್ನು ಇದೇ ಶಾಸನ ತಿಳಿಸುತ್ತದೆ. ಹೊಂಗನೂರಿನ ವೀರಗಲ್ಲು ಶಾಸನವು ಹೊಯ್ಸಳ ನರಸಿಂಹನ ಮಂತ್ರಿ ಮಲ್ಲಿದೇವ ದಣ್ಣಾಯಕ ಸಾಗುಂದ ಕೋಟೆಯನ್ನು ವಶಪಡಿಸಿಕೊಳ್ಳುವಾಗ ಮಡಿದ ವಿಚಾರವನ್ನು ತಿಳಿಸುತ್ತದೆ. ಈತನ ಹೆಂಡತಿ ನಾಗವ್ವ ಇಲ್ಲಿ ವೀರಗಲ್ಲೊಂದನ್ನು ಪ್ರತಿಷ್ಠಾಪಿಸಿದಳು. ಚೋಳರು ಇಲ್ಲಿನ ದೇವಾಲಯಗಳನ್ನು ನಿರ್ಮಿಸಿದರಲ್ಲದೆ ಅವುಗಳಿಗೆ ದತ್ತಿಕೊಟ್ಟ ವಿಚಾರವು ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಪುಂಗನೂರಿನ ಸೋಮಶೇಖರನ ಮಗ ಪೊಳ್ಳೆಯನ್ ಎಂಬಾತನು ಇದೇ ಗ್ರಾಮದ ಕಂದೈವನ್ನಾಗರ್ ಆಳ್ವರ್ ದೇವರಿಗೆ ದತ್ತಿ ಬಿಟ್ಟ ಸಂಗತಿ ಇದೆ. ರಾಜರಾಜ ಚೋಳನು ಮಳೂರು ಪಟ್ಟಣದ ನಾರಾಯಣಸ್ವಾಮಿ ದೇವಸ್ಥಾನಕ್ಕೆ ದತ್ತಿ ದಾನ ಮಾಡಿದ ವಿಚಾರವನ್ನು **ಮೊಗೇನಹಳ್ಳಿಯ ಶಾಸನ**[8] ಉಲ್ಲೇಖಿಸುತ್ತದೆ. ಮುಡಿಗೊಂಡ ಚೋಳ ಮಂಡಲದ ಅಧಿಕಾರಿಯೊಬ್ಬನು ಕೆರೆಯನ್ನು ಕಟ್ಟಿಸಿ ದುರ್ಗೈಯಾರ್ ದೇವಗಿರಿ ನೈವೇದ್ಯಕ್ಕಾಗಿ ದಾನ ನೀಡಿದ ವಿಚಾರವನ್ನು ಕ್ರಿ.ಶ. 1014ರ ಶಾಸನವೊಂದು ತಿಳಿಸುತ್ತದೆ. ಕ್ರಿ.ಶ. 1044–45ರ ವರೆಗೆ ಆಳ್ವಿಕೆ ನಡೆಸಿದ ರಾಜಾಧಿರಾಜ ಮತ್ತು ಆನಂತರ ಅಧಿಕಾರಕ್ಕೆ ಬಂದ ಚೋಳರಾಜ, ವೀರರಾಜೇಂದ್ರರು, ಸಿದ್ದೇಶ್ವರ ಮತ್ತು

ಕೈಲಾಸನಾಥೇಶ್ವರ ದೇವಸ್ಥಾನಕ್ಕೆ ದತ್ತಿಬಿಟ್ಟ ವಿಚಾರವನ್ನು **ಬ್ಯಾಡರಹಳ್ಳಿಯ ಶಾಸನ**[9] ಉಲ್ಲೇಖಿಸುತ್ತದೆ. 1086ರಲ್ಲಿ 6ನೇ ವಿಕ್ರಮಾದಿತ್ಯ ಕೈಲಾಸನಾಥೇಶ್ವರ ದೇವಸ್ಥಾನಕ್ಕೆ ನಂಗಲಿಯಿಂದ ಆನೆಗಳನ್ನು ಕಳುಹಿಸಿದ ವಿಚಾರವನ್ನು **ಹೊನ್ನಾಯಕನಹಳ್ಳಿಯ ಶಾಸನ**[10] ಪ್ರಸ್ತಾಪಿಸುತ್ತದೆ.

ಚೋಳರ ಕಾಲದಲ್ಲಿ ಚನ್ನಪಟ್ಟಣದ ಸುತ್ತಮುತ್ತಲ ಹಳ್ಳಿಗಳು ಅದರಲ್ಲೂ ಹೊಂಗನೂರು, ಮಳೂರು, ಕೂಡ್ಲೂರು, ಮಳೂರುಪಟ್ಟಣಗಳು ಕೃಷಿ, ವ್ಯಾಪಾರ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಸಿದ್ಧಿಗೆ ಬಂದ ವಿಚಾರಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಇವು ಆ ಕಾಲದ ಅತ್ಯಂತ ಚಟುವಟಿಕೆಯ ಕೇಂದ್ರಗಳಾಗಿದ್ದವು.

ಚೋಳರ ನಂತರ ಚನ್ನಪಟ್ಟಣ, ಹೊಯ್ಸಳ ಮತ್ತು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಹೊಯ್ಸಳರ ಕಾಲದಲ್ಲೂ ಹೊಂಗನೂರು ಹೊಯ್ಸಳರ ಉಪದಂಡನಾಯಕನ ಸೇನಾನೆಲೆಯಾಗಿ ಪ್ರಸಿದ್ಧಿಗೆ ಬಂದಿತು. ಇಲ್ಲಿನ ಸುತ್ತಮುತ್ತಲ ಹಳ್ಳಿಗಳಲ್ಲಿರುವ ಅಸಂಖ್ಯಾತ ವೀರಗಲ್ಲುಗಳು ಆಳರಸರ ಸೇವೆಗೆ, ಇಲ್ಲಿನ ಸ್ಥಳೀಯರ ಸೈನ್ಯಕ್ಕೆ ನೇಮಕವಾಗಿಯೇ ಅಥವಾ ಯುದ್ಧಗಳಲ್ಲಿ ಭಾಗವಹಿಸಿ ಮಡಿದ ವಿಚಾರವನ್ನು ಇವು ತಿಳಿಸುತ್ತವೆ. 2ನೇ ನರಸಿಂಹನ ಹಿರಿಯ ಪಾಳೇಯ ದಂಡನಾಯಕ ಹೊಂಗನೂರನ್ನು ಉಪರಾಜಧಾನಿಯನ್ನಾಗಿ ಮಾಡಿಕೊಂಡು ಇಲ್ಲಿ ವಾಸ್ತವ್ಯ ಹೂಡಿದ್ದನು. ಕಳಲೆನಾಡು ಮಹಾಪ್ರಭು ಕಿಟ್ಟೇಗೌಡ ಮತ್ತು ಅವನ ಮಗ ಮಂಜಪ್ಪಗೌಡ 1414 ರಲ್ಲಿ ಮಳೂರು ಪಟ್ಟಣವನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು.

1416 ರ **ಮಾಕಳಿ ಶಾಸನವು**[11] ತಾಳಗೌಡ ಎಂಬುವವನು ಕೆರೆಯೊಂದನ್ನು ಕಟ್ಟಿಸಿ ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ. ಗರಕಳ್ಳಿ ಶಾಸನದಲ್ಲಿ ವಿಜಯನಗರದ ಅರಸ ದೇವರಾಯನ ವಿಚಾರವನ್ನು ಉಲ್ಲೇಖಿಸುವ ವೀರಗಲ್ಲು ಇದೆ. ಸಾಳ್ವ ನರಸಿಂಹನು ಅಧಿಕಾರಿ ವರದರಾಜದೇವ ಎಂಬುವವನು ಗೌಡಹಳ್ಳಿ ಮಠಕ್ಕೆ ದತ್ತಿಬಿಟ್ಟ ವಿಚಾರವನ್ನು ಚಿಕ್ಕಲೂರು ಶಾಸನ ಉಲ್ಲೇಖಿಸಿದೆ.

1499 ರ **ಕೋಡಂಬಳ್ಳಿ ಶಾಸನ**[12]ವು ಎರಡನೇ ನರಸಿಂಹನ ಕಾರ್ಯಕರ್ತನಾದ ನರಸನಾಯಕನು ಮಲ್ಲೇಶ್ವರ ದೇವಾಲಯಕ್ಕೆ ದತ್ತಿಬಿಟ್ಟ ವಿಚಾರವನ್ನು ಪ್ರಸ್ತಾಪಿಸುತ್ತದೆ.

ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವ ಧರ್ಮದ ಪ್ರಮುಖ ಕೇಂದ್ರವಾಗಿ ಅಬ್ಬೂರು, ಬ್ರಹ್ಮಣೀಪುರ, ಮಳೂರು ಪ್ರಸಿದ್ದಿಗೆ ಬಂದವು. ಅಬ್ಬೂರಿನ ವ್ಯಾಸತೀರ್ಥರು ಮಾಧ್ವ ಪರಂಪರೆಗೆ ಅಡಿಗಲ್ಲನ್ನು ಹಾಕಿ ಅದರ ಸಾರೋದ್ಧಾರಕ್ಕಾಗಿ ಹಲವೆಡೆ ಮಠಗಳನ್ನು ಸ್ಥಾಪಿಸಿದರು.

ಕೃಷ್ಣದೇವರಾಯನು ಚನ್ನಪಟ್ಟಣದ ಇರಪ್ಪದೇವ ನೆಂಬುವವನು 'ಕೃಷ್ಣಸಮುದ್ರ' ಎಂಬ ಹೆಸರಿನಿಂದ ಆತನಿಂದಲೇ ನಾಮಕರಣ ಮಾಡಲ್ಪಟ್ಟವು ಕಿಚ್ಚನ ಹಳ್ಳಿಯನ್ನು ಕೊಡುಗೆಯಾಗಿ ಕೊಟ್ಟನು. "ಚಕ್ಕರೆಯ ತಿರುಮಲ ದೇವಸ್ಥಾನವನ್ನು ಅಚ್ಚುತರಾಯನು ದುರಸ್ಥಿಗೊಳಿಸಿದ ವಿಚಾರವನ್ನು 1534ರ ಶಾಸನ ತಿಳಿಸುತ್ತದೆ. ಮೊಗೇನಹಳ್ಳಿಯ ನಂಜುಂಡೇಶ್ವರ ದೇವಾಲಯಕ್ಕೆ ದಾನಬಿಟ್ಟ ವಿಚಾರವನ್ನು 1535ರ ಶಾಸನ ಉಲ್ಲೇಖಿತವಾಗುತ್ತದೆ."[13]

ವಿಜಯನಗರದ ಕೊನೆಯ ಅರಸ ರಾಮರಾಯನ ಸಹೋದರ ತಿರುಮಲನು 1527ರಲ್ಲಿ ಮಳೂರಿನ ಬ್ರಾಹ್ಮಣರಿಗೆ ದಾನಕೊಟ್ಟ ವಿಚಾರವನ್ನು **ಮೊಗೇನಹಳ್ಳಿಯ ಶಾಸನ**[14]ವೊಂದು ಉಲ್ಲೇಖಿಸಿದೆ. ಇವನು ಪೆನುಗೊಂಡೆಯಲ್ಲಿ ಆಳ್ವಿಕೆ ನಡೆಸುತ್ತಿದ್ದನು.

ಹೀಗೆ ಚರಿತ್ರೆಯ ಪುಟಗಳಲ್ಲಿ ವಿಶಿಷ್ಟ ಅಂಶಗಳನ್ನು ಸೇರಿಸಿದ ಹೆಮ್ಮೆ ಈ ತಾಲ್ಲೂಕಿನದ್ದಾಗಿದೆ. ಭೌಗೋಳಿಕ ಸಮೃದ್ಧಿ, ಚಾರಿತ್ರಿಕ ಶ್ರೀಮಂತ ಪರಂಪರೆ, ಸಾಂಸ್ಕೃತಿಕ ವೈವಿಧ್ಯತೆ, ಸಾಹಿತ್ಯಕ ಸಾಧನೆ, ವೈಜ್ಞಾನಿಕ ದಿಗ್ಗಜರು ಈ ತಾಲ್ಲೂಕಿನ ಹೆಮ್ಮೆಯ ಕೊಡುಗೆಗಳಾಗಿವೆ.

ಒಂದು ನಾಡಿನ ಇತಿಹಾಸ ಕೇವಲ ಗತಕಾಲದ ನೆನಪಾಗಿ ಉಳಿಯದೆ ಭವಿಷ್ಯ ನಿರ್ಮಾಣಕ್ಕೂ ಸ್ಫೂರ್ತಿಯಾಗಬೇಕು. ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು ಎಂಬಂಥ ಮಾತು ಹುಟ್ಟಿದ್ದು ಈ ಹಿನ್ನೆಲೆಯಲ್ಲಿ. ಈ ತಾಲ್ಲೂಕಿನ ಚಾರಿತ್ರಿಕ ಅಧ್ಯಯನ ಕುತೂಹಲಕರ ಅಂಶಗಳ ಹೊಳೆಯನ್ನೇ ಹರಿಸುತ್ತ ಸಂಶೋಧಕರನ್ನು ಬಹುವಾಗಿ ತನ್ನತ್ತ ಸೆಳೆಯುವ ಶಕ್ತಿಯನ್ನು ಹೊಂದಿದ್ದು ಉತ್ಪ್ರೇಕ್ಷೆಯಲ್ಲ.

ಚೋಳರ ಕಾಲದಲ್ಲಿ ಮಳೂರಿನಲ್ಲಿ ಅಗ್ರಹಾರಗಳ ನಿರ್ಮಾಣವಾಯಿತು. ಚೋಳರ ನಂತರ ಈ ಭಾಗ ಹೊಯ್ಸಳರ, ವಿಜಯನಗರದ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಇಲ್ಲಿನ ಅಬ್ಬೂರು, ಮಳೂರು, ಬ್ರಹ್ಮಣಿಪುರ, ಮಂಕುಂದ, ಹೊಂಗನೂರುಗಳು ಚಾರಿತ್ರಿಕ / ಧಾರ್ಮಿಕ ಕೇಂದ್ರಗಳಾಗಿ ಹೆಸರಾಗಿ ಈ ತಾಲ್ಲೂಕಿಗೆ ಒಂದು ಚಾರಿತ್ರಿಕ ಅನನ್ಯತೆಯನ್ನು ಒದಗಿಸಿದೆ.

2.3 ಚನ್ನಪಟ್ಟಣ ತಾಲ್ಲೂಕಿನ ಸಾಮಾಜಿಕ ಹಿನ್ನೆಲೆ :

ಭಾರತೀಯ ಸಮಾಜ ಬಹುಮುಖಿ ಸಂಸ್ಕೃತಿಗಳ ನೆಲೆ ಬೀಡು. ವೈವಿಧ್ಯತೆಯಲ್ಲಿ ಏಕತೆ ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೂತ್ರವಾಗಿದೆ. ಅದಕ್ಕೆಂದೇ ಭಾರತ 'ಕಿರುವಿಶ್ವ'ವಾದರೆ

ಕರ್ನಾಟಕ 'ಕಿರುಭಾರತ'ವಾಗಿದೆ. ಸಾಮಾಜಿಕ ಸುಧಾರಕರು ಸಾಕಷ್ಟು ಜನ ಆಗಿ ಹೋಗಿದ್ದಾರೆ. ಆದರೆ ಸುಧಾರಣೆ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಕಾರಣ ವ್ಯಕ್ತಿ ಮುಖ್ಯವಾಗಿ ಬಿಟ್ಟು ವ್ಯಕ್ತಿ ಪೂಜೆ ಮುಂದಾಗಿ ತತ್ವ ಹಿಂದಾದದ್ದು.

ಬಹುಸಂಸ್ಕೃತಿಗಳ ಸಮಾಜಕ್ಕೆ ಬಹುಮುಖಗಳಿವೆ. ಆಧ್ಯಾತ್ಮ, ಸಂಪ್ರದಾಯ, ಕಲೆಗಾರಿಕೆ, ಹಬ್ಬ ಹರಿದಿನಗಳ ಆಚರಣೆ, ಪ್ರಾಣಿಬಲಿ ಅದರಿಂದಾಗಿ ಆಚರಣೆಗೆ ಬಂದ ಸಾಮೂಹಿಕ ಮಾಂಸಹಾರ ಸೇವನೆ, ಧಾರ್ಮಿಕ ಭಾವೈಕ್ಯತೆ, ಸಹಬಾಳ್ವೆ ಇದು ಸಾಮಾಜಿಕ ಬದುಕಿನ ವಿಭಿನ್ನ ಮುಖಗಳಾಗಿವೆ. ಇಂತಹದೇ ಸಾಮಾಜಿಕ ಹಿನ್ನೆಲೆಯನ್ನು ಹೊಂದಿರುವ ಚನ್ನಪಟ್ಟಣ, ಹಳ್ಳಿಗಳಿಂದ ಆವೃತವಾದ ತಾಲ್ಲೂಕಾಗಿದ್ದು ಬೇರೆ ಬೇರೆ ತಾಲ್ಲೂಕುಗಳ ಗಡಿಗಳಿಗೆ ಹೊಂದಿಕೊಂಡ ಇಲ್ಲಿನ ಹಳ್ಳಿಗಳು ಭಿನ್ನ ಆಚರಣೆ, ವಿಭಿನ್ನ ನಡವಳಿಕೆಗಳನ್ನು ಹೊಂದಿ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿವೆ. ಇಲ್ಲಿನ ಸಾಮಾಜಿಕ ಆಚರಣೆಗಳಲ್ಲಿ ಜಾತ್ರೆಗಳು ಪ್ರಮುಖ ಪಾತ್ರ ವಹಿಸುತ್ತವೆ. 30–40 ಅಡಿ ಎತ್ತರ ಕಟ್ಟಿಗೆ ಸೇರಿಸಿಕೊಂಡು ನಿರ್ಮಿಸಿ ಕೊಂಡು ಹಾಯುವುದು, ಪೂಜಾಕುಣಿತ, ಡೊಳ್ಳುಕುಣಿತ ಮುಂತಾದವು ಇಲ್ಲಿನ ವಿಶೇಷಣಗಳಾಗಿವೆ.

ಗ್ರಾಮೀಣರು, ಅನಕ್ಷರಸ್ಥರು ಬಹುಸಂಖ್ಯಾತರಾಗಿರುವ ಈ ಪ್ರದೇಶದಲ್ಲಿ ಭಾವನಾತ್ಮಕ ಬೆಸುಗೆ ಆ ಕಾರಣಕ್ಕೇ ಬಲವಾಗಿದೆ. ಪರಿಶ್ರಮದ ಬದುಕು ಕಟುತನವನ್ನು ರೂಢಿಸಿದೆ. ಆದರೂ ಸಹಬಾಳ್ವೆ, ಎದೆಗಾರಿಕೆ, ಸಹನೆ, ತುಂಬಿದ ಇಲ್ಲಿನ ಸಾಮಾಜಿಕ ಬದುಕು ಮಹತ್ವದ್ದಾಗಿದೆ.

ಪಾಳೇಗಾರಿಕೆಗೆ ಹೆಚ್ಚಾಗಿ ಒಳಪಟ್ಟು ಬಂದ ಈ ಪ್ರದೇಶ ಅದರ ನಡುವೆಯೇ ಕಲಾತ್ಮಕತೆಯನ್ನು ಚೆನ್ನಾಗಿ ರೂಢಿಸಿಕೊಂಡು ಬಂದಿದೆ. ಕಟ್ಟಿಗೆ ಬೊಂಬೆಗಳಿಗೆ ಹೆಸರಾದ ಬೊಂಬೆಯನಾಡು ಚನ್ನಪಟ್ಟಣ ಕಟ್ಟಿಗೆಯ ಕಲಾಕಾರರಿಗೆ ಪ್ರಸಿದ್ಧವಾಗಿದೆ. ಸೃಜನಶೀಲ ಮನಸ್ಸುಗಳನ್ನು ಧಾರಾಳವಾಗಿ ಸೃಷ್ಟಿಸಿದ ಇಲ್ಲಿನ ಸಾಮಾಜಿಕ ಪರಿಸರ ವೈವಿಧ್ಯತೆಯಿಂದ ಕಂಗೊಳಿಸುತ್ತದೆ.

ಈ ತಾಲ್ಲೂಕಿನ ಉತ್ತರ ಹಾಗೂ ವಾಯುವ್ಯ ಭಾಗ ಹಲವು ಬೆಟ್ಟಗುಡ್ಡಗಳಿಂದ ಆವೃತವಾಗಿ ಹೆಚ್ಚಾಗಿ ಬೆಂಗಾಡು ಹಾಗೂ ಕುರುಚಲು ಕಾಡುಗಳು ಕಂಡುಬರುತ್ತವೆ. ಕೆರೆಗಳೇ ಮೊದಲಾದ ಯಾವುದೇ ನೀರಾವರಿ ಸಾಧನಗಳು ಈ ಭಾಗದಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಇನ್ನು ಈ ತಾಲ್ಲೂಕಿನ ದಕ್ಷಿಣ ಮತ್ತು ನೈರುತ್ಯ ಭಾಗಗಳು ಮೈದಾನ ಪ್ರದೇಶವಾಗಿದ್ದು, ಹಲವು ಮುಖ್ಯ ಕೆರೆಗಳಿರುವ ಈ ಭಾಗ ಜನಭರಿತ ಗ್ರಾಮಗಳಿಂದ ಕೂಡಿದೆ.

ಈ ತಾಲ್ಲೂಕಿನ ಮುಖ್ಯ ನದಿ ಕಣ್ವ. ಮಳೂರಿನ ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಬೆಟ್ಟಗಳ ಸಾಲಿನಿಂದ ಜಿಗಿದು ಬರುವ ಈ ನದಿ ಹಸಿರಿನಿಂದ ಕಂಗೊಳಿಸುವ ಗದ್ದೆ, ತೋಟಗಳಿಂದ ಕೂಡಿರುವ, ವಿಶಾಲವೂ, ಫಲವತ್ತೂ ಆದ ಕಣಿವೆ ಪ್ರದೇಶದಲ್ಲಿ ಹರಿಯುತ್ತದೆ. ಅಬ್ಬೂರಿನ ಸಮೀಪ ಇದಕ್ಕೆ ಒಂದು ಅಣೆಕಟ್ಟೆಯನ್ನು ಕಟ್ಟಲಾಗಿದೆ. ಇದರಿಂದ ಸುಮಾರು ಐದು ಸಾವಿರ ಎಕರೆಗಳಿಗೆ ನೀರಾವರಿ ಸೌಲಭ್ಯ ದೊರೆತಿದೆ. ಕಣ್ವ ಜಲಾಶಯದಿಂದ ಹಲವು ಕೆರೆಗಳಿಗೆ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಸಹ ಮಾಡಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಭೂಮಿ ಅಷ್ಟು ಸಮತಟ್ಟಾಗಿಲ್ಲದ ಪ್ರಯುಕ್ತ ಇಲ್ಲಿನ ಮಣ್ಣು ಸಾಕಷ್ಟು ವೈವಿಧ್ಯಮಯವಾಗಿದೆ. ನೀರಿನ ಆಸರೆ ಹೆಚ್ಚಾಗಿರುವಲ್ಲಿ ಬತ್ತ, ಕಬ್ಬು, ತೆಂಗು, ಬಾಳೆ, ಅಡಿಕೆ, ವೀಳ್ಯದೆಲೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಕಣ್ವ ನದಿಯ ಕೆಳದಂಡೆಗಳ ಮೇಲೆ ನೀರಿನ ಸೌಕರ್ಯ ಹೆಚ್ಚಾಗಿದ್ದು ಇಲ್ಲಿನ ಮಣ್ಣು ಪ್ರಶಸ್ತವಾದ್ದರಿಂದ ಹಲವಾರು ತೆಂಗಿನ ತೋಟಗಳು ಸುಂದರವಾಗಿ ಹಬ್ಬಿದ್ದು, ನೋಡುಗರ ಕಣ್ಮನವನ್ನು ಸೂರೆಗೊಳ್ಳುತ್ತವೆ. ನೀರಿನ ಅನುಕೂಲ ಕಡಿಮೆ ಇರುವಲ್ಲಿ ರಾಗಿ, ಜೋಳ, ಕಡಲೆಕಾಯಿ ಮುಂತಾದವುಗಳನ್ನು ಬೆಳೆಯುತ್ತಾರೆ.

ರೇಷ್ಮೆ ಕೃಷಿಗೆ ತಾಲ್ಲೂಕು ತುಂಬಾ ಪ್ರಸಿದ್ಧಿಯಾದುದು. ರೇಷ್ಮೆ ಹುಳುಗಳನ್ನು ಸಾಕುವುದೂ, ಅದರ ಎಳೆಯನ್ನು ತೆಗೆಯುವುದೂ ಇಲ್ಲಿನ ಜನರ ಮುಖ್ಯವಾದ ಕಸುಬು. ಇಲ್ಲಿನ ಹವೆ ಈ ವ್ಯವಸಾಯಕ್ಕೆ ಹೆಚ್ಚು ಅನುಕೂಲಕರವಾಗಿದ್ದು ತಾಲ್ಲೂಕಿನ ಪ್ರಮುಖ ಆರ್ಥಿಕ ಬೆಳೆಗಳಲ್ಲಿ ರೇಷ್ಮೆಯೂ ಒಂದಾಗಿದೆ.

ತಾಲ್ಲೂಕಿನಲ್ಲಿ ಮಳೆ ಆಶ್ರಯದಲ್ಲಿ ಬೆಳೆಯುವ ಬೆಳೆಗಳೇ ಅಧಿಕ. ಒಟ್ಟು ಹಿಡುವಳಿ ಭೂಮಿಯಲ್ಲಿ ಕಾಲು ಭಾಗದಷ್ಟು ಮಾತ್ರ ನೀರಾವರಿ ಆಗಿದೆ. ಉಳಿದಂತೆ ಮಳೆಯಾಧಾರಿತ ತಾಲ್ಲೂಕಿನಲ್ಲೇ ಅತಿ ದೊಡ್ಡ ಕೆರೆ ಎಂದರೆ ಕಣ್ವ. 1940 ರಲ್ಲಿ ವಿಶಿಷ್ಟ ಎನ್ನಬಹುದಾದ ಐದು ಸ್ವಯಂಚಾಲಿತ ತೂಬುಗಳುಳ್ಳ ಜಲಾಶಯ ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ನಿರ್ಮಾಣಗೊಂಡಿದೆ. ಈ ಜಲಾಶಯದ ಎಡ ಮತ್ತು ಬಲದಂಡೆಯ ಎರಡು ನಾಲೆಗಳ ಮೂಲಕ 2076 ಹೆಕ್ಟೇರ್ ಜಮೀನಿಗೆ ನೀರು ಪೂರೈಕೆಯಾಗುತ್ತಿದೆ. ಅಬ್ಬೂರು ಬಳಿ ಕಣ್ವ ಜಲಾಶಯದ ಬೀಳುವ ನೀರಿಗೆ ನಿರ್ಮಿಸಿರುವ ಅಣೆಯಿಂದಾಗಿ ಪಟ್ಲುಕೆರೆ, ರಾಮಮ್ಮನ ಕೆರೆ, ಕೂಡ್ಲೂರು ಕೆರೆ, ಹರೂರು, ಮಳೂರು ಕೆರೆಗಳಿಗೆ ನೀರು ಪೂರೈಕೆಯಾಗುತ್ತದೆ. ಇದಲ್ಲದೆ ಸ್ವಲ್ಪ ಪ್ರಯತ್ನಪಟ್ಟರೆ ಇನ್ನೂ ಹತ್ತಾರು ಕೆರೆಗಳಿಗೆ ನೀರು ಪೂರೈಸುವ ವ್ಯವಸ್ಥೆ ಇದೆ. ಇದಲ್ಲದೆ 27 ದೊಡ್ಡ ಕೆರೆಗಳು 15 ಸಣ್ಣ ಕೆರೆಗಳು ನೂರಾರು ನೀರಾವರಿ ಮೂಲಗಳು ಈ ತಾಲ್ಲೂಕಿನಲ್ಲಿವೆ.

ಪಟ್ಟಣ ಅಭಿವೃದ್ಧಿ ಯೋಜನೆಗೆ ಈ ತಾಲ್ಲೂಕು ಸೇರಿರುವುದರಿಂದ ಚನ್ನಪಟ್ಟಣ ಟೌನ್‌ಗೆ ತೊರೆಕಾಡಿನಹಳ್ಳಿಯಿಂದ ಕಾವೇರಿ ನೀರನ್ನು ಸರಬರಾಜು ಮಾಡುವ ಕಾರ್ಯ ತ್ವರಿತಗತಿಯಲ್ಲಿ ಸಾಗಿದೆ.

ವ್ಯವಸಾಯವೇ ಪ್ರಧಾನ ಕಸುಬಾದ ಇಲ್ಲಿನ ಜನಸಂಖ್ಯೆಯಲ್ಲಿ ಒಕ್ಕಲಿಗರದೇ ಮೇಲುಗೈ. ಒಕ್ಕಲಿಗರೇ ಅಲ್ಲದೆ ಬ್ರಾಹ್ಮಣರು, ಕುರುಬರು, ಬೆಸ್ತರು, ಮುಸಲ್ಮಾನರು, ಬಣಜಿಗರು, ಶೆಟ್ಟರು, ಬೇಡರು, ಲಂಬಾಣಿಗಳು, ಗೊಲ್ಲರು, ಲಿಂಗಾಯಿತರು, ಮರಾಠಿಗರು, ಈಡಿಗರು, ಅರಸುಗಳು, ಒಡ್ಡರು, ಗಾಣಿಗರು, ಕುಂಬಾರರು, ದರ್ಜಿಗಳು, ಹಕ್ಕಿಪಿಕ್ಕಿಗಳು, ತಿಗಳರು, ಜೈನರು, ಕ್ರೈಸ್ತರು ಮೊದಲಾದ ಪಂಗಡಗಳ ಜನರು ತಾಲ್ಲೂಕಿನಲ್ಲಿ ವಾಸಿಸುತ್ತಿದ್ದಾರೆ. ಹೀಗೆ ತಾಲ್ಲೂಕು ಹಲವಾರು ಜಾತಿಗಳ, ಧರ್ಮಗಳ, ಸಂಸ್ಕೃತಿಗಳ ಸಂಗಮವಾಗಿದೆ.

ಕೃಷಿ ಆಧಾರಿತ ಬದುಕಿನ ಇಲ್ಲಿನ ಗ್ರಾಮೀಣ ಸಮಾಜ, ಶ್ರಮದ ಬದುಕಿನೊಂದಿಗೆ ಧಾರ್ಮಿಕ ಶ್ರದ್ಧೆಯೊಂದಿಗೆ ಕಲಾತ್ಮಕ ಸೃಷ್ಟಿಗಳೊಂದಿಗೆ ಸಾಗಿ ಬಂದಿದೆ. ಇಂಥ ದಟ್ಟವಾದ ಸಾಮಾಜಿಕ ಹಿನ್ನೆಲೆಯನ್ನು ಹೊಂದಿದ ಚನ್ನಪಟ್ಟಣ ಆ ಕಾರಣಕ್ಕೆ ರಾಜ್ಯದ ಎಲ್ಲಾ ತಾಲ್ಲೂಕುಗಳಿಗಿಂತ ವಿಭಿನ್ನವಾಗಿ ಎದ್ದು ಕಾಣುತ್ತದೆ. ಬೆಂಗಳೂರು–ಮೈಸೂರುಗಳ ನಡುವಣ ನೆಲೆಯಾದ ಈ ತಾಲ್ಲೂಕು ಮಹಾನಗರಗಳ ಪ್ರಭಾವಕ್ಕೆ ಒಳಗಾಗಿಯೂ ಗ್ರಾಮೀಣ ಬದುಕಿನ ಅನನ್ಯತೆಯನ್ನು, ಸಮಾನತೆ – ಸಹಬಾಳ್ವೆಯಂಥ ಸಾಮಾಜಿಕ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ.

2.4 ಚನ್ನಪಟ್ಟಣ ತಾಲ್ಲೂಕಿನ ಸಾಹಿತ್ಯಕ ಹಿನ್ನೆಲೆ :

ಎಲ್ಲರಿಗೂ ಹಿತವನ್ನು ಬಯಸುವ ಅಭಿವ್ಯಕ್ತಿಯ ಸಾಧನ ಮತ್ತು ಸೃಜನಶೀಲತೆಯ ಭಾವನೆಗಳಿಗೆ ಕೊಟ್ಟ ಶಾಬ್ದಿಕ ರೂಪವೇ ಸಾಹಿತ್ಯ. ಸೃಜನಶೀಲತೆಯಿಂದ ಹುಟ್ಟಿ, ಅದನ್ನು ಬೆಳೆಸುತ್ತಲೇ ಮನದ ಹಾಗೂ ಮಾಗುವಿಕೆ ಹಾಗೂ ಬುದ್ಧಿಯ ವಿಕಾಸಕ್ಕೆ ನೆರವಾಗುತ್ತದೆ. ಬದುಕನ್ನು ಸಹನೀಯಗೊಳಿಸುವ ಹಾಗೂ ಅದನ್ನು ಎದುರಿಸುವ ಶಕ್ತಿಯನ್ನು ತುಂಬುವ ಸಾಹಿತ್ಯದ ಶಕ್ತಿ ಅನನ್ಯವಾಗಿದೆ. ಜನಪದ ಸಾಹಿತ್ಯದ ಹರಹು, ಹುಟ್ಟಿನಿಂದ ಸಾವಿನವರೆಗಿನ ಅದರ ಹಾಡುಗಳ ವಿಸ್ತಾರ ಗಮನಾರ್ಹ ಶಿಷ್ಟದಲ್ಲಿ ಕನ್ನಡದ ಸಾಧನೆ ಅದ್ವಿತೀಯ. ಇಂಥ ವಿಶಿಷ್ಟವಾದ ಸಾಹಿತ್ಯದ ದೊಡ್ಡ ಪರಂಪರೆಯೇ ಚನ್ನಪಟ್ಟಣ ತಾಲ್ಲೂಕಿಗಿದೆ.

ರೇಷ್ಮೆ ಮತ್ತು ಬೊಂಬೆಗಳ ನಾಡಾದ ಚನ್ನಪಟ್ಟಣ ಅಂತೆಯೇ ನವಿರಾದ ಮತ್ತು ಕಲಾತ್ಮಕವಾದ ಮನಸ್ಸುಗಳ ಪರಂಪರೆಯನ್ನೇ ಹುಟ್ಟು ಹಾಕಿದೆ. ಕರಗುವ ಮನಗಳ ಕಲಾತ್ಮಕ ಅಭಿವ್ಯಕ್ತಿಯಾದ ಸಾಹಿತ್ಯದ ನದಿ ಇಲ್ಲಿ ಚಿತ್ತಾಪಹಾರಿಯಾಗಿ ಹರಿದು ಬಂದಿದೆ. ದಾಸ ಸಾಹಿತ್ಯ ಸಾಮ್ರಾಜ್ಯ ಸ್ಥಾಪಕರಾಗಿ ಕನ್ನಡದಲ್ಲಿ ದೇವರನಾಮಗಳನ್ನು ರಚಿಸಿ ಪೂಜಾಕಾಲದಲ್ಲಿ ಹಾಡಿ, ನರ್ತಿಸಿ ಕನ್ನಡಕ್ಕೆ ಧಾರ್ಮಿಕ ಕ್ಷೇತ್ರದಲ್ಲಿ ಮಹತ್ವದ ಸ್ಥಾನ ಒದಗಿಸಿದಂಥ ಕ್ರಾಂತಿ ಮಾಡಿದ ಕನ್ನಡ ಪ್ರೇಮ ಹರಿದಾಸರು, ಶ್ರೀಪಾದರಾಜರು ಇಲ್ಲಿನ ಅಬ್ಬೂರಿನವರು. ಮಠಾಧಿಪತಿಗಳಾಗಿ, ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದು ವಾಗ್ಮಯದಂಥ ಕೃತಿರಚಿಸಿಯೂ ಕನ್ನಡದೆಡೆಗೆ ಬಂದು ಕನ್ನಡವನ್ನು ಬೆಳೆಸಿದ 'ರಂಗವಿಠಲ' ಅಂಕಿತದ ಶ್ರೀಪಾದರಾಜರು ಚನ್ನಪಟ್ಟಣದ ಹೆಮ್ಮೆಯ ಕಾಣಿಕೆ. ಅವರ ಶಿಷ್ಯರಾಗಿ ವ್ಯಾಸಕೂಟ, ದಾಸಕೂಟಗಳನ್ನು ರಚಿಸಿ, ಸಂಸ್ಕೃತ, ಕನ್ನಡ, ಉಭಯ ಭಾಷೆಗಳ ಬೆಳವಣಿಗೆಗೆ ಶ್ರಮಿಸಿ, ಸಿರಿಕೃಷ್ಣ ಅಂಕಿತದಿಂದ ಕೀರ್ತನೆ ರಚಿಸಿ, ಪುರಂದರದಾಸ, ಕನಕದಾಸರನ್ನು ಬೆಳೆಸಿದ ವ್ಯಾಸರಾಯರು ಅಬ್ಬೂರಿನಲ್ಲಿ ನೆಲೆಸಿ, ಅಲ್ಲಿನ ಬ್ರಹ್ಮಣ್ಯತೀರ್ಥರ ಶಿಷ್ಯರಾಗಿದ್ದರು.

ಮುಂದೆ ಆಧುನಿಕ ಸಂದರ್ಭದಲ್ಲಂತೂ ಚನ್ನಪಟ್ಟಣ ಸಾಹಿತ್ಯಕ ವೈವಿಧ್ಯತೆಯನ್ನೇ ಮೆರೆದಿದೆ. ಚ.ವಾಸುದೇವಯ್ಯ ಮಹಾಸಾಹಿತಿ, ಗದ್ಯಲೇಖಕರು. ರಾಜಸೇವಾಸಕ್ತ ಬಿರುದು ಪಡೆದು ಅನುವಾದಕಾರರಾಗಿ ಹೆಸರಾದ ಸಿ.ಕೆ.ವೆಂಕಟರಾಮಯ್ಯನವರು ಇಲ್ಲಿನವರು. ರಸಿಕಪುತ್ತಿಗೆ, ಬಿ.ಕೆ.ರಾಮರಾವ್, ಎಂ.ಎಸ್.ಪುಟ್ಟಣರಂಥ ಮಹತ್ವದ ಲೇಖಕರಿಗೆ ಚನ್ನಪಟ್ಟಣ ಆಶ್ರಯ ನೀಡಿದೆ. ಖ್ಯಾತಮನೋವೈದ್ಯರಾಗಿ ಹೆಸರಾಗಿ ವೈದ್ಯಕೀಯ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಡಾ.ಸಿ.ಆರ್.ಚಂದ್ರಶೇಖರ್ ಇಲ್ಲಿನವರಾಗಿದ್ದಾರೆ. ಚಕ್ಕೆರೆಯ ಕೊಡುಗೆ ದೇಜಗೌ, ಕುವೆಂಪುರವರ ಮಾನಸಪುತ್ರರೆಂದೇ ಹೆಸರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿವೃತ್ತರಾದ ಇವರು ಸಾಹಿತ್ಯದಲ್ಲೂ ಅದೇ ಹಂತಕ್ಕೆ ಏರಿದವರು. ಸಿ.ಎನ್.ಜಯಲಕ್ಷ್ಮಿದೇವಿ ಕಾದಂಬರಿಕಾರರಾಗಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. 'ಗಂಗರಸ ದುರ್ವಿನೀತ' ಇವರ ಖ್ಯಾತ ಐತಿಹಾಸಿಕ ಕಾದಂಬರಿ.

ರಾಷ್ಟ್ರಮಟ್ಟದ ಭಾಷಾವಿಜ್ಞಾನಿಗಳಾಗಿ ಹೆಸರಾದ ಡಾ.ಕೆ.ಕೆಂಪೇಗೌಡ ಇಲ್ಲಿನವರಾಗಿದ್ದಾರೆ. ದ್ರಾವಿಡ ಭಾಷಾ ವಿಜ್ಞಾನದಂಥ ಮಹತ್ವದ ಕೃತಿಗಳನ್ನು ನೀಡಿದ್ದಾರೆ. ಕಾಳೇಗೌಡ ನಾಗವಾರ, ಎಲ್.ರಾಜಶೇಖರಯ್ಯ ಮುಂತಾದ ಸಾಧಕರನ್ನು ನಾಡಿಗೆ ನೀಡಿದ ಹೆಮ್ಮೆ ಚನ್ನಪಟ್ಟಣದ್ದಾಗಿದೆ.

ಜಾನಪದ ಕ್ಷೇತ್ರದಲ್ಲಿ ಅಪಾರ ಕೃಷಿ ಮಾಡಿದ ಚಕ್ಕೆರೆ ಶಿವಶಂಕರ ಈ ತಾಲ್ಲೂಕಿನವರು. ಸು.ತ.ರಾಮೇಗೌಡ, ಚಕ್ಕಲೂರು ಚನ್ನಪ್ಪ, ಮೊಗಳ್ಳಿಗಣೇಶ ಹೀಗೆ ಪ್ರತಿಭೆಗಳ ಸಾಲೇ ಇಲ್ಲಿದೆ. ಮತ್ತಿಕೆರೆ ಸರಸ್ವತಿಗೌಡ ಕವಿಯತ್ರಿಯಾಗಿ ಪ್ರಸಿದ್ದರಾಗಿದ್ದಾರೆ.

ಭೂಹಳ್ಳಿ ಪುಟ್ಟಸ್ವಾಮಿ, ಕೂಡ್ಲೂರು ವೆಂಕಟಪ್ಪರಂಥ ಪ್ರಗತಿಗಾಮಿ ಲೇಖಕರು ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯಕ ಪರಂಪರೆಯನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಇಂಥ ವೈವಿಧ್ಯಮಯವಾದ ಸಾಹಿತ್ಯಕ ಪರಂಪರೆಯನ್ನು ಚನ್ನಪಟ್ಟಣ ತಾಲ್ಲೂಕು ಹೊಂದಿದೆ.

ಸಾಹಿತ್ಯ ಕ್ಷೇತ್ರಕ್ಕೆ ಈ ತಾಲ್ಲೂಕಿನ ಬರಹಗಾರರು ನೀಡಿರುವ ಕೊಡುಗೆ ಅತ್ಯಮೂಲ್ಯವಾದುದು. 15ನೇ ಶತಮಾನದಿಂದ ಸಾಹಿತ್ಯ ಕ್ಷೇತ್ರಕ್ಕೆ ಈ ತಾಲ್ಲೂಕಿನ ಬರಹಗಾರರು ಕೊಡುಗೆ ನೀಡಿರುವುದಕ್ಕೆ ಆಧಾರಗಳು ಸಿಗುತ್ತವೆ. ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿರುವ ಈ ತಾಲ್ಲೂಕಿನ ಕೆಲ ಪ್ರಮುಖ ಸಾಹಿತಿಗಳನ್ನು ಮುಂದಿನಂತೆ ಪರಿಚಯ ಮಾಡಿಕೊಡಲಾಗಿದೆ.

ಚ.ವಾಸುದೇವಯ್ಯ :– 1852ರಲ್ಲಿ ಚನ್ನಪಟ್ಟಣದಲ್ಲಿ ಜನಿಸಿದ ಚ.ವಾಸುದೇವಯ್ಯನವರ ಹೆಸರು ಹೊಸಗನ್ನಡ ಗದ್ಯವನ್ನು ರೂಪಿಸಿದವರಲ್ಲಿ ಗಮನಾರ್ಹವಾದುದಾಗಿದೆ. ಹೊಸಗನ್ನಡದಲ್ಲಿ ಮಕ್ಕಳ ಸಾಹಿತ್ಯವನ್ನು ರಚಿಸಿದ ಕೀರ್ತಿ (ಬಾಲಬೋಧೆ) ಇವರದಾಗಿದೆ. ಆರ್ಯಕೀರ್ತಿ ಭಾಗ–1 ಮತ್ತು 2, ಭೀಷ್ಮ ಚರಿತ್ರೆ ಮತ್ತು ಸರಳಾರೋಗ್ಯ ಇವರ ಪ್ರಮುಖ ಕೃತಿಗಳಾಗಿವೆ.

ಸಿ.ಕೆ.ವೆಂಕಟರಾಮಯ್ಯ :– ಈ ತಾಲ್ಲೂಕಿನ ಪಟ್ಲು ಗ್ರಾಮದಲ್ಲಿ 1897 ಡಿಸೆಂಬರ್ 10 ರಂದು ಜನಿಸಿದ ಶ್ರೀಯುತರು, ಎಂ.ಎ., ಎಲ್.ಎಲ್.ಬಿ., ಪದವಿಗಳನ್ನು ಪಡೆದು ಮೈಸೂರು ಸರ್ಕಾರದ ಭಾಷಾಂತರ ಇಲಾಖೆಯಲ್ಲಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿ ಮೈಸೂರು ಮಹಾರಾಜರಿಂದ ರಾಜಸೇವಾಸಕ್ತ ಎಂಬ ಬಿರುದನ್ನು, ರಾಷ್ಟ್ರಪತಿಯವರಿಂದ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದಿದ್ದಾರೆ.

ನಮ್ಮ ಸಮಾಜ, ಸುಂದರಿ, ನವಚೇತ, ಮಹಮ್ಮದ್ ಪೈಗಂಬರ್, ಬುದ್ದ, ಅಬ್ರಹಾಂಲಿಂಕನ್, ಗುರುದೇವ, ಹರ್ಷವರ್ಧನ, ಮಂಡೋದರಿ, ಭಾಷಾಕವಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ದೇ.ಜವರೇಗೌಡ :- ಚಕ್ಕೆರೆ ಗ್ರಾಮದಲ್ಲಿ 06-07-1918ರಲ್ಲಿ ಜನಿಸಿದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಇಡೀ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿ ಅಪಾರ ಜನಪ್ರಿಯತೆಯನ್ನು ಪಡೆದಿದ್ದಾರೆ. ಇವರು 50ಕ್ಕೂ ಹೆಚ್ಚು ಸ್ವತಂತ್ರ ಕೃತಿಗಳನ್ನು, 6 ಅನುವಾದ ಕೃತಿಗಳನ್ನು, 10 ಸಂಪಾದಿತ ಕೃತಿಗಳನ್ನು, ಇತರರ ಜೊತೆ 3 ಕೃತಿಗಳನ್ನು ಸಂಪಾದಿಸಿದ್ದಾರೆ. 'ಹೋರಾಟದ ಬದುಕು' ಇವರ ಬದುಕಿನ ಪ್ರಾಮಾಣಿಕ ಚಿತ್ರ ನೀಡಲು ಗಮನಾರ್ಹ ಕೃತಿಯಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೈಯಾಡಿಸಿದ್ದಾರೆ.

ಸಿ.ಎನ್.ಜಯಲಕ್ಷ್ಮಿದೇವಿ :- 1926 ಮಾರ್ಚಿಯಲ್ಲಿ ಚನ್ನಪಟ್ಟಣದಲ್ಲಿ ಜನಿಸಿದ ಶ್ರೀಮತಿ ಜಯಲಕ್ಷ್ಮಿ ದೇವಿಯವರು, ತಾಲ್ಲೂಕಿನ ಹಿರಿಯ ಮಹಿಳಾ ಬರಹಗಾರ್ತಿಯಾಗಿದ್ದರು. ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ ಹೀಗೆ ಒಟ್ಟು 15 ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ನಾಡನ್ನು ಆಳಿದ ಗಂಗರ ದೊರೆ ದುರ್ವಿನೀತನ ಬದುಕಿನ ಚಿತ್ರಣ ಕೊಡುವ 'ಗಂಗರಸ ದುರ್ವಿನೀತ' ಇವರ ಐತಿಹಾಸಿಕ ಕಾದಂಬರಿಯಾಗಿದೆ. ಇವರ ಕೃತಿಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ.

ಟಿ.ಕೆ.ರಾಮರಾವ್ :- ಪತ್ತೆದಾರಿ ಕಾದಂಬರಿಕಾರರಲ್ಲಿ ಬಹಳ ಪ್ರಸಿದ್ಧರಾದ ಟಿ.ಕೆ.ರಾಮರಾವ್‌ರವರು 07-10-1929ರಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ ಜನಸಿ, ಚನ್ನಪಟ್ಟಣದಲ್ಲೇ ನೆಲೆ ನಿಂತು 54 ಕಾದಂಬರಿಗಳು, 14 ಕಥಾ ಸಂಕಲನಗಳನ್ನು, 5 ಕಿಶೋರ ಸಾಹಿತ್ಯ, ಪ್ರವಾಸ ಸಾಹಿತ್ಯ, ಐತಿಹಾಸಿಕ ಕಾದಂಬರಿಗಳನ್ನು, ಸಾಮಾಜಿಕ ಕಾದಂಬರಿಗಳನ್ನು ರಚಿಸಿ ಜನಪ್ರಿಯ ಸಾಹಿತಿ ಎಂಬ ಬಿರುದನ್ನು ಪಡೆದಿದ್ದಾರೆ. ಇವರ ಕಥೆ ಕಾದಂಬರಿಗಳು ಚಲನಚಿತ್ರಗಳಾಗಿಯು ಜನಪ್ರಿಯತೆ ಮತ್ತು ಜನ ಮನ್ನಣೆಯನ್ನು ಗಳಿಸಿವೆ.

ರಸಿಕಪುತ್ತಿಗೆ :- ರಸಿಕಪುತ್ತಿಗೆ ಎಂಬ ಕಾವ್ಯನಾಮದಲ್ಲಿ ಜನಪ್ರಿಯರಾದ ಶ್ರೀ ಪುತ್ತಿಗೆ ಸುಬ್ರಹ್ಮಣ್ಯ ಆಚಾರ್ಯರು, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತಿಗೆಯಲ್ಲಿ 1932ರಲ್ಲಿ ಜನಿಸಿ, ಚನ್ನಪಟ್ಟಣದ ಸಾರ್ವಜನಿಕ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದುಕೊಂಡು, ಇಲ್ಲೆ ನೆಲೆ ನಿಂತು ಬದುಕಿದವರು. ಶ್ರೀಯುತರು 65ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಸಾಹಿತಿ ಎಂದೇ ಖ್ಯಾತರಾಗಿದ್ದಾರೆ. ಹಲವಾರು ಪ್ರಶಸ್ತಿಗಳನ್ನು ಪಡೆದಿರುವುದರ ಜೊತೆಗೆ ಸ್ಥಳೀಯ ಹಾಗೂ ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಅಂಕಣಕಾರರಾಗಿಯು ಹೆಸರುವಾಸಿಯಾಗಿದ್ದಾರೆ.

ಡಾ.ಕೆ.ಕೆಂಪೇಗೌಡ :– ತಾಲ್ಲೂಕಿನ ಬ್ಯಾಡರಹಳ್ಳಿಯಲ್ಲಿ 15–08–1939ರಲ್ಲಿ ಜನಿಸಿ, ಹಿಂದಿ ಹಾಗೂ ಭಾಷಾ ವಿಜ್ಞಾನದಲ್ಲಿ ಎಂ.ಎ ಪದವಿಯನ್ನು ಪಡೆದವರು. ದಕ್ಷಿಣ ಭಾರತದ ಭಾಷಾ ವಿಜ್ಞಾನಿಗಳ ಸಾಲಿನಲ್ಲಿ ಇವರು ಬಹುದೊಡ್ಡ ಹೆಸರನ್ನು ಪಡೆದಿದ್ದಾರೆ. ಸಂಶೋಧನಾ ಕ್ಷೇತ್ರದಲ್ಲಿ ಇವರು ನೂರಕ್ಕೂ ಹೆಚ್ಚು ಲೇಖನಗಳನ್ನು, ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಾಮಾನ್ಯ ಭಾಷಾವಿಜ್ಞಾನ, ದ್ರಾವಿಡ ಭಾಷಾ ವಿಜ್ಞಾನ, ಕನ್ನಡ ಭಾಷಾ ಚರಿತ್ರೆ ಇವರ ಉತ್ತಮೋತ್ತಮ ಕೃತಿಗಳಾಗಿವೆ.

ಡಾ.ಕಾಳೇಗೌಡ ನಾಗವಾರ :– ತಾಲ್ಲೂಕಿನ ನಾಗವಾರ ಗ್ರಾಮದಲ್ಲಿ 12–02–1947 ರಂದು ಜನಿಸಿದ ಶ್ರೀಯುತರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕಥಾ ಸಂಕಲನ, ಕವನ ಸಂಕಲನ, ಸಂಪಾದಿತ ಕೃತಿಗಳು ಹೀಗೆ ಒಟ್ಟು 18 ಕೃತಿಗಳನ್ನು ಇವರು ರಚಿಸಿದ್ದಾರೆ. ವಿವಿಧ ಪತ್ರಿಕೆಗಳಲ್ಲಿ ಅಭಿನಂದನಾ ಗ್ರಂಥಗಳಲ್ಲಿ ಹಲವಾರು ವಿಮರ್ಶಾ ಲೇಖನಗಳನ್ನು ಬರೆದಿದ್ದಾರೆ. ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಇವರು 'ಕಾಡುಗೊಲ್ಲರ ಒಂದು ಹಟ್ಟಿಯ ಅಧ್ಯಯನ' ಎಂಬ ವಿಷಯಕ್ಕೆ ಪಿಎಚ್.ಡಿ ಪದವಿ ಪಡೆದಿದ್ದಾರೆ.

ಡಾ.ಚಕ್ಕೆರೆ ಶಿವಶಂಕರ್ :– 19–05–1953ರಲ್ಲಿ ಚಕ್ಕೆರೆಯಲ್ಲಿ ಜನಿಸಿದ ಇವರು, ಜಾನಪದ ಪರಿಷತ್ತಿನಲ್ಲಿ ಸಂಶೋಧನಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹತ್ತಕ್ಕೂ ಹೆಚ್ಚು ಕೃತಿ ಪ್ರಕಟಿಸಿರುವ ಇವರು, ನಾಡಿನ ನಾನಾ ನಿಯತಕಾಲಿಕೆಗಳಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ಬಿಡಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಅಕಾಡೆಮಿಗಳು ಹಾಗೂ ಹತ್ತು ಹಲವು ಸಂಘ ಸಂಸ್ಥೆಗಳು ಏರ್ಪಡಿಸಿದ್ದ ವಿಚಾರ ಸಂಕಿರಣಗಳಲ್ಲಿ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿರುವುದರ ಜೊತೆಗೆ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. 'ಕುವೆಂಪು ಸಾಹಿತ್ಯದಲ್ಲಿ ವೈಚಾರಿಕ ಪ್ರಜ್ಞೆ' ಎಂಬ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ.

ಡಾ.ಸಿ.ಆರ್.ಚಂದ್ರಶೇಖರ್ :– 12–12–1948ರಲ್ಲಿ ಜನಿಸಿದ ಖ್ಯಾತ ಮನೋವೈದ್ಯ ಸಾಹಿತಿ ಚಂದ್ರಶೇಖರ್‌ರವರು ಚನ್ನಪಟ್ಟಣದವರು. ಇವರು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ 11 ಪುಸ್ತಕಗಳನ್ನು, ಲೈಂಗಿಕ ವಿಜ್ಞಾನಕ್ಕೆ ಸಂಬಂಧಿಸಿದಂತೆ 7 ಪುಸ್ತಕಗಳನ್ನು, ವೈಚಾರಿಕ ವಿಷಯಕ್ಕೆ ಸಂಬಂಧಿಸಿದಂತೆ 7 ಪುಸ್ತಕಗಳನ್ನು, 5 ಕಾದಂಬರಿಗಳನ್ನು, 4 ನಾಟಕಗಳನ್ನು, 4 ಅನುವಾದ ಕೃತಿಗಳನ್ನು ರಚಿಸಿರುವುದರ ಜೊತೆಗೆ ನಾಡಿನ ಎಲ್ಲಾ

ನಿಯತಕಾಲಿಕೆಗಳಲ್ಲಿ 650ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಹಲವಾರು ಪತ್ರಿಕೆಗಳಲ್ಲಿ ಅಂಕಣಕಾರರಾಗಿಯೂ ಬರೆದಿದ್ದಾರೆ.

ಸು.ತ.ರಾಮೇಗೌಡ :– ತಾಲ್ಲೂಕಿನ ಸುಳ್ಳೇರಿ ಗ್ರಾಮದಲ್ಲಿ ಜನಿಸಿದ ಸು.ತ.ರಾಮೇಗೌಡರು ವೃತ್ತಿಯಿಂದ ಪತ್ರಕರ್ತರು. ಇವರು ಕಾದಂಬರಿಗಳು, ನೀಳ್ಗತೆಗಳು, ಕವನಗಳು, ನಗೆಬರಹಗಳು ಹಾಗೂ ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ. ತಾವು ಬರೆಯುವುದರ ಜೊತೆಗೆ ತಮ್ಮ ಬಯಲು ಸೀಮೆ ಪತ್ರಿಕೆಯ ಮೂಲಕ ಹಲವಾರು ತಾಲ್ಲೂಕಿನ ಬರಹಗಾರರನ್ನು ಬೆಳಕಿಗೆ ತರುವಲ್ಲಿ ಶ್ರಮಿಸಿದ್ದಾರೆ.

ಚಕ್ಕಲೂರು ಚನ್ನಪ್ಪ :– 13–06–1944ರಲ್ಲಿ ಚಕ್ಕಲೂರಿನಲ್ಲಿ ಜನಿಸಿದ ಶ್ರೀಯುತರು ಖಾಸಗಿಯಾಗಿ ಪಾಠ ಬೋಧಿಸುತ್ತಿದ್ದರು, ಜೊತೆಗೆ 'ತೊರೆ' ಎಂಬ ಪತ್ರಿಕೆಯ ಸಂಪಾದಕರಾಗಿಯೂ ಸೇವೆಸಲ್ಲಿಸಿದ್ದಾರೆ. ಇವರು ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ 'ಕನ್ನಡ ಒಗಟು ಮಾಲೆ' ಎಂಬ ಪುಸ್ತಕ ಪ್ರಕಟಿಸಿದ್ದು, ಕಥೆ, ಗಾದೆ, ಸಂಪ್ರದಾಯ, ಮೂಢನಂಬಿಕೆಗಳ ಬಗೆಗಿನ ಸಂಗತಿಗಳನ್ನು ಸಂಗ್ರಹಿಸಿದ್ದಾರೆ. ತಮ್ಮ 'ತೊರೆ' ಪತ್ರಿಕೆಯ ಮೂಲಕ ಹಲವಾರು ಬರಹಗಾರರನ್ನು ಹೊರತಂದ ಕೀರ್ತಿ ಇವರಿಗಿದೆ. ಹಾಲಿ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮೊಗಳ್ಳಿ ಗಣೇಶ್ :– ತಾಲ್ಲೂಕಿನ ಸಂತೆ ಮೊಗೇನಹಳ್ಳಿ ಗ್ರಾಮದಲ್ಲಿ 01–07–1967 ರಲ್ಲಿ ಜನಿಸಿದ ಮೊಗಳ್ಳಿ ಗಣೇಶ್ ರಾಜ್ಯಾದ್ಯಂತ ಪ್ರಸಿದ್ಧಿ ಪಡೆದ ಯುವ ಕಥೆಗಾರರು. ಕಥಾ ಸಂಕಲನಗಳು, ಸಂಸ್ಕೃತಿ ಅಧ್ಯಯನ, ಮಾನವಶಾಸ್ತ್ರೀಯ ಆತ್ಮಕಥನ, ಪ್ರಬಂಧ ಸಂಕಲನ, ಜಾನಪದ ಹೀಗೆ ಹಲವು ಕ್ಷೇತ್ರದಲ್ಲಿ ದುಡಿದಿದ್ದಾರೆ. ಸಾಹಿತ್ಯ ಅಕಾಡೆಮಿ, ವರ್ಧಮಾನ ಸಾಹಿತ್ಯ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸರಸ್ವತಿಗೌಡ :– ಮತ್ತೀಕೆರೆ ಗ್ರಾಮದಲ್ಲಿ ಜನಿಸಿದ ಸರಸ್ವತಿಗೌಡ ಅವರು ಸಾಹಿತ್ಯದಲ್ಲಿ ಎಂ.ಎ ಪದವಿ ಪಡೆದು ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 3 ಕವನ ಸಂಕಲನ, 4 ಕಾದಂಬರಿ, 1 ಸಣ್ಣ ಕಥಾ ಸಂಕಲನ ಪ್ರಕಟಿಸಿರುವ ಇವರ ಕೆಲವು ಕಾದಂಬರಿಗಳು ನಿಯತಕಾಲಿಕೆಗಳಲ್ಲಿ ಧಾರವಾಹಿಯಾಗಿ ಪ್ರಕಟಗೊಂಡಿದೆ. ರಾಮನಗರ ಜಿಲ್ಲಾ ಕ.ಸಾ.ಸ.ದ ಅಧ್ಯಕ್ಷರಾಗಿದ್ದರು.

ಗೋವಿಂದಹಳ್ಳಿ ದೇವೇಗೌಡ :– ಚನ್ನಪಟ್ಟಣ ತಾಲ್ಲೂಕಿನ ಗೋವಿಂದಹಳ್ಳಿಯಲ್ಲಿ 16–02–1935 ರಲ್ಲಿ ಜನಿಸಿದ ಶ್ರೀಯುತರು ಪತ್ರಕರ್ತರು, ಸಮಾಜ ಸೇವಕರು ಆಗಿರುವುದರ ಜೊತೆಗೆ ಕವನ ಸಂಕಲನ, ಜೀವನ ಚರಿತ್ರೆ ಮೊದಲಾದ ಕ್ಷೇತ್ರದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರು ತಾಲ್ಲೂಕು ಕ.ಸಾ.ಸ.ದ ಅಧ್ಯಕ್ಷರಾಗಿದ್ದರು. ಇವರಷ್ಟೇ ಅಲ್ಲದೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಇನ್ನೂ ಅನೇಕ ಸಾಹಿತಿಗಳು ಕಂಡುಬರುತ್ತಾರೆ.

2.5. ಚನ್ನಪಟ್ಟಣ ತಾಲ್ಲೂಕಿನ ರಾಜಕೀಯ ಹಿನ್ನೆಲೆ :

ರಾಜಕೀಯವಾಗಿ ಪಾಳೇಗಾರರ ಹಿಡಿತದಲ್ಲೇ ಬೆಳೆದು ಬಂದ ಪ್ರದೇಶ ಚನ್ನಪಟ್ಟಣ. ವಿಶೇಷವಾಗಿ ವಿಜಯನಗರದ ಸಾಮಂತರ ಅಧೀನಕ್ಕೆ ಒಳಗಾಗಿ ಬೆಳೆದು ಬಂದಿತು. ಮಂಡ್ಯ, ಮದ್ದೂರು, ನಾಗಮಂಗಲಗಳ ಭಾಗವನ್ನು ಒಳಗೊಂಡಂತೆ ಚನ್ನಪಟ್ಟಣ ಕೇಂದ್ರ ಸ್ಥಾನವಾಗಿ ಭಂಡಾರಿ ತಿಮ್ಮಪ್ಪಯ್ಯನಂಥವರ ಉಸ್ತುವಾರಿಗೆ ಒಳಪಟ್ಟಿತ್ತು. ವಿಜಯನಗರದ ಸಾಮಂತರಿಗೆ ಸಂಬಂಧಪಟ್ಟ ಇಮ್ಮಡಿ ಜಗದೇವರಾಯ ಇಲ್ಲಿನ ಪ್ರಮುಖ ಪಾಳೇಯಗಾರನಾಗಿದ್ದನು.

ಚನ್ನಪಟ್ಟಣವನ್ನು ಕೇಂದ್ರ ಸ್ಥಳವನ್ನಾಗಿಸಿಕೊಂಡಿದ್ದ ಈ ಜಗದೇವರಾಯನ ಆಳ್ವಿಕೆ ವಿಶಿಷ್ಟವಾದ್ದಾಗಿತ್ತು. ಇಲ್ಲಿನ ಕೋಟೆಯನ್ನು ಕಟ್ಟಿಸಿದ ಈತ ಈ ಪ್ರದೇಶಕ್ಕೆ ಒಂದು ವ್ಯವಸ್ಥಿತ ರೂಪಕೊಟ್ಟು ಪ್ರಬಲವಾಗಿ ಬೆಳೆಸಿದ.

ಸೋಗಾಲ ಶಾಸನ ಮುಂತಾದವು ಈ ಬಗ್ಗೆ ಮಾಹಿತಿ ನೀಡುತ್ತವೆ. ದೇವಾಲಯಗಳಿಗೆ ದತ್ತಿಕೊಡುವ ಮೂಲಕ ಅದನ್ನು ಬೆಳೆಸಿಕೊಂಡು ಬಂದ ಪಾಳೇಗಾರರು ಸಾಹಿತ್ಯಕ್ಕೂ ಆಸಕ್ತಿ ನೀಡಿದ ರಸಿಕರಾಗಿದ್ದರು. ಜಾಬಳಕವಿ ಮುಂತಾದವರು ಇಲ್ಲಿನ ಪಾಳೇಗಾರರಿಂದಾಗಿ ಬೆಳಕಿಗೆ ಬಂದ ಬರಹಗಾರರಾಗಿದ್ದಾರೆ.

ಚಾಮರಾಜ ಒಡೆಯರಿಂದ ಮೈಸೂರು ಸಂಸ್ಥಾನಕ್ಕೆ ಸೇರಿದ ನಂತರ ಚನ್ನಪಟ್ಟಣ ಪ್ರದೇಶದ ಪ್ರಗತಿ ವೇಗವನ್ನು ಪಡೆಯಿತು. ಮರಾಠ ಸೇನೆಯಿಂದ ದಾಳಿ, ದಿವಾನ್ ಪೂರ್ಣಯ್ಯರಿಂದ ಪುನರುತ್ಥಾನ, ಟಿಪ್ಪುವಶಕ್ಕೆ ಸೇರಿದ ಪ್ರದೇಶ ಮುಂತಾದ ಘಟನೆಗಳು ಈ ಭಾಗದ ರಾಜಕೀಯ ಬದುಕಿನ ಮಹತ್ವದ ಘಟನೆಗಳಾಗಿವೆ. ಇಲ್ಲಿನ ಜಾಮಿ ಮಸೀದಿ ಮುಂತಾದವು ಹೈದರಾಲಿಯಿಂದ ನಿರ್ಮಿತಗೊಂಡವುಗಳಾಗಿವೆ.

ಗಾಂಧಿ ಪ್ರವೇಶದವರೆಗೆ ಈ ಭಾಗ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿರಲಿಲ್ಲ. ಆಳರಸರಾದ ಮೈಸೂರು ಒಡೆಯರು ಬ್ರಿಟೀಷರ ಆಶ್ರಿತರಾದ್ದರಿಂದ ಪ್ರತಿಭಟನೆ, ಸ್ವಾತಂತ್ರ್ಯಕ್ಕಾಗಿ ಆಗ್ರಹದ ಧ್ವನಿ ಆರಂಭದಲ್ಲಿ ಮೊಳಗಿರಲಿಲ್ಲ. ಗಾಂಧೀಜಿ ಪ್ರೇರಣೆ ಇಲ್ಲೂ ಚಳುವಳಿಯ ಬಿಸಿ ಮೂಡಿಸಿತು. ಆಗ ತಿಟ್ಟಮಾರನಹಳ್ಳಿ ವೆಂಕಟಪ್ಪ, ಅಕ್ಕೂರಿನ ವೀರಣ್ಣಗೌಡರಂಥ ಧುರೀಣರು ಚಳುವಳಿಯಲ್ಲಿ ಧುಮುಕಿದಾಗ ಈ ಭಾಗ ಮೈಕೊಡವಿಕೊಂಡು ಎದ್ದು ನಿಂತಿತು.

ವಿಜಯನಗರದ ಅರಸರು, ಮೈಸೂರು ಒಡೆಯರು, ಹೈದರಾಲಿ, ಟಿಪ್ಪು, ಬ್ರಿಟೀಷರು ಸ್ವಾತಂತ್ರ್ಯ ಪೂರ್ವದಲ್ಲಿ ಈ ಭಾಗವನ್ನು ರಾಜಕೀಯವಾಗಿ ಬೆಳೆಸಿದವರಾಗಿದ್ದಾರೆ. ಆ ಕಾಲದಿಂದಲೂ ಪ್ರಮುಖ ಶಿಕ್ಷಣ ಕೇಂದ್ರವಾಗಿ ಬೆಳೆದು ಬಂದ ಚನ್ನಪಟ್ಟಣ ಸ್ವಾತಂತ್ರ್ಯ ನಂತರವೂ ಅದೇ ಪ್ರಗತಿಯನ್ನು ಕಾಯ್ದುಕೊಂಡು ಬಂದು ಜ್ಞಾನಮಂಟಪ ಎಂಬ ತನ್ನ ಮುಂಚಿನ ಹೆಸರನ್ನು ಸಾರ್ಥಕಪಡಿಸಿಕೊಳ್ಳುವುದತ್ತ ಸಾಗಿದೆ.

ಚನ್ನಪಟ್ಟಣದ ಪಾಳೇಗಾರರು :–

ಚನ್ನಪಟ್ಟಣವನ್ನು ತಮ್ಮ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಆಳಿದವರಲ್ಲಿ ಚನ್ನಪಟ್ಟಣದ ಪಾಳೇಗಾರರು ಪ್ರಮುಖರು. ಇವರು 16, 17ನೇ ಶತಮಾನದಲ್ಲಿ ಪೆನುಗೊಂಡೆಯ ವಿಜಯನಗರದ ಸಂತತಿಯವರ ಸಾಮಂತರಾಗಿ ಆಳ್ವಿಕೆ ನಡೆಸಿದರು. ಮೂಲತಃ ಇವರು ಬಾರಾಮಹಲ್ ಪ್ರದೇಶಕ್ಕೆ ಸೇರಿದ ತೆಲುಗು ಬಣಜಿಗ ವಂಶಸ್ಥರು.

ಈ ವಂಶದ ಮೂಲ ಪುರುಷ ರಾಣೋಜಿರಾಯ. 1923ಕ್ಕೆ ಸೇರಿದ ಶಾಸನದಲ್ಲಿ ಚನ್ನಪಟ್ಟಣ ಪಾಳೇಗಾರರ ಅನುಕ್ರಮ ವಂಶಾವಳಿಯ ಉಲ್ಲೇಖವಿದೆ. ಅದರ ಪ್ರಕಾರ ರಾಣಪೆದ್ದ ಜಗದೇವರಾಯ, ಜಗದೇವರಾಯ, ಇಮ್ಮಡಿಕುಮಾರ ಜಗದೇವರಾಯ ಆಳ್ವಿಕೆ ನಡೆಸಿದರು. ಇವರು ಕ್ರಿ.ಶ. 1570 ರಿಂದ 1630 ರವರೆಗೆ ಅಂದರೆ ಸುಮಾರು 30 ವರ್ಷಗಳ ಕಾಲವೇ ಮಾತ್ರ ಚನ್ನಪಟ್ಟಣ ರಾಜ್ಯದ ಪಾಳೇಗಾರರಾಗಿದ್ದರು. ವಿಜಯನಗರದ ಭಂಡಾರ ತಿಮ್ಮಪ್ಪಯ್ಯ ಕೆಲಕಾಲ ಇದರ ಉಸ್ತುವಾರಿ ನಡೆಸಿದ್ದನು. ಚನ್ನಪಟ್ಟಣ ರಾಜ್ಯವು ಈಗಿನ ಚನ್ನಪಟ್ಟಣ ತಾಲ್ಲೂಕುಗಳನ್ನೊಳಗೊಂಡಂತೆ ನಾಗಮಂಗಲ, ಮಂಡ್ಯ ಜಿಲ್ಲೆ ಮತ್ತು ಮದ್ದೂರು ತಾಲ್ಲೂಕಿನ ಕೆಲವು ಭಾಗಗಳನ್ನು ಒಳಗೊಂಡಿತ್ತು.

'ಓಬಳಪುರಾಣ' ಓಬಳಕವಿಯ ಕೃತಿ. ಹಾಗೂ ಶಾಸನಗಳಲ್ಲಿ ಉಲ್ಲೇಖಿತವಾಗಿರುವಂತೆ 1570ರಲ್ಲಿ ಇಮ್ಮಡಿ ಜಗದೇವರಾಯ ಇದರ ಪ್ರಥಮ ಆಡಳಿತಗಾರ ಎಂದು ಉಲ್ಲೇಖ ಇದೆ. ಇವನ ತಂದೆ ಮತ್ತು ತಾತ ತಿಮ್ಮನಾಯಕ ವಿಜಯನಗರ ಅರಸರ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು. ಇವರು ವಿಜಯನಗರದ ಭಂಡಾರಿ ತಿಮ್ಮಪ್ಪಯ್ಯನ ವಂಶಕ್ಕೆ ಸೇರಿದವರಾಗಿರಬೇಕು. ಭಂಡಾರಿ ತಿಮ್ಮಪ್ಪಯ್ಯ 1530ರ ಸಂದರ್ಭದಲ್ಲಿ ಇದರ ಆಡಳಿತವನ್ನು ನಿರ್ವಹಿಸಲು ನೇಮಕಗೊಂಡಿದ್ದ ತಿಮ್ಮಪ್ಪನಾಯಕ ಅಥವಾ ಜಗದೇವರಾಯ ಎಂಬುವವನು ನಾಗಮಂಗಲ ಪ್ರದೇಶದ ಅಧಿಕಾರಿಯಾಗಿ 1563ರಲ್ಲಿ ಇದ್ದುದನ್ನು **'ನಾಗಮಂಗಲ ಶಾಸನ'**[15] ಉಲ್ಲೇಖಿಸುತ್ತದೆ. ಪೆದ್ದಜಗದೇವರಾಯ ಎಂಬುವವನು ಮಂಡ್ಯ ಪ್ರದೇಶದ ಮೇಲ್ವಿಚಾರಣೆಗೆ ವಿಜಯನಗರದ ಅರಸರನ್ನು ನೇಮಿಸಿದ್ದರೆಂಬ ವಿಚಾರ ಶಾಸನವೊಂದರಲ್ಲಿ ಉಲ್ಲೇಖ ಇದೆ. ಈತನ ಸಹೋದರ ಇಮ್ಮಡಿ ಜಗದೇವರಾಯ ಇವನೇ ಚನ್ನಪಟ್ಟಣ ರಾಜ್ಯದ ಸ್ವತಂತ್ರ ಪಾಳೇಗಾರನಾಗಿ ಆಳ್ವಿಕೆ ನಡೆಸಿದ. ಇವನು 1570 ರಿಂದ 1585 ರವರೆಗೆ ಸುಮಾರು 15 ವರ್ಷಗಳ ಕಾಲ ಆಡಳಿತ ನಡೆಸಿದನು.

ಇಮ್ಮಡಿ ಜಗದೇವರಾಯ ಗೋಲ್ಕಂಡ ಮತ್ತು ಅಹ್ಮದ್‌ನಗರದ ಸೈನಿಕರು ಪೆನುಗೊಂಡೆಯ ಮೇಲೆ ದಾಳಿ ಮಾಡಿದಾಗ ಧೈರ್ಯದಿಂದ ಹೋರಾಡಿ ಹಿಮ್ಮೆಟ್ಟಿಸಿದ. ಆಗ ವಿಜಯನಗರದ ಅರಸ ತಿಮ್ಮರಾಯ 9 ಲಕ್ಷ ಗೋಡಗಳ ಆದಾಯವುಳ್ಳ ದೊಡ್ಡ ಪ್ರದೇಶವನ್ನು ಜಗದೇವರಾಯನಿಗೆ ಸಮರ್ಪಿಸಿದ. ಈ ಪ್ರದೇಶ ಬಾರಾಮಹಲ್‌ನಿಂದ ಪಶ್ಚಿಮ ಘಟ್ಟದವರೆಗೆ ವ್ಯಾಪಿಸಿದ್ದ ಪಿರಿಯಪಟ್ಟಣ, ಕಾನಕಾನಹಳ್ಳಿ ಮತ್ತು ಬೂದಿಹಾಳು ಪ್ರದೇಶಗಳಲ್ಲು ಸೇರಿದ್ದವು. ಹೊಸದಾಗಿ ಪಡೆದ ಈ ಪ್ರದೇಶಗಳ ಆಡಳಿತವನ್ನು ನಿರ್ವಹಿಸಲು ಚನ್ನಪಟ್ಟಣವನ್ನು ತನ್ನ ಕೇಂದ್ರ ಸ್ಥಳವನ್ನಾಗಿ ಆಯ್ಕೆ ಮಾಡಿಕೊಂಡು ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಇಲ್ಲಿ ಕೋಟೆಯನ್ನು ಕಟ್ಟಿಸಿ ಅದರ ರಕ್ಷಣೆಯನ್ನು ಕೈಗೊಂಡನು.

ಜಗದೇವರಾಯ ಚನ್ನಪಟ್ಟಣ ರಾಜ್ಯಕ್ಕೆ ಒಂದು ವ್ಯವಸ್ಥಿತ ಸ್ವರೂಪ ತಂದುಕೊಟ್ಟು ಆ ಮೂಲಕ ಕೋಟೆಯನ್ನು ಭದ್ರಪಡಿಸಿದ. ಇವನ ನಂತರ ಇವನ ಮಗ ಜಗದೇವ ಅಧಿಕಾರಕ್ಕೆ ಬಂದ. ಈತ ಹತ್ತು ವರ್ಷಗಳ ಕಾಲ ಆಳ್ವಿಕೆ ನಡೆಸಿದ. ಇವನ ನಂತರ ವೆಂಕಟಪತಿ ಎಂಬುವವನು ಆಳ್ವಿಕೆ ನಡೆಸಿದನೆಂದು ಶಾಸನವೊಂದು ಉಲ್ಲೇಖಿಸಿದೆ. ಇಮ್ಮಡಿ ಕುಮಾರ ಜಗದೇವರಾಜ 1620 ರಿಂದ 1629 ರವರೆಗೆ ಆಳ್ವಿಕೆ ನಡೆಸಿದ. ಇವನು ಕನಕಪುರ ತಾಲ್ಲೂಕಿನ ಅರಳಾಳುಸಂದ್ರದ ಶಿವ ದೇವಾಲಯಕ್ಕೆ ದತ್ತಿಕೊಟ್ಟ ವಿಚಾರವನ್ನು **'ಸೋಗಾಲ ಶಾಸನ'**[16]ವೊಂದು

ಉಲ್ಲೇಖಿಸಿದೆ. 1630 ರಲ್ಲಿ ಮೈಸೂರಿನ ಚಾಮರಾಜ ಒಡೆಯರ್ ಚನ್ನಪಟ್ಟಣ ರಾಜ್ಯವನ್ನು ಮುತ್ತಿ ವಶಪಡಿಸಿಕೊಂಡ ನಂತರ ಚನ್ನಪಟ್ಟಣ ಪಾಳೇಗಾರರ ಆಳ್ವಿಕೆ ಕೊನೆಗೊಂಡಿತು.

ಚನ್ನಪಟ್ಟಣ ಪಾಳೇಗಾರರು ಇಲ್ಲಿನ ದೇವಾಲಯಗಳಿಗೆ ದಾನದತ್ತಿ ಕೊಟ್ಟರಲ್ಲದೆ ಅವುಗಳನ್ನು ಪುನರ್ ರಚಿಸಿದರು. ಚನ್ನಪಟ್ಟಣದ ಕೋದಂಡರಾಮ ದೇವಸ್ಥಾನ ಈ ಅವಧಿಯಲ್ಲಿ ನಿರ್ಮಾಣಗೊಂಡಿತು.

ಮಳೂರಿನ ಅಪ್ರಮೇಯಸ್ವಾಮಿ ದೇವಸ್ಥಾನದಲ್ಲಿ ಜಗದೇವರಾಯನ ಹೆಂಡತಿಯ ಮೂರ್ತಿ ಇದೆ. ಜಗದೇವರಾಯನಿಂದ ನಿರ್ಮಿಸಲ್ಪಟ್ಟ ಕೋಟೆ ಈಗ ಸಂಪೂರ್ಣ ನಾಶವಾಗಿದೆ. ಸಾಹಿತ್ಯಕವಾಗಿಯೂ ಚನ್ನಪಟ್ಟಣದ ಪಾಳೇಗಾರರು ಪ್ರೋತ್ಸಾಹವಿತ್ತಿದ್ದರು. ಇಮ್ಮಡಿ ಜಗದೇವರಾಯನ ಆಸ್ಥಾನ ಕವಿ ಓಬಳಕವಿ ಎಂಬಾತ 'ವಾಮನಪುರಾಣ'ವನ್ನು ರಚಿಸಿದ್ದಾನೆ. ಆತನೆ ಸ್ವತಃ ಕವಿಯಾಗಿದ್ದು, ಸಂಸ್ಕೃತದಲ್ಲಿ 'ಆಧ್ಯಾತ್ಮ ರಾಮಾಯಣ' ಎಂಬ ಗ್ರಂಥಗಳನ್ನು ರಚಿಸಿರುವನು. ಅಂಕುಶೇಂದ್ರನಿಂದ ಪೋಷಿಸಲ್ಪಟ್ಟ ಕಿವುರಿಏಕಾಂಬರನಾಥ ಮುಂತಾದ ಕವಿಗಳಿಗೆ ಇವರು ಪ್ರೋತ್ಸಾಹ ಕೊಟ್ಟಿದ್ದರು. ಚಾವಲಿ ರಾಮಸ್ವಾಮಿ ಹೊಸಗನ್ನಡ ಸಾಹಿತ್ಯದ ಬಗ್ಗೆ ಛಂದಸ್ಸನ್ನು ಕುರಿತು ಬರೆದುದು ಇದೇ ಅವಧಿಯಲ್ಲಿ.

ಚಾಮರಾಯ ಒಡೆಯರು ಚನ್ನಪಟ್ಟಣವನ್ನು ವಶಪಡಿಸಿಕೊಂಡ ನಂತರ ಚನ್ನಪಟ್ಟಣ ರಾಜ್ಯ ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡಿತು. ನಂತರ ಹೈದರ್ಆಲಿ ಮತ್ತು ಟಿಪ್ಪು ಅವರ ಆಳ್ವಿಕೆಗೆ ಒಳಪಟ್ಟಿತು. 1759 ರಲ್ಲಿ ಗೋಪಾಲಹರಿಯ ಮುಖಂಡತ್ವದಲ್ಲಿದ್ದ ಮರಾಠಸೇನೆ ಇಲ್ಲಿನ ಕೋಟೆಯನ್ನು ನಾಶಪಡಿಸಿತು. ದಿವಾನ್‌ಪೂರ್ಣಯ್ಯ ಕೋಟೆಯನ್ನು ದುರಸ್ಥಿಗೊಳಿಸಿದ. ಹೈದರಾಲಿ ಕೂಡ್ಲೂರು ಗ್ರಾಮವನ್ನು ಅಕ್ಬಲ್‌ಷಾಖಾದ್ರಿ ಎಂಬಾತನಿಗೆ ದತ್ತಿ ಕೊಟ್ಟಿದ್ದನು. ಹೈದರಾಲಿಯ ಗುರು ಅಕ್ಬಲ್‌ಷಾಖಾದ್ರಿ ಇಲ್ಲಿ ನೆಲೆಸಿದ್ದನು. ಈತನ ಗೋರಿಯು ಇಲ್ಲಿದೆ. ಇವರ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಭಾವ ಮೈದುನ ತಿಮ್ಮಪ್ಪರಾಜ ಇಲ್ಲಿ ಆಳ್ವಿಕೆ ನಡೆಸಿ ಅರಮನೆಯೊಂದನ್ನು ಕಟ್ಟಿಸಿದ. ಹೈದರಾಲಿ ಸೈಯದ್ ವಾಡಿಯಲ್ಲಿ ಜಾಮಿಮಸೀದಿ ನಿರ್ಮಿಸಿದನು. ಬಡಮಖಾನ್ ದರ್ಗಾಗಳು ಈತನ ಕಾಲಕ್ಕೆ ಸೇರಿದ್ದವು.

ಸ್ವಾತಂತ್ರ್ಯ ಚಳುವಳಿಯಲ್ಲಿ ಚನ್ನಪಟ್ಟಣದ ಪಾತ್ರ :–

ಸ್ವಾತಂತ್ರ್ಯ ಚಳುವಳಿಯಲ್ಲಿ ಚನ್ನಪಟ್ಟಣ ಪ್ರಮುಖ ಪಾತ್ರ ವಹಿಸಿತು. ಸ್ವಾತಂತ್ರ್ಯ ಚಳುವಳಿ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸ್ಥಾಪನೆಯಾದ ನಂತರವೇ ತೀವ್ರಗೊಂಡಿತು. ಆಳರಸರು

ರಾಜ್ಯವನ್ನು ಬ್ರಿಟೀಷರ ಆಶ್ರಿತ ರಾಜ್ಯವಾಗಿ ಮಾರ್ಪಟ್ಟು, ಜನಕಲ್ಯಾಣ ಸಾಧಿಸಿದ್ದರಿಂದ ಇಲ್ಲಿನ ಜನ ಬ್ರಿಟೀಷರ ಅಥವಾ ಮೈಸೂರು ಒಡೆಯರ ವಿರುದ್ಧ ಚಳುವಳಿಯನ್ನೇನು ಆರಂಭಿಸಿರಲಿಲ್ಲ. ಗಾಂಧೀಜಿಯವರ 'ಸಂಪೂರ್ಣ ಸ್ವರಾಜ್ಯ' ಮತ್ತು 'ಭಾರತ ಬಿಟ್ಟು ತೊಲಗಿ' ಚಳುವಳಿ ಹಾಗೂ 'ಮೈಸೂರು ಚಲೋ' ಚಳುವಳಿಯ ಸಂದರ್ಭದಲ್ಲಿ ಭಾಗವಹಿಸಿ ಗಾಂಧೀಜಿಯವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ತಿಟ್ಟಮಾರನಹಳ್ಳಿಯ ವೆಂಕಟಪ್ಪ, ಅಕ್ಕೂರಿನ ವೀರಣ್ಣಗೌಡ, ನಾಗವಾರದ ಕಪಿನಯ್ಯ, ಚನ್ನಪಟ್ಟಣದ ಕರಿಯಪ್ಪ, ಕೃಷ್ಣಮೂರ್ತಿ, ಕೆಂಪಯ್ಯ ಗಾಳಿಚನ್ನ (ಬೇವೂರು), ಅಬ್ಬೂರಿನ ಚನ್ನಿಗಯ್ಯ, ಚಕ್ಕೆರೆ ಚನ್ನೇಗೌಡ, ಭೈರಾಪಟ್ಟಣದ ತಿಮ್ಮೇಗೌಡ, ವೆಂಕಟಕೃಷ್ಣೇಗೌಡ, ಹೊನ್ನೇಗೌಡ, ಚನ್ನಪಟ್ಟಣದ ಹುಚ್ಚಯ್ಯ, ಸಂಜೀವರಾಯ, ಶ್ರೀನಿವಾಸ, ವೆಂಕಟಸ್ವಾಮಯ್ಯ ವೆಂಕಟರೆಡ್ಡಿ, ಡಿ.ಆರ್.ಲಿಂಗಯ್ಯ, ಡಿ.ಟಿ.ರಾಮು, ರಾಮಯ್ಯ, ಪುಟ್ಟರಂಗಪ್ಪ ಮುಂತಾದವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಸ್ವಾತಂತ್ರ್ಯ ಚಳುವಳಿಯಲ್ಲಿ 'ಸುಭಾಷಿತ' ಮತ್ತು 'ಕರ್ತವ್ಯ' ಪತ್ರಿಕೆಗಳು ಮಹತ್ವದ ಪಾತ್ರ ವಹಿಸಿದ್ದವು. ಸರ್ಕಾರಿ ಮಾದರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆ ಪ್ರಾರಂಭವಾಗಿ ಸುತ್ತಮುತ್ತಲ ತಾಲ್ಲೂಕಿನ ವಿದ್ಯಾರ್ಥಿಗಳು ಇಲ್ಲಿ ಕಲಿತರಲ್ಲದೆ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದ್ದರು. ಕಾನಕಾನಹಳ್ಳಿ ಕರಿಯಪ್ಪ, ತಿಟ್ಟಮಾರ್ನಹಳ್ಳಿ ವೆಂಕಟಪ್ಪ, ವೀರಣ್ಣಗೌಡ, ವೆಂಕಟಗಿರೀಗೌಡ, ಎಚ್.ಎಲ್.ನಾಗೇಗೌಡ, ಟಿ.ಕೆ.ಶಂಕರೇಗೌಡ, ಸಿ.ಕೆ.ವೆಂಕಟರಾಮಯ್ಯ, ಬಿ.ಪಿ.ಜವರೇಗೌಡ, ಟಿ.ಕೆ.ರಾಮಯ್ಯ ಮುಂತಾದವರು ವ್ಯಾಸಂಗ ಮಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರವಹಿಸಿ ತಾಲ್ಲೂಕಿಗೆ ಕೀರ್ತಿ ತಂದರು.

ಸ್ವಾತಂತ್ರ್ಯದ ನಂತರ ಚನ್ನಪಟ್ಟಣ ತಾಲ್ಲೂಕು :-

ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲಿ ಅತ್ಯಂತ ಮುಂದುವರಿದ ತಾಲ್ಲೂಕುಗಳಲ್ಲಿ ಚನ್ನಪಟ್ಟಣ 2ನೇ ಸ್ಥಾನವನ್ನು ಪಡೆದುಕೊಂಡಿತ್ತು. ಇಲ್ಲಿನ ವ್ಯಾಪಾರ, ವಾಣಿಜ್ಯ, ಕೃಷಿ, ಕೈಗಾರಿಕೆಗಳು ಹೆಚ್ಚು ಅಭಿವೃದ್ಧಿಯನ್ನು ಪಡೆದಿದ್ದವು. ಚೋಳ ಮತ್ತು ವಿಜಯನಗರ ಕಾಲದಲ್ಲಿ ಕಟ್ಟಿದ ಕೆರೆಗಳು ಇಲ್ಲಿನ ನೀರಾವರಿ ಮೂಲಗಳಾಗಿದ್ದು, ಇಲ್ಲಿ ತೆಂಗು, ಬಾಳೆ, ಕಬ್ಬು, ಕಡ್ಲೆಕಾಯಿ, ಭತ್ತ, ವಿಳ್ಯೇದೆಲೆ ಮುಂತಾದ ಬೆಳೆಗಳನ್ನು ಬೆಳೆಯಲಿಕ್ಕೆ ಸಹಕಾರಿಯಾಗಿದ್ದವು. ಚೋಳರ ನರಸಿಂಹವರ್ಮ, ದಾಮನಂದಿ, ಇಳಿವಂಜಿರಾಯ, ಬ್ರಾಹ್ಮಾಂಡಮು ಮತ್ತಿತರರು ಕರ್ನಾಟಕದ ಚೋಳ ಪ್ರದೇಶಗಳ ಆಳ್ವಿಕೆ ನಡೆಸಿದ ಪ್ರಮುಖರಾಗಿದ್ದರು. ವಿಟ್ಟೈ, ಮಾದಿಲೈ,

ವಾಲಾಕ್ಕಾಣಂ, ಕೋಲ್, ವಿಠ್ಯಕೂಲಿ, ಕಾವಳಮಕಿನ್, ಪದಿಕಾವಲ್, ಮಡೈಕೋರ್ ಮುಂತಾದ ತೆರಿಗೆಗಳನ್ನು ಇಲ್ಲಿನ ಗ್ರಾಮಗಳಿಂದ ಸಂಗ್ರಹಿಸುತ್ತಿದ್ದರು.

ಗಾವುಂಡ ಅಥವಾ ಗೌಡ ಊರಿನ ಮುಖ್ಯಸ್ಥನಾಗಿರುತ್ತಿದ್ದ. ಪಟೇಲ್, ಶಾನುಭೋಗ, ತೋಟಿ, ತಳವಾರ ಮುಂತಾದ ಗ್ರಾಮಾಧಿಕಾರಿಗಳು ಇರುತ್ತಿದ್ದರು. ಇಲ್ಲಿ ತಮಿಳು ಆಡಳಿತ ಭಾಷೆಯಾಗಿತ್ತು. ದೊರಕಿರುವ ಚೋಳರ ಎಲ್ಲಾ ಶಾಸನಗಳು ತಮಿಳು ಭಾಷೆಯಲ್ಲಿರುವುದೇ ಇದಕ್ಕೆ ನಿದರ್ಶನ. ಪ್ರತೀ ಗ್ರಾಮ ಅಥವಾ ಅಗ್ರಹಾರಗಳಲ್ಲಿ ಗ್ರಾಮಸಭೆ ಇರುತ್ತಿತ್ತು. ಗ್ರಾಮ ಸಭೆಗೆ ಊರ್, ಕುರಿ, ಪೆರಂಗುರಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಮಳೂರು ಅಪ್ರಮೇಯಸ್ವಾಮಿ ದೇವಾಲಯ ಲೇವಾದೇವಿ ವ್ಯವಹಾರ ಹಾಗೂ ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿತ್ತು.

ಹೈದರಾಲಿಯ ಮತ್ತು ಬ್ರಿಟೀಷರ ಕಾಲದ ಆಡಳಿತ ಪ್ರಧಾನವಾಗಿ ಪ್ರಮುಖ ಪಾತ್ರವಹಿಸಿತ್ತು. ಹೈದರಾಲಿಯ ಮತ್ತು ಟಿಪ್ಪುವಿನ ಅಧಿಕಾರಿಗಳು ಇಲ್ಲೆ ವಾಸ್ತವ್ಯ ಹೂಡಿದ್ದರು. 1873 ರಲ್ಲಿ ಕ್ಲೋಸ್‌ಪೇಟೆಯನ್ನು (ಇಂದಿನ ರಾಮನಗರ) ಉಪತಾಲ್ಲೂಕನ್ನಾಗಿ ಮಾಡಲಾಯಿತು. 1892 ರಲ್ಲಿ ಕ್ಲೋಸ್‌ಪೇಟೆಯೇ ಚನ್ನಪಟ್ಟಣದ ಉಪತಾಲ್ಲೂಕನ್ನಾಗಿ ಮಾಡಲಾಯಿತು. ಇಂದು ಇದು ರಾಮನಗರ ಜಿಲ್ಲೆಯಾಗಿದೆ. ಬೆಂಗಳೂರು ಮೈಸೂರು ರಸ್ತೆಯಲ್ಲಿ ಇತರೆ ಯಾವುದೇ ತಾಲ್ಲೂಕು ಹೊಂದಿರದ ಸವಲತ್ತುಗಳನ್ನು ಹೊಂದಿ ಸರ್ಕಾರದ ವಿವಿಧ ಆಡಳಿತಾತ್ಮಕ ಕಛೇರಿಗಳು ತೆರೆಯಲ್ಪಟ್ಟವು.

ಸ್ವಾತಂತ್ರ್ಯ ನಂತರ ಚನ್ನಪಟ್ಟಣ ಇದೇ ಗತಿಯಲ್ಲಿ ಮುಂದುವರಿದು ಶೈಕ್ಷಣಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಸಾಧಿಸಿತು. ಸಾಂಸ್ಕೃತಿಕವಾಗಿಯು ಹೆಮ್ಮೆ ಪಡುವಂತಹ ಸಾಧನೆಯನ್ನು ಮಾಡಿತು. ಅಬ್ಬೂರು ಕಣ್ವನದಿಯ ದಂಡೆಯಲ್ಲಿದ್ದು ಇಲ್ಲಿ ಶ್ರೀ ಬ್ರಾಹ್ಮಣ್ಯತೀರ್ಥರ ಬೃಂದಾವನವಿದೆ. ತಾಲ್ಲೂಕಿನಲ್ಲಿ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ 32 ಗ್ರಾಮ ಪಂಚಾಯ್ತಿಗಳಿದ್ದು, 458 ಜನ ಸದಸ್ಯರಿದ್ದಾರೆ. 19 ತಾಲ್ಲೂಕು ಪಂಚಾಯ್ತಿ ಸದಸ್ಯರು, 5 ಜಿಲ್ಲಾ ಪಂಚಾಯ್ತಿ ಸದಸ್ಯರು, ಒಬ್ಬ ವಿಧಾನಸಭಾ ಸದಸ್ಯರು ಇದ್ದಾರೆ. 1 ನಗರಸಭೆ ಇದೆ.

ಚನ್ನಪಟ್ಟಣಕ್ಕೆ 2 ಕಿ.ಮೀ ದೂರದಲ್ಲಿರುವ ಕೆಂಗಲ್ ಆಂಜನೇಯನ ದೇವಸ್ಥಾನವಿದ್ದು, ದನಗಳ ಜಾತ್ರೆ ಇಲ್ಲಿ ಬಹಳ ಪ್ರಸಿದ್ದವಾದುದು. ಮಳೂರು ತೇರು, ಮೈಲನಾಯಕನಹಳ್ಳಿಯಲ್ಲಿ ಕೊಲ್ಲಾಪುರದಮ್ಮನ ಜಾತ್ರೆ, ಬೆಟ್ಟದ ತಿಮ್ಮಪ್ಪನ ಜಾತ್ರೆ, ದೇವರಹೊಸಹಳ್ಳಿಯ

ಸಂಜೀವರಾಯಸ್ವಾಮಿಯಜಾತ್ರೆ, ಹುಣಸನಹಳ್ಳಿಯಲ್ಲಿ ಬಿಸಿಲಮ್ಮನ ಜಾತ್ರೆ, ಸರಗೂರಿನ ಬಸವೇಶ್ವರನ ಜಾತ್ರೆಗಳು ತಾಲ್ಲೂಕಿನಲ್ಲೇ ಪ್ರಸಿದ್ಧಿಯನ್ನು ಪಡೆದುಕೊಂಡಿವೆ.

ಈ ತಾಲ್ಲೂಕು ಕೈಗಾರಿಕೆಯಲ್ಲಿ ಸ್ವಲ್ಪ ಹಿಂದೆ ಇದೆ. ಚನ್ನಪಟ್ಟಣ ಬೊಂಬೆಯ ನಗರಿಯೆಂದು ಪ್ರಸಿದ್ಧವಾಗಿದೆ. ರಾಜ್ಯದ ಸಾಗರ ತಾಲ್ಲೂಕು ಶ್ರೀಗಂಧದ ಕೆತ್ತನೆ ಕೆಲಸಗಳಿಗೆ ಪ್ರಸಿದ್ಧವಾಗಿದ್ದರೆ, ಚನ್ನಪಟ್ಟಣ ಮರದ ಆಟಿಕೆಗಳಿಗೆ ಪ್ರಸಿದ್ಧಿಯಾಗಿದೆ. ಚನ್ನಪಟ್ಟಣದ ಗೊಂಬೆಗಳು ತಮ್ಮ ಸೌಂದರ್ಯ, ವೈವಿಧ್ಯತೆ ಮತ್ತು ಉತ್ತಮ ಗುಣಮಟ್ಟದಿಂದಾಗಿ ಎಲ್ಲರನ್ನು ಆಕರ್ಷಿಸುತ್ತದೆ. ಇಲ್ಲಿನ ಗೊಂಬೆಗಳ ಸೌಂದರ್ಯಕ್ಕೆ ಮಾರುಹೋದ ಪ್ರಸಿದ್ಧ ಕವಿ ಜಿ.ಪಿ.ರಾಜರತ್ನಂ ಹೀಗೆ ಹಾಡಿ ಹೊಗಳಿದ್ದಾರೆ;

"ಚನ್ನಪಟ್ಟಣದ ಬಣ್ಣದ ಗೊಂಬೆ
ಚಿನ್ನದ ಹಾಗೆ ಹೊಳೆಯುವ ಗೊಂಬೆ
ರನ್ನದ ಹಾಗೆ ಮಿನುಗುವ ಗೊಂಬೆ
ಕಣ್ಣನು ಮಿಟುಕಿಸಿ ಆಡುವ ಗೊಂಬೆ."[17]

ಎಂದು ಗೊಂಬೆಗಳ ಬಗ್ಗೆ ವರ್ಣಿಸಿದ್ದಾರೆ.

ಚನ್ನಪಟ್ಟಣದ ಬೊಂಬೆಗಳನ್ನು ತಯಾರಿಸುವ ಪಾರಂಪರಿಕ ಕುಶಲಕರ್ಮಿಗಳು ಚಿತ್ರಕಾರರೆಂಬ ಸಮುದಾಯಕ್ಕೆ ಸೇರಿದವರು ತಾಲ್ಲೂಕಿನಲ್ಲಿ ಇದ್ದಾರೆ. ಈ ಬಣ್ಣದ ಗೊಂಬೆಗಳ ತಯಾರಿಕೆಗೆ ಸುಮಾರು 2 ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. ಈ ಉದ್ಯಮವು ತಾಲ್ಲೂಕಿನ ವಿವಿಧ ಜನಾಂಗದವರ ಜೀವನಾಧಾರವಾಗಿದೆ. ಇಲ್ಲಿ ಸುಮಾರು 2000ಕ್ಕೂ ಅಧಿಕ ಗುಡಿ ಕೈಗಾರಿಕೆಗಳು ಇವೆ. ಹಾಲೆ ಎಂಬ ಒಂದು ಜಾತಿಯ ಕೆತ್ತನೆಯ ಕೆಲಸಕ್ಕೂ ಮೃದುವಾಗಿರುವ ಮರವನ್ನು ಇಲ್ಲಿನ ಆಟಿಕೆಗಳ ತಯಾರಿಕೆಗೆ ಉಪಯೋಗಿಸಲಾಗುತ್ತದೆ. ಅತ್ಯಂತ ಸೂಕ್ಷ್ಮ ನವಿರಾದ ಕೆಲಸಗಳನ್ನು ಇಲ್ಲಿನ ಕುಶಲಕರ್ಮಿಗಳು ನಿರ್ವಹಿಸುವುದಲ್ಲದೆ ಗುಲಗಂಜಿ ಗಾತ್ರದ ಬೊಂಬೆಗಳಿಂದ ದೊಡ್ಡ ಪ್ರಾಣಿ, ಮನುಷ್ಯನ ಗಾತ್ರದವರೆಗೂ ತಯಾರಾಗುತ್ತವೆ. ಮರದ ಸಣ್ಣ ಸಣ್ಣ ಮಣಿಗಳು, ಪೆನ್ನುಗಳು, ಬಳೆ, ಉಂಗುರ, ಕೀಬಂಚ್, ದೇವರ ಗೋಪುರ, ಪ್ರಾಣಿಪಕ್ಷಿಗಳ ಮಾದರಿಯ ವಿವಿಧ ಭಂಗಿಯ ವಿಗ್ರಹಗಳು ಹೀಗೆ ವೈವಿಧ್ಯಮಯ ಆಟಿಕೆಗಳು ತಯಾರಾಗುತ್ತವೆ. ಗೃಹ ಅಲಂಕಾರದ ವಸ್ತುಗಳು, ಗೃಹೋಪಯೋಗಿ ವಸ್ತುಗಳು, ಮರದ

ಆಭರಣಗಳು ತಯಾರಾಗುವುದಲ್ಲದೆ, ಇವುಗಳನ್ನು ಅಮೇರಿಕಾ, ಇಂಗ್ಲೆಂಡ್, ಕೆನಡ, ಬ್ರಿಟನ್, ಯುಗೋಸ್ಲಾವಿಯ, ಜಪಾನ್ ಮುಂತಾದ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತದೆ.

ಚನ್ನಪಟ್ಟಣದಿಂದ ಪ್ರತಿವರ್ಷ ನೂರು ಕೋಟಿಗೂ ಅಧಿಕ ಬಣ್ಣದ ಬೊಂಬೆಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಆದರೆ ಇತ್ತೀಚೆಗೆ ಪ್ಲಾಸ್ಟಿಕ್ ಸಾಮಾನುಗಳ ವ್ಯಾಪಾರ ಭರಾಟೆಯಿಂದ ನಡೆಯುತ್ತಿದ್ದು, ಈ ಉದ್ಯಮ ಸಂಕಷ್ಟದಲ್ಲಿದೆ. ಬಡವ ಶ್ರೀಮಂತರೆನ್ನದೆ, ಜಾತಿ ಧರ್ಮವೆನ್ನದೆ ಎಲ್ಲರು ತಮ್ಮ ವಯೋಮಾನ ಆಸಕ್ತಿಗನುಗುಣವಾಗಿ ಇಷ್ಟಪಡುವ ಈ ಬಣ್ಣದ ಬೊಂಬೆಗಳು ಇಂದಿಗೂ ಉಳಿದುಕೊಂಡು ಬರುತ್ತಾ ಇವೆ.

ತಾಲ್ಲೂಕಿನ ಇತರ ಕರಕುಶಲ ಕೈಗಾರಿಕೆಯಲ್ಲಿ ಬೇವೂರಿನ ಮಣ್ಣಿನ ಕುಡಿಕೆ, ಮಣ್ಣಿನ ವಿವಿಧ ಬಗೆಯ ಸಾಮಾನುಗಳು ಪ್ರಸಿದ್ಧಿಯಾಗಿವೆ. ಬಿದಿರಿನ ಬುಟ್ಟಿ, ತಟ್ಟೆ, ಮೊರಗಳನ್ನು ಹೆಣೆಯುವ 'ಮೇಧರು', ಮರದ ಬಾಚಣಿಕೆ ತಯಾರಿಸುವ 'ದೊಂಬರು', ಶೆಡ್‌ಗಾಗಿ ತರಾವರಿಯ ಬಗೆಯಲ್ಲಿ ಗರಿ ಹೆಣೆಯುವ 'ಹರಿ ಜನರು' ಹಳ್ಳಿಗಳಲ್ಲಿ ಕಂಡುಬರುತ್ತಾರೆ.

"ಡಾ.ಫ್ರಾಂನ್ಸಿಸ್ ಬುಕೆನಾನ್ ಎಂಬ ಇಂಗ್ಲೀಷ್ ಅಧಿಕಾರಿ ಪ್ರವಾಸ ಕೈಗೊಂಡಾಗ ಇಲ್ಲಿನ ಗಾಜಿನ ಸಾಮಾನುಗಳನ್ನು, ಬಳೆಗಳನ್ನು, ವೀಣೆಯ ತಂತಿಗಳನ್ನು ಬಿದಿರಿನಿಂದ ಎಣೆದ ಸಾಮಾನುಗಳು, ವೀಣೆ ತಯಾರಿಕೆ, ಪ್ರಸಿದ್ದಿಯಾಗಿದ್ದನ್ನು ವರ್ಣಿಸಿದ್ದಾನೆ"[18]

ರಾಜಕೀಯದಲ್ಲಿ ಬಹಳ ಪ್ರಜ್ಞಾವಂತಿಕೆಯನ್ನು ಮೆರೆದಿರುವ ಚನ್ನಪಟ್ಟಣ ತಾಲ್ಲೂಕು 1983ರ ತನಕ ಒಂದು ರೀತಿಯಲ್ಲಿ ಕಾಂಗ್ರೆಸ್ಸಿನ ಭದ್ರಕೋಟೆಯಾಗಿದೆ. 1983 ರಿಂದ ಈಚೆಗೆ ಚನ್ನಪಟ್ಟಣ ರಾಜಕೀಯಕ್ಷೇತ್ರದಲ್ಲಿ ಮಹತ್ವದ ತಿರುವನ್ನು ಪಡೆದಿದೆ. ಈ ತಾಲ್ಲೂಕಿನ ಧುರೀಣರೆಂದರೆ ಬೇವೂರಿನ ಬಿ.ಕೆ.ಪುಟ್ಟರಾಮಯ್ಯ, ತಿಟ್ಟಮಾರನಹಳ್ಳಿಯ ವಿ.ವೆಂಕಟಪ್ಪ, ಬೆಳಕೆರೆಯ ಬಿ.ಜೆ.ಲಿಂಗೇಗೌಡ, ಅಬ್ಬೂರಿನ ವಿ.ಗೋಪಣ್ಣ, ಟಿ.ವಿ.ಕೃಷ್ಣಪ್ಪ, ಸಾದಾತ್ ಆಲಿಖಾನ್, ಷಾಬುದ್ಧಿನ್ ಪೌಜ್‌ದಾರ್, ಎಂ.ವರದೇಗೌಡ, ಅಶ್ವಥ್.ಎಂ ಮತ್ತು ಹಾಲಿ ಶಾಸಕ ಸಿ.ಪಿ.ಯೋಗೇಶ್ವರ ಮುಖ್ಯರು. ಕರ್ನಾಟಕ ರಾಜ್ಯದ ಮೊಟ್ಟ ಮೊದಲ ವಿದ್ಯಾಮಂತ್ರಿ ವಿ.ವೆಂಕಟಪ್ಪನವರು, ತಾಲ್ಲೂಕಿನ ಪ್ರಥಮ ಮಂತ್ರಿಯಾದರೆ, ಎಂ.ವರದೇಗೌಡರು ರೇಷ್ಮೆ ಖಾತೆ ಸಚಿವರಾಗಿ ಎರಡನೆಯವರಾಗಿದ್ದಾರೆ. ವಿರೋಧ ಪಕ್ಷದ ನಾಯಕರಾಗಿ ಬೇವೂರಿನ ಬಿ.ಕೆ.ಪುಟ್ಟರಾಮಯ್ಯ ಗಮನಾರ್ಹರು ರಾಜಕಾರಣದಲ್ಲಿದ್ದರು. ಸಚ್ಚಾರಿತ್ರ್ಯ ಉಳಿಸಿಕೊಂಡಿರುವ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಎ.ಗೋಪಣ್ಣ, ಡಿ.ಆರ್.ಲಿಂಗಯ್ಯನವರನ್ನು ಈ

ಸಂದರ್ಭದಲ್ಲಿ ಉಲ್ಲೇಖಿಸಬಹುದು. ತಾಲ್ಲೂಕಿನಲ್ಲಿ ಪ್ರಪ್ರಥಮವಾಗಿ ಚನ್ನಪಟ್ಟಣ ನಗರಸಭೆಗೆ ಮುಸ್ಲಿಂ ಜನಾಂಗದ ಮಹಿಳೆ ಶ್ರೀಮತಿ ಅಜರಾಬಾಪು ಅಧ್ಯಕ್ಷರಾದದ್ದು ದಾಖಲೆಯಾದರೆ, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷೆಯಾಗಿ ಶ್ರೀಮತಿ ರಾಧಮ್ಮ ರಂಗಸ್ವಾಮಿ ಸುದ್ದಿ ಮಾಡಿದರು. ಹಿಂದೂ ಧರ್ಮದ ಪರಿಶಿಷ್ಟ ಜಾತಿಯ ಮಹಿಳೆ ಕು.ಸುಧಾ ನಗರಸಭೆಯ ಅಧ್ಯಕ್ಷರಾಗಿದ್ದರು. ಇಲ್ಲಿನ ಮತದಾರರು ಅತ್ಯಂತ ಪ್ರಜ್ಞಾವಂತರಾಗಿ, ಒಮ್ಮೆ ಆಯ್ಕೆಯಾದವರು ಮತ್ತೊಮ್ಮೆ ಆಯ್ಕೆಯಾಗಿರುವುದು ಅವರ ಪ್ರಜ್ಞಾವಂತಿಕೆಯನ್ನು ತಿಳಿಸುತ್ತದೆ.

ಪಟ್ಟಣ ಅಭಿವೃದ್ಧಿ ಯೋಜನೆಗೆ ಈ ತಾಲ್ಲೂಕು ಸೇರಿರುವುದರಿಂದ ಚನ್ನಪಟ್ಟಣ ಟೌನ್‌ಗೆ ತೊರೆಕಾಡನ ಹಳ್ಳಿಯಿಂದ ಕಾವೇರಿ ನೀರನ್ನು ಸರಬರಾಜು ಮಾಡುವ ಕಾರ್ಯ ಮುಕ್ತಾಯವಾಗಿದೆ. ಪಟ್ಟಣ ವ್ಯಾಪ್ತಿಯ ಬೆಂಗಳೂರು ಮೈಸೂರು ಹೆದ್ದಾರಿಯನ್ನು ಆರು ಪಥದ ರಸ್ತೆಯನ್ನಾಗಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ.

ಆನಂದಪುರದ ತಮಿಳರಿಗೆ ನೂರಾರು ಮನೆಯನ್ನು ಕಟ್ಟಿಕೊಡಲಾಗಿದೆ. ಅಸಂಘಟಿತ ವಲಯದ ಬೀಡಿಕಾರ್ಮಿಕರಿಗೆ ಸೂರನ್ನೂ ಒದಗಿಸಲಾಗಿದೆ. ಹೌಸಿಂಗ್‌ಬೋರ್ಡ್‌ನಿಂದ ನಿವೇಶನ ಹಂಚಿಕೆ ಮಾಡಲಾಗಿದೆ. ಸುಣ್ಣಘಟ್ಟಕ್ಕೂ ಸಮೀಪ ಟೌನ್‌ಶಿಪ್ ನಿರ್ಮಾಣ ಮಾಡಲಾಗಿದೆ. ನಗರಸಭೆ ಸ್ವಂತ ಕಟ್ಟಡವನ್ನು ಹೊಂದಿದೆ. ರಾಮನಗರ ಪ್ರಾಧಿಕಾರದಿಂದ ಹರಾಜು ಮೂಲಕ ಮನೆ ಹಂಚಿಕೆ ಮಾಡಲಾಗಿದೆ. ಒಟ್ಟಾರೆ ಹಿಂದಿಗಿಂತ ಪಟ್ಟಣ ಹೊಸ ರೂಪ ತಾಳಲು ಗಂಭೀರವಾಗಿ ಚಿಂತನೆ ನಡೆದಿದೆ. ಈ ತಾಲ್ಲೂಕಿನ ಗ್ರಾಮೀಣ ಭಾಗಗಳಿಗೆ ಕುಡಿಯುವ ನೀರಿಗೆ ಕಾವೇರಿ ನೀರನ್ನು ತರುವ ವ್ಯವಸ್ಥೆಯನ್ನು ತ್ವರಿತಗತಿಯಲ್ಲಿ ನಡೆಸಲಾಗುತ್ತಿದೆ. ಒಟ್ಟಾರೆ ಚನ್ನಪಟ್ಟಣ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದುತ್ತಿರುವುದನ್ನು ಕಾಣಬಹುದಾಗಿದೆ.

2.6 ಚನ್ನಪಟ್ಟಣ ತಾಲ್ಲೂಕಿನ ಧಾರ್ಮಿಕ ಹಿನ್ನೆಲೆ :

'ಧರ್ಮ' ಎಂದರೆ ನಾವು ಏನನ್ನು ಧರಿಸುತ್ತೇವೆಯೋ, ಏನನ್ನು ರಕ್ಷಾಕವಚವಾಗಿ ಅವಲಂಬಿಸುತ್ತೇವೆಯೋ ಅದು ಧರ್ಮ. ಧರ್ಮ ಎಂದರೆ ನ್ಯಾಯ, ಕರ್ತವ್ಯ, ಪುಣ್ಯ, ಪ್ರಾಮಾಣಿಕ ದಾರಿ ಮುಂತಾದ ಅರ್ಥಗಳಿವೆ. ಭಾರತೀಯ ಸಮಾಜ ಧಾರ್ಮಿಕ ನೆಲೆಗಟ್ಟಿನ ಮೇಲೆ ನಿಂತ ಸಮಾಜ. ಮತಧರ್ಮಗಳಾದ ಹಿಂದೂ, ಜೈನ, ಬೌದ್ಧ, ಇಸ್ಲಾಂ, ಕ್ರೈಸ್ತ, ಸಿಖ್ಖ್

ಮುಂತಾದವುಗಳ ವೈವಿಧ್ಯತೆಯೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯತೆ. ಅಲ್ಲಿನ ಕೋಮು ಸೌಹಾರ್ದತೆಯೇ ಅದರ ಜೀವಾಳವಾಗಿದೆ.

ಆಧ್ಯಾತ್ಮಿಕತೆಯನ್ನು ಮುಖ್ಯವಾಗಿ ಪ್ರತಿಬಿಂಬಿಸುವ ಧಾರ್ಮಿಕ ಸಂಸ್ಕೃತಿಗೆ ದೇಗುಲಗಳೇ ದಾಖಲೆಗಳು. ಇಂಥ ದೇವಾಲಯ ಸಂಸ್ಕೃತಿಯ ಬೃಹತ್ತಾದ ಕುರುಹು. ಇಂತಹ ಪರಂಪರೆಗಳು ಚನ್ನಪಟ್ಟಣ ತಾಲ್ಲೂಕಿಗಿವೆ. ಚೋಳರು, ಗಂಗರು, ಮೈಸೂರು ಒಡೆಯರು ಹೀಗೆ ಈ ಭಾಗವನ್ನಾಳಿದ ರಾಜಮನೆತನಗಳು ಅದ್ಭುತ ಶಿಲ್ಪಕಲಾ ಕೌಶಲ್ಯಕ್ಕೆ ಸಾಕ್ಷಿ ಎನ್ನಿಸುವಂಥ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ರಾಜಮಹಾರಾಜರಿಂದ ಕಟ್ಟಲ್ಪಟ್ಟು, ಭಕ್ತಾದಿಗಳಿಂದ ಪೋಷಿಸಲ್ಪಟ್ಟ ದೇವಾಲಯಗಳು ಆಸ್ತಿಕ ಮನಸ್ಸುಗಳ ಹೆಚ್ಚಳಕ್ಕೆ ಕಾರಣವಾಗುತ್ತಲೇ, ಸಮಾಜಘಾತುಕ ಆಲೋಚನೆಗಳಿಗೆ ಕಡಿವಾಣಗಳ ರೂಪದಲ್ಲೂ ಪರೋಕ್ಷವಾಗಿ ಕೆಲಸ ಮಾಡುತ್ತಿವೆ. ಸಾಹಿತ್ಯಕ ಪರಿಸರ ನಿರ್ಮಾಣದಲ್ಲಿ ದೇಗುಲಗಳ ಪಾತ್ರ ಮಹತ್ವದ್ದಾಗುತ್ತದೆ.

ಮಾನವನ ಪ್ರತಿಭಾ ಅಭಿವ್ಯಕ್ತಿಯೇ ಕಲೆ. ಈ ಕಲೆಯ ಪರಮೋಚ್ಚ ರಚನೆಗಳೇ ದೇವಾಲಯಗಳು. ಸಮಾಜದ ಲೌಕಿಕ ಮತ್ತು ಆಧ್ಯಾತ್ಮಿಕ ನೆಲೆಗಳು ಈ ದೇವಾಲಯಗಳು. ಇಂಥ ಕಲಾಕೃತಿಗಳ ಪರಂಪರೆಯಲ್ಲಿ ಚನ್ನಪಟ್ಟಣ ತಾಲ್ಲೂಕು ಎಲ್ಲಾ ಕಾಲದಲ್ಲಿಯೂ ಮುಂದುವರಿದಿದೆ. ಚೋಳರಿಂದ ಆರಂಭವಾದ ದೇವಾಲಯಗಳು, ಗಂಗರು, ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡ ನೂರಾರು ದೇವಾಲಯಗಳು ತಾಲ್ಲೂಕಿನಾದ್ಯಂತ ಕಂಡುಬರುತ್ತವೆ.

ಮಳೂರಿನ ಅಪ್ರಮೇಯಸ್ವಾಮಿ ದೇವಾಲಯ ಚನ್ನಪಟ್ಟಣದ ಅತಿ ಪ್ರಮುಖ ದೇವಾಲಯ. ಇದನ್ನು ರಾಜರಾಜ ಚೋಳನ ದಂಡನಾಯಕ ಅಪ್ರಮೇಯ ಕಟ್ಟಿಸಿದ. ಈ ಬಗ್ಗೆ 1006ರ **'ಎಲಿಯೂರು ಶಾಸನ'**[19] ದಲ್ಲಿ ಉಲ್ಲೇಖಿತವಾಗಿದೆ. ಇದು ದ್ರಾವಿಡ ಶೈಲಿಯಲ್ಲಿ ರಚನೆಯಾಗಿದೆ. ದ್ರಾವಿಡ ಶೈಲಿಯಲ್ಲಿ ಇವರ ಕಟ್ಟಡಗಳಿಗೆ ಉಪಯೋಗಿಸಿರುವುದು ಗಟ್ಟಿಯಾದ ಕಣಶಿಲೆ, ದಪ್ಪ ದಿಮ್ಮಿಗಳನ್ನು ಅತಿ ನಾಜೂಕಾಗಿ ಜೋಡಿಸಿ ಕಟ್ಟಿರುವ, ಗೋಡೆಗಳ ಹೊರ ಮೈಯನ್ನು ನಯಗೊಳಿಸಿರುವುದಲ್ಲದೆ ಅವುಗಳ ಮೇಲಿನ ಶಿಲ್ಪವನ್ನು ಸ್ಪಷ್ಟವಾಗಿ, ಖಚಿತವಾಗಿ ಬಿಡಿಸಿ ಅವು ಎದ್ದು ಕಾಣುವಂತೆ ಕಟ್ಟಿಸಿರುವುದು ಇವರ ಶೈಲಿಯ ವೈಶಿಷ್ಟ್ಯ. ಇವರ ದೇವಾಲಯಗಳು ಸಾಮಾನ್ಯವಾಗಿ ಹೆಚ್ಚು ಅಲಂಕರಣವಿಲ್ಲದ ಸರಳವಾದ ಕಟ್ಟಡಗಳಾಗಿವೆ.

ಈ ದೇವಾಲಯಗಳಲ್ಲಿ ಚೌಕನೆಯ ಗರ್ಭಗೃಹ ಅಂತರಾಳ ಮಹಾಮಂಟಪ ಮತ್ತು ಮುಖಭದ್ರ, ಹೊರಗೋಡೆಗಳಲ್ಲಿ ಅಲ್ಲಲ್ಲಿ ಅರೆಗಂಭಗಳ ನಡುವೆ ಆಳವಿಲ್ಲದ ಗೂಡುಗಳು, ಗುಂಡಾಗಿ ಬಾಗಿರುವ ಲೋವೆಗಳು, ಇವುಗಳ ಕೆಳಗೆ ಅಪರೂಪವಾಗಿ ಕಂಡುಬರುವ ಹಂಸಗಳ ಸಾಲುಗಳು ಒಂದು ಅಥವಾ ಮೂರು ಅಂತಸ್ತುಗಳುಳ್ಳ ಗೋಪುರಗಳು ಇವು ಚನ್ನಪಟ್ಟಣದ ಚೋಳರ ಕಾಲದ ದೇವಾಲಯಗಳಲ್ಲಿ ಕಂಡುಬರುವ ಲಕ್ಷಣಗಳಾಗಿವೆ.

ಅಪ್ರಮೇಯಸ್ವಾಮಿ ದೇವಾಲಯದ ಬಹುಭಾಗ ಅನಂತರ ಕಾಲದಲ್ಲಿ ಪುನರ್ ನಿರ್ಮಾಣಗೊಂಡಿದೆ. ದೇವಾಲಯದ ಸುತ್ತ ಬೃಹತ್ ಪ್ರಾಕಾರದ ಭಿತ್ತಿ, ಮುಂಭಾಗದಲ್ಲಿ ದೊಡ್ಡ ಮಹಾದ್ವಾರ ಅದರ ಮೇಲೆ ಎತ್ತರದ ವಿಜಯನಗರ ಶೈಲಿಯ ಗೋಪುರ ಇದೆ. ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಒಳಭಾಗದಲ್ಲಿ ಸುತ್ತಲು ಮೂರಂಕಣ ಆಳದ ಕೈಸಾಲೆ ಇದೆ. ಕೈಸಾಲೆಯ ಹಿಂಭಾಗವನ್ನು ಕೆಲವೆಡೆ ಕೋಣೆಗಳಾಗಿ ವಿಂಗಿಡಿಸಿದ್ದು ಅವುಗಳಲ್ಲಿ ಜೀಯರ್ ನಮ್ಮಾಳ್ವಾರ್, ಮಡಪಳ್ಳಿ ನಾಚ್ಚಾರ್ ತಿರುಮಂಗ್ಯೆ, ಆಳ್ವಾರ್, ದೇಶಿಕ ಕೂರುತ್ತಾಳ್ವರ್, ಪಿಳ್ಳೈಲೋಕಾಚಾರ್ಯ ಭಾಷ್ಯಾಕಾರ ಮತ್ತು ಬಾಲಕೃಷ್ಣ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಅಂಬೆಗಾಲಿಟ್ಟುಕೊಂಡು ಒಂದು ಕೈಯಲ್ಲಿ ಬೆಣ್ಣೆ ಹಿಡಿದಿರುವ ಇಲ್ಲಿನ ಬಾಲಕೃಷ್ಣ ನೋಡಲು ಬಹಳ ಸುಂದರವಾಗಿದೆ.

ಮಹಾದ್ವಾರದಿಂದ ಒಳಹೋಗುತ್ತಿದ್ದಂತೆಯೇ ಪಾತಾಳಂಕಣವಿದೆ. ಎತ್ತರದ ಅಷ್ಟಮುಖ ಕಂಬಗಳಿಂದ ಎತ್ತಿದ ಈ ಭಾಗದಲ್ಲಿ ರಾಮದಾಸ ಮತ್ತು ಅವನ ಪತ್ನಿ ಮಂಚಿಲಕ್ಷ್ಮಿಯು ಕೈಮುಗಿದು ನಿಂತಿರುವ ವಿಗ್ರಹಗಳಿವೆ. ಗರ್ಭಗೃಹದ ಮುಂದಿರುವ ಸುಖನಾಸಿ ಮತ್ತು ನವರಂಗಗಳಲ್ಲಿನ ಕಂಬಗಳು ಮತ್ತು ಶಿಲ್ಪಗಳು ಸ್ಪಷ್ಟವಾಗಿ ವಿಜಯನಗರದ ಶೈಲಿಗೆ ಹತ್ತಿರದವು. ಗರ್ಭಗೃಹದಲ್ಲಿರುವ ಅಪ್ರಮೇಯ ವಿಗ್ರಹ (ಜನಾರ್ಧನ ಮೂರ್ತಿ) 4.5 ಅಡಿ ಎತ್ತರವಿದೆ. ಅಪ್ರಮೇಯ ದೇವಾಲಯ ಈ ಸುತ್ತಿನ ಪ್ರದೇಶದಲ್ಲೇ ದೊಡ್ಡ ಗುಡಿ.

ಇಲ್ಲೇ ಇರುವ ಮತ್ತೊಂದು ಪ್ರಮುಖ ದೇವಾಲಯವೆಂದರೆ, ಮೊದಲನೆ ರಾಜೇಂದ್ರನಿಂದ ನಿರ್ಮಾಣವಾದ ಕೈಲಾಸೇಶ್ವರ ದೇವಾಲಯದಲ್ಲಿ ಗರ್ಭಗೃಹ, ಸುಖನಾಸಿ, ನವರಂಗ ಮುಖಮಂಟಪ ಇವೆ. ಗರ್ಭಗೃಹ ಮತ್ತು ಸುಖನಾಸಿ ಚೋಳ ಶೈಲಿಯಲ್ಲಿ ಇವೆ. ನವರಂಗವೂ ಸೇರಿದಂತೆ ಈ ಭಾಗದಲ್ಲಿ ಹೊರಗೋಡೆಯ ಮೇಲೆ ಅನೇಕ ತಮಿಳು ಶಾಸನಗಳನ್ನು ಕೆತ್ತಲಾಗಿದೆ. ಇವೆಲ್ಲಾ ದಾನಶಾಸನಗಳೇ. ದೇವಾಲಯದ ನವರಂಗಗಳಲ್ಲಿರುವ 8 ಕಂಬಗಳು ಮತ್ತು ಮುಂದಿರುವ ಅಂಕಣದ ಮುಖಮಂಟಪ ಹೊಯ್ಸಳ 2ನೇ ವೀರಬಲ್ಲಾಳನ

ಕಾಲಕ್ಕೆ ಸೇರಿದ್ದು. ನವರಂಗದ ಉತ್ತರ ದ್ವಾರದಲ್ಲಿ ಪಾರ್ವತಿ ಗುಡಿ ಇದೆ. ಇದರಲ್ಲಿ ಗರ್ಭಗೃಹ ಮತ್ತು ನವರಂಗಗಳಿವೆ. ಇಲ್ಲಿ ಶಿಖರಗಳು 17ನೇ ಶತಮಾನದಲ್ಲಿ ರಚನೆಯಾದವು. ಇದನ್ನು ಸುತ್ತುವರಿದಂತೆ ಪ್ರಾಕಾರ ಮತ್ತು ಮಹಾದ್ವಾರ ಇದ್ದು, 2ನೇ ಬಲ್ಲಾಳನ ಕಾಲದಿದ್ದಿರಬಹುದು.

'ಪೆರಿಯ ಮಳೂರು' ಎಂದು ಪ್ರಸಿದ್ಧಿಗೆ ಬಂದು, ಮಳೂರ ಸುತ್ತಮುತ್ತಲು ಇನ್ನೂ ಅನೇಕ ದೇವಾಲಯಗಳನ್ನು ಕಾಣಬಹುದು. ಇವೆಲ್ಲಾ ಶಿಥಿಲಾವಸ್ಥೆಯಲ್ಲಿವೆ. ಇವು ಅಂತಹ ಗಮನಾರ್ಹ ರಚನೆಗಳಾಗಿಲ್ಲ. ಇದು ಭಾರತದ ಬಹುಭಾಗದಲ್ಲಿ ಹಿಂದೂ ಕಾನೂನಿಗೆ ಮೂಲಾಧಾರವೆಂದು ಪರಿಗಣಿಸಲ್ಪಟ್ಟಿರುವ 'ಮಿತಾಕ್ಷರ' ಎಂಬ ಕೃತಿ ಇಲ್ಲಿಯೇ ಯಜ್ಞವಲ್ಕ್ಯನಿಂದ ರಚಿಸಲ್ಪಟ್ಟಿತು. ಇಲ್ಲಿ ಜರುಗುವ ಜಾತ್ರೆಗೆ ಬಹುದೂರದ ಊರುಗಳಿಂದ ಭಕ್ತಾದಿಗಳು ಆಗಮಿಸುತ್ತಾರೆ. ಮಹಾಪುರುಷರಾದ ಪುರಂದರದಾಸರು ಇಲ್ಲಿಗೆ ಆಗಮಿಸಿ ಭಕ್ತಿಪರವಶರಾಗಿ 'ಆಡಿಸಿದಳಶೋಧಾ ಜಗದೋದ್ಧಾರನ' ಎಂಬ ಕೀರ್ತನೆಯನ್ನು ಹಾಡಿರುವರು.

ಕ್ರಿ.ಶ. 1014 ರಲ್ಲಿ ರಾಜೇಂದ್ರ ಚೋಳನ ಕಾಲದಲ್ಲಿ ನಿರ್ಮಿಸಿದ ದುರ್ಗಿದೇವಸ್ಥಾನ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ 1007ರಲ್ಲಿ ಯುದ್ಧದಲ್ಲಿ ಜಯಸಿ ಬಂದವರ ನೆನಪಿಗಾಗಿ ಚೋಳರಾಜನು ನಿರ್ಮಿಸಿದ್ದು. ಅತಿ ಪ್ರಾಚೀನ ಎನ್ನಬಹುದಾದ ಕ್ರಿ.ಶ.900 ರಲ್ಲಿ ನಿರ್ಮಾಣವಾಗಿರುವ ಅರ್ಕೇಶ್ವರ ಸ್ವಾಮಿ ದೇವಸ್ಥಾನ, ಚಿಕ್ಕಮಳೂರಿನ ಶ್ರೀ ಗೋಪಾಲಕೃಷ್ಣ ಸ್ವಾಮಿ ದೇವಸ್ಥಾನ ಇಲ್ಲಿನ ಮುಖ್ಯ ದೇವಾಲಯಗಳು.

ಚನ್ನಪಟ್ಟಣದ ಮತ್ತೊಂದು ಪ್ರಮುಖ ದೇವಾಲಯವೆಂದರೆ ಚನ್ನಪಟ್ಟಣದ ಕೋಟೆ ಭಾಗದಲ್ಲಿರುವ ವರದರಾಜಸ್ವಾಮಿ ದೇವಾಲಯ. ಇಲ್ಲಿಯೇ ಸೋಮೇಶ್ವರನಗುಡಿ, ಆಂಜನೇಯಸ್ವಾಮಿ ದೇವಸ್ಥಾನ, ಮಾರೀಗುಡಿ, ಈಶ್ವರ ದೇವಸ್ಥಾನ, ಓಟಧಾರಿನಗರೇಶ್ವರ ದೇವಸ್ಥಾನಗಳು ಇವೆ. ವರದರಾಜ ದೇವಸ್ಥಾನವು ಮಳೂರಿನ ದೇವಾಲಯಗಳಂತೆ ಪ್ರಾಚೀನವಾಗಿದೆ. 1180ರ ಕಾಲಕ್ಕೆ ಸೇರಿದ ಶಾಸನ ಈ ದೇವಾಲಯದಲ್ಲಿದೆ. ಇಲ್ಲಿನ ಗರ್ಭಗೃಹವು ಅಧಿಷ್ಠಾನು ಸ್ತಂಭವರ್ಗ, ಪ್ರಸ್ತಾರ, ಕಂಠ ಶಿಖರ, ಸ್ತೂಪಿ ಎಂಬ ವರ್ಗಗಳಿಂದ ಕೂಡಿರುವುದು. ಗರ್ಭಗೃಹದ ಮೇಲಿರುವ ಕರ್ಣಕೂಟ, ಪಂಜರಹಾರ ಎಂಬ ಅಲಂಕಾರಗಳಿಂದ ಅಲಂಕೃತವಾಗಿರುವುದು, ವಿಮಾನದ ಮೇಲೆ ಸ್ತೂಪಿ ಕೆಲಸವಿರುವುದನ್ನು ವಿಮಾನವು ವೃತ್ತಾಕಾರವಾಗಿರುವುದರಿಂದ, ಇದು ದಾಸರ ಶೈಲಿಗೆ ಸೇರಿರಬಹುದು. ಸುಖನಾಶಿ ಅರ್ಧಮಂಟಪ ನವರಂಗದ ಎದುರು ದ್ವಾರದ ಮೇಲೆ ಗಜಲಕ್ಷ್ಮಿ ದ್ವಾರದ ಉಭಯ ಪಾರ್ಶ್ವಗಳಲ್ಲೂ ಜಯ ವಿಜಯ ದ್ವಾರಪಾಲಕರಿದ್ದಾರೆ. ಎತ್ತರವಾದ ಜಗತಿ, ಪ್ರಾಕಾರ, ದ್ವಜಸ್ತಂಭ,

ಗೋಮುಖ, ಜಲಧಾರೆ ಗೋಪುರದ್ವಾರಗಳಿಂದ ರಚಿಸಲ್ಪಟ್ಟಿದೆ. ಈ ದೇವಾಲಯ ವಿಜಯನಗರ ಕಾಲಕ್ಕೆ ಸೇರಿರಬಹುದು.

ಚನ್ನಪಟ್ಟಣದಿಂದ 8 ಮೈಲಿ ದೂರದಲ್ಲಿರುವ ಕಣ್ವನದಿಯ ಎಡ ಪಾರ್ಶ್ವದಲ್ಲಿರುವ ಚೋಳರ ಕಾಲದಲ್ಲಿ 'ರಾಜರಾಜ ಚತುರ್ವೇದ ಮಂಗಲ' ಎಂದು ಕರೆಯಲ್ಪಟ್ಟ ಕುರ್ಲೂರು ಗ್ರಾಮವು ಶ್ರೀ ವೈಷ್ಣವ ಬ್ರಾಹ್ಮಣರಿದ್ದ ಸ್ಥಳ. ಇಲ್ಲಿನ ಪ್ರಮುಖ ದೇವಾಲಯವೆಂದರೆ ಶ್ರೀರಾಮ ದೇವಸ್ಥಾನ. ಶ್ರೀ ಮಂಗಲೇಶ್ವರ ದೇವಾಲಯ, 1180ರ ಕಾಲದ ಶಾಸನವು ಇಲ್ಲಿ ಉಕ್ತವಾಗಿರುವುದರಿಂದ ಶ್ರೀರಾಮ ದೇವಸ್ಥಾನ ಪ್ರಾಚೀನವಾದುದು ಎನ್ನಬಹುದು. ಇಲ್ಲಿನ ಗರ್ಭಗೃಹ ಚತುರಾಶ್ರವಾಗಿದೆ, ಅದಿಷ್ಠಾನವು ತ್ರಿಪಟ್ಟಿಕುಮುದ ಅಲಂಕಾರದಿಂದ ಕೂಡಿದೆ. ಗರ್ಭಗೃಹದ ಶಿಖರವು ಚತುರಾಶ್ರವಾಗಿರುವುದರಿಂದ ಇದು ನಾಗರಶೈಲಿಗೆ ಸೇರಿದುದಾಗಿದೆ, ಸುಖನಾಶಿ ನವರಂಗ ಬಲಿಪೀಠಗಳನ್ನು ಒಳಗೊಂಡಿದೆ.

ಕ್ರಿ.ಶ.1100ರಲ್ಲಿ ರಚಿತವಾಗಿರಬಹುದಾದ ಮಂಗೇಶ್ವರ ದೇವಸ್ಥಾನವು ಮಂಡಲಾಕಾರದ ಗರ್ಭಗೃಹ, ವಿಶಾಲವಾದ ದ್ವಾರ, ಹೊಂದಿಕೊಂಡಂತೆ ಸುಖನಾಸಿ ಹಾಗೂ ದೊಡ್ಡದಾದ ಲಿಂಗ ಪ್ರತಿಷ್ಠಾನವಾಗಿದೆ. ಈ ದೇವಸ್ಥಾನಕ್ಕೆ ಸಾಮಂತನಾದ ಮಿಂಡಾರಸಿ ದಂಡನಾಯಕ, ವೀರಬಲ್ಲಾಳನ ಸೇನಾಪತಿಯ ಮಗ ದಾನ ಬಿಟ್ಟ ವಿಚಾರ ಇಲ್ಲಿನ ಶಾಸನಗಳಲ್ಲಿ ಉಲ್ಲೇಖಿತವಾಗಿದೆ.

ಹೊಂಗನೂರು ದೇವಾಲಯಗಳ ವಿಚಾರದಲ್ಲಿ ಮಳೂರಿನಂತೆಯೇ ಪ್ರಸಿದ್ಧಿ ಪಡೆದಿದೆ. ಇಲ್ಲಿ ವೇಣುಗೋಪಾಲಸ್ವಾಮಿ ದೇವಸ್ಥಾನ, ಆಂಜನೇಯಸ್ವಾಮಿ ದೇವಸ್ಥಾನ ಮತ್ತು ಈಶ್ವರ ದೇವಸ್ಥಾನಗಳು ಮುಖ್ಯವಾದವು. ಚೋಳರ ಕಾಲದಲ್ಲಿ ಹೊಂಗನೂರು ಅಗ್ರಹಾರವಾಗಿ 1007ರಲ್ಲಿ ಅಸ್ತಿತ್ವಕ್ಕೆ ಬಂದು ತ್ರೈಲೋಕ ಮಹಾದೇವಿ ಚತುರ್ವೇದ ಮಂಗಲಂ ಎಂದು ಕರೆಯಲ್ಪಟ್ಟಿತು. ವಿಜಯನಗರ ಸದಾಶಿವರಾಯ ಈ ಗ್ರಾಮವನ್ನು ಅರಸುಗಳ ಮಕ್ಕಳಾದ ಕೊಂಡರಾಜ, ಜಯದೇವ, ಅರಸರ ವಶಕ್ಕೆ ಕೊಟ್ಟಿದ್ದನು. ಅನಂತರ ಇವರು ಮೇಲುಕೋಟೆ ಚೆಲ್ವಪಿಳ್ಳೆ ದೇವರಿಗೆ ದಾನವಾಗಿ ಕೊಟ್ಟರು. ಇಲ್ಲಿನ ವೇಣುಗೋಪಾಲಸ್ವಾಮಿ ದೇವಸ್ಥಾನವು ಗರ್ಭಗುಡಿ ಗರುಡಧ್ವಜ, ಸುಖನಾಸಿಗಳನ್ನು ಒಳಗೊಂಡಿದ್ದು, ನವರಂಗದಲ್ಲಿ ಆಳ್ವಾರರನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲೆ ವಿಮಾನ ಶಿಖರವು ದ್ವಿತಲರೂಪವಾಗಿರುವುದು, ಶಿಖರವು ಚತುರಾಶಾಕಾರವಾಗಿದೆ.

ಇಲ್ಲಿನ ಮತ್ತೊಂದು ಪ್ರಾಚೀನ ದೇವಾಲಯವೆಂದರೆ ಕುಂದವೈವಿಣ್ಣಗರ್, ಆಳ್ವರ್ ದೇವಸ್ಥಾನ. ಇದು 1013ರಲ್ಲಿ ನಿರ್ಮಾಣಗೊಂಡಿದೆ. ಇದೇ ಗ್ರಾಮದ ಪೂರ್ವಭಾಗದಲ್ಲಿ ಆಂಜನೇಯಸ್ವಾಮಿ ದೇವಸ್ಥಾನವಿದೆ. ಈಶ್ವರ ದೇವಸ್ಥಾನವು ದ್ರಾವಿಡ ಶೈಲಿಯಲ್ಲಿದ್ದು, ಗರ್ಭಗುಡಿ ನವರಂಗ ಮುಖಮಂಟಪಗಳನ್ನು ಒಳಗೊಂಡಿದೆ. ಹೊರಗೆ ನಂದಿ ವಿಗ್ರಹ ಎಡಪಾರ್ಶ್ವದಲ್ಲಿ ಶಾಸನ ಮತ್ತು ವೀರಗಲ್ಲುಗಳಿವೆ.

ಬ್ರಹ್ಮಣ್ಯತೀರ್ಥರಿಂದ ದ್ವೈತ ಮಠ ಸ್ಥಾಪಿಸಲ್ಪಟ್ಟು ಇಲ್ಲಿಯವರೆವಿಗೂ ಅದೇ ಖ್ಯಾತಿಯನ್ನು ಪಡೆದಿರುವ ಅಬ್ಬೂರು ಗ್ರಾಮದಲ್ಲಿರುವ ಅಬ್ಬೂರು ಮಠ ಪ್ರಖ್ಯಾತವಾದುದು. ಪುರುಷೋತ್ತಮ ತೀರ್ಥರಿಂದ ಪ್ರಖ್ಯಾತಿಗೆ ಬಂದು ವಿಜಯನಗರದ ಅರಸರ ಅನುಗ್ರಹಕ್ಕೆ ಪಾತ್ರವಾಯಿತು. ಪುರುಷೋತ್ತಮ ತೀರ್ಥ (ಬ್ರಾಹ್ಮಣ್ಯತೀರ್ಥರೆಂದು ಪ್ರಸಿದ್ಧರಾದವರು) ಹೊಸಹಳ್ಳಿ, ಕೊಪ್ಪ ಎರಡು ಗ್ರಾಮಗಳನ್ನು ಸೇರಿಸಿ ಬ್ರಹ್ಮಣಿಪುರವನ್ನು ಸ್ಥಾಪಿಸಿದರು. ಅನಂತರ ಇವರ ಉತ್ತರಾಧಿಕಾರಿಯಾಗಿ ವ್ಯಾಸತೀರ್ಥರು ಬಂದರು. ಇವರು ಮುಳಬಾಗಿಲಿನ ಶ್ರೀಪಾದರಾಜರಲ್ಲಿ ವಿದ್ಯಾಭ್ಯಾಸ ಮಾಡಿ, ಕೃಷ್ಣದೇವರಾಯನ ಮಗನಿಗೆ ತಗುಲಿದ್ದ ಕುಜದೋಷವನ್ನು ನಿವಾರಿಸಿ ಅವನ ಗುರುವಾಗಿ ನೇಮಿಸಲ್ಪಟ್ಟರು. ಅಬ್ಬೂರು ಈ ಅವಧಿಯಲ್ಲಿ ಮಾಧ್ವ ಕೇಂದ್ರವಾಗಿ ಪ್ರಸಿದ್ಧಿಗೆ ಬಂತು.

ಮಳೂರು ಪಟ್ಟಣ 'ನಿನಗಿರಲಿಚೋಳಮಂಡಲಂ' ಎಂದು ಖ್ಯಾತಿಗೆ ಬಂದು ರಾಜರಾಜ ಚೋಳನಿಂದ ಅಗ್ರಹಾರವಾಗಿ ಅಸ್ತಿತ್ವಕ್ಕೆ ಬಂತು. ಇಲ್ಲಿ ಗಂಗರ ಕಾಲದ ಚೌಡೇಶ್ವರಿ ದೇವಾಲಯವೇ ಮೊದಲನೆಯದು. ಈ ದೇವಾಲಯದ ಎದುರಿಗೆ ಉಯ್ಯಾಲೆ ಕಂಬವೊಂದಿದೆ. ಗರ್ಭಗೃಹ ನವರಂಗಗಳನ್ನು ಒಳಗೊಂಡಿದೆ. ಹೊಯ್ಸಳರ ಕಾಲದಲ್ಲಿ ಕೈಸಾಲೆಯನ್ನು ನಿರ್ಮಿಸಲಾಗಿದೆ. ಇದೇ ದೇವಾಲಯದ ಹಿಂಬದಿಯಲ್ಲಿ 1007ರಲ್ಲಿ ರಾಜರಾಜನು ಕಟ್ಟಿಸಿದ ನಾರಾಯಣಸ್ವಾಮಿ ದೇವಾಲಯವಿದೆ. ಊರಿನ ಹಿಂದೆ ಅರ್ಕೇಶ್ವರ ದೇವಾಲಯವಿದ್ದು ಇದನ್ನು ಅರ್ಕೇಶ್ವರ ದೇವಾಲಯವೆಂದು ಕರೆಯಲಾಗಿದೆ. 1013ರ ಶಾಸನದಲ್ಲಿ ಇದನ್ನು ಅರುಮೋಳೇಶ್ವರ ಉಡೈಯ್ ಮಹಾದೇವ ಎಂದು ಕರೆದಿದೆ. ಇದು ರಾಜ ರಾಜನ ಬಿರುದಾಗಿತ್ತೆಂದು ನಂಬಲಾಗಿದೆ.

ಬೇವೂರಿನ ಅರ್ಕೇಶ್ವರ ದೇವಾಲಯ ಗಂಗರ ಕಾಲದ ದೇವಾಲಯ. ಇದು ಪಾದಬಂಧ ಅದಿಷ್ಠಾನವನ್ನು ಹೊಂದಿದ್ದು, ಇದರ ಸುತ್ತಲಗೋಡೆ ನಾಶವಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಇಮ್ಮಡಿ ಭೂತುಗನ ಸೇನಾಧಿಪತಿಯಾಗಿದ್ದವರು ಈ ಊರಿನ ಕೆರೆಯ ತೂಬನ್ನು ಜೀರ್ಣೋದ್ಧಾರ ಮಾಡಿಸಿ ಇಲ್ಲಿಯೇ ದೇವಾಲಯವೊಂದನ್ನು

ಕಟ್ಟಿಸಿದನು. ಇದು ಈಶ್ವರ ದೇವಾಲಯವಾಗಿದ್ದು ಈಗ ಅದು ನಾಶವಾಗಿದೆ. ಈ ಊರು ಜೈನರ ಪ್ರಮುಖ ಕೇಂದ್ರವಾಗಿಯೂ ಇದ್ದಿತ್ತಲ್ಲದೆ ಇಲ್ಲಿನ ಬೆಟ್ಟದ ಮೇಲೆ ಜೈನರ ಶಾಸನ ದೊರಕಿದೆ. ಇಲ್ಲಿ ಶಾಂತಮಲ್ಲಿಕಾರ್ಜುನ ಮಠ ಮತ್ತು ತಿಮ್ಮಪ್ಪ ದೇವಸ್ಥಾನವು ಇದೆ. ಹೊಯ್ಸಳರ ಕಾಲದ ಸಿದ್ಧರಾಮೇಶ್ವರ ದೇವಾಲಯ ಇದೇ ಬೆಟ್ಟದ ಇಳಿಜಾರಿನಲ್ಲಿದೆ. ಕ್ರಿ.ಶ.8ನೇ ಶತಮಾನದಲ್ಲಿ ಇದು ಜೈನರ ಪ್ರಸಿದ್ಧ ಸ್ಥಳವಾಗಿತ್ತಲ್ಲದೆ, ಇದನ್ನು ಕಿರುಕುಂದಂ, ನಿಂಬಗ್ರಾಮ, ಕುಂದಶಿಲಾ, ತಲಾಸಿದ್ಧಿ ಎಂಬ ಹೆಸರಿನಲ್ಲಿ ಕರೆಯಲಾಗಿದೆ.

ಇಗ್ಗಲೂರು, ಮಂಕುಂದ, ದೇವರಹಳ್ಳಿ, ನಾಗವಾರ, ದಶವಾರ, ಮಾಕಳಿ, ಸಿಂಗರಾಜಪುರ, ಮೊಗೇನಹಳ್ಳಿ, ಕೋಡಂಬಳ್ಳಿ, ಹುಣಸನಹಳ್ಳಿ, ಗರಕಳ್ಳಿ ಇಲ್ಲೆಲ್ಲಾ ಗಂಗರ ಮತ್ತು ವಿಜಯನಗರ ಕಾಲಕ್ಕೆ ಸೇರಿದ್ದ ದೇವಾಲಯಗಳಿದ್ದು, ಇವು ಹೆಚ್ಚು ಅಲಂಕರಣಗಳನ್ನಾಗಲಿ, ಪ್ರಕಾರವನ್ನಾಗಲಿ ಪಡೆದಿರುವುದಿಲ್ಲ. ಗರ್ಭಗುಡಿ, ಸುಖನಾಶಿ, ನವರಂಗಗಳಿಗೆ ಸೀಮಿತವಾದ ರಚನೆಗಳಾಗಿದ್ದು ಗೋಪುರಗಳು ಕುಬ್ಜವಾಗಿವೆ.

ಇತ್ತೀಚಿನ ದೇವಾಲಯಗಳಲ್ಲಿ ಇಡೀ ರಾಮನಗರ ಜಿಲ್ಲೆಯಲ್ಲಿಯೇ ಹೆಚ್ಚಿನ ಭಕ್ತಸಮೂಹವನ್ನು ಹಾಗೂ ಆದಾಯವನ್ನು ಹೊಂದಿರುವ ಕೆಂಗಲ್ ಹನುಮಂತರಾಯ ದೇವಸ್ಥಾನವು, ಗರ್ಭಗೃಹ ಸುಖನಾಶಿ, ವಿಶಾಲ ಅಂಗಳವನ್ನು ಹೊಂದಿರುವುದಲ್ಲದೆ, ಬೌದ್ಧ ಮಾದರಿಯ ಗೋಪುರ ವ್ಯವಸ್ಥೆಯನ್ನು ಹೊಂದಿದೆ.

ಬೆಂಗಳೂರಿನ ಉತ್ತರಕ್ಕೆ ಬೆಂಗಳೂರು–ಮೈಸೂರು ರಸ್ತೆ ಬದಿಯಲ್ಲಿ ಅನೇಕ ಗೋರಿಗಳಿವೆ. ಇವು ಟಿಪ್ಪು ಕಾಲದ ಗೋರಿಗಳಾಗಿವೆ. ಅವುಗಳಲ್ಲಿ ಹೈದರಾಲಿಯ ಧರ್ಮಗುರುವಾಗಿದ್ದ ಅಬ್ದುಲ್ ಷಾ ಖಾದ್ರಿಯ ಗೋರಿ, ಇವನ ಮತ್ತು ಸಮೀಪ ಬಂಧುಗಳ ಗೋರಿಗಳು ಸುಮಾರು 20 ಅಡಿ ಚೌಕದ ದೊಡ್ಡ ಕೋಣೆಯಲ್ಲಿದೆ. ಎತ್ತರದ ಜಗತಿಯ ಮೇಲೆ ಮಧ್ಯದಲ್ಲಿ ಈ ಕೋಣೆ ಇದ್ದು ಅದರ ಸುತ್ತಲು ತೆರೆದ ವರಾಂಡ ಇದೆ. ಈ ವರಾಂಡದ ಪಶ್ಚಿಮದೆಡೆ ಇರುವ ಕಂಬಗಳು, ದೇವಾಲಯದ ಕಂಬಗಳಂತೆ ಕಾಣುತ್ತವೆ. ಕೋಣೆಯ ಸುತ್ತ ಇರುವ ಗೋಡೆಗಳು ದಪ್ಪವಾಗಿದ್ದು, ಮೂಲೆಗಳಲ್ಲಿ ಚಿಕ್ಕ ಕೋಣೆಗಳನ್ನು ಮಾಡಲಾಗಿದೆ. ಕೋಣೆಯ ಛಾವಣಿಯ ಮೇಲೆ ಮೊಗಲ್ ಶೈಲಿಯ ಗುಮ್ಮಟವಿದೆ. ಅದರ ತುದಿಯಲ್ಲಿ ಕಳಸವಿದೆ. ಈ ಕಟ್ಟಡದ ಸುತ್ತಲು ಇತರ ಅನೇಕ ಸಣ್ಣ ಗೋರಿಗಳಿವೆ. ಅಲ್ಲದೆ ಪಶ್ಚಿಮಕ್ಕೆ ಒಂದು ಚಿಕ್ಕ ಮಸೀದಿ ಇದೆ.

ಟಿಪ್ಪು ಸುಲ್ತಾನನ ಕಾಲದಲ್ಲಿ ಬೆಂಗಳೂರಿನ ಫೌಜುದಾರನಾಗಿದ್ದ ಸೈಯದ್ ಇಬ್ರಾಹಿಂನ ಮತ್ತೊಂದು ಗೋರಿ ಇದೆ. ಇವನು ಬ್ರಿಟಿಷರ ಬಗ್ಗೆ ಅನುಕಂಪವುಳ್ಳವನಾಗಿದ್ದು ಇವನನ್ನು ಟಿಪ್ಪು ಬಂಧಿಸಿದ್ದ. ಇಲ್ಲಿಯ ಎತ್ತರದ ಓಗತಿಯ ಮೇಲೆ ಮಧ್ಯದಲ್ಲಿ ಒಂದು ಚಿಕ್ಕ ಗೋರಿ, ಕೋಣೆ ಮತ್ತು ಅದರ ಸುತ್ತಲು ಹೊರ ಅಂಚಿನ ಕಂಬಗಳ ಮೇಲೆ ಎತ್ತರದ ತೆರೆದ ವರಾಂಡ ಇದೆ. ಕೋಣೆಯ ಮೇಲೆ ಕಳಸದ ತುದಿಯುಳ್ಳ ಗುಮ್ಮಟವಿದೆ. ಈ ದರ್ಗಾಗಳ ಹತ್ತಿರದಲ್ಲೇ ರಸ್ತೆಯಂಚಿನಲ್ಲಿ ಉಮ್ಮರಖಾನ್ ಶವಪೆಟ್ಟಿಗೆ ಇರುವ ಒಂದು ತೊಟ್ಟಿಲನ್ನು ತೂಗು ಹಾಕಲಾಗಿದೆ ಎಂಬ ನಂಬಿಕೆ ಇದೆ.

ಚನ್ನಪಟ್ಟಣದಲ್ಲಿ ಕ್ರೈಸ್ತರ ಚರ್ಚ್‌ಗಳು ಇತ್ತೀಚೆಗೆ ರಚಿಸಿದಂತವು. ಜೋಸೆಫ್ ಚರ್ಚ್ ಹಾಗೂ ಪ್ರಾಟಿಸ್ಟಂಟ್ ಚರ್ಚ್‌ಗಳು ಇವೆ.

ದೇವಾಲಯಗಳು, ಚರ್ಚ್‌ಗಳು ಮತ್ತು ಮಸೀದಿಗಳು ನಮ್ಮ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಗತಿಗಳನ್ನು ತಿಳಿಸುವ ಐತಿಹಾಸಿಕ ದಾಖಲೆಗಳಾಗಿದ್ದು, ಅವುಗಳನ್ನು ಸಂರಕ್ಷಿಸಬೇಕಾದದ್ದು ಎಲ್ಲರ ಕರ್ತವ್ಯ. ಪ್ರಾಚೀನರ ಆದರ್ಶವಾದ ನುಡಿಗಳನ್ನು ಈ ಸಂದರ್ಭದಲ್ಲಿ ನೆನೆಸಿಕೊಂಡರೆ ಸೂಕ್ತ.

"ಕರೆಯಂ ಕಟ್ಟಿಸು, ಬಾವಿಯಂ ಸವಸು ದೇವಗಾರಮಂ ಮಾಡಿಸ
ಜ್ಮರಿಯೊಳ್ಸಲ್ಕಿದನಾಥರಂ ಬಡಿಸು ಮಿತ್ರರ್ಗಿಂಬುಕೆಯ್ ನಂಬಿದ
ರ್ಗ್ಗಿರೆವೆಟ್ಟಾಗಿರು ಶಿಷ್ಟಂ ಪೊರೆಯನ್ನುತ್ತಿಂತೆಲ್ಲವಂ ಎಂದೆತಾ
ಯೆರೆವಳ್ವಾಲರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನು"[20]

ದೇವಾಲಯಗಳೆಂದರೆ ಪ್ರಾಚೀನ ಕಾಲದಲ್ಲಿ ಕೇವಲ ಪೂಜಾ ಸ್ಥಳಗಳಾಗಿರಲಿಲ್ಲ. ಅವು ಇಂದಿನ ಬ್ಯಾಂಕಿಂಗ್, ನ್ಯಾಯಾಲಯ ಅಕಾಡೆಮಿಕ್ ಕೆಲಸಗಳನ್ನು ನಿರ್ವಹಿಸುತ್ತಿದ್ದವು. ಸಂಗೀತ, ಸಾಹಿತ್ಯ, ತತ್ವಶಾಸ್ತ್ರಗಳ ಬೆಳವಣಿಗೆಗೆ ಪೂರಕವಾಗಿದ್ದಲ್ಲದೆ ಗ್ರಾಮಗಳಲ್ಲಿ ಸಾಮೂಹಿಕ ಸಾಮರಸ್ಯವನ್ನು ಶಾಂತಿ ಆಡಳಿತ ಹೊಣೆಯನ್ನು ನಿರ್ವಹಿಸುವ ಹಾಗೂ ನ್ಯಾಯಾದಾನ ನೀಡುವ ವ್ಯವಸ್ಥೆಯನ್ನು ಹೊಂದಿದ್ದವು.

** ** ** ** **

ಕೊನೆ ಟಿಪ್ಪಣಿಗಳು :

1. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2005, ಪುಟ–871
2. ಸಂ.ಎಂ.ಭೈರೇಗೌಡ, ತಾ.ಸಿ.ತಿಮ್ಮಯ್ಯ : ಅರ್ಕಾವತಿ ಸ್ಮರಣ ಸಂಚಿಕೆ, ಅಖಿಲ ಭಾರತ 67ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕನಕಪುರ, ಪುಟ–276.
3. ಅದೇ : ಪುಟ–277.
4. ಅದೇ : ಪುಟ–277.
5. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ, ಪುಟ–324/73.
6. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಬಿ.ಎಲ್.ರೈಸ್, ಸಂ. 9 ಚನ್ನಪಟ್ಟಣ, ಪುಟ–330, ನಂ.108.
7. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ, ಪುಟ–312, ನಂ. 42.
8. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ, ಪುಟ–313, ನಂ. 47, ಪುಟ–324, ನಂ. 73ರ ಶಾಸನ.
9. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ, ಪುಟ–345, ನಂ. 167.
10. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಬಿ.ಎಲ್.ರೈಸ್, ಸಂ. 9 ಚನ್ನಪಟ್ಟಣ, ಪುಟ–343, ನಂ. 159.
11. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ, ಪುಟ–346, ನಂ. 169.
12. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ, ಕೋಡಂಬಳ್ಳಿ ಶಾಸನ ಪುಟ–316, ನಂ. 52.
13. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣದ ಚಕ್ಕರೆ ಶಾಸನ, ಪುಟ–341, ನಂ. 155.
14. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಪುಟ–324, ನಂ. 73.
15. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ ಪುಟ–115, 116, 117, 1980.
16. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ. 9 ಚನ್ನಪಟ್ಟಣ, ಸೋಗಾಲಶಾಸನ, ಪುಟ–313, 316, ನಂ.56.

17. ಸಂ.ಎಂ.ಭೈರೇಗೌಡ, ತಾ.ಸಿ.ತಿಮ್ಮಯ್ಯ : ಅರ್ಕಾವತಿ ಸ್ಮರಣ ಸಂಚಿಕೆ, ಅಖಿಲ ಭಾರತ 67ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಪುಟ–245.

18. ಅದೇ : ಪುಟ–246.

19. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9 ಚನ್ನಪಟ್ಟಣ,ಯಲಿಯೂರು ಶಾಸನ, ಪುಟ–321, ನಂ. 65.

20. ಸಂ.ಎಂ.ಭೈರೇಗೌಡ, ತಾ.ಸಿ.ತಿಮ್ಮಯ್ಯ : ಅರ್ಕಾವತಿ ಸ್ಮರಣ ಸಂಚಿಕೆ, ಅಖಿಲ ಭಾರತ 67ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕನಕಪುರ ಪುಟ–286.

** ** ** ** **

ಅಧ್ಯಾಯ – 3
ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು

3.1 ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಸ್ವರೂಪ :

ಸಿಲಿಕಾನ್ ಸಿಟಿಯಿಂದ 60 ಕಿ.ಮೀ ದೂರದಲ್ಲಿರುವ **'ಆಟಿಕೆಗಳ ತವರು ಬೊಂಬೆನಾಡು'** ಎಂದು ವಿಶ್ವದಲ್ಲೇ ಖ್ಯಾತಿ ಪಡೆದ ಚನ್ನಪಟ್ಟಣ ತಾಲ್ಲೂಕು ಕೇಂದ್ರ, ವೈವಿಧ್ಯಮಯವಾದ ವೈಶಿಷ್ಟ್ಯಗಳಿಂದ ಕೂಡಿದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ದುಡಿದ–ದುಡಿಯುತ್ತಿರುವ ಸಾಹಿತಿಗಳು, ನಾಟಕಕಾರರು, ಕಾದಂಬರಿಕಾರರು, ಕವಿಗಳು, ರಾಜಕಾರಣಿಗಳು, ಐತಿಹಾಸಿಕ ಸ್ಮಾರಕಗಳು, ಐತಿಹಾಸಿಕ ಹಿನ್ನೆಲೆಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ. ಚನ್ನಪಟ್ಟಣ ತಾಲ್ಲೂಕು 535 ಚದರ ಕಿ.ಮೀ ವಿಸ್ತಾರವಿದ್ದು, ಕುಣಿಗಲ್, ರಾಮನಗರ, ಕನಕಪುರ, ಮಳವಳ್ಳಿ, ಮದ್ದೂರು, ಮಾಗಡಿ ತಾಲ್ಲೂಕುಗಳನ್ನು ಗಡಿಗಳನ್ನಾಗಿ ಹೊಂದಿದೆ. ಈ ತಾಲ್ಲೂಕಿನಲ್ಲಿ 125 ಗ್ರಾಮಳಿದ್ದು, 32 ಗ್ರಾಮ ಪಂಚಾಯ್ತಿ ಕೇಂದ್ರಗಳಿವೆ. ರಾಗಿ, ಭತ್ತ, ತೆಂಗು, ಮಾವು, ಅಡಿಕೆ, ಹಿಪ್ಪುನೇರಳೆ ಬೆಳೆಗಳನ್ನು ಬೆಳೆಯುತ್ತಾರೆ. ತಾಲ್ಲೂಕಿನ ಇತಿಹಾಸದ ಎಳೆಯನ್ನು ಬಿಡಿಸುತ್ತಾ ಹೋದರೆ ಸ್ಮಾರಕಗಳು, ಮಾಸ್ತಿಕಲ್ಲು, ವೀರಕಲ್ಲು, ಶಾಸನಗಳು, ಕೋಟೆಗಳು, ಬೆಟ್ಟಗಳು, ಕೆರೆಗಳು, ದೇವಾಲಯಗಳು ಜನಪದ ಸಾಹಿತ್ಯಗಳಿಂದ ಸಾಕ್ಷಿ ಸಿಗುತ್ತವೆ. ಈ ತಾಲ್ಲೂಕು ಗಂಗರು, ಚೋಳರು, ಹೊಯ್ಸಳರು, ಚಾಲುಕ್ಯರು, ವಿಜಯನಗರ, ಮೈಸೂರು ಒಡೆಯರ ಆಳ್ವಿಕೆಯಲ್ಲದೆ ಆಂಗ್ಲರ ಆಳ್ವಿಕೆಯನ್ನು ಕಂಡುಂಡಿದೆ.

ಚನ್ನಪಟ್ಟಣದ ಮಂಕುಂದ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗಂಗವಂಶದ ದೊರೆಗಳಾದ ಭೂವಿಕ್ರಮ ಮತ್ತು ಶಿವಮಾರ ಎಂಬುವವರು ಆಳ್ವಿಕೆ ನಡೆಸಿದ್ದಾರೆ. ಸುಮಾರು 8ನೇ ಶತಮಾನದವರೆಗೂ ಗಂಗರ ಆಳ್ವಿಕೆ ಕಂಡುಬರುತ್ತದೆ. ಹೊಂಗನೂರು ಗಂಗರ ಕಾಲದಲ್ಲಿ ಚಿಕ್ಕಗಂಗವಾಡಿಯ ಮುಖ್ಯಪಟ್ಟಣವಾಗಿತ್ತು. ಅಬ್ಬೂರು ಮಾಧ್ವಮತ ಕೇಂದ್ರವಾಗಿದ್ದು, ಇದು ಜ್ಞಾನಮಂಟಪ ಕ್ಷೇತ್ರ (ಬೃಂದಾವನ ಎಂದು ಹೆಸರು ಪಡೆದಿತ್ತು). 'ಮಿತಾಕ್ಷರ'ದ ಕೃತಿಕಾರ ಶ್ರೀ ವಿಜ್ಞಾನೇಶ್ವರ ಇಲ್ಲಿ ನೆಲೆಸಿದ್ದರಂತೆ.

ವ್ಯಾಸತೀರ್ಥರ ಕಾಲದಲ್ಲಿ 'ಚಂದಪಟ್ಟಣ' ಎಂದು ಕರೆಸಿಕೊಂಡು ಈಗ 'ಚನ್ನಪಟ್ಟಣ'ವಾಗಿದೆ. ಕಣ್ವ ಮಹರ್ಷಿಗಳು ಇಲ್ಲಿ ನೆಲಸಿ ಈ ನದಿಯಲ್ಲಿ ಸ್ನಾನ ಮಾಡುತ್ತಿದ್ದುದರಿಂದ ಇಲ್ಲಿನ ನದಿಗೆ 'ಕಣ್ವನದಿ' ಎಂದು ಹೆಸರು ಬಂದಿದೆ. ಬ್ರಹ್ಮಣ್ಯಾತೀರ್ಥರು,

ಶ್ರೀಪಾದರಾಯರು, ವ್ಯಾಸರಾಯರು ಇಲ್ಲಿ ನೆಲೆಸಿದರೆಂದು ನಂಬಿಕೆ ಇದೆ. ಮಳೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಶ್ರೀ ರಾಜೇಂದ್ರಸಿಂಹ ಎಂಬುವನಿಂದ ಆರಂಭವಾಗಿ 9–10ನೇ ಶತಮಾನದವರೆಗೆ ಹೊಯ್ಸಳರು ಆಳಿದ್ದಾರೆ. ಕೂಡ್ಲೂರು ಪ್ರದೇಶವನ್ನು ಚೋಳರ ದೊರೆ ರಾಜರಾಜ ಚೋಳ ಎಂಬುವವನು 11ನೇ ಶತಮಾನದಲ್ಲಿ ಆಳ್ವಿಕೆ ಮಾಡಿದ್ದಾನೆ. ಇಲ್ಲಿ ಚೋಳರ ಕಾಲದ ಅವಶೇಷಗಳಿವೆ. ಈ ಗ್ರಾಮವನ್ನು ಹೈದರಾಲಿ ಫಕೀರನೊಬ್ಬನಿಗೆ ಇನಾಮು ಕೊಟ್ಟ ಮಾಹಿತಿ ಶಾಸನದಿಂದ ತಿಳಿದು ಬರುತ್ತದೆ. ದೊಡ್ಡಮಳೂರಿನ ಅಪ್ರಮೇಯಸ್ವಾಮಿ, ಚಿಕ್ಕಮಳೂರಿನ ಅರ್ಕೇಶ್ವರಸ್ವಾಮಿ ದೇವಾಲಯಗಳು ಚೋಳರ ಕಾಲದ ದೇವಾಲಯಗಳಾಗಿವೆ. ಕೂಡ್ಲೂರು ಕೆರೆ ಇವರ ಕಾಲದಲ್ಲಿ ನಿರ್ಮಾಣವಾಗಿದೆ. ಇವರು ಹೊಂಗನೂರು ಪ್ರದೇಶವನ್ನು ಆಳಿದ್ದಾರೆ.

ಕಲ್ಯಾಣ ಚಾಲುಕ್ಯ ವಂಶದ 6ನೇ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದನೆಂದು ಹೇಳಲಾದ ವಿಜ್ಞಾನೇಶ್ವರ ದೊಡ್ಡಮಳೂರಿನವನು. ಇವನ ಯಾಜ್ಞವಲ್ಕ್ಯಸ್ಮೃತಿಗೆ 'ಮಿತಾಕ್ಷರ' ಎಂಬ ವ್ಯಾಖ್ಯಾನ ಗ್ರಂಥ ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಮತ್ತು ಆಡಳಿತ ಪದ್ಧತಿಯ ಪ್ರಮುಖ ಆಕರಗಳಲ್ಲೊಂದು. ಅಬ್ಬೂರು, ಹರಿದಾಸ ಪರಂಪರೆಯ ಪ್ರವರ್ತಕರಾದ ಶ್ರೀಪಾದರಾಯರ ಜನ್ಮಸ್ಥಳ. ಇವರ ಕೀರ್ತನೆಗಳು 'ರಂಗವಿಠಲ' ಎಂಬ ಅಂಕಿತದಿಂದ ರಚನೆಯಾಗಿವೆ. ಕರ್ನಾಟಕದ ಸಂಗೀತ ಪಿತಾಮಹ ಶ್ರೀ ಪುರಂದರದಾಸ ದೊಡ್ಡ ಮಳೂರಿನ ಶ್ರೀ ಅಪ್ರಮೇಯಸ್ವಾಮಿ ದೇಗುಲದಲ್ಲಿ ಅಂಬೆಗಾಲು ಕೃಷ್ಣನ ಸುಂದರ ಮೂರ್ತಿಯನ್ನು ಕಂಡು 'ಆಡಿಸಿದಳೆಶೋಧೆ ಜಗದೋದ್ಧಾರನಾ' ಎಂಬ ಕೀರ್ತನೆ ರಚಿಸಿದ್ದರಂತೆ. 'ಅಪ್ರಮೇಯ' ಎಂಬ ಉಲ್ಲೇಖವೂ ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ.

ಭೌಗೋಳಿಕವಾಗಿ ಬಯಲುಸೀಮೆ ನಾಡಿಗೆ ಸೇರಿದ ಈ ತಾಲ್ಲೂಕಿನ ಹೆಚ್ಚು ಪ್ರದೇಶ ಬಯಲು ಪ್ರದೇಶವಾಗಿದ್ದು, ಅಲ್ಲಲ್ಲಿ ಗಡಿಗಳ ವಿಶೇಷವೆಂಬಂತೆ ಬೆಟ್ಟಗುಡ್ಡಗಳ ತಾಣವೂ ಕಂಡುಬರುತ್ತದೆ. ಇಂಥ ಬೆಟ್ಟಗುಡ್ಡಗಳು ಸಾಂಸ್ಕೃತಿಕವಾಗಿ ಹಲವು ಚಾರಿತ್ರಿಕ ಹಿನ್ನೆಲೆ, ಧಾರ್ಮಿಕ ನೆಲೆಗಳೂ ಆಗಿ ಇಂದಿಗೂ ಜನಾಕರ್ಷಕ ಪ್ರೇಕ್ಷಣೀಯ ಸ್ಥಳಗಳಾಗಿವೆ.

ವಿಜಯನಗರ ಸಾಮ್ರಾಜ್ಯದ 3ನೇ ಪೆನುಗೊಂಡ ಯುದ್ದದಲ್ಲಿ ಅಸಾಧಾರಣ ಶೌರ್ಯ ಪ್ರದರ್ಶಿಸಿದ ಜಗದೇವರಾಯನ ಸೇವೆಯನ್ನು ಮೆಚ್ಚಿ ವಿಜಯನಗರದ ಶ್ರೀರಂಗರಾಯ ಇವನಿಗೆ 'ಘನಗಿರಿರಕ್ಷಕ' ಎಂಬ ಬಿರುದನ್ನು, ಚನ್ನಪಟ್ಟಣದ ಸೀಮೆಯನ್ನು ಕೊಟ್ಟು ತನ್ನ ಮಗಳನ್ನು ವಿವಾಹ ಮಾಡಿದನಂತೆ. ಜಗದೇವರಾಯ ಮೂಲತಃ ಬಾರಾಮಹಲ್ ಪ್ರದೇಶಕ್ಕೆ ಸೇರಿದವನು. ತೆಲುಗು ಬಣಜಿಗ ಕುಲದವನು. ಈ ವಂಶದ ಮೂಲ ಪುರುಷ 'ರಾಣೋಜಿರಾಯ' ಒಂದನೇ

ಜಗದೇವರಾಯ ಪ್ರಭಾವಶಾಲಿಯಾದ ವ್ಯಕ್ತಿ. ಈತ 1580 ರಲ್ಲಿ ಇಲ್ಲಿನ ಕೋಟೆಯನ್ನು ನಿರ್ಮಿಸಿದ. ಆತನ ಮರಣಾನಂತರ ಅವನ ಮಗ ಕುಮಾರ ಜಗದೇವರಾಯ ಆಳಿದ.

ಇಮ್ಮಡಿ ಜಗದೇವರಾಯ 15 ವರ್ಷ ಆಳಿದ. ಮುಮ್ಮಡಿ ಜಗದೇವರಾಯ 8 ವರ್ಷ, ಕುಮಾರ ಜಗದೇವರಾಯ 7 ವರ್ಷ, ಅಂಕುಶರಾಯ 16 ವರ್ಷ, ಇಮ್ಮಡಿ ಕುಮಾರ ಜಗದೇವರಾಯ 1623 ರವರೆಗೆ ಆಳಿದ. ನಂತರ ಮೈಸೂರು ಚಾಮರಾಜ ಒಡೆಯರು ಮುತ್ತಿಗೆ ಹಾಕಿ ಈ ಕೋಟೆಯನ್ನು 1630ರಲ್ಲಿ ವಶಪಡಿಸಿಕೊಂಡರು. ಕ್ರಿ.ಶ. 1639ರಲ್ಲಿ ವಿಜಯನಗರದ 'ಡೇ' ಎಂಬ ಆಂಗ್ಲ ಅಧಿಕಾರಿ ಆಳಿದ್ದಾನೆ. ಕ್ರಿ.ಶ. 1651 ರಲ್ಲಿ ಶ್ರೀ ಖಾಸಣಸಾಹೇಬರ ಅಯ್ಯನವರ ಆಳ್ವಿಕೆ ಇತ್ತು. ಕ್ರಿ.ಶ. 1759 ರಲ್ಲಿ ಗೋಪಾಲ ಹರಿಯ ಮುಖಂಡತ್ವದಲ್ಲಿ ಮರಾಠಸೇನೆ ಮುತ್ತಿಗೆ ಹಾಕಿ ಅದರ ಸುಮಾರು ಅರ್ಧಭಾಗವನ್ನು ನಾಶ ಮಾಡಿತ್ತು. ಹೈದರಾಲಿ ಈ ಮುತ್ತಿಗೆಯನ್ನು ನಿವಾರಿಸಿದ. ದಿವಾನ್ ಪೂರ್ಣಯ್ಯ ಈ ಕೋಟೆಯನ್ನು ಮತ್ತೆ ದುರಸ್ಥಿ ಗೊಳಿಸಿದ. 19ನೇ ಶತಮಾನದ ಆದಿ ಭಾಗದಲ್ಲಿ ಚನ್ನಪಟ್ಟಣದ ಪೌಜುದಾರನಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ ಮೈದುನ ತಿಮ್ಮಪ್ಪರಾಜು ಅರಸು ಅರಮನೆಯನ್ನು ಕಟ್ಟಿಸಿದರು. ಆ ನಂತರ ಇದು ನಿರುಪಯುಕ್ತವಾಗಿ ಶಿಥಿಲವಾಯಿತು. ಇಂದಿನ ಕೋಟೆಯ ಹಳೆಯ ತಾಲ್ಲೂಕು ಕಛೇರಿಯ ಮುಖ್ಯ ದ್ವಾರಗಳನ್ನು ಅಕ್ಕೂರಿನ ಕರಿವೀರಪ್ಪನವರು 1852ರಲ್ಲಿ ನಡೆದ ಬಹಿರಂಗ ಹರಾಜಿನಲ್ಲಿ ಖರೀದಿಸಿದರು. ಇನ್ನು ಉಳಿದ ಅವಶೇಷಗಳು 'ಜಾನಪದ ಲೋಕ'ದ ಜನಕ ಹೆಚ್.ಎಲ್.ನಾಗೇಗೌಡರ ವಶವಾಗಿದೆ.

ಇಂದಿಗೂ ಪ್ರಾಚೀನ ಕಾಲದ ಕೋಟೆ, ವರದರಾಜಸ್ವಾಮಿ ದೇವಾಲಯ, ನೀಲಕಂಠೇಶ್ವರ ದೇವಾಲಯ, ಅಬ್ಬೂರು ಮಠದ ಬೃಂದಾವನ ಕ್ಷೇತ್ರ, ಮಳೂರು ದೇವಾಲಯಗಳು, ಕೂಡ್ಲೂರು ಶಾಸನಗಳು, ಹೈದರಾಲಿ ಧರ್ಮಗುರು ಅದಿಲ್‌ಷಾಖಾದ್ರಿಯ ಗೋರಿ, ಟಿಪ್ಪುವಿನ ಕಾಲದ ಪೌಜುದಾರನಾದ ಸಯ್ಯದ್ ಇಬ್ರಾಹಿಂನ ಗೋರಿಗಳು, ನೀಲಕಂಠನಹಳ್ಳಿಯಲ್ಲಿರುವ ಮೈಸೂರು ರಾಜಒಡೆಯರ ಅಂಗರಕ್ಷಕ ಚಾಮರತಾನಪ್ಪನ ಸಮಾಧಿ ಇತ್ಯಾದಿ ಸ್ಮಾರಕಗಳು ಇತಿಹಾಸವನ್ನು ಸಾರುತ್ತಿವೆ.

ಕೂರಣಗೆರೆ ನರಸಿಂಹಸ್ವಾಮಿ ಬೆಟ್ಟ, ದಬಾನುಗುಂಡು, ಅಬ್ಬೂರುದೊಡ್ಡಿ ಗುಡ್ಡ, ಬೇವೂರು ಸಿದ್ದರಾಮೇಶ್ವರ ಬೆಟ್ಟ, ಬೇವೂರು ತಿಮ್ಮಪ್ಪನಬೆಟ್ಟ, ಸಿಂಗರಾಜಪುರದ ಗವಿರಂಗಸ್ವಾಮಿಬೆಟ್ಟ, ಮರಿಗಾಡಹಳ್ಳಿಯ ಚನ್ನಪ್ಪಸ್ವಾಮಿಬೆಟ್ಟ, ಗರಕಹಳ್ಳಿಯ ಸಿದ್ದೇಶ್ವರಸ್ವಾಮಿ ಬೆಟ್ಟಗಳು ಪ್ರಮುಖವಾದವುಗಳು.

ಈ ತಾಲ್ಲೂಕನ್ನು ಚಂದಪಟ್ಟಣ, ಚಿನ್ನರಪಟ್ಟಣ, ಚಿನ್ನಾರಿಪಟ್ಟಣ ಎಂದು ಕರೆಯುವುದಲ್ಲದೆ ಬೊಂಬೆಗಳ ನಗರ, ಟಾಯ್ಸ್‌ಟೌನ್ ಎಂಬೆಲ್ಲಾ ಹೆಸರುಗಳಿಂದಲೂ ಕರೆಯುತ್ತಾರೆ. ಚನ್ನಪಟ್ಟಣವು ಕರ್ನಾಟಕದ ವೈವಿಧ್ಯಮಯ ಸಾಂಸ್ಕೃತಿಕ ದಾಖಲೆಗಳಲ್ಲಿ ತನ್ನ ಕಾಣಿಕೆಯ ಇರುವಿಕೆಯನ್ನು ಪಡಿಮೂಡಿಸಿ 'ಬಣ್ಣದ ಬೊಂಬೆಯ ನಗರಿ' ಎಂದೇ ಖ್ಯಾತಿ ಹೊಂದಿರುವ ಇದು, ಜಗತ್ತಿನಲ್ಲೇ ಆಟದ ಸಾಮಾನುಗಳಲ್ಲಿ ವಿಶಿಷ್ಟ ಸೊಬಗನ್ನು ಮೆರೆದಿದೆ.

ಚನ್ನಪಟ್ಟಣದ ಬೊಂಬೆ ತಯಾರಿಕೆಗೆ ಸುಮಾರು 300 ವರ್ಷಗಳ ಇತಿಹಾಸವಿದ್ದು, ಈ ಕಸುಬು ತಾಲ್ಲೂಕಿನಲ್ಲಿ ಪ್ರಸಿದ್ಧಿಗೆ ಬರಲು ಜಪಾನ್‌ಗೆ ಹೋಗಿ ಕರಕುಶಲ ಕರಗತ ಮಾಡಿಕೊಂಡು ವಿದೇಶದಿಂದ ಬಂದ ಮುಸಲ್ಮಾನ ವ್ಯಕ್ತಿಯು ಇಲ್ಲಿರುವ ಮೃದುವಾದ ಹಾಲೆಮರಗಳನ್ನು ಗುರುತಿಸಿ ಈ ಕಲೆಯನ್ನು ಇಲ್ಲಿ ಬಿತ್ತಿದ್ದಾನೆ. ಹಲವಾರು ಕೆಲಸವಿಲ್ಲದ ಕೈಗಳಿಗೆ ಕೆಲಸ ನೀಡಿದರು; ಬಡತನದಲ್ಲಿದ್ದ ಎಷ್ಟೋ ಕುಟುಂಬಗಳಿಗೆ ಈ ಕಲೆ ಮರುಜೀವನ ನೀಡಿತು.

ದೇಶ–ವಿದೇಶಗಳಿಗೆ ರಫ್ತಾಗುವ ಈ ಬೊಂಬೆಗಳಿಗೆ ವಿದೇಶಿ ಮಾರುಕಟ್ಟೆ ಒದಗಿಸಿಕೊಟ್ಟವರು ಲಿಂಗಯ್ಯ ಎಂಬ ವ್ಯಕ್ತಿ. ಅವರ ಪರಿಶ್ರಮದಿಂದಾಗಿ ಇಂದು ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ, ಸಿಂಗಾಪುರ, ಜಪಾನ್, ಶ್ರೀಲಂಕಾ ಮುಂತಾದ ರಾಷ್ಟ್ರಗಳಿಗೆ ಚನ್ನಪಟ್ಟಣ ಬೊಂಬೆಗಳು ರಫ್ತಾಗುತ್ತಿರುವುದನ್ನು ಕಾಣಬಹುದಾಗಿದೆ.

ಚನ್ನಪಟ್ಟಣದ ಮುಖ್ಯ ಹೈಲೆಟ್ಸ್ ಎಂದರೆ ಬೆಂಗಳೂರು ಮೈಸೂರು ಮುಖ್ಯರಸ್ತೆಯಲ್ಲಿ ತಲೆ ಎತ್ತಿ ನಿಂತಿರುವ 'ಕರಕುಶಲ ಕಲೆಯ ತವರು ಮನೆ'ಗಳಂತೆ 'ಬಣ್ಣದ ನಗರಿಯ ಕುಶಲಕಲಾ ಆರಾಧಕರ ತೊಟ್ಟಿಲುಗಳಂತೆ' ಕಂಗೊಳಿಸುವ 'ಟಾಯ್ಸ್ ಎಂಪೋರಿಯಂಗಳು'. ಇದಕ್ಕೆ ಭೇಟಿ ಕೊಟ್ಟರೆ ಸಾಕು ಒಂದು ಹೊಸ ಕಲ್ಪನಾಲೋಕದಲ್ಲಿ ವಿಹರಿಸಿದಂತಾಗುತ್ತದೆ.

ಹೀಗೆ ಚನ್ನಪಟ್ಟಣವು ಬೊಂಬೆಗಳ ನಗರವೆಂದು ದೇಶ ವಿದೇಶದಲ್ಲೂ ಪ್ರಖ್ಯಾತಿ ಹೊಂದಿರುವುದನ್ನು ಕಾಣಬಹುದಾಗಿದೆ.

3.2 ಸ್ಥಳನಾಮಗಳ ವರ್ಗೀಕರಣ :

ಭೂಮಿಯ ಮೇಲೆ ಮಾನವ ಜೀವಿ ಗೋಚರವಾದುದ್ದು ಸುಮಾರು 10 ಲಕ್ಷ ವರ್ಷಗಳ ಹಿಂದೆ.[1] ಪ್ರಕೃತಿಯು ಸೃಷ್ಟಿಸಿದ ಲಕ್ಷೋಪಲಕ್ಷ ಜೀವಕೋಟಿಯಲ್ಲಿ ಮಾನವಜೀವಿಯೂ ಒಂದಾಗಿತ್ತು. ಆಗ ಮಾನವ ಜೀವಿಗೂ ಉಳಿದ ಜೀವರಾಶಿಗೂ ಯಾವ ವ್ಯತ್ಯಾಸವೂ ಇರಲಿಲ್ಲ.

ಇಬ್ಬರದೂ ಹೋರಾಟಮಯ ಜೀವನ. ಹೊಟ್ಟೆಗಾಗಿ ಹೋರಾಟ; ಜೀವನ ಉಳಿವಿಗಾಗಿ ಹೋರಾಟ. ಆದಿ ಮಾನವನ ಅಂದಿನ ಹೋರಾಟಮಯ ಜೀವನವನ್ನು ಇಂದು ನಾವು ಕಲ್ಪಿಸಿಕೊಳ್ಳಲು ಸಾಧ್ಯವಾಗದು. ಅನ್ನಕ್ಕಾಗಿ, ಜೀವಕ್ಕಾಗಿ, ಪ್ರತಿನಿತ್ಯ, ಪ್ರತಿಕ್ಷಣ ಹೋರಾಡುವುದು ಅವನ ನಿತ್ಯ ಬದುಕಿನಲ್ಲಿ ಹಾಸುಹೊಕ್ಕಾಗಿದ್ದವು. ಕಾಲ ಪುರುಷ ಯಾರ ಅಧೀನ? ಯಾರ ಹೋರಾಟ ಹೇಗಾದರೂ ಇರಲಿ, ದಿನದಿನದ ಸುರ್ಯೋದಯ ಸೂರ್ಯಾಸ್ತಗಳಲ್ಲಿ ಎಷ್ಟೋ ಸಾವಿರ ವರ್ಷಗಳು ಕರಗಿ ಹೋದದ್ದು ಯಾರ ಗಮನಕ್ಕೂ ಬಾರದೆ ಹೋಯಿತು.

ಕಾಲ ಪುರುಷ ಜಗತ್ತಿನ ಚರಾಚರಗಳೆಲ್ಲದರ ಮೇಲೆ ತನ್ನ ಪ್ರಭಾವದ ಮುದ್ರೆಯನ್ನೊತ್ತಿದಂತೆ ಮಾನವ ಜೀವಿಯ ಮೇಲೂ ತನ್ನ ಮುದ್ರೆಯನ್ನೊತ್ತಿದ್ದ. ವಿಸ್ಮಯ ಜಗತ್ತಿನಲ್ಲಿ ದಿನಕಳೆದಂತೆ ಮಾನವ ವಿವೇಚನೆಯನ್ನು ಬೆಳೆಸಿಕೊಂಡ, ರೂಢಿಸಿಕೊಂಡ ಉಳಿದ ಜೀವರಾಶಿಗಳಿಗಿಂತ ಭಿನ್ನವಾಗತೊಡಗಿದ.

ನಮ್ಮ ಆದಿಮಾನವ ಹೇಗಿದ್ದವ? ಹೇಗಾದ! ಹೊಸ ಶಿಲಾಯುಗ ಮಾನವ ಜೀವನದ ಇತಿಹಾಸದಲ್ಲಿ ಸುವರ್ಣ ಅಧ್ಯಾಯಕ್ಕೆ ನಾಂದಿ ಹಾಡಿತು. ಈ ಯುಗದಲ್ಲಿ ನಾಗರೀಕತೆಯನ್ನು ಹಂತ–ಹಂತವಾಗಿ ಮೈಗೂಡಿಸಿಕೊಳ್ಳುವುದರೊಂದಿಗೆ ಅವನ ಜೀವನ ಕ್ರಮದಲ್ಲಿ ಮಹತ್ತರ ಬದಲಾವಣೆಗಳಾದವು. ಬೇಟೆಗಾಗಿ ಒರಟು ಕಲ್ಲುಗಳನ್ನು ಬಳಸುತ್ತಿದ್ದವ; ನಯಗೊಳಿಸಿದ ಹರಿತ ಶಿಲಾ ಆಯುಧಗಳನ್ನು ಬಳಸತೊಡಗಿದ. ಹಸಿ ಹಸಿ ಗೆಡ್ಡೆ ಮಾಂಸಗಳನ್ನು ಭಕ್ಷಿಸುತ್ತಿದ್ದವ; ಬೆಂಕಿಯನ್ನು ಕಂಡುಹಿಡಿದು ಬೆಂಕಿಯಿಂದ ಬೇಯಿಸಿ ತಿನ್ನ ತೊಡಗಿದ. ಸನಿಹದಲ್ಲೇ ಸುಳಿದಾಡುತ್ತಿದ್ದ ಅಪಾಯಕಾರಿಯಲ್ಲದ ಪ್ರಾಣಿಗಳನ್ನು ಜೀವಂತವಾಗಿ ಹಿಡಿದು ಸಾಕುವ, ಪಳಗಿಸುವ, ವಂಶಾಭಿವೃದ್ಧಿ ಮಾಡುವ ವಿಧಾನಗಳನ್ನು ಕರಗತ ಮಾಡಿಕೊಂಡ. ಬೀಜ ನೆಟ್ಟು ಸಸಿಗಳ ಸಂತಾನ ಬೆಳೆಸುವ ಕಲೆಯನ್ನು ರೂಢಿಸಿಕೊಂಡ. ಒಟ್ಟಿನಲ್ಲಿ ಪ್ರಕೃತಿಯಲ್ಲಿರುವ ಸಮಸ್ತ ವಸ್ತುಗಳನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳಲು ಯತ್ನಿಸತೊಡಗಿದ.

ಹೀಗೆ ಮಾನವನ ಜೀವನೇತಿಹಾಸ ಬದಲಾಗತೊಡಗಿತು. ಪ್ರಾಯಶಃ ಈ ಪರಿವರ್ತನೆಯ ಶಕೆಯಲ್ಲಿ ಆದಿ ಮಾನವ ತನ್ನ ಅಲೆಮಾರಿ ಜೀವನಕ್ಕೊಂದು ಅಂತ್ಯ ಹೇಳುವ ನಿರ್ಧಾರ ಮಾಡಿರಬೇಕು. ಹಾಗಾಗಿ ತನಗೂ ತನ್ನ ಸಂಗಾತಿಗಳಿಗೂ ಭದ್ರತೆಯನ್ನೊದಗಿಸುವ ಜೀವನಕ್ಕೆ ಅಗತ್ಯವಾಗಿದ್ದ ಪರಿಕರಗಳು ಲಭ್ಯವಿದ್ದ ಒಂದು ನೆಲೆಯನ್ನು ಆರಿಸಿದ. ಹೀಗೆ ನೆಲೆಯೂರಿದ ನೆಲದ ಮೇಲೆ ವ್ಯಾಮೋಹ ಬೆಳೆಸಿಕೊಂಡ. ದಿನ ಕಳೆದಂತೆ ಆ ನೆಲ ತನ್ನದು, ಆ ನೆಲ ನನ್ನದು ಎಂಬ ಮಮಕಾರ ಮೂಡತೊಡಗಿತು. ಎಲ್ಲಿಗೆ ಹೋದರೂ ಮತ್ತೆ ಅಲ್ಲಿಗೆ ಮರಳುವಂತೆ

ಮಾಡುವ ಮೋಡಿ ಆ ಮಣ್ಣಿಗಿತ್ತು. ಆಹಾರಕ್ಕಾಗಿಯೋ, ಭೇಟಿಗಾಗಿಯೋ ಅಲೆದು ಅಲೆದು ನಿತ್ರಾಣವಾದರೂ ತನ್ನ ನೆಲೆಗೆ ಮರಳಿ ಬರುವುದನ್ನು ರೂಢಿಸಿಕೊಂಡ ಹಾಗೆ ಮರಳಿ ಬರುವುದಕ್ಕೆ ತನ್ನ ನೆಲೆಯನ್ನು ನೆನಪಿಟ್ಟುಕೊಳ್ಳುವುದಕ್ಕೆ ಪ್ರಕೃತಿ ಸಹಾಯ ಮಾಡಿತು.

ಎತ್ತರದ ಸ್ಥಳವಾಗಿರಬಹುದು, ತಗ್ಗಿನ ಸ್ಥಳವಾಗಿರಬಹುದು, ಮಣ್ಣಿರಬಹುದು, ಮಣ್ಣಿನ ಬಣ್ಣವಿರಬಹುದು, ಕಲ್ಲಿರಬಹುದು, ಕಲ್ಲಿನ ಗವಿಯಿರಬಹುದು, ಮರ–ಸಸ್ಯ, ಬಳ್ಳಿ–ಹೂ, ಪಶು–ಪಕ್ಷಿ, ನದಿ–ಹೊಳೆ, ಬೆಟ್ಟ–ಗುಡ್ಡ ಹೀಗೆ ಪ್ರಕೃತಿಯ ಅಂಶಗಳು ಆದಿಮಾನವ ತನ್ನ ನೆಲೆಯನ್ನು ಗುರುತಿಸಲು ಸಹಾಯ ಮಾಡಿದವು. ಹೀಗಾಗಿಯೇ ಪ್ರಾಚೀನ ಸ್ಥಳನಾಮಗಳು ಬಹುತೇಕ ಪ್ರಕೃತಿ ವಾಚಕಗಳಾಗಿವೆ.

ಒಂದೊಂದು ವಸ್ತುವಿಗೂ ಒಂದೊಂದು ಹೆಸರಿಡುವ ಪ್ರಕ್ರಿಯೆ ಸಾಮಾನ್ಯವಾದುದೇನಲ್ಲ. ವಸ್ತುಗಳಿಗಿಟ್ಟ ಹೆಸರುಗಳು ಪುನರಾವರ್ತಿತವಾಗದಂತೆ ಒಂದೊಂದು ಭಿನ್ನವಾಗುವಂತೆ ನೋಡಿಕೊಳ್ಳುವ ಪ್ರಕ್ರಿಯೆ ಬುದ್ಧಿಯ ವಿಕಾಸವಲ್ಲದೆ ಬೇರೇನು? ಆದಿ ಮಾನವ ಒಂದೊಂದು ವಸ್ತುವಿಗೂ ಒಂದೊಂದು ಹೆಸರನ್ನಿಟ್ಟಂತೆ ತಾನು ನೆಲೆನಿಂತ ತಾಣಕ್ಕೂ ಒಂದು ಹೆಸರನಿಟ್ಟ ಹಾಗಾಯಿತು ನೆಲೆಗಳಿಗೊಂದು ನಾಮಕರಣ! ಆಗಿನ ಆದಿಮಾನವ ತನ್ನ ನೆಲೆಗೆ ಅಂದು ಇರಿಸಿದ ಹೆಸರನ್ನೇ ನಾವಿಂದು ಸ್ಥಳನಾಮ ಎನ್ನುತ್ತೇವೆ. ಸಾಮೂಹಿಕವಾಗಿ ಎದ್ದ ಈ ಸ್ಥಳನಾಮಗಳ ಅರ್ಥವನ್ನು ಗ್ರಹಿಸಿದಾಗ ಭಿನ್ನ ಭಿನ್ನ ನೆಲೆಗಳಲ್ಲಿ ನೆಲೆಸಿದ್ದರೂ ಮಾನವನ ಮನಸ್ಸು ಒಂದೇ ಎಂಬುದು ವಿಧಿತವಾಗುತ್ತದೆ. ದೇಶ, ಧರ್ಮ ಯಾವುದೇ ಇದ್ದರೂ ಬಣ್ಣ, ಭಾಷೆ ಯಾವುದೇ ಇದ್ದರೂ ಪ್ರಪಂಚದಾದ್ಯಂತ ಮನುಷ್ಯನ ಮನಸ್ಸು ಕೆಲಸ ಮಾಡುವ ರೀತಿಯೊಂದೆ ಎಂಬುದಕ್ಕೆ ಸ್ಥಳನಾಮಗಳೇ ಸಾಕ್ಷಿ. ಮೊರಡಿಹಳ್ಳಿ ಎಂಬ ಸ್ಥಳನಾಮ ಎತ್ತರದ ನೆಲೆ ಎಂಬರ್ಥವನ್ನು ಹೊಂದಿದೆ. ಇದೇ ಅರ್ಥವನ್ನು ಹೊಂದಿರುವ ಸ್ಥಳನಾಮಗಳು ಎಲ್ಲಾ ದೇಶಗಳಲ್ಲೂ ಕಾಣಬರುತ್ತದೆ. ಎಂದರೆ 'ಮಾನವ ಜಾತಿ ತಾನೊಂದೇ ವಲಂ' ಎಂಬುದನ್ನು ಸಮರ್ಥಿಸುವುದಲ್ಲದೆ, ಮನಸ್ಸಿನ ಒಂದೇ ತೆರನಾದ ತುಡಿತವನ್ನು ಹೇಳುತ್ತವೆ.

ತಲೆ ಎತ್ತುತ್ತಲೇ ಹೋದ ಜನವಸತಿ ನೆಲೆಗಳು, ಕಾಲಾನುಕ್ರಮದಲ್ಲಿ ವಿಕಸನಗೊಳ್ಳಲು ಪ್ರಾರಂಭಿಸಿದವು. ಆರಂಭಿಕ ಸ್ಥಳನಾಮಗಳು ಪ್ರಕೃತಿವಾಚಕಗಳಾಗಿದ್ದರೆ, ಆ ನಂತರದ ಕಾಲಘಟ್ಟದಲ್ಲಿ ಬಂದ ಹೆಸರುಗಳು ಜನಾಂಗವಾಚಕಗಳಾಗ ತೊಡಗಿದವು. ತದನಂತರ ಸ್ಥಳನಾಮಗಳು ಸಂಸ್ಕೃತಿ ವಾಚಕಗಳಾಗ ತೊಡಗಿದವು.

"ಮನುಷ್ಯ ಕಂಡದ್ದು, ಕಣ್ಣಿಟ್ಟಿದ್ದು, ಕಲ್ಪಿಸಿದ್ದು, ಕಥೆಯಾಯಿತು, ಹೆಸರಿಗೆ ಮೂಲವಾಯಿತು. ಆ ಹೆಸರು ಬದುಕಿನ ಅವಿಭಾಜ್ಯ ಅಂಗವಾಯಿತು ಹೆಸರಿನಲ್ಲೇನಿದೆ? ಎಂಬ ರೂಢಿಯ ಮಾತಿದೆ. ಹೆಸರಿನ ಮೂಲವನ್ನು ಕೆದಕಲು ಪ್ರಾರಂಭಿಸಿದರೆ ಹೆಸರಿನಲ್ಲಿ ಏನಿಲ್ಲ ಎಂಬ ಮರುಪ್ರಶ್ನೆ ಉದ್ಭವಿಸುತ್ತದೆ. ಹೆಸರಿನಲ್ಲಿ ಏನೇನೋ ಇದೆ, ಏನೆಲ್ಲಾ ಇದೆ. ಪ್ರಾಚೀನ ಕಾಲದಲ್ಲಿ ಸಾಮೂಹಿಕವಾಗಿ ಹುಟ್ಟಿಕೊಂಡಿರುವ ಸ್ಥಳನಾಮಗಳು ಕೇವಲ ಹೆಸರುಗಳಾಗಿ ಉಳಿದಿಲ್ಲ. ಮಾನವ ಸಂಸ್ಕೃತಿಯ ಕುರುಹುಗಳಾಗಿವೆ. ಸ್ಥಳನಾಮಗಳು ಆಯಾ ಜನಾಂಗದ ಮಂತ್ರಗಳೂ ಹೌದು, ಮಾಂತ್ರಿಕ ಶಕ್ತಿಗಳೂ ಹೌದು."[2]

ಜನವಲಸೆಯ ಹೆಚ್ಚಳ, ಕ್ಷಾಮಗಳು, ನೆರೆ ಪ್ರವಾಹಗಳು, ಶತ್ರುಗಳ ಭಯ, ಜನ ಜನರೊಳಗಿನ ಸಂಘರ್ಷ ಆ ಕಾರಣಗಳಿಂದಾಗಿ ಹೊಸ ಹೊಸ ಜನ ವಸತಿಗಳು ತಲೆ ಎತ್ತುತ್ತಲೇ ಹೋದವು. ಕೆಲವು ನಿರ್ವಸತಿ ನೆಲೆಗಳಾದವು. ಹಾಗಾಗಿಯೇ ಕಾಲ ಕಳೆದಂತೆ ನೆಲೆ ನಿಂತ ಸ್ಥಳ ಹಟ್ಟಿಯಾಯಿತು, ಊರಾಯಿತು, ಸಂತೆಯಾಯಿತು, ಪುರವಾಯಿತು, ಪಟ್ಟಣವಾಯಿತು, ನಗರವಾಯಿತು, ಸ್ಥಳನಾಮಗಳ ವಿಕಾಸಕ್ಕೆ ಕಾರಣವಾಯಿತು. ಈ ವಿಕಾಸವು ಪ್ರಾರಂಭವಾದಂದಿನಿಂದ ಮುಂದುವರಿಯುತ್ತಲೇ ಇದೆ. ಈ ಪ್ರಕ್ರಿಯೆಗೆಂದೂ ಕೊನೆಯಿಲ್ಲ ಎಂದೂ ಈ ಪ್ರಕ್ರಿಯೆ ಕೊನೆಗೊಳ್ಳುತ್ತದೋ ಅಂದು ಜಗತ್ತು ಅವಸಾನದ ಅಂಚಿನಲ್ಲಿದೇ ಎಂದೇ ಭಾವಿಸಬೇಕಾಗುತ್ತದೆ.

ಕಾಲ ಕಳೆದಂತೆ ಎಂದೋ ಇಟ್ಟ ಮಾನವ ನೆಲೆಗಳ ಮೂಲಾರ್ಥ ಜನಮಾನಸದಿಂದ ಮರೆಯಾಗ ತೊಡಗಿದವು. ಸ್ಥಳನಾಮಗಳು ಎರಡು ಕಾರಣಗಳಿಂದ ರೂಪಾಂತರಗೊಳ್ಳುತ್ತವೆ. ಒಂದು ಉದ್ದೇಶಿತ ಬದಲಾವಣೆಯಾಗಿದ್ದರೆ, ಇನ್ನೊಂದು ಅನುದ್ದೇಶಿತ ಬದಲಾವಣೆಯಾಗಿರುತ್ತದೆ. ರಾಜಕೀಯ, ಸಾಮಾಜಿಕ ಕಾರಣಗಳಿಂದಾಗಿ ಸ್ಥಳನಾಮಗಳು ರೂಪಾಂತರಗೊಂಡಿದ್ದರೆ ಅದು ಉದ್ದೇಶಿತ ಬದಲಾವಣೆ; ಭಾಷೆಯ ಪರಿವರ್ತನಶೀಲತೆಯಿಂದಾಗಿಯೋ, ಜನಪದರ ಸೌಲಭ್ಯಾಕಾಂಕ್ಷೆಯ ಕಾರಣಕ್ಕಾಗಿಯೋ ರೂಪಾಂತರಗೊಂಡಿದ್ದರೆ ಅದು ಅನುದ್ದೇಶಿತ ಬದಲಾವಣೆ.

ಸ್ಥಳನಾಮಗಳು ಉದ್ದೇಶಪೂರ್ವಕವಾಗಿರಲಿ ಅಥವಾ ಅನುದ್ದೇಶಪೂರ್ವಕವಾಗಿರಲಿ ಎರಡು ರೀತಿಯ ಬದಲಾವಣೆಗೆ ಒಳಗಾಗುತ್ತವೆ. ಒಂದು ಶಬ್ದಾರ್ಥಗಳಲ್ಲಿ ಆಗುವ ಬದಲಾವಣೆ ಮತ್ತೊಂದು ಶಾಬ್ದಿಕ ರೂಪಗಳಲ್ಲಿ ಆಗುವ ಬದಲಾವಣೆ. ಹಾಗಾಗಿಯೇ ಎಷ್ಟೋ ಸ್ಥಳನಾಮಗಳು ಇಂದು ಒಗ್ಗಟ್ಟಿನಂತೆ ಜಟಿಲವಾಗಿವೆ; ಬಿಡಿಸಲಾಗದ ಕಗ್ಗಂಟಾಗಿವೆ. ಸ್ಥಳನಾಮಗಳ ಒಗ್ಗಟ್ಟನ್ನು

ಬಿಡಿಸುವ ಸಲುವಾಗಿ ಹುಟ್ಟಿಕೊಂಡ ಜ್ಞಾನಶಾಖೆಯೇ ನಾಮವಿಜ್ಞಾನ. ಸ್ಥಳನಾಮಗಳ ಅಧ್ಯಯನ ಕೇವಲ ಭಾಷೆಗೆ ಸಂಬಂಧಿಸಿರದೆ ಅದೊಂದು ಸಾಂಸ್ಕೃತಿಕ ಅಧ್ಯಯನವೂ ಆಗಿರುವುದರಿಂದ ಇಂದು 'ನಾಮ' ಎಂಬ ಶಬ್ದ, ವ್ಯಾಕರಣ ಮತ್ತು ಅರ್ಥಕೋಶಗಳ ವ್ಯಾಪ್ತಿಯನ್ನು ಮೀರಿ ಬಹುದೊಡ್ಡ ಶಿಸ್ತಾಗಿ ಬೆಳೆದಿದೆ.

ನಾಮ ವಿಜ್ಞಾನವು ಪ್ರಧಾನವಾಗಿ ಎರಡು ಶಾಖೆಗಳನ್ನು ಒಳಗೊಂಡಿದೆ. ಒಂದು **'ವ್ಯಕ್ತಿನಾಮ ವಿಜ್ಞಾನ'**ವಾದರೆ ಇನ್ನೊಂದು **'ಸ್ಥಳನಾಮ ವಿಜ್ಞಾನ'**. ಹೆಸರೆ ಹೇಳುವಂತೆ ಒಂದು ವ್ಯಕ್ತಿ ನಾಮಗಳಿಗೆ ಸಂಬಂಧಿಸಿದಂತೆ ನಡೆಯುವ ಅಧ್ಯಯನವಾದರೆ, ಮತ್ತೊಂದು ಸ್ಥಳನಾಮಗಳಿಗೆ ಸಂಬಂಧಿಸಿದಂತೆ ನಡೆಯುವ ಅಧ್ಯಯನವಾಗಿದೆ. ಒಂದೊಂದು ಶಾಖೆಯಲ್ಲೂ ಅಧ್ಯಯನ ನಡೆಸಬಹುದಾದ ಒಳವಿಭಾಗಗಳು ಕೆಳಕಂಡಂತಿವೆ.



ಸ್ಥಳನಾಮಗಳ ಅಧ್ಯಯನವು ಒಂದು ಶಾಸ್ತ್ರೀಯ ಅಧ್ಯಯನವಾಗಿ ಪರಿಗಣಿತವಾದ ಮೇಲೆ ಅಧ್ಯಯನದ ಸ್ವರೂಪವೆಂತಹುದು, ಅನುಸರಿಸಬೇಕಾದ ವಿಧಾನಗಳಾವುವು? ಎಂಬ ಪ್ರಶ್ನೆಗಳು ಏಳುವುದು ಸಹಜ.

"ಸ್ಥಳನಾಮಗಳು ಒದಗಿಸುವ ಸಾಂಸ್ಕೃತಿಕ ಮಾಹಿತಿ ಶಾಸನವಷ್ಟೆ ಏಕೆ? ಇನ್ನಷ್ಟು ವಿಶ್ವಾಸನೀಯವೆಂದೇ ಪರಿಗಣಿಸಲಾಗಿದೆ. ಏಕೆಂದರೆ ಶಾಸನಗಳು ಬರೆಯಲ್ಪಡುವ ಕಾಲಕ್ಕೆ

ಮೊದಲೇ ಈ ಸ್ಥಳನಾಮಗಳು ಚಲಾವಣೆಯಲ್ಲಿದ್ದವು. ಅಷ್ಟೇ ಅಲ್ಲ ಇದೀಗ ಸಮಕಾಲೀನ ಭಾಷಾಮಾನದಂಡಗಳಿಂದ ಸ್ಥಳನಾಮಗಳು ಅರ್ಥಹೀನವೆಂದಾಗಿರಬಹುದಾದರೂ, ಅವು ಸಾವಿರಾರು ವರ್ಷಗಳಿಂದ ಹಾಗೆ ಹಾಗೆಯೇ ಉಳಿದು ಬಂದಿರುತ್ತವೆ. ಸ್ಥಳನಾಮಗಳು ಆಯಾ ಗುರುತು ಪಟ್ಟಿಕೆಗಳಾಗಿರುವುದರಿಂದ ಅವು ಬದಲಾಗಲಾರವು. ಅವುಗಳನ್ನು ಬದಲಿಸುವ ಪ್ರಯತ್ನಗಳು ಫಲಿಸಲಾರವು."[3]

ಜಗತ್ತಿನಲ್ಲಿ ಎಷ್ಟು ಊರುಗಳಿವೆಯೋ ಅಷ್ಟು ಹೆಸರುಗಳೂ ಇರುತ್ತವೆ. ಕೆಲವೊಂದು ಹೆಸರುಗಳು ಪುನರಾವರ್ತನೆಯಾಗುವುದು ಉಂಟು. ಉದಾಹರಣೆಗೆ ಹೊಸಹಳ್ಳಿ, ಚನ್ನಪಟ್ಟಣ, ಬ್ಯಾಡರಹಳ್ಳಿ, ಅಕ್ಕೂರು ಮುಂತಾದ ಹೆಸರುಗಳನ್ನು ಪಡೆದ ಊರುಗಳು ಹಲವಾರಿವೆ. ಆದರೂ ಆ ಹೆಸರುಗಳ ವೈವಿಧ್ಯ ದಂಗು ಬಡಿಸುವಂತಹವು. ಒಂದೇ ಹೆಸರಿನ ಊರುಗಳು ಎಷ್ಟೇ ಇದ್ದರೂ ಸಹ ದೇ.ಜವರೇಗೌಡರು ಅಭಿಪ್ರಾಯ ಪಡುವಂತೆ "ಸ್ಥಳನಾಮಗಳ ಉಗಮ ವಿಕಾಸಗಳ ಹಿನ್ನೆಲೆಯಲ್ಲಿ ಮಾನವ ಧರ್ಮದ ಏಕಸೂತ್ರತೆ ಹರಿಯುತ್ತಿರುವುದರಿಂದ ಕೆಲವೇ ಕೆಲವು ತತ್ವಗಳ ಪರಿಧಿಯೊಳಗೆ ಅವನ್ನು ಸೀಮಿತಗೊಳಿಸುವುದಾಗಲಿ ಅವುಗಳ ಬೆಳಕಿನಲ್ಲಿ ಅವುಗಳನ್ನು ವರ್ಗೀಕರಣ ಮಾಡುವುದಾಗಲಿ ಕಷ್ಟವೇನೂ ಆಗಲಾರದು".[4]

ಸಾಮಾನ್ಯವಾಗಿ ಹೆಸರುಗಳು ಎರಡು ಘಟಕಗಳಿಂದ ಕೂಡಿರುತ್ತವೆ.

1) ಆದಿ ಘಟಕ ಅಥವಾ ವಿಶೇಷಾಂಶ. ಇದನ್ನು ಪೂರ್ವಘಟಕ ಎಂದು ಕರೆಯಲಾಗುತ್ತದೆ.
2) ಅಂತ್ಯ ಘಟಕ ಅಥವಾ ಸಾಮಾನ್ಯಂಶ. ಇದನ್ನು ಉತ್ತರ ಘಟಕ ಎಂತಲೂ ಕರೆಯಲಾಗುತ್ತದೆ.

ಇವುಗಳಲ್ಲಿ ಎರಡನೆಯದಾದ ಅಂತ್ಯ ಘಟಕಗಳ ವರ್ಗೀಕರಣ ಸರಳ ಹಾಗೂ ಸುಲಭವಾದುದಾಗಿದೆ. ಶಂಬಾಜೋಶಿಯವರು ಇದನ್ನು ಎರಡು ವರ್ಗಗಳಾಗಿ ವಿಂಗಡಿಸಿದ್ದಾರೆ. ವಸತಿ ಸ್ವರೂಪ ವ್ಯವಸ್ಥೆಗಳನ್ನು ಸೂಚಿಸುವ ಹೆಸರುಗಳನ್ನು ವಸತಿ ನಾಮಗಳೆಂದೂ, ಭೌಗೋಳಿಕ ಸನ್ನಿವೇಶವನ್ನು ನಿರ್ದೇಶಿಸುವಂತಹವುಗಳನ್ನು ಭೌಗೋಳಿಕ ನಾಮಗಳೆಂದು ಆ ವರ್ಗಗಳಿಗೆ ನಾಮಕರಣ ಮಾಡಿದ್ದಾರೆ. ಪಟ್ಟಿ, ಪಾಡು, ನೆಲೆ, ಖೇಡ, ಊರು, ಪೇಟೆ, ಪಟ್ಟಣ ಮುಂತಾದವುಗಳನ್ನು ಮೊದಲನೆಯ ವರ್ಗದಲ್ಲೂ; ಮರಡಿ, ಮಾಳ, ಗುಡ್ಡ, ಗಿರಿ, ಬಂಡಿ, ಕೊಂಬು, ಕಳ, ಗುಂದ, ಕೊಪ್ಪ, ಮಡು, ಹಳ್ಳ ಮೊದಲಾದವುಗಳನ್ನು ಎರಡನೆಯ ವರ್ಗದಲ್ಲೂ ಸೇರಿಸುತ್ತಾರೆ. ಮಾನವ ಅಲೆಮಾರಿತನವನ್ನು ಬಿಟ್ಟು ಒಂದೆಡೆ ನೆಲೆ ಹೂಡಿ ನೆಲೆ ನಿಂತ ನಂತರ

ಮೊದಲ ವರ್ಗದ ಹೆಸರು ರೂಢಿಗೆ ಬಂದರೆ, ಜನ ಊರು ಕಟ್ಟುವುದಕ್ಕೆ ಮುಂಚೆಯೇ ಎರಡನೇ ವರ್ಗದ ಹೆಸರುಗಳು ಅಸ್ತಿತ್ವದಲ್ಲಿದ್ದುವೆಂದು ಹೇಳಬಹುದಾಗಿದೆ.

1) ಆದಿಘಟಕಾಧಾರಿತ ವರ್ಗೀಕರಣ :–

ಹೆಸರುಗಳ ವರ್ಗೀಕರಣದಲ್ಲಿ ವಿದ್ವಾಂಸರ ಬುದ್ಧಿ ಮತ್ತು ಪ್ರತಿಭೆಗಳಿಗೆ ನಿಜವಾಗಿಯೂ ಸವಾಲಾಗಿರುವ ಅಂಶಗಳೆಂದರೆ ಹೆಸರುಗಳ ಆದಿ ಘಟಕಗಳು ಅಥವಾ ವಿಶೇಷಾಂಶಗಳು. ಗ್ರಾಮಗಳ ವೈಶಿಷ್ಟ್ಯವನ್ನು ತಿಳಿಸುವಲ್ಲಿ ಮಹತ್ವದ ಅಂಶವಾಗಿ ವ್ಯವಹರಿಸುವ ಹೆಸರಿನ ಪೂರ್ವಘಟಕಗಳನ್ನು ತಮ್ಮದೇ ಆದ ರೀತಿಯಲ್ಲಿ ಹಲವು ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ವಿಂಗಡಿಸಿ ಅಧ್ಯಯನ ಮಾಡಲು ಪ್ರಯತ್ನಿಸಿರುವುದನ್ನು ಕಾಣಬಹುದು.

ಆಂಗ್ಲ ಸ್ಥಳನಾಮಗಳ ಕೋಶವನ್ನು ತಯಾರಿಸಿ ಪ್ರಸಿದ್ಧರಾದ **ಎಕ್ವಾಲ್** ಅವರು ವಸತಿ ಸ್ಥಾನಗಳನ್ನು ಗಮನದಲ್ಲಿಟ್ಟುಕೊಂಡು ಮೂರು ಗುಂಪುಗಳನ್ನು ಸೂಚಿಸಿದ್ದಾರೆ. ಅವುಗಳೆಂದರೆ :

1) ಜನನಾಮ ಮತ್ತು ಬುಡಕಟ್ಟಿನ ಹೆಸರುಗಳು.
2) ಬಹುದಿನದಿಂದ ವಾಸಿಸುತ್ತಿದ್ದ ವಸತಿಗಳ ಹೆಸರುಗಳು.
3) ಮೂಲತಃ ಪ್ರಾಕೃತಿಕ ನಾಮಗಳು.

ಈ ವರ್ಗೀಕರಣಗಳು ಪರಿಮಿತಿಯ ವ್ಯಾಪ್ತಿಯ ವರ್ಗೀಕರಣವಾದ್ದರಿಂದ ಎಲ್ಲಾ ಸ್ಥಳನಾಮಗಳನ್ನೂ ಇವುಗಳಲ್ಲಿ ಅಡಕ ಮಾಡುವುದು ತುಂಬ ಕಷ್ಟಕರವಾದ ಕೆಲಸವಾಗುತ್ತದೆ.

ಇದು ಪರಿಮಿತ ವ್ಯಾಪ್ತಿಯ ವರ್ಗೀಕರಣವಾದ್ದರಿಂದ ವೈವಿಧ್ಯ ಪೂರ್ಣವಾದ ಸಕಲನಾಮಗಳನ್ನು ಅದರ ಕಕ್ಷೆಯಲ್ಲಿ ತರುವುದು ಕಷ್ಟವಾಗುತ್ತದೆ. **ಮಾರಿಯೋ ಪೈ** ಹಾಗೂ **ಲ್ಯಾಂಬರ್ಸ್** ಅವರು ಊರುಗಳ ಉಗಮಕ್ಕೆ ಕಾರಣಗಳನ್ನು ಸವಿಸ್ತಾರವಾಗಿ ವಿವರಿಸುತ್ತಾ ಅದರ ಜೊತೆಯಲ್ಲಿ ಹಲವು ವರ್ಗೀಕರಣದ ತತ್ವಗಳನ್ನು ನೀಡಿದ್ದಾರೆ.

1) ಚಾರಿತ್ರಿಕ ನಾಮಗಳು
2) ಮತೀಯ ನಾಮಗಳು
3) ಪ್ರಾಣಿ ನಾಮಗಳು
4) ವ್ಯಕ್ತಿ ನಾಮಗಳು
5) ಜನಾಂಗ ನಾಮಗಳು
6) ಪುರಾತನ ನಾಮಗಳ ಪುನರಾವರ್ತನೆ

7) ಸಸ್ಯ ಹಾಗೂ ಲೋಹನಾಮಗಳ ಪ್ರತೀಕರಣ

8) ಭಾವನಾಮಗಳ ಆಧಾರವಾಗುಳ್ಳ ಹೆಸರುಗಳು

9) ಸಾಹಿತ್ಯ ಹಾಗೂ ಕಲ್ಪನೆಯಿಂದ ಸ್ವೀಕರಿಸಿದ ಹೆಸರುಗಳು

10) ಸುಖ, ದುಃಖ ಸೂಚಕ ನಾಮಗಳು

11) ಪ್ರಮಾದ ಲಬ್ಧ ನಾಮಗಳು

12) ಹಾಸ್ಯನಾಮಗಳು

ಹೀಗೆ 12 ವರ್ಗಗಳನ್ನಾಗಿ ವಿಭಾಗಿಸಿರುವುದನ್ನು ಕಾಣಬಹುದಾಗಿದೆ.

ಕೆಲವು ಸಾಧ್ಯವಾದಷ್ಟು ಮಟ್ಟಿಗೆ ಪೂರ್ಣ ಪ್ರಮಾಣದ ವರ್ಗೀಕರಣವಲ್ಲದಿದ್ದರೂ ಕೂಡ ಸ್ಥಳನಾಮಗಳ ಉಗಮಗಳ ಬಗೆಗೆ ಬೆಳಕು ಚೆಲ್ಲುವಲ್ಲಿ ಸಹಕಾರಿಯಾಗಿವೆ. American Place Names ಗ್ರಂಥವನ್ನು ರಚಿಸಿದ **ಸ್ಟೆನಾರ್ಟ್, ಜಾರ್ಜ್ ಆರ್.ಸ್ಟಿವರ್ಟ್** ಎಂಬ ವಿದ್ವಾಂಸರು ಸ್ಥಳನಾಮಗಳನ್ನು ಹತ್ತು ವಿಧಗಳಾಗಿ ವಿಂಗಡಿಸಿದ್ದಾರೆ:

1) Descriptive names
2) Association names
3) Possessive names
4) Incident names
5) Commemorative names
6) Commendatory names
7) Coined names
8) Transfer and Shift names
9) Folk Etymology
10) Mistake names

ಜೆ.ಜಿ. ಎಗ್ಲಿಯು 1) Natural names 2) Cultural names ಎಂದು ಬಹಳ ಸಂಕ್ಷಿಪ್ತವಾಗಿ ವರ್ಗೀಕರಿಸಿದ್ದಾರೆ.

ಹೀಗೆ ಕೆಲವು ಪಾಶ್ಚಿಮಾತ್ಯ ವಿದ್ವಾಂಸರು ವರ್ಗೀಕರಣ ವಿಧಾನಗಳನ್ನು ಹೇಳಿದ್ದರೂ ಅವುಗಳಲ್ಲಿ ಸಾದೃಶ್ಯಗಳೇ ಇರುವುದು ಕಂಡುಬರುತ್ತದೆ. ವರ್ಗಗಳ ಶೀರ್ಷಿಕೆಯ ಹೆಸರು ಬೇರೆ ಬೇರೆಯಾದರೂ ವಿವರಣೆಯಲ್ಲಿ ಏಕತಾನತೆ ಕಂಡುಬರುತ್ತದೆ.

ಪಾಶ್ಚಿಮಾತ್ಯ ವಿದ್ವಾಂಸರಂತೆಯೇ ಸ್ಥಳನಾಮಗಳನ್ನು ಅಧ್ಯಯನ ಮಾಡಿದ ಭಾರತೀಯ ವಿದ್ವಾಂಸರೂ ಕೂಡ ಸ್ಥಳನಾಮ ವರ್ಗೀಕರಣವನ್ನು ಮಾಡಿದ್ದಾರೆ. ಭಾಷಾ ವಿಜ್ಞಾನದಲ್ಲಿ ಖ್ಯಾತಿಯನ್ನು ಪಡೆದಿರುವ **ಎಸ್.ಕೆ.ಚಟರ್ಜಿ**ಯವರು ಸ್ಥಳನಾಮಗಳನ್ನು ಐದು ವಿಧವಾಗಿ ವಿಂಗಡಿಸಿದ್ದಾರೆ:

1) ಬುಡಕಟ್ಟು ಅಥವಾ ಜಾತಿಯ ಹೆಸರುಗಳಿಂದ
2) ನೈಸರ್ಗಿಕ ಲಕ್ಷಣಗಳ ಹೆಸರಿನಿಂದ
3) ಧಾರ್ಮಿಕ ಸಂಗತಿಗಳಿಂದ
4) ವ್ಯಕ್ತಿ ಅಥವಾ ಘಟನೆಗಳ ನಾಮದಿಂದ
5) ಹಳೆಯ ಹೆಸರುಗಳ ನಾಮದಿಂದ

ಎಸ್.ಕೆ.ಚಟರ್ಜಿಯವರಂತೆಯೇ ಸ್ಥಳನಾಮಗಳ ಬಗ್ಗೆ ವ್ಯಾಪಕ ಸಂಶೋಧನೆ ನಡೆಸಿ, ವಿಶಿಷ್ಟ ಸ್ಥಾನವನ್ನು ಪಡೆದಿರುವ **ಎಚ್.ಡಿ.ಸಂಕಾಲಿ**ಯ ಅವರು 7 ವರ್ಗಗಳನ್ನು ನಿರೂಪಿಸಿದ್ದಾರೆ:

1) ವ್ಯಕ್ತಿನಾಮಗಳಿಂದ
2) ಘಟನೆಗಳಿಂದ
3) ಸಂಪ್ರದಾಯ ಹಾಗೂ ಮೌಢ್ಯಗಳಿಂದ
4) ಭೌಗೋಳಿಕ ಲಕ್ಷಣಗಳಿಂದ
5) ಹೂ–ಹಣ್ಣು, ಮರ, ಬೆಳೆಗಳಿಂದ
6) ಪ್ರಾಣಿ–ಪಕ್ಷಿಗಳಿಂದ
7) ಹಳೆಯ ಹೆಸರುಗಳಿಂದ

ಹೀಗೆ ಒಟ್ಟು 7 ವರ್ಗಗಳಾಗಿ ವಿಭಾಗಿಸಿದ್ದಾರೆ.

ಕೇಂದ್ರ ಶಾಸನ ಇಲಾಖೆಯ ಸಂಶೋಧಕರಾದ **ಎಸ್.ಎಸ್.ರಾಮಚಂದ್ರಮೂರ್ತಿ**ರವರು ಗ್ರಾಮ ನಾಮಗಳನ್ನು 9 ವರ್ಗಗಳನ್ನಾಗಿ ಮಾಡಿದ್ದಾರೆ:

1) ಭೌತಿಕ ಹಾಗೂ ಭೌಗೋಳಿಕ ಲಕ್ಷಣಗಳಿಂದ
2) ಸಸ್ಯಲೋಕದ ಹೆಸರುಗಳಿಂದ
3) ಪ್ರಾಣಿ ಜಗತ್ತಿನ ಹೆಸರುಗಳಿಂದ
4) ಧಾರ್ಮಿಕ ಸಂಗತಿಗಳ ಹೆಸರುಗಳಿಂದ

5) ಜನಾಂಗಿಕ ಅಭಿದಾನಗಳಿಂದ

6) ಚಾರಿತ್ರಿಕ ವೈಶಿಷ್ಟ್ಯಗಳಿಂದ

7) ವ್ಯಾಪಾರ ವಾಣಿಜ್ಯದ ಸಂಗತಿಗಳಿಂದ

8) ಪ್ರಸಿದ್ಧ ನಗರಗಳ ನಾಮಗಳಿಂದ

9) ಸಂಕೀರ್ಣ ವಿಷಯಗಳಿಂದ

ಸಂಕೀರ್ಣ ವಿಷಯಗಳ ವರ್ಗಕ್ಕೆ ಒಂದೇ ಹೆಸರಿನ ಹಳೆಯ ಮತ್ತು ಹೊಸ ಸ್ಥಳಗಳನ್ನು ಹಾಗೂ ನಾನಾ ಗಾತ್ರಗಳುಳ್ಳ ಗ್ರಾಮಗಳನ್ನು, ಲೋಹ, ವರ್ಣ, ಆಹಾರ ಪದಾರ್ಥ ಮತ್ತು ಭಾವನಾ ಪ್ರಧಾನ ಅಭಿದಾನಗಳನ್ನು ಸೇರಿಸಿರುವುದರಿಂದ ವ್ಯಾಪ್ತಿಯು ನ್ಯೂನ್ಯತೆಗೆ ಒಳಗಾಗಿದೆ. ಕ್ಲುಪ್ತಾವಧಿಯ ಶಾಸನೋಕ್ತ ಹೆಸರುಗಳು ಈ ವರ್ಗೀಕರಣಕ್ಕೆ ಆಧಾರವಾಗಿರುವುದರಿಂದ ದೋಷ ಉಂಟಾಗಿದೆ.

ಕೆ.ಪಿ.ಪದ್ಮ ಮೆನನ್ ಇವರು 'Some place names of malbar' ಲೇಖನದಲ್ಲಿ ಸ್ಥಳನಾಮಗಳನ್ನು ಹತ್ತು ವಿಧಗಳಾಗಿ ವಿಂಗಡಿಸಿದ್ದಾರೆ:

1) Topographical condition
2) Artificial condition
3) Native soil products
4) Temple
5) Ancient military holds
6) Culture and religious
7) Incidental
8) Trade culture
9) Profession of the people
10) Accidental Phenomena

'Place names of Selam district' ಎಂಬ ಲೇಖನದಲ್ಲಿ **ರಾಮಚಂದ್ರ ಚೆಟ್ಟಿಯಾರ್** ಇವರು ಸ್ಥಳನಾಮಗಳನ್ನು 6 ವರ್ಗಗಳಾಗಿ ವಿಂಗಡಿಸಿದ್ದಾರೆ.

1) Hill area
2) Water Sources

3) Plains
4) Civic life
5) Agriculture
6) Religion

ಹೀರಾಲಾಲ್ ಅವರು 'Indian Antiquary'ಯಲ್ಲಿ 3 ರೀತಿಯಾಗಿ ವಿಂಗಡಿಸಿದ್ದಾರೆ:

1) ಮರಗಳ ಬೆಳವಣಿಗೆಗಿಂತ ಮುಂಚಿತವಾಗಿ ಇಟ್ಟ ಹೆಸರುಗಳು
2) ಪ್ರಾಣಿ ಪಕ್ಷಿಗಳಿಂದ ಬಂದ ಹೆಸರುಗಳು
3) ದೇವತೆಗಳಿಂದ ಬಂದ ಹೆಸರುಗಳು

ಇವರ ವರ್ಗೀಕರಣದಲ್ಲಿ ಸಾಮಾಜಿಕ, ಚಾರಿತ್ರಿಕ ಇನ್ನೂ ಮೊದಲಾದ ವೈವಿಧ್ಯತೆಯಿಂದ ಕೂಡಿರುವ ಸ್ಥಳನಾಮಗಳ ಉಗಮದ ಬಗ್ಗೆ ವಿಭಾಗಿಸಿಲ್ಲ.

"ಕರ್ನಾಟಕದ ಪ್ರಖ್ಯಾತ ಸಂಶೋಧಕರಾದ ಶಂಬಾಜೋಶಿಯವರು ರೂಪಿಸಿರುವ ವರ್ಗೀಕರಣ ಅವರ ಆಳವಾದ ಅಧ್ಯಯನದ ಫಲವಾಗಿ ರೂಪುಗೊಂಡಿದೆ. ಇವರು ಹೆಸರುಗಳ ಮೊದಲ ಭಾಗದಿಂದ ಸೂಚಿತವಾಗುವ ಗುಂಪುಗಳನ್ನು ಉದಾಹರಣೆ ಸಹಿತ ಪಟ್ಟಿ ಮಾಡಿದ್ದಾರೆ.

1) ಪ್ರಾಣಿಗಳಿಂದ
2) ಗಿಡಗಂಟೆಗಳಿಂದ
3) ದೇಹದ ಅಂಗಾಂಗಗಳಿಂದ
4) ಬಳಗದವರಿಂದ
5) ಮನೆಗಳಿಂದ
6) ದಿನಸುಗಳಿಂದ
7) ಬಣ್ಣಗಳಿಂದ
8) ಹರಳುಗಳಿಂದ
9) ಬಂಗಾರದಿಂದ
10) ಅಂಕೆಗಳಿಂದ
11) ಗ್ರಹಾದಿಗಳಿಂದ
12) ಮಳೆ, ಮಿಂಚು ಮೊದಲಾದವುಗಳಿಂದ

13) ದಿಕ್ಕುಗಳಿಂದ

14) ನೆಲದಿಂದ

15) ಬೇಸಾಯದಿಂದ

16) ಕಾಲದಿಂದ

17) ಊರುಗಳ ಗಾತ್ರದಿಂದ

18) ಕೂಡಿಕೆಗಳಿಂದ

19) ದೇವತಾದಿಗಳಿಂದ

20) ವ್ಯವಸಾಯ, ಉದ್ಯೋಗ, ಅಧಿಕಾರಿಗಳಿಂದ

21) ಜನಗಳಿಂದ

22) ವ್ಯಕ್ತಿಗಳಿಂದ"[5]

ಈ ಪಟ್ಟಿ ತುಂಬಾ ಉದ್ದವಾಗಿ ಕಂಡುಬಂದರೂ ಬೇರೆ ವರ್ಗೀಕರಣಗಳಿಗಿಂತ ಹೆಚ್ಚು ವೈಜ್ಞಾನಿಕವಾದ ವರ್ಗೀಕರಣ ಎನ್ನಬಹುದು.

2) ದ್ವಿತೀಯ ಘಟಕಾಧಾರಿತ ವರ್ಗೀಕರಣ :-

ಸಾಮಾನ್ಯವಾಗಿ ಒಂದು ಊರಿನ ಹೆಸರಿನಲ್ಲಿ 2 ಘಟಕಗಳಿರುತ್ತವೆ.

1) ವಿಶೇಷ ಘಟಕ

2) ಸಾಮಾನ್ಯ ಘಟಕ

ಇವುಗಳನ್ನು ಪ್ರಥಮ ಹಾಗೂ ದ್ವಿತೀಯ ಘಟಕಗಳು ಎಂದೂ ಸಹ ಕರೆಯುತ್ತಾರೆ. "ಒಂದು ಊರನ್ನು ಮತ್ತೊಂದು ಊರಿನಿಂದ ಪ್ರತ್ಯೇಕಿಸಿ ತೋರಿಸುವ ಘಟಕವೇ ವಿಶೇಷ ಘಟಕಗಳು. ಹಲವು ಊರುಗಳಿಗೆ ದ್ವಿತೀಯ ಘಟಕಗಳು ಸಾಮಾನ್ಯವಾಗಿದ್ದರೂ ಸಹ ಆ ಊರಿನ ಸ್ಥಿತಿ-ಗತಿ ಲಕ್ಷಣಗಳನ್ನು ಉತ್ತರ ಘಟಕಗಳು ಅಭಿವ್ಯಕ್ತಿಗೊಳಿಸುತ್ತವೆ. ವಿಶೇಷ ಘಟಕಗಳಂತೆಯೇ ಸಾಮಾನ್ಯ ಘಟಕಗಳನ್ನು ವರ್ಗೀಕರಣ ಮಾಡಬಹುದು. ದೇ.ಜವರೇಗೌಡರವರು ಸಾಮಾನ್ಯ ಘಟಕಗಳನ್ನು 10 ವರ್ಗಗಳನ್ನಾಗಿ ವಿಭಾಗಿಸಿದ್ದಾರೆ. ಅವುಗಳೆಂದರೆ :

1) ವಸತಿಗಳನ್ನು ಸೂಚಿಸುವ ಘಟಕಗಳು

2) ತಿಟ್ಟು, ಬೆಟ್ಟ, ಕಾಡು, ಕಲ್ಲುಗಳನ್ನು ಸೂಚಿಸುವ ಘಟಕಗಳು

3) ಜಲಸೂಚಕ ಘಟಕಗಳು

4) ಭೌಗೋಳಿಕ ಲಕ್ಷಣಗಳನ್ನು ಸೂಚಿಸುವ ಘಟಕಗಳು

5) ಜಾತಿ, ಕುಲಧರ್ಮ ಸೂಚಕ

6) ವ್ಯಾಪಾರ ಕೇಂದ್ರವನ್ನು ಹೇಳುವಂಥವು

7) ಸೈನಿಕರಿಗೆ ಸಂಬಂಧಿಸಿದಂತಹವು

8) ಸಸ್ಯವಾಚಿ

9) ಪ್ರಾಣಿವಾಚಿ

10) ಸಂಕೀರ್ಣ ಘಟಕಗಳು" [6]

ಡಾ.ಎಂ.ಎಂ.ಕಲಬುರ್ಗಿಯವರು **'ಕನ್ನಡ ನಾಮವಿಜ್ಞಾನ'**ದಲ್ಲಿ 5 ಬಗೆಯ ಸ್ಥಳನಾಮಗಳನ್ನು ವರ್ಗೀಕರಿಸಿದ್ದಾರೆ:

1) ನಿಸರ್ಗವಾಚಿ

2) ನಿರ್ಮಾಣವಾಚಿ

3) ಜನಾಂಗವಾಚಿ

4) ವ್ಯಕ್ತಿವಾಚಿ

5) ಆದರ್ಶವಾಚಿ

ಕನ್ನಡದಲ್ಲಿ ಸ್ಥಳನಾಮಗಳ ಬಗೆಗೆ ಮೊಟ್ಟಮೊದಲ ಸಂಶೋಧನಾ ನಿಬಂಧವನ್ನು ರಚಿಸಿ ಡಾಕ್ಟರೇಟ್ ಪದವಿಯನ್ನು ಪಡೆದವರು **ಡಾ.ರಘುಪತಿಭಟ್ ಕೆಮ್ತೂರ್**. ಇವರ **'ತುಳುನಾಡಿನ ಸ್ಥಳನಾಮಗಳು'** ಎಂಬ ಸಂಶೋಧನಾ ನಿಬಂಧದಲ್ಲಿ ಸ್ಥಳನಾಮಗಳನ್ನು 2 ಪ್ರಧಾನ ವರ್ಗೀಕರಣಗಳನ್ನು ಮಾಡಿ ಅವುಗಳಲ್ಲಿಯೇ ಒಳ ವಿಭಾಗಗಳಾಗಿ ಈ ಕೆಳಕಂಡಂತೆ ವರ್ಗೀಕರಿಸಿದ್ದಾರೆ.

ಅ. ಪ್ರಾಕೃತಿಕ ಹೆಸರುಗಳು

1) ಜಲವಾಚಕ

2) ಜಲವಾಚಕ ಸಂಬಂಧಿ ವಾಚಕ

3) ಉನ್ನತ ಭೂವಾಚಕಗಳು

4) ನಿಮ್ನ ಭೂ ವಾಚಕಗಳು

5) ಶಿಲಾ ವಾಚಕಗಳು

6) ಕ್ಷೇತ್ರ ವಾಚಕಗಳು (ಗದ್ದೆ, ಹೊಲ ಮತ್ತು ಭಾಗಗಳೂ ಸೇರಿದಂತೆ)

7) ಬೆಳೆ ತರಕಾರಿಗಳ ಹೆಸರುಗಳು

8) ಅರಣ್ಯ, ಬನ, ಪೊದೆ

9) ಸಸ್ಯವರ್ಗ

10) ಪ್ರಾಣಿ–ಪಕ್ಷಿ ವರ್ಗ

11)ದಿಕ್ಕು–ದೆಸೆಗಳು (ದಿಕ್ಕು ದೆಸೆಗಳು, ಸ್ಥಳದ ಸನ್ನಿವೇಶ, ಮೇಲೆ–ಕೆಳಗು, ಎಡ–ಬಲ ಸೇರಿದಂತೆ)

12)ವಿಲಕ್ಷಣ ಭೂ ಸ್ಥಿತಿಯಿಂದ ನಿಷ್ಪನ್ನವಾದ ಹೆಸರುಗಳು

13)ಮಾರ್ಗವಾಚಕಗಳು

14)ಸಾಪೇಕ್ಷ ಸ್ಥಳನಾಮಗಳು (ಕಾಲಸಂಬಂಧಿ, ಗಾತ್ರಸಂಬಂಧಿ, ಎತ್ತರ–ತಗ್ಗು, ಸಂಖ್ಯಾ ಸಂಬಂಧಿ)

15)ಮಣ್ಣು (ಗುಣ, ಬಣ್ಣ, ತೇವಾಂಶ ಸೇರಿದಂತೆ)

16)ಭೌತವಸ್ತು (ಗಾಳಿ, ಬೆಳಕು, ಸೂರ್ಯ, ಚಂದ್ರ, ಆಕಾಶ ಸೇರಿದಂತೆ)

17)ಬಣ್ಣ

ಆ. ಸಾಂಸ್ಕೃತಿಕ ಹೆಸರುಗಳು

1) ವ್ಯಕ್ತಿನಾಮಗಳು (ಅಂಕಿತ, ಗಂಡು, ಹೆಣ್ಣು ಸೇರಿದಂತೆ)

2) ಕುಲನಾಮ (ಜಾತಿವಾಚಕ, ವ್ಯಕ್ತಿವಾಚಕ)

3) ಸಂಬಂಧ ವಾಚಕ

4) ಜನಾಂಗ ವಾಚಕ

5) ದೈವವಾಚಕ

6) ಪೂಜೆ, ಪೂಜಾವಿಧಿ, ಪೂಜಾ ಪರಿಕರ ಇತ್ಯಾದಿ

7) ವಾಸ್ತವ್ಯ ಸೂಚಕ

8) ವಸ್ತು ಸೂಚಕ

9) ವ್ಯಾಪಾರ, ಉದ್ದಿಮೆ ಇತ್ಯಾದಿ

10) ಹವ್ಯಾಸ–ಕಲೆ, ಮನರಂಜನೆ

11) ಚಾರಿತ್ರಿಕ ಹೆಸರುಗಳು (ಮನೆತನ, ಪದವಿ, ಆಡಳಿತ, ಕಂದಾಯ)

ಈ ವರ್ಗೀಕರಣವನ್ನು ಗಮನಿಸಿದಾಗ ವಿಸ್ತೃತವಾದ, ವ್ಯಾಪಕವಾದ ಮತ್ತು ವೈಜ್ಞಾನಿಕವಾದ ರೀತಿಯ ವರ್ಗೀಕರಣ ಎನಿಸುತ್ತದೆ. ಇದು ತುಳುನಾಡು ಸ್ಥಳನಾಮಗಳನ್ನು

ಅನುಸರಿಸಿದ ವರ್ಗೀಕರಣವಾದರೂ ಕೂಡ ತಕ್ಕ ಮಟ್ಟಿಗೆ ಕರ್ನಾಟಕ ಸ್ಥಳನಾಮಗಳ ಅಧ್ಯಯನವನ್ನಾಧರಿಸಿ ಇಟ್ಟುಕೊಳ್ಳಬಹುದು. ಸ್ಥಳನಾಮ ವಿದ್ವಾಂಸರು, ಸಂಶೋಧಕರು ಇವರ ವರ್ಗೀಕರಣ ವಿಧಾನವನ್ನು ಅನುಸರಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ತೆಲುಗು–ಕನ್ನಡದ ದ್ವಿಭಾಷಿಕ ಪರಿಸರವನ್ನು ಅನುಲಕ್ಷಿಸಿ ಕೈಗೊಂಡ ಸ್ಥಳನಾಮ ಅಧ್ಯಯನದಲ್ಲಿ **ಡಾ.ಜಾಜಿ ದೇವೇಂದ್ರಪ್ಪನವರು** ಪ್ರಮುಖರು. ಇವರು **'ಆಂಧ್ರ–ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು'** ಎಂಬ ನಿಬಂಧದಲ್ಲಿ ಸ್ಥಳನಾಮಗಳನ್ನು ಮುಖ್ಯವಾಗಿ 3 ವಿಧಗಳಾಗಿ ವರ್ಗೀಕರಿಸಿಕೊಂಡು, ಅವುಗಳಲ್ಲಿಯೇ ಒಳ ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಅವು ಈ ಕೆಳಕಂಡಂತಿವೆ.

1. ಪ್ರಾಕೃತಿಕ ಸ್ಥಳನಾಮಗಳು

1) ಜಲವಾಚಿ
2) ಶಿಲಾವಾಚಿ
3) ಎತ್ತರದ ಭೂ ಪ್ರದೇಶ
4) ಬಯಲು ಪ್ರದೇಶ
5) ಸಸ್ಯ, ಗಿಡ, ಮರ ಇತ್ಯಾದಿ
6) ಕ್ಷೇತ್ರವಾಚಕ
7) ಲೋಹ ಸಂಪತ್ತು
8) ವರ್ಣ
9) ಇತರೆ

2. ಸಾಂಸ್ಕೃತಿಕ ಸ್ಥಳನಾಮಗಳು

1) ವ್ಯಕ್ತಿವಾಚಿ
2) ದೈವವಾಚಿ
3) ಪ್ರಾಣಿ, ಪಕ್ಷಿ
4) ವೃತ್ತಿ, ಜಾತಿ
5) ಪಟ್ಟಣ, ನಗರ, ಬೀದಿ

3. ಸಂಕೀರ್ಣ

ಹೀಗೆ ಅನೇಕ ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ವಿದ್ವಾಂಸರೆಲ್ಲರೂ ಕೂಡ ವರ್ಗೀಕರಣದ ಮಾದರಿಗಳನ್ನು ಸೂಚಿಸಿದ್ದಾರೆ. ದೇಶದಿಂದ ದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ವಿಭಿನ್ನತೆ ಇರುವುದರಿಂದ ಇಂತಹದ್ದೇ ವರ್ಗೀಕರಣವೆಂದರೂ ಪ್ರಾದೇಶಿಕತೆಗಳಿಗನುಗುಣವಾಗಿ ಯಾವ ವಿದ್ವಾಂಸರೂ ಏಕ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದಿಲ್ಲ.

ನಮ್ಮ ಕನ್ನಡ ವಿದ್ವಾಂಸರು ನೀಡಿದ ವರ್ಗೀಕರಣದಲ್ಲಿಯೇ ಅನೇಕ ರೀತಿಯ ಭಿನ್ನತೆಯನ್ನು ಕಾಣಲು ಸಾಧ್ಯವಾದರೆ ಇನ್ನು ಪಾಶ್ಚಿಮಾತ್ಯರ ವರ್ಗೀಕರಣದ ಮಾದರಿ ಒಪ್ಪಲು ಎಷ್ಟು ಸಮಂಜಸ. "ಮೈಸೂರು ಜಿಲ್ಲೆಯಲ್ಲಿ ಸಿಗದ, ಬೇರೆ ಜಿಲ್ಲೆಗಳಲ್ಲಿ ಸಿಗುವ ಘಟಕಗಳು ಸಾಕಷ್ಟಿವೆ. ಉದಾಹರಣೆಗೆ ದುರ್ಗ, ಏರು, ದೊಣೆ, ಕುಂಟೆ, ವಾರ, ಕಾಲ, ಮನೆ ಇತ್ಯಾದಿ ಇಡೀ ಕರ್ನಾಟಕದ ಊರುಗಳ ದ್ವಿತೀಯ ಘಟಕಗಳನ್ನು ಅಧ್ಯಯನದ ಪರಿಧಿಯಲ್ಲಿ ತಂದು ಕೊಂಡಾಗ ಮಾತ್ರ ಈ ಭಾಗ ಪೂರ್ಣವಾಗುತ್ತದೆ"[7] ಎಂಬ ದೇಜಗೌ ಅವರ ಮಾತು ವರ್ಗೀಕರಣಕ್ಕೆ ಇರುವ ನಮ್ಯತೆಯ (Flexibility) ಗುಣವನ್ನು ತೋರಿಸುತ್ತದೆ.

ಇಷ್ಟಾದರೂ ಕೂಡ ವರ್ಗೀಕರಣವನ್ನು ಇದೇ ಅಂತಿಮ ವರ್ಗೀಕರಣ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳಿಂದಾಗಿ ಹಾಗೂ ಅರ್ಥಬಾಹುಳ್ಯದ ವೈವಿಧ್ಯತೆಗಳಿಂದ ಎಷ್ಟೋ ಹೆಸರುಗಳು ಹೊರಗುಳಿಯುವ ಸಾಧ್ಯತೆ ಇರುತ್ತದೆ. ಆದ್ದರಿಂದ ಇದಕ್ಕೆ ಒಂದು ಸಾಮಾನ್ಯ ವರ್ಗೀಕರಣದ ನಿಯಮವನ್ನು ರೂಪಿಸಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾಗಿದೆ. ಇದಕ್ಕೆ ಮೊದಲು ಸ್ಥಳನಾಮಗಳ ರಾಚನಿಕ ಸ್ವರೂಪವನ್ನು ನೋಡಿದಾಗ ವರ್ಗೀಕರಣ ಮಾಡಲು ಸಹಾಯಕವಾಗಬಹುದೆಂದು ಭಾವಿಸಬಹುದು.

3.3 ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮ ವರ್ಗೀಕರಣ :

ಗ್ರಾಮನಾಮಗಳನ್ನು ಗುರುತಿಸಲು ಮಾನವ ನಿಸರ್ಗದ ವೈವಿಧ್ಯಮಯ ಅಂಶಗಳ ಜೊತೆಗೆ ತಾನೇ ರೂಪಿಸಿರುವ ಸಾಂಸ್ಕೃತಿಕ ಜಗತ್ತಿನ ಒಳಹೊರ ಅಂಶಗಳನ್ನು ಬಳಸಿಕೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗಾಗಲೇ ಗಮನಿಸಿದಂತೆ ಸ್ಥಳನಾಮಗಳ ಅಧ್ಯಯನಶೀಲರಾದ ಹಲವಾರು ವಿದ್ವಾಂಸರು ವಿವಿಧ ಬಗೆಯ ವರ್ಗೀಕರಣ ಮಾಡಿದ್ದಾರೆ.

ಆದರೂ ಅಧ್ಯಯನದ ಅನುಕೂಲತೆಗಾಗಿ ಚನ್ನಪಟ್ಟಣ ತಾಲ್ಲೂಕು ಗ್ರಾಮನಾಮಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕಗಳ ಬಲದಿಂದ ಬೇರೆ ಬೇರೆಯಾಗಿ ನೋಡಬಹುದು.

3.3.1 ನಿರ್ದಿಷ್ಟಕ್ಕನುಗುಣವಾಗಿ:

1. ನಿಸರ್ಗವಾಚಕ ಸ್ಥಳನಾಮಗಳು

ಅ) ಜಲವಾಚಿ

ಆ) ಪ್ರಾಣಿವಾಚಿ

ಇ) ಸಸ್ಯವಾಚಿ

ಈ) ಭೌಗೋಳಿಕ ಲಕ್ಷಣ ಸೂಚಿ

2. ಸಾಂಸ್ಕೃತಿಕ ಸ್ಥಳನಾಮಗಳು

ಅ) ವೃತ್ತಿವಾಚಿ

ಆ) ಸಮುದಾಯವಾಚಿ

ಇ) ವ್ಯಕ್ತಿವಾಚಿ

ಈ) ದೈವವಾಚಿ

3.3.2 ವಾರ್ಗಿಕಕ್ಕನುಗುಣವಾಗಿ:

ಅ) ನಿಸರ್ಗವಾಚಿ

ಆ) ವಸತಿವಾಚಿ

ಇ) ನಿರ್ಮಾಣವಾಚಿ

3.3.3 ಸಂಕೀರ್ಣ ಸ್ಥಳನಾಮಗಳು:

ಅ) ಸಾಪೇಕ್ಷಯುಕ್ತ

ಆ) ವಿಶೇಷಣಯುಕ್ತ

ಇ) ವರ್ಣಸೂಚಕ

3.3.1. ನಿರ್ದಿಷ್ಟಕ್ಕನುಗುಣವಾಗಿ

1. ನಿಸರ್ಗವಾಚಕ ಸ್ಥಳನಾಮಗಳು

ಪ್ರತಿಯೊಂದು ವಸ್ತುವು ಪಂಚಭೂತಗಳಿಂದಾದವು. ಪಂಚಭೂತಗಳು ಇರುವುದು ಈ ನಿಸರ್ಗದಲ್ಲಿಯೇ. ಆದ್ದರಿಂದ ಆದಿ ಮಾನವನು ಇವುಗಳನ್ನು ದೈವವೆಂದೇ ಬಗೆದು ನಿಸರ್ಗವನ್ನು ಪೂಜಿಸುತ್ತಿರುವುದು ಗೊತ್ತಿರುವ ಸಂಗತಿ. ಅಷ್ಟೇ ಅಲ್ಲದೆ ಮಾನವ ಬದುಕನ್ನು ಪ್ರಕೃತಿಯ ಮಡಿಲಿನಲ್ಲಿ ಕಟ್ಟಿಕೊಂಡಿದ್ದಾನೆ. ತನ್ನ ಬದುಕನ್ನು ಕಟ್ಟಿಕೊಳ್ಳಲು ನೆರವಾದ ತನ್ನ ಸುತ್ತಮುತ್ತಲಿನ ನಿಸರ್ಗದ ವಸ್ತುಗಳಾದ ಗಾಳಿ, ಬೆಳಕು, ನೀರು, ಮರ, ಗಿಡ, ಬೆಟ್ಟ-ಗುಡ್ಡ, ಕಾಡು-ಕಣಿವೆ, ಕಲ್ಲು-ಬಂಡೆ, ನದಿ ಮೊದಲಾದ ನೈಸರ್ಗಿಕ ವಸ್ತುಗಳ ಹೆಸರನ್ನೇ, ಜನ ವಸತಿ ಆರಂಭಿಸಿದಾಗ ಆ ವಸ್ತುಗಳ ನಾಮಗಳನ್ನೇ ಊರುಗಳಿಗೂ ಅನ್ವಯಿಸುವ ಪದ್ಧತಿ ರೂಢಿಸಿಕೊಂಡು ಬಂದಿರಬೇಕು. ಆ ನಿಸರ್ಗವಾಚಿಯಾದ ವಸ್ತುಗಳ ಹೆಸರುಗಳು ಸ್ಥಳನಾಮಗಳ ನಿರ್ದಿಷ್ಟ ಮತ್ತು ವಾರ್ಗಿಕಗಳೆರಡರಲ್ಲೂ ಕಾಣಿಸಿಕೊಂಡಿರಬಹುದು.

ಅ. ಜಲವಾಚಿ

ಜೀವ ವಿಕಾಸದ ಇತಿಹಾಸದಲ್ಲಿ ಜಲಕ್ಕೆ ತುಂಬಾ ಪ್ರಾಮುಖ್ಯತೆ ಇದೆ. ಏಕಕೋಶ ಜೀವಿ ಅಮಿಬಾದಿಂದ ಮಾನವನವರೆಗೆ ಜೀವ ವಿಕಾಸದ ವಿವಿಧ ಹಂತಗಳಲ್ಲಿ ಜಲ ಅತೀ ಅವಶ್ಯಕವಾಗಿ ಬಂದಿದೆ. ಆಹಾರದ ಅನ್ವೇಷಣೆಗಾಗಿ ಸದಾ ಸಂಚಾರಿಯಾದ ಆದಿ ಮಾನವ ಕಾಲಾನಂತರದಲ್ಲಿ ಅಲೆಮಾರಿ ಜೀವನಕ್ಕೆ ತಿಲಾಂಜಲಿ ನೀಡಿ; ಒಂದೆಡೆ ನಿಂತು, ಕೃಷಿ ಸಂಸ್ಕೃತಿಯಲ್ಲಿ ತನ್ನನ್ನು ತೊಡಗಿಸಿಕೊಂಡಾಗ ಜಲ ಮುಖ್ಯ ಎನಿಸಿರಬೇಕು. ಆ ಕಾರಣದಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡಿರಬೇಕು. ತನ್ನ ಅನುಕೂಲಕ್ಕಾಗಿ ಹರಿಯುತ್ತಿದ್ದ ನದಿಗೆ ಕೆರೆ ಕಟ್ಟೆಯನ್ನು ಕಟ್ಟಿ ಜಲ ಸಂಗ್ರಹ ಮಾಡುವ ಕಲೆಯನ್ನು ರೂಢಿಸಿಕೊಂಡಿರಬೇಕು. ತನ್ನ ಜೀವ ಮತ್ತು ಜೀವನಕ್ಕೆ ಜೀವಜಲವಾದ ಇದನ್ನು ತಾನು ನೆಲೆ ನಿಂತ ಸ್ಥಳಗಳಿಗೂ ಅನ್ವಯಿಸಿ ಕರೆಯುವುದನ್ನು ರೂಢಿಸಿಕೊಂಡಿರಬೇಕು. ಆದ್ದರಿಂದಲೇ ಸ್ಥಳನಾಮದ ನಿರ್ದಿಷ್ಟ ಮತು ವಾರ್ಗಿಕದ ಭಾಗಗಳಲ್ಲಿ ಈ ಜಲವಾಚಿಯಾದ ನೀರು, ನದಿ, ಹೊಳೆ, ಕೆರೆ, ತೊರೆ, ಆಲ, ಉದಕ ಮೊದಲಾದವು ಕಾಣಿಸಿಕೊಂಡಿವೆ. ಜಲವಾಚಿ ಪದಗಳು ವಾರ್ಗಿಕ ಭಾಗದಲ್ಲಿ ಹೆಚ್ಚಾಗಿ ಕಂಡುಬಂದರೆ, ನಿರ್ದಿಷ್ಟ ಭಾಗದಲ್ಲಿ ಅತಿವಿರಳವಾಗಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಾಣಿಸಿಕೊಂಡಿವೆ. ಉದಾಹರಣೆ: ತೊರೆಹೊಸೂರು, ಆಲೂರು, ತೊರೆರಾಮನಹಳ್ಳಿ, ಕೆಂಪಲನತ್ತ, ತೊರೆಬೇಕುಪ್ಪೆ, ತೊರೆಚೆನ್ನೋಹಳ್ಳಿ ಈ ಜಿಲ್ಲೆಯ ಸ್ಥಳನಾಮಗಳಲ್ಲಿ ಬಂದಿವೆ.

ಆ. ಪ್ರಾಣಿವಾಚಿ

ನಿಸರ್ಗದಲ್ಲಿರುವ ವಸ್ತುಗಳನ್ನು 2 ಭಾಗಗಳಾಗಿ ವಿಂಗಡಿಸಬಹುದು. 1) ಜೀವವಾಚಿ 2) ನಿರ್ಜೀವವಾಚಿ. ನಿಸರ್ಗದಲ್ಲಿ ಜೀವವಿರುವ ಪ್ರಾಣಿ, ಪಕ್ಷಿ, ಸಸ್ಯ ಸಂಪತ್ತನ್ನು ಒಂದನೆಯದಾದ ಜೀವವಾಚಿಗೂ ಕಲ್ಲು, ಬಂಡೆ, ಬೆಟ್ಟ, ನದಿ ಇವುಗಳೂ ಕೂಡ ನಿಸರ್ಗದ ಒಂದು ಅಂಗವೇ; ಆದರೆ ಇವುಗಳಿಗೆ ಜೀವ ಇಲ್ಲದೇ ಇರುವುದರಿಂದ ಎರಡನೆ ವರ್ಗದ ನಿರ್ಜೀವವಾಚಿಗಳೆಂದು ಕರೆಯಬಹುದು.

ಪ್ರಾಚೀನ ಮಾನವನು ಗೆಡ್ಡೆ, ಗೆಣಸುಗಳ ಜೊತೆಗೆ ಪ್ರಾಣಿಗಳ ಹಸಿ ಮಾಂಸವನ್ನು ತನ್ನ ಆಹಾರಕ್ಕಾಗಿ ಉಪಯೋಗಿಸುತ್ತಿದ್ದನು. ಆಗಿನಿಂದಲೇ ಮನುಷ್ಯನಿಗೆ ತನ್ನ ಹಸಿವನ್ನು ನೀಗಿಸಿಕೊಳ್ಳಲು ಪ್ರಾಣಿಗಳ ಸಂಪರ್ಕ ಬೆಳೆದಿರಬೇಕು. ನಂತರದಲ್ಲಿ ಕೃಷಿ ಸಂಸ್ಕೃತಿಯನ್ನು ರೂಢಿಸಿಕೊಂಡ ಮೇಲೆ ಪ್ರಾಣಿಗಳ ಉಪಯೋಗವನ್ನು ಪಡೆದುಕೊಂಡು, ನಂತರ ಸಂಘಟಿತ ಜೀವನಕ್ಕೆ ಕಾಲಿರಿಸಿದಾಗ ತನಗೆ ಒಗ್ಗುವ ಪ್ರಾಣಿಗಳನ್ನು ಸಾಕು ಪ್ರಾಣಿಗಳಾಗಿ ಮಾಡಿಕೊಂಡು ಅವುಗಳಿಂದ ಉಪಯೋಗ ಪಡೆದಿರಬೇಕು. ಹೀಗೆ ತನ್ನ ಅವಶ್ಯಕತೆಯನ್ನು ಪೂರೈಸುತ್ತಿದ್ದ ಈ ಸಾಕು ಪ್ರಾಣಿಗಳನ್ನು ದೈವತ್ವದ (ಆಕಳು) ನೆಲೆಯಲ್ಲಿ ನೋಡುವ ಸಂಸ್ಕೃತಿಯನ್ನು ಕಾಲಾನಂತರದಲ್ಲಿ ಬೆಳೆಸಿಕೊಂಡನು. ಹೀಗೆ ಹಸು, ಎಮ್ಮೆ, ಮೇಕೆ, ಕುರಿ, ಬೆಕ್ಕು, ನಾಯಿ ಮೊದಲಾದ ಸಾಕು ಪ್ರಾಣಿಗಳ ಜೊತೆಗೆ ಅತಿಮಾನುಷವೆಂದು ತೋರುವ ಪ್ರಾಣಿಗಳಾದ ಸಿಂಹ, ಹುಲಿ, ಆನೆ, ಕೋತಿ ಮೊದಲಾದ ಪ್ರಾಣಿಗಳ ಹೆಸರನ್ನು ತಮ್ಮ ವಾಸದ ನೆಲೆಗೆ ಅನ್ವಯಿಸಿರಬಹುದು. ಇಂತಹ ಹೆಸರುಗಳು ಚನ್ನಪಟ್ಟಣ ತಾಲ್ಲೂಕಿನಲ್ಲಿ ಸಿಗುತ್ತವೆ.

ಉದಾ : ನಾಯಿದೊಳ್ಳೆ, ನಾಗವಾರ, ನಾಗಪುರ., ಕೋಣನಗುಂಡಿ, ಹುಲಿಕಲ್ಲು, ಆನೆಹೊಸಹಳ್ಳಿ, ನರಿಪುರ, ಕೋಣಸಂದ್ರ, ಉರಗಹಳ್ಳಿ, ಕೊತ್ತಿಪುರ, ಹುಲಿಕೆರೆ, ಗುನ್ನೂರ.

ಇ. ಸಸ್ಯವಾಚಿ

ಮಾನವನ ವಾಸದ ನೆಲೆಗಳು ನಿರ್ಮಾಣವಾಗದೇ ಇದ್ದ ಕಾಲದಲ್ಲಿ ಪ್ರಾಚೀನ ಮಾನವನು ಮರದ ಪೊಟರೆ, ಮರದ ಎಲೆಗಳನ್ನು ಹೊದ್ದುಕೊಳ್ಳುವ ಮೂಲಕ ರಕ್ಷಣೆಯನ್ನು ಪಡೆಯುತ್ತಿದ್ದನು. ಕಾಡುಗಳಲ್ಲಿನ ಮರ, ಗಿಡಗಳ ಹಣ್ಣುಗಳಿಂದ ಆಹಾರವನ್ನು ಪಡೆಯುತ್ತಿದ್ದನು.

ಮಾನವನ ಬೌದ್ಧಿಕಮಟ್ಟ ಬೆಳೆದಂತೆ ಆಹಾರ ಪದಾರ್ಥಗಳನ್ನು ತಾನೆ ಬೆಳೆಯುತ್ತಿದ್ದನು. ಅಲ್ಲದೇ ಸಸ್ಯದ ಮೂಲಕ ಔಷಧಿಗಳ ಬಳಕೆ, ರಕ್ಷಣೆಗಾಗಿ ಮರಗಳ ಬಳಕೆ ಮೊದಲಾದ ಇನ್ನಿತರ

ಕಾರಣಗಳಿಗಾಗಿ ಮರಗಿಡಗಳ ಮೊರೆ ಹೋದನು. ತನಗೆ ಬೇಕಾದ ಮರ ಗಿಡಗಳನ್ನು ಬೆಳೆದು ಅವುಗಳ ಫಲಗಳನ್ನು ಸ್ವೀಕರಿಸಿದ. ನಿರಂತರವಾಗಿ ಮರಗಿಡಗಳ ಬಳಕೆಯಿಂದ ತನ್ನ ನೆಲೆಗೂ ಆ ಮರಗಿಡ ಮತ್ತು ಅವುಗಳ ಉತ್ಪನ್ನಗಳ ಹೆಸರನ್ನು ನೀಡತೊಡಗಿದನು. ತನ್ನ ಅವಶ್ಯಕತೆಯನ್ನು ಹೀಗೆ ಪೂರೈಸುತ್ತಿದ್ದ ಮರಗಿಡಗಳಿಗೆ ಸಹಜವಾಗಿಯೇ ಅವುಗಳ ಮೇಲೆ ಭಕ್ತಿಭಾವ ಬೆಳೆದು, ಮರಗಿಡಗಳು ದೈವತ್ವದ ಸ್ವರೂಪವನ್ನು ಪಡೆದುಕೊಂಡವು. ಅರಳಿ, ಬನ್ನಿ, ತೆಂಗು, ಬೇವು, ತುಳಸಿಗಿಡ ಮೊದಲಾದ ಮರಗಳನ್ನು ಈಗಲೂ ಪೂಜಿಸುತ್ತಿರುವುದನ್ನು ಕಾಣಬಹುದು. ಸಸ್ಯವಾಚಿ ಸ್ಥಳನಾಮಗಳು ಆಯಾ ಪ್ರದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಅಂಶಗಳನ್ನು ತಿಳಿಸುತ್ತವೆ. ಗಿಡ ಮರಗಳ ಬೆಳವಣಿಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗುವ ಸಾಧ್ಯತೆ ಇದೆ. ಇದನ್ನು ಪೂರಕವಾಗಿ ಸ್ಥಳನಾಮಗಳ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಉದಾ: ಅತ್ತಿಗುಪ್ಪೆ	ಅರಳಾಪುರ	ಅರಳಾಸಂದ್ರ
ಎಲೆತೋಟದಹಳ್ಳಿ	ಎಲೆಹೊಸಹಳ್ಳಿ	ಗರಕಹಳ್ಳಿ
ಗೆಂಡೇಮಡು	ತಗಚಗೆರೆ	ಬೇವೂರು
ಮತ್ತಿಕೆರೆ	ಮಾಕಳಿ	ಯಲಿಯೂರು
ಹೊಂಗನೂರು	ಅಕ್ಕೂರು	

ಈ) ಭೌಗೋಳಿಕ ಲಕ್ಷಣ ಸೂಚಿ

ಭೂಮಿಯ ಮೇಲ್ಭಾಗದಲ್ಲಿರುವ ಲಕ್ಷಣವನ್ನು ಹೇಳುವ ಬೆಟ್ಟ, ಗುಡ್ಡ, ಪರ್ವತ, ಗಿರಿ, ಶಿಖರ, ಕೋಡು, ತಿಟ್ಟು ಮೊದಲಾದವು ಭೂ ವೈಶಿಷ್ಟ್ಯವನ್ನು ಹೇಳುವ ಪದಗಳಾಗಿವೆ. ಒಂದು ಊರಿನ ಭೂ ಪ್ರದೇಶದಲ್ಲಿರುವ ಮಣ್ಣು ಸಹ ಈ ಪಟ್ಟಿಯಲ್ಲಿ ಬರುತ್ತದೆ. ಈಗಲೂ ಸಹ ಗಿರಿ, ಶಿಖರಗಳ ಮಡಿಲಿನಲ್ಲಿ ಜೀವನವನ್ನು ಸಾಗಿಸುತ್ತಿರುವ ಬುಡಕಟ್ಟು ಜನಾಂಗಗಳನ್ನು ಕಾಣುತ್ತೇವೆ. ಆದ್ದರಿಂದ ತಾವು ನೆಲೆಸಿದ ನೆಲೆಗೆ ತನ್ನ ಸುತ್ತ ಮುತ್ತಲಿರುವ ಪರ್ವತ, ಬೆಟ್ಟ, ಗುಡ್ಡಗಳ ಹೆಸರನ್ನೇ ಅನ್ವಯಿಸಿರುವುದು ಕಂಡುಬರುತ್ತದೆ. ಮೊದಲೇ ಬೆಟ್ಟ, ಗುಡ್ಡ, ಅರಣ್ಯಗಳಿಂದ ಕೂಡಿರುವ ಚನ್ನಪಟ್ಟಣ ತಾಲ್ಲೂಕಿನಲ್ಲಿ ಇಂಥ ಹೆಸರನ್ನು ತನ್ನ ಸ್ಥಳನಾಮಗಳಲ್ಲಿ ಇಟ್ಟುಕೊಂಡಿರುವುದನ್ನು ಕಾಣಬಹುದು.

ಉದಾ : ಚಿಕ್ಕಮಣ್ಣಗುಡ್ಡೆ, ಸುಣ್ಣಘಟ್ಟ, ಚಿಕ್ಕಬೆಟ್ಟಹಳ್ಳಿ, ಮರಳೇಬೇಕುಪ್ಪೆ, ಗುಡ್ಡೆಹೊಸೂರು, ಪರ್ವತಪುರ, ಬೆಟ್ಟದಾಸಿಪಾಳ್ಯ, ಗುಡ್ಡೆಮಾರನಹಳ್ಳಿ, ಬೆಟ್ಟಹಳ್ಳಿ.

2. ಸಾಂಸ್ಕೃತಿಕ ಸ್ಥಳನಾಮಗಳು

ಸಂಸ್ಕೃತಿ ಜನತೆಯ ಜೀವನದ ವಿಧಾನವೇ ಆಗಿದೆ. ಇದು ಸಂಸ್ಕಾರಗಳಿಂದ ಹುಟ್ಟಿಕೊಂಡಿರುವಂತದ್ದು. ಆಚರಣೆ, ನಂಬಿಕೆ, ಧರ್ಮ, ಮತಶಾಸ್ತ್ರ, ಕಲೆ ಮೊದಲಾದವುಗಳನ್ನು ಮಾನವ ಹಿಂದಿನಿಂದಲೂ ಆಚರಿಸಿಕೊಂಡು ಬರುತ್ತಿದ್ದಾನೆ. ಸಂಸ್ಕೃತಿ ಮಾನವನಲ್ಲಿರುವಂತೆ ಆತ ಊರುಗಳಿಗೆ ಹೆಸರಿಡುವಾಗಲೂ ಇದನ್ನು ತೋರಿಸಿದ್ದಾನೆ ಎಂಬುದಕ್ಕೆ ಸ್ಥಳನಾಮಗಳೇ ಸಾಕ್ಷಿಯಾಗಿವೆ. "ಒಂದು ಕಾಲಕ್ಕೆ ತನ್ನ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿದ ವಸ್ತು, ವ್ಯಕ್ತಿ, ಘಟನೆಗಳನ್ನು, ಧರ್ಮ, ಸಂಸ್ಕೃತಿಯ ಹಿನ್ನೆಲೆಯಲ್ಲಿ ತಾನು ವಾಸಿಸುವ ಸ್ಥಳಗಳಿಗೆ ಹೆಸರಿಸಿ ಮಾನವನು ತನ್ನ ಉತ್ಕಟ ಭಾವನೆಗಳನ್ನು ವ್ಯಕ್ತಪಡಿಸಿದ್ದಾನೆ"[8] ಈ ಮಾತುಗಳು ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳಿಗೂ ಅನ್ವಯಿಸುವಂಥದ್ದಾಗಿದೆ. ಹಲವಾರು ಜನಾಂಗ ಧರ್ಮದವರು ನೆಲೆಸಿ ಸಹಜೀವನ ನಡೆಸುತ್ತಿದ್ದಾರೆ. ಇವರ ವೈಶಿಷ್ಟ್ಯವಾದ ಸಂಸ್ಕೃತಿಯ ಬೇರುಗಳು ಸ್ಥಳನಾಮಗಳಲ್ಲಿ ಉಕ್ತಗೊಂಡಿರುವುದನ್ನು ಗಮನಿಸಬಹುದು.

ಅ. ವೃತ್ತಿವಾಚಿ

ವೃತ್ತಿ ಮತ್ತು ಜಾತಿಗಳು ಒಂದೇ ನಾಣ್ಯದ ಎರಡು ಮುಖವಿದ್ದಂತೆ. ವೃತ್ತಿಗಳು ಬೆಳೆದು ಜಾತಿಯಾಗಿ ಮಾರ್ಪಟ್ಟಿರುವ ಸಂಗತಿ ನಮ್ಮ ಸಾಮಾಜಿಕ ಚರಿತ್ರೆಯಲ್ಲಿರುವುದನ್ನು ಗಮನಿಸಬಹುದು. ಜನರು ತಮ್ಮ ಜೀವನೋಪಾಯಕ್ಕಾಗಿ ಬೇಟೆ, ಕೃಷಿ ಮೊದಲಾದ ವೃತ್ತಿಯನ್ನು ಕಂಡುಕೊಂಡರು. ಕೆಲವು ಸಮುದಾಯದವರು ಒಂದು ನಿರ್ದಿಷ್ಟವಾದ ವೃತ್ತಿಯನ್ನು ಮಾಡುತ್ತಾ ಬಂದಿದ್ದು ನಂತರದಲ್ಲಿ ಅವೇ ಜಾತಿಗಳಾಗಿ ಮಾರ್ಪಟ್ಟಿರುವುದು ಕಂಡುಬರುತ್ತದೆ.

ವೃತ್ತಿಪರ ಜನತೆ ಊರುಗಳು ರೂಪುಗೊಳ್ಳುವಾಗ ತಮ್ಮ ವೃತ್ತಿವಾಚಿಯಾದ ಘಟಕಗಳನ್ನೇ ಆ ಊರುಗಳಿಗೆ ಅನ್ವಯಿಸಿ ಹೇಳುವುದನ್ನು ಬಳಕೆಗೆ ತಂದರು. ಇದರ ಪ್ರತಿಫಲವಾಗಿ ಸ್ಥಳನಾಮಗಳು ವೃತ್ತಿವಾಚಿಯಾದ ಹೆಸರನ್ನು ಪಡೆಯಲು ಸಾಧ್ಯವಾಯಿತು.

ವೃತ್ತಿವಾಚಿಯಾದ ಆ ಊರಿನ ಇಡೀ ಜನಸಮುದಾಯವೇ ಆ ವೃತ್ತಿಯನ್ನು ಮಾಡುತ್ತಿತ್ತು ಎಂದು ಹೇಳಲು ಸಾಧ್ಯವಿಲ್ಲ. ಊರಿನಲ್ಲಿರುವ ಬಹುಪಾಲು ಜನರು ಆ ವೃತ್ತಿಯನ್ನು ಅವಲಂಬಿಸಿರುವ ಸಾಧ್ಯತೆ ಇರುತ್ತದೆ. ಕೆಲವೊಮ್ಮೆ ನೈಸರ್ಗಿಕ ವಿಕೋಪಗಳಿಗೆ ಒಳಗಾಗಿ ಅಥವಾ ರೋಗ ರುಜಿನಗಳಿಗೆ ಒಳಗಾಗಿ ಇಲ್ಲವೆ ನಗರೀಕರಣಕ್ಕೆ ಒಳಗಾಗಿ ಇಡೀ ಸಮುದಾಯ ಆ

ಗ್ರಾಮವನ್ನು ತೊರೆದು ಬೇರೆಡೆ ವಲಸೆ ಹೋಗಿರಬಹುದು. ಆದರೂ ವೃತ್ತಿಯನ್ನು ಮಾಡುತ್ತಿದ್ದ ಸಮುದಾಯದವರು ಇದ್ದ ನೆಲೆ ಎಂಬುದನ್ನು ಸ್ಥಳನಾಮ ಸೂಚಿಸುತ್ತಾ ಬಂದಿರುವುದನ್ನು ಕಾಣಬಹುದು.

ಉದಾ : ಶಾನುಭೋಗನಹಳ್ಳಿ, ಬಂಡಿಗನಹಳ್ಳಿ, ಭಂಟಗಾಳು, ಗೊರವನಪುರ, ಕಂಚುಗಾರನಹಳ್ಳಿ, ಬಂಟರಕುಪ್ಪೆ.

ಆ. ಸಮುದಾಯವಾಚಿ

ಭಾರತದಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆ ಇರುವುದು ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಬ್ರಾಹ್ಮಣ, ವೈಶ್ಯ, ಕ್ಷತ್ರಿಯ ಮತ್ತು ಶೂದ್ರ. ಈ ವರ್ಣಗಳೇ ಜಾತಿಗಳಾಗಿ ಮಾರ್ಪಟ್ಟವು. ಈ ನಾಲ್ಕು ವರ್ಣಗಳಿಗೆ ಮುಂದೆ ವೃತ್ತಿಯನ್ನಾಧರಿಸಿ ಇನ್ನಷ್ಟು ಜಾತಿಗಳು ಏರ್ಪಟ್ಟವು. ಕೆಲವು ಜಾತಿಗಳನ್ನು ಸ್ಥಳನಾಮಗಳಿಗೆ ನೇರವಾಗಿ ನಾಮಕರಣ ಮಾಡಿರುವುದು ಸ್ಥಳನಾಮಗಳಲ್ಲಿ ಸಿಗುತ್ತದೆ. ಜಾತಿಸೂಚಕವಾದ ಸ್ಥಳನಾಮಗಳು ಆ ಪ್ರದೇಶದಲ್ಲಿ ವಾಸಿಸುವ ಜನಾಂಗವನ್ನು ಸೂಚಿಸುತ್ತದೆ.

ಕೆಲವೊಂದು ಸಾರಿ ಜನಾಂಗವಾಚಿ ಗ್ರಾಮನಾಮ ಬಂದಿದ್ದರೂ ಸಹ ಆ ಗ್ರಾಮದಲ್ಲಿ ಭಿನ್ನ–ಭಿನ್ನ ಜಾತಿ, ಕುಲ, ಕೋಮುಗಳು ಪರಸ್ಪರ ಸೌಹಾರ್ದದಿಂದ ಸಾಮರಸ್ಯ ಜೀವನ ಸಾಗಿಸುತ್ತಿರುತ್ತಾರೆ. ಅಲ್ಲಿ ಯಾವ ಜಾತಿಯನ್ನಾಗಲೀ, ವರ್ಗವನ್ನಾಗಲೀ ಎತ್ತಿ ಹಿಡಿಯುವ ಅಥವಾ ಹೀಗೆಳೆಯುವ ಪ್ರವೃತ್ತಿ ಇರುವುದಿಲ್ಲ. ಆ ಸ್ಥಳದಲ್ಲಿ ಎಲ್ಲ ಜಾತಿ, ವರ್ಗದವರೂ ಸಹಬಾಳ್ವೆ ನಡೆಸುತ್ತಾ ಇರುತ್ತಾರೆ. ಒಂದು ನಿರ್ದಿಷ್ಟ ಜಾತಿ ಅಥವಾ ಕೋಮಿನವರು ಬಂದು ನಿರ್ಮಿಸಿದ ಪ್ರದೇಶವನ್ನು ವಾಸ್ತವಕ್ಕೆ ಬಳಸಿಕೊಂಡ ಕೂಡಲೇ ಆ ಜಾತಿ ಅಥವಾ ಕೋಮಿನಿಂದ ಅದನ್ನು ಗುರುತಿಸುತ್ತದೆಯೇ ಹೊರತು ಊರಿನ ಸಮಷ್ಟಿ ಬದುಕಿನಿಂದ ಅವರನ್ನು ವಿಚ್ಛೇದಗೊಳಿಸುವ ಅಸ್ಪೃಶ್ಯ ಪ್ರವೃತ್ತಿ ಇರುವುದಿಲ್ಲ. ಉದಾಹರಣೆಗೆ ಮಾದರಹಳ್ಳಿ, ಶ್ರೇಣಿಕೃತವಾದ ವ್ಯವಸ್ಥೆಯಲ್ಲಿ 'ಮಾದಿಗ' ಅಸ್ಪೃಶ್ಯ ಸಮುದಾಯ ಇರಬಹುದು. ಆದರೆ, ಆ ಗ್ರಾಮವನ್ನು ಅಸ್ಪೃಶ್ಯ ನೆಲೆಯಲ್ಲಿ ನೋಡಲಾಗುವುದಿಲ್ಲ. ಇದು ಒಂದರ್ಥದಲ್ಲಿ ಗ್ರಾಮೀಣ ಪರಿಸರದಲ್ಲಿ ವಿವಿಧ ಜನಾಂಗಗಳು, ವರ್ಗಗಳು, ಸಮಾಜದಲ್ಲಿ ಬದುಕಲು ಒಬ್ಬರಿಗೆ ಮತ್ತೊಬ್ಬರು ನೆರವಾಗುವ ಪ್ರಕ್ರಿಯೆಯನ್ನು ಕಾಣಬಹುದು. ಆ ಮೂಲಕ ವಸ್ತು ವಿನಿಮಯ ಪದ್ಧತಿಗೆ ನಾಂದಿ ಆಡಿರುವುದನ್ನು ಸಹ ಕಾಣಬಹುದು.

ಉದಾ : ಬ್ಯಾಡರಹಳ್ಳಿ, ಕುರುಬರಹಳ್ಳಿ, ಗೊಲ್ಲಹಳ್ಳಿ, ಬೈರಮಂಗಲ, ತಿಗಳರಹಳ್ಳಿ, ದಾಸರಹಳ್ಳಿ, ವಾಜರಹಳ್ಳಿ, ಮಾದರಪಾಳ್ಯ.

ಇ. ವ್ಯಕ್ತಿವಾಚಿ

ನಿಸರ್ಗದಲ್ಲಿ ಸರಳವಾಗಿ ಬದುಕುತ್ತಾ ಜೀವನವನ್ನು ಕಟ್ಟಿಕೊಂಡ ಮಾನವ, ಮೊದಲಿಗೆ ನೈಸರ್ಗಿಕ ವಸ್ತುಗಳಾದ ಕಲ್ಲು, ಗುಡ್ಡ, ಮರ, ಗಿಡ, ನೀರು, ಮಣ್ಣು ಮೊದಲಾದ ವಸ್ತುಗಳನ್ನು ತನ್ನ ನೆಲೆಗೆ ಹೆಸರಿಸಿದ. ನಂತರದಲ್ಲಿ ಜನಾಂಗ ನಿಷ್ಠೆಗೆ ಹತ್ತಿರವಾದ ಮಾನವ, ಜನಾಂಗನಿಷ್ಠವಾದ ಹೆಸರುಗಳನ್ನೇ ಹೆಸರಿಸಿದ. ಮೂರನೆ ಘಟ್ಟದಲ್ಲಿ ಜನಾಂಗಕ್ಕಿಂತಲೂ ಸ್ವಾರ್ಥಪರವಾದ ಆಲೋಚನೆಗಳು ಮಾನವನ ಮನದಲ್ಲಿ ಚಿಗುರೊಡೆದ ಸಂದರ್ಭದಲ್ಲಿ ಈ ವ್ಯಕ್ತಿವಾಚಿಗಳು ತಲೆದೋರಿರಬೇಕು. ಬದುಕಿರುವ ತನ್ನ ಸಂಬಂಧಿಕರ ಅಥವಾ ತನಗೆ ಪ್ರೀತಿ ಪಾತ್ರರಾದವರ ಹೆಸರನ್ನು ವ್ಯಕ್ತಿವಾಚಿ ನಾಮಕರಣದ ಆರಂಭದಲ್ಲಿ ಹೆಸರಿಸಿ, ನಂತರ ತನ್ನ ಹೆಸರನ್ನೇ ಗ್ರಾಮಗಳಿಗೆ ನೀಡುವ ಪರಿಪಾಠವನ್ನು ಬೆಳೆಸಿಕೊಂಡ. ಇವು ರಾಜರ ಕಾಲಮಾನದಲ್ಲಿ ಸಹಜವಾಗಿ ನಡೆದಿರುವ ಘಟನೆಗಳಾದರೆ, ಪ್ರಸ್ತುತ ಸಂದರ್ಭದಲ್ಲಿ ಸಮಾಜ ಸುಧಾರಕರ, ತಮ್ಮ ನೆಚ್ಚಿನ ನಾಯಕ, ಆಧ್ಯಾತ್ಮಿಕ ಗುರುಗಳು, ರಾಜಕೀಯ ನಾಯಕರ ಹೆಸರುಗಳು ಹೊಸಹೊಸ ಬಡಾವಣೆಗಳಿಗೆ ನಾಮಕರಣಗೊಳ್ಳುತ್ತಿರುವುದನ್ನು ಗಮನಿಸಬಹುದು.

ಉದಾ : ಸಿದ್ದನಹಳ್ಳಿ, ಅಂಕನಹಳ್ಳಿ, ಲಿಂಗನಹಳ್ಳಿ, ಗಂಗನಹಳ್ಳಿ, ಸೂರಪ್ಪನಹಳ್ಳಿ, ಚಿಕ್ಕೇನಹಳ್ಳಿ, ಕೆಂಪಯ್ಯನಪಾಳ್ಯ.

ಈ. ದೈವವಾಚಿ

ಪ್ರಾಚೀನ ಕಾಲದಿಂದ ಇಂದಿನವರೆಗಿನ ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಧರ್ಮ, ದೈವ, ದೇವತೆಗಳ ಪರಿಕಲ್ಪನೆ ರೋಚಕವಾದದ್ದು. ತನ್ನ ಬದುಕಿನ ಸುಖ ದುಃಖಗಳಿಗೆ ಕಾರಣವಾಗುವ ಸೃಷ್ಟಿಯ ವಸ್ತುಗಳಾದ ಮರ-ಗಿಡ, ನದಿ, ಬೆಟ್ಟ, ಪ್ರಾಣಿ, ಪಕ್ಷಿ ಮೊದಲಾದವುಗಳ ಬಗ್ಗೆ ಆತನಲ್ಲಿ ಭಯ, ಭಕ್ತಿ, ಶ್ರದ್ಧೆ ಬೆಳೆದು ನಿಂತವು. ಆಗ ಸೃಷ್ಟಿಯಲ್ಲಿ ಗೋಚರಾಗೋಚರ ವಸ್ತುಗಳೆಲ್ಲವೂ ಅವನಿಗೆ ಉಪಾಸನಾಯೋಗ್ಯ ದೇವತೆಗಳೆನಿಸಿದವು. ಹೀಗಾಗಿ ದೇವ ದೇವತೆಗಳ ಸಂಖ್ಯೆ ಬೆಳೆಯುತ್ತ ಹಿಂದೂ ಸಂಸ್ಕೃತಿಯಲ್ಲಿಯೇ ಸುಮಾರು ಮೂವತ್ತು ಮೂರು ಕೋಟಿಗೂ ಹೆಚ್ಚು ದೇವ-ದೇವತೆಗಳು ಸೃಷ್ಟಿಯಾಗಿ ಉಪಾಸನೆಗೆ ಒಳಗಾಗುತ್ತಿವೆ.

ಭಾರತದಲ್ಲಿ ಹಲವು ಧರ್ಮಗಳು ಹುಟ್ಟಿ ಬೆಳೆದಿವೆ. ಅದರಂತೆಯೇ ಅನ್ಯದೇಶದ ಧರ್ಮಗಳು ಹರಡಲು ಮತ್ತು ಬೆಳೆಯಲು ಅವಕಾಶವಾಗಿದೆ. ಶೈವ, ವೈಷ್ಣವ, ಬೌದ್ಧ, ಜೈನ, ಇಸ್ಲಾಂ, ಕ್ರೈಸ್ತ ಮೊದಲಾದ ಧರ್ಮೀಯರು ಹಾಗೂ ಪಂಥದವರು ಅವರವರ ನಂಬಿಕೆಗಳಿಗೆ ತಕ್ಕಂತೆ ದೇವತೆಗಳನ್ನು ಆರಾಧಿಸುತ್ತಾ ಬಂದಿರುವುದನ್ನು ಕಾಣಬಹುದು. ದೈವ, ಧರ್ಮಗಳು, ಭಾರತೀಯ ಸಂಸ್ಕೃತಿಯ ನಿಯಂತ್ರಕಗಳಾಗಿ ಮಹತ್ವದ ಪಾತ್ರ ವಹಿಸುವುದರಿಂದ ವ್ಯಕ್ತಿಗಳಿಗೆ ಮತ್ತು ಸ್ಥಳಗಳಿಗೆ ಹೆಸರು ನೀಡುವ ಸಂದರ್ಭದಲ್ಲಿ ದೈವವವಾಚಿಗಳನ್ನು ಸ್ಥಳನಾಮಗಳ ನಿರ್ದಿಷ್ಟ ಸ್ಥಾನದಲ್ಲಿ ಬಳಸಿಕೊಂಡರು. ಊರಿಗೆ ಯಾವುದೇ ದುಷ್ಟ ಶಕ್ತಿ ಪ್ರವೇಶವಾಗದಂತೆ ಆ ದೇವತೆ ಕಾವಲಿರುತ್ತದೆ. ಊರಿಗೆ ಸಮೃದ್ಧಿ ರಕ್ಷಣೆ ಹಾಗೂ ಶುಭವನ್ನು ಕೋರುವ ದೇವತೆಗಳಿಗಾಗಿ ಹಾಗೂ ಜನರ ಮನಸ್ಸಿನಲ್ಲಿ ಉಳಿದುಕೊಳ್ಳುವಂತೆ ಸ್ಥಳನಾಮಗಳಲ್ಲೂ ದೈವವಾಚಕಗಳನ್ನು ಬಳಸಿಕೊಂಡರು. ಸುಖ ದುಃಖ ಎಲ್ಲಕ್ಕೂ ಆ ದೇವರೇ ಕಾರಣ. ರೋಗ ತಂದು ಕೊಲ್ಲುವವನೂ ಅವನೇ, ಕಾಪಾಡುವವನೂ ಅವನೇ ಎಂಬ ನಂಬಿಕೆ ನಮ್ಮ ಜನರಲ್ಲಿದೆ. ಆದ್ದರಿಂದ ತಾವು ನೆಲೆನಿಂತ ಸ್ಥಳಗಳಿಗೆ ದೇವತೆಗಳ ಹೆಸರನ್ನು ಅಂಕಿತಗೊಳಿಸುವ ಆ ಹೆಸರುಗಳು ನಮ್ಮ ಗ್ರಾಮಗಳಿಗೆ ಶ್ರೀರಕ್ಷೆಯನ್ನಾಗಲೀ, ದೈವಗಳ ಸ್ಮರಣೆಯಾಗಲಿ ಎಂಬ ಪ್ರಬಲವಾದ ನಂಬಿಕೆ ಬೇರೂರಿದೆ. ಇದರಿಂದ ಕುಲದೈವ, ಇಷ್ಟದೈವ, ಋಷಿಮುನಿಗಳ, ಸಿದ್ಧಪುರುಷರ ಹಾಗೂ ಊರಿನ ಅಧಿದೇವತೆಗಳ ಹೆಸರನ್ನು ಸ್ಥಳನಾಮಗಳಲ್ಲಿ ಗುರುತಿಸಬಹುದು. "ದೇವರು ಧರ್ಮ ಮುಂತಾದ ಅಮೂರ್ತ ಆಧ್ಯಾತ್ಮಿಕ ಸಂಗತಿಗಳನ್ನು ಸ್ಥಳನಾಮದೊಂದಿಗೆ ತಳುಕು ಹಾಕಿದಾಗಲೂ, ಜನಪದರು ಯಾವುದೇ ಧರ್ಮ ಬೀರುತ್ವ ಅಥವಾ ಮತಾಂಧತೆಯ ಲಕ್ಷಣಗಳನ್ನು ಪ್ರಕಟಿಸಿರುವುದು ಕೂಡ ಇಂದಿನ ನಮ್ಮ ಸಮಾಜಕ್ಕೆ ಒಳ್ಳೆಯ ಮೇಲ್ಪಂಕ್ತಿ ಹಾಕಿಕೊಡುವಷ್ಟು ಉದಾತ್ತ ನಡವಳಿಕೆಯಾಗಿದೆ".[9]

ದೈವ, ಧರ್ಮಗಳು ಪರಸ್ಪರ ಪ್ರಭಾವ ಬೀರಿರುವುದನ್ನು ಗ್ರಾಮನಾಮಗಳಲ್ಲಿ ಕಾಣಬಹುದು. ಅಲ್ಲದೆ ಸಮಾಜದಲ್ಲಿ ಧಾರ್ಮಿಕ ಸಾಮರಸ್ಯದ ಅಂಶಗಳು ಗ್ರಾಮನಾಮಗಳು ಪ್ರಕಟಪಡಿಸುತ್ತಿರುವುದು ಒಪ್ಪಿಕೊಳ್ಳುವಂತಹದ್ದಾಗಿದೆ. "ದೇವಸ್ಥಾನ, ದೇವರು, ಧಾರ್ಮಿಕ ವ್ಯಕ್ತಿಗಳ ಸುತ್ತ ಹೆಸರೇನಾದರೂ ಹುಟ್ಟುಕೊಂಡಿದ್ದರೆ ಅರ್ವಾಚೀನವಾದುವು ಅಷ್ಟೇ ಅಲ್ಲ, ನಿರ್ದಿಷ್ಟ ಕ್ಷೇತ್ರವೊಂದಕ್ಕೆ ಕಾಲಾನಂತರದಲ್ಲಿ ಗ್ರಾಮೀಣ ಸಂಸ್ಕೃತಿಯ ವಿಕಾಸದ ನಿರ್ದಿಷ್ಟ ಕಾಲ ಘಟ್ಟದಲ್ಲಿ ಅನ್ವಯವಾದುವು ಎಂದು ಸಾಮಾನ್ಯವಾಗಿ ಹೇಳಬಹುದು."[10]

ಸ್ಥಳನಾಮಗಳಲ್ಲಿ ಬಳಕೆಯಾಗಿರುವ ದೈವವಾಚಿಗಳ ಅಧ್ಯಯನದಿಂದ ಒಂದು ಭೌಗೋಳಿಕ ಪರಿಸರದಲ್ಲಿ ಪ್ರಚಲಿತವಿರುವ ದೇವ-ದೇವತೆ, ಸಿದ್ದಪುರುಷರ ಪ್ರಭಾವವನ್ನು ಗುರುತಿಸಲು ಸಹಕಾರಿಯಾಗುತ್ತದೆ. ಇದರಿಂದ ವಿಶಿಷ್ಟವಾರು ವ್ಯಾಪ್ತಿಯಲ್ಲಿ ಬರುವ ಆಯಾಯ ದೈವಗಳ ವಿಶಿಷ್ಟವಾದ ಸಾಂಸ್ಕೃತಿಕ ವಿವರಗಳು, ಆಚರಣೆಗಳು, ನಂಬಿಕೆಗಳನ್ನು ಅಧ್ಯಯನ ಮಾಡಲು ಸಹಕಾರಿಯಾಗುತ್ತವೆ.

ಚನ್ನಪಟ್ಟಣ ತಾಲ್ಲೂಕಿನ ಪರಿಸರದ ಸ್ಥಳನಾಮಗಳಲ್ಲಿ ಕಂಡು ಬರುವ ದೈವಗಳೆಲ್ಲವೂ ಕೂಡಾ ಸಾಮಾನ್ಯವಾಗಿ ಉಪಾಸನೆಗೆ ಒಳಗಾಗುತ್ತಿದೆ.

ಉದಾ : ಕೃಷ್ಣಪುರ, ರಾಮನಾಥಪುರ, ರಾಂಪುರ, ಸೋಮನಾಥಪುರ, ವಿರೂಪಾಕ್ಷಪುರ, ಹನುಮಾಪುರ, ಲಕ್ಷ್ಮೀಪುರ, ಲಕ್ಷ್ಮೀಸಾಗರ, ನಾರಾಯಣಪುರ, ಸೋಮನಾಥಪುರ, ಶಿವನಹಳ್ಳಿ, ಗಂಗೇಶ್ವರ, ವಿಠಲಪುರ ಇತ್ಯಾದಿ.

3.3.2 ವಾರ್ಗಿಕಕ್ಕನುಗುಣವಾಗಿ

ಅ) ನಿಸರ್ಗವಾಚಿ

ಸ್ಥಳನಾಮ ನಿರ್ದೇಶನವು ಆ ಸ್ಥಳದ ಸುತ್ತಲಿನ ಪರಿಸರದ ವಿಶೇಷಗಳನ್ನು ಗಮನಿಸಿ ಅಂದರೆ ಪ್ರಕೃತಿಯ ಸಂಪತ್ತನ್ನು ಆಧಾರವಾಗಿಟ್ಟುಕೊಂಡು, ಭೌಗೋಳಿಕ ವಿಶಿಷ್ಟತೆಯನುಗುಣವಾಗಿ ಸ್ಥಳಗಳಿಗೆ ಹೆಸರು ಕೊಟ್ಟಿರುವುದನ್ನು ಗಮನಿಸಬಹುದು. ಸಾಮಾನ್ಯವಾಗಿ "ಇಲ್ಲಿಯ ನಿರ್ದಿಷ್ಟ ಯಾವುದೇ ಇದ್ದರೂ ಮೇಲೆ ಸೂಚಿಸಿದ ವಾರ್ಗಿಕವುಳ್ಳವು ನಿಸರ್ಗದ ಮಡಿಲಲ್ಲಿರುವ ಗ್ರಾಮಗಳಾಗಿರುತ್ತವೆ. (ಅಥವಾ ಪ್ರಾಕೃತಿಕ ಮನೋಧರ್ಮದವರಿಟ್ಟ ಹೆಸರುಗಳು, ಇಲ್ಲವೆ ಇವುಗಳನ್ನು ಬಳಸಿ ಒಂದು ಪದ್ಧತಿ ಬೆಳೆದ ಬಳಿಕ ಅನುಕರಣದಿಂದ ಇಟ್ಟ ಹೆಸರುಗಳಾಗಿರುತ್ತವೆ) ಸಾಮಾನ್ಯವಾಗಿ ಈ ಹೆಸರುಗಳು ಅಲ್ಲಿ ನಿಸರ್ಗವನ್ನ ಪ್ರತಿನಿಧಿಸುತ್ತವೆ".[11] ಮನುಷ್ಯನ ಕಣ್ಣಿಗೆ ಕಾಣದ, ಪ್ರಜ್ಞೆಗೆ ಬಾರದ ವಾಸ್ತವತೆಗೆ ನಿಲುಕದ ಯಾವುದೋ ಒಂದು ಹೆಸರನ್ನು ಇಡಲು ಸಾಧ್ಯವಿಲ್ಲ. ಮಾನವನ ಒಡನಾಟದಲ್ಲಿರುವ ಅಥವಾ ಮಾನವನ ಜೊತೆಯಲ್ಲಿ ನಿಕಟವಾದ ಸಂಬಂಧವಿರುವ ಪ್ರಾಕೃತಿಕ ವಸ್ತುಗಳನ್ನು ಧನ್ಯತಾ ಅಥವಾ ಕೃತಜ್ಞತಾ ಭಾವದಿಂದ ಇಟ್ಟಿರುವ ಸಾಧ್ಯತೆ ಇದೆ. ಇಲ್ಲಿರುವ ವಾರ್ಗಿಕವನ್ನು ಅನುಸರಿಸಿ ಆ ಗ್ರಾಮದ ಭೌಗೋಳಿಕ ಪರಿಸರವನ್ನು ಹೇಳಲು ಸಾಧ್ಯವಿದೆ. ನಿಸರ್ಗ ವಸ್ತುಗಳಾದ ಕಲ್ಲು, ಮಣ್ಣು, ಬೆಟ್ಟ, ಗುಡ್ಡ, ಕೋಡು ಮೊದಲಾದ

ಅಂಶಗಳನ್ನು ಒಳಗೊಂಡ ವಾರ್ಗಿಕಗಳನ್ನುಸರಿಸಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನು ವಾರ್ಗಿಕಕ್ಕನುಗುಣವಾಗಿ ವರ್ಗೀಕರಿಸಲಾಗಿದೆ.

ಕುಪ್ಪೆ

ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. ಗುಂಪು ಅಥವಾ ರಾಶಿಯನ್ನು ಸೂಚಿಸುವ ವಾರ್ಗಿಕವಾಗಿದೆ. ಕೊಪ್ಪ > ಕುಪ್ಪೆ ಆಗಿರುವ ಸಾಧ್ಯತೆ ಇದೆ. ಕುಪ್ಪೆ > ಕುಪ್ಪ > ಕುಪ್ಪಿ ಹಾಗೂ ಕುಪ್ಪ > ಗುಪ್ಪಿ ಆಗಿ ಬಳಕೆಯಾಗುವ ಸಂಭವವೂ ಇದೆ. ಕ > ಗ ಬದಲಾವಣೆಯಿಂದ ಗುಪ್ಪೆ, ಗುಪ್ಪ ಎಂದು ಬಳಕೆಯಾಗುತ್ತದೆ.

ಉದಾ : ಅಬ್ಬನಕುಪ್ಪೆ, ಕೆಂಚನಕುಪ್ಪೆ, ಬನ್ನಿಕುಪ್ಪೆ, ಅತ್ತಿಗುಪ್ಪೆ, ವಂದರಗುಪ್ಪೆ, ವಡ್ಡರಗುಪ್ಪೆ, ತಗಚಗುಪ್ಪೆ, ಬಂಟರಕುಪ್ಪೆ, ಸೀಗೆಕುಪ್ಪೆ, ಹಂಚಿಕುಪ್ಪೆ, ಕಲ್ಲನಕುಪ್ಪೆ, ಮರಳೆಬೇಕುಪ್ಪೆ.

ಅತ್ತಿ + ಕುಪ್ಪೆ = ಅತ್ತಿಕುಪ್ಪೆ > ಅತ್ತಿಗುಪ್ಪೆ : 'ಕ' ಕಾರಕ್ಕೆ ಬದಲಾಗಿ 'ಗ' ಕಾರ ಆದೇಶವಾಗಿ ಬಂದಿದೆ. ಇದು ಅತ್ತಿ ಮರವನ್ನು ಹೊಂದಿರುವ ಊರು. ಸಸ್ಯವಾಚಿಯ ನಿರ್ದಿಷ್ಟವನ್ನು ಹೊಂದಿದೆ. ಕೆಂಚನ ಕುಪ್ಪೆ, ಅಬ್ಬನಗುಪ್ಪೆ ಇವುಗಳು ವ್ಯಕ್ತಿವಾಚಿಯಾಗಿ ನಿರ್ದಿಷ್ಟ ಭಾಗದಲ್ಲಿ ಬಂದಿವೆ. ವಂದರ + ಕುಪ್ಪೆ = ವಂದರಗುಪ್ಪೆ ನಿರ್ದಿಷ್ಟವಾದ ಕೊನೆಯಲ್ಲಿ 'ರ' ಕಾರವಿರುವುದರಿಂದ ಜನಾಂಗವಾಚಿ ನಾಮವಾಗಿರಬಹುದು. ಹೀಗೆ ಕುಪ್ಪೆ, ಗುಪ್ಪೆ, ವಾರ್ಗಿಕವನ್ನು ಒಳಗೊಂಡವುಗಳಿಗೆ ನಿರ್ದಿಷ್ಟವಾಗಿ ಸಸ್ಯ, ವ್ಯಕ್ತಿ, ನಿರ್ಮಾಣವಾಚಿ, ಶಿಲಾವಾಚಿ, ಪ್ರಾಣಿವಾಚಿ, ಪರಿಮಾಣವಾಚಿ, ಮಣ್ಣಿನ ಗುಣವಾಚಿ, ವೃತ್ತಿವಾಚಿ, ಜನಾಂಗವಾಚಿ ಮೊದಲಾದವು ಬಂದಿರುವುದನ್ನು ಕಾಣಬಹುದು.

ಕುಂದ

ಭೌಗೋಳಿಕ ಲಕ್ಷಣಗಳನ್ನು ಸೂಚಿಸುವ ಪದ. ಕಲ್ಲಿನಿಂದ ಮಾಡಿದ ಕಂಬ, ಚಿಕ್ಕಬೆಟ್ಟ.[12] ಇದು ಕುಂದ–ಕುಂದಿ ಎಂದು ಬಳಕೆಯಾಗುತ್ತದೆ. ಕುಂದಿ, ತಗ್ಗು ಭೂಮಿ, ಬಾಗಿದ ನೆಲ[13] ಉನ್ನತ ಭೂ ವಾಚಕ, ಎತ್ತರವಾದ ಭೂ ಭಾಗವನ್ನು ಇದು ಸೂಚಿಸುತ್ತದೆ. ಗುಂದ, ಬೆಟ್ಟ, ಗುಡ್ಡ ಮೂರು ಕಡೆ ಎತ್ತರವಾದ ಜಾಗವಿದ್ದು, ಒಂದು ಕಡೆ ತಗ್ಗಾಗಿದ್ದರೆ ಗುಂದಿ, ಗುಂದಾ, ಗುಂದೆ, ಗುಂದ ಎಂದೆಲ್ಲಾ ಕರೆಯಲಾಗಿದೆ. ಬೆಟ್ಟ ಗುಡ್ಡ ಪ್ರದೇಶಗಳಲ್ಲಿ ಇಂತಹ ಗುಂದ, ಕುಂದಗಳು ಹೆಚ್ಚಾಗಿ ಕಂಡು ಬರುತ್ತವೆ. ಇತರೆ ದ್ರಾವಿಡ ಭಾಷೆಗಳಾದ ತಮಿಳು–ಕುನ್ರಮ್, ಕನ್ನಡ ಮತ್ತು ತೆಲುಗು–ಕೊಂಡೆ, ಮಲಯಾಳಂ–ಕುನ್ರಂ, ತುಳು–ಗುಡ್ಡೆ ಎಂಬ ರೂಪಗಳಿವೆ. ಇದು ಎತ್ತರದ

ಸ್ಥಳ. ಗುಡ್ಡ, ಬೆಟ್ಟ ಮೊದಲಾದ ಅರ್ಥಕೊಡುತ್ತದೆ. ಕುಂದ > ಗುಂದ, ಕುಂದ > ಕುಂದಿ ಆಗುವ ಸಂಭವವೂ ಗುಂದ > ಗುಂದಿ ಆಗುವ ಸಂಭವವೂ ಉಂಟು.

ಉದಾ : ಮಂಕುಂದ, ಗಟ್ಟಿಗುಂದ, ಹೂಕುಂದ, ಮಾರ್ಗಯ್ಯನಗುಂಡಿ.

ಕೊಪ್ಪ

ಹಲವಾರು ಜನರು ಗುಂಪಾಗಿ ವಾಸಿಸುವ ಕೇರಿ ಅಥವಾ ಸಣ್ಣ ಹಳ್ಳಿ. ಕೊಪ್ಪಲು > ಕೊಪ್ಪ ಆಗಿರುವ ಸಾಧ್ಯತೆ ಇದೆ. ಕೊಪ್ಪಲು ಎಂದರೆ ಊರು, ಕೇರಿ, ಗುಡಿಸಿಲಿನ ಸಮುದಾಯ[14] ಎಂಬರ್ಥ ಹೊಂದಿದೆ.

ಉದಾ : ಕಾರೆಕೊಪ್ಪ, ಹಾರೋಕೊಪ್ಪ, ಅರೆಕೊಪ್ಪ, ದೊಡ್ಡಕೊಪ್ಪ, ಕಡಸಿಕೊಪ್ಪ, ಚಿಕ್ಕೋಪ್ಪ.

ಗಟ್ಟ–ಘಟ್ಟ

'ಕಟ್ಟೆ' ಎಂಬ ವಾರ್ಗಿಕವು ಶುದ್ದ ದೇಶೀಯವಾಗಿದ್ದು, ಎತ್ತರದ ನೆಲೆ ಎಂಬರ್ಥವನ್ನು ಕೊಡುತ್ತದೆ. ಕಿಟ್ಟಲ್ಲರ ಅರ್ಥಕೋಶದಲ್ಲಿ "A structure of earthor stones to sit upon for resting, transacting business, a station, a dam, a dike"[15] ಎಂಬರ್ಥಗಳಿವೆ. ಕಟ್ಟೆ ಎಂಬ ರೂಪ ಗಟ್ಟೆ ಎಂಬ ರೂಪಾಂತರವಾಗಿ ಗಟ್ಟೆ > ಗಟ್ಟಿ ಎಂಬ ರೂಪಕ್ಕೆ ಬದಲಾಗಿದೆ. ಗಟ್ಟ ಸಂಸ್ಕೃತೀಕರಣಗೊಂಡಾಗ ಸಿಗುವ ರೂಪ ಘಟ್ಟವಾಗಿದೆ.

ಉದಾ : ಲಾಲಘಟ್ಟ, ಸುಣ್ಣಘಟ್ಟ, ಸುಂಡಘಟ್ಟ, ಸಂಕಿಘಟ್ಟ.

ಇವುಗಳ ನಿರ್ದಿಷ್ಟದಲ್ಲಿ ಸಸ್ಯ, ವಸ್ತು, ಪಕ್ಷಿ, ವ್ಯಕ್ತಿ ಸೂಚಿಸುವ ಪದಗಳೊಂದಿಗೆ 'ಘಟ್ಟ' ವಾರ್ಗಿಕ ಬಂದಿದೆ.

ಗುಡ್ಡ

ನಿಮ್ನ ಭೂ ವಾಚಕ ಪದ. ದಿಣ್ಣೆ, ಗುಡ್ಡೆ ಎಂಬರ್ಥವನ್ನು ಸೂಚಿಸುತ್ತದೆ. ಕುಪ್ಪೆ, ಗುಡ್ಡಗಾಡು, ಕಾಡು, "Hillock, a mountain, a hill".[16] ಎಂಬರ್ಥಗಳಿವೆ.

ಉದಾ : ಕೀರನಗುಡ್ಡೆ, ದಾಬನಗುಡ್ಡೆ, ಚಿಕ್ಕಮಣ್ಣುಗುಡ್ಡೆ, ದೊಡ್ಡಮಣ್ಣುಗುಡ್ಡೆ.

ಇಲ್ಲಿ ನಿರ್ದಿಷ್ಟವಾಗಿ 'ಮಣ್ಣು' ಪ್ರಾಕೃತಿಕ ಲಕ್ಷಣ ಹೇಳುವ ಪದ. ಅದಕ್ಕೆ ವಿಶೇಷಣಗಳಾಗಿ ಪ್ರಮಾಣವಾಚಿಯಾದ 'ಚಿಕ್ಕ' ಮತ್ತು 'ದೊಡ್ಡ' ಬಂದು ಒಂದರಿಂದ ಮತ್ತೊಂದನ್ನು ಬೇರ್ಪಡಿಸಿದೆ.

ಗುಂಡು

ಶಿಲಾವಾಚಿಪದ. ವರ್ತುಲ, ಗೋಳಾಕಾರ, ದಪ್ಪವಾಗಿರುವ ಕಲ್ಲು, ದೊಡ್ಡಕಲ್ಲು, ಗುಂಪು, ಸಮೂಹ[17] ಎಂಬರ್ಥವನ್ನು ಕೊಡುತ್ತದೆ.

ಉದಾ : ದಾಬನಗುಂಡು

ನಿರ್ದಿಷ್ಟ ಭಾಗದಲ್ಲಿ ವ್ಯಕ್ತಿವಾಚಿಯನ್ನು ಒಳಗೊಂಡಿದೆ.

ಆ) ವಸತಿ ವಾಚಿ

"ಆದಿ ಮಾನವ ತನ್ನ ಅಲೆಮಾರಿ ಜೀವನದಿಂದ ಮುಕ್ತಿ ಪಡೆದು, ತನಗೂ ತನ್ನ ಸಂಗಾತಿಗಳಿಗಾಗಿ ಭದ್ರತೆಯನ್ನೊದಗಿಸುವ ಜೀವನಕ್ಕೆ ಅಡಿಪಾಯ ಹಾಕಿದ್ದು, ಮಾನವನ ಸಾಂಸ್ಕೃತಿಕ ಇತಿಹಾಸ ವಿಕಾಸಗೊಳ್ಳಲು ಕಾರಣವಾಗಿದೆ. ಕೃಷಿ ಸಂಸ್ಕೃತಿಯನ್ನು ರೂಢಿಸಿಕೊಂಡ ಮೇಲೆ ತನಗೆ ಅನುಕೂಲಕರವಾದ ಪರಿಸರದಲ್ಲಿ ಒಂದೆಡೆ ಬದುಕಲು ಆರಂಭಿಸಿದಾಗ ಅಲ್ಲಿಯೇ ಬೀಡು ಬಿಡಬೇಕಾದ ಸಂದರ್ಭ ಒದಗಿ ಬಂದಿರಬೇಕು. ಕಾಲಾನಂತರದಲ್ಲಿ ಅವರ ಬೀಡುಗಳೇ ಆರಂಭಕಾಲದ ಹಟ್ಟಿಗಳಾಗುತ್ತಿದ್ದವು, ಕೊಪ್ಪಲುಗಳಾಗುತ್ತಿದ್ದವು. ಹಟ್ಟಿಗಳೇ ಆರಂಭ ಕಾಲದ ವಸತಿಗಳೆಂಬುದು ಶಂಬಾಜೋಶಿಯವರ ಊಹೆ.[18] ಹೀಗೆ ಜನ ನೆಲೆಯೂರಿ ಬಹುದಿನಗಳಿಂದ ವಾಸಿಸುತ್ತಿರುವ ವಸತಿ ಸ್ವರೂಪದ ವ್ಯವಸ್ಥೆಗಳನ್ನು ವಸತಿಸೂಚಿಗಳೆಂದು ಕರೆಯಲಾಗುತ್ತದೆ. ಅವುಗಳೆಂದರೆ :

ಊರು

ಇದು ಅಚ್ಚ ದ್ರಾವಿಡ ಪದ. ವಾಸ ಸ್ಥಳವನ್ನು ಸೂಚಿಸುತ್ತದೆ. ವಸತಿ ವಾಚಕವಾಗಿದೆ. ಮಾನವನ ವಾಸಸ್ಥಳವನ್ನು ಸೂಚಿಸುತ್ತದೆ. ನಾಡು, ಗ್ರಾಮ, ಸಣ್ಣಪಟ್ಟಣ ಎಂಬರ್ಥಗಳಿವೆ. "ಊರು ಕೊನೆಯಲ್ಲಿ ಬರುವ ಕೆಲವು ಹೆಸರುಗಳಾದರೂ ಮೂಲತಃ ಪುರದಿಂದ ಕೊನೆಗೊಳ್ಳುತ್ತವೆ ಎಂಬುದಕ್ಕೆ ಶಾಸನಾಧಾರಗಳಿವೆ".[19] ಜನವಾಸ ಮಾಡುವ ಸ್ಥಳ "An Inhabited place, a village, a town, a city"[20] ಇದು ಅಚ್ಚ ದ್ರಾವಿಡ ಮೂಲದ್ದು, ದಕ್ಷಿಣದ ಪಂಚ ದ್ರಾವಿಡ ಭಾಷೆಗಳಲ್ಲಿ ಮತ್ತು ಇತರ ದ್ರಾವಿಡ ಭಾಷೆಗಳಾದ ಕೊಂಡ, ತೋಡ, ಕೊಡವ, ಕೊಲಾಮಿ, ನಾಯ್ಕಿ ಭಾಷೆಗಳಲ್ಲೂ ಇದು ವ್ಯಾಪಕವಾಗಿ ಬಳಕೆಗೊಂಡಿರುವುದನ್ನು ದ್ರಾವಿಡ ಭಾಷೆಯ ವ್ಯುತ್ಪತ್ತಿ ಕೋಶ ದೃಢಪಡಿಸುತ್ತದೆ.[21] 'ಊರ್' ಎಂಬ ವಾರ್ಗಿಕ ದ್ರಾವಿಡ

ಮೂಲದ ಇರ್ ಅಥವಾ ಉರ್ ಧಾತುವಿನಿಂದ ಬಂದಿದ್ದು, ನೆಲಸುವಿಕೆ, ಇರುವಿಕೆ ಎಂಬರ್ಥವನ್ನು ಕೊಡುತ್ತದೆ.

"ಸಾಮಾನ್ಯವಾಗಿ ಕನ್ನಡ 'ರ' ಕಾರ ತುಳುವಿನಲ್ಲಿ 'ಜ' ಕಾರವಾಗುತ್ತದೆ. ಆದ್ದರಿಂದ 'ಊಜು' ಎಂಬಲ್ಲಿ ಸೂಚಿತವಾದ ದ್ರವಾರ್ಥ ಅದರ ಮೂಲವಾಗಿರುವ 'ಊರು' ಎಂಬ ಪದದಲ್ಲಿ ಇದ್ದಿರಲೇಬೇಕು. ಆದ್ದರಿಂದ 'ಊರು' ಎಂಬುದು ಮೂಲತಃ ಜಲ ಸಂಬಂಧವುಳ್ಳ ಅಥವಾ ಜಲವಾಚಕವಾದ ಒಂದು ಪದವಾಗಿರಬೇಕು"[22] ಎಂದು ಹಲವು ಭಿನ್ನ ಭಿನ್ನ ಸಾಧಿತ ರೂಪಗಳು ದೃಷ್ಟಾಂತಗಳನ್ನು ಡಾ.ಕೆಮ್ತೂರ್ ರಘುಪತಿಭಟ್ ಕೊಡುತ್ತಾರೆಯಾದರೂ ಇದು ವಾಸ್ತವ್ಯ ಸೂಚಿಯಾಗಿದೆ. ಮಾನವ ಒಂದು ಕಡೆ ನೆಲೆ 'ಊರಿದ' ಜಾಗವೇ ಊರಾಯಿತು ಎಂದು ಹೇಳಬಹುದು.

ಊರು (ಒಂದೆಡೆ ನಿಲ್ಲುವುದು) ಇದು ಅಚ್ಚ ದ್ರಾವಿಡ ಪದ. ಆದಿ ಮಾನವ ಸುಧಾರಣೆಗೊಂಡು ತರಗುಗುಡಿಸಿ ಮನೆ ಮಾಡಿ ಒಂದೆಡೆ ನೆಲೆ ಊರುವುದು 'ಊರು' ಆಯಿತು. ಊರುಗಳಿಂದ ಕೊನೆಗೊಳ್ಳುವ ಸ್ಥಳಗಳು ಗಾತ್ರದಲ್ಲಿ ಚಿಕ್ಕವು ಅಂತಹ ವಿಶೇಷತೆಯನ್ನೇನು ಒಳಗೊಂಡಿರುವುದಿಲ್ಲ. ಇಲ್ಲಿ ನಿರ್ದಿಷ್ಟ ಘಟಕಗಳು ಸೇರುವಾಗ ಸ್ವರೈಕ್ಯವೊಂದುವುದನ್ನು ಗುರುತಿಸಬಹುದು.

ಉದಾಹರಣೆಗೆ:

ಅಕ್ಕ + ಊರು = ಅಕ್ಕೂರು

ನುಣ್ಣ + ಊರು = ನುಣ್ಣೂರು

ಬೇವು + ಊರು = ಬೇವೂರು

ಅಕ್ಕೂರು, ಅಬ್ಬೂರು, ಹರೂರು, ಇಗ್ಗಲೂರು, ಕುಕ್ಕೂರು, ಕೂಡ್ಲೂರು, ಕೋಲೂರು, ಚಿಕ್ಕಮಳೂರು, ದೊಡ್ಡಮಳೂರು, ಚಿಕ್ಕಲೂರು, ತೊರೆಹೊಸೂರು, ನುಣ್ಣೂರು, ನೇರಳೂರು, ಬಂಡೂರು, ಬೇವೂರು, ಯಲಿಯೂರು, ಸರಗೂರು, ಹನಿಯೂರು, ಹೊಂಗನೂರು, ಕಳ್ಳಿಹೊಸೂರು, ನೇರಲೂರು, ಮಾದನೂರು, ಗುಡೆಹೊಸೂರು.

ಊರು, ಗೂರು, ಸೂರು, ದೂರು, ನೂರು ಇವೆಲ್ಲಾ ಅಂಕಿತನಾಮದೊಂದಿಗೆ ಸರಳೀಕರಣಗೊಂಡು ಒಂದೇ ಅರ್ಥದಲ್ಲಿ ಸೇರ್ಪಡೆಯಾಗಿದೆ. ಹೊಸದಾಗಿ ಕಟ್ಟಿಕೊಂಡ ಊರು ಹೊಸೂರು ಆಗಿದೆ.

ದೊಡ್ಡಿ

"ವಾಸ್ತವ್ಯವಾಚಿಪದ. ದನಕರುಗಳನ್ನು ಕೂಡಿ ಹಾಕುವ ಸ್ಥಳ. ಕೆಡ್ಡ, ಹಟ್ಟಿಕೊಟ್ಟಿಗೆ, ಯಜಮಾನರಿಲ್ಲದಂಥ ದನಕರುಗಳನ್ನು ಕಟ್ಟುವ ಮನೆ, ಮೂಲದ ಮನೆ".[23] "a settlers first house a flod, a stable, a cow, pen".[24]

ಗೋವು ಅತ್ಯಂತ ಸಾಧುಪ್ರಾಣಿ. ಹಿಂದಿನ ಕಾಲದಲ್ಲಿ ಗೋ ಸಾಕಾಣೆಯು ಕಷ್ಟಕರವಾಗಿರಲಿಲ್ಲ. ಹುಲ್ಲು ಮೇದು, ನೀರು ಕುಡಿದು, ಬದುಕಿ ಬೆಳೆಯುವ ಗೋಸಂಕುಲ ಮಾನವನಿಗೆ ಉಪಕಾರಿಯಾಗಿತ್ತು. ಹಾಲು ಮತ್ತು ಅದರ ಉತ್ಪನ್ನಗಳು ಮಾನವನಿಗೆ ಆಹಾರವಾಯಿತು. ಇವು ಕೃಷಿಕಾರ್ಯ, ಸಾಗಾಣಿಕೆ, ನೀರಾವರಿ, ಗಾಣ, ಹುಳುಮೆ ಇತ್ಯಾದಿ ಕೆಲಸಗಳಿಗೆ ಹೆಗಲುಕೊಟ್ಟವು. ಅವುಗಳ ಸಗಣಿ ಉತ್ಕೃಷ್ಟ ಗೊಬ್ಬರವಾಯಿತು. ಅವು ಸತ್ತಮೇಲೂ ಅದರ ಚರ್ಮವು ಉಪಯೋಗಕ್ಕೆ ಬಂದಿತು. ಗೋ ಸಂಪತ್ತೆ ನಾಡಿನ ಸಂಪತ್ತು ಎಂದು ನಂಬಿದ್ದ ಕಾಲದಲ್ಲಿ ಗೋ ಸಂರಕ್ಷಣೆಗಾಗಿ ಮೀಸಲಾದ ಭೂಮಿ ಅಥವಾ ಜಾಗವೇ 'ದೊಡ್ಡಿ'.

ಕೃಷಿ ಪ್ರಧಾನವಾದ ಹಳ್ಳಿಗಳಲ್ಲಿ ಹಾಲು ಕೊಡುವ ಹಸುಗಳನ್ನು, ಉಳುವ ಎತ್ತುಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಸಮೀಪದ ದೊಡ್ಡಿಗೆ ಬಿಡುತ್ತಿದ್ದರು. ಇಂತಹ ದೊಡ್ಡಿಗಳನ್ನು ನಿಭಾಯಿಸಲು ಆಯಾದೊಡ್ಡಿಗೆ ಒಬ್ಬ ಯಜಮಾನನ ಜೊತೆಗೆ ಆಳು–ಕಾಳು, ಮಕ್ಕಳು ಇರುತ್ತಿದ್ದರು. ಯಜಮಾನನ ಹೆಸರೆ ದೊಡ್ಡಿಗೆ ಸೇರಿಕೊಂಡು ವಂಶಪರಂಪರಾನುಗತವಾಗಿ ಬರುತ್ತಿತ್ತು. ಕೆಲವೆಡೆ ಭೂ ಪ್ರದೇಶಕ್ಕೆ ಅನುಗುಣವಾಗಿ ಹೆಸರಿಡುತ್ತಿದ್ದರು. ಆದರೆ ಹೆಚ್ಚಿನ ಹೆಸರು ವ್ಯಕ್ತಿನಾಮಗಳಿಂದಲೆ ಕೂಡಿದೆ. ದೊಡ್ಡಿಗೆ ಹತ್ತಿರವಾಗಿ ಹುಲ್ಲುಗಾವಲು ಅಥವಾ ಗೋಮಾಳ ಇಲ್ಲವೆ ಕಾಡು ಇರುತ್ತಿತ್ತು. ಇವು ನೂರಾರು ಎಕರೆ ಪ್ರದೇಶ ವಿಸ್ತೀರ್ಣವಾಗಿದ್ದು, ದನ, ಕರುಗಳು ಮೇಯಲು ಹಾಗೂ ವಿವಿಧ ಜಾತಿಯ ಹಸುಗಳ ಪೋಷಣೆಗೆ ಆಶ್ರಯವಾಗಿತ್ತು. ಕೆಲವೆಡೆ ರಾಜಾಶ್ರಯವು ಇತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಗೋಮಾಳ ಪರಂಪರೆ ನಾಶವಾಗಿ ಜಾನುವಾರುಗಳಿಗೆ ಮೀಸಲಾಗಿಟ್ಟಿದ್ದ ಭೂಮಿ ಪರಭಾರೆಯಾಯಿತು.

ವ್ಯಕ್ತಿಗಳಿಂದ ಕರೆಯಲ್ಪಡುವ ದೊಡ್ಡಿಗಳು, ಹತ್ತಿರದ ಭೂ ವಿವರಕ್ಕೆ ಅನುಗುಣವಾಗಿ ಇರುವ ದೊಡ್ಡಿಗಳು, ನೆರೆಯ ಅಥವಾ ಸಮೀಪದ ಊರನ್ನು ಗುರುತಿಸಿಕೊಂಡು ಇರುವ ದೊಡ್ಡಿಗಳು, ಕಸುಬು ಆಧಾರಿತ ಜಾತಿಯ ಜನರಿರುವ ದೊಡ್ಡಿಗಳು ಹೀಗೆ ದೊಡ್ಡಿಗಳನ್ನು ವಿಂಗಡಿಸಬಹುದು.

ಪೂಜಾರಿದೊಡ್ಡಿ,	ಮೊಳೆದೊಡ್ಡಿ,	ಮಾರೇಗೌಡನದೊಡ್ಡಿ,
ಚಿಕ್ಕಬೋರೇಗೌಡನದೊಡ್ಡಿ,	ವೀರೆಗೌಡನದೊಡ್ಡಿ,	ಕುಂಟನದೊಡ್ಡಿ,
ಕನ್ನಿದೊಡ್ಡಿ,	ಸಿದ್ದೇಗೌಡನದೊಡ್ಡಿ,	ಅಮ್ಮಳಿದೊಡ್ಡಿ,
ಎಸ್.ಎಂ.ದೊಡ್ಡಿ,	ಪಾರೆದೊಡ್ಡಿ,	ಗೊಲ್ಲರದೊಡ್ಡಿ,
ಗಂಡೆಕಟ್ಟೆದೊಡ್ಡಿ,	ಗೊಲ್ಲರಹಳ್ಳಿದೊಡ್ಡಿ,	ಸರಗೂರದೊಡ್ಡಿ,
ಚಕ್ಕರೆದೊಡ್ಡಿ,	ಹೊಸೂರುದೊಡ್ಡಿ,	ಕುರಿದೊಡ್ಡಿ,
ಬುಡಗನದೊಡ್ಡಿ,	ಹಾರೋಹಳ್ಳಿದೊಡ್ಡಿ,	ತೌಟನಹಳ್ಳಿದೊಡ್ಡಿ,
ವಡ್ಡರದೊಡ್ಡಿ,	ಕುಕ್ಕೂರುದೊಡ್ಡಿ,	ಪಾಲಿದೊಡ್ಡಿ,
ಕೆರೆಮೇಗಲದೊಡ್ಡಿ,	ಕಟ್ಟೆದೊಡ್ಡಿ,	ಸಿದ್ದೇಗೌಡನದೊಡ್ಡಿ,
ಪಿ.ಹಳ್ಳಿ ದೊಡ್ಡಿ,	ಒಳಗೆರೆದೊಡ್ಡಿ,	ಮಿಣಕೆರೆದೊಡ್ಡಿ,
ವಡರದೊಡ್ಡಿ,	ಗಂಗೆದೊಡ್ಡಿ,	ಹನುಮಪುರದೊಡ್ಡಿ,
ಚಿಕ್ಕನದೊಡ್ಡಿ,	ಕುಂತರದೊಡ್ಡಿ,	ಪುಟ್ಟೇಗೌಡನದೊಡ್ಡಿ,
ಗಿಜಿನಾದಾಸನದೊಡ್ಡಿ,	ನಾರಾಯಣತಿಮ್ಮನದೊಡ್ಡಿ,	ಮಾರೆಗೌಡನದೊಡ್ಡಿ,
ವಾಲೆಮರದದೊಡ್ಡಿ,	ನಿಂಗೇಗೌಡನದೊಡ್ಡಿ,	ದಾಸೆಗೌಡನದೊಡ್ಡಿ,
ಅಬ್ಬೂರುದೊಡ್ಡಿ,	ಬೇವಿನಮರದೊಡ್ಡಿ,	ಪಟೇಲರದೊಡ್ಡಿ,
ಇಲಿಗರದೊಡ್ಡಿ,	ಚನ್ನಂಕೆಗೌಡನದೊಡ್ಡಿ,	ನೀಲಕಂಠನದೊಡ್ಡಿ,
ಮಸಿಗೌಡನದೊಡ್ಡಿ,	ಮುನಿಯಪ್ಪನದೊಡ್ಡಿ,	ಕೆಂಚಯ್ಯನದೊಡ್ಡಿ,
ರಾಮೇಗೌಡನದೊಡ್ಡಿ,	ಹುಚ್ಚೇಗೌಡನದೊಡ್ಡಿ,	ಹಾರೋಹಳ್ಳಿದೊಡ್ಡಿ,
ಸಂತೆಮೊಗಳ್ಳಿದೊಡ್ಡಿ,	ಬಾಚಳ್ಳಿದೊಡ್ಡಿ.	

ಪಟ್ಟಣ

ವಾಸ್ತವ್ಯವಾಚಿ. ಅನ್ಯದೇಶಿಯ ವಾರ್ಗಿಕ ಇದಾಗಿದ್ದು, ಪ್ರಾಕೃತದ ಪಟ್ಟಣದ ಸಮಾನ ರೂಪವೇ ಕನ್ನಡದಲ್ಲಿ ಬಳಕೆಯಾಗುತ್ತಿದೆ. "ಸಂಸ್ಕೃತದ ಪಟ್ಟ ಕನ್ನಡಕ್ಕೆ ಬರುವಾಗ ಪಟ್ಟಣವಾಗಿದೆ"[25] ಹಳ್ಳಿಯ ಜನ ಸಾಂದ್ರತೆಗಿಂತ ಹೆಚ್ಚು ಮತ್ತು ನಗರ ಜನಸಾಂದ್ರತೆಗಿಂತ ಕಡಿಮೆ ಇರುವ ಲಕ್ಷಣವನ್ನು ಹೊಂದಿರುವ ವಸತಿ ಸ್ಥಳವಾಗಿದೆ. ವ್ಯಾಪಾರ ವಹಿವಾಟು ಕೇಂದ್ರವಾಗಿದೆ.

ಚನ್ನಪಟ್ಟಣ ದ್ಯಾವಪಟ್ಣ ಬಾಳ್ಯಾಪಟ್ಟಣ ಮಳೂರು ಪಟ್ಟಣ

ಚನ್ನಪಟ್ಟಣ ಈ ಸ್ಥಳನಾಮ ಮೇಲ್ನೋಟಕ್ಕೆ ವ್ಯಕ್ತಿವಾಚಿ ಎನಿಸಿದರು, ಅದರ ಮೂಲ ಚಂದ ಪಟ್ಟಣವೆಂದು. ಇಲ್ಲಿರುವ ವಾರ್ಗಿಕ ವಿಶೇಷವಾಗಿ ಬಂದಿದೆ. ಚಂದಪಟ್ಟಣ > ಚನ್ನಪಟ್ಟಣವಾಗಿದೆ. 'ಚನ್ನಪಟ್ಟಣ' ಚೆಂದಪಟ್ಟಣವಾಗಿತ್ತು. ನಂತರ ದಿನಗಳಲ್ಲಿ ಚನ್ನಪಟ್ಟಣವಾಯಿತು. ಕಾರಣ 'ಚೆಂದ' ಪದವನ್ನು 'ಚನ್ದ' ಎಂದು ಬರೆಯಬಹುದು. ಹಾಗಾಗಿ 'ದ' ಕಾರದ ಜಾಗದಲ್ಲಿ ಮತ್ತೊಂದು 'ನ' ಕಾರ ಬಂದು 'ಚನ್ನ' ಆಗಿದೆ.

ಮಳೂರು ಪಟ್ಟಣವು ಶಾಸನೋಕ್ತವಾಗಿ ಮಣಲೂರು ಎಂಬ ಭೂವೈಶಿಷ್ಟ್ಯವನ್ನು ಹೇಳುವ ನಿರ್ದಿಷ್ಟವಾದ ಭೂವಾಚಿಯಾಗಿದೆ. ಇಲ್ಲಿ ಸ್ಥಳನಾಮದ ನಿರ್ದಿಷ್ಟಗಳಾಗಿ ಭೂವೈಶಿಷ್ಟ್ಯ, ವಸ್ತುವಿನ ಗುಣ ವಿಶೇಷ, ದೈವವಾಚಿ ಮತ್ತು ವ್ಯಕ್ತಿವಾಚಿ ಪದಗಳಿಂದ ನಿರ್ದೇಶನಗೊಂಡಿವೆ.

ಪಾಳ್ಯ

ವಾಸ್ತವ್ಯವಾಚಿ. ಕನ್ನಡದಲ್ಲಿ ಪಾಳೆಯ, ಪಾಳ್ಯ ಎಂದು ಬಳಸಲ್ಪಡುತ್ತಿದೆ. ಪಾಳೆಯ, ಪಾಳ್ಯ ಎಂಬುದಕ್ಕೆ ಸೈನ್ಯದ ಶಿಬಿರ ಎಂಬರ್ಥವಿದೆ. ನಾಡ ರಕ್ಷಣೆಗಾಗಿ ಸೈನಿಕರು ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುವಾಗ, ತಾತ್ಕಾಲಿಕವಾಗಿ ಬೀಡು ಬಿಡುತ್ತಿದ್ದ ಊರ ವಲಯದ ಸ್ಥಳಗಳೇ ಪಾಳ್ಯ. ವಾರ್ಗಿಕವುಳ್ಳ ಸ್ಥಳನಾಮಗಳಾಗಿವೆ.

ಬಂಡೂರು ವಳಗೆರೆಹಳ್ಳಿಪಾಳ್ಯ,
ಸೋಗಲಪಾಳ್ಯ,
ಯಲಚಿಪಾಳ್ಯ,
ನಾಯಕರಪಾಳ್ಯ.

ಆಡಳಿತ ಸಂಬಂಧಿವಾಚಿಯಾದ ಪಾಳೆಯದಿಂದ 'ಪಾಳ್ಯ' ಬಂದಿದೆ. 'ಪಾಳ್ಯ' ವಾರ್ಗಿಕವು ಒಬ್ಬ ವ್ಯಕ್ತಿಯ ಹೆಸರಿನೊಂದಿಗೆ ನಿರ್ದೇಶನಗೊಂಡಿರುವುದು ತಿಳಿಯುತ್ತದೆ. ಆ ಪರಿಸರದ

ಪ್ರಭಾವಿತನಾದ ವ್ಯಕ್ತಿಯಾಗಿರಬಹುದು. ಜೊತೆಗೆ ಪ್ರಾದೇಶಿಕ ಆಡಳಿತಗಾರರ ಹೆಸರೂ ಇರಬಹುದು.

ಪುರ

ವಸತಿ ಸೂಚಿಯಾದ ಇದು ಸಂಸ್ಕೃತ ಭಾಷೆಯ ವಾರ್ಗಿಕ. ಪಟ್ಟಣ, ಮನೆ, ನಗರ, ನದಿ, ಕಾಲುವೆ[26] ಎಂಬರ್ಥಗಳಿವೆ. ಪುರದಿಂದ ಕೊನೆಗೊಳ್ಳುವ ಸ್ಥಳನಾಮಗಳು ಊರಿಗಿಂತ ಗಾತ್ರದಲ್ಲಿ ದೊಡ್ಡವೆಂದು ಭಾವಿಸಲು ಅವಕಾಶವಿದೆ. ಸಾಮಾನ್ಯವಾಗಿ ಇವುಗಳ ಮಧ್ಯೆ ದೇವಾಲಯವಿರುತ್ತದೆ.[27]

ದಕ್ಷಿಣ ಭಾರತದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕಗಳ ಸ್ಥಳನಾಮಗಳಲ್ಲಿ ವ್ಯಾಪಕವಾಗಿ ಈ 'ಪುರ' ವಾರ್ಗಿಕವಾಗಿ ಬಳಕೆಗೊಂಡಿದೆ.

ಕೋಟೆ ಕೊತ್ತಲಗಳ ಊರಿಗೆ, ಹಳ್ಳಿ ಮತ್ತು ಊರಿಗಿಂತ ಹೆಚ್ಚಿನ ಜನಸಂಖ್ಯೆಯುಳ್ಳ ವಾಸಸ್ಥಳಗಳಿಗೆ **'ಪುರ'** ಎಂದು ಕರೆಯುವ ವಾಡಿಕೆಯಿದೆ. ಕಾಲುವೆ ಪಕ್ಕದ ಊರಿಗೂ ಸಹ **'ಪುರ'** ಎಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಇವುಗಳ ಮಧ್ಯೆ ದೇವಾಲಯವಿರುತ್ತದೆ.

ಉದಾಹರಣೆಗೆ:

ಅಂಚೀಪುರ	ಜಗದಾಪುರ	ಲಕ್ಷ್ಮಿಪುರ
ಕಲ್ಲಾಪುರ	ನಾಗಾಪುರ	ಶ್ರೀನಿವಾಸಪುರ
ಕೃಷ್ಣಾಪುರ	ಬ್ರಹ್ಮಣಿಪುರ	ಶಿಕಾರಿಪುರ
ಕೊಂಡಾಪುರ	ಮಾದಾಪುರ	ಹನುಮಂತಪುರ
ಕೋಡೀಪುರ	ರಾಮನರಸಿಂಹರಾಜಪುರ	ಅರಳಾಪುರ
ಗೂಚೀಪುರ	ಸೋಮನಾಥಪುರ	

ಮಂಗಲ / ಅಗ್ರಹಾರ

ಬ್ರಾಹ್ಮಣರ ವಾಸ್ತವ್ಯದ ನೆಲೆಯನ್ನು ಇದು ಸೂಚಿಸುತ್ತದೆ. ಚೋಳರ ಆಡಳಿತ ಕಾಲದಲ್ಲಿ ಬಳಕೆಗೆ ಬಂದ ವಾರ್ಗಿಕವಾಗಿದೆ. ಮಂಗಲ, ಗಾಲ ಎಂಬ ವಾರ್ಗಿಕಗಳುಳ್ಳ, ಮಹಾಜನ, ಬ್ರಾಹ್ಮಣ, ಶ್ರೋತ್ರೀಯ, ಹಾರೋ ಹಾರನ, ಪಾರ್ವನ ಎಂಬ ನಿರ್ದಿಷ್ಟಗಳುಳ್ಳ, ಅಗ್ರಹಾರ, ಅಗರ, ಅರಗ ಎಂಬ ನಿರ್ದಿಷ್ಟ ಅಲ್ಲವೆ ವಾರ್ಗಿಕ ಇಲ್ಲವೆ ಸ್ವತಂತ್ರ ರೂಪವುಳ್ಳ ಗ್ರಾಮನಾಮಗಳು ಬ್ರಾಹ್ಮಣರಿಗೆ ಕೊಟ್ಟ ಅಗ್ರಹಾರಗಳಾಗಿರುತ್ತವೆ.[28]

ಬ್ರಾಹ್ಮಣರಿಗೆ ಅಗ್ರಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡಲಾಗುತ್ತಿತ್ತು. ದಾನ ದತ್ತಿಗಳ ಕೇಂದ್ರ ಎಂಬರ್ಥದಲ್ಲೂ ಬಳಕೆಯಲ್ಲಿದೆ. ನೀರಾವರಿಗೆ ಅನುಕೂಲವಾದ, ವ್ಯವಸಾಯಕ್ಕೆ ಯೋಗ್ಯವಾದ ಭೂ ಪ್ರದೇಶವನ್ನು ದಾನದ ರೂಪದಲ್ಲಿ ಕೊಡುತ್ತಿದ್ದ ಪ್ರದೇಶವಾಗಿತ್ತು. 'ಅಗ್ರ' ಎನ್ನುವುದಕ್ಕೆ ಶ್ರೇಷ್ಠ ಎಂಬ ಅರ್ಥವು, 'ಆಹಾರ' ಎನ್ನುವುದಕ್ಕೆ ದೇಶ ಅಥವಾ ಸ್ಥಳ ಎಂಬ ಅರ್ಥವಿದೆ. ಅಗ್ರ ಮತ್ತು ಆಹಾರಗಳು ಸೇರಿ ಸಮಾಸಗೊಂಡಾಗ ಅಗ್ರಹಾರ ಎಂಬ ಶಬ್ದರೂಪ ದೊರಕುತ್ತದೆ. ಇಂತಹ ಗ್ರಾಮಗಳನ್ನು 'ಚರ್ತುವೇದಿ ಮಂಗಲಂ' ಅಥವಾ 'ಶ್ರೋತ್ರಿಯ ಗ್ರಾಮ' ಎನ್ನಲಾಗುತ್ತಿತ್ತು. ಅಗ್ರಹಾರದ ಮುಖ್ಯ ಉದ್ದೇಶವೇನೆಂದರೆ ಮಹಾ ಜನರು ಮಾಡಬೇಕಾಗಿದ್ದ ಷಟ್ಕರ್ಮಗಳಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳು ಸುಗಮವಾಗಿ ನಡೆದು ವಿದ್ಯಾ ಪ್ರಸಾರದ ಕೇಂದ್ರವಾಗಿ ಅವು ಕೆಲಸ ನಿರ್ವಹಿಸಬೇಕಾಗಿತ್ತು. ಪಟ್ಟಣದಲ್ಲಿ ಬ್ರಾಹ್ಮಣವಾಸಕ್ಕೆಂದು ಮೀಸಲಿರಿಸಿರುತ್ತಿದ್ದ ಇಂತಹ ಕೇರಿಗಳಿಗೆ ಬ್ರಹ್ಮಪುರ ಎಂದು ಹೆಸರಿಡುತ್ತಿದ್ದರು. ಇಂತಹ ಅಗ್ರಹಾರ ಮತ್ತು ಬ್ರಹ್ಮಪುರಿಗಳಲ್ಲಿ ವೇದ, ಉಪನಿಷತ್ತು, ಪುರಾಣ, ಇತಿಹಾಸ, ತತ್ವಶಾಸ್ತ್ರ, ನಾಟಕ, ಮೀಮಾಂಸೆ, ಭರತಗಣಿತ, ವಾತ್ಸಾಯನ ಇತ್ಯಾದಿ ಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದ ಆಚಾರ್ಯರಿದ್ದು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಲೋಕ ಕಲ್ಯಾಣಕ್ಕಾಗಿ ಶಾಸ್ತ್ರಗಳನ್ನು ಪಠಿಸುತ್ತಿದ್ದರು. ಇಂತಹ ಅಗ್ರಹಾರಗಳಲ್ಲಿ ಬ್ರಾಹ್ಮಣೇತರರೂ ವಿಶೇಷವಾಗಿ ವಂಶಪಾರಂಪರ್ಯದ ವಿವಿಧ ಕಸುಬುದಾರರು ಅವರವರ ಕೇರಿಯಲ್ಲಿ ವಾಸಿಸುತ್ತಿದ್ದರು. ಆದರೆ ಅಲ್ಲಿನ ಸಾಗುವಳಿ ಭೂಮಿಯ ಒಡೆತನ ಸರ್ವೆಸಾಮಾನ್ಯವಾಗಿ ಬ್ರಾಹ್ಮಣರದೇ ಆಗಿತ್ತು.

ಪ್ರತಿ ಅಗ್ರಹಾರದ ನಿರ್ಮಾಣ ಹೇಗಿತ್ತೆಂದರೆ ಊರಿನ ನಡುವೆ ಪೂರ್ವಾಭಿಮುಖವಾಗಿ ವಿಷ್ಣು ದೇವಾಲಯ, ಈಶಾನ್ಯಕ್ಕೆ ಈಶ್ವರ ಅಥವಾ ಶಿವ ದೇವಾಲಯ, ಶಿವ ದೇವಾಲಯದ ಮುಂದೆ ಅಥವಾ ಬದಿಗೆ ಒಂದು ಜಲಾಶಯ (ಕೆರೆ) ಇರಬೇಕು. ಇಲ್ಲಿ ಲೌಕಿಕ ಮತ್ತು ಅಲೌಕಿಕ ಸಂಬಂಧವಿರುತ್ತದೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಇಂತಹ ಅಗ್ರಹಾರಗಳಾಗಿ ಕಾರ್ಯನಿರ್ವಹಿಸುವ ಊರುಗಳನ್ನು ಕಾಣಬಹುದಾಗಿದೆ. ಆದರೆ ಮೂಲ ಸ್ಥಳನಾಮ ಘಟಕ ಹಾಗೆಯೇ ಉಳಿದು ಬಂದಿರುವುದು ಅದರ ಪ್ರಾಚೀನ ಅಂತಃಸತ್ವವನ್ನು ಹೇಳುತ್ತದೆ.

ಉದಾ : ಕನ್ನಮಂಗಲ, ಕದರಮಂಗಲ, ಜಾಲಮಂಗಲ, ಭೈರಮಂಗಲ, ಕೋರಮಂಗಲ, ಕರ್ಲಮಂಗಲ.

ವರ

ವಸತಿ ವಾಚಕ. ಹಳ್ಳಿಗಿಂತಲೂ ಜನ ಸಾಂದ್ರತೆ ಹೆಚ್ಚಾಗಿರುವ ಸ್ಥಳ ಇದಾಗಿದೆ.

ಆವರ, ವಾರ, ವರ ಇವು 'ಪುರ'ದ ರೂಪಾಂತರ ಎಂಬುದನ್ನು ಡಾ.ಚಿದಾನಂದಮೂರ್ತಿ ಯವರು

ಪುರ > ವುರ > ವರ > ವಾರ

ಪುರ

ಪುರ > ಹುರ > ಊರು ಎಂಬುದಾಗಿ ತೋರಿಸಿದ್ದಾರೆ.

ಆದರೆ ಎಂ.ಎಂ.ಕಲಬುರ್ಗಿಯವರು ವರ–ವಾರ ಎಂಬವು ಆಹಾರ ಎಂಬ ಆಕೃತಿಮಾದ ಎರಡು ಉಪ ಆಕೃತಿಮಾಗಳೂ ಎನ್ನುತ್ತಾರೆ. ದೀರ್ಘ ಸ್ವರಾದಿಯ 'ವಾರ' ಬಂದರೆ ಅದರ ಹಿಂದಿನ ನಿರ್ದಿಷ್ಟದ ಅಂತ್ಯಸ್ವರ ಹ್ರಸ್ವವಾಗುತ್ತದೆ.[29] ಉದಾ: ನಾಗವಾರ

ಹ್ರಸ್ವ ಸ್ವರಾದಿಯ 'ವರ' ಬಂದರೆ ಅದರ ಹಿಂದಿನ ಸ್ವರ ದೀರ್ಘವಾಗುತ್ತದೆ. ಉದಾ: ದಸಾವರ, ನಾಗವಾರ, ಬೀರವಾರ.

ಹಳ್ಳಿ

ವಾಸ್ತವ್ಯವಾಚಿ. ದಕ್ಷಿಣ ಭಾರತದಾದ್ಯಂತ ಬಳಕೆಯಲ್ಲಿರುವ ದ್ರಾವಿಡ ಮೂಲ ಪದ. ಪಂಚ ದ್ರಾವಿಡ ಭಾಷೆಗಳಲ್ಲಿ ಹಳ್ಳಿಯ ಮೂಲ ಪಳ್ಳಿಯಾಗಿದೆ. ಇದಕ್ಕೆ ಸಣ್ಣೂರು, ಗುಡಿಸಲು ಎಂಬರ್ಥಗಳಿರುವುದಲ್ಲದೆ, ಬೌದ್ಧ, ಜೈನ ದೇವಾಲಯದ ಸ್ಥಳ ಎಂಬರ್ಥಗಳಿವೆ.[30]

ಕಿಟೆಲ್ಲರು ಪಳ್ಳಿ, ಪಳ್ಳಗಳ ಮೂಲ 'ಪಡು'ವಿನಲ್ಲಿದೆ ಎಂದು ಹೇಳುತ್ತಾರೆ. ಕೆಳಗೆ ಬೀಳು, ಕೆಳಗೆ ಹೋಗು ಎಂಬರ್ಥಗಳನ್ನು ಕೊಡುತ್ತಾರೆ.[31] ಚಿಕ್ಕ ಊರು, ಗ್ರಾಮ ಎಂಬ ಅರ್ಥವನ್ನು ಕೊಡುತ್ತದೆ.

ಹಳ್ಳಿಯಿಂದ ಕೊನೆಗೊಳ್ಳುವ ಸ್ಥಳಗಳು ಊರಿನಂತೆ ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ಉದಾಹರಣೆಗೆ:

ಅಂಬಾಡಹಳ್ಳಿ,	ಅಜ್ಜನಹಳ್ಳಿ,	ಅಂಕುಶನಹಳ್ಳಿ,
ಅಕ್ಕೂರು ಹೊಸಹಳ್ಳಿ,	ವಾಳಗೆರೆಹಳ್ಳಿ,	ಉಜ್ಜನಹಳ್ಳಿ,
ಎಲೆತೋಟದಹಳ್ಳಿ,	ಕರ್ಲಳ್ಳಿ,	ಕಾಡಂಕನಹಳ್ಳಿ,

ಕಾಡುಕೊತ್ತನಹಳ್ಳಿ,	ಕೋಡಂಬಳ್ಳಿ,	ಕೋಡಿಹೊಸಹಳ್ಳಿ,
ಕೋತನಹಳ್ಳಿ,	ಕೋಮನಹಳ್ಳಿ,	ಗರಕಳ್ಳಿ,
ಗೋವಿಂದನಹಳ್ಳಿ,	ಚಿಕ್ಕೇನಹಳ್ಳಿ,	ಚೋಳಮಾರನಹಳ್ಳಿ,
ತಾವಾಟನಹಳ್ಳಿ,	ತೆಂಕನಹಳ್ಳಿ,	ದೇವರಹೊಸಹಳ್ಳಿ,
ದೇವರಹಳ್ಳಿ,	ದೊಡ್ಡನಹಳ್ಳಿ,	ನೀಲಕಂಠನಹಳ್ಳಿ,
ನೆಲಮಾಕನಹಳ್ಳಿ,	ಬಾಣಂತನಹಳ್ಳಿ,	ಬಂಡೂರುವಳಗೆರೆಹಳ್ಳಿ,
ಬಾಚಹಳ್ಳಿ,	ಬನಂತನಹಳ್ಳಿ,	ಬಾಣಗಳ್ಳಿ,
ಬ್ಯಾಡರಹಳ್ಳಿ,	ಬೂಹಳ್ಳಿ,	ಬ್ಯಾಡರಹಳ್ಳಿ(ಮಾಕಳಿಹೋಬಳಿ),
ಬೈರನಾಯಕನಹಳ್ಳಿ,	ಭೈರಶೆಟ್ಟಹಳ್ಳಿ,	ಬೊಮ್ಮನಹಳ್ಳಿ,
ಮಂಗಾಡಳ್ಳಿ,	ಮಂಡ್ಯ ಬೊಮ್ಮನಾಯಕನಹಳ್ಳಿ,	
ಮಾರ್ಗನಳ್ಳಿ,	ಮಾರ್ಚಾನಳ್ಳಿ,	ಮೆಣಸಿಗನಹಳ್ಳಿ,
ಮೈಲನಾಯಕನಹಳ್ಳಿ,	ಎಲೆಹೊಸಹಳ್ಳಿ,	ವಡೇರಹಳ್ಳಿ,
ವಿಟ್ಟಲೇನಹಳ್ಳಿ,	ಶಾನುಭೋಗನಹಳ್ಳಿ,	ಸಣಬನಹಳ್ಳಿ,
ಸಾದಹಳ್ಳಿ,	ಸಂತೆಮೊಗೆನಳ್ಳಿ,	ಸಿದ್ಧನಹಳ್ಳಿ,
ಸೀಬನಹಳ್ಳಿ,	ಶೆಟ್ಟಹಳ್ಳಿ,	ಹಳೇಹಳ್ಳಿ,
ಹುಣಸನಹಳ್ಳಿ,	ಹೊಟ್ಟಿಗಾನಹೊಸಹಳ್ಳಿ,	ಹೊಡಿಕೆಹೊಸಹಳ್ಳಿ,
ಹೊನ್ನಾಯಕನಹಳ್ಳಿ,	ಹೊನ್ನಿಗನಹಳ್ಳಿ,	ಹೊಸಹಳ್ಳಿ.

'ಹಳ್ಳಿ' ಪಂಚ ದ್ರಾವಿಡ ಭಾಷೆಯಲ್ಲಿ ಬಳಕೆಯಾಗಿರುವ ವಾರ್ಗಿಕವಾಗಿದೆ. ಜನರವಾಸ ಸ್ಥಳವಾಗಿದೆ. ಹಳ್ಳಿ ಗಾತ್ರದಲ್ಲಿ ಚಿಕ್ಕದಾಗಿದ್ದು ಗ್ರಾಮೀಣ ಸಮುದಾಯದ ಜನರ ನೆಲೆಯಾಗಿರುತ್ತದೆ.

'ಹಳ್ಳಿ'ಯನ್ನು ಸೂಚಿಸುವ ವಾರ್ಗಿಕವನ್ನೊಳಗೊಂಡ ಗ್ರಾಮನಾಮಗಳು ತಾಲ್ಲೂಕಿನಲ್ಲಿ ಅತ್ಯಧಿಕವೆಂದೇ ಹೇಳಬಹುದು. 'ಹಳ್ಳಿ'ಗಳು ಗ್ರಾಮೀಣ ಪರಿಸರವನ್ನು ಒಳಗೊಂಡಿರುವ ನೆಲೆಗಳಾಗಿವೆ. ನಗರದಲ್ಲಿನ ಸುವ್ಯವಸ್ಥೆಗಳನ್ನು ಈ ಹಳ್ಳಿಗಳಲ್ಲಿ ಕಾಣಲು ಸಾಧ್ಯವಿಲ್ಲ. ಗ್ರಾಮೀಣ ಜನಪದ ಸಂಸ್ಕೃತಿಯ ತವರೂರು ಈ ಹಳ್ಳಿಗಳಾಗಿವೆ. ಹೀಗೆ ಹಲವಾರು ಸಾಂಸ್ಕೃತಿಕ ಸಂಗತಿಗಳನ್ನು ನಿರ್ದಿಷ್ಟ ಭಾಗದಲ್ಲಿ ಹೊಂದಿ, ವೈಶಿಷ್ಟ್ಯ ಪೂರ್ಣವಾದ ವಿವರಗಳು ದೊರೆಯುತ್ತವೆ.

'ಹಳ್ಳಿ' ವಾರ್ಗಿಕವನ್ನು ಒಳಗೊಂಡಿರುವ ಸ್ಥಳನಾಮಗಳು ದಕ್ಷಿಣ ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿದ್ದರೆ, ಉತ್ತರ ಕರ್ನಾಟಕದಲ್ಲಿ ಕಡಿಮೆ ಪ್ರಮಾಣದಲ್ಲಿವೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ 'ಹಳ್ಳಿ' ಎಂಬ ವಾರ್ಗಿಕದೊಂದಿಗೆ ಸಸ್ಯವಾಚಿ, ಜನಾಂಗವಾಚಿ, ವೃತ್ತಿವಾಚಿ, ಮಣ್ಣಿನ ಗುಣಲಕ್ಷಣವನ್ನು ಹೇಳುವ, ಜನಸಂಬಂಧಿವಾಚಿಯಾದ ಹಾಗೂ ದೈವವಾಚಿಗಳು ಬಂದಿರುವುದನ್ನು ಗಮನಿಸಬಹುದು. ಅದಕ್ಕಿಂತಲೂ ಮುಖ್ಯವಾಗಿ ವ್ಯಕ್ತಿವಾಚಿಗಳಲ್ಲಿ ಹೆಚ್ಚಾಗಿ ಪುರುಷವಾಚಿಯಾದ ಹೆಸರುಗಳು ಬಂದಿರುತ್ತವೆ.

ಉದಾ : ನೀಲಕಂಠನಹಳ್ಳಿ, ಬೊಮ್ಮನಹಳ್ಳಿ, ಗೋವಿಂದನಹಳ್ಳಿ.

ಹಾಳ

ವಾಸ್ತವ್ಯವಾಚಿ ಪದ. ದ್ರಾವಿಡ ಮೂಲದ ವಾರ್ಗಿಕ. "ತಮಿಳು ಮಲಯಾಳಂಗಳಲ್ಲಿ 'ಪಾಳ' ಎಂದೂ, ತುಳುವಿನಲ್ಲಿ ಪಾಳು ಎಂದೂ, ಕನ್ನಡದಲ್ಲಿ 'ಹಾಳ್', 'ಹಾಳು' ಎಂದು ಬಳಕೆಯಾಗಿದೆ. ಹಾಳ್, ಪಾಳ್ ಮುಂತಾದ ರೂಪಗಳ 'ಪಡು'ವಿನಲ್ಲಿದೆ".[32] "ಕನ್ನಡದಲ್ಲಿ ಈ ಶಬ್ದಗಳಲ್ಲಿ ಪಾಳುಬಿದ್ದ ಭೂಮಿ, ಸಾಗುವಳಿ ಮಾಡದ ಭೂಮಿ, ಒಣಗಿದ ಭೂಮಿ ಎಂಬರ್ಥಗಳಿವೆ".[33] ಭೂಮಿ, ಗದ್ದೆ, ದತ್ತಿ, ದಾನಿ, ಕೆಟ್ಟ, ಬಂಜರು[34] ಎಂಬರ್ಥವನ್ನು ಕೊಡುತ್ತದೆ. ಹಾಳ > ಹಾಳುವಾಗಿದೆ.

ಉದಾ : ಮಾಳಗಾಳು, ಅರಳಾಳು, ಕಬ್ಬಾಳು, ಗಾಣಾಳು, ಬ್ಯಾಲಾಳು, ಭಂಟಗಾಳು.

ಮೊಳಗಾಳ > ಮಳಗಾಳು ಎಂಬ ಶಾಸನೋಲ್ಲೇಖಿತ ರೂಪಗಳು ದೊರಕಿವೆ. ದೈವವಾಚಿ, ಮಣ್ಣಿನ ಗುಣ ಲಕ್ಷಣವನ್ನು ಹೇಳುವ, ವಸ್ತುವಾಚಿ, ಸಸ್ಯವಾಚಿ ಮೊದಲಾದವುಗಳನ್ನು 'ಹಾಳ' ವಾರ್ಗಿಕದೊಂದಿಗೆ ಸ್ಥಳನಾಮಗಳು ನಿರ್ದೇಶನಗೊಂಡಿವೆ.

ಚನ್ನಪಟ್ಟಣ ತಾಲ್ಲೂಕು ಶಿಲೆಯಿಂದ ಕೂಡಿರುವ ಗುಡ್ಡ, ಬೆಟ್ಟ, ಕಾಡುಗಳಿಂದ ಕೂಡಿರುವ ಭೌಗೋಳಿಕ ಲಕ್ಷಣವನ್ನು ಹೊಂದಿದೆ ಎಂಬುದು ಸ್ಥಳನಾಮಗಳ ಮೂಲಕವಾಗಿಯೂ ವ್ಯಕ್ತವಾಗಿದೆ. ಚನ್ನಪಟ್ಟಣ ತಾಲ್ಲೂಕು ಒಟ್ಟಾರೆ ಸ್ಥಳನಾಮಗಳ ವಾಸ್ತವ್ಯಸೂಚಿ ವಾರ್ಗಿಕಗಳನ್ನು ಪರಿಶೀಲಿಸಿದರೆ, ನಗರ ಮತ್ತು ಪಟ್ಟಣ ವಾರ್ಗಿಕವನ್ನೊಳಗೊಂಡ ಸ್ಥಳನಾಮಗಳ ಮತ್ತು 'ಹಳ್ಳಿ' ವಾರ್ಗಿಕವನ್ನೊಳಗೊಂಡ ಸ್ಥಳನಾಮಗಳ ತುಲನಾತ್ಮಕ ಅಧ್ಯಯನದಿಂದ ನಗರ ಮತ್ತು ಪಟ್ಟಣಗಳನ್ನು ಹೊಂದಿರುವ ವಾರ್ಗಿಕಗಳನ್ನು ಹೊಂದಿದ ಊರುಗಳು ಕಡಿಮೆ ಸಂಖ್ಯೆಯಲ್ಲಿವೆ.

ಇ) ನಿರ್ಮಾಣವಾಚಿ

ಮಾನವನು ಹುಲ್ಲು, ನೀರು, ಗೆಡ್ಡೆ ಗೆಣಸು ಯಥೇಚ್ಛವಾಗಿ ದೊರಕುವ ರಕ್ಷಣಾ ಸೌಲಭ್ಯಗಳಿರುವ ಮತ್ತು ವಾಸಕ್ಕೆ ಯೋಗ್ಯವಾದ ಆಯಕಟ್ಟಿನ ಸ್ಥಳಗಳಲ್ಲಿ ತಮ್ಮ ಜನವಸತಿ ನೆಲೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ನಂತರ ಮನುಷ್ಯ ನಿರ್ವಹಿಸುವ ಕಷ್ಟದಾಯಕವಾದ ಕೆಲಸಗಳಿಗೆ ವಿಮುಕ್ತಿಯನ್ನು ನೀಡಿ ತಾನಿರುವಲ್ಲಿಯೇ ಆಹಾರ, ನೀರು ಮೊದಲಾದ ಜೀವನಾವಶ್ಯಕವಾದ ವಸ್ತುಗಳ ಜೊತೆಗೆ ಸುವ್ಯವಸ್ಥಿತವಾದ ವಸತಿ ಸ್ಥಳಗಳನ್ನು ತಾನಿರುವಲ್ಲಿಯೇ ನಿರ್ಮಾಣ ಮಾಡಿಕೊಂಡಿರಲು ಸಾಧ್ಯ.

ಕಾಲಾನಂತರದಲ್ಲಿ ಕಷ್ಟ ಸಹಿಷ್ಣುತೆಯ ಮನೋಭಾವ ಮಾನವನಲ್ಲಿ ಯಾವಾಗ ಕಡಿಮೆಯಾಯಿತೋ, ಹೆಚ್ಚು ಹೆಚ್ಚು ಜನಸಂಖ್ಯೆ ಹೆಚ್ಚಿದಂತೆಲ್ಲಾ ಗ್ರಾಮಗಳ ಉದಯದ ಪ್ರಮಾಣವೂ ಹೆಚ್ಚಾದ ಸಂದರ್ಭದಲ್ಲಿ ಗುಡ್ಡಗಾಡು, ಕಾಡು, ನದಿ ತೀರದ ಪ್ರದೇಶದಿಂದ ಮನುಷ್ಯ ಸಮತಟ್ಟಾದ ಬಯಲು ಪ್ರದೇಶವನ್ನು ತನ್ನ ವಸತಿಗಾಗಿ ಆಯ್ಕೆ ಮಾಡಿಕೊಂಡಿರಬೇಕು. ಆಗ ತಾನು ನೆಲೆಸಿರುವ ಸ್ಥಳದ ಸಮೀಪವೇ ಜೀವನಕ್ಕೆ ಯೋಗ್ಯವಾದ ಹಾಗೂ ತನ್ನ ಕುಟುಂಬ ವರ್ಗದವರ ರಕ್ಷಣೆಗಾಗಿ ಕೆರೆ, ಕಟ್ಟೆ, ಬಾವಿ ಮೊದಲಾದ ಜಲ ಸಂಗ್ರಹಗಳನ್ನು ಕಾಲಮಾನದಲ್ಲಿ ಆಳರಸರ ದುರಾಕ್ರಮಣಗಳಿಂದ ರಕ್ಷಣೆ ಪಡೆಯಲೋಸುಗ ಊರ ಸುತ್ತಲು ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಚಾಲನೆ ನೀಡಿರುವುದು ಇತಿಹಾಸದಿಂದ ತಿಳಿದುಬಂದಿರುವುದು.

ನಿರ್ಮಾಣವಾಚಿಗಳಾದ ಕೆರೆ, ಕಟ್ಟೆ, ಸಾಗರ, ಬಾವಿ, ಕೋಟೆ ಮೊದಲಾದ ವಾರ್ಗಿಕಗಳನ್ನು ಗಮನಿಸಿದಾಗ ಇವುಗಳು ಊರಿನ ಅಥವಾ ಜನರ ಪ್ರಯೋಜನಕ್ಕೆ ಹಾಗೂ ರಕ್ಷಣೆಗಾಗಿಯೇ ನಿರ್ಮಿಸಿರುವುದು ಕಂಡುಬರುತ್ತದೆ. ಇಲ್ಲಿ ಮುಖ್ಯವಾಗಿ ಊರಿನ, ಸಮುದಾಯದ ಕಲ್ಯಾಣವನ್ನೇ ಗುರಿಯಾಗಿಸಿಕೊಂಡು ನಿರ್ಮಿಸಲ್ಪಟ್ಟಿರುವುದು ತಿಳಿದು ಬರುತ್ತದೆ. ನಿರ್ಮಾಣವಾಚಿಗಳಲ್ಲಿ ಮುಖ್ಯವಾಗಿ ಹೆಚ್ಚು ವ್ಯಕ್ತಿನಿಷ್ಟವಾದ ವ್ಯಕ್ತಿವಾಚಿಗಳು ನಿರ್ದಿಷ್ಟ ಭಾಗದಲ್ಲಿ ಕಾಣಿಸಿಕೊಂಡಿವೆ. ತಾನು ನಿರ್ಮಿಸಲ್ಪಟ್ಟ ಕೆರೆ-ಕಟ್ಟೆ-ಬಾವಿಗಳಿಗೆ ತನ್ನ ಅಥವಾ ತನ್ನ ಪ್ರೀತಿಪಾತ್ರದವರ ಹೆಸರನ್ನು ನಿರ್ಮಿಸಿರುವ ವಸ್ತುಗಳ ಜೊತೆ ಅಂಟಿಕೊಂಡು ಬಂದಿರುವುದನ್ನು ಗುರುತಿಸಲು ಸಾಧ್ಯವಿದೆ. ವ್ಯಕ್ತಿವಾಚಿಯಾಗಿ ನಿರ್ಮಿಸಲ್ಪಟ್ಟ ವಸ್ತುಗಳೇ ನಂತರದಲ್ಲಿ ಗ್ರಾಮನಾಮಗಳಾಗಿ ಬಂದಿರಲು ಸಾಧ್ಯ. ನಿರ್ದಿಷ್ಟ ಭಾಗದಲ್ಲಿ ಕೆಲವೊಂದು ಸ್ಥಳನಾಮಗಳಲ್ಲಿ ಭಿನ್ನವಾದ ಇತರ ಅಂಶಗಳು ಬಂದಿವೆ.

ಏರಿ

ಜಲವಾಚಿಯಾದ ಏರಿ; ನೀರು ನಿಲ್ಲಿಸಲು ಕೃತಕವಾಗಿ ನಿರ್ಮಾಣ ಮಾಡಿದ ಕಟ್ಟೆ. ಜಲವಾಚಕದ ಕೆರೆ ಕಟ್ಟೆಯನ್ನು ಹೇಳುವ ಪದ. 'ಮಣ್ಣಿನ ಸಾಲು, ದಂಡ'[35] ಎಂಬರ್ಥಗಳಿವೆ.

ಕೆರೆ, ಕುಂಟೆಯ ನೀರು ನಿಲ್ಲಿಸಲು ಸಹಾಯಕವಾದ ಎತ್ತರದ ಭೂ ಪ್ರದೇಶವಾಗಿದೆ.

ಉದಾ : ಸುಳ್ಳೇರಿ, ದೊಡ್ಡೇರಿ.

ಕೆರೆ

ಇದು ಜಲಸೂಚಕವಾದದ್ದು. ಇದು ಎಲ್ಲಾ ದ್ರಾವಿಡ ಭಾಷೆಗಳಲ್ಲೂ ಬಳಕೆಯಲ್ಲಿದೆ. ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ, A tank, a reserrion[26] ಆದ್ದರಿಂದ ಇದು ನಿರ್ಮಾಣವಾಚಿ ಗುಂಪಿಗೆ ಸೇರುತ್ತದೆ. ಕ >ಗ ಕಾರಾದೇಶವಾಗಿ ಕೆರೆ > ಗೆರೆ ಎಂದು ಬಳಕೆಗೊಳ್ಳುವುದು.

ಕೆರೆ ಸಮೀಪದಲ್ಲಿರುವ ಸಾಮಾನ್ಯವಾಗಿ ಕೆರೆ, ಗೆರೆ, ಗೇರಾ ವರ್ಗೀಕರಣಗಳನ್ನು ಹೊಂದುವುದುಂಟು. ಇವಕ್ಕೆ ಜಲವಾಚಿ ಸ್ಥಳನಾಮಗಳೆಂದು ಕರೆಯುವರು. ತಾವರೆ + ಕೆರೆ = ತಾವರೆಗೆರೆ (ಕೆ > ಗೆ) ತಾವರೆಗೆರಿ (ರೆ > ರಿ) ತಾವರೆಗೆರಾ (ರಿ > ರಾ) ಜನರ ಬಾಯಲ್ಲಿ ಈ ಊರ ಹೆಸರಿನ ಕೊನೆಗಿರುವ ರೆ > ರಿ ಅಥವಾ ರಾ ಆಗಿ 'ಗೆ' ದ ಮುಂದೆ ದೀರ್ಘ ಬಂದು ತಾವರೆಗೆರಿ, ತಾವರೆಗೆರ ಆದುದು ಉಂಟು. ಕೆರೆ ನಿರ್ಮಾಣಗೊಂಡ ಪ್ರಯುಕ್ತ ಆ ಗ್ರಾಮಕ್ಕೆ ಆ ಹೆಸರು ಬಂದಂತೆ ಗ್ರಾಮ ನಿರ್ಮಾಣಗೊಂಡ ಕೆಲಕಾಲದ ಮೇಲೆ ಕೆರೆ ನಿರ್ಮಿಸಲ್ಪಟ್ಟಿದ್ದರು. ಕೆರೆಯ ಪ್ರಸಿದ್ಧಿಯಿಂದ ಮೂಲಗ್ರಾಮ ನಾಮ ಮಾಯವಾಗಿ ಕೆರೆ ಅದು ಇದರ ಪರ್ಯಾಯ ವಾರ್ಗಿಕವಾದುದ್ದು ಉಂಟು.[37] ಜಲಸೂಚಕವಾಗಿ ಹುಟ್ಟಿಕೊಂಡ ಹೆಸರು ಕೆರೆ, ಗೆರೆ, ಕಟ್ಟೆ...... ಇತ್ಯಾದಿ ಜಲಸಂಗ್ರಹದ ಸಂಕೇತವಾದರೂ ಕೆಲವೆಡೆ ಅಭಿಮಾನದಿಂದ ಜನ ತಮ್ಮೂರಿನ ಕೆರೆಯನ್ನು ಸಮುದ್ರ ಅಥವಾ ಸಾಗರಕ್ಕೆ ಹೋಲಿಸಿಕೊಂಡರು.

ಉದಾಹರಣೆಗೆ – ಆಣಿಗೆರೆ, ಅಪ್ಪಗೆರೆ, ತಾಳಿಕೆರೆ, ಕೂರಣಗೆರೆ, ಚಕ್ಕರೆ, ಗೌಡಗೆರೆ, ತಗಚಗೆರೆ, ತಟ್ಟೆಕೆರೆ, ತೂಬಿನಕೆರೆ, ಬೆಳಕೆರೆ, ಮತ್ತೀಕೆರೆ, ಮೂಡಿಗೆರೆ, ಸಂಕಲಗೆರೆ, ಮಲ್ಲನಗೆರೆ, ಮುದ್ದಗೆರೆ, ಕಲ್ಕೆರೆ.

ಮಡು

ಮಡ, ಮಡವು, ಮಡುಪು, ಮಡುಹು Deep Water : a pool.[38] ಗುಂಡಿ, ಆಳವಾದ ನೀರಿರುವ ನದಿಯ ಭಾಗ[39] ಎಂಬರ್ಥದಲ್ಲೂ ಬಳಕೆಯಲ್ಲಿವೆ.

ಉದಾ : ಗೆಂಡೆಮಡು, ಎಡಮಡು, ಕಾಗಿಮಡು, ಇಟ್ಟಮಡು.

ವಾರ್ಗಿಕ 'ಮಡು'ಗೆ ನಿರ್ದಿಷ್ಟಗಳಾಗಿ ದಿಗ್ವಾಚಕ, ಪಕ್ಷಿವಾಚಿ, ವಸ್ತುವಾಚಿ, ಸಸ್ಯವಾಚಿಗಳು ಬಂದಿವೆ.

ಸಮುದ್ರ–ಸಂದ್ರ

ಜಲವಾಚಿ. ವಾರ್ಗಿಕ ಸಾಗರ, ಸಮುದ್ರದ ಪರ್ಯಾಯಪದ. The Sea, The Ocean[40] ಜಲವಾಚಿ, ಕಡಲು, ಸಾಗರ[41] ಇದು ಸಾಮಾನ್ಯವಾಗಿ ವಾಚ್ಯರ್ಥವಾಗಿ ಬಳಕೆಗೊಂಡಿಲ್ಲ. ಕೆರೆ, ಕುಂಟೆ ಮುಂತಾದವುಗಳನ್ನೇ ಉತ್ಪ್ರೇಕ್ಷೆ ಮಾಡಿ ಸಮುದ್ರ, ಸಾಗರ ಎಂಬ ಪದಗಳ ಬಳಕೆ ಮಾಡಿದ್ದಾರೆ. ಸಮುದ್ರ > ಸಂದ್ರವಾಗಿ ಅಂದರೆ ಅನುನಾಸಿಕ 'ಮ್' ಕಾರ 'ಬಿಂದು'ವಾಗಿ ಉಚ್ಚಾರಣೆಗೊಂಡು ಸ್ಥಿತ್ಯಂತರಗೊಂಡಿರಬಹುದು.

ಉದಾ : ಅರಳಾಳಸಂದ್ರ, ಕನ್ನಸಂದ್ರ, ನೀಲಸಂದ್ರ, ವಿರೂಪಸಂದ್ರ, ಗುಮ್ಮಸಂದ್ರ, ತಿಮ್ಮಸಂದ್ರ, ಗುಡ್ಡೆತಿಮ್ಮಸಂದ್ರ, ಹರಿಸಂದ್ರ, ಕೋಣಸಂದ್ರ, ಚನ್ನಸಂದ್ರ, ಜಕ್ಕಸಂದ್ರ, ತಾಮಸಂದ್ರ.

ಇವುಗಳ ನಿರ್ದಿಷ್ಟದಲ್ಲಿ ವ್ಯಕ್ತಿವಾಚಿ, ಪ್ರಾಣಿವಾಚಿ, ದೈವವಾಚಿ, ಜನಾಂಗವಾಚಿ ಮುಂತಾದ ಅಂಶವನ್ನು ಸೂಚಿಸುವ ಪದಗಳಾಗಿ ಬಂದಿವೆ. ಅತಿ ಹೆಚ್ಚಾಗಿ ವ್ಯಕ್ತಿವಾಚಿಗಳು ಬಂದಿದ್ದು, ಇದರಲ್ಲಿ ವ್ಯಕ್ತಿಯು ಇವುಗಳ ನಿರ್ಮಾಣದ ಕಾರ್ಯದಲ್ಲಿ ತನ್ನ ಹೆಸರು ಶಾಶ್ವತವಾಗಿರಬೇಕೆಂಬ ಪರಿಕಲ್ಪನೆ ಇದ್ದಂತಿದೆ. ಜಲವಾಚಿಯಾದ ಇದು ಊರ ಸಮೀಪ ಅಥವಾ ಮಧ್ಯ ಭಾಗದಲ್ಲಿ ಕೆರೆ ಕಟ್ಟೆಗಳನ್ನು ಕಾಣಲು ಸಾಧ್ಯ.

ಸಾಗರ

"ಜಲವಾಚಿಯಾದ ಪದ. ಸಮುದ್ರ ಪದಕ್ಕೆ ಪರ್ಯಾಯಪದವಾಗಿ ಬಳಕೆಗೊಂಡಿದೆ. ದೊಡ್ಡದಾದ ಕೆರೆ, ಕುಂಟೆಯನ್ನು ಸಾಗರ ಎಂದು ಬಳಸುವುದರ ಮೂಲಕ ಉತ್ಪ್ರೇಕ್ಷೆ ಮಾಡಿರುವ ಸಂಭವ ಉಂಟು. ಮಹಾಸಮುದ್ರ, ವಿಶಾಲವಾದ ಕಡಲು".[42]

ಉದಾ : ಬುಕ್ಕಸಾಗರ, ಕಂಸಾಗರ, ಲಕ್ಷ್ಮಿಸಾಗರ, ಮುತ್ತಸಾಗರ, ಕಮ್ಮಸಾಗರ.

'ಸಾಗರ' ನಿರ್ಮಾಣವಾಚಿಯಾದದ್ದು. ನಿರ್ಮಿಸಿದವರ ಅಥವಾ ಪ್ರೀತಿಪಾತ್ರದವರ ಹೆಸರು ನಿರ್ದಿಷ್ಟ ಭಾಗದಲ್ಲಿ ಬಂದಿರುವುದನ್ನು ಪೂರ್ವದಲ್ಲಿನ ಅವರ ವ್ಯಕ್ತಿವಾಚಕಗಳೇ ಸೂಚಿಸುತ್ತಿರುವುದನ್ನು ಕಾಣಬಹುದು.

3.3.3 ಸಂಕೀರ್ಣ ಸ್ಥಳನಾಮಗಳು

ಅ. ಸಾಪೇಕ್ಷಯುಕ್ತ ಸ್ಥಳನಾಮಗಳು

ಸ್ಥಳನಾಮಗಳ ನಿರ್ದಿಷ್ಟ ಭಾಗದ ಆದಿಯಲ್ಲಿ ದೊಡ್ಡ, ಸಣ್ಣ, ಕಿರಿಯ, ಹಿರಿಯ, ಹಳೆಯ, ಹೊಸ, ತಗ್ಗು, ತಿಟ್ಟು ಮೊದಲಾದ ವಿಶೇಷಣಗಳನ್ನು ಬಳಸುವುದರಿಂದ ನಿರ್ದಿಷ್ಟದ ಸಂಖ್ಯೆ ಹೆಚ್ಚಾಗುತ್ತದೆ. ಈ ರೀತಿಯಾದ ಸಾಪೇಕ್ಷ ಸ್ಥಳನಾಮಗಳು ಸಮೀಪವರ್ತಿಯಾದ ಗ್ರಾಮಗಳಾಗಿರುತ್ತವೆ. ಒಂದು ಗ್ರಾಮದಿಂದ ಮತ್ತೊಂದು ಗ್ರಾಮವನ್ನು ಬೇರ್ಪಡಿಸಿ, ಭೌಗೋಳಿಕ ಚಹರೆಯನ್ನು ಗುರುತಿಸಲು ಇಂಥ ವಿಶೇಷಣಗಳು ಬಳಕೆಯಾಗಿರುವುದನ್ನು ನೋಡಬಹುದು.

ಉದಾ : ಚಿಕ್ಕಮಳೂರು, ಹಳೇಹಳ್ಳಿ, ಹೊಸಹಳ್ಳಿ, ಚಿಕ್ಕಕಲ್ಯ, ಚಿಕ್ಕತೊರೆಪಾಳ್ಯ, ದೊಡ್ಡಹಳ್ಳಿ, ಚಿಕ್ಕಮೂಡಿಗೆರೆ, ಚಿಕ್ಕಕುಂಟನಹಳ್ಳಿ, ಚಿಕ್ಕಗಂಗವಾಡಿ, ಚಿಕ್ಕಮಣ್ಣುಗುಡ್ಡೆ, ಹೊಸದೊಡ್ಡಿ.

ಆ. ವಿಶೇಷಣಯುಕ್ತ ಸ್ಥಳನಾಮಗಳು

ಒಂದು ಸ್ಥಳ, ಗ್ರಾಮಕ್ಕೆ ಈಗಾಗಲೇ ಒಂದು ಸ್ಥಳನಾಮವಿದ್ದು ಅದೇ ಹೆಸರಿನ ಮತ್ತೊಂದು ಸ್ಥಳವಿದ್ದರೆ ಅದನ್ನು ಮತ್ತೊಂದರಿಂದ ಬೇರ್ಪಡಿಸಲು ಇಂಥ ವಿಶೇಷಣಗಳ ಬಳಕೆ ಇರುವುದನ್ನು ಕಾಣಬಹುದು. ಸಾಮಾನ್ಯವಾಗಿ ಈ ಬಗೆಯ ವಿಶೇಷಣಗಳು ನಿರ್ದಿಷ್ಟದ ಆದಿಭಾಗದಲ್ಲಿ ಕಾಣಿಸಿಕೊಳ್ಳುವುದುಂಟು. ಭೂವಿವರಣೆ, ವಸ್ತು, ಜಾತಿ, ವೃತ್ತಿ, ವ್ಯಕ್ತಿಯ ಗುಣ, ಗಾತ್ರ, ಬಣ್ಣ, ಪ್ರಾಣಿ, ಪಕ್ಷಿ, ದೈವ ಮೊದಲಾದವು ವಿಶೇಷಣಗಳಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಈ ವಿಶೇಷಣಗಳು ವಾರ್ಗಿಕದಲ್ಲಿ ಬರುವುದಿಲ್ಲ. ಅಂತಹ ಕೆಲವು ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳಲ್ಲಿ ಕಂಡುಬರುತ್ತವೆ.

ಉದಾ : ಎಲೆತೋಟದಹಳ್ಳಿ, ಎಲೆಹೊಸಹಳ್ಳಿ, ಕಾಡುಕೊತ್ತನಹಳ್ಳಿ, ಕೋಡಿಹೊಸಹಳ್ಳಿ, ಗುಡ್ಡೆಹೊಸೂರು, ತೊರೆಹೊಸೂರು, ದೇವರಕಗ್ಗಲಹಳ್ಳಿ, ಹೊಟ್ಟಿಗನ ಹೊಸಹಳ್ಳಿ,, ಅಜ್ಜಬಸವನಹಳ್ಳಿ, ಅರೆಹೊಸಹಳ್ಳಿ, ಹಳ್ಳಿಮಾರನಹಳ್ಳಿ, ಕಣಿವೆ ಮಾದಾಪುರ, ತಿಗಳರ ಹೊಸಹಳ್ಳಿ.

ಇ. ವರ್ಣಸೂಚಕ ಸ್ಥಳನಾಮಗಳು

ಭೌಗೋಳಿಕ ವಸ್ತುಗಳಾದ ಮಣ್ಣು, ಕಲ್ಲು, ನೀರು, ಸಸ್ಯ ಸಂಪತ್ತು ಮೊದಲಾದವುಗಳು ಪರಿಸರಕ್ಕನುಗುಣವಾಗಿ ಕಪ್ಪು, ಬಿಳಿ, ಕೆಂಪು ಬಣ್ಣಗಳಿಂದ ಕೂಡಿವೆ. ಇವುಗಳು ನಿಸರ್ಗವಾಚಿ ಸ್ಥಳನಾಮಗಳ ನಿರ್ದಿಷ್ಟ ಭಾಗದಲ್ಲಿ ಅಥವಾ ನಿರ್ದಿಷ್ಟ ಭಾಗದ ಆದಿಯಲ್ಲಿ ಉಪ ಆಕೃತಿಮಾವಾಗಿ ಸ್ಥಳನಾಮಗಳಲ್ಲಿ ಕಾಣಿಸಿಕೊಂಡು ಬಳಸಲ್ಪಡುತ್ತಿವೆ.

ಉದಾ : ಬೆಳಕೆರೆ, ಕಗ್ಗಲಹಳ್ಳಿ, ಕೆಬ್ಬೆಹಳ್ಳಿ, ಕೆಬ್ಬರ, ಕೆಮ್ಮಾಳೆ, ಕೆಂಪಲನತ್ತ, ಕೆಂಗಲ್, ಬಿಳಗುಂಬ, ಬೆಳಗವಾಡಿ.

ಆ ಪ್ರದೇಶದ ಭೌಗೋಳಿಕ ಪರಿಸರದಲ್ಲಿರುವ ಕಲ್ಲು, ಮಣ್ಣು, ನೀರಿನ ಬಣ್ಣ, ಸಸ್ಯ ಮುಂತಾದವನ್ನು ಈ ವರ್ಣ ಸೂಚಕ ವಿಶೇಷಣಗಳು ವರ್ಣಿಸುತ್ತವೆ. ಕಪ್ಪು, ಬಿಳಿ, ಕೆಂಪು ಈ ಮೂರು ಬಣ್ಣಗಳು ನಿರ್ದಿಷ್ಟ ಸ್ಥಾನದಲ್ಲಿ ಬಂದಿರುವುದನ್ನು ಕಾಣಬಹುದು.

ಹೀಗೆ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕವಾಗಿ ವರ್ಗೀಕರಣವನ್ನು ಮಾಡಿ ತೋರಿಸಲಾಗಿದೆ. "ಇಷ್ಟಾದರೂ ವರ್ಗೀಕರಣ ಸಮಸ್ಯೆ ಬಗೆಹರಿದಂತೆ ಕಾಣುವುದಿಲ್ಲ. ಅರ್ಥಬಾಹುಳ್ಯ; ವೈವಿಧ್ಯತೆಗಳಿಂದಾಗಿ ಈ ವರ್ಗಗಳಿಗೆ ಸೇರದ ಹಲವು ಹೆಸರು ಅವುಗಳ ಹೊರಗುಳಿಯುತ್ತವೆ. ಕೆಲವು ಸಾರಿ ಯಾವ ಅರ್ಥಗ್ರಾಹ್ಯ, ಯಾವುದು ತ್ಯಾಜ್ಯ ಎಂಬ ಸಂದೇಹಕ್ಕೆ ಎಡೆಯಾಗುವುದುಂಟು ಇದು ಸ್ಥಳನಾಮಗಳಲ್ಲಿನ ಅರ್ಥ ವೈಶ್ಯಾಲತೆ ಮತ್ತು ಬಹುಮುಖತೆಯನ್ನು ತೋರಿಸುವುದು".[43]

3.4. ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಸಾಂಸ್ಕೃತಿಕ ಸಂಗತಿಗಳು :

ತುಂಬಾ ಕುತೂಹಲಕಾರಿ ಸಂಗತಿಗಳನ್ನು ಒಳಗೊಂಡು ಅರ್ಥಗರ್ಭಿತವಾಗಿರುವ ಸ್ಥಳನಾಮಗಳು ನಮ್ಮ ಹಿಂದಿನ ತಲೆಮಾರಿನ ಭಾಷೆ, ಜೀವನವಿಧಾನ, ದೃಷ್ಟಿವೈಶಾಲ್ಯ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಅಂಶಗಳ ಮೇಲೆ ಸ್ಪಷ್ಟ ಬೆಳಕನ್ನು ಚೆಲ್ಲುತ್ತವೆ. ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು ಆ ಪ್ರದೇಶದ ಸಾಂಸ್ಕೃತಿಕ ಪರಿಸರದ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಒದಗಿಸಿಕೊಡುವ ಅನುಲ್ಲೇಖಿತ ಗ್ರಂಥಗಳಾಗಿವೆ.

ಮಾನವ ಇತಿಹಾಸದಲ್ಲಿ ಭಾಷೆಗೆ ವಿಶಿಷ್ಟ ಸ್ಥಾನವಿದೆ. ಹೆಸರುಗಳಿಗೆ ಶಬ್ದಗಳೇ ಮೂಲದ್ರವ್ಯ. ಅಕ್ಷರಗಳೇ ಇಟ್ಟಿಗೆಗಳಾದುದರಿಂದ ಭಾಷೆಯ ಬೆಳವಣಿಗೆ ಹಾಗೂ ಅಧ್ಯಯನಕ್ಕೆ

ಅವು ಬಹು ಸಾಮಗ್ರಿಗಳನ್ನು ಒದಗಿಸುತ್ತವೆ. ಸ್ಥಳನಾಮಗಳು ಶಿಲಾಶಾಸನ ಹಾಗೂ ಇತರೆ ಲಿಖಿತ ದಾಖಲೆಗಳಿಗಿಂತ ಪ್ರಾಚೀನವಾಗಿದ್ದು, ಗತಕಾಲದ ರಹಸ್ಯಗಳ ಮೇಲೆ ಬೆಳಕು ಬೀರುತ್ತವೆ. ಪೂರ್ವ ರೂಪಗಳ ತಪಾಸಣೆ, ಪುನರ್ ರಚನೆ, ಅಳಿದ ಶಬ್ದಗಳ ಶೋಧನೆಗೆ ಸ್ಥಳನಾಮಗಳು ಸಹಾಯಕವಾಗುತ್ತವೆ. ಆಯಾಯ ಸಂಪ್ರದಾಯ, ರೂಢಿಗನುಗುಣವಾಗಿ, ನಿಧಾನವಾಗಿ ಸಾಮಗ್ರಿಗಳನ್ನು ಒದಗಿಸುತ್ತವೆ. ಕೆಲವಂತೂ ಭಾಷೆಯ ಪಳೆಯುಳಿಕೆಗಳೆಂದೇ ಹೇಳಬಹುದು.

ಭಾಷೆಯಲ್ಲಿ ನಡೆಯುತ್ತಿರುವ ಕೆಲವು ಬದಲಾವಣೆಗಳನ್ನು ಸ್ಥಳನಾಮಗಳು ತಿಳಿಸಿಕೊಡುತ್ತವೆ. ಆಧುನಿಕ ಜಗತ್ತಿನಲ್ಲಿ ಮನುಷ್ಯ ಪ್ರತಿಯೊಂದು ವಿಷಯದಲ್ಲೂ ಸಮಯದ ಉಳಿತಾಯದ ಕಡೆಗೆ ಗಮನ ಹರಿಸುತ್ತಿದ್ದಾನೆ. ಆತ ಸೌಲಭ್ಯಾಕಾಂಕ್ಷೆಯ ದೃಷ್ಟಿಯಿಂದ ಕೆಲವು ದೀರ್ಘವಾದ ಪದಗಳನ್ನು ಮೊಟಕುಗೊಳಿಸಿ ಉಚ್ಚರಿಸುವುದನ್ನು ಕಾಣಬಹುದು. ಇಂತಹ ಸಂಗತಿಗಳನ್ನು ಸ್ಥಳನಾಮಗಳು ತಿಳಿಸಿಕೊಡುತ್ತವೆ. ಅಲ್ಲದೆ ಆಂಗ್ಲರ ಪ್ರಭಾವದಿಂದಾಗಿ ನಮ್ಮಲ್ಲಿ ಇಂದು ಇಂತಹ ಹೆಚ್ಚಿನ ಪ್ರಯತ್ನಗಳು ನಡೆಯುತ್ತಿವೆ. ಭಾಷೆಯಲ್ಲಿ ಆಗುತ್ತಿರುವ ಈ ಬದಲಾವಣೆಯನ್ನು ಸಹ ಸ್ಥಳನಾಮಗಳು ತಿಳಿಸುತ್ತವೆ.

ಉದಾಹರಣೆ : ಬೈರಶೆಟ್ಟಿಹಳ್ಳಿ > ಬೈಶೆಟ್ಟಳ್ಳಿ

ಹನಿಯೂರು > ಹನೂರು

ಮಾಕಳಿ > ಮಾಕ್ಳಿ

ದ್ಯಾವಪಟ್ಟಣ > ದ್ಯಾಪಟ್ಣ

ಇವುಗಳ ಜೊತೆಗೆ :

ಸಿಂಗರಾಜಿಪುರ – ಎಸ್.ಆರ್.ಪುರ

ಬಂಡೂರ ವಳಗೆರೆಹಳ್ಳಿ – ಬಿ.ವಿ.ಹಳ್ಳಿ

ಎಲೆತೋಟದಹಳ್ಳಿ – ವೈ.ಟಿ.ಹಳ್ಳಿ

ವಿರುಪಾಕ್ಷಿಪುರ – ವಿ.ಪುರ

ಸ್ಥಳನಾಮಗಳು ಹೆಚ್ಚಾಗಿ ಭಾಷೆಗೆ ಸಂಬಂಧಿಸಿದ ವಿಷಯವಾದರೂ ಸಹ ಪ್ರಾಚೀನ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಪುನರ್ ರಚಿಸುವಲ್ಲಿ ಶಾಸನ, ಕಾವ್ಯಗಳಂತೆ ಸ್ಥಳನಾಮಗಳು ಕೂಡಾ ಸಹಾಯಕ ಸಾಮಗ್ರಿಗಳಾಗಿರುವುದನ್ನು ಕಾಣಬಹುದು. ಸ್ಥಳನಾಮಗಳ ವೈಜ್ಞಾನಿಕ ಹಾಗೂ

ಶಾಸ್ತ್ರೀಯ ಅಧ್ಯಯನದಿಂದ ಹಲವಾರು ಚಾರಿತ್ರಿಕ, ಧಾರ್ಮಿಕ, ಭೌಗೋಳಿಕ ಹಾಗೂ ಸಾಮಾಜಿಕ ವಿಷಯಗಳು ತಿಳಿದು ಬರುತ್ತವೆ.

ಸ್ಥಳನಾಮಗಳು ಚನ್ನಪಟ್ಟಣ ತಾಲ್ಲೂಕಿಗೆ ಸಂಬಂಧಿಸಿದ ಹಲವಾರು ರಾಜಕೀಯ ವಿಷಯಗಳನ್ನು ತಿಳಿಸಿಕೊಡುತ್ತವೆ. ಅಲ್ಲದೆ ಈಗಾಗಲೇ ತಿಳಿದಿರುವ ಕೆಲವು ಸಂಗತಿಗಳನ್ನು ದೃಢಪಡಿಸುತ್ತವೆ.

ಚೋಳ ಮತ್ತು ಗಂಗರ ಆಡಳಿತಕ್ಕೆ ಚನ್ನಪಟ್ಟಣ ತಾಲ್ಲೂಕು ಒಳಪಟ್ಟಿದ್ದ ಅಂಶವನ್ನು ಸ್ಥಳನಾಮಗಳು ಖಚಿತವಾಗಿ ದೃಢಪಡಿಸುತ್ತವೆ. ಕನ್ನಮಂಗಲ, ಕದರಮಂಗಲ, ಕೂಡ್ಲೂರು (ರಾಜರಾಜ ಚತುರ್ವೇದಿ ಮಂಗಲಂ) ಮುಂತಾದವು ಚೋಳರ ಅಧೀನದಲ್ಲಿದ್ದ ಪ್ರದೇಶಗಳು. ಸಾಮಾನ್ಯವಾಗಿ ಈ ಮೇಲಿನ ಊರುಗಳು ಅಗ್ರಹಾರಗಳಾಗಿದ್ದುದ್ದಲ್ಲದೆ ಚೋಳರ ಆಡಳಿತಕ್ಕೂ ಒಳಪಟ್ಟಿದ್ದವು. ಚೋಳರ ಕಾಲದಲ್ಲಿ ಅಗ್ರಹಾರವನ್ನು ಚತುರ್ವೇದಿ ಮಂಗಲಗಳೆಂದು ಕರೆಯುತ್ತಿದ್ದರು. ಈ ಮೇಲಿನ ಪ್ರದೇಶಗಳು ಚೋಳರ ಆಡಳಿತಕ್ಕೆ ಒಳಪಟ್ಟಿದ್ದವು ಎಂಬುದನ್ನು ಅಲ್ಲಿ ದೊರಕುವ ತಮಿಳು ಹಾಗೂ ಕನ್ನಡ ಶಾಸನಗಳು ಆ ಊರುಗಳ ದೇವಾಲಯಗಳ ರಚನೆ, ವಾಸ್ತುಶಿಲ್ಪ ಮುಂತಾದವು ದೃಢಪಡಿಸುತ್ತವೆ. ತಾಲ್ಲೂಕಿನಲ್ಲಿ ಹಲವು ಸೈನಿಕ ಕೇಂದ್ರಗಳಿದ್ದುವೆಂಬುದನ್ನು ಸೋಗಾಲಪಾಳ್ಯ, ಯಲಚಿಪಾಳ್ಯ, ಬಿ.ವಿ.ಪಾಳ್ಯ ಮುಂತಾದ ಊರುಗಳ ಹೆಸರುಗಳಿಂದ ತಿಳಿಯಬಹುದಾಗಿದೆ.

ಸ್ಥಳನಾಮಗಳು ಆಯಾ ಸ್ಥಳಗಳ ಚರಿತ್ರೆಗೆ ಪೂರಕವಾಗುವಂತಹ ಮಾಹಿತಿಗಳನ್ನು ಒದಗಿಸುವಂತೆಯೇ, ಸಾಮಾಜಿಕ ಸ್ಥಿತಿಗತಿಗಳನ್ನು ವಿವರಿಸಲು ಸಹಕಾರಿಯಾಗಿವೆ. ಜಾತಿ ಮತ್ತು ವೃತ್ತಿಗೆ ಸಂಬಂಧಿಸಿದಂತೆ ಬಹು ಅಮೂಲ್ಯ ಮಾಹಿತಿಗಳನ್ನು ಸ್ಥಳನಾಮಗಳು ತಿಳಿಸುತ್ತವೆ. ಚನ್ನಪಟ್ಟಣ ತಾಲ್ಲೂಕು ಹಿಂದಿನಿಂದಲೂ ಹಲವಾರು ಜಾತಿ, ಮತ ವ್ಯಕ್ತಿಗಳ ಸಂಗಮ. ಈ ಅಂಶವನ್ನು ಸ್ಥಳನಾಮಗಳು ಒದಗಿಸುತ್ತವೆ. ವ್ಯವಸಾಯ ಪ್ರಧಾನವಾದ ತಾಲ್ಲೂಕಿನಲ್ಲಿ ಮುಖ್ಯವಾಗಿ ಒಕ್ಕಲು ಮಕ್ಕಳು, ಬ್ರಾಹ್ಮಣರು, ಬೇಡರು, ಒಡ್ಡರು, ನಾಯಕರು, ಈಡಿಗರು, ಕುಂಬಾರರು, ಮುಸಲ್ಮಾನರು ಪ್ರಮುಖವಾಗಿದ್ದುದ್ದನ್ನು ಗೌಡಗೆರೆ, ಮಂಚೇಗೌಡನದೊಡ್ಡಿ, ವಸೋರದೊಡ್ಡಿ, ಬ್ರಹ್ಮಣಿಪುರ, ಹಾರೋಕೊಪ್ಪ, ಹಾರೋಹಳ್ಳಿದೊಡ್ಡಿ, ಕನ್ನಮಂಗಲ, ಕುಂಬಾರಹಳ್ಳಿ, ವಡ್ಡರಗುಪ್ಪೆ, ಕದರಮಂಗಲ, ಬ್ಯಾಡರಹಳ್ಳಿ, ನಾಯಕರದೊಡ್ಡಿ, ಹೊನ್ನನಾಯಕನಹಳ್ಳಿ, ಇಲಿಗರದೊಡ್ಡಿ, ಕುಂಬಾರದೊಡ್ಡಿ, ವಡ್ಡರದೊಡ್ಡಿ, ಗೊಲ್ಲರದೊಡ್ಡಿ ಮತ್ತು ಮಹಮದ್‌ಖಾನ್‌ದೊಡ್ಡಿ ಇವು ತಿಳಿಸುತ್ತವೆ. ಇಂದು ಕೆಲವೊಂದು ಊರುಗಳಲ್ಲಿ ಆಯಾ

ಜಾತಿಯ ಜನಗಳು ಪ್ರಧಾನವಾಗಿಲ್ಲದಿದ್ದರೂ ಅಥವಾ ಸಂಪೂರ್ಣವಾಗಿ ಇಲ್ಲದೆ ಇದ್ದರೂ ಸಹ ಹಿಂದೆ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದರು ಎಂಬುದರಲ್ಲಿ ಅನುಮಾನವಿಲ್ಲ.

ಶಾನುಭೋಗನಹಳ್ಳಿ, ಪಟೇಲರದೊಡ್ಡಿ, ಪೂಜಾರಿದೊಡ್ಡಿ, ವಾಜರದೊಡ್ಡಿ, ಜಹಗೀರದೊಡ್ಡಿ, ಕುಂಬಾರದೊಡ್ಡಿ, ಕುರುಬರಹಳ್ಳಿ ಮುಂತಾದವು ತಾಲ್ಲೂಕಿನಲ್ಲಿದ್ದ ವೃತ್ತಿಗಳ ಬಗ್ಗೆ ಸ್ಪಷ್ಟ ನಿದರ್ಶನಗಳಾಗಿವೆ.

ದೇವರ ಹೆಸರುಗಳನ್ನು ಸೂಚಿಸುವ ಕೆಲವು ಸ್ಥಳನಾಮಗಳು ಚನ್ನಪಟ್ಟಣ ತಾಲ್ಲೂಕಿನ ಜನರ ಧಾರ್ಮಿಕ ನಂಬಿಕೆಗಳ ಬಗ್ಗೆ ವಿಶ್ವಾಸನೀಯ ಮಾಹಿತಿಗಳನ್ನು ಸಂಗ್ರಹಿಸಿಕೊಡುತ್ತವೆ.

ಕೃಷ್ಣರಾಜಪುರ, ನಾಗಲಾಪುರ, ನೀಲಕಂಠನಹಳ್ಳಿ, ಗೋವಿಂದನಹಳ್ಳಿ, ಮೈಲನಾಥಪುರ, ರಾಮಾಪುರ, ರಾಮನಹಳ್ಳಿ, ವಿರೂಪಸಂದ್ರ, ವಿರೂಪಾಕ್ಷಪುರ, ವಿಠಲೇನಹಳ್ಳಿ, ಭೈರಾಪಟ್ಟಣ ಮುಂತಾದ ಹೆಸರುಗಳಿಂದ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ವಿಷ್ಣು ಹಾಗೂ ಶಿವ ಇಬ್ಬರಿಗೂ ತಮ್ಮ ಧಾರ್ಮಿಕ ಜೀವನದಲ್ಲಿ ಪ್ರಾಮುಖ್ಯ ಕೊಟ್ಟಿರುವುದನ್ನು ಗಮನಿಸಬಹುದು.

ತಾಲ್ಲೂಕಿನ ಪ್ರಾಚೀನ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆಯೂ ಸ್ಥಳನಾಮಗಳು ಮಹತ್ವದ ದಾಖಲೆಗಳಾಗಿವೆ. ಸಾಮಾನ್ಯವಾಗಿ ಹಿಂದೆ ವಿದ್ಯಾಭ್ಯಾಸ ನಡೆಯುತ್ತಿದ್ದುದು ಅಗ್ರಹಾರಗಳಲ್ಲಿ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಇಂತಹ ಅನೇಕ ವಿದ್ಯಾಭ್ಯಾಸ ಕೇಂದ್ರಗಳಿದ್ದುದನ್ನು ಅಗ್ರಹಾರಗಳ ವಳಗೆರೆಹಳ್ಳಿ, ಕನ್ನಮಂಗಲ, ಕದರಮಂಗಲ, ರಾಜರಾಜ ಚರ್ತುವೇದಿ ಮಂಗಲಂ (ಕೂಡ್ಲೂರು), ದಶವಾರ, ನಾಗವಾರ ಮುಂತಾದ ಸ್ಥಳನಾಮಗಳಿಂದ ಗುರುತಿಸಬಹುದಾಗಿದೆ. ಮಂಗಲ ಎಂದು ಕೊನೆಯಾಗುವ ಹೆಸರುಗಳು ಅಗ್ರಹಾರಗಳನ್ನು ಸೂಚಿಸುವಂತೆಯೇ "ವಾರ ಎಂದು ಕೊನೆಯಾಗುವ ಹೆಸರುಗಳು ಸಹ ಅಗ್ರಹಾರಗಳಾಗಿದ್ದವು".[44]

ಚೋಳರ ಕಾಲದಲ್ಲಿ ಅಗ್ರಹಾರಗಳನ್ನು ಚರ್ತುವೇದಿ ಮಂಗಲಗಳೆಂದು ಕರೆಯುತ್ತಿದ್ದರು. ಶಾಸನದಲ್ಲಿ ಕೂಡ್ಲೂರನ್ನು 'ರಾಜರಾಜ ಚರ್ತುವೇದಿ ಮಂಗಲ' ಎಂದು ಕರೆಯಲಾಗಿದ್ದು, ಕೂಡ್ಲೂರು ಕೂಡ ಅಗ್ರಹಾರವಾಗಿದ್ದ ಅಂಶ ತಿಳಿದು ಬರುತ್ತದೆ. ಹೀಗಾಗಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಹಲವಾರು ಅಗ್ರಹಾರಗಳಿದ್ದು ತಾಲ್ಲೂಕಿನ ಪ್ರಮುಖ ವಿದ್ಯಾಕೇಂದ್ರವಾಗಿತ್ತು ಎಂಬ ಅಂಶವನ್ನು ಸ್ಥಳನಾಮಗಳ ಅಧ್ಯಯನದಿಂದ ತಿಳಿಯಬಹುದಾಗಿದೆ.

ಸ್ಥಳನಾಮಗಳು ಭೌಗೋಳಿಕ ಸ್ವರೂಪ, ಲಕ್ಷಣ, ಸ್ಥಿತಿಗತಿ, ರಚನೆಗಳ ಮೇಲೂ ಬೆಳಕು ಬೀರುತ್ತವೆ. ಸಾಮಾನ್ಯವಾಗಿ ಹೆಸರಿನ ಕೊನೆಯ ತುಂಡುಗಳು ಅಲ್ಲಲ್ಲಿಯ ಭೂಗುಣವನ್ನು ಪ್ರತಿಬಿಂಬಿಸುತ್ತವೆ. ಅತ್ತಿಗುಪ್ಪೆ, ವಂದಾರಗುಪ್ಪೆ, ವಡ್ಡರಗುಪ್ಪೆ, ಕಾರೇಕೊಪ್ಪ, ಲಾಲಾಘಟ್ಟ, ಸುಣ್ಣಘಟ್ಟ ಮುಂತಾದ ಹೆಸರಿನ ಊರುಗಳು ನೆಲದ ಎತ್ತರವನ್ನು; ತರಿಗೆದೊಡ್ಡಿ ಮುಂತಾದವು ಒಣ ಹಾಗೂ ಬಂಜರು ಭೂ ಭಾಗವನ್ನು; ಚಿಕ್ಕಮಣ್ಣುಗುಡ್ಡೆ, ಕೀರನಗುಡ್ಡೆ, ಬಾಬನಗುಂಡು, ಕಣಿವೆದೊಡ್ಡಿ, ಕಾಡುಕೊತ್ತನಹಳ್ಳಿ, ಕಾಡಂಕನಹಳ್ಳಿ ಮುಂತಾದವು ವರ್ತನೆಗಳ ಸಾಮಿಪ್ಯವನ್ನು; ಅರಳಾಸಂದ್ರ, ವಿರುಪಸಂದ್ರ, ಬೆಳಕೆರೆ, ಮತ್ತಿಕೆರೆ, ತಟ್ಟೆಕೆರೆ, ತಗಚಗೆರೆ, ಚಕ್ಕರೆ, ಬುಕ್ಕಸಾಗರ, ಗೌಡಗೆರೆ, ಕಾಲಕೆರೆ, ತೊರೆಹೊಸೂರು, ಮಲ್ಲನಗೆರೆ, ಸಂಕಲಗೆರೆ, ತಿಮ್ಮಸಂದ್ರ, ಮೋಳೆ, ಗಂಡೆಮಡು ಮುಂತಾದವು ನೀರಾವರಿ ಪ್ರದೇಶವನ್ನು ಹಾಗೂ ತಗ್ಗು ಪ್ರದೇಶವನ್ನೂ ಸೂಚಿಸುತ್ತವೆ.

ತಾಲ್ಲೂಕಿನಲ್ಲಿ ಯಾವ ಯಾವ ವಸ್ತುಗಳು ಎಲ್ಲೆಲ್ಲಿ ಹೆಚ್ಚಾಗಿ ಸಿಗುತ್ತಿದ್ದವೆಂಬುದಕ್ಕೆ ಎಲೆತೋಟದ ಹಳ್ಳಿ, ಸೆಣಬನಹಳ್ಳಿ, ಎಲೆಕೇರಿ, ಗೆಂಡೆಕಟ್ಟೆ, ಗೆಂಡೆಮಡು, ಮೆಣಸಿಗನಹಳ್ಳಿ, ಮಾಕಳಿ, ಎಲೆಹೊಸಳ್ಳಿ, ಸುಣ್ಣಘಟ್ಟ ಮುಂತಾದ ಸ್ಥಳನಾಮಗಳು ನಿದರ್ಶನಗಳಾಗಿವೆ. ಹಾಗೆಯೇ ತಾಲ್ಲೂಕಿನ ಯಾವ ಯಾವ ಭಾಗದಲ್ಲಿ ಯಾವ ಗಿಡಮರಗಳು ಹೇರಳವಾಗಿ ಬೆಳೆಯುತ್ತವೆ ಎಂಬುದನ್ನು ಅಂಚಿಪುರ, ಗರಕಹಳ್ಳಿ, ಸೀಬನಹಳ್ಳಿ, ಹುಣಸನಹಳ್ಳಿ, ನೇರಳೂರು, ಅತ್ತಿಗುಪ್ಪೆ, ಬೇವೂರು, ಕಾರೆಕೊಪ್ಪ, ಮತ್ತಿಕೆರೆ, ಬಾಣಗಳ್ಳಿ, ಕಳ್ಳಿಮೇಳೆದೊಡ್ಡಿ, ವಾಲೆತೋಪು ಮುಂತಾದ ಊರುಗಳ ಹೆಸರುಗಳು ಸಾಕ್ಷಿಭೂತವಾಗಿವೆ. ಇಂದು ಮೇಲೆ ಕಾಣಿಸಿದ ವಸ್ತು ಹಾಗೂ ವೃಕ್ಷಗಳು ಮರೆಯಾಗಿದ್ದರೂ ಅವು ಒಂದಾನೊಂದು ಕಾಲದಲ್ಲಿ ಸಮೃದ್ಧವಾಗಿ ದೊರೆಯುತ್ತಿದ್ದವೆಂಬುದಕ್ಕೆ ಮೇಲ್ಕಂಡ ಗ್ರಾಮಗಳು ಸ್ಪಷ್ಟ ನಿದರ್ಶನಗಳಾಗಿವೆ.

ಸ್ಥಳನಾಮಗಳಿಂದ ಸಸ್ಯವರ್ಗದಂತೆಯೇ ಪ್ರಾಣಿವರ್ಗಗಳ ಬಗೆಗಿನ ವಿವರಗಳೂ ದೊರೆಯುತ್ತವೆಂಬುದಕ್ಕೆ ಗೂಚಿಪುರ, ನಾಯ್ದೊಳೆ, ಕೀರಗುಡ್ಡೆ, ಅಕ್ಕೂರು, ಕುಕ್ಕೂರು ಮುಂತಾದ ಊರುಗಳು ಉದಾಹರಣೆಗಳಾಗಿವೆ. ಮೂಡಿಗೆರೆ, ತೆಂಕನಹಳ್ಳಿ, ಸರಗೂರು ಮುಂತಾದವು ಅವುಗಳಿಗೆ ದಿಕ್ಸೂಚಿಗಳಾಗಿವೆ. ಗ್ರಹಗಳನ್ನು ನೆನಪಿಗೆ ತಂದುಕೊಡುವ ಮಂಗಳವಾರಪೇಟೆ, ಶುಕ್ರವಾರಪೇಟೆ, ಅಬ್ಬೂರು, ಅಮ್ಮಳ್ಳಿ ಮುಂತಾದ ಬಂಧುಗಳಿಗೆ ಸಂಬಂಧಿಸಿದ ಹೆಸರುಗಳು ಚನ್ನಪಟ್ಟಣ ತಾಲ್ಲೂಕಿನ ಕಕ್ಷೆಯಲ್ಲಿ ಬರುವುದನ್ನು ಕಾಣಬಹುದು.

ಸ್ಥಳನಾಮಗಳು ಆರ್ಥಿಕ ಇತಿಹಾಸದ ಮೇಲೂ ಕ್ಷಕಿರಣವನ್ನು ಬೀರುತ್ತವೆ. ಪದಾರ್ಥಗಳು ದೊರೆಯುವ ಸ್ಥಳಗಳಂತೆ ಅವುಗಳ ವ್ಯಾಪಾರದ ಸ್ಥಳಗಳನ್ನೂ ಕೂಡ ಸ್ಥಳನಾಮಗಳ

ಅಧ್ಯಯನದಿಂದ ಅರಿಯಬಹುದು. ಚನ್ನಪಟ್ಟಣ, ಬಳ್ಳಾಪಟ್ಟಣ, ದ್ಯಾವಪಟ್ಟಣ, ಭೈರಾಪಟ್ಟಣ, ಮಳೂರುಪಟ್ಟಣ, ಶುಕ್ರವಾರಪೇಟೆ, ಮಂಗಳವಾರಪೇಟೆ, ಸಂತೆಮೊಗೇನಹಳ್ಳಿ ಮುಂತಾದವುಗಳು ಬಹುಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದುದನ್ನು ಗುರುತಿಸಬಹುದಾಗಿದೆ.

ಹೀಗೆ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು ತಾಲ್ಲೂಕಿಗೆ ಸಂಬಂಧಪಟ್ಟ ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ಭೌಗೋಳಿಕ, ಸ್ವರೂಪ, ನೀರಾವರಿ, ಸಸ್ಯ ಹಾಗೂ ಪ್ರಾಣಿ ಸಂಪತ್ತು, ವ್ಯಾಪಾರ ಕೇಂದ್ರಗಳು ಮುಂತಾದ ವಿಷಯಗಳನ್ನು ಸ್ಪಷ್ಟವಾಗಿ ತಿಳಿಸುವ ಅನುಲ್ಲೇಖಿತ ಗ್ರಂಥಗಳಾಗಿ ಉಳಿದಿವೆ.

** ** ** ** **

ಕೊನೆ ಟಿಪ್ಪಣಿಗಳು :

1) ಕನ್ನಡ ವಿಶ್ವಕೋಶ, ಸಂ.1 ಪುಟ–749
2) ಪ್ರೊ.ಡಿ.ಲಿಂಗಯ್ಯ : ಜಾನಪದ ಜಗತ್ತು, ಸಂ.17, ಸಂಚಿಕೆ–4, ಪುಟ–3
3) ಡಾ.ಆರ್.ಕೆ.ಮಣಿಪಾಲ : ಜಾನಪದ ಜಗತ್ತು, ಸಂ.17, ಸಂಚಿಕೆ–4, ಪುಟ–5
4) ದೇ.ಜವರೇಗೌಡರು : ಸ್ಥಳನಾಮ ವ್ಯಾಸಂಗ, ಪುಟ–64
5) ಶಂಬಾಜೋಶಿ : ಕಂನಾಡ ಕಥೆ, ಪುಟ–16, 34
6) ದೇ.ಜವರೇಗೌಡರು : ಸ್ಥಳನಾಮ ವ್ಯಾಸಂಗ, ಪುಟ–74, 77
7) ಶಿವರಾಮ ಕಾರಂತ : ಸಿರಿಗನ್ನಡ ಅರ್ಥಕೋಶ, ಪುಟ–51
8) ಸಂಗಮೇಶ್ ಸವದತ್ತಿಮಠ : ಜನಪದಭಾಷಾ ಸಮೀಕ್ಷೆ, ಪುಟ–62
9) ಆರ್ಕೆ ಮಣಿಪಾಲ : ಹೆಸರಿನಲ್ಲೇನಿದೆ? ಪುಟ–74
10) ಅದೇ : ಪುಟ–74, 75
11) ಎಂ.ಎಂ.ಕಲಬುರ್ಗಿ: ಕನ್ನಡ ನಾಮವಿಜ್ಞಾನ, ಪುಟ–74
12) ಶಿವರಾಮ ಕಾರಂತ : ಸಿರಿಗನ್ನಡ ಅರ್ಥಕೋಶ, ಪುಟ–113
13) ಅದೇ : ಪುಟ–113
14) ಅದೇ : ಪುಟ–124
15) ಕಿಟಲ್ ನಿಘಂಟು, ಪುಟ–358
16) ಅದೇ : ಪುಟ–578
17) ಕನ್ನಡ ನಿಘಂಟು, ಪುಟ–2521

18) ದೇ.ಜವರೇಗೌಡ : ಸ್ಥಳನಾಮ ವ್ಯಾಸಂಗ, ಪುಟ–17

19) ಎಂ.ಚಿದಾನಂದಮೂರ್ತಿ : ವಾಗಾರ್ಥ, ಪುಟ–15

20) ಕನ್ನಡ ಇಂಗ್ಲೀಷ್ ನಿಘಂಟು, ಪುಟ–166

21) Dravidian Etymological Dictronary, ಪುಟ–67

22) ಕೆಮ್ತೂರು ರಘುಪತಿಭಟ್ಟ : ತುಳುನಾಡಿನ ಸ್ಥಳನಾಮಗಳು, ಪುಟ–57, 52

23) ಶಿಮರಾಮಕಾರಂತ : ಸಿರಿಗನ್ನಡ ಅರ್ಥಕೋಶ, ಪುಟ–241

24) ಕಿಟಲ್ ನಿಘಂಟು : ಪುಟ–810

25) ಕನ್ನಡ ನಿಘಂಟು : ಪುಟ–5116

26) ಶಿಮರಾಮಕಾರಂತ : ಸಿರಿಗನ್ನಡ ಅರ್ಥಕೋಶ, ಪುಟ–308

27) ವ್ಹಿ.ಜಿ.ಪೂಜಾರ : ಕನ್ನಡ ಸಾಹಿತ್ಯ ಸಂಬಂಧ, ಪುಟ–190

28) ಎಂ.ಎಂ.ಕಲಬುರ್ಗಿ : ಕನ್ನಡನಾಮವಿಜ್ಞಾನ, ಪುಟ–87

29) ಎಂ.ಎಂ.ಕಲಬುರ್ಗಿ : ಮಾರ್ಗ, ಸಂ.2, ಪುಟ–533

30) ಕೆ.ಸಿ.ಸುರೇಶ್ : ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪುಟ–70

31) ಅದೇ : ಪುಟ–70

32) ಸುರೇಶ್ : ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪುಟ–75, 2011

33) ಅದೇ : ಪುಟ–75

34) ಶಿಮರಾಮಕಾರಂತ : ಸಿರಿಗನ್ನಡ ಅರ್ಥಕೋಶ, ಪುಟ–497

35) ಅದೇ : ಪುಟ–68

36) ಕನ್ನಡ ಇಂಗ್ಲೀಷ್ ನಿಘಂಟು, ಪುಟ–197

37) ಚನ್ನಕ್ಕ ಎಲಿಗಾರ : ಕೆರೆ ಗ್ರಾಮನಾಮ ವಿವೇಚನೆ ಲೇಖನ, ಸಾಧನೆ, ಸಂ.14, ಸಂಚಿಕೆ–3

38) ಕಿಟಲ್ ನಿಘಂಟು : ಪುಟ–1189

39) ಶಿಮರಾಮಕಾರಂತ : ಸಿರಿಗನ್ನಡ ಅರ್ಥಕೋಶ, ಪುಟ–368

40) ಕನ್ನಡ ಇಂಗ್ಲೀಷ್ ನಿಘಂಟು : ಪುಟ–907

41) ಶಿಮರಾಮಕಾರಂತ : ಸಿರಿಗನ್ನಡ ಅರ್ಥಕೋಶ, ಪುಟ–462

42) ಅದೇ : ಪುಟ–471

43) ದೇ.ಜವರೇಗೌಡ : ಸ್ಥಳನಾಮ ವ್ಯಾಸಂಗ, ಪುಟ–72, 73

44) ಡಾ.ಎಂ.ಎಂ.ಕಲ್ಬುರ್ಗಿ : ಮಾರ್ಗ (ಸಂಪುಟ 2) ಪುಟ–531

** ** ** ** **

ಅಧ್ಯಾಯ – 4
ಶಾಸನೋಕ್ತ ಸ್ಥಳನಾಮಗಳು

ಶಾಸನಗಳ ಅಧ್ಯಯನವೆಂದರೆ ಆಳ್ವಿಕೆ ನಡೆಸಿದ ರಾಜರು ಆ ಕಾಲದ ರಾಜಕೀಯ ವ್ಯವಸ್ಥೆಯನ್ನು, ನಡೆದ ಯುದ್ಧಗಳ ಸೋಲು–ಗೆಲುವುಗಳ ಘಟನಾವಳಿಗಳನ್ನು ದಾಖಲಿಸುವುದಷ್ಟೇ ಶಾಸನಗಳ ಗುರಿಯೆಂದು ಭಾವಿಸಿದರೆ ತಪ್ಪಾಗುತ್ತದೆ. ಶಾಸನಗಳು ಸಾಮಂತರಿಗೆ, ಮಾಂಡಲೀಕರಿಗೆ ಮತ್ತು ಇತರ ಅಧಿಕಾರಿಗಳಿಗೆ ಒಪ್ಪಿಸಿದ ಕೇವಲ ಕರ್ತವ್ಯಗಳ ನಿರೂಪಣೆಯಲ್ಲ. ಅಥವಾ ರಾಜರ ಪ್ರಶಸ್ತಿಯನ್ನು ಹೇಳುವ, ವೀರರ ಸಾವನ್ನು, ಸನ್ಯಾಸಿಗಳ ಮರಣವನ್ನು, ದಾನದ ವಿಷಯವನ್ನು, ಕೆರೆಕಟ್ಟೆ, ದೇವಾಲಯಗಳನ್ನು ಕಟ್ಟಿಸಿದ ವಿಷಯವನ್ನು ಮಾತ್ರ ತಿಳಿಸಿಕೊಡದೆ, ಇಡೀ ಭಾರತೀಯ ಸಂಸ್ಕೃತಿಯನ್ನು ತಿಳಿಸಿಕೊಡುವುದು ಶಾಸನಗಳ ಮೂಲಕವೆಂದರೆ ಅತಿಶಯೋಕ್ತಿಯಲ್ಲ.

ಒಂದು ನಾಡಿನ ಸಾಂಸ್ಕೃತಿಕ ಅಧ್ಯಯನಕ್ಕೆ ಸಾಹಿತ್ಯದಷ್ಟೇ ಶಾಸನಗಳು ಮುಖ್ಯ ಆಕರಗಳಾಗುತ್ತವೆ. "ಕನ್ನಡ ನಾಡಿನ ಜೀವನವು ಎಲ್ಲಿಯೂ ಯಾವ ಕೃತಿಗಳಲ್ಲಿಯೂ ಮಡುಗಟ್ಟಿ ನಿಂತಿಲ್ಲ. ಅದು ಕೇವಲ ಕಾವ್ಯಗಳಲ್ಲಿ ಅಲ್ಲಲ್ಲಿ ಗೋಷ್ಪದ ಜಲದಂತೆ ಕಂಡುಬಂದರೂ, ಹೆಚ್ಚು ಪ್ರಮಾಣದಲ್ಲಿ ಹೆಚ್ಚು ವಿಸ್ತಾರವಾಗಿ, ಹೆಚ್ಚು ಶುದ್ಧ ರೂಪದಲ್ಲಿ ಕಾಣಿಸಿಕೊಳ್ಳುವುದು ಶಾಸನಗಳಲ್ಲಿ"[1] ಎನ್ನುವಾಗ ಶಾಸನಗಳಲ್ಲಿನ ಖಚಿತತೆ, ವಸ್ತುನಿಷ್ಠತೆಯನ್ನು ಗಮನಿಸಬಹುದು. ಇಂಥ "ಶಾಸನಗಳು ಐತಿಹಾಸಿಕ ದಾಖಲೆಗಳಷ್ಟೇ ಅಲ್ಲ, ಸ್ಥಳನಾಮ ಕೋಶಗಳೂ ಅಹುದು"[2] ಶಾಸನಗಳು ಹಳ್ಳಿ ಹಳ್ಳಿಗಳಲ್ಲೂ ದೊರಕುತ್ತವೆ. ಅದೇ ರೀತಿ ಪ್ರತಿ ಶಾಸನಗಳಲ್ಲೂ ಊರುಗಳ ಉಲ್ಲೇಖ ಕಂಡುಬರುತ್ತವೆ.

ಶಾಸನಗಳ ಸಹಾಯದಿಂದ ಆಯಾ ಪ್ರದೇಶದ ಚರಿತ್ರೆಯನ್ನು ಅರಿಯಲು ಸಾಧ್ಯವಾಗುತ್ತದೆ. ಆ ಕಾಲದ ಭಾಷಾ ಸ್ವರೂಪವನ್ನು ತಿಳಿಯಲು ಶಾಸನಗಳಿಗಿಂತ ಮತ್ತೊಂದು ಆಕರ ಸಿಗಲು ಸಾಧ್ಯವಿಲ್ಲ. ಇದರಿಂದ ಹೆಚ್ಚು ನಿಖರವಾದ ಭಾಷಾ ಸ್ವರೂಪವನ್ನು ತಿಳಿಯಬಹುದು. "ಸೃಷ್ಟಿಯ ಪ್ರತಿಯೊಂದು ಪದಾರ್ಥಕ್ಕೂ ಒಂದು ಹಿನ್ನೆಲೆ ಇತಿಹಾಸವಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಯೊಂದು ಊರಿಗೂ ಚರಿತ್ರೆ ಇರುತ್ತದೆ. ವ್ಯಕ್ತಿಯ ಹೆಸರು, ಊರಿನ ಹೆಸರು ಬರಿಯ ಹೆಸರುಗಳಲ್ಲ. ಆ ಹೆಸರುಗಳ ಉಸಿರಲ್ಲಿ, ಬಸಿರಲ್ಲಿ ಆತ್ಮಚರಿತ್ರೆ ಇರುತ್ತದೆ."[3] ಆದ್ದರಿಂದ ಚನ್ನಪಟ್ಟಣ ತಾಲ್ಲೂಕಿನಲ್ಲಿಯೂ ಶಾಸನಗಳು ದೊರಕುವುದರಿಂದ ಶಾಸನಗಳಲ್ಲಿ

ದೊರೆಯುವ ಸ್ಥಳನಾಮಗಳ ಮೂಲಕ ಸಂಸ್ಕೃತಿ, ಜನಜೀವನ, ಭಾಷಾಸ್ವರೂಪ, ಚರಿತ್ರೆಯನ್ನು ಅರಿಯಲು ಸಾಧ್ಯವಾದರೂ ಶಾಸನಗಳ ಸಹಾಯದಿಂದ ಸ್ಥಳನಾಮಗಳ ಪ್ರಾಚೀನ ರೂಪಗಳನ್ನು ಗುರುತಿಸಿ, ಅವುಗಳ ಕಾಲದಿಂದ ಕಾಲಕ್ಕೆ ಹೊಂದಿರಬಹುದಾದ ರೂಪವ್ಯತ್ಯಾಸ, ಅರ್ಥವ್ಯತ್ಯಾಸ ಹಾಗೆಯೇ ಮಾನವನ ನೆಲೆಗಳ ಪ್ರಾಚೀನ ರೂಪಗಳ ಅಧ್ಯಯನ ಸ್ಥಳನಾಮಗಳ ಅಧ್ಯಯನಕ್ಕೆ ಪೂರಕ ಎನಿಸುತ್ತದೆ. "ಸ್ಥಳನಾಮಗಳ ಸಹಾಯದಿಂದ ಊರುಗಳ ಗಡಿಗಳನ್ನು, ಕಾಲವನ್ನು ಸಂದೇಹಕ್ಕೆಡೆಯಿರದಂತೆ ನಿರ್ಣಯಿಸಬಹುದು. ರಾಜರ ಇತಿಹಾಸದ ಜೊತೆಗೆ ಊರುಗಳ ಇತಿಹಾಸಕ್ಕೂ ಅವೇ ಆಕರವೆನ್ನಬಹುದು. ಅವುಗಳ ಸ್ಥಾನಮಾನಗಳ ಏರಿಳಿತಗಳೂ, ಕಾಲಕಾಲಕ್ಕೆ ಅವು ಪಡೆದ ಪ್ರತಿನಾಮಗಳ ವಿವರಗಳೂ, ಆಗಾಗ್ಗೆ ಪ್ರಾಪ್ತವಾದ ಉಚ್ಚಾರಣಾ ವ್ಯತ್ಯಾಸಗಳು ಶಾಸನಗಳಿಂದ ತಿಳಿಯುತ್ತವೆ."[4] ಶಾಸನಗಳ ಕಾಲಮಾನಕ್ಕಿಂತಲೂ ಮೊದಲೇ ಸ್ಥಳಗಳಿಗೆ ಹೆಸರುಗಳು ಇರುತ್ತಿದ್ದುದರಿಂದ ಸ್ಥಳನಾಮಗಳಿಗೆ ಶಾಸನಗಳಿಗಿಂತ ಸಾವಿರಾರು ವರ್ಷಗಳ ಪ್ರಾಚೀನ ಇತಿಹಾಸವನ್ನು ಕಟ್ಟಿಕೊಡುವುದರಲ್ಲಿ ಸಂಶಯವಿಲ್ಲ. ಅಂತಹ ಸ್ಥಳನಾಮಗಳ ಸಂಪೂರ್ಣ ಮಾಹಿತಿಯು ನಂತರದ ತಲೆಮಾರಿನ ಜನರಿಗೆ ಇಲ್ಲದೇ ಹೋಯಿತು ಮತ್ತು "ತಲೆಮಾರು ಬದಲಾದಂತೆಲ್ಲ ಸ್ಥಳನಾಮಗಳ ಧ್ವನಿ, ರೂಪ, ಭಾಷಾ ಬಳಕೆಯ ವಿಧಾನ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಬದಲಾವಣೆಯಾಗುತ್ತಲೇ ಮುಂದುವರಿಯುತ್ತವೆ. ಹೊಸಪದಗಳು, ಹೊಸ ಅರ್ಥಗಳು ಹುಟ್ಟಿಕೊಳ್ಳುತ್ತವೆ. ಇವುಗಳೆಲ್ಲವೂ ಸ್ಥಳನಾಮಗಳಲ್ಲಿ ಜೀರ್ಣವಾಗಿವೆ. ಸಂಶೋಧಕನು ಪ್ರಾಚೀನ ಹಾಗೂ ಪ್ರಾಮಾಣಿಕ ರೂಪವನ್ನು ಹುಡುಕ ಬೇಕಾಗುತ್ತದೆ. ಇಂತಹ ಪ್ರಾಮಾಣಿಕ ರೂಪ ದೊರೆಯುವ ಮುಖ್ಯ ಆಕರಗಳಲ್ಲಿ ಶಾಸನಗಳು ಪ್ರಮುಖವಾಗಿವೆ. ಬಳಕೆಯ ಕಾಲ ಸಂದರ್ಭ ಮುಂತಾದ ಹೆಚ್ಚಿನ ಮಾಹಿತಿ ದೊರೆಯುವುದರಿಂದ ಅವು ಹೆಚ್ಚಿನ ವಿಶ್ವಾಸನೀಯ ದಾಖಲೆಗಳೂ ಆಗಿವೆ"[5] ಎಂಬ ಮಾತು ತುಂಬಾ ಗಮನಾರ್ಹವಾದದ್ದು.

ಆದ್ದರಿಂದ ಶಾಸನೋಕ್ತ ಸ್ಥಳನಾಮಗಳಲ್ಲಿ ದೊರೆಯುವ ಪ್ರಾಚೀನ ರೂಪಗಳಿಂದ ಪ್ರಾಮಾಣಿಕ ರೂಪವನ್ನು ಪತ್ತೆ ಹಚ್ಚಲು ಸಹಕಾರಿಯಾಗುತ್ತದೆ. ಅಷ್ಟೇ ಅಲ್ಲದೆ, ಸ್ಥಳನಾಮಗಳಿಂದ ಆಯಾಯ ಕಾಲಮಾನದಲ್ಲಿ ದೊರಕಬಹುದಾದ ರೂಪ, ಧ್ವನಿ ವ್ಯತ್ಯಾಸಗಳ ಒಂದು ಸಾಮಾನ್ಯ ಸ್ವರೂಪವನ್ನು ಅರಿಯಲು ಸಾಧ್ಯವಾಗುತ್ತದೆ. ಅದಕ್ಕಾಗಿಯೇ ಈ ಅಧ್ಯಯನ. ಈ ಅಧ್ಯಾಯದಲ್ಲಿ ಅನುಸರಿಸಲಾಗಿರುವ ಕ್ರಮ ಹೀಗಿದೆ:

1. ಶಾಸನಗಳ ಪೂರ್ಣ ಪ್ರಮಾಣದ ಪಾಠವನ್ನಾಗಲೀ, ಶಾಸನಗಳ ಪ್ರಕಾರದ ಸ್ವರೂಪವನ್ನಾಗಲೀ ಕೊಡಲಾಗಿಲ್ಲ.
2. ಶಾಸನೋಕ್ತ ಸ್ಥಳನಾಮಗಳ ಪಟ್ಟಿಯಲ್ಲಿ ಕ್ರಮವಾಗಿ ಶಾಸನಸಂಖ್ಯೆ, ದೊರಕಿದ ಸ್ಥಳ, ಶಾಸನದಲ್ಲಿ ಸ್ಪಷ್ಟವಾಗಿ ತಿಳಿಸಲಾದ ಕಾಲಮಾನ, ಉಲ್ಲೇಖಿತವಾದ ಸ್ಥಳನಾಮಗಳನ್ನು ಕೊಡಲಾಗಿದೆ.
3. ಉಲ್ಲೇಖಿತ ಸ್ಥಳನಾಮಗಳ ಮೇಲೆ ಸೂಚಿತವಾಗಿರುವ ಸಂಖ್ಯೆಗಳು ಆ ಸ್ಥಳನಾಮವಿರುವ ಶಾಸನದ ಸಾಲುಗಳನ್ನು ನಿರ್ದೇಶಿಸುತ್ತದೆ.
4. ಶಾಸನಗಳಲ್ಲಿ ಬದಲಾಗಿರುವ ಸ್ಥಳನಾಮಗಳ ರೂಪವನ್ನು ಕೊಡಲಾಗಿದೆ.
5. ಈ ಅಧ್ಯಾಯಕ್ಕೆ ಬಿ.ಎಲ್.ರೈಸ್ ಅವರ 'ಎಫಿಗ್ರಾಫಿಯಾ ಕರ್ನಾಟಕ'ದ 1905ರ ಆವೃತ್ತಿಯ, ಬೆಂಗಳೂರು ಜಿಲ್ಲೆಯ ಶಾಸನ ಸಂಪುಟ 9 ನ್ನು ಆಧಾರ ಗ್ರಂಥವನ್ನಾಗಿ ಇರಿಸಿಕೊಳ್ಳಲಾಗಿದೆ.

ಶಾಸನೋಕ್ತ ಸ್ಥಳನಾಮಗಳು :

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ (ಕ್ರಿ.ಶ)	ಉಲ್ಲೇಖಿತ ಸ್ಥಳನಾಮಗಳು
1	ಗೊಲ್ಲಹಳ್ಳಿ	1533	ಮಾಗಡಿ9
2	ಬನ್ನಿಕುಪ್ಪೆ	1667	ಸೊಂಡೆಯ ಕೊಪ್ಪ4–5 ಕಾಲುವಳ್ಳಿ5 ಬಂನಿಕುಪ್ಪೆ5
3	ಕೆಂಪದ್ಯಾಪನಹಳ್ಳಿ	1799	ಪರಾದಹಳ್ಳಿ2
5	ರಾಮನಗರ		ಕುಲೂಸಪೇಟೆ1
7	ಹಾಗಲಹಳ್ಳಿ	1344	ಹಾಗಲಹಳ್ಳಿ19
8	ಹಾಗಲಹಳ್ಳಿ		ಹಾಗಲಹಳ್ಳಿ3–4
10	ಮಾರೇಗೌಡನದೊಡ್ಡಿ	1413	ಸುಗನಹಳ್ಳಿ14 ಹರದೇವನಹಳ್ಳಿ15 ಹಾಗಲಹಳ್ಳಿ15–16
12	ಚನ್ನಮಾರನಹಳ್ಳಿ	1219	ಚಂದಿಮಾದಿಯಹಳ್ಳಿ21 ವೀರಂಗಣಿಗರಹಳ್ಳಿ26

16	ಐಜೂರು	1351	ತಾಳವಾಡಿ6 ಗಂಗವಾಡಿ7 ಮಿಳೆಹಳ್ಳಿ8 ಜೀಯ ಗಉಂಡನಹಳ್ಳಿ9
18	ಬನ್ನಿಕುಪ್ಪೆ	1267	ಚಂನಪಟ್ಟಣ9 ಬನ್ನಿಕುಪ್ಪೆ10
23	ಬ್ಯಾಲಕುಳಿ	1647	ಮಳಲೂರ5–6 ಚಂನಪಟ್ಟಣ5 ಬಲಕುಳಿ11
24	ಕೋಟಹಳ್ಳಿ	1527	ಸಬಕೆ 7
25	ಕೋಟಹಳ್ಳಿ	1311	ಮಳಲೂರು7
25	ನಾಗೋಹಳ್ಳಿ	1651	ಚಂನಪಟ್ಟಣ6 ನಾಗುವಳ್ಳಿ7
28	ಬೆಣೆಹಳ್ಳಿ		ಸುದಮಲು5–6
31	ಬನ್ನಿಕುಪ್ಪೆ	1320	ನಂಜಂನಹಳ್ಳಿ7–8
32	ಚನ್ನಪಟ್ಟಣ	1760	ಮೊಗೆಹಳ್ಳಿ7 ಚಂನಪಟ್ಟಣ7
36	ಹರೂರು	1307	ಮಳಲೂರ16 ಹರಉೂರ21
37	ಹರೂರು	1396	ಹಿರಿಯ ಮಳಲೂರ29–30
47	ಮೋಗೇನಹಳ್ಳಿ	1000	ಗಜ್ಜವಾಡಿ4 ಪುಜ್ಜನೂರ11 ಚತುರ್ವ್ವೇದಿ ಮಜ್ಞಲ12
49	ಮೋಗೇನಹಳ್ಳಿ	1760	ಚಂನಪಟ್ಟಣ10 ಮೋಗೇಹಳಿ10
51	ಮಾಳಗಾಳು	1324	ಮಾಳಿಗೆಹಳ್ಳಿ11
52	ಕೋಡಂಬಳ್ಳಿ	1499	ಕೋಡಂಬಳ್ಳಿ10–11 ಚಂನಪಟ್ಟಣ10

53	ಕೋಡಂಬಳ್ಳಿ	1535	ಕೋಡಂಬಳ್ಳಿ9–10 ಸರಗೂರು10 ನಿಟ್ಟೂರು10 ಅಂಕನಹಳ್ಳಿ14 ತಾರಾಂಕನಹಳ್ಳಿ21 ಕೊಚೆಗೆ 22 ಬೀರನಕಟ್ಟೆ28 ಸಿಧಾಪುರ29
56	ಗರಕಹಳ್ಳಿ	1666	ಗರಿಖಹಳ್ಳಿ8 ಸೋಗಾಲ14 ದಾಸರಹಳ್ಳಿ14 ರಾಮೇನಹಳ್ಳಿ14
58	ಗರಕಹಳ್ಳಿ	1410	ಗ ಕೆಹಳ್ಳಿ4
62	ಇಗ್ಗಲೂರು	1443	ಇಗ್ಗಲೂರ1
63	ಇಗ್ಗಲೂರು	–	ಇಗ್ಗಲೂರು9
64	ಇಗ್ಗಲೂರು	1176	ಇಗ್ಗಲೂರು9
65	ಯಲಿಯೂರು	1278	ಯಲೆವೂರು8
68	ಬೇವೂರು	1660	ಭೇಊರ6
71	ಬೇವೂರು	1331	ಬೇಹೂರ23
73	ಮಾಗೇನಹಳ್ಳಿ	1319	ಮಗುವನಹಳ್ಳಿ27
74	ಮಾಗೇನಹಳ್ಳಿ	1353	ಮುಗುಳನಹಳ್ಳಿ7 ಗೌಡಿಗೆರೆ7 ಹೊಸಹಳ್ಳಿ7–8
98	ಮಳೂರು	1327	ಹಿರಿಯ ಮಳವೂರ15 ರಾಜೇಂದ್ರಸಿಂಹ್ಮ ಚತುರ್ವೇದಿ ಮಂಗಲ16
99	ಮಳೂರು	1572	ಮಳಲೂರ7
108	ಕೂಡ್ಲೂರು	1828	ಕಾನಕಾನಹಳ್ಳಿ9–10 ಕೂಡ್ಲೂರು11
114	ಕೂಡ್ಲೂರು	1767	ಕೂಡ್ಲೂರು7–8

146	ಮಳೂರು	1764	ಚಂನಪಟ್ಟಣ8 ಮಳೂರು ಪಟ್ಟಣ8
147	ಮಳೂರುಪಟ್ಟಣ	1431	ಮಳಲೂರ ಪಟ್ಟಣ4
148	ಮಳೂರುಪಟ್ಟಣ	–	ಕೆಳಲೆ3 ಮಳಲೂರಪಟ್ಟಣ3 ಹೊಂಗನೂರ4
155	ಚಕ್ಕರೆ	1534	ರಾಜರಾಜಚೋಳ ಚತುರ್ವೇದಿ ಮಂಗಲ10–11 ಚಕ್ಕೆ 11
156	ಹೊಸಹಳ್ಳಿ	1513	ಕೂಡಲೂರ10 ಹೊಸಹಳ್ಳಿ11
158	ಚಕ್ಕಲೂರು	1478	ಗೌಡಹಳ್ಳಿ3 ಚಕ್ಕಲೂರು6
162	ಕುಕ್ಕೂರು	1426	ಕೊಡಂಬಳ್ಳಿ6
168	ಮಾರ್ಚನಹಳ್ಳಿ	1336	ಮಾರಚನಹಳ್ಳಿ7
170	ಕನ್ನಮಂಗಲ	–	ಕಂನಮಂಗಲ2 ಹೊಸಹಳ್ಳಿ2 ಮರಗಾಪಟ್ಣ2 ಗೊಲ್ಲಹಳ್ಳಿ3 ಚಾಮನಹಳ್ಳಿ3
171	ಕನ್ನಮಂಗಲ	–	ಕಂನಮಂಗಲ3
183	ದೊಡ್ಡಗಂಗವಾಡಿ	1294	ಹಿರಿಯ ಗಂಗವಾಡಿ4

ಚನ್ನಪಟ್ಟಣ ತಾಲ್ಲೂಕಿನ ಶಾಸನಗಳಲ್ಲಿ ಬದಲಾಗಿರುವ ಗ್ರಾಮನಾಮಗಳ ರೂಪಗಳು :

ಕ್ರ.ಸಂ.	ಹೀಗಿನ ರೂಪ	ಶಾಸನದಲ್ಲಿನ ರೂಪ
1.	ಚನ್ನಪಟ್ಟಣ	ಚಂನಪಟ್ಟಣ
2.	ಮೊಗೇನಹಳ್ಳಿ	ಮೊಗೆಹಳ್ಳಿ
3.	ಅರೂರು	ಹರಊರ
4.	ಮೈನಾಯ್ಕನಹಳ್ಳಿ	ಮೈನಾಕನಹಳ್ಳಿ
5.	ಮಾಳಗಾಳು	ಮಾಳಿಗೆಹಳ್ಳಿ
6.	ಕೋಡಂಬಹಳ್ಳಿ	ಕೋಡಂಬಳ್ಳಿ
7.	ಸರಗೂರು	ಸರಗೂರ
8.	ಕಾಡಅಂಕನಹಳ್ಳಿ	ತಾರಾಂಕನಹಳ್ಳಿ
9.	ಗರಕಹಳ್ಳಿ	ಗರಿಖಹಳ್ಳಿ / ಗರುಕೆಹಳ್ಳಿ
10.	ಇಗ್ಗಲೂರು	ಇಗ್ಗಲೂರ
11.	ಬಾಣಂತಹಳ್ಳಿ	ಬಾಣತಿಹಳ್ಳಿ
12.	ಬೇವೂರು	ಭೇಊರ
13.	ಸೀಮೆ	ಶ್ರೀಮೆ
14.	ಮಾಗೇನಹಳ್ಳಿ	ಮುಗುವನಹಳ್ಳಿ / ಮುಗುಳನಹಳ್ಳಿ
15.	ಮಳೂರು	ಮಳಲೂರ
16.	ಕೂಡ್ಲೂರು	ಕೂಡ್ಲೂರ
17.	ಮಳೂರುಪಟ್ಟಣ	ಮಳಲೂರಪಟ್ಟಣ
18.	ಎಲೆಕೇರಿ	ಎಲೆಯಕೇರಿ
19.	ಅತ್ತಿಗುಪ್ಪೆ	ಅತ್ತಿಕುಪ್ಪೇ
20.	ಚಕ್ಕಲೂರು	ಚಕ್ಕಲೂರ
21.	ಕುಕ್ಕೂರೂ	ಕುಕ್ಕು
22.	ಬೈರಾಪಟ್ಟಣ	ಬೈರವಪಟ್ಟಣ
23.	ಮಾದನೂರು	ಮಾಗನೂರ
24.	ಮಾರ್ಚನಹಳ್ಳಿ	ಮಾರಚನಹಳ್ಳಿ
25.	ಕನ್ನಮಂಗಲ	ಕಂನಮಂಗಲ
26.	ದಶವಾರ	ದಸವಾರ
27.	ದೊಡ್ಡಮಳೂರು	ಹಿರಿಯಮಳೂರು

28.	ಬನ್ನಿಗುಪ್ಪೆ	ಬಂನಿಕುಪ್ಪೆ
29.	ಕ್ಲೋಸಪೇಟೆ	ಕುಲೂಸಪೇಟೆ
30.	ಹಾಗಲಹಳ್ಳಿ	ಹಾಗಲಹಳ್ಳಿ
31.	ಸುಗ್ಗನಹಳ್ಳಿ	ಸುಗನಹಳ್ಳಿ
32.	ಚನ್ನಮಾನಹಳ್ಳಿ	ಚಂದಿಮಾದಿಯಹಳ್ಳಿ

** ** ** ** **

ಕೊನೆ ಟಿಪ್ಪಣಿಗಳು :

1. ಎಂ.ಚಿದಾನಂದಮೂರ್ತಿ : ಚಿದಾನಂದ ಸಮಗ್ರ, ಸಂ.1, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ–9
2. ದೇ.ಜವರೇಗೌಡ : ಸ್ಥಳನಾಮ ವ್ಯಾಸಂಗ, ಪುಟ–22
3. ಶಂ.ಬಾ.ಜೋಶಿ : ಎಡೆಗಳು ಹೇಳುವ ಕಂನಾಡ ಕತೆ, ಪುಟ–6, 7
4. ದೇ.ಜವರೇಗೌಡ : ಸ್ಥಳನಾಮ ವ್ಯಾಸಂಗ, ಪುಟ–22
5. ಸುರೇಶ : ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪುಟ–91
6. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.800, ಶಾ.ಸಂ.23
7. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.309, ಶಾ.ಸಂ.32
8. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.310, ಶಾ.ಸಂ.36
9. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.315, ಶಾ.ಸಂ.39
10. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.315, ಶಾ.ಸಂ.51
11. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.316, ಶಾ.ಸಂ.52
12. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.317, ಶಾ.ಸಂ.53
13. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.317, ಶಾ.ಸಂ.53
14. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.318, ಶಾ.ಸಂ.56/58
15. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.320, ಶಾ.ಸಂ.62
16. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.321, ಶಾ.ಸಂ.65

17. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.322, ಶಾ.ಸಂ.68

18. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.324, ಶಾ.ಸಂ.71

19. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.325, ಶಾ.ಸಂ.73

20. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.328, ಶಾ.ಸಂ.99

21. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.330, ಶಾ.ಸಂ.108

22. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.335, ಶಾ.ಸಂ.147

23. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.335, ಶಾ.ಸಂ.148

24. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.340, ಶಾ.ಸಂ.153

25. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.342, ಶಾ.ಸಂ.158

26. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.344, ಶಾ.ಸಂ.162

27. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.345, ಶಾ.ಸಂ.164

28. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.345, ಶಾ.ಸಂ.166

29. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.346, ಶಾ.ಸಂ.168

30. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.346, ಶಾ.ಸಂ.170

31. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.349, ಶಾ.ಸಂ.182

32. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.40, ಶಾ.ಸಂ.98

33. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.299, ಶಾ.ಸಂ.2

34. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.300, ಶಾ.ಸಂ.5

35. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.301, ಶಾ.ಸಂ.7

36. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.302, ಶಾ.ಸಂ.10

37. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ.9, ಪು.303, ಶಾ.ಸಂ.12

** ** ** ** **

ಅಧ್ಯಾಯ – 5

ಜನಪದ ಸಾಹಿತ್ಯದ ನೆಲೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು

ನಾಮ ವಿಜ್ಞಾನವು ಭಾಷಾ ವಿಜ್ಞಾನದ ಒಂದು ಘಟಕವಾಗಿದೆ. ಜಾನಪದ ಮತ್ತು ಭಾಷಾ ವಿಜ್ಞಾನಗಳ ಸಂಬಂಧ ಬಹಳ ನಿಕಟವರ್ತಿಯಾಗಿದ್ದು, ಅವೆರಡರ ಅಧ್ಯಯನ ಕ್ಷೇತ್ರ ಆಡು ಮಾತನ್ನು ಅವಲಂಬಿಸಿವೆ. ಕ್ಷೇತ್ರ ಮಾಹಿತಿಯಲ್ಲದೇ ಇವೆರಡರ ಅಧ್ಯಯನಕ್ಕೆ ಯಾವುದೇ ಬೆಲೆ ಸಿಗಲಾರದು. "ಜಾನಪದ ಭಾಷಾ ವಿಜ್ಞಾನಗಳ ಸಂಬಂಧವೂ ಅಷ್ಟೇ ನಿಕಟವಾದುದು. ವಿವರಣಾತ್ಮಕ, ಐತಿಹಾಸಿಕ ಹಾಗೂ ತೌಲನಿಕ ಭಾಷಾ ವಿಜ್ಞಾನಕ್ಕೆ ಜನಪದ ಸಾಹಿತ್ಯ ಅಮೂಲ್ಯ ಸಾಮಾಗ್ರಿಯನ್ನೊದಗಿಸಬಲ್ಲದು. ಸಾಮಾನ್ಯ ಜನರ ಭಾಷೆ ಗ್ರಾಮ್ಯ, ಅಸಂಸ್ಕೃತವೆಂದು ಶಿಷ್ಟಜನ ಮೂಗು ಮುರಿಯುತ್ತಿದ್ದಾಗ ಭಾಷೆಯ ಮೂಲ ಸ್ವರೂಪ ಆಡು ಮಾತಿನಲ್ಲಿ ಪ್ರತಿಬಿಂಬಗೊಳ್ಳುತ್ತದೆ. ಗ್ರಾಮ್ಯ ಭಾಷೆ ಅಸಂಸ್ಕೃತವಲ್ಲವೆಂದು ಹೇಳಿದ್ದು ಭಾಷಾವಿಜ್ಞಾನ. ಶಾಸನ ಭಾಷೆಯ ಅಧ್ಯಯನ ಎಷ್ಟು ಮುಖ್ಯವೋ, ಎಷ್ಟು ಉಪಯುಕ್ತವೋ ಈ ಸಾಹಿತ್ಯ ಭಾಷೆಯ ಅಧ್ಯಯನವೂ ಅಷ್ಟೇ ಪ್ರಯೋಜನಕಾರಿ. ಅಷ್ಟೇ ಅಲ್ಲ ಅದಕ್ಕಿಂತಲೂ ಇದು ಒಂದು ಕೈ ಮೇಲೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಶಾಸನದ ಭಾಷೆ ಆಡು ಮಾತಿಗೆ ಹತ್ತಿರವೆನ್ನಬಹುದಾದರೂ ಅದು ಆಡು ಮಾತಲ್ಲ. ಆಡು ಮಾತಿನ ವ್ಯಾಪಕತೆ ವೈವಿಧ್ಯವಾಗಲೀ ಅಥವಾ ಜೀವಂತಿಕೆಯಾಗಲಿ ಅಲ್ಲಿ ಕಾಣುವುದಿಲ್ಲ"[1] ಮೌಖಿಕ ಸಾಹಿತ್ಯ ಪರಂಪರೆಯ ದಾಸ್ತಾನಾದ ಜಾನಪದಕ್ಕೂ, ಭಾಷೆಯ ಮೂಲತತ್ವಗಳನ್ನು ತನ್ನೊಡಲಿನಲ್ಲಿ ಬಚ್ಚಿಟ್ಟುಕೊಂಡಿರುವ ಜನರ ಆಡುಮಾತಿಗೂ ಮಹತ್ವವೆಷ್ಟೆಂಬುದು ಇದರಿಂದ ವ್ಯಕ್ತವಾಗುತ್ತದೆ. ಕೆಲವು ಭಾಷಾ ಮೂಲ ರೂಪಗಳನ್ನು, ಪದಗಳ ಅವಶೇಷಗಳನ್ನು, ಭಾಷೆಯ ವಿಶಿಷ್ಟ ಪದ ಪ್ರಯೋಗಗಳನ್ನು ಜಾನಪದದಲ್ಲಿ ಕಾಣಲು ಸಾಧ್ಯ. ಒಂದು ಭಾಷೆಯ ವಿಕಾಸ ಕ್ರಮವನ್ನು ಅರಿಯಲು ಜಾನಪದ ಅಧ್ಯಯನವು ಅಮೂಲ್ಯ ಸಾಮಾಗ್ರಿಯಾಗಿ ಪರಿಣಮಿಸುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಜಾನಪದ ಸಾಹಿತ್ಯ ಪ್ರಕಾರಗಳಾದ ಪುರಾಣ, ಐತಿಹ್ಯ, ಒಗಟು, ಕಥೆ, ಗಾದೆ ಮತ್ತು ಗೀತೆ ಮುಂತಾದವುಗಳಲ್ಲಿ ದಾಖಲಾದ ಸ್ಥಳನಾಮಗಳನ್ನು ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾದ ಅಧ್ಯಯನಕ್ಕೆ ಒಳಪಡಿಸಬೇಕಾದ ಅವಶ್ಯಕತೆ ಇದೆ. ಅಲ್ಲದೆ ಸ್ಥಳನಾಮ ಅಧ್ಯಯನದಲ್ಲಿ ಮೌಖಿಕ ಪರಂಪರೆಯ ವಾರಸುದಾರರಾದ ನಮ್ಮ ಜನಪದರು ಹಾಗೂ ಅವರು ಬಳಸುವ ಆಡುಮಾತು ಕೂಡ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಸ್ಥಳನಾಮಕರಣ ಕ್ರಿಯೆಯಲ್ಲಿ ತಾವು ಬಳಸುವ ಜೀವಂತ ಆಡುಭಾಷೆಯ ಕಥೆಗಳಲ್ಲಿ ದಾಖಲಾಗಿರುತ್ತವೆ. "ಶಾಸನಗಳು, ಶಿಲಾ

ಶಾಸನಗಳಿಗಿಂತ ಅತ್ಯಂತ ಪ್ರಾಚೀನವಾಗಿದ್ದು, ಅಷ್ಟೇ ಏಕೆ ಲಿಖಿತ ದಾಖಲೆಗಳಿಗಿಂತ ಹಳೆಯದಾಗಿದ್ದು, ಭೂತಕಾಲದ ನಾನಾಸ್ತರಾಂತರ್ಗತವಾಗಿರುವ ರಹಸ್ಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಪೂರ್ವ ರೂಪಗಳ ತಪಾಸಣೆಗೆ ಅಥವಾ ಪುನರ್ರಚನೆಗೆ ಅಳಿದ ಶಬ್ದಗಳ ಶೋಧನೆಗೆ ಅವು ಸಹಾಯಕವಾಗುತ್ತವೆ. ಪದಗಳ ಮೂಲಾರ್ಥವನ್ನರಿಯಬೇಕಾದರೂ ಅವುಗಳಿಗೆ ಶರಣು ಹೋಗಬೇಕಾಗುತ್ತದೆ. ಆಯಾಯ ಯುಗದ ಸಂಪ್ರದಾಯ ರೂಢಿಗನುಗುಣವಾಗಿ ನಿಧಾನವಾಗಿಯಾದರೂ ವ್ಯತ್ಯಸ್ತವಾಗುವ ಹೆಸರುಗಳು ಭಾಷಾ ಚರಿತ್ರೆಯ ರಚನೆಗೆ ಅಪೂರ್ವ ಸಾಧನ ಸಾಮಾಗ್ರಿಗಳನ್ನೊದಗಿಸುತ್ತವೆ. ಕೆಲವಂತು ಭಾಷೆಯ ಪಳೆಯುಳಿಕೆಗಳೆಂದೇ ಹೇಳಬಹುದು. ವರ್ಣನಾತ್ಮಕ, ಚಾರಿತ್ರಿಕ ಹಾಗೂ ತುಲನಾತ್ಮಕ ಭಾಷಾವಿಜ್ಞಾನ ವಿಭಾಗಗಳ ಸೂತ್ರ ಸಮುದಾಯದ ಹಿನ್ನೆಲೆಯಲ್ಲಿ ಇವುಗಳ ಅಧ್ಯಯನ ನಡೆದಾಗ ವರ್ಣಪದ ಮತ್ತು ವ್ಯಾಕರಣ ಪ್ರಕ್ರಿಯೆಗಳ ಮೇಲೆ ಹಲವಾರು ಹೊಸ ಸಂಗತಿಗಳು ಗೋಚರವಾಗುತ್ತವೆ. ಉಪಭಾಷಾ ಪರಿವೀಕ್ಷಣೆಗೆ ಹಾಗೂ ನಿಘಂಟು ರಚನೆಗೆ ಈ ಅಧ್ಯಯನದಿಂದ ಅಪಾರ ಪ್ರಯೋಜನವೊದಗುತ್ತದೆ."[2] ಭಾಷಾಶಾಸ್ತ್ರಜ್ಞರು ತಾವು ಮಂಡಿಸುವ ಸಿದ್ಧಾಂತಗಳನ್ನು, ಪರಿಣಾಮಕಾರಿಯಾಗಿ ವಿಶ್ಲೇಷಣೆ ಮಾಡಲು, ಭಾಷಾ ತತ್ವಗಳನ್ನು, ಸಿದ್ಧಾಂತಗಳನ್ನು ಒರೆಗೆ ಹಚ್ಚಲು ಹಿಂದಿನಿಂದಲೂ ಬಾಯಿಂದ ಬಾಯಿಗೆ ಮೌಖಿಕ ಪರಂಪರೆಯ ಮೂಲಕ ಉಳಿದು ಬಂದಿರುವ ಮೌಖಿಕ ಸಾಮಾಗ್ರಿಗಳ ಜೊತೆಗೆ ತುಲನಾತ್ಮಕ ಅಧ್ಯಯನಕ್ಕೆ ಒಳಪಡಿಸಿದಾಗ ಮಾತ್ರ ನಿಖರವಾಗಿ ನಿರ್ವಚನಗಳನ್ನು ಕೊಡಲು ಸಾಧ್ಯವಾಗುತ್ತವೆ.

ನಾಮ ವಿಜ್ಞಾನವೂ ಕೂಡ ಭಾಷಾ ವಿಜ್ಞಾನದ ಒಂದು ಅಂಗವಾಗಿರುವುದರಿಂದ ಮೌಖಿಕ ಸಾಮಾಗ್ರಿಗಳಾದ ಕತೆ, ಒಗಟು, ಪುರಾಣ, ಐತಿಹ್ಯ ಮತ್ತು ಗಾದೆ ಮೊದಲಾದವುಗಳನ್ನು ಭಾಷಿಕ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸದೇ ಜಾನಪದೀಯ, ಚಾರಿತ್ರಿಕ, ಸಮಾಜಶಾಸ್ತ್ರೀಯ ಹಾಗೂ ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಬೇಕಾದ ಅವಶ್ಯಕತೆ ಇದೆ.

ಸಂಸ್ಕೃತ ಭಾಷೆಯಲ್ಲಿ 'ಜನಪದ' ಶಬ್ದ ಬಳಕೆಯಲ್ಲಿದೆ. ಕನ್ನಡದಲ್ಲಿ 'ಹಳ್ಳಿ', 'ಹಳ್ಳಿಗ' ಶಬ್ದಗಳು ಇದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿವೆಯಾದರೂ, 'ಹಳ್ಳಿ' ಎಂಬುದು ಸ್ಥಳನಾಮ ವಿಜ್ಞಾನದ ಅಧ್ಯಯನದಲ್ಲಿ ವಾರ್ಗಿಕವಾಗಿ ಬಳಕೆಗೊಳ್ಳುತ್ತಿರುವುದನ್ನು ಕಾಣಬಹುದು.

'ಜನಪದ' ಶಬ್ದವೂ ಸರಳವೂ ಹೌದು; ಸಂಕೀರ್ಣವೂ ಹೌದು. ಇದರಲ್ಲಿ ಜನರ ಭಾಷೆ, ಅವರ ಸ್ಥಳ ಅಥವಾ ದೇಶ, ಜಾತಿ, ಪಂಗಡ, ಆಚಾರ, ವಿಚಾರ, ಕಲೆ, ಸಾಹಿತ್ಯ ಮೊದಲಾದವುಗಳೆಲ್ಲಾ ಅಡಕವಾಗಿವೆ. ಈ ಎಲ್ಲ ಅಂಶಗಳೂ ಕೂಡ ಸ್ಥಳನಾಮಕರಣದಲ್ಲಿ

ಪ್ರಭಾವ ಬೀರಿರುವುದನ್ನು ಸ್ಥಳನಾಮ ಅಧ್ಯಯನದಲ್ಲಿ ಗಮನಿಸಬಹುದು. ಸ್ಥಳನಾಮಗಳು ಹೇಗೆ ಪ್ರಾಚೀನ ಕಾಲದ ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿರುತ್ತದೆಯೋ ಅದೇ ರೀತಿ ಜನಪದವೂ ಕೂಡ ಇದೆ. "ಜನಪದಕ್ಕೆ ಸಂಬಂಧಿಸಿದ್ದು ಜಾನಪದ, ಜಾನಪದ ಅಭ್ಯಾಸವೆಂದರೆ ಮನುಕುಲದ ಸಾಂಸ್ಕೃತಿಕ ಪರಂಪರೆಯ ಅಭ್ಯಾಸವೆಂದೇ ಅರ್ಥ."[3] ಮನುಕುಲದ ಮೊದಲ ಇತಿಹಾಸ ಜನಪದವಾದರೆ, ಸ್ಥಳನಾಮಗಳ ಇತಿಹಾಸವೇ ಮಾನವನ ನಾಗರಿಕತೆಯ ಇತಿಹಾಸವಾಗುತ್ತದೆ.

ಭೂಮಿಯಲ್ಲಿ ಹುಟ್ಟಿದ ಪ್ರಾಣಿಗಳಿಗಿಂತ ತಾನು ಭಿನ್ನ ಎಂದು ಮನುಷ್ಯನಿಗೆ ಹೊಳೆದಾಗ ಜನಪದ ಸಂಸ್ಕೃತಿ ಪ್ರಾರಂಭವಾಯಿತು. ಈ ಸಂಸ್ಕೃತಿ ಬದುಕಿನ ಏನೆಲ್ಲ ಆಗುಹೋಗುಗಳನ್ನು ಒಳಗೊಂಡಿತ್ತು ಎಂದರೆ ಬೇಸಾಯದ ಕಲೆಯನ್ನು ರೂಢಿಸಿಕೊಂಡ ಮನುಷ್ಯ ಹಲವು ಆಚಾರ, ವಿಚಾರ, ಕಟ್ಟು–ಪಾಡುಗಳನ್ನು ಹುಟ್ಟು ಹಾಕಿಕೊಂಡು ಸಾಮಾಜಿಕ ಜೀವಿಯಾದ; ಸಾಂಸ್ಕೃತಿಕ ಸಂತಾನವಾದ. ತನ್ನ ಅಲೆಮಾರಿ ಜೀವನಕ್ಕೆ ಅಂತ್ಯವಾಡಿ, ಅಲೆಮಾರಿ ಜೀವನದಲ್ಲಿ ಬೇರು ಬಿಟ್ಟಿದ್ದ ಸಾಂಘಿಕ ಜೀವನದಿಂದ ಸಾಮಾಜಿಕ ಜೀವಿಯಾದ ಮೇಲೆ ಮತ್ತಷ್ಟು ಗಟ್ಟಿಗೊಂಡಿತ್ತು. ಅದು ಬದುಕಿನ ಅವಿಭಾಜ್ಯ ಅಂಗವಾಯಿತು. ಆದಿ ಮಾನವನ ಪ್ರತಿಯೊಂದು ಚಟುವಟಿಕೆಯೂ ಜನಪದವಾಯಿತು. ಆದಿ ಕಾಲದಲ್ಲಿ ಜನಪದ ಸಂಸ್ಕೃತಿಗೆ ಬೆನ್ನೆಲುಬಾದ ಪ್ರಕೃತಿ, ದೇವರು, ಸಂಸಾರ, ಬಾಂಧವ್ಯ, ಜೀವನ ಮೌಲ್ಯಗಳೆಲ್ಲೆಲ್ಲಾ ಸಾಕಷ್ಟು ಬದಲಾವಣೆಯಾಯಿತು. ಜೀವನ ವಿಕಾಸದ ಅಂಶಗಳಾದ ವಸ್ತು, ಒಡವೆ, ವೇಷಭೂಷಣ, ಕಲೆ, ಕಸುಬು, ಜಾತಿ, ವೃತ್ತಿ ಇವೆಲ್ಲವೂ ಮಾನವ ಸಂಸ್ಕೃತಿಯನ್ನು ರೂಢಿಸಿಕೊಳ್ಳಲು ಪೂರಕ ಅಂಶಗಳಾಗಿ ಪರಿಣಮಿಸಿದವು. ತಾವು ವಾಸ ಮಾಡುವ ನೆಲೆಗಳಿಗೂ ಅವುಗಳನ್ನು ಪರಿಚಯಿಸಿ, ವಿಸ್ತರಿಸಿ ನಾಮಕರಣ ಮಾಡುವ ಸ್ಥಿತಿಗೆ ಮನುಷ್ಯ ತಲುಪಿದ್ದು ಮಾತ್ರ ಸುಳ್ಳಲ್ಲ.

ಜಾನಪದ ಮೂಲತಃ ದಟ್ಟವಾಗಿ ಕಂಡುಬರುವುದು ಗ್ರಾಮೀಣ ಪರಿಸರದಲ್ಲಿ. ಗ್ರಾಮಗಳು ಅದರ ಮೂಲ ನೆಲೆಯಾಗಿವೆ. ಗ್ರಾಮಗಳು ಹಲವು ಸಮುದಾಯಗಳ ಮೊತ್ತ. ಹಿಂದೂ, ಜೈನ, ಬೌದ್ಧ, ಸಿಖ್, ಇಸ್ಲಾಂ ಮೊದಲಾದ ಧರ್ಮೀಯರಿಂದ ಕೂಡಿರುವ ಸ್ಥಳಮಾತ್ರವಾಗಿರದೆ, ಬಹುಭಾಷೆ, ಬಹುಸಂಸ್ಕೃತಿಗಳ ಆಗರವಾಗಿರುತ್ತದೆ; ಅವರದೇ ಆದ ಜನಪದ ಸಾಹಿತ್ಯ, ಕಲೆ, ಆಚರಣೆ, ಸಂಸ್ಕೃತಿಯ ಮಿಳಿತವಾಗಿರುತ್ತದೆ. ಇಲ್ಲಿರುವ ಸಮುದಾಯದವರಲ್ಲಿ ಸ್ಥಳಪುರಾಣ, ಐತಿಹ್ಯ, ಸ್ಥಳನಾಮ ಕಥೆ, ನಂಬಿಕೆ, ಆಚರಣೆ, ಆರಾಧನೆ ಅಷ್ಟಿಷ್ಟಲ್ಲ. ಕ್ಷೇತ್ರಕಾರ್ಯ ಮಾಡಿದಷ್ಟು ಅಧ್ಯಯನಕ್ಕೆ ಪೂರಕವಾದ ಅಂಶಗಳು ಲಭ್ಯವಾಗುತ್ತವೆ. ಆದ್ದರಿಂದ ತಾವು ವಾಸ ಮಾಡುವ

ಪ್ರತಿಯೊಂದು ಓಣಿಗೂ, ಕೇರಿ ಕೇರಿಗೂ ಅವರದೇ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸ್ಥಳನಾಮಕರಣಗಳನ್ನು ಮಾಡಿರುವುದನ್ನು ಕಾಣಬಹುದು. ಅವುಗಳಿಗೆ ಅದರದೇ ಆದ ವಿಶಿಷ್ಟವಾದ ಹಿನ್ನೆಲೆ ಇರುವುದನ್ನು ಮಾತ್ರ ಮರೆಯುವಂತಿಲ್ಲ. "ಕಲ್ಪನಾ ಸಾಮಾರ್ಥ್ಯವುಳ್ಳ ಗ್ರಾಮೀಣ ಜನ ತಂತಮ್ಮ ಊರುಗಳನ್ನು ಕುರಿತು ಐತಿಹ್ಯಗಳನ್ನು ಸೃಷ್ಟಿಸುವಲ್ಲಿ, ದಂತಕಥೆಗಳನ್ನು ಹೆಣೆಯುವಲ್ಲಿ ನಿಸ್ಸೀಮರು. ಐತಿಹ್ಯಗಳಿಗೆ ಆಧಾರಗಳಿರಬಹುದಾದರೂ, ದಂತಕಥೆಗಳು ಸಾಧಾರಣವಾಗಿ ಅವರ ಸೃಜನಶೀಲ ಪ್ರತಿಭೆಗೆ ಸಾಕ್ಷಿಯಾಗಿರುತ್ತವೆ."[4] ಆದರೂ ನಮ್ಮಲ್ಲಿ ಎಷ್ಟೋ ಸ್ಥಳಗಳ ನಿಷ್ಪತ್ತಿಯನ್ನು ಹಾಗೂ ಪ್ರಾಚೀನತೆಯನ್ನು ಖಚಿತವಾಗಿ ಗುರುತಿಸುವುದು ಕಷ್ಟಸಾಧ್ಯವಾಗಿದೆ.

"ಸ್ಥಳನಾಮಗಳು ಒಂದು ಸಂಸ್ಕೃತಿಯ ಕೀಲಿಕೈಯಾಗಿರುವುದರಿಂದ ಜಾನಪದ ಅಧ್ಯಯನವಿಲ್ಲದೆ ಯಾವುದೇ ಸಂಸ್ಕೃತಿಯ ಅಧ್ಯಯನ ಪರಿಪೂರ್ಣವಾಗಿರುವುದಿಲ್ಲ. ಜಾನಪದ ದೃಷ್ಟಿಯಿಂದ ಗ್ರಾಮನಾಮಗಳ ಹಾಗೂ ಸಂಸ್ಕೃತಿಯನ್ನು ಅರಿಯುವ ಕಾರಣಕ್ಕಾಗಿಯೂ ಅದಕ್ಕೆ ಬೆಲೆಯಿದೆ. ಹಲವಾರು ಗ್ರಾಮಗಳಿಗೆ ಅಥವಾ ಸ್ಥಳಗಳಿಗೆ ಹೆಸರು ಕೊಟ್ಟವರು ಗ್ರಾಮೀಣರೆಂಬುದನ್ನು ಮರೆಯಲಾಗದು."[5] ಸಾಮಾನ್ಯ ಜನರೇ ಸೃಷ್ಟಿಸಿರುವ ಸ್ಥಳನಾಮಗಳನ್ನು ಮೌಖಿಕ ಪರಂಪರೆಯ ಪುರಾಣ, ಐತಿಹ್ಯ, ಕಥೆ, ಒಗಟು, ಒಡಪು, ಗಾದೆ, ಗೀತೆ ಮುಂತಾದ ಮೌಖಿಕ ದಾಖಲೆಳನ್ನು ಅಧ್ಯಯನ ಮಾಡಿ, ಸ್ಥಳನಾಮಗಳಲ್ಲಿರುವ ವೈವಿಧ್ಯಮಯ ಅಂಶಗಳನ್ನು ಹೊರ ಹಾಕುವ ನಿಟ್ಟಿನಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

5.1 ಐತಿಹ್ಯಗಳಲ್ಲಿ ಸ್ಥಳನಾಮಗಳು

"ನಮ್ಮ ಜನಪದರು ತಮ್ಮ ಕಣ್ಣಿಗೆ ಕಾಣುವ ಒದೊಂದು ವಸ್ತುವಿಗೂ ಒಂದೊಂದು ಹೆಸರಿಡುತ್ತಾರೆ. ಆ ಹೆಸರಿನ ಹಿನ್ನೆಲೆಯಲ್ಲಿ ಏನೋ ನಡೆದಿರುತ್ತದೆ ಎಂದು ಕಲ್ಪಿಸಿ ತಮ್ಮದೇ ಆದ ಧಾಟಿಯಲ್ಲಿ ಕಥೆ ಕಟ್ಟಿ ಹೇಳುತ್ತಾರೆ. ತಮ್ಮ ಕಲ್ಪನಾಶಕ್ತಿಯ ಮೂಲಕ ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟುಕತೆಗಳೇ ಐತಿಹ್ಯಗಳಾಗಿರುತ್ತವೆ. ಜನಪದರಲ್ಲಿ ಐತಿಹ್ಯವೇ ಇತಿಹಾಸ ಎಂಬ ತಿಳುವಳಿಕೆಯಿದೆ. ಇವರ ದೃಷ್ಟಿಯಲ್ಲಿ ಇತಿಹಾಸವು ನಿಜವೇ ಆಗಿರುತ್ತದೆ. ಅಂದರೆ ನಡೆದ ಘಟನೆಗಳ ನಿರೂಪಣೆ. ಈ ಘಟನೆಗಳ ನಿರೂಪಣೆಯ ಉದ್ದೇಶ ಮನೋರಂಜನೆಯಾಗಿರುವುದಿಲ್ಲ. ಬದಲಾಗಿ ಹಿರಿದಾದ ಮಹತ್ವವನ್ನು ದೊರಕಿಸಿ ಕೊಡುವುದಾಗಿರುತ್ತದೆ."[6]

ಐತಿಹ್ಯ ಇತಿಹಾಸಕ್ಕೆ ಸಮೀಪವಾಗಿರುವಂತದ್ದು. "ಇತಿಹಾಸವೆನ್ನುವುದು ನಡೆದ ಘಟನೆಗಳ, ಲಿಖಿತ ಆಧಾರಗಳ ದಾಖಲಾತಿ ನಿರೂಪಣೆ ಎಂದು ತಿಳಿಯಲಾಗುತ್ತದೆ. ಶಾಸನ, ಗ್ರಂಥಸ್ಥ ಸಾಹಿತ್ಯ, ವಿದೇಶಿ ಪ್ರವಾಸಿಗರ ಬರಹಗಳು, ಬಖೈರುಗಳು, ನಾಣ್ಯಗಳು, ಉತ್ಖನ್ನದ ಮೂಲಕ ಸಂಗ್ರಹಿಸಿದ ಅವಶೇಷಗಳು, ಪಳೆಯುಳಿಕೆಗಳು ಮುಂತಾದವುಗಳ ಜೊತೆಗೆ ನಡವಳಿಕೆ ಸಂಪ್ರದಾಯಗಳೂ ಇದರ ರಚನೆಗೆ ಆಕರ ಸಾಮಾಗ್ರಿಗಳಾಗುತ್ತವೆ."[7] ಇತಿಹಾಸವು ಸಾಕ್ಷ್ಯಾಧಾರಗಳ ಮೂಲಕ ರಚಿಸಲ್ಪಟ್ಟಿರುವುದೆಂಬುದು ತಿಳಿದು ಬರುತ್ತದೆ. "ನಿರ್ದಿಷ್ಟವಾದ ಒಂದು ಭೌತಿಕವಾದ ದಾಖಲೆಯ ಅವಶ್ಯಕತೆ ಇತಿಹಾಸಕ್ಕಿದೆ. 'ಐತಿಹ್ಯ'ವೆಂದರೆ ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿರುವ; ಹಿಂದೆ ವಾಸ್ತವವಾಗಿ ನಡೆದದ್ದೇ ಎಂಬುದಾಗಿ ಅದರ ಪ್ರಸಾರಕರಿಗೆ ವಿಶ್ವಾಸವಿರುವ ಘಟನೆಗಳ ಗದ್ಯರೂಪದ ನಿರೂಪಣೆ. ಒಂದು ದೃಷ್ಟಿಯಲ್ಲಿ ಇದು ಜನಪದ ಇತಿಹಾಸ. ಇಲ್ಲಿ ಲಿಖಿತ ದಾಖಲೆಗಳೇನು ಇರುವುದಿಲ್ಲ."[8] ಪ್ರಾಚೀನ ಕಾಲದಲ್ಲಿ ಘಟಿಸಿರುವ ಚಾರಿತ್ರಿಕ ಸಂಗತಿಯೊಂದಕ್ಕೆ ವದಂತಿಗಳು ಸೇರಿ ಕ್ರಮೇಣ ಅಪೂರ್ವವೂ, ಅದ್ಭುತವೂ ಆದ ಸನ್ನಿವೇಶಗಳು ಒಳಗೊಳ್ಳುತ್ತಾ ತಲೆಮಾರುಗಳ ಮೂಲಕ ಹರಿದು ಬರುವಾಗಿನ ಒಂದು ಹಂತದಲ್ಲಿ ಐತಿಹ್ಯವು ನಿಧಾನವಾಗಿ ರೂಪುಗೊಳ್ಳುತ್ತದೆ. ಹೀಗೆ ಚಾರಿತ್ರಿಕ ಸಂಗತಿಯೊಂದು ಕಲ್ಪನೆಯಲ್ಲಿ, ನಿರೂಪಕನ ನಿಜ ಬದುಕಿನಲ್ಲಿ ಅನುಭವಿಸದೇ ಇದ್ದ ಆಸೆಗಳನ್ನು ಪೂರೈಕೆಯ ಪರಿಣಾಮವಾದ ಎಲ್ಲ ಅಭಿವ್ಯಕ್ತಿಗಳೂ ಕೂಡ ಇದರಲ್ಲಿ ಸೇರಿ ಐತಿಹ್ಯಗಳಾಗಿ ರೂಪಾಂತರವಾಗುವುದನ್ನು ಗಮನಿಸಬಹುದು. ಹೀಗೆ ಮೂಲ ಘಟನೆಯೊಂದರ ಸುತ್ತಲೂ ರಮ್ಯವಾದ, ಕಲ್ಪನಾತೀತವಾದ ವಿವರಣೆಯನ್ನು ಬೆಳೆಸಲಾಗುತ್ತದೆ. ಡಾ.ತಾಳ್ತಜೆ ವಸಂತಕುಮಾರ ಅವರು ಇದನ್ನು ಸರಿಯಾಗಿಯೇ ಗ್ರಹಿಸಿದ್ದಾರೆ. "ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ. ಹಾಗೆಂದು ಅದು ಪೂರ್ತಿ ಕಲ್ಪಿತ ದಂತಕತೆಯೂ ಅಲ್ಲ. ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ್ಯ ಅಥವಾ ವ್ಯಕ್ತಿಯೊಬ್ಬನ ಸಾಧನೆ, ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿರುತ್ತದೆ. ಆ ಪ್ರಭಾವವೇ ಪರಿಣಾಮವಾಗಿ ಅವರಲೊಬ್ಬ ಪ್ರತಿಭಾಶಾಲಿ ಅನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿ ಬಿಡುತ್ತಾನೆ, ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದೆ."[9] ಜನಪದರ ಮಟ್ಟಿಗೆ ಹೇಳುವುದಾದರೆ ಮೌಖಿಕ ಪರಂಪರೆಯ ಐತಿಹ್ಯಗಳೇ ಚರಿತ್ರೆಗಳಾಗಿರುತ್ತವೆ. ವಾಸ್ತವವಾಗಿ ನಡೆದ ಘಟನೆಯ ನಿರೂಪಣೆ ಎಂಬಂತೆ ಕೆಲವೊಂದು ಅವಶೇಷ ಪಳೆಯುಳಿಕೆ, ವಸ್ತು, ಸ್ಥಳ, ಬೆಟ್ಟ, ಗುಡ್ಡ, ಕೆರೆ ಮೊದಲಾದವುಗಳನ್ನು ಘಟನೆಯ

ಕುರುಹಾಗಿ ತೋರಿರುವುದನ್ನು ಕಾಣಬಹುದು. ನಿರೂಪಕನಲ್ಲಿ ದೃಢೀಕರಿಸುವಂಥ ಇಂಥ ಭೌಗೋಳಿಕ ದಾಖಲೆಗಳು ಯಾವಾಗಲೂ ತನ್ನ ಐತಿಹ್ಯಕ್ಕೆ ನೆರವಾಗುವಂತೆ ನೋಡಿಕೊಳ್ಳುವ ಜನಪದರ ಜಾಣ್ಮೆ ಮೆಚ್ಚುವಂಥದ್ದು.

ವ್ಯಕ್ತಿಗಳಿಗೆ, ಸ್ಥಳಗಳಿಗೆ, ಘಟನೆಗಳಿಗೆ ಸಂಬಂಧಿಸಿದ ಯಾವುದೋ ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಐತಿಹ್ಯಗಳಲ್ಲಿ ಸ್ಥಳೀಯ ಅಥವಾ ಪ್ರಾದೇಶಿಕ ಐತಿಹ್ಯ ಮತ್ತು ಪ್ರವಾಸಿ ಐತಿಹ್ಯಗಳೆಂದು ವಿಂಗಡಿಸಲಾಗುತ್ತದೆ. ಸ್ಥಳೀಯ ಐತಿಹ್ಯವು ಸ್ವರೂಪದಲ್ಲಿ ಸಣ್ಣದು. ಆಶಯಗಳು ಕಡಿಮೆ. ಅವು ನಿರ್ದಿಷ್ಟವಾದ ಒಂದು ಸ್ಥಳಕ್ಕೆ ಸೀಮಿತವಾಗಿರುತ್ತದೆ. ಆ ಸ್ಥಳದ ವೈಶಿಷ್ಟ್ಯವನ್ನು ಆಕರ್ಷಕವಾಗಿ ಮನ ಮುಟ್ಟುವಂತೆ ವರ್ಣಿಸುವಲ್ಲಿ ಸಫಲತೆಯನ್ನು ಪಡೆದುಕೊಳ್ಳುವುದು, ತಾವು ಹುಟ್ಟಿದ ಸ್ಥಳದ ಅಸಾಧಾರಣ ಲಕ್ಷಣವನ್ನು ವಿವರಿಸುವುದೇ ಅದರ ಮುಖ್ಯ ಗುರಿಯಾಗಿರುವುದರಿಂದ ಅಲ್ಲಿನ ರೀತಿ–ನೀತಿ, ಸಂಪ್ರದಾಯ, ನಂಬಿಕೆ, ಆಚರಣೆ ಹಾಗೂ ಸಂಸ್ಕೃತಿಯ ಎಲ್ಲ ಅಂಶಗಳು ಐತಿಹ್ಯಗಳಲ್ಲಿ ಮನೆ ಮಾಡಿಕೊಂಡಿರುತ್ತವೆ. ಇವು ಆಸುಪಾಸಿನ ಪ್ರದೇಶದಲ್ಲಿ ಪರಂಪರಾಗತವಾಗಿ ಹುಟ್ಟುತ್ತವೆ ಮತ್ತು ಬದುಕುತ್ತವೆ. ಯಾವುದಾದರೂ ಕಾರಣಕ್ಕಾಗಿ ಸ್ಥಳೀಯ ಲಕ್ಷಣಗಳು ಮರೆಯಾದರೆ, ಆ ಐತಿಹ್ಯ ಅಗೋಚರವಾಗುವ ಸಂಭವವಿರುತ್ತದೆ. ಸ್ಥಳೀಯ ಐತಿಹ್ಯಗಳು ಅಲ್ಲಿಯೇ ಉಳಿಯುತ್ತವೆ ಅಥವಾ ಅಳಿಯುತ್ತವೆ. ಅವು ಸಾಮಾನ್ಯವಾಗಿ ತಮ್ಮ ಪ್ರದೇಶದ ಗಡಿಯನ್ನು ದಾಟಿ ಹೋಗುವುದಿಲ್ಲ.

ತಮ್ಮ ಸೀಮೆಯನ್ನು ದಾಟಿ, ಸ್ವದೇಶ, ವಿದೇಶಗಳಲೆಲ್ಲ ಹರಡುವ ಕಥೆಗಳನ್ನು ಪ್ರವಾಸಿ ಐತಿಹ್ಯಗಳೆಂದು ಕರೆಯುತ್ತಾರೆ. ಕಾಲ್ಪನಿಕ ಕಥೆಗಿಂತ ಚಿಕ್ಕದಾದ, ಗದ್ಯಾತ್ಮಕವಾದ ಮಿತ ಪಾಠಾಂತರಗಳುಳ್ಳ ಕಥೆಯೇ ಪ್ರವಾಸಿ ಐತಿಹ್ಯ. ಇವುಗಳ ಆಶಯಗಳ ಸಂಖ್ಯೆ ಹೆಚ್ಚು. ಪಾಠಾಂತರಗಳು ಸಹ ಸಾಕಷ್ಟು ಸಂಖ್ಯೆಯಲ್ಲಿರುತ್ತವೆ. ಯಾವುದೇ ಒಂದು ವಾಸ್ತವಿಕ ಘಟನೆ ಇದ್ದರೂ ಅದರ ಸುತ್ತ ಕತೆ ವಿಕಾಸಗೊಳ್ಳುವುದರಿಂದ ಬಹುಮೂಲ ಸಿದ್ಧಾಂತಗಳು ಅನ್ವಯವಾಗುವುದರಿಂದ ಇವುಗಳ ಸ್ಥಳದ ನಿರ್ದಿಷ್ಟ ಕಾಲವನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯವಾದುದು. ಯಾವುದೋ ಒಂದು ಆಚರಣೆ ಅಥವಾ ನಂಬಿಕೆ ಅವುಗಳಿಗೆ ಆಧಾರವೆಂದು ಸ್ಪಷ್ಟವಾಗಿ ಹೇಳಲಿಕ್ಕೆಬಾರದು. ಏಕೆಂದರೆ ಪ್ರವಾಸಿ ಐತಿಹ್ಯ ಬೇರೆ ಬೇರೆ ದೇಶದ ಆಚರಣೆಗಳಲ್ಲಿ ಸಾದೃಶ್ಯವಿರಬಹುದು; ಅಥವಾ ಬೇರೊಂದು ಆಚರಣೆ ಆಧಾರವಾಗಬಹುದಾದ ಸಾಧ್ಯತೆ ಇದೆ. ನಿರ್ದಿಷ್ಟ ಸ್ಥಳ ಒಂದರ ಸ್ಪಷ್ಟವಾದ ವಿವರಣೆಯನ್ನು ಅದು ಕೊಡುತ್ತಿರುತ್ತದೆಂಬುದನ್ನು ಮರೆಯುವಂತಿಲ್ಲ. "ನಿರ್ದಿಷ್ಟ ಸ್ಥಳಕ್ಕೆ ಸಂಬಂಧಪಟ್ಟ ಐತಿಹ್ಯವು

ಸ್ಥಳೈತಿಹ್ಯವೆನಿಸುತ್ತದೆ."[10] ಸ್ಥಳ ಐತಿಹ್ಯವೆಂದ ಮಾತ್ರಕ್ಕೆ ಅವುಗಳೆಲ್ಲ ಸ್ಥಳಕ್ಕೆ ಸೀಮಿತವಾದ ಐತಿಹ್ಯಗಳೇ ಆಗಿರಲು ಸಾಧ್ಯವಿರದೇ ಇರಬಹುದು. ವ್ಯಕ್ತಿ ಕೇಂದ್ರಿತ ಐತಿಹ್ಯಗಳಲ್ಲಿ ಸ್ಥಳ ಸಂಬಂಧಿಯಾದ ಅಂಶಗಳು ಕಾಣಿಸಿಕೊಳ್ಳಬಹುದು. ಇಲ್ಲವೇ ಘಟನಾಪ್ರಧಾನ ಐತಿಹ್ಯಗಳಲ್ಲೂ ಸ್ಥಳ ಸಂಬಂಧಿತ ಅಂಶಗಳು ಬರುವ ಸಾಧ್ಯತೆ ಇದೆ.

ಐತಿಹ್ಯಗಳನ್ನು ಜಾನಪದ ವಿದ್ವಾಂಸರು ಹಲವು ಬಗೆಗಳಾಗಿ ವಿಂಗಡಿಸಿದ್ದಾರೆ. ಸ್ಥಳನಾಮಗಳಿಗೆ ಸಂಬಂಧಪಟ್ಟಂತೆ ಈ ಐತಿಹ್ಯಗಳ ವರ್ಗೀಕರಣವನ್ನು ಆರೋಪಿಸಿ ನೋಡಿದಾಗ ರಿಚರ್ಡ್‌ಡಾರ್ಸನ್ನ ಅವರು 1) ವ್ಯಕ್ತಿ ಐತಿಹ್ಯಗಳು 2) ಸ್ಥಳ ಐತಿಹ್ಯಗಳು 3) ಘಟನಾ ಐತಿಹ್ಯಗಳೆಂದು ವರ್ಗೀಕರಿಸಿದ್ದಾರೆ.

ವಸಂತಕುಮಾರ ತಾಲ್ತಚೆಯವರೂ ಡಾರ್ಸನ್ನರ ವರ್ಗೀಕರಣವನ್ನೇ ಆಶ್ರಯಿಸಿ,

1) ವ್ಯಕ್ತಿಪ್ರಧಾನ ಐತಿಹ್ಯಗಳು
2) ಸ್ಥಳಪ್ರಧಾನ ಐತಿಹ್ಯಗಳು
3) ಘಟನಾ ಪ್ರಧಾನ ಐತಿಹ್ಯಗಳು ಎಂದು ವರ್ಗೀಕರಿಸಿದ್ದಾರೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಂಡುಬರುವ ಐತಿಹ್ಯಗಳು ಈ ಮೇಲಿನ ವರ್ಗೀಕರಣಕ್ಕೆ ಸಮರ್ಪಕವಾಗಿ ಹೊಂದಿಕೊಳ್ಳುವುದು.

ವ್ಯಕ್ತಿ ಪ್ರಧಾನ ಐತಿಹ್ಯಗಳಲ್ಲಿ ಅಸಾಮಾನ್ಯವಾದ ಅಥವಾ ವಿಶಿಷ್ಟವಾದ ವ್ಯಕ್ತಿಯೊಬ್ಬನ ಸಾಧನೆಯ ನಿರೂಪಣೆ ಇರುತ್ತದೆ. ಐತಿಹ್ಯದ ಉಳಿದ ವಿವರಗಳು ಈ ವ್ಯಕ್ತಿಯ ಸಾಧನೆಗೆ ಪೂರಕವಾಗಿ ಬರುತ್ತವೆ. ವ್ಯಕ್ತಿಯು ಒಂದು ನಿರ್ದಿಷ್ಟವಾದ ಸ್ಥಳಕ್ಕೆ ಬದ್ಧನಾಗಿದ್ದರೂ ಕೂಡ ಸ್ಥಳದ ಮಹತ್ವವನ್ನು ಮೀರಿ ಅವನ ವ್ಯಕ್ತಿತ್ವ ಕೆಲಸ ಮಾಡುತ್ತಿರುತ್ತದೆ. ಅಲ್ಲದೇ ವ್ಯಕ್ತಿಯಿಂದಾಗಿಯೇ ಆ ಸ್ಥಳಕ್ಕೆ ಆ ಹೆಸರು ಬಂದಿರುವ ಸಾಧ್ಯತೆ ಇರುತ್ತದೆ. ಉದಾ : ಬ್ರಾಹ್ಮಣಿಪುರ.

ಸ್ಥಳ ಪ್ರಧಾನ ಐತಿಹ್ಯಗಳಲ್ಲಿ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ಸ್ಥಳದ ವೈಶಿಷ್ಟ್ಯತೆಯೇ ಆಗಿರುತ್ತದೆ. ಇಲ್ಲಿ ಪ್ರಧಾನವಾಗಿ ಪ್ರಕೃತಿ ಜನ್ಮವಾದವು. ಇಲ್ಲಿ ವ್ಯಕ್ತಿಗೆ ಸ್ಥಾನವಿದ್ದರೂ ನಗಣ್ಯನಾಗಿ ಸ್ಥಳಕ್ಕೆ ಬಹಳ ಮಹತ್ವವಿರುತ್ತದೆ. ನಿಸರ್ಗದಲ್ಲಿನ ಅನೇಕ ವಸ್ತುವಿಷಯಗಳೇ ಇಲ್ಲಿನ ಐತಿಹ್ಯಕ್ಕೆ ಆಧಾರಗಳಾಗಿರುತ್ತವೆ. ಸ್ಥಳದ ವಿಶಿಷ್ಟತೆ ಅಥವಾ ಅಸಮಾನ್ಯತ್ವವೇ ಈ ಐತಿಹ್ಯಕ್ಕೆ ತಳಹದಿಯಾಗಿ ಕೆಲಸ ನಿರ್ವಹಿಸುತ್ತದೆ. ಒಂದು ಸ್ಥಳಕ್ಕೆ ಇರುವ ಹೆಸರಿನ ವ್ಯುತ್ಪತ್ತಿ ಅಥವಾ ಹಿನ್ನೆಲೆಗೆ ಇಂಥ ಐತಿಹ್ಯಗಳು ರಂಜಕವಾದ ಕತೆಯನ್ನು ಹೊಂದಿರುತ್ತದೆ. ಉದಾ : ಕೂನಗಲ್ಲು

ಘಟನಾ ಪ್ರಧಾನ ಐತಿಹ್ಯಗಳಲ್ಲಿ ಒಂದು ವಿಶಿಷ್ಟವಾದ ಘಟನೆಯೇ ಪ್ರಧಾನವಾಗಿರುತ್ತದೆ. ಇಲ್ಲಿ ಸ್ಥಳ ಮತ್ತು ವ್ಯಕ್ತಿಗಳು ನಂತರದ ಸ್ಥಾನದಲ್ಲಿ ಬರುತ್ತವೆ. ಎಷ್ಟೋ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಇರುವುದಕ್ಕೆ ಬದಲು, ಜನರ ಗುಂಪು ಅಥವಾ ಜನ ಸಮೂಹವೇ ಇರುತ್ತದೆ.

ನಮ್ಮ ಜನಪದರು ಈ ರೀತಿಯ ಐತಿಹ್ಯಗಳ ಸೃಷ್ಟಿಕರ್ತರು. ಆದರೆ ಐತಿಹ್ಯಗಳ ಹಿಂದೆ ಚಾರಿತ್ರಿಕವಾದ ಸತ್ಯ ಘಟನೆ ಇರುವುದು. ಈ ಘಟನೆಯನ್ನು ನಿರೂಪಿಸುವಾಗ ತನ್ನ ಭಾವದಲ್ಲಿ ಮೂಡಿದ ಕಲ್ಪನೆಗಳಿಗೆ ಮೂರ್ತ ಸ್ವರೂಪವನ್ನು ಕೊಡುತ್ತಾನೆ ಎಂಬುದು ಮಾತ್ರ ಸತ್ಯ. ಆದರೆ ಇವು ಉತ್ಪ್ರೇಕ್ಷೆ ಎನಿಸಿದರೂ ಅದು ಯಾವುದನ್ನೂ ಉದ್ದೇಶಪೂರ್ವಕವಾಗಿ ಸೇರಿಸಿದ್ದಲ್ಲ. ತಾನು ವಾಸ ಮಾಡುವ ಊರು ಮತ್ತು ಸಂಸ್ಕೃತಿ ಮೇಲಿನ ಅಭಿಮಾನ ತಿಳುವಳಿಕೆಯೇ ಇದಕ್ಕೆ ಕಾರಣವಾಗಿರಬಹುದು. ಸ್ಥಳನಾಮಗಳಿಗೆ ಸಂಬಂಧಪಟ್ಟ ಐತಿಹ್ಯಗಳು ಮಾತ್ರ ಚನ್ನಪಟ್ಟಣ ತಾಲ್ಲೂಕು ಅಥವಾ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. ಇವು ನಮ್ಮಲ್ಲಿರುವಂತೆ "ಸ್ಥಳನಾಮಗಳಿಗೆ ಸಂಬಂಧಿಸಿದ ಐತಿಹ್ಯಗಳು ಜಗತ್ತಿನಲ್ಲೆಲ್ಲ ವ್ಯಾಪಕವಾಗಿ ಹರಡಿವೆ. ಅವು ಯತಾರ್ಥವಾಗಿರಬಹುದು ಇಲ್ಲವೇ ಕಾಲ್ಪನಿಕವಾಗಿರಬಹುದು."[11] ಒಟ್ಟಿನಲ್ಲಿ ಸ್ಥಳನಾಮ ಅಧ್ಯಯನದ ಸಂದರ್ಭದಲ್ಲಿ ಐತಿಹಾಸಿಕ ಆಕರಗಳಾಗಿ ಐತಿಹ್ಯಗಳನ್ನು ಪರಿಗಣಿಸಬೇಕಾದ ಅವಶ್ಯಕತೆ ಇದೆ. ವಾಸ್ತವಾಂಶ–ನೈಜಘಟನೆ–ಇತಿಹಾಸದ ಎಳೆ ಇರುವ ಐತಿಹ್ಯಗಳ ಕಲ್ಪನೆಯ ರೆಕ್ಕೆ ಪುಕ್ಕಗಳನ್ನು ಕತ್ತರಿಸಿದರೆ ಖಂಡಿತ ಇವು ಇತಿಹಾಸ ಆಕರ ಗ್ರಂಥವಾಗುವುದರಲ್ಲಿ ಎರಡು ಮಾತಿಲ್ಲ.

ಪವಾಡ, ನಂಬಿಕೆ, ಉತ್ಪ್ರೇಕ್ಷೆ ಮೊದಲಾದ ಜನಪದ ಅಂಶಗಳು ಐತಿಹ್ಯಗಳಲ್ಲಿ ಅಡಗಿರುವುದರಿಂದ ನಿಜ ಸಂಗತಿ ಗುಪ್ತವಾಗಿರಲು ಕಾರಣವಾಗಿರಬಹುದು. ಆದರೆ ಐತಿಹ್ಯಗಳಲ್ಲಿ ಸಾಂಸ್ಕೃತಿಕ ಚರಿತ್ರೆ ಹಾಗೂ ಪ್ರಚಲಿತವಿರುವ ನಂಬಿಕೆ, ಆಚಾರವಿಚಾರ, ಸ್ಥಳ ವಿವರಗಳನ್ನು, ಒಟ್ಟಾರೆ ಸಂಸ್ಕೃತಿಯನ್ನು ತಿಳಿದುಕೊಳ್ಳುವುದಕ್ಕೆ ಐತಿಹ್ಯಗಳು ಬಹು ಮುಖ್ಯ ಆಧಾರವಾಗಬಲ್ಲವು. ಅನೇಕ ಪ್ರಾಕೃತಿಕ ವೈಶಿಷ್ಟ್ಯತೆಗಳು, ಚಾರಿತ್ರಿಕ ಸಂಗತಿಗಳು ಹಾಗೂ ಚಾರಿತ್ರಿಕ ಸ್ಥಳನಾಮಗಳೂ ಕೂಡ ಜನರ ದೃಷ್ಟಿಯಲ್ಲಿ ಮರೆಯಾಗದಂತೆ ನೋಡಿಕೊಳ್ಳುವ ಸ್ಮೃತಿ ಗುಳಿಗೆಗಳಂತೆ ಐತಿಹ್ಯಗಳು ವಹಿಸುತ್ತಿರುವ ಪಾತ್ರ ತುಂಬಾ ಹಿರಿದಾದದ್ದು ಮತ್ತು ಸಾಂಸ್ಕೃತಿಕ ಅನನ್ಯತೆ ಇರುವ ಈ ನಾಡಿಗೆ ಮುಖ್ಯವಾಗಿ ಬೇಕಾದವುಗಳಾಗಿವೆ.

ಚನ್ನಪಟ್ಟಣ ತಾಲ್ಲೂಕಿನ ಪರಿಸರದಲ್ಲಿ ಸಿಗುವ ಕೆಲವು ಸ್ಥಳ ಐತಿಹ್ಯಗಳು ಇಂತಿವೆ :

ಮಳೂರು

ಚನ್ನಪಟ್ಟಣದ ಬಸ್ ನಿಲ್ದಾಣದಿಂದ 2 ಕಿಲೋ ಮೀಟರ್ ದೂರದಲ್ಲಿ ಹೆದ್ದಾರಿ ಪಕ್ಕದಲ್ಲಿ ಕಣ್ವ ನದಿಯ ದಡದ ಮೇಲಿದ್ದು ಐತಿಹಾಸಿಕವಾಗಿ ಮಹತ್ವದ ತಾಣವಾಗಿರುವ ಮಳೂರಿಗೆ ಪೌರಾಣಿಕ ಕತೆಯೊಂದನ್ನು ಹೆಣೆಯಲಾಗಿದೆ.

ಚನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತದ್ದ ದೊರೆಗೆ 'ಸಾರಂಗಧರ' ಎಂಬ ಮಗನಿದ್ದನು. ಸಾರಂಗಧರ ಚಿಕ್ಕ ವಯಸ್ಸಿನಲ್ಲಿದ್ದಾಗಲೇ ನತದೃಷ್ಟನಾದ ಆತ, ತನ್ನ ತಾಯಿಯನ್ನು ಕಳೆದುಕೊಂಡನು. ಆ ಕಾರಣದಿಂದ ಸಾರಂಗಧರನ ತಂದೆ ಸ್ಪುರದ್ರೂಪಿಯೂ, ಸುಂದರ ಯುವತಿಯೂ ಆಗಿದ್ದ ಚಿತ್ರಾಂಗದೆ ಎಂಬ ರಾಜಕುಮಾರಿಯನ್ನು ವಿವಾಹವಾದನು. ಆ ವೇಳೆಗಾಗಲೇ ಸಕಲ ರಾಜ ವಿದ್ಯೆಗಳನ್ನು ಕಲಿತು ಬಾಹುಬಲಶಾಲಿಯೂ, ಅತುಳ ಪರಾಕ್ರಮಿಯೂ, ಸುಂದರನೂ ಆಗಿದ್ದ ಸಾರಂಗಧರನು ಅರಮನೆಯಲ್ಲಿ ಎಲ್ಲರ ಕಣ್ಮಣಿಯಾಗಿದ್ದನು. ದೊರೆ ತನ್ನ ಇಳಿವಯಸ್ಸಿನಲ್ಲಿ ತುಂಬು ಯೌವನವತಿಯಾದ ಚಿತ್ರಾಂಗದೆಯನ್ನು ಮದುವೆಯಾಗಿದ್ದು, ಆತ ಆಕೆಗೆ ಸಂಪೂರ್ಣವಾಗಿ ದೈಹಿಕ ತೃಪ್ತಿಯನ್ನು ಕೊಡಲು ಅಶಕ್ತನಾಗಿದ್ದ. ಹಾಗಾಗಿ ಕಾಮಾಂಧಳಾದ ಆಕೆ ತನ್ನ ಮಲಮಗನಾಗಿದ್ದ ಸಾರಂಗಧರನನ್ನು ಮನಸ್ಸಿನಲ್ಲಿ ಪ್ರೀತಿಸ ತೊಡಗಿದಳು. ಬಹಳ ಪರಾಕ್ರಮಿಯೂ, ಸುಂದರ ಯುವಕನೂ ಆಗಿದ್ದ ಆತನನ್ನೂ ಏಕಾಂತದಲ್ಲಿ ಆರಾಧಿಸತೊಡಗಿದಳು. ಆತನನ್ನೂ ಏನಾದರೂ ಮಾಡಿ ಕೂಡಿಕೊಳ್ಳಲೇಬೇಕೆಂಬ ಆಸೆ ಆಕೆಯ ಮನದಲ್ಲಿ ಅಂಕುರಿಸಿ ಆತನನ್ನೂ ಕೂಡಿಕೊಳ್ಳುವ ನಿರ್ಧಾರಕ್ಕೆ ಬಂದಳು. ಕಡೆಗೆ ಆಕೆ ಸಾರಂಗಧರನನ್ನು ಹಲವು ಬಾರಿ ಏಕಾಂತದಲ್ಲಿ ಸಂಧಿಸಲು ಪ್ರಯತ್ನಿಸಿ ವಿಫಲಳಾದಳು.

ಒಮ್ಮೆ ದೊರೆ ಬೇಟೆಗೆ ಹೋಗಿದ್ದ ದಿನ ಸಾರಂಗಧರ ಒಬ್ಬನೇ ಅರಮನೆಯಲ್ಲಿರುವುದನ್ನು ಗಮನಿಸಿ, ಆತನನ್ನು ಏಕಾಂತದಲ್ಲಿ ಸಂಧಿಸುವಲ್ಲಿ ಯಶಸ್ವಿಯಾದಳು. ಮಗ ಎಂಬ ನಾಚಿಕೆಯನ್ನು ಬಿಟ್ಟು ಆಕೆ ಆತನಲ್ಲಿ ತನ್ನ ಮನದ ಬಯಕೆಯನ್ನು ತಿಳಿಸಿ, ತನ್ನನ್ನು ಪ್ರೀತಿಸಿ ತನ್ನ ಮನಸ್ಸಿನ ಆಸೆಯನ್ನು ಪೂರೈಸಿಕೊಡಬೇಕೆಂದು ಬೇಡಿಕೊಂಡಳು. ಯಾವುದಾದರೂ ಬೇರೆ ರಾಜ್ಯಕ್ಕೆ ಓಡಿ ಹೋಗುವ ತನ್ನ ಮನದ ಇಂಗಿತವನ್ನು ತಿಳಿಸಿದಳು. ಕನಸು ಮನಸ್ಸಿನಲ್ಲೂ ಈ ವಿಷಯ ನೆನಸದ ಸಾರಂಗದೇವ ತನ್ನ ಮಲತಾಯಿಯ ನೀಚ ವರ್ತನೆಯನ್ನು ಕಂಡು ದಿಗ್ಭ್ರಾಂತನಾದನು. ತನ್ನ ಮಲತಾಯಿಗೆ ಬುದ್ಧಿವಾದ ಹೇಳಿ, ತಾಯಿ ಮತ್ತು ಮಗನ ಸಂಬಂಧವನ್ನು ಆಕೆಗೆ ಜ್ಞಾಪಿಸಿ,

ಆಕೆಯ ಬೇಡಿಕೆಯನ್ನು ತಿರಸ್ಕರಿಸಿದನು. ಚಿತ್ರಾಂಗದೆ ಇಷ್ಟಕ್ಕೂ ಸುಮ್ಮನಾಗದೇ ಪರಿಪರಿಯಾಗಿ ಬೇಡಿಕೊಂಡಳು. ಆತ ಎಲ್ಲ ಸಾರಿಯೂ ಆಕೆಯನ್ನು ತಿರಸ್ಕರಿಸಿದಾಗ ಕೋಪದಿಂದ ಕೆಂಡಮಂಡಲವಾದ ಆಕೆ ಗಾಯಗೊಂಡು ಹುಲಿಯಂತಾಗಿ ನಿನಗೆ ಸರಿಯಾದ ಶಿಕ್ಷೆ ಮಾಡಿಸುವುದಾಗಿ ಹೇಳಿ ಆತನ ಕೋಣೆಯಿಂದ ಹೊರ ನಡೆದಳು.

ಆತನ ಬಗ್ಗೆ ಚಿತ್ರಾಂಗದೆಯ ಮನಸ್ಸಿನಲ್ಲಿ ವಿಪರೀತ ಕೋಪ ಮತ್ತು ದ್ವೇಷ ಹೊತ್ತಿ ಉರಿಯ ತೊಡಗಿತು. ರಾಜ ಬೇಟೆಯನ್ನು ಮುಗಿಸಿಕೊಂಡು ಬರುವ ಸಮಯಕ್ಕೆ ಆಕೆ ತನ್ನ ತಲೆಗೂದಲನ್ನು ಕೆದರಿಕೊಂಡು, ಮೈ ಕೈ ಪರಚಿಕೊಂಡು, ವಸ್ತ್ರಗಳನ್ನು ಹರಿದುಕೊಂಡು ಗೋಳಿಡುತ್ತಿದ್ದಳು. ಬೇಟೆ ಮುಗಿಸಿಕೊಂಡು ಆಯಾಸವಾಗಿ ಬಂದ ರಾಜ, ವಿಕಾರ ರೂಪಳಾಗಿದ್ದ ಈಕೆಯನ್ನು ನೋಡಿ ಆತನಿಗೆ ಕೋಪ ನೆತ್ತಿಗೇರಿತು. ಏಕೆ ಗೋಳಿಡುತ್ತಿರುವುದು? ಏನಾಯಿತು? ಯಾರಿಂದ? ಎಂಬ ಹಲವು ಪ್ರಶ್ನೆಗಳನ್ನು ಆತ ಮಾಡಿದ ಅಂತಹ ಸಂದರ್ಭದಲ್ಲಿ ಚಿತ್ರಾಂಗದೆ ನೀವು ಇಲ್ಲದ ಸಮಯ ನೋಡಿ ಸಾರಂಗಧರ ನನ್ನ ಶೀಲವನ್ನು ಕೆಡಿಸಲು ಬಂದ ಆಗ ನಾನು ಅದಕ್ಕೆ ಒಪ್ಪದಿದ್ದಾಗ ನನ್ನ ಬಲಾತ್ಕರಿಸಿ ಈ ರೀತಿ ಮಾಡಿದ ಎಂದು ತನ್ನ ದೇಹವನ್ನು ಪ್ರದರ್ಶನ ಮಾಡಿದಳು. ಆತ ನನಗೆ ಅಪಮಾನ ಮಾಡಿದ್ದಾನೆ. ಆದ್ದರಿಂದ ಆತನ ಕೈಕಾಲು ಕಡಿಸಿ ಹಾಕಿದರೆ ಮಾತ್ರ ತಾನು ಅರಮನೆಯಲ್ಲಿ ಇರುವುದಾಗಿಯೂ, ಇಲ್ಲವಾದರೆ ದೇಶಾಂತರ ಹೋಗುವುದಾಗಿಯೂ ಬೆದರಿಕೆ ಹಾಕಿದಳು. ಕೋಪದ ಆವೇಶದಲ್ಲಿದ್ದ ರಾಜ, ರಾಣಿಯ ಮಾತಿಗೆ ಮರುಳಾಗಿ ಸ್ವಲ್ಪವೂ ವಿವೇಚಿಸದೆಯೇ ಮಂತ್ರಿಯನ್ನು ಕರೆದು ಸಾರಂಗಧರನ ಕೈಕಾಲು ಕಡಿದು ಹಾಕಿ ಆತನ ದೇಹವನ್ನು ಎಸೆಯುವಂತೆ ಆಜ್ಞಾಪಿಸಿದ.

ರಾಜನ ಅಪ್ಪಣೆಯಂತೆ ಮಂತ್ರಿ ಇಬ್ಬರೂ ಸೈನಿಕರೊಡಗೂಡಿ ಸಾರಂಗದೇವನನ್ನು ಕರೆದುಕೊಂಡು ಪಕ್ಕದಲ್ಲಿದ್ದ ಅಬ್ಬೂರಿನ ಗುಡ್ಡಕ್ಕೆ ಹೋದರು. ಗುಡ್ಡದ ಮೇಲೆ ಸಾರಂಗಧರನನ್ನು ನಿರ್ಧಾಕ್ಷಿಣ್ಯವಾಗಿ ಕತ್ತರಿಸಿ ದೇಹವನ್ನು ಪಕ್ಕದಲ್ಲಿದ್ದ ಕಣ್ವ ನದಿಗೆ ಎಸೆದರು. ಆನಂತರ ಆತನ ದೇಹ ನದಿಯಲ್ಲಿ ತೇಲಿಕೊಂಡು ಬರುತ್ತಿದ್ದಾಗ ಒಂದು ಕಡೆ ಜ್ಯೋತಿಯೊಂದು ಆತನಿಗೆ ಕಂಡಿತು. ಆಗ ಆತ ಆ ಜ್ಯೋತಿಗೆ ಪ್ರಾರ್ಥನೆ ಮಾಡಿದಾಗ ಆತನಿಗೆ ಮತ್ತೆ ಕೈಕಾಲುಗಳು ಚಿಗುರಿದವು. ಸಾರಂಗದೇವನಿಗೆ ಜ್ಯೋತಿ ಕಂಡ ಈ ಜಾಗದಲ್ಲಿ ಕೈ ಕಾಲು ಚಿಗುರಿದುದರಿಂದ (ಮೊಳೆತುದರಿಂದ) ಮೊಳತೂರು ಎಂಬ ಹೆಸರನ್ನು ಪಡೆಯಿತು. ಆನಂತರ ಕಾಲಕ್ರಮದಲ್ಲಿ ಮಳೂರು ಎಂದಾಯಿತು.[12]

ಮೇಲಿನ ಕಥೆಯನ್ನು ಗಮನಿಸಿದಾಗ ಇದು ಕಟ್ಟು ಕತೆ ಎಂಬುದು ಸ್ಪಷ್ಟವಾಗುತ್ತದೆ. ಈ ಗ್ರಾಮ ಕಣ್ವ ನದಿಯ ದಡದಲ್ಲಿದ್ದು, ಯಥೇಚ್ಛವಾಗಿ ಈ ಭಾಗದಲ್ಲಿ ಮರಳು ಶೇಖರವಾಗುತ್ತಿದ್ದುದ್ದಕ್ಕೆ ಮರಳೂರು ಎಂಬ ಹೆಸರು ಬಂದಿರಬೇಕು. ಆನಂತರ ಜನರ ಮಾತಿನಲ್ಲಿ 'ರ'ಕಾರ ಲೋಪವಾಗಿ ಮಳೂರು ಆಗಿ ಪರಿವರ್ತನೆಗೊಂಡಿದೆ. ಇತ್ತೀಚೆಗೆ ಈ ಗ್ರಾಮದ ಪಕ್ಕ ಮರಳನ್ನು ವಾಹನಕ್ಕೆ ತುಂಬುತ್ತಿದ್ದಾಗ ಶಾಸನವೊಂದು ಪತ್ತೆಯಾಯಿತು. ಈ ಶಾಸನ 9 ಅಡಿ ಎತ್ತರ, 3 ಅಡಿ ಅಗಲ, 1 ಅಡಿ ದಪ್ಪವಿದ್ದು, ಈ ಶಾಸನ ಕಾಲವನ್ನು ಕ್ರಿ.ಶ.927 ಎಂದು ಗುರುತಿಸಲಾಗಿದೆ. ಈ ಶಾಸನದಲ್ಲಿ ಮಳೂರಿನ ಬಗ್ಗೆ ಪ್ರಸ್ತಾಪಿಸುತ್ತ ಈ ಗ್ರಾಮವನ್ನು 'ಮಣಲೂರ' ಎಂದು ಸಂಬೋಧಿಸಲಾಗಿದೆ. ತಮಿಳಿನಲ್ಲಿ 'ಮಣಲ್' ಎಂದರೆ 'ಮರಳು' ಎಂದು ಅರ್ಥ ಬರುತ್ತದೆ. ಕನ್ನಡದಲ್ಲಿಯೂ ಮಣಲ್, ಮಳಲ್ > ಮಳಲು >ಮಳ್ಳು ಎಂಬ ರೂಪಗಳಿವೆ. ಇಲ್ಲಿ ಣ–ಳಗಳು ಸ್ವಚ್ಛಂದ ಪ್ರಸಾರದಲ್ಲಿವೆ. ಹೀಗಾಗಿ ಈ ಊರಿಗೆ ಮಳೂರು ಎಂದು ಹೆಸರು ಬರಲು ಕಣ್ವ ನದಿಯೇ ಕಾರಣವಾಗಿದ್ದು ಮರಳಿನಿಂದ ಆವೃತವಾದ ಪ್ರದೇಶವಾದ್ದರಿಂದ ಈ ರೀತಿ ಊಹಿಸಲು ಸಾಧ್ಯವಿದೆ.

ಮರಳೂರು → ಮಣಲೂರು → ಮಳಲೂರು → ಮಳೂರು ಎಂದು ಆಗಿದೆ.

ಅರಳಾಸಂಧ್ರ

ಸಾಮಾನ್ಯವಾಗಿ ನಮ್ಮ ಹಿಂದಿನ ಜನರು ಧಾರ್ಮಿಕ ವ್ಯಕ್ತಿಗಳನ್ನು ತಮ್ಮ ಸ್ಥಳದ ಹೆಸರಿನೊಂದಿಗೆ ಗಂಟು ಹಾಕುವ ಪ್ರಯತ್ನ ಮಾಡುತ್ತಿರುತ್ತಾರೆ. ಹೀಗೆ ನಮ್ಮವರು ರಾಮ, ಕೃಷ್ಣ, ಶಿವ, ಅಲ್ಲಾಹ ಮುಂತಾದ ಹೆಸರುಗಳನ್ನು ಧಾರಾಳವಾಗಿ ಬಳಸಿಕೊಳ್ಳುವುದನ್ನು ಕಾಣಬಹುದು. ಅವರ ಇಂತಹ ಪ್ರಯತ್ನಕ್ಕೆ ಎರಡು ಕಾರಣಗಳನ್ನು ಊಹಿಸಬಹುದು. ತಮ್ಮ ಸ್ಥಳಗಳಿಗೆ ಕೇಡುಂಟಾಗದಿರಲಿ ಎಂಬುದು ಒಂದಾದರೆ, ಮತ್ತೊಂದು ತಮ್ಮ ಕೆಲಸಗಳಿಗೆ ಪಾವಿತ್ರ್ಯತೆ ಬರಲಿ ಎಂಬ ಅಂಶವೂ ಅದರ ಹಿಂದೆ ಕೆಲಸ ಮಾಡಿರುತ್ತದೆ.

ಬಹಳ ವರ್ಷಗಳ ಹಿಂದೆ ಅಣ್ಣ ತಮ್ಮಂದಿರು ಎನ್ನಲಾದ ಇಬ್ಬರು ಮುಸಲ್ಮಾನ ಗುರುಗಳು ತಪಸ್ಸನ್ನು ಆಚರಿಸುವ ಸಲುವಾಗಿ ಪ್ರಶಸ್ತವಾದ ಸ್ಥಳವನ್ನು ಹುಡುಕುತ್ತ ಬಂದಾಗ, ಈ ಭಾಗ ಬೇರೆ ಜಾಗಗಳಿಗಿಂತ ಹೆಚ್ಚು ಶ್ರೇಷ್ಠವಾಗಿ ಕಂಡುಬಂದಿತು. ಆದರೂ ದೊಡ್ಡ ಗುರು ನೀರಿನ ವ್ಯವಸ್ಥೆ ಸರಿಯಾಗಿಲ್ಲವೆಂದು ಹೇಳಿ ಅವರು ನೀರಿರುವ ಜಾಗವನ್ನು ಹುಡುಕಿಕೊಂಡು ಶಿವನ ಸಮುದ್ರದಲ್ಲಿ ನೆಲೆ ನಿಂತರು. ಆದರೆ ಚಿಕ್ಕ ಗುರು ಮಾತ್ರ ಭಗವಂತನ ಮೇಲೆ ಭಕ್ತಿಯಿಟ್ಟು ಶ್ರದ್ಧೆಯಿಂದ ಮರವೊಂದರ ಕೆಳಗೆ ತಪಸ್ಸು ಮಾಡುತ್ತಿದ್ದ ಸಂದರ್ಭದಲ್ಲಿ, ಎಲ್ಲಿಂದಲೋ ಹಾರಿ

ಬಂದ ಪಕ್ಷಿಯೊಂದು ಇವರು ನೋಡುತ್ತಿದ್ದಂತೆಯೇ ಅದು ತನ್ನ ಕಾಲಿನಿಂದ ಸ್ವಲ್ಪ ನೆಲವನ್ನು ಕೆರೆದಾಗ ಚಿಲ್ಲನೆ ನೀರು ಬರಲಾರಂಭಿಸಿತು. ಆಶ್ಚರ್ಯಚಕಿತರಾದ ಸ್ವಾಮಿಗಳು ಅಲ್ಲಿಗೆ ಹೋಗಿ ತಮ್ಮ ಕೈಯಿಂದ ಸ್ವಲ್ಪ ನೆಲವನ್ನು ಬಗೆದಾಗ ಅಥವಾ ಗುಂಡಿ ತೋಡಿದಾಗ ಮತ್ತಷ್ಟು ನೀರು ಉಕ್ಕಿ ಬಂತು. ಇದರಿಂದ ಸಂತೋಷಗೊಂಡ ಸ್ವಾಮೀಜಿ ತಮ್ಮ ಅಣ್ಣ ಶಿವನಸಮುದ್ರಕ್ಕೆ ಹೋದುದನ್ನು ನೆನಪಿಸಿಕೊಂಡು ಇದಕ್ಕೆ 'ಅಲ್ಲಾಸಮುದ್ರ' ಎಂದು ಹೆಸರಿಟ್ಟರು. ಅದು ಮುಂದೆ ಜನರ ಬಾಯಲ್ಲಿ ಅಲ್ಲಾಸಂದ್ರ, ಅರಳಾಸಂದ್ರವಾಗಿದೆ ಎಂದು ಕತೆ ಹೇಳುತ್ತಾರೆ.[13]

ಊರಿನ ಪಕ್ಕ ಒಂದು ಗುಡಿಯಿದ್ದು, ಇಲ್ಲಿಯವರು ಅದನ್ನು ಬಾಬಯ್ಯನ ಗುಡಿ ಎಂದು ಪ್ರೀತಿಯಿಂದ ಹೇಳಿಕೊಳ್ಳುತ್ತಾರೆ. ಅಲ್ಲಿಯೇ ಎರಡು ಹೆಸರುಗಳು ಕಂಡುಬರುತ್ತವೆ. ಅವುಗಳೆಂದರೆ ಹಜರತ್ ಸೈಯದ್ ಷಾ ಮಹಮದ್ ಪ್ರಕುಲ್ಲಾ ಬಾಷಾ ಮತ್ತು ಹಜರತ್ ಅಮ್ದುದ್ ದಿವಾನ್ ಅಹ್ಲುಲಿಯಾ. ಈ ಹೆಸರುಗಳು ಬಹುಶಃ ಅಣ್ಣ ತಮ್ಮಂದಿರಾದ ಆ ಮುಸಲ್ಮಾನ ಗುರುಗಳ ಹೆಸರಿರಬೇಕು. ಆ ಗುಡಿಯನ್ನು ನೋಡಿದರೆ ಮೂರು ನಾಲ್ಕು ತಲೆಮಾರಿನ ಹಿಂದಿನದಷ್ಟೇ ಆಗಿರಬಹುದು. ಸುಸಂಸ್ಕೃತರಾದ ಇಬ್ಬರು ಮುಸಲ್ಮಾನ ಗುರುಗಳು ಇಲ್ಲಿ ಬಂದು ಈ ಜನರ ಮೇಲೆ ವಿಶೇಷ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಅವರನ್ನು ಈ ಹಳ್ಳಿಯ ಜನ ಇಂದಿಗೂ ದೊಡ್ಡ ಬಾಬಯ್ಯನವರು, ಚಿಕ್ಕ ಬಾಬಯ್ಯನವರು ಎಂದೇ ಪ್ರೀತಿಯಿಂದ ಸ್ಮರಿಸುತ್ತಾರೆ. ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಭಾಗದಲ್ಲಿ ಬರುವ ಈ ಊರಿನ ಪಕ್ಕ ದೊಡ್ಡದೊಂದು ಹಳ್ಳ ಹರಿದು ಹೋಗುತ್ತದೆ. ಈ ಒಂದು ಭೌಗೋಳಿಕ ಕಾರಣದಿಂದಾಗಿ ಈ ಊರಿಗೆ ಹಳ್ಳಾಸಮುದ್ರ, ಹಳ್ಳಾಸಂದ್ರ, ಅರಳಸಂದ್ರ ಎಂದು ಹೆಸರು ಬಂದಿರಬೇಕೆಂದು ಊಹಿಸಬಹುದಾಗಿದೆ. ಅಲ್ಲಾಸಮುದ್ರ ಅಥವಾ ಅಲ್ಲಾಸಂದ್ರ ಎಂಬುದು ಈ ಊರು ಹುಟ್ಟಿದ ಎಷ್ಟೋ ಶತಮಾನಗಳ ನಂತರ ಈ ಊರಿನ ಚರಿತ್ರೆಯೊಂದಿಗೆ ತಳುಕು ಹಾಕಿಕೊಂಡದ್ದು ಎಂಬುದು ಸ್ಪಷ್ಟವಾಗುತ್ತದೆ.

ಬ್ರಹ್ಮಣಿಪುರ

ನಮ್ಮ ಹಿಂದಿನ ಜನರು ಸಾಮಾನ್ಯವಾಗಿ ತಮ್ಮ ಊರಿನ ಶ್ರೇಷ್ಠತೆಗಾಗಿ, ಐತಿಹಾಸಿಕ ವ್ಯಕ್ತಿಗಳನ್ನೋ, ಪ್ರಸಿದ್ಧ ಪುರುಷರ ಹೆಸರನ್ನೋ ಇಟ್ಟುಕೊಂಡಿರುವುದು ಕಂಡುಬರುತ್ತದೆ. ಅಂತಹ ಒಂದು ಕಥೆಯನ್ನು ಒಳಗೊಂಡಿರುವ ಊರು ಬ್ರಹ್ಮಣಿಪುರ.

ಹೀಗೆ ಸುಮಾರು 700 ವರ್ಗಗಳ ಹಿಂದೆ ಮಾಧ್ವಮತ ಕೇಂದ್ರವಾದ ಅಬ್ಬೂರಿನಲ್ಲಿ ಪುರುಷೋತ್ತಮ ತೀರ್ಥರ ಶಿಷ್ಯರಾದ ಬ್ರಹ್ಮಣ್ಯತೀರ್ಥರು ವಾಸಿಗಳಾಗಿದ್ದರು. ಅವರು ತಮ್ಮ ಆಶ್ರಮಕ್ಕೆ ತಮ್ಮ ನಂತರ ಸಮರ್ಥ ಉತ್ತರಾಧಿಕಾರಿಗಳಾಗುವವರು ಯಾರೂ ಇಲ್ಲವಲ್ಲ ಎಂಬ

ಕೊರಗಿನಲ್ಲಿರುವಾಗ ಅವರಿಗೆ ಸ್ವಪ್ನದಲ್ಲಿ ವಿಷ್ಣು ಕಾಣಿಸಿಕೊಂಡು ಅವರ ಮನಸ್ಸಿನ ಒಳಗಡೆ ಇದ್ದ ಚಿಂತೆಯನ್ನು ನಿವಾರಿಸುವುದಾಗಿ ಆಶ್ವಾಸನೆಯಿತ್ತನು.

ಹೀಗಿರುವ ಸಂದರ್ಭದಲ್ಲಿ ದೈವಭಕ್ತರಾದ ಬನ್ನೂರು ನಿವಾಸಿಗಳಾದ ಶ್ರೀನಿವಾಸಾಚಾರ್ಯ ವೃದ್ಧ ದಂಪತಿಗಳು ಮಕ್ಕಳಿಲ್ಲದ ಕಾರಣದಿಂದಾಗಿ ಕಾಶೀಯಾತ್ರೆಗಾಗಿ ಚನ್ನಪಟ್ಟಣದ ಮಾರ್ಗವಾಗಿ ಹೋಗುತ್ತಿದ್ದರು. ಶೀನಿವಾಸಾಚಾರ್ಯರು ನಡಿಗೆಯ ಆಯಾಸದಿಂದ ಬಳಲಿ ಕಣ್ವ ನದಿ ತೀರದ ಮಳೂರು ಹತ್ತಿರ ದೈವಾಧೀನರಾದರು. ಆ ವೇಳೆಯಲ್ಲಿ ಗಂಡನ ಮರಣದಿಂದ ಶೋಕತಪ್ತಳಾದ ಶ್ರೀನಿವಾಸಾಚಾರ್ಯರ ಹೆಂಡತಿ ಸಹಗಮನ ಮಾಡಲು ನಿರ್ಧರಿಸಿ ಆಶೀರ್ವಾದಕ್ಕಾಗಿ ಈ ಪ್ರದೇಶದ ಬ್ರಾಹ್ಮಣರನ್ನು ಕೇಳಲು ಹೋದಳು. ಆದರೆ ಅವರು ಇದೇ ಮಾರ್ಗದಲ್ಲಿ ಕಣ್ವ ನದಿ ತೀರದಲ್ಲಿ ಬ್ರಹ್ಮಣ್ಯತೀರ್ಥರೆಂಬ ಯತಿಗಳ ಆಶ್ರಮವಿದೆ. ಅಲ್ಲಿ ಹೋಗಿ ಅವರ ಆಶೀರ್ವಾದವನ್ನು ಪಡೆದು ಸಹಗಮನ ಮಾಡಬಹುದು ಎಂದು ಹೇಳುತ್ತಾರೆ. ಅವರ ಮಾತಿನಂತೆ ಆಕೆ ತನ್ನ ಗಂಡನ ಶವವನ್ನು ಅಲ್ಲೇ ಬಿಟ್ಟು ಬ್ರಹ್ಮಣ್ಯತೀರ್ಥರ ಸನ್ನಿಧಿಗೆ ಹೋಗಿ ನಮಸ್ಕಾರ ಮಾಡಿದಾಗ ಯತಿಗಳು ತಕ್ಷಣವೇ 'ದೀರ್ಘ ಸುಮಂಗಲಿ ಭವ' ಎಂದು ಆಶೀರ್ವಾದ ಮಾಡಿದರು. ಅದನ್ನು ಕಂಡು ಪಕ್ಕದಲ್ಲಿದ್ದ ಯತಿಗಳ ಶಿಷ್ಯರು ಅವರನ್ನು ಕುರಿತು ಆಕೆಯ ಗಂಡನು ಮರಣ ಹೊಂದಿರುತ್ತಾನೆ. ಆಕೆ ಸಹಗಮನಕ್ಕಾಗಿ ನಿಮ್ಮನ್ನು ಯಾಚಿಸಲು ಬಂದಿದ್ದಾಳೆ. ಅದನ್ನು ತಿಳಿಯದೆ ನೀವು ಆಕೆಗೆ ದೀರ್ಘ ಸುಮಂಗಲಿ ಭವ ಎಂದು ಹರಸಿಬಿಟ್ಟಿರಿ ಎಂದು ಹೇಳಿದಾಗ ನಡೆದು ಹೋದ ಅಚಾತುರ್ಯದಿಂದ ಅವರ ಮನಸ್ಸಿಗೆ ನೋವಾದರೂ, ಧೈರ್ಯ ತಂದುಕೊಂಡು, ಸ್ವಲ್ಪ ಹೊತ್ತು ಸೂರ್ಯನ ಕಡೆ ದಿವ್ಯ ದೃಷ್ಟಿಯನ್ನು ಹರಿಸಿ ತಕ್ಷಣವೇ ತಮ್ಮ ಕಮಂಡಲದಲ್ಲಿದ್ದ ತೀರ್ಥವನ್ನು ಆಕೆಗೆ ಕೊಟ್ಟು ತೆಗೆದುಕೊಂಡು ಹೋಗಿ ನಿನ್ನ ಗಂಡನಿಗೆ ಪ್ರೋಕ್ಷಣೆ ಮಾಡು ಎಂದು ಹೇಳಿದರು. ಆಕೆಯು ಅದೇ ರೀತಿಯಾಗಿ ಗಂಡನ ಶವಕ್ಕೆ ತೀರ್ಥವನ್ನು ಪ್ರೋಕ್ಷಣೆ ಮಾಡಲು ತಕ್ಷಣವೇ ಶ್ರೀನಿವಾಸಚಾರ್ಯರು ಎದ್ದು ಕುಳಿತರು. ಮತ್ತೆ ಜ್ಞಾನವನ್ನು ಪಡೆದುಕೊಂಡ ಶ್ರೀನಿವಾಸಚಾರ್ಯರು ಏಕೆ ನನಗೆ ಹೀಗಾಯಿತು? ಎಂದು ಕೇಳಲು, ಅವರ ಹೆಂಡತಿ ನಡೆದ ವೃತ್ತಾಂತವೆಲ್ಲವನ್ನೂ ತನ್ನ ಗಂಡನಿಗೆ ತಿಳಿಸಿದಳು. ಕೂಡಲೇ ಆ ದಂಪತಿಗಳು ಬ್ರಹ್ಮಣ್ಯತೀರ್ಥರನ್ನು ಹುಡುಕಿಕೊಂಡು ಹೋಗಿ ಅವರಿಗೆ ನಮಸ್ಕರಿಸಿ ತಾವು ಪುತ್ರ ಸಂತಾನಕ್ಕಾಗಿ ಕಾಶೀಯಾತ್ರೆಗೆ ಹೋಗಿ ಬರುವುದಾಗಿ ತಿಳಿಸಿದರು. ಆ ಸಮಯದಲ್ಲಿ ಯತಿಗಳು ನೀವು ನಿಮ್ಮ ಸ್ಥಳದಲ್ಲೇ ಇದ್ದು ವಿಠಲನ ಸೇವೆ ಮಾಡಿಕೊಂಡು ಇರಿ. ನಿಮಗೆ ಸಂತಾನ ಪ್ರಾಪ್ತಿಯಾಗುವುದು ಅದರಲ್ಲಿ ಮೊದಲನೆಯ ಮಗುವನ್ನು ನಮಗೆ ಆಶ್ರಮಕ್ಕಾಗಿ ಕೊಡಬೇಕು. ಎರಡನೇ ಮಗುವನ್ನು ನೀವೇ ಇಟ್ಟುಕೊಳ್ಳಿ

ಎಂದು ಹೇಳಿ ಆಶೀರ್ವದಿಸಿ ಕಳುಹಿಸಿದರು. ಜೊತೆಗೆ ಮೊದಲ ಮಗುವಿನ ಜನನ ಕಾಲಕ್ಕೆ ತಮ್ಮ ಆಶ್ರಮಕ್ಕೆ ಬರಬೇಕೆಂದೂ ಆಶ್ರಮದಲ್ಲಿಯೇ ಮಗುವಿನ ಜನನವಾಗಬೇಕೆಂದೂ ಕೇಳಿಕೊಂಡರು. ಆನಂತರ ಅವರು ಬನ್ನೂರಿಗೆ ಮರಳಿದರು. ಶ್ರೀನಿವಾಸಾಚಾರ್ಯರ ಪತ್ನಿಗೆ ನವಮಾಸಗಳು ತುಂಬಿ ಪ್ರಸವದ ದಿನ ಸಮೀಪವಾಗಲು ಅಬ್ಬೂರಿಗೆ ಬಂದರು. ದೈವೇಚ್ಛೆಯಂತೆ ಮಗು ಹುಟ್ಟಿತು. ಅದನ್ನು ಬಂಗಾರದ ತಟ್ಟೆಯಲ್ಲಿಟ್ಟು ಯತಿಗಳಿಗೆ ಒಪ್ಪಿಸಿದರು. ಯತಿಗಳು ಆ ಮಗುವನ್ನು ಕಣ್ವ ನದಿಯಲ್ಲಿ ತೊಳೆದು ಪುರುಷೋತ್ತಮರ ಗುಹೆಯಲ್ಲಿ ಬ್ರಹ್ಮಣ್ಯತೀರ್ಥರು ಸಲಹುತ್ತಾ ಬಂದರು. ಗುಹೆಯಲ್ಲಿ ಜೇನು ಕಟ್ಟಿದ್ದು ಮಗುವಿಗೆ ಹಸಿವಾಗಿ ಅಳುವಾಗ ಸ್ವಲ್ಪ ಸ್ವಲ್ಪ ಜೇನುತುಪ್ಪ ಬೀಳುತ್ತಿತ್ತು. ಅದೂ ಅಲ್ಲದೆ ಯತಿಗಳು ಪೂಜಾ ಕಾಲದಲ್ಲಿ ಸಾಲಿಗ್ರಾಮಕ್ಕೆ ಪೂಜೆ ಮಾಡಿದ ಹಾಲನ್ನು ಆ ಮಗುವಿಗೆ ಕುಡಿಸುತ್ತಲ್ಲಿದ್ದರು. ಆ ನಂತರ ಮಗುವು ಬೆಳೆಯುತ್ತಾ ಬರಲು ಆ ಮಗುವಿಗೆ ವ್ಯಾಸರಾಜ ಎಂದು ನಾಮಕರಣ ಹಾಗೂ ಉಪನಯನವನ್ನು ಮಾಡಿ ತಮ್ಮ ಆಶ್ರಮಕ್ಕೆ ವ್ಯಾಸರಾಜರನ್ನು ಅಧಿಪತಿಯನ್ನಾಗಿ ಮಾಡಿ ಬ್ರಹ್ಮಣ್ಯತೀರ್ಥರು ದೇಶ ಸಂಚಾರಕ್ಕೆ ಹೊರಟರು.

ಇದಾದ ಎಷ್ಟೋ ವರ್ಷಗಳ ನಂತರ ತಿರುಪತಿ ಶ್ರೀನಿವಾಸ ದೇವರ ಪೂಜೆಗೆ ಯಾರೂ ಅರ್ಚಕರಿಲ್ಲದ ಕಾರಣ ವ್ಯಾಸರಾಜರು ತಿರುಪತಿ ಶ್ರೀನಿವಾಸ ದೇವರ ಪೂಜೆಯನ್ನು 12 ವರ್ಷಗಳ ಕಾಲ ಮಾಡಿದರು. ಅದೇ ಸಮಯಕ್ಕೆ ವಿಜಯನಗರ ಸಾಮ್ರಾಜ್ಯದ ದೊರೆಯಾಗಿದ್ದ ಕೃಷ್ಣದೇವರಾಯನಿಗೆ ಕುಜರೋಗ ಪ್ರಾಪ್ತವಾಯಿತು. ಆಗ ವ್ಯಾಸರಾಜರು ಆ ಕುಜರೋಗವನ್ನು ಪರಿಹಾರ ಮಾಡಿದರು. ಇದರಿಂದ ಸಂತೃಪ್ತರಾದ ಕೃಷ್ಣದೇವರಾಯನು ವ್ಯಾಸರಾಜರನ್ನು ಕುರಿತು ನಿಮಗೆ ಎಷ್ಟು ಭೂಮಿ ಎಲ್ಲಿ ಬೇಕೋ, ಅಷ್ಟು ಭೂಮಿಯನ್ನು ಬರೆದಿಟ್ಟುಕೊಳ್ಳಿ ಅದಕ್ಕೆ ನಾನು ಸಹಿ ಹಾಕುತ್ತೇನೆ ಎನ್ನಲು, ವ್ಯಾಸರಾಜರು ತಮ್ಮ ಪ್ರಿಯ ಗುರುಗಳಿಗಾಗಿ ಪೂರ್ವಕ್ಕೆ ಹೊಸಹಳ್ಳಿ, ಪಶ್ಚಿಮಕ್ಕೆ ಲಾಲಾಘಟ್ಟದ ದೇವಸ್ಥಾನ, ಉತ್ತರಕ್ಕೆ ತಗಚಗೆರೆಯ ಆಂಜನೇಯಸ್ವಾಮಿ ದೇವಸ್ಥಾನ, ದಕ್ಷಿಣಕ್ಕೆ ನೀಲಸಂದ್ರದ ಭೈರವೇಶ್ವರ ಸ್ವಾಮಿ ದೇವಸ್ಥಾನ ಈ ವ್ಯಾಪ್ತಿಯ ಒಳಗೆ ಬರುವ ಭೂ ಪ್ರದೇಶವನ್ನು ಬರೆದಿಟ್ಟರು. ಆ ನಂತರ ಮಹಾರಾಜ ಕೃಷ್ಣದೇವರಾಯನು ಇದಕ್ಕೆ ಸಹಿ ಹಾಕಿದನು. ದೇಶ ಪರ್ಯಟನೆ ಮಾಡಿಕೊಂಡು ಬಂದ ಬ್ರಹ್ಮಣ್ಯತೀರ್ಥರು ತಮ್ಮ ಕೆಲವು ಶಿಷ್ಯರೊಂದಿಗೆ ಇಲ್ಲಿ ನೆಲಸಿದರು. ಅವರಿಗೆ ಅವಸಾನ ಕಾಲ ಸಮೀಪಿಸಿದ ಸಮಯದಲ್ಲಿ ಅವರು ಮತ್ತೆ ಅಬ್ಬೂರಿಗೆ ಮರಳಿ ಅಲ್ಲೇ ಗುಹೆಯೊಂದರಲ್ಲಿ ಐಕ್ಯರಾದರು. ಆನಂತರ ಅವರ ಶಿಷ್ಯರು ತಮ್ಮ ಸ್ಥಳಕ್ಕೆ ಬ್ರಹ್ಮಣ್ಯತೀರ್ಥವೆಂದು ಹೆಸರಿಟ್ಟುಕೊಂಡರು. ಅದು ಕಾಲಕ್ರಮದಲ್ಲಿ ಬ್ರಹ್ಮಣಿಪುರವಾಯಿತು.[14]

ಬ್ರಾಹ್ಮಣಪುರ > ಬ್ರಹ್ಮಣಪುರ > ಬ್ರಹ್ಮಣಿಪುರವಾಗಿದೆ.

ಸಿಂಗರಾಜಪುರ ಮತ್ತು ಹನಿಯೂರು

ಚನ್ನಪಟ್ಟಣದಿಂದ ಸುಮಾರು 14 ಕಿ.ಮೀ ದೂರದಲ್ಲಿ ಸಾತನೂರಿಗೆ ಹೋಗುವ ಮಾರ್ಗದಲ್ಲಿ ಬರುವ ಊರು ಸಿಂಗರಾಜಪುರ. ಸಿಂಗರಾಜಪುರಕ್ಕೆ 1 ಕಿ.ಮೀ ದೂರದಲ್ಲಿರುವ ಹನಿಯೂರಿಗೆ ಅಯಾಯ ಹೆಸರುಗಳು ಬರಲು ಶೃಂಗ ಮಹರ್ಷಿಯ ಕಥೆಯನ್ನು ಸ್ವಾರಸ್ಯವಾಗಿ ಹೆಣೆಯಲಾಗಿದೆ.

ಸಿಂಗರಾಜಪುರ ಹಾಗೂ ಹನಿಯೂರುಗಳೆರಡೂ ಬೆಟ್ಟ ಗುಡ್ಡಗಳಿಂದ ಆವೃತವಾಗಿರುವ ಊರುಗಳು. ಈ ಊರುಗಳಿಗೆ ಹೊಂದಿಕೊಂಡಂತೆ ಇರುವ ದೊಡ್ಡದಾದ ಕಾಡಿನಲ್ಲಿ ವಿಭಾಂಡಕ ಮಹರ್ಷಿಗಳು ಆಶ್ರಮವನ್ನು ಕಟ್ಟಿಕೊಂಡು ವಾಸವಾಗಿದ್ದರು. ವಿಭಾಂಡಕ ಋಷಿಗಳ ಆಶ್ರಮಕ್ಕೆ ಎದುರಾಗಿರುವ ತೈಲೂರು ಗುಡ್ಡೆಯು ಕಶ್ಯಪ ಮುನಿಗಳ ತಪಸ್ಸಿನ ಕ್ಷೇತ್ರವಾಗಿತ್ತು. ಈ ಇಬ್ಬರು ಮಹಾಪುರುಷರ ಆಶ್ರಮಗಳ ಮಧ್ಯೆ ಒಂದು ದೊಡ್ಡ ತೊರೆ ಇದ್ದು, ಕಶ್ಯಪ ಮಹರ್ಷಿಗಳು ದಿನವೂ ಅಲ್ಲಿಗೆ ಸಂಧ್ಯಾ ವಂದನೆಗಳಿಗೆ ಬರುತ್ತಿದ್ದರು. ಅವರು ಸಂಧ್ಯಾವಂದನೆಗೆ ಬರುತ್ತಿದ್ದ ಸಮಯದಲ್ಲಿ ಗಂಧರ್ವ ಸ್ತ್ರೀಯರು ಜಲಕ್ರೀಡೆಯಾಡಲು ಬರುತ್ತಿದ್ದರು. ಒಮ್ಮೆ ಅರೆನಗ್ನವಾಗಿ ಜಲಕ್ರೀಡೆಯಾಡುತ್ತಿದ್ದ ಗಂಧರ್ವಸ್ತ್ರೀಯರನ್ನು ನೋಡಿ ಮಹರ್ಷಿಗಳಿಗೆ ಕಾಮೋದ್ರೇಕವಾಗಿ ಬಿಂದು ಚಲನೆಯಾಗಿ ನೀರಿಗೆ ಬಿತ್ತು. ಕೆಳಭಾಗದಲ್ಲಿ ಜಿಂಕೆಯೊಂದು ಬಾಯಾರಿ ಬಂದು ನೀರು ಕುಡಿಯುತ್ತಿತ್ತು. ಆ ಬಿಂದು ಜಿಂಕೆಯ ಗರ್ಭವನ್ನು ಸೇರಿತು.

ಆ ಜಿಂಕೆ ಬೇರೆಲ್ಲಿಯದೂ ಆಗಿರದೆ ವಿಭಾಂಡಕ ಮಹರ್ಷಿಗಳ ಆಶ್ರಮದ ಮುದ್ದಿನ ಪ್ರಾಣಿಯಾಗಿತ್ತು. ಇವರ ಆಶ್ರಯದಲ್ಲಿ ಬೆಳೆಯುತ್ತಿದ್ದ ಅದಕ್ಕೆ ನವಮಾಸಗಳು ತುಂಬಿ ಪ್ರಸವವಾಯಿತು. ಆ ಜಿಂಕೆ ಹಿಂದಿನ ಜನ್ಮದಲ್ಲಿ ಕುಬೇರನ ಶಾಪಕ್ಕೆ ಸಿಕ್ಕಿದ ಗಂಧರ್ವ ಸ್ತ್ರೀ ಆಗಿತ್ತು. ಶಾಪ ವಿಮೋಚನೆಯ ಕಾಲ ಸಮೀಪಿಸಿದ್ದರಿಂದ ಗಂಡು ಮಗುವಿಗೆ ಜನ್ಮ ನೀಡಿದ ನಂತರ ಆ ಮಗುವನ್ನು ವಿಭಾಂಡಕ ಋಷಿಗಳ ಆಶ್ರಯಕ್ಕೆ ಒಪ್ಪಿಸಿ ಕಣ್ಮರೆಯಾಯಿತು. ವಿಭಾಂಡಕರು ತಾಯಿ ಇಲ್ಲದ ಆ ಮಗುವನ್ನು ಚೆನ್ನಾಗಿ ಪೋಷಿಸಿ, ಬೆಳೆಸಿ, ಪಾರಮಾರ್ಥಿಕ ಹಾಗೂ ಸಕಲವಿದ್ಯಾ ಪಾರಂಗತನನ್ನಾಗಿ ಮಾಡಿದರು. ಈ ಮಗು ಜಿಂಕೆಯ ಗರ್ಭದಲ್ಲಿ ಜನಿಸಿದ್ದರಿಂದ ಅದು ಜನ್ಮ ತಾಳುವಾಗಲೇ ತಲೆಯಲ್ಲಿ ಎರಡು ಕೊಂಬುಗಳನ್ನು (ಕೋಡು) ಹೊತ್ತು ಬಂದಿತ್ತು. ಆ ಕಾರಣದಿಂದಾಗಿ ಆ ಮಗುವಿಗೆ ಶೃಂಗರಾಜ ಎಂಬ ನಾಮಕರಣವನ್ನು ಮಾಡಲಾಯಿತು. ತಾಯಿಯಂತೆಯೇ ತರಗೆಲೆಗಳನ್ನು ತಿನ್ನುತ್ತ ಹದಿನಾರು ವರ್ಷಗಳಾಗುವಷ್ಟರಲ್ಲಿಯೇ ಪಾರಮಾರ್ಥಿಕ ವಿದ್ಯೆಯಲ್ಲಿ ಶ್ರೇಷ್ಠ ಸಾಧನೆಯನ್ನು ಮಾಡಿದರು.

ಅಂತಹ ಸಂದರ್ಭದಲ್ಲಿ ಬದರಿಕಾಶ್ರಮದಿಂದ ವಿಭಾಂಡಕ ಋಷಿಗಳಿಗೆ ಆಹ್ವಾನ ಬಂತು. ಆಹ್ವಾನ ಪತ್ರವನ್ನು ವಿಭಾಂಡಕರು ಒಪ್ಪಿಕೊಂಡು ತಮ್ಮ ಆಶ್ರಮಕ್ಕೆ ಶೃಂಗರಾಜ ಮಹರ್ಷಿಯನ್ನು ಅಧಿಪತಿಯನ್ನಾಗಿ ಮಾಡಿ ಅವರು ಬದರಿಕಾಶ್ರಮಕ್ಕೆ ಹೊರಟರು. ವಿಭಾಂಡಕರ ನಂತರ ಶೃಂಗರಾಜ ಮಹರ್ಷಿಗಳು ಆಶ್ರಮವನ್ನು ಸಮರ್ಥವಾಗಿ ನಡೆಸಿಕೊಂಡು, ಕಾಲಕಾಲಕ್ಕೆ ಸುತ್ತಣ ಪ್ರದೇಶದ ಜನಗಳಿಗೆ ಸಮೃದ್ಧವಾಗಿ ಮಳೆಬೆಳೆಗಳನ್ನು ನೀಡುತ್ತಾ ಲೋಕಪ್ರಸಿದ್ಧರಾಗಿ ಕಾಲ ಕಳೆಯುತ್ತಿದ್ದರು.

ಅಂಗದೇಶವನ್ನು ರೋಮಪಾದ ಎಂಬ ಚಕ್ರವರ್ತಿ ರಾಜ್ಯಭಾರ ಮಾಡುತ್ತಿದ್ದು ಅಲ್ಲಿ ಹನ್ನೆರಡು ವರ್ಷಗಳ ಕಾಲ ಭೀಕರ ಕ್ಷಾಮ ಬಂದೊಂದಗಿತು. ಆಗ ರೋಮಪಾದ ಮಹಾರಾಜನು ಅಲ್ಲಿ ಜ್ಯೋತಿಷಿಗಳನ್ನು, ವಿದ್ವಾನ್ ಪಂಡಿತರನ್ನೂ ಕರೆದು ಇದಕ್ಕೆ ಶಾಂತಿ ಏನೆಂದು ಕೇಳಿದಾಗ ಅವರೆಲ್ಲರೂ ಒಕ್ಕೊರಲಿನಿಂದ ಶೃಂಗಬೆಟ್ಟದಲ್ಲಿ ಋಷ್ಯಶೃಂಗರಂತಹ ಮಹಾತ್ಮರಿದ್ದಾರೆ. ಅವರನ್ನು ಕರೆದುಕೊಂಡು ಬಂದು ಅವರ ಪಾದಪೂಜೆಯನ್ನು ಮಾಡಿದರೆ ಕ್ಷಾಮ ನಿವಾರಣೆಯಾಗುತ್ತದೆಂದು ತಿಳಿಸಿದರು. ಬೆಟ್ಟದಿಂದ ಒಂದು ಕ್ಷಣವೂ ಕೆಳಗೆ ಇಳಿದು ಬರದ ಆ ಮಹಾಮುನಿಯನ್ನು ಹೇಗೆ ನನ್ನ ರಾಜ್ಯಕ್ಕೆ ಕರೆತರುವುದು ಎಂದು ಮಹಾರಾಜನಿಗೆ ಯೋಚನೆ ಪ್ರಾರಂಭವಾಯಿತು. ಅಂತಹ ಸಂದರ್ಭದಲ್ಲಿ ಅತ ಸುತ್ತಣ ಊರಿಗಳಿಗೆಲ್ಲಾ ಡಂಗೂರ ಸಾರಿಸಿ ಶೃಂಗಮಹರ್ಷಿ ಮಹಾಮುನಿಯನ್ನು ಬೆಟ್ಟದಿಂದ ಯಾರಾದರೂ ಕೆಳಗೆ ಇಳಿಸಿಕೊಂಡು ಬಂದರೆ ಅವರಿಗೆ ನನ್ನ ಅರ್ಧ ರಾಜ್ಯವನ್ನು ಕೊಡುವುದಾಗಿ ಸಾರಿಸಿದ. ಆದರೆ ಪ್ರಜೆಗಳಾರು ಈ ಆಹ್ವಾನವನ್ನು ಸ್ವೀಕರಿಸಲು ಮುಂದೆ ಬರಲಿಲ್ಲವಾದ ಕಾರಣ ನಿರಾಸೆಯಿಂದ ಚಿಂತೆಯಲ್ಲಿ ರಾಜ ಮುಳುಗಿದ. ಆ ಸಮಯದಲ್ಲಿ ರೂಪಾಂಗನೆಯೆಂಬ ವೇಶ್ಯೆ ಬಂದು ತಾನು ಕರೆತರುವುದಾಗಿ ಆಶ್ವಾಸನೆಯಿತ್ತು, ರಾಜನಿಂದ ವೀಳ್ಯವನ್ನು ಪಡೆದುಕೊಂಡು ಇಬ್ಬರು ವೇಶ್ಯೆಯರೊಡಗೂಡಿ ಹೊರಟಳು.

ಹೀಗೆ ಹೊರಟ ಅವರು ಶೃಂಗಬೆಟ್ಟದ ಎದುರಿನ ಬೆಟ್ಟದಲ್ಲಿ ಗವಿಯೊಂದನ್ನು ತಂಗುದಾಣ ಮಾಡಿಕೊಂಡರು. ಆ ನಂತರ ಶೃಂಗರ ದಿನಚರಿಗಳನ್ನು ಗಮನಿಸಿದ ಅವರು, ಶೃಂಗರ ಇಂದ್ರಿಯಗಳು ಪುಟತ್ವವಾಗಲು ಉಪ್ಪು, ಖಾರ ಪದಾರ್ಥಗಳಾದ ನಿಪ್ಪಿಟ್ಟು, ಕಜ್ಜಾಯ, ಹಪ್ಪಳ ಮುಂತಾದವುಗಳನ್ನು ಪುಡಿ ಮಾಡಿ ಅವರು ತಿನ್ನುತ್ತಿದ್ದ ಎಲೆಗಳ ಮೇಲೆ ಉದುರಿಸುತ್ತಿದ್ದರು. ಕಾಲಕ್ರಮೇಣ ಅವರು ಆ ಪದಾರ್ಥಗಳನ್ನು ಶೃಂಗರು ತಿನ್ನುತ್ತಿದ್ದ ಎಲೆಗಳ ಕೆಳಗೆ ಇಡಲು ಪ್ರಾರಂಭಿಸಿದರು. ಶೃಂಗರು ಆ ಪದಾರ್ಥಗಳನ್ನು ತಿನ್ನುವುದನ್ನು ಗಮನಿಸಿದ ವೇಶ್ಯೆಯರು

ಸನ್ಯಾಸಿಯರ ರೀತಿಯಲ್ಲಿ ಬಟ್ಟೆಯನ್ನು ಧರಿಸಿಕೊಂಡು ಶೃಂಗರ ಸುತ್ತ ಓಡಾಡಲು ಪ್ರಾರಂಭಿಸಿದರು. ಇದುವರೆಗೂ ಯಾವ ಸ್ತ್ರೀಯನ್ನು ಸಹ ಕಣ್ಣೆತ್ತಿ ನೋಡದಿದ್ದ ಋಷಿಗಳು ಈಗ ಇವರನ್ನು ನೋಡಿದುದ್ದಲ್ಲದೆ ಅವರ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿ ಅವರ ಕ್ಷೇಮ, ಕುಶಲ ಸಮಚಾರಗಳನ್ನು ವಿಚಾರಿಸುತ್ತಿದ್ದರು. ಅಲ್ಲದೆ ಅವರ ದೇಹ ಸ್ಪರ್ಶವನ್ನೂ ಮಾಡ ತೊಡಗಿದರು.ಕ್ರಮೇಣ ಋಷಿಗಳಿಗೆ ಇವರ ಬಗ್ಗೆ ವ್ಯಾಮೋಹವಾಗಿ ಅವರನ್ನು ಕುರಿತು ನೀವು ಯಾರು? ನಿಮ್ಮ ಸ್ಥಳ ಯಾವುದು? ನಿಮ್ಮ ಸ್ಥಳಕ್ಕೆ ನಾನು ಒಮ್ಮೆ ಬರಬಹುದೆ? ಮುಂತಾಗಿ ಕೇಳ ತೊಡಗಿದರು. ತಾವು ಬಂದಿರುವ ಉದ್ದೇಶ ಫಲಿಸತೊಡಗಿದ ಸೂಚನೆಗಳನ್ನು ಕಂಡು ತುಂಬಾ ಸಂತೋಷಗೊಂಡ ವೇಶ್ಯೆಯರೂ ಸಹ ತಮ್ಮ ಊರಿಗೆ ಬರುವಂತೆ ಋಷಿಗಳನ್ನು ಒತ್ತಾಯಿಸ ತೊಡಗಿದರು. ಅವರ ಬೇಡಿಕೆಯಂತೆ ಮತ್ತು ತಮ್ಮ ಮನಸ್ಸಿನ ಇಂಗಿತದಂತೆ ಅವರ ಊರಿಗೆ ಹೊರಟ ಸಂದರ್ಭದಲ್ಲಿ ಅಲ್ಲಿನ ಜನರು ಬಂದು ನೀವು ಹೋಗಬೇಡಿ, ನೀವು ಹೋದರೆ ನಮಗೆ ಗತಿ ಯಾರು? ನಮ್ಮ ದೇಶದ ಮಳೆ ಬೆಳೆಯ ಸ್ಥಿತಿಯೇನು? ಎಂದು ಕೇಳಿಕೊಂಡಾಗ ಅವರು ಪುನಃ ಇಲ್ಲಿಗೆ ಬರುವವರೆಗೂ ಮೊದಲು ಹೇಗೆ ಮಳೆ, ಬೆಳೆಗಳು ಸಮೃದ್ಧವಾಗಿ ನಡೆಯುತ್ತಿದ್ದವೋ ಅದೇ ರೀತಿಯಲ್ಲಿ ಇಲ್ಲಿ ಮುಂದೆಯೂ ಮಳೆ ಹನಿಯುತ್ತಿರಲಿ ಎಂದು ಹೇಳಿ ಹೊರಟರು. ಹೀಗಾಗಿ ಬೆಟ್ಟದ ಹತ್ತಿರವಿದ್ದ ಒಂದು ಹಳ್ಳಿಗೆ ಹನಿಯೂರು ಎಂಬ ಹೆಸರಾಯಿತು.

ಅಂಗದೇಶಕ್ಕೆ ಶೃಂಗ ಮಹರ್ಷಿಗಳು ಹೋಗುತ್ತಿದ್ದತೆಯೇ ಅಲ್ಲಿನ ಭೀಕರ ಕ್ಷಾಮ ನಿವಾರಣೆಯಾಯಿತು. ಶೃಂಗರು ಅಲ್ಲಿ ಹಲವು ವರ್ಷಗಳ ಕಾಲ ತಂಗಿದ್ದು ಆನಂತರ ತನ್ನ ಪೂರ್ವಸ್ಥಳದ ನೆನಪು ಬಲವಾಗಿ ಕಾಡತೊಡಗಿದ ಮೇಲೆ ಪುನಃ ಅವರು ತಮ್ಮ ಮೂಲ ಸ್ಥಳಕ್ಕೆ ಬಂದು ತಮ್ಮ ಪೂರ್ವಾಶ್ರಮದಲ್ಲಿ ನೆಲೆಸಿದರು. ವಯಸ್ಸಾದ ನಂತರ ಅವರು ಇಲ್ಲೇ ಐಕ್ಯವಾದರು. ಹಾಗಾಗಿ ಈ ಊರನ್ನು ಶೃಂಗರ ನೆನಪಿಗಾಗಿ ಶೃಂಗರಾಜಪುರ ಎಂದು ಕರೆಯಲಾರಂಭಿಸಿದರು. ಕ್ರಮೇಣ ಜನರ ಬಾಯಲ್ಲಿ ಶೃಂಗರಾಜಪುರ > ಸಿಂಗರಾಜಪುರ ಆಯಿತು ಎಂದು ಇಲ್ಲಿನ ಜನ ಹೇಳುತ್ತಾರೆ.[15]

ಇಗ್ಗಲೂರು

ಐತಿಹ್ಯ–1:

ಚನ್ನಪಟ್ಟಣ ತಾಲ್ಲೂಕು ಕೇಂದ್ರದಿಂದ ದಕ್ಷಿಣ ಮಾರ್ಗವಾಗಿ ಹೊರಟರೆ 24 ಕಿ.ಮೀ. ದೂರದಲ್ಲಿರುವುದೇ ಇಗ್ಗಲೂರು. ಹಿಂದೆ ಈ ಗ್ರಾಮವನ್ನು 'ಇರ್ಗಲ್ಲೂರು' ಎಂದು ಕರೆಯುತ್ತಿದ್ದರಂತೆ ಕಾಲಕ್ರಮೇಣ ವಿಜಾತೀಯ ಒತ್ತಾಕ್ಷರ 'ರ್'ಕಾರವು ಲೋಪವಾಗಿ ಸಜಾತೀಯ

ಒತ್ತಾಕ್ಷರ 'ಗ'ಕಾರವು ಆಗಮವಾಗಿ 'ಇಗ್ಗಲೂರು' ಎಂದಾಯಿತು. 11 ಮತ್ತು 12ನೇ ಶತಮಾನದ ಸುಮಾರಿಗೆ ಈ ಗ್ರಾಮಕ್ಕೆ ಬಳೆ ವ್ಯಾಪಾರಕ್ಕಾಗಿ ಇಬ್ಬರು ಲಿಂಗಾಯತ ಶೆಟ್ಟರು (ಶೈವ ಧರ್ಮ ಪ್ರಚಾರದಲ್ಲಿದ್ದ ಕಾಲ) ಬಂದಿದ್ದರಂತೆ. ಅವರು ಈ ಗ್ರಾಮದ ಪಶ್ಚಿಮದ ಕಡೆಗೆ ಶಿಂಷಾ ನದಿಯ ದಡದಲ್ಲಿ ರಾತ್ರಿ ವಿಶ್ರಾಂತಿಗಾಗಿ ಉಳಿದುಕೊಂಡಿದ್ದರಂತೆ. ಅಡುಗೆ ತಯಾರಿಸಲು ಅಲ್ಲೇ ಇದ್ದ ಎರಡು ಕಲ್ಲುಗಳನ್ನು ತಂದು ಜೋಡಿಸಿ, ಒಲೆ ಸಿದ್ಧಪಡಿಸಿದರಂತೆ. ಆ ಒಲೆಯ ಮೇಲೆ ಪಾತ್ರೆಯನ್ನಿಟ್ಟು ಒಣಸೌದೆಗಳಿಗೆ ಬೆಂಕಿ ಹಚ್ಚಿ ಉರಿಸಿದಾಗ, ಸೌದೆ ಉರಿದು ಕೆಂಡವಾಗದೆ ಬರೀ ಕರಕಲು ಇದ್ದಿಲುಗಳಾಗುತ್ತಿದ್ದವಂತೆ. ಎಷ್ಟು ಉರಿಸಿದರೂ ಇವರು ಅಡುಗೆ ಸಿದ್ಧಪಡಿಸಲು ಸಾಧ್ಯವಾಗದೆ ಕಲ್ಲುಗಳನ್ನು ಬೇರ್ಪಡಿಸಿ ನೋಡಿದಾಗ ಅಲ್ಲೇ ಇದ್ದ ಕಲ್ಲಿನಿಂದ ರಕ್ತ ಸುರಿಯುತ್ತಿತ್ತಂತೆ. ಇದನ್ನು ನೋಡಿ ಭಯ–ಭೀತರಾದ ಬಳೆ ವ್ಯಾಪಾರಿಗಳು ರಕ್ತ ಬರುತ್ತಿದ್ದ ಕಲ್ಲು, ದೇವರ ಕಲ್ಲೆಂದು ಅದನ್ನು ಸ್ವಚ್ಛ ಮಾಡಿ ಪೂಜಿಸಿ ಇದು ಶ್ರೀ ಸೋಮೇಶ್ವರ ದೇವರೆಂದು ಸ್ಥಾಪಿಸಿದರಂತೆ. ಅದು ಇಂದಿಗೆ ದೊಡ್ಡ ದೇವಾಲಯವಾಗಿ ನಿಂತಿದೆ. ಈ ಎರಡು ಕಲ್ಲುಗಳ ಕಾರಣದಿಂದ ಇಗ್ಗಲೂರು(ಎರಡು ಕಲ್ಲು > ಇಗ್ಗಲ್ಲು + ಊರು > ಇಗ್ಗಲೂರು) ಎಂದು ಹೆಸರು ಬಂದಿತು.[16]

ಐತಿಹ್ಯ–2:

ಈ ಗ್ರಾಮದಲ್ಲಿ ಒಕ್ಕಲಿಗ ಜನಾಂಗದವರೊಬ್ಬರು ಮೊದಲು ನೆಲೆಸಿದ್ದರು. ಇವರಿಗೆ ಗಂಡು ಮಕ್ಕಳು ಇರಲಿಲ್ಲ. ಆದರೆ ಒಬ್ಬಳು ಹೆಣ್ಣು ಮಗಳು ಇದ್ದಳು. ಈಕೆ ರೂಪವತಿಯಾಗಿದ್ದಳು. ಒಂದು ದಿನ ಇವಳು ಮತ್ತು ಇವಳ ತಾಯಿ ಶಿಂಷಾನದಿಗೆ ಬಟ್ಟೆ ಒಗೆಯಲು ಹೋಗಿದ್ದರು. ಬಟ್ಟೆ ಒಗೆದ ನಂತರ ವಿಶ್ರಾಂತಿಯನ್ನು ಪಡೆಯುತ್ತಿದ್ದಾಗ ಈ ನದಿಯ ದಡದ ಹಾಗಲಹಳ್ಳಿ ಗ್ರಾಮದವನಾದ ಭಜಂತ್ರಿ ಮನೆತನಕ್ಕೆ ಸೇರಿದ ಒಬ್ಬ ಪಾಳೇಗಾರ ಬಂದು ಈ ಸುಂದರ ಹುಡುಗಿಯನ್ನು ನೋಡಿ ಅವಳನ್ನು ಮೋಹಿಸಲು ಹೊಂಚು ಹಾಕುತ್ತಾನೆ. ನಂತರ ತನ್ನ ಊರಿಗೆ ಹಿಂದಿರುಗಿ ಕೆಲವು ದಿನಗಳ ನಂತರ ತನ್ನ ಸೇವಕರನ್ನು ಹೆಣ್ಣು ಕೇಳಲು ಒಕ್ಕಲಿಗರ ಮನೆಗೆ ಕಳುಹಿಸುತ್ತಾನೆ. ಈ ಘಟನೆಯಿಂದ ನೊಂದ ಒಕ್ಕಲಿಗ ಮನೆತನವು ದುಃಖಿಸುತ್ತಾ ಅವರು ಭಜಂತ್ರಿ ಜನಾಂಗದವರೆಂದು, ನಾವು ಒಕ್ಕಲಿಗ ಮನೆತನದವರೆಂದು, ಹೇಗೆ ಮದುವೆ ಮಾಡುವುದು?; ಮಾಡಲಿಲ್ಲ ಎಂದರೆ ಆ ಪಾಳೇಗಾರ ನಮ್ಮನ್ನು ಏನು ಮಾಡುತ್ತಾನೋ? ಎಂದು ಹೆದರಿ ನದಿಯ ಪಕ್ಕದಲ್ಲಿ ತಾಯಿ, ಮಗಳು ಅಳುತ್ತಾ ಕುಳಿತುಕೊಳ್ಳುತ್ತಾರೆ. ಆ ವೇಳೆಗೆ ಇಬ್ಬರು ಲಿಂಗಾಯತ ಸಹೋದರರು ಪ್ರಯಾಣ ಮಾಡುತ್ತಾ ಬರುತ್ತಾರೆ. ತಾಯಿ ಮತ್ತು ಮಗಳು

ಅಳುತ್ತಿರುವುದನ್ನು ಕಂಡು ಹತ್ತಿರ ಬಂದು ಅವರನ್ನು ಪ್ರಶ್ನಿಸಿ, ಏಕೆ ಅಳುತ್ತಿದ್ದೀರಾ? ಎಂದು ಕೇಳಿದಾಗ, ಅವರು ಹಿಂದೆ ನಡೆದ ಘಟನೆಯನ್ನು ವಿವರಿಸುತ್ತಾರೆ. ಆಗ ಈ ಸಹೋದರರು ತಾಯಿ ಮತ್ತು ಮಗಳಿಗೆ ಧೈರ್ಯ ತುಂಬಿ 'ನೋಡಿ ನೀವು ಈ ಮದುವೆಗೆ ಒಪ್ಪಿಕೊಳ್ಳಿ, ಆದರೆ ಒಂದು ಕರಾರು ಒಡ್ಡಿ; ಏನೆಂದರೆ ಮದುವೆಯನ್ನು ಒಕ್ಕಲಿಗ ಸಂಪ್ರದಾಯದಂತೆಯೇ ನಡೆಸಬೇಕು. ಮದುವೆಯ ದಿನ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಒಬ್ಬೊಬ್ಬರೆ ಬರಬೇಕು ಎಂದು ಷರತ್ತನ್ನು ನೀಡಿ' ಎಂದು ತಿಳಿಸಿದರಂತೆ. ಅದರಂತೆ ಈ ಮನೆಯಲ್ಲಿ ಅವಿತು ಆ ಮನೆಯ ತೊಟ್ಟಿಯಲ್ಲಿ ರಹಸ್ಯವಾಗಿ ಬಾವಿ ತೋಡುತ್ತಾರೆ. ಆ ಪಾಳೇಗಾರನ ಕಡೆಯವರು ಆ ಮನೆಯೊಳಗೆ ಒಬ್ಬೊಬ್ಬರೆ ಬಂದಾಗ ಅವರನ್ನು ಕಡಿದು ಈ ಬಾವಿಗೆ ಹಾಕುತ್ತಾರೆ. ಹೀಗೆ ನೂರಾರು ಮಂದಿಯನ್ನು ಆ ಅಣ್ಣ-ತಮ್ಮಂದಿರು ಸಾಯಿಸುತ್ತಾರೆ. ಇದರಿಂದ ಆ ಪಾಳೇಗಾರನ ಕಡೆಯವರಿಗೆ ಅನುಮಾನ ಬಂದು ಮನೆಯ ಒಳಗೆ ಹೋದವರು ಒಬ್ಬರು ಹೊರಗೆ ಬರಲಿಲ್ಲವಲ್ಲ; ಎಲ್ಲಿಗೆ ಹೋದರು ಎಂದು ಪ್ರಶ್ನಿಸಿಕೊಳ್ಳುತ್ತಾ, ಆ ಮನೆಯ ಒಳಗೆ ಹೋಗಿ ನೋಡುತ್ತಾರೆ. ಮನೆಯ ತೊಟ್ಟಿಯೊಳಗಿನಿಂದ ರಕ್ತ ದಾರಾಕಾರವಾಗಿ ಹರಿದುಬರುತ್ತಿರುವುದನ್ನು ನೋಡಿ ಪಾಳೇಗಾರನ ಕಡೆಯವರು ಭಯ-ಭೀತರಾಗಿ ಅಲ್ಲಿಂದ ಪರಾರಿಯಾಗುತ್ತಾರೆ. ನಂತರ ಅಣ್ಣ-ತಮ್ಮಂದಿರಲ್ಲಿ ತಮ್ಮ, ಒಕ್ಕಲಿಗರ ಹುಡುಗಿಯನ್ನು ವಿವಾಹವಾಗಿ ಒಕ್ಕಲಿಗ ಮನೆತನದವನಾಗಿ ಉಳಿಯುತ್ತಾನೆ. ಅಣ್ಣ ಇದೇ ಗ್ರಾಮದಲ್ಲಿ ಲಿಂಗಾಯತ ಮನೆತನದವನಾಗಿ ನೆಲೆಸುತ್ತಾನೆ. ಹೀಗೆ ಈ ಗ್ರಾಮಕ್ಕೆ ಬಂದು ನೆಲೆಸಿ ಮೂಲ ನಿವಾಸಿಗಳಾಗುತ್ತಾರೆ. ಉಳಿದ ಜನಾಂಗದವರು ಅನಂತರ ಬಂದು ನೆಲೆಸುತ್ತಾರೆ.[17]

ಅಬ್ಬೂರು

ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಅಬ್ಬೂರು ಅಥವಾ ಶಾಸನಗಳಲ್ಲಿ ಉಲ್ಲೇಖಿಸಲಾಗಿರುವ ಅಪ್ಪಿಯೂರು [ಅಪ್ರಮೇಯ ದೇವರಿಗೆ ನೀಡಿದ ಸ್ಥಳ] ತಾಲ್ಲೂಕು ಕೇಂದ್ರದಿಂದ ಕೇವಲ 6 ಕಿ.ಮೀ ದೂರದಲ್ಲಿರುವ ಪವಿತ್ರ ವೈಷ್ಣವ ಕೇಂದ್ರವಾಗಿದೆ. ಇಲ್ಲಿರುವ ಮಾಧ್ವ ಸಂಪ್ರದಾಯದ ಬ್ರಹ್ಮಣತೀರ್ಥರೇ ಸ್ಥಾಪಿಸಿರುವ ಬ್ರಹ್ಮಣ್ಯತೀರ್ಥ ಮಠವು ಮೂಲತಃ ಸೋಸಲೆ ವ್ಯಾಸರಾಯ ಮಠಕ್ಕೆ ಸೇರಿದ್ದು. ಈ ಮಠದ ಪ್ರಮುಖ ಯತಿಗಳಾದ ರಾಮತೀರ್ಥರ ಶಿಷ್ಯರಾದ ಶ್ರೀಧರತೀರ್ಥರೆಂಬುವವರು ಕುಂದಾಪುರಕ್ಕೆ ವಲಸೆ ಹೋದ ಕಾರಣ ಈ ಮಠಕ್ಕೆ ಕುಂದಾಪುರ ವ್ಯಾಸರಾಜಮಠವೆಂದು ಹೆಸರು ರೂಢಿಗೆ ಬಂದಿತೆಂಬ ಪ್ರತೀತಿಯಿದೆ. ಈ ಊರಿನಲ್ಲಿರುವ ಕ್ರಿ.ಶ. 1060ರ ಚೋಳರ ಶಾಸನದ ಪ್ರಕಾರ ಇದು ದೊಡ್ಡ ಮಳೂರಿನ ಅಪ್ರಮೇಯ ದೇವಾಲಯಕ್ಕೆ

ನೀಡಿದ ಸ್ಥಳವಾಗಿದ್ದು, ಅಪ್ಪಿಯೂರು ಎಂದು ಕರೆಯಲಾಗಿದೆ. ಇದರ ಸಮೀಪದಲ್ಲಿರುವ ಬ್ರಹ್ಮಣ್ಯತೀರ್ಥ ಮಠದಲ್ಲಿ ಬ್ರಹ್ಮಣಿತೀರ್ಥ ಸ್ವಾಮಿಗಳ ಮೂಲ ಬೃಂದಾವನವಿದ್ದು ಅದರ ಮುಂಭಾಗದಲ್ಲಿ ನರಸಿಂಹದೇವರ ಕಂಚಿನ ಪ್ರತಿಮೆ ಹಾಗೂ ಆಂಜನೇಯನ ಶಿಲಾ ವಿಗ್ರಹವಿದೆ. ಈ ಆಂಜನೇಯ ವಿಗ್ರಹವನ್ನು ವ್ಯಾಸತೀರ್ಥರು ಪ್ರಥಮವಾಗಿ (ಕ್ರಿ.ಶ.732ರಲ್ಲಿ) ಪ್ರತಿಷ್ಠಾಪಿಸಿದರೆಂದು ಹೇಳಲಾಗುತ್ತಿದೆ. ಮಠದ ಕಟ್ಟಡವು ಪೂರ್ಣವಾಗಿ ಜೀರ್ಣೋದ್ಧಾರವಾಗಿದ್ದು, ಒಳಪ್ರಕಾರದಲ್ಲಿ ಸುತ್ತುವರೆದಂತೆ ಚಿಕ್ಕ ಚಿಕ್ಕ ಕೊಠಡಿಗಳಿದ್ದು ಅವುಗಳಲ್ಲಿ ಇದೇ ಮಠದ ಹಲವು ಯತಿಗಳ ಬೃಂದಾವನಗಳಿವೆ. ಬ್ರಹ್ಮಣ್ಯತೀರ್ಥರ ಹಿಂದಿನ ಯತಿಗಳಾದ ಪುರುಷೋತ್ತಮ ತೀರ್ಥರ (1443) ಬೃಂದಾವನವು ಈ ಮಠದ ಆವರಣದಲ್ಲಿದೆ. ವಿಜಯನಗರದ ಕೃಷ್ಣದೇವರಾಯನು ವ್ಯಾಸತೀರ್ಥರಿಗೆ ಕ್ರಿ.ಶ. 1523ರಲ್ಲಿ ನೀಡಿದ ದತ್ತಿ ಶಾಸನವು ಸೇರಿದಂತೆ ಅನೇಕ ತಾಮ್ರ ಶಾಸನಗಳು ಈ ಮಠದ ವಶದಲ್ಲಿವೆ. ವೈಶಾಕ ಮಾಸದಲ್ಲಿ ಜರುಗುವ ಬ್ರಹ್ಮಣ್ಯತೀರ್ಥರ ಆರಾಧನೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಳ್ಳುತ್ತಾರೆ. ಊರಿನಲ್ಲಿರುವ ಇತರೆ ದೇವಾಲಯಗಳೆಂದರೆ ನರಸಿಂಹ, ಚೌಡೇಶ್ವರಿ, ಮಾರಮ್ಮ ಮತ್ತು ಹುಲ್ಲೂರಮ್ಮ.

ಕಣ್ವ ಜಲಾಶಯಕ್ಕೂ ಅಬ್ಬೂರಿಗೂ ನಡುವೆ ಒಂದು ಕಿರಿದಾದ ಗುಡ್ಡವಿದ್ದು ಅದರಲ್ಲಿ ನೈಸರ್ಗಿಕ ಗವಿ ಇದೆ. ಇದೇ ಮಠದ ಪುರುಷೋತ್ತಮ ತೀರ್ಥರು ಈ ಗುಹೆಯಲ್ಲಿ ಅದೃಶ್ಯರಾದರೆಂಬ ನಂಬಿಕೆ ಇರುವುದರಿಂದ ಈ ಗುಹೆಗೆ ಪುರುಷೋತ್ತಮ ಗುಹೆ ಎಂದು ಕರೆಯಲಾಗುತ್ತದೆ.[18]

ಬೇವೂರು

ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಪುರಾತನ ಜೈನಕೇಂದ್ರವಾಗಿದ್ದು, ಸ್ಥಳೀಯವಾಗಿ ಕುಡಿಕೆ ಬೇವೂರು ಎಂದು ಕರೆಯಲ್ಪಡುತ್ತದೆ. ಈ ಊರಿನ ತಿಮ್ಮಪ್ಪನ ಬೆಟ್ಟದಲ್ಲಿ ದೊರೆತಿರುವ ಕ್ರಿ.ಶ. 900ರ ಶಾಸನವು ಈ ಸ್ಥಳವನ್ನು ನಿಂಬಗ್ರಾಮವೆಂದು ಉಲ್ಲೇಖಿಸುತ್ತದೆ. ಇದೇ ಶಾಸನದ ಪ್ರಕಾರ ಈ ಗ್ರಾಮವು ಪ್ರಸಿದ್ದ ಜೈನಕೇಂದ್ರವಾಗಿತ್ತೆಂದು ತಿಳಿಯುತ್ತದೆ. ನಿಂಬಗ್ರಾಮವೆಂಬ ಉಲ್ಲೇಖವು ಈ ಊರಿನ ಸ್ಥಳನಾಮ ಬೇವಿನ ಮರದಿಂದ ಬಂದಿರಬೇಕೆಂಬುದು ಸ್ಪಷ್ಟವಾಗಿ ತಿಳಿಸುತ್ತದೆ. ಆನಂತರದ ಕ್ರಿ.ಶ. 1331ರ ಶಾಸನವು ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ್ದು, ಈ ಗ್ರಾಮವನ್ನು ಬೇಹೊರ ಎಂದು ಉಲ್ಲೇಖಿಸುತ್ತದೆ. ಇಲ್ಲಿ ಪುರಾತನ ಕಾಲದಿಂದಲೂ ತಯಾರಾಗುತ್ತಿರುವ ಮಣ್ಣಿನ ಮಡಿಕೆ ಕುಡಿಕೆಗಳಿಂದಾಗಿ ಈ ಊರಿಗೆ ಕುಡಿಕೆ ಬೇವೂರು ಎಂಬ ಹೆಸರು

ರೂಢಿಯಲ್ಲಿದೆ. ಊರನ್ನು ಸುತ್ತುವರೆದಿರುವ ತಿಮ್ಮಪ್ಪನ ಬೆಟ್ಟ ಮತ್ತು ಸಿದ್ದರಾಮೇಶ್ವರ ಬೆಟ್ಟಗಳು ಇಲ್ಲಿಗೆ ಸಹಜವಾದ ರಕ್ಷಣೆಯನ್ನು ಒದಗಿಸುವುದಲ್ಲದೆ ಸುಂದರ ಪರಿಸರವನ್ನು ಮೂಡಿಸಿದೆ. ತಿಮ್ಮಪ್ಪನ ಬೆಟ್ಟವು ಬಹುತೇಕವಾಗಿ ಪುರಾತನ ಜೈನ ವಸತಿಗಳನ್ನು ಹೊಂದಿದ ಪ್ರದೇಶವಾಗಿ ಕಂಡು ಬರುತ್ತದೆ. ಇಲ್ಲಿರುವ ವೆಂಕಟೇಶನ ದೇವಾಲಯದ ಪಕ್ಕದ ಬಂಡೆಯ ಮೇಲೆ ಕೊರೆಯಲಾಗಿರುವ ಶಾಸನವು ಕ್ರಿ.ಶ. 900ಕ್ಕೆ ಸೇರಿದ್ದು, ಈ ಬೆಟ್ಟವನ್ನು ಕಿರಗುಂದ ಎಂದು ಹೆಸರಿಸುತ್ತದೆ. ಈಗಿರುವ ತಿಮ್ಮಪ್ಪ ಅಥವಾ ವೆಂಕಟೇಶನ ದೇವಾಲಯವು ಕ್ರಿ.ಶ. 1979ರಲ್ಲಿ ಮಲ್ಲಿಕಾರ್ಜುನ ದೇವನೆಂಬುವವರ ಶಿಷ್ಯ ಬೆಟ್ಟದ ಒಡೆಯನಿಂದ ನಿರ್ಮಿತವಾಯಿತೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ದೇವಾಲಯದ ಮುಖ್ಯ ದ್ವಾರಪಾಲಕರ ಮೂರ್ತಿಗಳು ಹೊಯ್ಸಳ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ. ಮುಖಮಂಟಪದ ಕಂಬಗಳಲ್ಲಿ ಭಕ್ತ ವಿಗ್ರಹಗಳನ್ನು ಕೆತ್ತಲಾಗಿದೆ. ಹೊರಗೆ ಕಂಡುಬರುವ ಉಯ್ಯಾಲೆ ಕಂಬದ ಮೇಲಿರುವ ಶಾಸನವನ್ನು ಕ್ರಿ.ಶ. 1661ರಲ್ಲಿ ದುಂಡೋಜಿಯ ಹೈಪತಿರಾಯನೆಂಬ ಅಧಿಕಾರಿಯು ಅದನ್ನು ನಿರ್ಮಿಸಿದ ಬಗೆಗೆ ತಿಳಿಸುತ್ತದೆ.

ಊರಿನಲ್ಲಿರುವ ಸಿದ್ದರಾಮೇಶ್ವರ ಬೆಟ್ಟವು, ತಿಮ್ಮಪ್ಪನ ಬೆಟ್ಟದ ಎದುರಿಗೆ ಇದೆ. ಇಲ್ಲಿರುವ ಸಿದ್ದರಾಮೇಶ್ವರ ದೇವಾಲಯವು ಸಾಧಾರಣ ಆಧುನಿಕ ಕಟ್ಟಡವನ್ನು ಹೊಂದಿದೆ. ಈ ದೇವಾಲಯದ ದಕ್ಷಿಣಕ್ಕಿರುವ ಭಗ್ನವಾದ ವೀರಗಲ್ಲು ಶಾಸನವು ಕ್ರಿ.ಶ. 1196ರಲ್ಲಿ ಹೊಯ್ಸಳ ವೀರ ಬಲ್ಲಾಳನ ಆಳ್ವಿಕೆಯಲ್ಲಿ ಕೆಲವು ಅಧಿಕಾರಿಗಳಿಗೆ ನೀಡಿದ ಸೈನಿಕ ಸಹಾಯವನ್ನು ಕುರಿತು ಉಲ್ಲೇಖಿಸುತ್ತದೆ. ಗ್ರಾಮದಲ್ಲಿರುವ ದೇವಾಲಯಗಳೆಂದರೆ ಉಸಾಲಮ್ಮ, ಚೌಡೇಶ್ವರಿ, ಶ್ರೀರಾಮು, ಮಾರಮ್ಮ ಮತ್ತು ಕೆಂಪಮ್ಮ. ಊರ ಹೊರಗಿರುವ ಚೌಡೇಶ್ವರಿ ದೇವಾಲಯವು ವಿಜಯನಗರದ ಶೈಲಿಯ ಕಟ್ಟಡವಾಗಿದ್ದು, ಗರ್ಭ ಗೃಹದಲ್ಲಿರುವ ಮೂಲದೇವಿಯ ವಿಗ್ರಹವು ಆಸೀನವಾಗಿದ್ದು ತ್ರಿಶೂಲ, ಡಮರು, ಅರ್ಪ ಮತ್ತು ಪಾನಪಾತ್ರೆಗಳನ್ನು ನಾಲ್ಕು ಕೈಗಳಲ್ಲಿ ಹೊಂದಿರುವ ಸುಂದರ ಮೂರ್ತಿ ದೇವಾಲಯದ ಹೊರ ಭಾಗದಲ್ಲಿ ವಿಜಯನಗರ ಶೈಲಿಯಲ್ಲಿ ಕೆತ್ತಲಾಗಿರುವ ಭೈರವನ ಸುಂದರ ಮೂರ್ತಿ ಇದೆ. ಪ್ರಸಿದ್ದ ಸಂಗೀತಗಾರರಾದ ಭೈರವಿ ಕೆಂಪೇಗೌಡರು ಈ ಗ್ರಾಮದವರು.[19]

ಕೂಡ್ಲೂರು

ಐತಿಹ್ಯ – 1

ಗಂಗವಂಶದ ದೊರೆ ಭೂವಿಕ್ರಮ ರಾಜನ ಮಗ ಸಾರಂಗಧರ. ಭೂವಿಕ್ರಮನ ಪತ್ನಿ, ಸಾರಂಗಧರನ ಮಲತಾಯಿಯಾದ ರತ್ನಾಜಿ ಮೋಹಿನಿ, ಸಾರಂಗಧರನ ಅಂಗಸಂಗಕ್ಕಾಗಿ ಕರೆಯುತ್ತಾಳೆ. ಸಾರಂಗಧರ ಅದನ್ನು ತಿರಸ್ಕರಿಸುತ್ತಾನೆ. ಕುಪಿತಳಾದ ರತ್ನಾಜಿ ದೊರೆ ಭೂವಿಕ್ರಮ ಬಂದ ಮೇಲೆ ಮಲಮಗ ಸಾರಂಗಧರ ನನ್ನನ್ನು ಅತ್ಯಾಚಾರ ಮಾಡಲು ಪ್ರಯತ್ನಿಸಿದನೆಂದು ದೂರು ಕೊಡುತ್ತಾಳೆ. ಆ ಬಗ್ಗೆ ವಿಚಾರಣೆ ಮಾಡದ ದೊರೆ ಸಾರಂಗಧರನನ್ನು ಕೊಲ್ಲುವಂತೆ ರಾಜ ಭಟರಿಗೆ ಆಜ್ಞೆ ಮಾಡುತ್ತಾನೆ.

ಅಬ್ಬೂರಿನ ಗುಡ್ಡೆಯಲ್ಲಿ ಸಾರಂಗಧರನ ಅಂಗಾಂಗಳನ್ನು ಕತ್ತರಿಸಿದ ಕಾವಲು ಭಟ್ಟರು ಅವನ್ನೆಲ್ಲಾ ಕಣ್ವ ಹೊಳೆಯಲ್ಲಿ ಹಾಕಿದಾಗ, ಹಾಗೆ ಹರಿದು ಬಂದು ಕೂಡ್ಲೂರಿನಲ್ಲಿ ಕೂಡಿ ಕೂಡ್ಲೂರಾಯಿತು[20] ಎನ್ನುತ್ತಾರೆ ವಕ್ತೃವೊಬ್ಬರು. ಅಂಗಾಂಗಳು ಕೂಡುವುದು ಉತ್ಪ್ರೇಕ್ಷೆಯ ಮಾತಾದರೂ ಇತಿಹಾಸ ಐತಿಹ್ಯಕ್ಕೆ ಆಧಾರವೆಂಬ ಮಾತುಂಟು. ಈ ಐತಿಹ್ಯವನ್ನು ಗಮನಿಸಿದಾಗ ಗಂಗರ ಕಾಲದಲ್ಲಿ ಈ ಊರಿಗೆ ಈ ಹೆಸರು ಬಂದಿರಬಹುದು ಎನ್ನಬಹುದು. ಭೂವಿಕ್ರಮನ ಹೆಸರು ಗಂಗ ವಂಶಾವಳಿಯಲ್ಲಿ ಪ್ರಸ್ತಾಪವಾಗಿದ್ದರೂ ಈ ವಂಶಾವಳಿಯಲ್ಲಿ ಎಲ್ಲೂ ಸಾರಂಗಧರನ ಹೆಸರು ಪ್ರಸ್ತಾಪ ಇಲ್ಲ. ಕೂಡ್ಲೂರಿನ ಮಂಗಳೇಶ್ವರ ಚಲ್ಲಮ್ಮ ದೇವರ ದೇವಾಲಯಗಳ ಶಿಲ್ಪವನ್ನು ಗಮನಿಸಿರುವ ಸಂಶೋಧಕ ಡಾ.ದೇವರಕೊಂಡಾರೆಡ್ಡಿ ಅವರು ಈ ದೇವಾಲಯಗಳು ಗಂಗರ ಕಾಲದವರೆಂದು ಸಮರ್ಥಿಸುತ್ತಾರೆ.[21]

ಐತಿಹ್ಯ – 2

ಈ ಗ್ರಾಮದಲ್ಲಿನ ಮಂಗಳೇಶ್ವರ ದೇವಾಲಯದ ಬಗೆಗಿನ ಐತಿಹ್ಯವೊಂದು ಹೀಗಿದೆ. ತಲಕಾಡಿನ ಮಂಗಳಮ್ಮಣ್ಣಿ ಎಂಬ ಹೆಣ್ಣು ಮಗಳೊಬ್ಬಳನ್ನು ಕೂಡ್ಲೂರಿಗೆ ಮದುವೆ ಮಾಡಿಕೊಡಲಾಗಿತ್ತು. ಆಕೆಯನ್ನು ಕೊಂಟೆಗಾಡಿಯಲ್ಲಿ ಗಂಡನ ಮನೆಯಿಂದ ತವರು ಮನೆಗೂ, ತವರು ಮನೆಯಿಂದ ಗಂಡನ ಮನೆಗೂ ಕರೆತರಲಾಗುತ್ತಿತ್ತು.

ಆಕೆ ಗರ್ಭಿಣಿಯಾದ ಮೇಲೆ ತಲಕಾಡಿನ ಪಂಚಲಿಂಗಗಳನ್ನು ಪೂಜಿಸಲೆಂದು ಪದೇ ಪದೇ ತಲಕಾಡಿಗೆ ಹೋಗುತ್ತಿದ್ದಳು. ಮಗಳು ಪದೇ ಪದೇ ತವರಿಗೆ ಬರುವುದನ್ನು ಕಂಡ ತಂದೆ ಯಾಕಮ್ಮ ಹೀಗೆ ಬರುತ್ತಿ ಎಂದಾಗ, ಕಣ್ಣೀರು ಕರೆಯುತ್ತಾ ಈ ಸ್ವಾಮಿಯನ್ನು ಬಿಟ್ಟು ಇರಲಾರೆ

ಎಂದಳು. ಆಗ ಅವರ ತಂದೆ ಇದೇ ರೀತಿಯ ಲಿಂಗಗಳನ್ನು ನೀನಿರುವೆಡೆ ಪ್ರತಿಷ್ಠಾಪಿಸುವುದಾಗಿ ತಿಳಿಸಿದ. ಅಂತೆಯೇ ಮಂಗಳೇಶ್ವರ ಸ್ವಾಮಿ ಮಂಗಳಮ್ಮಣ್ಣಿಯ ಕನಸಿಗೆ ಬಂದು ನನ್ನನ್ನು ಇಲ್ಲೇ ಪೂಜಿಸು ಎಂದ. ಆವತ್ತಿನಿಂದ ಅಲ್ಲಿದ್ದಾಗ ಅಲ್ಲಿ, ಇಲ್ಲಿದ್ದಾಗ ಇಲ್ಲಿ ಪೂಜಿಸುತ್ತಿದ್ದಳು ಎಂದು ವಕ್ತೃವೊಬ್ಬರು ಹೇಳುತ್ತಾರೆ.[22]

ಈ ಐತಿಹ್ಯವನ್ನು ಗಮನಿಸಿದಾಗಲೂ ಗಂಗರ ಕಾಲಕ್ಕೆ ಸಂಬಂಧಿಸಿದ ವಿಚಾರಗಳು ಪ್ರಸ್ತಾಪಗೊಳ್ಳುವುದರಿಂದ ಈ ದೇವಾಲಯ ಗಂಗರ ಕಾಲದಲ್ಲಿ ನಿರ್ಮಾಣವಾಗಿದೆ. ಆ ಕಾಲಕ್ಕಾಗಲೆ ಈ ಗ್ರಾಮ ಇತ್ತು ಎನ್ನಬಹುದು.

ಐತಿಹ್ಯ – 3

ವಿಜಯನಗರ ಪತನಾನಂತರ ಅಲ್ಲಿಂದ ತಲೆ ತಪ್ಪಿಸಿಕೊಂಡು ಬಂದ ಜನಾಂಗ (ಇಂದು ಕೂಡ್ಲೂರಿನಲ್ಲಿರುವ ಅರಸು ಜನಾಂಗದ ಪೂರ್ವಿಕರು) ವಿಜಯನಗರ ಸಮೀಪವಿದ್ದಂತಹ ಕಮಲಾಪುರ, ಸಮುಂದಪುರ ಎಂಬಂತ ಗ್ರಾಮಗಳು ಇಲ್ಲೂ ಇದ್ದುದ್ದರಿಂದ ಇಲ್ಲಿ ನೆಲೆ ನಿಂತರು. ಕಮಲಾಪುರ, ಸಮುಂದಪುರ ಎಂಬ ಎರಡು ಗ್ರಾಮಗಳು ಕೂಡಿ ಕೂಡ್ಲೂರಾಯಿತು ಎಂದು ಗ್ರಾಮದ ವಕ್ತೃ ಹೇಳುತ್ತಾರೆ.[23]

ಸರ್ಕಾರಿ ದಾಖಲೆಗಳಲ್ಲಿ ಕೂಡ್ಲೂರಿನ ಬಳಿ ಮೈಲನಾಥಪುರವೆಂಬ ಬೇಚರಾಕ್ ಗ್ರಾಮವಿತ್ತೆಂದು ತಿಳಿದು ಬರುತ್ತದೆ. ಈ ಮೈಲನಾಥಪುರವೇ ಕೂಡ್ಲೂರು ಗ್ರಾಮದಲ್ಲಿ ಸೇರಿರಬಹುದೇ? ಎಂಬ ಪ್ರಶ್ನೆ ಏಳುವುದು ಸಹಜ. ಆದರೆ ಈ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ವಿಜಯನಗರದ ಪತನದ ಕಾಲ 1563. ಅದಕ್ಕೆ ಮೊದಲೇ ಕೂಡ್ಲೂರಿನ ಹೆಸರು ಈ ಗ್ರಾಮದ ಶಾಸನಗಳಲ್ಲಿ ದಾಖಲಾಗಿರುವುದರಿಂದ ಈ ಹೇಳಿಕೆಯನ್ನು ತಿರಸ್ಕರಿಸಬಹುದು.

ಹೊಳೆ–ಹಳ್ಳಗಳು ಕೂಡಿ ಕೂಡ್ಲೂರಾಗಿದೆ ಎಂಬ ಮಾತುಗಳು ಕೇಳಿ ಬರುತ್ತವೆಯಾದರೂ ಕಣ್ವ ಹೊಳೆ ಮತ್ತೊಂದು ಹೊಳೆ ಅಥವಾ ಹಳ್ಳ ಯಾವುದು ಎಂಬುದಕ್ಕೆ ಯಾವುದೇ ಸ್ಪಷ್ಟ ಆಧಾರಗಳು ಈಗ ಇಲ್ಲವಾಗಿದೆ. ಆದರೆ ಜ್ಞಾನ ಮಂಟಪ ಕ್ಷೇತ್ರ ಮಹಾತ್ಮೆ ಎಂಬ ಕೃತಿಯಲ್ಲಿ ನಿರ್ಮಲಾ ನದಿ ಎಂಬ ಹೆಸರಿನ ಪ್ರಸ್ತಾಪ ಬರುತ್ತದೆ. ಜ್ಞಾನ ಮಂಟಪವೆಂಬುದು ಋಷಿಗಳ ಸಮೂಹದಿಂದ ಸೇವಿಸಲ್ಪಟ್ಟು ದಿವ್ಯ ಕ್ಷೇತ್ರವಾಗಿದ್ದು ಸುತ್ತಲೂ ಅರ್ಧ ಯೋಜನ ವಿಸ್ತಾರ ಹೊಂದಿದ್ದ ವಿವರವಿದೆ.

ಈ ಭಾಗದಲ್ಲಿ ಹರಿಯುತ್ತಿದ್ದ ನದಿ ನಿರ್ಮಲಾ ನದಿ. ಕಣ್ವರೆಂಬ ಬ್ರಹರ್ಷಿ ಸಕಲ ಪುಣ್ಯ ಕ್ಷೇತ್ರಗಳಲ್ಲಿ ಸಂಚರಿಸಿ, ಜ್ಞಾನ ಮಂಟಪ ಕ್ಷೇತ್ರದ ನಿರ್ಮಲಾ ನದಿಗೆ ಬಂದರು. ನಿರ್ಮಲಾ ನದಿಯ ಮಂಗಳಕರವಾದ ತೀರದಲ್ಲಿ ದೊಡ್ಡದಾದ ಯಜ್ಞ ಶಾಲೆಯೊಂದನ್ನು ನಿರ್ಮಿಸಿದರು. ನಿರ್ಮಲಾ ನದಿಯಲ್ಲಿ ಅಶ್ವಮೇಧಯಾಗದ ಅವಭೃತವನ್ನು ನಡೆಸಿದಂದಿನಿಂದ ಮಹರ್ಷಿಗಳೆಲ್ಲರು ಆ ನಿರ್ಮಲಾ ನದಿಯನ್ನು ಕಣ್ವನದಿ ಎಂದು ಕರೆದರು[24] ಎನ್ನುತ್ತಾರೆ. ಲೇಖಕರಾದ ಅಪ್ರಮೇಯ ಅಯ್ಯಂಗಾರ್.

ಈ ಹೇಳಿಕೆಯ ಪ್ರಕಾರ ನಿರ್ಮಲಾ ನದಿಯೇ ಕಣ್ವ ನದಿಯಾಗಿದೆ. ಬೇರೆ ನದಿ ಸೇರಿದ, ಕೂಡಿದ ವಿಚಾರವಿಲ್ಲದ್ದರಿಂದ ಹೊಳೆ–ಹೊಳೆ ಕೂಡಿ ಕೂಡ್ಲೂರಾಗಿದೆ ಎನ್ನಲು ಸಾಧ್ಯವಿಲ್ಲ.

ದೇವರ ಹೊಸಹಳ್ಳಿ

ದೇವರ ಹೊಸಹಳ್ಳಿ ಗ್ರಾಮವು ತಾಲ್ಲೂಕಿನ ಪ್ರಮುಖ ವೈಷ್ಣವ ಕ್ಷೇತ್ರವಾಗಿದ್ದು, ವಿಜಯನಗರ ಕಾಲದಲ್ಲಿ ನಿರ್ಮಾಣವಾದ ದೇವಸ್ಥಾನವೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಆಧಾರವಾಗಿ ಇಂದು ಸಹ ದೇವಸ್ಥಾನದ ಕಂಬದ ಮೇಲೆ ವಿಜಯನಗರದ ರಾಜಲಾಂಛನವನ್ನು ಕಾಣಬಹುದಾಗಿದೆ.

ಈ ದೇವಸ್ಥಾನಕ್ಕೆ ಹಿಂದೆ ಪ್ರಸನ್ನ ಆಂಜನೇಯ ದೇವಸ್ಥಾನವೆಂದು ಕರೆಯುತ್ತಿದ್ದು ತದನಂತರ ಶ್ರೀ ವ್ಯಾಸರಾಯರು ಗಿಡಮೂಲಿಕೆಗಳ ಮೂಲಕ ಪುನರ್ ಸ್ಥಾಪಿಸಿದ ನಂತರ ಸಂಜೀವರಾಯಸ್ವಾಮಿ ಎಂದು ಕರೆಯಲಾಯಿತು ಎಂಬ ವಾಡಿಕೆ ಇದೆ. ಇಂದು ಸಹ ಬಾಲದಲ್ಲಿ ಗಂಟೆ ಇರುವುದು ಕಂಡುಬರುತ್ತದೆ. ಈ ಕ್ಷೇತ್ರದಲ್ಲಿ ಧ್ಯಾನ ಫಲಪ್ರದವಾಗಿದ್ದು ತೀರ್ಥವು ಚಿಕಿತ್ಸಾ ರೂಪದಲ್ಲಿ ಆಸ್ತಿಕ ಭಕ್ತರಿಗೆ ಸಿದ್ಧ ಕ್ಷೇತ್ರವಾಗಿದೆ. ಶ್ರೀ ಸಂಜೀವರಾಯ ಸ್ವಾಮಿಯ 15 ಮೀಟರ್ ಎತ್ತರದ ಸುಂದರಮೂರ್ತಿ ಇದೆ. ಈ ಮೂರ್ತಿಯನ್ನು ಸಂದರ್ಶಿಸಿದ ಶ್ರೀ ಪುರಂದರದಾಸರು 'ಅಂಜಿಕೆ ಇನ್ನು ಏತಕ್ಕಯ್ಯ ಭಯವು ಇನ್ನು ಯಾತಕಯ್ಯ ಸಂಜೀವರಾಯನ ನೆನೆದ ಮೇಲೆ ಎಂಬ ಕೀರ್ತನೆಯನ್ನು ರಚಿಸಿರಿವರೆಂಬ' ಐತಿಹ್ಯವಿದೆ.[25]

ಗರಕಹಳ್ಳಿ

ಗರಕಹಳ್ಳಿಗೆ ಒಂದು ಕಾಲದಲ್ಲಿ ಅಗ್ರಹಾರದ ಸ್ಥಾನವಿತ್ತು. ಈ ಗ್ರಾಮಕ್ಕೆ 'ದೇವರಾಯನಪುರ'ವೆಂದು ಹೆಸರಿತ್ತು. ಕ್ರಿ.ಶ.1666ರಲ್ಲಿ ದೇವರಾಜ ಒಡೆಯರ್‌ರವರ ಮಗ 'ದೇವರಾಜಮಹಿಪಾಲರು' ಈ ಊರನ್ನು ಅಗ್ರಹಾರವಾಗಿ ಮಾಡಿದ್ದಾರೆಂದು ಒಂದು ಶಾಸನವು

ತಿಳಿಸುತ್ತದೆ. ಶ್ರೀ ಕಣ್ಣೇಶ್ವರ ದೇವಸ್ಥಾನ ಇದ್ದು ಈ ಗ್ರಾಮದಲ್ಲಿ ಮೊದಲು ನೇರಳೆ ಮರಗಳು ಗುಂಪು ಗುಂಪಾಗಿ ಇದ್ದುದರಿಂದ ಜಂಜೂಪಾತ್ರವೆಂದು ಕರೆಯುತ್ತಿದ್ದರು ಎಂದು ತಿಳಿದು ಬರುತ್ತದೆ. ಈ ಗ್ರಾಮದಲ್ಲಿ ಯೋಗಿ ಶ್ರೀ ಸಿದ್ದೇಶ್ವರರು ಬಂದು ಈ ಊರಿನ ಹತ್ತಿರದಲ್ಲಿ ಇರುವ ಬೆಟ್ಟದಲ್ಲಿ ವಾಸವಿದ್ದರಂತೆ. ಅವರು ಗರಿಕೆ ರಸವನ್ನು ಔಷಧಿಯನ್ನಾಗಿ ಬಳಸುತ್ತಿದ್ದರಂತೆ. ಈ ಸುದ್ದಿ ಸುತ್ತಲ ಊರುಗಳಿಗೆ ಹೆಸರಾಗಿ, ಹರಸಿ 'ಗರಕೆಹಳ್ಳಿ'ಯೆಂದು ಕರೆಯುತ್ತಿದ್ದರಂತೆ. ಗರಕೆಹಳ್ಳಿ ಕಾಲಾಂತರದಲ್ಲಿ 'ಕೆ' ಹೋಗಿ 'ಕ' ಆಗಿ ಗರಕಹಳ್ಳಿ ಎಂದು ಪ್ರಚಲಿತವಾಗಿದೆ.[26]

ಕೆಂಗಲ್

ಚನ್ನಪಟ್ಟಣ ತಾಲ್ಲೂಕಿನ ಪ್ರಸಿದ್ಧ ವೈಷ್ಣವ ಕ್ಷೇತ್ರ. ಬೆಂಗಳೂರು–ಮೈಸೂರು ರಸ್ತೆಯಲ್ಲಿ, ಚನ್ನಪಟ್ಟಣದಿಂದ 2 ಕಿ.ಮೀ ದೂರದಲ್ಲಿರುವ ಕ್ಷೇತ್ರವಾಗಿದೆ. ಕೆಂಗಲ್ ಆಂಜನೇಯಸ್ವಾಮಿಯ ಗುಡಿಯು ಈಗಿನದಾದರೂ ಶ್ರೀ ಆಂಜನೇಯಸ್ವಾಮಿಯ ಇತಿಹಾಸ ಪ್ರಾಚೀನವಾದುದಾಗಿದೆ. ಕೆಂಪು ಕಲ್ಲಿನ ಬಂಡೆಯೊಂದರಲ್ಲಿ ಶ್ರೀ ವ್ಯಾಸರಾಜರು ಆಂಜನೇಯ ಚಿತ್ರ ಬರೆದು ಪೂಜಿಸಿದರಂತೆ. ವ್ಯಾಸರಾಜರು ಇದೇ ರೀತಿ ಒಟ್ಟು 731 ಆಂಜನೇಯ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿದ್ದು ಅವರು ಬಿಡಿಸಿದ ರೇಖಾಚಿತ್ರವೇ ಮುಂದೆ ಶ್ರೀಯವರ ಮೂರ್ತಿಯಾಗಿ ರೂಪ ಪಡೆಯಿತೆಂದು ಇತಿಹಾಸ ತಿಳಿಸುತ್ತದೆ. ವಿಧಾನಸೌಧದಂತಹ ಅದ್ಭುತ ಕಲಾ ನೈಪುಣ್ಯದ ಭವನದ ನಿರ್ಮಾಣ ಕರ್ತೃ ಶ್ರೀ ಕೆಂಗಲ್ ಹನುಮಂತಯ್ಯನವರು ಈ ದೇವರ ಪ್ರಸಾದದಿಂದ ಜನಿಸಿದವರೆಂದು ತಿಳಿದು ಬರುತ್ತದೆ. ಈ ದೇವಾಲಯದ ನಿರ್ಮಾಣಕ್ಕೆ ವಿಧಾನಸೌಧ ನಿರ್ಮಾಣದ ನಂತರ ಉಳಿದ ಅಲ್ಲಿನ ಶಿಲೆಗಳನ್ನು ತಂದು ನಿರ್ಮಾಣ ಮಾಡಲಾಗಿದ್ದು ಒಂದು ವಿಶೇಷವಾಗಿದೆ. ಕೆ.ಹನುಮಂತಯ್ಯನವರು ನಿಧನ ಹೊಂದಿದ ನಂತರ ಅವರ ಭೌತಿಕ ದೇಹವನ್ನು ಇಲ್ಲಿಯೇ ಸಮಾಧಿ ಮಾಡಲಾಗಿದೆ. ದಿವಾನ್ ಸರ್.ಮಿರ್ಜಾ ಇಸ್ಮಾಯಿಲ್‌ರವರು ಬೆಂಗಳೂರಿಗೆ ಹೋಗುವಾಗ ಈ ಸ್ಥಳಕ್ಕೆ ಭೇಟಿ ನೀಡುತ್ತಿದ್ದರು ಎಂದು, ಒಂದು ಬಾರಿ ಈ ಪ್ರಾಂತ್ಯದಲ್ಲಿ ಹುಲಿ ಮುತ್ತಿಗೆ ಅರಣ್ಯ ಪ್ರದೇಶದಲ್ಲಿ ಹುಲಿಗಳ ಉಪಟಳ ಹೆಚ್ಚಾಗಿ ಅಕ್ಕಪಕ್ಕದ ಗ್ರಾಮದ ಜನರಿಗೆ ತುಂಬಾ ತೊಂದರೆಯಾಗಿ ಅವರ ನಿಯಂತ್ರಣಕ್ಕೆ ಪರಿಹಾರ ಮಾರ್ಗ ಕಾಣದೆ ಮಿರ್ಜಾರವರು ಈ ದೇವಾಲಯಕ್ಕೆ ಬಂದು ಪ್ರಾರ್ಥನೆ ಸಲ್ಲಿಸಿದ ನಂತರ ಈ ಉಪದ್ರವ ಕಡಿಮೆಯಾದ್ದರಿಂದ ಮಿರ್ಜಾರವರು ಹರಕೆಯ ರೂಪದಲ್ಲಿ ಎಂದು ಬೆಳ್ಳಿಯ ನೇತ್ರವನ್ನು ಸ್ವಾಮಿಗೆ ಅರ್ಪಿಸಿದರಂತೆ. ಹೀಗೆ ಐತಿಹಾಸಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ತುಂಬಾ ಮಹತ್ವ ಪಡೆದ ಸ್ಥಳವಾಗಿದೆ.[27]

5.2 ಜನಪದ ಕಥೆಗಳಲ್ಲಿ ಸ್ಥಳನಾಮಗಳು :

ಕಥನ ಕಲೆಯು ಮಾನವನ ಸಹಜ ಪ್ರವೃತ್ತಿಗಳಲ್ಲಿ ಒಂದು. ಹೇಳುವ ಅಥವಾ ಕೇಳುವ ಕಥೆ ವಾಸ್ತವಿಕ ಘಟನೆಯನ್ನಾಧರಿತವಿರಲಿ, ಸುಳ್ಳಿನ ಕಂತೆಯೇ ಆಗಿರಲಿ ಅಥವಾ ಕಟ್ಟುಕತೆಯೇ ಆಗಿರಲಿ ಜನರು ತುಂಬಾ ಆಸಕ್ತಿಯನ್ನು ವಹಿಸುತ್ತಾರೆ. ಕಥೆಯಲ್ಲಿ ಕಲ್ಪನೆಯು ಮಡುಗಟ್ಟಿರುವುದರಿಂದ ಕಲ್ಪನಾ ಲೋಕದ ವಿಚಾರ ತುಂಬಾ ಹಿತಕಾರಿಯಾಗಿರುತ್ತದೆ. ಅವುಗಳನ್ನು ಕೇಳುವುದರಿಂದ ಮನರಂಜನೆಯ ಜೊತೆಗೆ ಜ್ಞಾನಾರ್ಜನೆಯೂ, ಸಾಹಸ ಪ್ರವೃತ್ತಿಯು, ಧರ್ಮಬುದ್ಧಿಯೂ ಒದಗಬಹುದು. "ಒಂದು ರೀತಿಯಲ್ಲಿ ಕಥೆ ಪ್ರಾಚೀನ ಮಾನವನ ಜ್ಞಾನ ಸಂಗ್ರಹಾಲಯವೂ ಅಹುದು, ಸಾಂಸ್ಕೃತಿಕ ವಸ್ತು ಸಂಗ್ರಹಾಲಯವೂ ಅಹುದು"[28] ಸಾಂಸ್ಕೃತಿಕ ವಾಹಕಗಳಾದ ಸ್ಥಳನಾಮಗಳು ಕೂಡ ಸಾಂಸ್ಕೃತಿಕ ವಸ್ತು ಸಂಗ್ರಹಾಲಯದಲ್ಲಿರುವ ಒಂದು ವಸ್ತು.

ಜನಪದ ಕಥೆಗಳ ಸಂಖ್ಯೆ ಅಪರಿಮಿತವಾಗಿವೆ. ಅವುಗಳ ರೂಪ ಸ್ವರೂಪದಲ್ಲಿ ಸಾಕಷ್ಟು ವೈವಿಧ್ಯತೆ ಇದೆ. ಹೇಳುಗರ ಹಾಗೂ ಕೇಳುಗರ ಮನೋಧರ್ಮ, ಸಂಸ್ಕೃತಿಗೆ ತಕ್ಕಂತೆ ಅವುಗಳ ರೂಪ ಬದಲಾಗುತ್ತದೆ. ಕೆಲವು ಸಂಸ್ಕೃತಿಗಳಲ್ಲಿ ರಮ್ಯಕಥೆ, ನೀತಿಕಥೆ, ಪ್ರಾಣಿಕಥೆ, ಹಾಸ್ಯಕಥೆ, ಸೂತ್ರಕಥೆ ಮೊದಲಾದ ವೈವಿಧ್ಯತೆ ಕಂಡು ಬಂದರೂ, ಕಥೆ ಹೇಳುವ ಜನರು ಕಥೆಯಲ್ಲಿನ ಘಟನೆಗಳನ್ನು ವಿವರಿಸುತ್ತಾ ಆ ಘಟನೆಗೆ ಪೂರಕವಾಗಿ ತನ್ನ ಸುತ್ತ ಮುತ್ತಲಿನ ಅಥವಾ ತನ್ನ ಪ್ರಜ್ಞಾಪ್ರಪಂಚಕ್ಕೆ ನಿಲುಕುವ ಸ್ಥಳನಾಮಗಳನ್ನು ಹೇಳುತ್ತಾರೆ. ಅವುಗಳು ಸಾಮಾನ್ಯವಾಗಿ ಪ್ರಸಿದ್ಧ ಊರುಗಳೇ ಆಗಿರುವುದರಲ್ಲಿ ಅನುಮಾನವಿಲ್ಲ.

ಕಥೆಗಳು ಪ್ರಾಚೀನ ಕಾಲದ ಉಳಿಕೆಗಳು. ಸಾಂಸ್ಕೃತಿಕ ಚರಿತ್ರೆಯ ಬಹಳ ಕೆಳಗಿನ ಹಂತದಲ್ಲಿದ್ದ ಮಾನವನ ಬದುಕಿನ ನಂಬಿಕೆ, ಆಚರಣೆ, ಪರಿಕಲ್ಪನೆಗಳೆಲ್ಲವೂ ಕಥೆಯಲ್ಲಿ ಉಳಿದುಕೊಂಡು ಬಂದಿದ್ದು, ಪುನರಾವರ್ತನೆಯ ಮೂಲಕ ಪರಂಪರೆಯ ಉಳಿಯುವಿಕೆಗೆ, ನೆನೆಯುವಿಕೆಗೆ ಕಾರಣವಾಗುತ್ತವೆ. ಕಥೆಯ ಆಧಾರದಿಂದಲೂ ಕೆಲವೊಮ್ಮೆ ಸ್ಥಳನಾಮಗಳ ನಿಷ್ಪತ್ತಿಯನ್ನು ವಿವರಿಸಬೇಕಾಗಬಹುದು. ಇದು ಎಲ್ಲಾ ಸಂದರ್ಭಗಳಲ್ಲಿಯೂ ಕರಾರುವಕ್ಕಾಗಿರುತ್ತವೆ ಎಂದು ಹೇಳಲಿಕ್ಕೆ ಬಾರದಿದ್ದರೂ ಅದು ಕೂಡ ನಿಷ್ಪತ್ತಿ ಕುರಿತಂತೆ ನಡೆದ ಅಧ್ಯಯನವಾಗದೇ ಇರದು.

ನಮ್ಮ ಜನಪದರು ಸ್ಥಳನಾಮಗಳ ಬಗ್ಗೆ ವಿಶೇಷ ಗಮನ ಕೊಟ್ಟಿರುತ್ತಾರೆ. ಸ್ಥಳನಾಮಗಳು ಸಮೂಹಕ್ಕೆ ಸೇರಿದವುದಳಾದರೂ, ನಮ್ಮ ಜನಪದರು ಸ್ಥಳನಾಮಗಳ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟಿರುತ್ತಾರೆ. ಕಥೆಯನ್ನು ಹೇಳಲು ಪ್ರಾರಂಭಿಸಿದಾಗ ಒಂದು ಊರಿನಲ್ಲಿ ಒಬ್ಬರಾಜ ಇದ್ನಂತೆ ಅಥವಾ ಒಂದಾನೊಂದು ಕಾಲದಲ್ಲಿ ಒಬ್ಬ ದೊರೆ. ಅವನಿಗೆ ಮಕ್ಕಳಿರಲಿಲ್ಲ ಎಂಬ ರೀತಿಯಲ್ಲಿ ಸಾಗಿದರೆ ಮತ್ತೆ ಕೆಲವು ಕಥೆಗಳನ್ನು ವ್ಯಕ್ತಿಗಳ ಮತ್ತು ಸ್ಥಳನಾಮಗಳ ಹೆಸರಿನಿಂದ ಆರಂಭಗೊಳಿಸುತ್ತಾರೆ. ಉದಾ : ಚಂದ್ರಾವತಿಪಟ್ಟಣ ಚಂದ್ರಶೇಖರಾಯ ದೊರೆ.

"ಸ್ಥಳನಾಮದ ಬಗ್ಗೆ ಆಯಾ ಊರಿನ ಜನ ಅನೇಕ ಕಥೆಗಳನ್ನು ಕಟ್ಟಿ ಅದರ ರಹಸ್ಯವನ್ನು ತಾವು ತಿಳಿದಿದ್ದೇವೆ ಎಂದು ಭಾವಿಸುತ್ತಾರೆ. ಈ ಕಟ್ಟುಕಥೆಗಳು ಬಹುತೇಕ ಕಲ್ಪಿತವಾಗಿರುತ್ತವೆಯಾದರೂ ಅವು ಆ ಜನ ತಮ್ಮ ಊರಿನ ಹೆಸರಿನ ಬಗ್ಗೆ ತೋರಿದ ಆಸಕ್ತಿಯ ಸಂಕೇತವಾಗಿರುತ್ತವೆ."[29] ಅಲ್ಲದೇ ಊರುಗಳ ಹೆಸರಿಗೆ ಅನೇಕ ಮಾಂತ್ರಿಕ ಶಕ್ತಿಗಳು ಇರುವುದರಿಂದ ತಮ್ಮ ಊರಿಗೆ ದೆವ್ವ, ಪಿಶಾಚಿ, ಭಯಂಕರ ರೋಗರುಜಿನಗಳು ಸಂಭವಿಸಿದಾಗ, ಆ ದುಷ್ಟ ಶಕ್ತಿಗಳಿಂದ ಆಶ್ಚರ್ಯಕರ ರೀತಿಯಲ್ಲಿ ನಿವಾರಣೆಯಾಗುವ ಘಟನೆಗಳನ್ನು ಬಾಯಿಂದ ಬಾಯಿಗೆ ಹರಡುವುದರ ಮೂಲಕ ಕಥೆಯು ನಿರಂತರವಾಗಿ ಮೌಖಿಕ ಪರಂಪರೆಯಲ್ಲಿ ಉಳಿಯುವಂತೆ ಮಾಡುತ್ತಾರೆ.

ಸಾಮಾನ್ಯವಾಗಿ ಜನಪದ ಕಥೆಗಳನ್ನು ಹೇಳುವವರು ಆರಂಭವನ್ನು ತಮ್ಮ ವೈಯಕ್ತಿಕ ಪರಿಸರಕ್ಕೆ ಹೊಂದಿಸಿಕೊಂಡು ಹೇಳುವುದನ್ನು ನೋಡುತ್ತೇವೆ. ಊರು, ರಾಜ, ರಾಣಿ ಮುಂತಾದ ಹೆಸರುಗಳು ಸಾರ್ವತ್ರಿಕವಾಗಿ ಬಳಕೆಯಾಗುವುದರಿಂದ ಅವುಗಳ ಬದಲು ಕಥಾ ವಕ್ತೃ ತನ್ನ ಸಮಕಾಲೀನರಾದವರನ್ನೋ ಅಥವಾ ತಾನು ವಾಸಿಸುತ್ತಿರುವ ನೆಲೆಯನ್ನೋ ಬಳಸಿಕೊಳ್ಳುವುದು ವಾಡಿಕೆ. ಸ್ಥಳವನ್ನೋ ಅಥವಾ ರಾಜ, ರಾಣಿಯರ ಹೆಸರನ್ನು ಬದಲು ಮಾಡಿ ಬಳಸಿಕೊಂಡರೂ ಕಥೆಯ ಮೂಲ ರಚನೆಗೆ ಯಾವುದೇ ಧಕ್ಕೆಯಾಗುವುದಿಲ್ಲ. ಆ ಮೂಲಕ ಕಥೆಗಳಲ್ಲಿ ಸ್ಥಳನಾಮಗಳು ದಾಖಲುಗೊಳ್ಳುವುದನ್ನು ಗುರುತಿಸಬಹುದು. ಆದರೆ ಅವೆಲ್ಲವೂ ಆ ಭೌಗೋಳಿಕ ಪರಿಸರದ ಪ್ರಾದೇಶಿಕತೆಯನ್ನು ಸೂಚಿಸುವುದನ್ನು ಕಾಣಬಹುದು. ಇದರಿಂದ ಸ್ಥಳನಾಮಗಳ ಮೂಲ ನಿಷ್ಪತ್ತಿಯ ಅಂಶಗಳನ್ನು ಪತ್ತೆ ಹಚ್ಚಲು ಕೂಡ ಇವು ಪ್ರೇರಣೆ ಒದಗಿಸುತ್ತವೆ ಮತ್ತು ಭಾಷೆಯ ಅಧ್ಯಯನಕ್ಕೂ ಪ್ರೇರೇಪಿಸುವುದನ್ನು ಕಾಣಲು ಸಾಧ್ಯ. ಈ ದೃಷ್ಟಿಯಿಂದ ಸ್ಥಳನಾಮಾಧ್ಯಯನದಲ್ಲಿ ಜನಪದ ಕಥೆಗಳಿಗೆ ತನ್ನದೇ ಆದ ಮಹತ್ವವಿರುವುದನ್ನು ಕಾಣಬಹುದು.

ಹುಡುಗನ ಮದುವೆ[30]

ಒಂದುಡುಗುನ್ಗೆ ಲಗ್ನ ಮಾಡ್ಬೇಕು ಅಂತ ಕೇಳ್ದೆ. ಉಡುಗುನ್ಗೆ ಉಡುಗಿ ಇಲ್ದೆ ಎಂಗೆ ಲಗ್ನ ಮಾಡೋದು ಅಂದ್ರು. ಉಡುಗಾ ಉಟ್ಟುದ್ ವಿಚಾರ ಹೇಳ್ತೀನಿ ಕೇಳಿ. ಉಡುಗಾ ಉಟ್ಟುದ್ **ವಡೇಗಾಲ,** ಬೆಳೆದದ್ದು **ಬೆಳಕೋಡಿ, ವಡಕೆ ದೊಡ್ಡೀಲಿ** ವಡದಾರ ಹಾಕ್ಕೊಂಡು, **ಸೆಟ್ಟಳ್ಳೀಲಿ** ಶರಟಾಕ್ಕೊಂಡು, **ತ್ವಾಟಳ್ಳೀಲಿ** ಕೋಟಾಕೊಂಡು, **ಕಚ್ಚನಳ್ಳೀಗ್** ಬಂದು ಕಚ್ಚೆ ಹಾಕ್ಕೊಂಡು **ದಾಸನ್ದೊಡ್ಡಿ** ತನಕ ಹೋಗಿ ದ್ವಾಸೆ ಆಕುಸ್ಕೊಂಡು, **ಚೊಟ್ನಳ್ಳೀಲಿ** ಚೊಟ್ನೆ ಆಕುಸ್ಕೊಂಡು, **ಬಾಣ ಸಮುದ್ರದ್** ತಾವು ಬಾಯ್ಗಾಕೊಂಡು, **ಕಡುಬೂರ್** ತಾವು ಕೈ ತೊಳಕೊಂಡು, ಬಂದೆ ನೋಡಿ.

ಅಂಗರಾಪುರುಕ್ಕೋಗಿ ಉಂಗ್ರಾ ಅಕ್ಕೊಂಡು, **ಚತ್ರಕ್ಕೋಗಿ** ಚೆತ್ರಿ ತಕ್ಕೊಂಡು ಒಂಟೇ ನೋಡಿ. **ದೊಡ್ಡಾಬಳ್ಳಾಪುರದ್ಕಡಿಂದ** ಒಂದುಡ್ಗಿ ಆದಿ ಕೇಳ್ಕೊಂಡು ಬರ್ತಿತ್ತು. ಪಟ್ಟಂತ ನೋಡ್ದಿ ಚಟ್ಟಂತ್ ನಿಂತ್ಕೊತ್ತು. ನಿನ್ನೆಸ್ರೇನೆ ಉಡ್ಗಿ ಅಂದೆ. ಅಪ್ಪ್ರಲ್ಲಿ ಎಚ್ಚುಸ್ಕೊಂಡು ಚಂಗಾಬಿಂಗಿ ಅಂತು. ನಿನ್ನ್ ಎಸ್ರೇನೂ ಉಡ್ಗ ಅಂದ್ಲು. ಅಪ್ಪ್ರಲ್ಲಿ ನಾನೆಚ್ರುಸ್ಕೊಂಡು ಗಂಡಾಗುಂಡಿ ಅಂದಿ. ಗಂಡಾಗುಂಡಿಗು ಚಂಗಾಬಿಂಗಿಗು ಸರೋಯ್ತದೆ. ಅದ್ಕಂದು **ಸಾತ್ನೂರೋರು** ಸಾಸ್ತ್ರಕೋದ್ರು **ಬೊಪ್ಪಾಪುರದೋರು** ಒಪ್ಪಂದಕ್ಕೋದ್ರ. **ಬ್ಯಾಡ್ರಳ್ಳಿಗೋಗಿ** ಬ್ಯಾಳೆಮೂಟೆ ಅಕೊಂಡು, **ಉಣಸೂರ್ಗೋಗಿ** ಉಣ್ಣೇ ಹಣ್ಣಾಕ್ಕೊಂಡು, ಉಪ್ಪುನ್ಗಟ್ಕೋಗಿ ಉಪ್ಪುನ್ಮೂಟೆ ಅಕ್ಕೊಂಡು, ಅಪ್ಪ್ರಾಲ್ಲಿ ನಾನು **ಅಕ್ಕೂರ್ಗೋಗಿ** ಅಕ್ಕಿ ಮೂಟೆ ಆಕ್ಕೊಂಡು, **ಬ್ಯಾಡ್ರಳ್ಳೀಗೋಗಿ** ಬ್ಯಾಳೆಮೂಟೆ ಆಕ್ಕೊಂಡು, **ಸಾನ್ಬೋಗನಹಳ್ಳಿ**ಗೋಗಿ ಮೆಣಸಿನಕಾಯಿನ್ ಪುಡಿ ಆಕ್ಕೊಂಡು, ಬಂದೆ ನೋಡಿ.

ಅಪ್ಪ್ರಲ್ಲಿ ಉಡ್ಗಿ **ಸಿವ್ನಳ್ಳಿಗೋಗಿ** ಸೀರೆ ಆಕ್ಕಂಡು, **ರಾಂಪುರ್ಕೋಗಿ** ರವ್ಕೆ ಆಕ್ಕೊಂಡು, **ಆಗ್ಲಳ್ಳೀಗೋಗಿ** ಅರುಷ್ಣ ಆಕ್ಕೊಂಡು, **ಯಡಮಾರ್ನಳ್ಳೀಲಿ** ಯಣ್ಣೆ ಈಸ್ಕೊಂಡು, **ಬಣಚನಳ್ಳೀಲಿ** ಬಾಚಣ್ಗೆ ತಕೊಂಡು, **ಕೆರಕೋಡ್** ತಾವು ಕರಾಪ್ ತಕಬತ್ತು ನೋಡಿ.

ಅಪ್ಪ್ರಲ್ಲಿ **ಮಂಚನಳ್ಳಿಯೋರು** ಮಿಂಚು ಮಾಡ್ಸುದ್ರು. **ತಳಕಾಡ್ನೋರು** ತಾಳಿ ಮಾಡ್ಸುದ್ರು. **ವಡೇರಹಳ್ಳಿಯೋರು** ವಾಲೆ ಮಾಡ್ಸೂದ್ರು. **ದೊಡ್ಡೇಗೌಡುನ್ದೊಡ್ಡಿಯಿಂದ** ಡೋಲ್ನೋರು ಬಂದ್ರು. **ಪಾಲಳ್ಳಿಯಿಂದ** ಪದ್ದೋರ್ ಬಂದ್ರು. **ವಾಚ್ಮನ್ದೊಡ್ಡಿಯಿಂದ** ವಾದ್ದೆದೋರ್ ಬಂದ್ರು. **ಇಲ್ವಾಲ್ದೋರ್**ಗಿಸ್ತ್ರೇಗೇಳಿ **ತಗಡೇಗೌಡುನ್ ದೊಡ್ಡಿಯೋರು** ತಂದೇಬುಟ್ಟು ನೋಡಿ.

ಅಪ್ಪ್ರಲ್ಲಿ **ಎಲೇದಳ್ಳಿ**ಯೋರು ಎಲೆ ಆಕಿದ್ರು, **ನೀಲಕಂಟನಹಳ್ಳಿಯೋರು** ನೀರಾಕುದ್ರು. **ಹನ ಕೆರೆಯೋರು** ಅನ್ನ ಆಕದ್ರು, **ಸಾತ್ನೋರೋರು** ಸಾರು ಬುಟ್ರು. **ಪಾಳ್ಳೇದೋರ್** ಪಾಯ್ಸಬುಟ್ರು.

ಏಳ್ಗಳ್ಳಿಯೋರು ಬಂದು ಏಳ್ಸ್‌ಬುಟ್ರು. **ವಳಗಾರಹಳ್ಳಿಯೋರು** ಬಂದು ಓಡುಸ್ಬುಟ್ರು. **ತಾರೆಪುರದೋರು** ಬಂದು ಕಟ್ಬಣ್ಣ ತಾಳಿ ಅಂದ್ರು. ಕಟ್ಬುಟ್ಟೆ ನೋಡಿ.

ಮುಡುಕ್ತೊರೆ ಮೂಗ್ತೂರು ತೇರಾಯ್ತದೆ ಅಂದ್ರು. ಎಣ್ಣು ಗಂಡು ಅಣ್ಣು ಜವ್ನ ಎಸೀಬೇಕು ಅಂದ್ರು. ಎದ್ದೋರೆದ್ದಂಗೆ ಒಂಟೊ ನೋಡಿ. **ದೊಡ್ಡಪುರುತ್ತಕೋಗೋತ್ಗೆ** ಎಣ್ಣು ದೊಡ್ಡಾಯ್ತು. **ಸೋಮ್ನಳ್ಳಿ** ತಕೋಗೊತ್ಗೆ ಸೋಬನ್ಕೆ ಸೂರೂ ಮಾಡುದ್ರು. ಜೋಬೇಲಿ ಮೂರ್ಕಾಸಿಲ್ಲ ನೋಡಿ. **ಆಲ್ಲೂರೋರು** ಆಸೇಮಣೆತಂದ್ರು, **ವಸ್ಕೂರೋರು** ವಸ್ಕೆ ಆಕ್ಬುಟ್ರು. **ಮಳವಳ್ಗೀಲಿ** ಮನುಗ್ದೊ ಸಂತೆ ಗಲಾಟೆ ನಿದ್ದೆ ಬರ್ನಿಲ್ಲ ನೋಡಿ. ಇದ್ದೋರೆದ್ದಂಗೆ ಒಂಟೊನೋಡಿ, **ಮುಟ್ನಳ್ಳಿ** ತಕೋಗುತ್ಗೆ ಮುಟ್ ನಿಂತ್ಕೊತ್ತು. **ಬನ್ನೂರ್ತಕೋಗೋತ್ಗೆ** ಎಣ್ ಬಿಮನ್ಸೆ ಆಯ್ತು ನೋಡಿ, **ವರಂದ್ಯಾಸ್ನಳ್ಳಿ** ತಕೋಗುತ್ಗೆ ಎರ್ಗೆ ಆಯ್ತು.

ಎಗ್ಗೋಡಿಯೋರು ಎಣ್ಣು ಅಂತ **ಗಗ್ಗೋಡಿಯೋರು** ಗಂಡು ಅಂತ ಮಂಡಿ ಉದ್ದ ನ್ಯಾಯ ಬಿಳ್ತು ನೋಡಿ. ಪರಿಕ್ಸೆ ಮಾಡ್‌ನೋಡೋದ್ರಲ್ಲಿ ಗಂಡ್ಮಗ. ಮಗೀಗೆ ನಾಮ್ಕರ್ಣ ಮಾಡ್ಬೇಕೂಂತ **ರಾಗಿಪುರದ** ರಾಮಯ್ಯನ ಕರಸಿ ಮಗೀಗೆ ನಾಮ್ಕರ್ಣ ಮಾಡ್ಸಿ **ಹನಕೆರೆ** ಆರುವಯ್ಯನ ಇಡ್ಸು ಅಂಗಾಮಿ ಜಮೀನು ಆರೆಕ್ರೆ ಬರ್ಸಿ **ಪಾಲಳ್ಳಿಯೋರು** ಪಟ್ಟೆ ಮಾಡುದ್ರು. **ಉಯ್ಯಂಬಳ್ಳಿಯೋರು** ಬಂದು ಉತ್ಕೋಉಟ್ರು. **ತೆಂಕ್ಲೋರು** ತೆವ್ರಿ ಆಕುದ್ರು, **ನೆಟ್ಕಲ್ಲೋರು** ನೆಟ್ಬುಟ್ರು, **ಕರ್ಲಳ್ಳಿಯೋರು** ಕಳೆಕಿತ್ಬುಟ್ರು, **ಕೂಡ್ಲೂರೋರು** ಬಂದು ಕೂದ್ಬುಟ್ರು. **ವರಗಾರಳ್ಳಿಯೋರು** ಬಂದು ವರೆ ಕಟ್ಬುಟ್ರು. **ಬಡಗ್ಲೋರು** ಬಂದು ಬಿಡುದ್ಬುಟ್ರು. **ಅಲಸಳ್ಳಿಯೋರು** ಆಳುದ್ಬುಟ್ರು. **ತಮ್ಮೂಕ್ರ್ನೋರು** ಬಂದು ತುಂಬ್ಕೋಂಡೊಂಟೋದ್ರ. **ಕಿರುಗಾಲ್ದೋರು** ಕಿತ್ತಾಟುಕ್ಬಂದ್ರು. **ಸೂರ್ನಳ್ಳಿಯೋರು** ಸುತ್ಕೊಂಡು **ಸಂಬೇಗೋಡುನ್ ದೊಡ್ಡಿಯೋರು** ಸಮ್ಮಾದ್ಸೀಗ್ಬಂದ್ರು ನೋಡಿ.

5.3 ಗಾದೆಗಳಲ್ಲಿ ಸ್ಥಳನಾಮಗಳು :

'ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ' ಎಂಬ ಲೋಕೋಕ್ತಿಯನ್ನು ಗಮನಿಸಿದರೆ, ಒಂದು ದೃಷ್ಟಿಯಲ್ಲಿ ವೇದಕ್ಕಿಂತಲೂ ಶ್ರೇಷ್ಠವಾದುದು, ಮಿಗಿಲಾದುದು ಗಾದೆ ಎಂಬುದು ನಮ್ಮ ಜನಪದರ ಅಭಿಪ್ರಾಯವಾಗಿದೆ. ವೇದ ಕೆಲವರ ಸ್ವತ್ತಾದರೆ, ಗಾದೆಗಳು ಇಡೀ ಸಮಾಜದವರ ಸ್ವತ್ತು. "ಒಂದು ರಾಷ್ಟ್ರದ ಪ್ರತಿಭೆ, ಬುದ್ಧಿ ಚಮತ್ಕಾರ ಮತ್ತು ಸತ್ವಗಳನ್ನು ಅದರ ಗಾದೆಗಳಲ್ಲಿ ಕಾಣಬಹುದು ಎಂದು ಬೇಕನ್ ಹೇಳಿದ ಮಾತು ಉತ್ಪ್ರೇಕ್ಷೆಯಲ್ಲ 'ಜನತೆ ಹೇಗೋ ಗಾದೆ ಹಾಗೆ' ಎನ್ನುತ್ತದೆ ಒಂದು ವಿದೇಶಿಗಾದೆ"[31].

ಗಾದೆಗಳು ಹಲವರ ಅನುಭವಗಳು. ಒಂದೊಂದು ಅನುಭವಕ್ಕೆ ಒಂದೊಂದು ಗಾದೆಯಿದೆ. ಹೀಗೆ ಗಾದೆಗಳ ಸಂಗ್ರಹವೊಂದು ಜೀವನದ ಅನುಭವಗಳ ಕೋಶವೇ ಆಗಿರುತ್ತದೆ. ಗಾದೆಗಳು ಮಾನವನ ವೈಚಾರಿಕ, ಭಾವನಾತ್ಮಕ ನೆಲೆಯಲ್ಲಿ ರೂಪುಗೊಂಡು ಜೀವನಾನುಭವದ ಮೂಸೆಯಲ್ಲಿ ಹೊರಬಂದ ಗಟ್ಟಿಗಳಾಗಿವೆ. ಒಂದೊಂದು ಗಾದೆಯೂ ಒಂದೊಂದು ವಿಶಿಷ್ಟವಾದ ಅನುಭವ ಮತ್ತು ಬಳಕೆಯ ದೃಷ್ಟಿಯಲ್ಲಿ ಸಮಷ್ಟಿಯಾಗಿವೆ. ಆದ್ದರಿಂದ ಪ್ರತಿಯೊಬ್ಬ ಜನಸಾಮಾನ್ಯರು ತನ್ನದೆಂಬಂತೆ ಗಾದೆಯನ್ನು ಬಳಸುತ್ತಿದ್ದಾರೆ. ಅದಕ್ಕಾಗಿ ಗಾದೆ ಹಲವರ ಸ್ವತ್ತು ಎನಿಸುತ್ತದೆ. ಗಾದೆಗಳ ರಚನೆಯ ಹಿಂದೆ ಒಂದು ಅನುಭವ ಇದ್ದೇ ಇರುತ್ತದೆ. ಈ ಅನುಭವವು ಜನ ಸಾಮಾನ್ಯರ ಪ್ರಸ್ತುತ ಜೀವನಕ್ಕೆ ಸಂಬಂಧಿಸಿದ ವಸ್ತುವಾಗುಳ್ಳವುಗಳಾಗಿರಬಹುದು, ಬದುಕಿನಲ್ಲಿ ಅಳವಡಿಸಿಕೊಂಡ ರೂಢಿ, ಸಂಪ್ರದಾಯ, ಆಚರಣೆ, ನಂಬಿಕೆ, ಆಚಾರವಿಚಾರ, ವಿಧಿನಿಷೇಧ ಮುಂತಾದವುಗಳು ಗಾದೆಗಳಾಗಿ ರೂಪವನ್ನು ಪಡೆಯುತ್ತವೆ. ಅಲ್ಲದೇ ಇತಿಹಾಸ, ಪುರಾಣ, ಐತಿಹ್ಯ ಮುಂತಾದವುಗಳಲ್ಲಿ ಕಾಣುವ ಒಂದು ದೃಷ್ಟಾಂತ ಘಟನೆಯಾಗಿರಬಹುದು. ನಿದರ್ಶನಕ್ಕಾಗಿ ಎಲ್ಲಿಂದಲಾದರೂ ನೆರವು ಪಡೆದಿರಲಿ ಅದನ್ನು ಸಂಕೇತಿಸಿಕೊಂಡು, ಪರಿವರ್ತಿಸಿಕೊಂಡು ಅದರಲ್ಲಿ ಜೀವನಾನುಭವವನ್ನು ಬೆರೆಸಿ, ಧ್ವನಿಸುವ ವಿಶಿಷ್ಟ ಪ್ರಕಾರವಾಗಿ ಗಾದೆಯು ಏರ್ಪಡುವುದು. ಗಾದೆಯು ನಿಜಕ್ಕೂ ಒಂದು ಅದ್ಭುತ ಶಬ್ದ ಚಮತ್ಕಾರವಾಗಿ ಮನುಷ್ಯನ ಮೇಲೆ ಪರಿಣಾಮ ಬೀರುವುದು. ಆಡು ಮುಟ್ಟದ ಸೊಪ್ಪಿಲ್ಲ; ಗಾದೆ ಮುಟ್ಟದ ವಸ್ತುವಿಲ್ಲ ಎಂಬಂತೆ ಗಾದೆಯ ವಸ್ತು ಮತ್ತು ವಿಷಯ ವ್ಯಾಪಕತೆ ಬಹು ಹಿರಿದಾದದ್ದು. ಮಾನವನ ಗತಕಾಲದ ಜೀವನವನ್ನು ತಿಳಿಸುವುದರ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ವೃತ್ತಿ ಸಂಬಂಧಿ, ಐತಿಹಾಸಿಕ, ಪೌರಾಣಿಕ, ಭೌಗೋಳಿಕ ಹಾಗೂ ಸ್ಥಳ ಸಂಬಂಧಿಯಾದ ಅನೇಕ ಸಾಮಾಗ್ರಿಯನ್ನು ಬಳಸಿಕೊಂಡಿದೆ.

ಗಾದೆಯು ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಪೀಳಿಗೆಯಿಂದ ಪೀಳಿಗೆಗೆ ಬದುಕಿನ ರೀತಿ ನೀತಿ ಬದಲಾದಂತೆ, ತಲೆಮಾರುಗಳು ಉರುಳಿದಂತೆ, ನಾಗರಿಕತೆ ಬೆಳೆದಂತೆ, ನಮ್ಮ ಜೀವನ ಸಂಪರ್ಕ ಕಳೆದುಕೊಂಡು, ಸವಕಲು ನಾಣ್ಯಗಳಂತೆ ಚಲಾವಣೆಯಲ್ಲಿ ತಪ್ಪಿ ಹೋದರೂ ಅನೇಕ ರೂಪಾಂತರಗಳನ್ನು ಪಡೆದು, ಬದಲಾದ ಹೊಸ ಜೀವನಕ್ಕೆ ಹೊಂದಿಕೊಂಡು, ಪ್ರತಿನಿಧಿಸುವ ಗಾದೆಗಳು ಹುಟ್ಟಿಕೊಳ್ಳುತ್ತವೆ. ಹೀಗೆ ಗಾದೆಗಳು ಬದಲಾವಣೆಗೊಳಗಾಗುವ ಎಲ್ಲ ಪರಿಸ್ಥಿತಿಗೂ ಹೊಂದಿಕೊಂಡು ಆಯಾಯ ಕಾಲದ ಜೀವಂತ

ಅನುಭವವನ್ನು ವಸ್ತುವನ್ನಾಗಿಸಿಕೊಂಡು ಚಿರಂಜೀವಿಯಾಗಿ ನಿರಂತರವಾಗಿರುತ್ತವೆ. ಹೀಗಾಗಿ ಸಮಕಾಲೀನ ಪ್ರಜ್ಞೆಯು ಗಾದೆಯಲ್ಲಿ ಯಾವಾಗಲೂ ಮಿಡಿಯುತ್ತಿರುತ್ತದೆ.

ಸಮಕಾಲೀನ ಸಂದರ್ಭದ ಜೀವನಾನುಭವವನ್ನು ಹೊಂದಿರುವ ಗಾದೆಗಳ ಮೂಲ ಸಾಮಾಗ್ರಿಗಳನ್ನು ಶೋಧಿಸಲು ಹೊರಟರೆ ಹಲವಾರು ಮಹತ್ವದ ಸಂಗತಿಗಳು ಗೋಚರಿಸುತ್ತವೆ. "ಒಂದು ಜನಾಂಗದ ರೀತಿ ನೀತಿ, ಆಚಾರ ವಿಚಾರಗಳು ಗಾದೆಗಳಲ್ಲಿ ಅಭಿವ್ಯಕ್ತವಾಗಿರುತ್ತವೆ; ಅವು ಬಾಳಿನ ಮೌಲ್ಯಗಳ ದಾಖಲೆಗಳು. ವಿವೇಕ, ಸಾಹಿತ್ಯ ಮತ್ತು ಸಂಸ್ಕೃತಿ ಇವು ಗಾದೆಯ ತ್ರಿಕೋನಗಳೆನ್ನಬಹುದು. ಎಲ್ಲ ಶಾಸ್ತ್ರಗಳಿಗೆ ಸಮೃದ್ಧ ಸಾಮಾಗ್ರಿಯನ್ನೊದಗಿಸಬಲ್ಲ ಆಕರಗಳು ಗಾದೆಗಳು ಎಂದಾಗ ಸ್ಥಳನಾಮ ವಿಜ್ಞಾನಕ್ಕೂ ಮಹತ್ತರವಾದ ಸಾಮಾಗ್ರಿಗಳನ್ನೊದಗಿಸುವುದರಲ್ಲಿ ಸಂಶಯವಿಲ್ಲ".[32]

ನಾಡಿನಲ್ಲಿ ಪ್ರಚಲಿತವಿರುವ ಗಾದೆಗಳಲ್ಲಿ ಅನೇಕ ಸ್ಥಳನಾಮಗಳು ಹಾಗೂ ಸ್ಥಳನಾಮಗಳ ವಾರ್ಗಿಕಗಳ ಬಳಕೆಯಾಗಿರುವುದನ್ನು ಕಾಣಬಹುದು. ಗ್ರಾಮದ ಹೆಸರನ್ನು ಗಾದೆಯಲ್ಲಿ ತರುವ ಮೂಲಕ ಗ್ರಾಮದ ಪ್ರಾಚೀನತೆ, ವಸ್ತು ವೈವಿಧ್ಯತೆ, ವಿಶಿಷ್ಟತೆಯನ್ನು ಪ್ರತಿಬಿಂಬಿಸುತ್ತಿರುತ್ತವೆ. ಗ್ರಾಮದ ಮಹತ್ವದ ಜೊತೆಗೆ ಗ್ರಾಮದಲ್ಲಿನ ವಸ್ತು ವೈವಿಧ್ಯತೆ, ಗ್ರಾಮಸ್ಥರ ಗುಣ ವಿಶೇಷತೆಗಳನ್ನು ತನ್ನೊಡಲಿನಲ್ಲಿ ಇಟ್ಟುಕೊಂಡಿರುತ್ತವೆ. ಹೀಗಾಗಿ ಗಾದೆಗಳಲ್ಲಿರುವ ಸ್ಥಳನಾಮಗಳ ಅಧ್ಯಯನವು ಮುಖ್ಯವೆನಿಸುತ್ತದೆ.

ಗಾದೆಗಳು ಕೇವಲ ಸ್ಥಳನಾಮ ವಾರ್ಗಿಕಗಳನ್ನಲ್ಲದೇ ಹಲವಾರು ವಸತಿ ಮತ್ತು ನಿರ್ವಸತಿ ಗ್ರಾಮನಾಮಗಳನ್ನು ನಿರೂಪಿಸುತ್ತವೆ. ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ದೊರೆಯುವ ಸ್ಥಳನಾಮಗಳನ್ನು ಒಳಗೊಂಡ ಗಾದೆಗಳು ಆಯಾಯ ಸ್ಥಳಗಳ ಮಹತ್ವವನ್ನು, ಸಂಸ್ಕೃತಿಯನ್ನು, ಜನರ ಆಚಾರವಿಚಾರಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಚಿತ್ರಣಗಳನ್ನು ಹೊರಹೊಮ್ಮಿಸುತ್ತವೆ. ಇದರಿಂದ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಗಾದೆಗಳ ಮೂಲಕ ತಿಳಿದುಕೊಳ್ಳಬಹುದು.

1. **ಅಜ್ಜನಹಳ್ಳಿಯೋರ** ಮನೇಲಿ
   ಏನ್ನೆಲ್ಲ ಅಂದ್ರೆ
   ಉಜ್ಜುದು;
   ತಿನ್ನುದು!
   ಉಂಡೆ ಕಟ್ಟುದು

2. **ಅಬ್ಬೂರೇಲಿ** ಆರಂಬ

ಚಿಕ್ಕೇನಳ್ಳೀಲಿ ಮಿಂಡಗಾರ್‍ಕೆ

3. ಅಸಮಾನ್‌ಗಾರ ಹೆಣ್ಣು

ಬಸವಾಪುರದ ಗಂಡು

ಉಳುದ್ ಬುಟ್ಟುಟ್ಟು

ನನ್ನ ಕುಳುಗ್ಬಾ ಅಂದ್ಲು

4. ಆರುಕೆರೆ ಅಕ್ಕಳಿಗಿ

ಮೂರುಕೆರೆ ಮುಕ್ಕಳಿಸಿ

ನನ್ನೊಟ್ಟೆ ಮೇಲಾಗುವುದಿಲ್ಲ ಅಂದ್ಲು

ಮಳೂರಕ್ಕ

5. **ಕೂಡ್ಲೂರ್‍ಕೆರೆ** ತಾವು

ಕುಡ್ಲು ಕಿತ್ಕೊಳುವೊತ್ಗೆ

ದೇಶಳ್ಳಿ ಕೆರೆತಾವ್ಹೋಗಿ

ಮೀಸೆ ತಿರುಗ್ದ

6. **ಚಿಕ್ಕೇನಹಳ್ಳಿ** ತಾವು

ಚೀಲ ಬಿಚ್ಚಿದೋನ್ ಕೆಟ್ಟ

ಗಂಗೋಡಿ ತಾವು

ಹೇತೋನ್ ಕೆಟ್ಟ–6

7. ಡಬ್ಗೆ **ಅಬ್ಬೂರೋರು**

ಹಬ್ಬ ಮಾಡಿ

ಇಬ್ರು ಗೊಂದ್ಮುದ್ದೆ

ಮುರ್‍ದಿಕ್ಕುದ್ರು

8. ಡಟ್‌ಗೆ ಮೂರು ಬ್ಯಾಳೆ ಕಾಳ್ಹಾಕಿ

ಅಬ್ಬೂರ್ ಗುಡ್‌ಗೋದ್ಲು

ಅಗ್ರಾಣಿ ಕಲ್ ತರೊಕೆ

9. ತೀಟೆಗೆ **ತಿಟ್ಟಮಾರನಹಳ್ಳಿ**

ಮಾತ್‌ಗೆ **ಮಂಗಳಾರಪೇಟೆ**

10. **ನಾಗವಾರ್ದ** ನಂಟು ನಂಟಲ್ಲ

ನಳ್ಳಿಬಾಡು ಬಾಡಲ್ಲ

11. ಪಟ್ಲಿ ಪಾಳು

ಹರೂರು ಹಾಳು

ಪಡೆದೋರೆ ಇಲ್ಲ

ಇನ್ನು ಕೊಡದೋರು ಆದಾರೆ?

12. ಪಿಳ್ಳುಟ್ಟು ಪೀಕಲಾಟ

ಅಂಕನಹಳ್ಳೀಲಿ ದೊಂಕಲಾಟ

13. ಮಾತುನ ಮರವೇಲಿ

ಮಳೂರ್ಹೈದ ಕೂಡ್ಲೂರ್ಹೋದ

ಕಾಳೇಗೌಡ ನಾಗವಾರ (ಸಂ), ಅವರ **'ಬೀದಿ ಮಕ್ಕಳು ಬೆಳೆದೊ'** ಕೃತಿಯಲ್ಲಿ ಕೂಡ್ಲೂರು ಸ್ಥಳಕ್ಕೆ ಸಂಬಂಧಿಸಿದ ಗಾದೆಗಳು :

14. ಕೂಡ್ಲೂರೋರ್ಗೆ ಕುಲ ಇಲ್ಲ, ಚಕ್ಕೆರೆಯವರಿಗೆ ಛಲ ಇಲ್ಲ.
15. ಕೂಡ್ಲುರು ಕಿತ್ತು ಹೊಸೂರು ತಿಟ್ಟು ಕಟ್ಟು.
16. ಕೊಂತಿನ ಬಾಯಿಗೆ ಹಿಟ್ಟಾಕಿ ಬಿಟ್ಟು ಕೂಡ್ಲೂರು ಸಂತೆಗೆ ಎಣ್ಣೆಗೆ ಹೋದ್ಲಂತೆ.
17. ಕೂಡ್ಲೂರು ಸಂಪಿಗೆ ಮಾಳೂರು ಮಲ್ಲಿಗೆ.
18. ಕೂಡ್ಲೂರು ಕಾಮನಿಗೂ ಕಾನಕಾನಹಳ್ಳಿ ರಥಿಗೂ ಚೆಂದ.
19. ಕೂಲೂರ್ ತಾವು ಕುಡ್ಲು ಬಿಟ್ಟುಟ್ಟಾ ದೇಶಳ್ಳಿ ತಾವು ಮೀಸೆ ತಿರುಗುತ್ತಿದ್ದರಂತೆ.
20. ಮೈಸೂರು ಮಹಾರಾಜರ ಹೆಂಡ್ತಿ ಕೂಡ್ಲೂರ ಕೆರೆ ಮಣ್ಣು ಬಯಸಿ ಕೊಂಡ್ಲಂತೆ.[33]

5.4 ಒಗಟುಗಳಲ್ಲಿ ಸ್ಥಳನಾಮಗಳು :

ಒಗಟುಗಳು ಗ್ರಾಮೀಣ ಜನತೆಯ ಸೃಷ್ಟಿ. ಇದು ಹಳ್ಳಿಯ ಬದುಕಿನಲ್ಲಿ ಸಾರಿಗೆ ಹಾಕಿದ ಒಗ್ಗರಣೆ. ಒಗಟು ಜೀವನದ ಅನುಭವ ವಲಯವನ್ನೇ ವಸ್ತುವಾಗಿಸಿಕೊಳ್ಳುತ್ತದೆ. ಬುದ್ಧಿಯ ಕಸರತ್ತು ಮತ್ತು ಭಾಷಾ ಚಮತ್ಕಾರ ಇವೆರಡರ ಸಮ್ಮಿಲನದಿಂದ ಒಗಟು ರೂಪುಗೊಳ್ಳುತ್ತದೆ. ಒಗಟಿನ ಭಾಷೆ ಸಾಂಕೇತಿಕ ಮತ್ತು ರಹಸ್ಯಾತ್ಮಕವಾದದ್ದು. ಒಗಟುಗಳೆಲ್ಲಾ ಸವಾಲಿನ ಮತ್ತು ಪ್ರಶ್ನೆಯ ರೂಪದಲ್ಲಿರುತ್ತವೆ. ಪ್ರಶ್ನೆ ಸ್ಪಷ್ಟವಾಗಿರಬಹುದು ಇಲ್ಲವೇ ಗೂಢವಾಗಿರಬಹುದು. ಒಂದು

ವಸ್ತುವಿನ ವರ್ಣನೆ, ಹೆಚ್ಚಳ, ಗುಣಗಾನ; ಬೇರೊಂದರ ಹೋಲಿಕೆ ಕೊಟ್ಟು ಹೇಳುವುದು ಒಗಟುಗಳಲ್ಲಿ ಕಂಡುಬರುವ ಸಾಮಾನ್ಯ ಗುಣಗಳಾಗಿವೆ.

ಒಗಟುಗಳು ಜನಾಂಗ ಒಂದರ ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯಗಳ ಸಂಗಮವಾಗಿದೆ. ಸಾಮಾನ್ಯ ಜನತೆಯ ಬುದ್ಧಿ ವೈಭವ, ಹಾಸ್ಯಪ್ರಿಯತೆ, ಚತುರೋಕ್ತಿ, ವಿಡಂಬನಾ ಸ್ವರೂಪ, ಬೋಧನಾ ಮನೋಧರ್ಮ ಹಾಗೂ ರಚನಾ ಸಾಮರ್ಥ್ಯವನ್ನು ಅತ್ಯಂತ ವರ್ಣರಂಜಿತವಾಗಿ ಚಿತ್ರಿಸಲು ಯತ್ನಿಸುತ್ತವೆ. ಜನಪದರು ಮುಗ್ದರಿರಬಹುದು ಆದರೆ ಲೋಕಾನುಭವದ ಸಾರವನ್ನು ಹೀರಿ ಕೌಶಲ್ಯವನ್ನು ರೂಢಿಸಿಕೊಂಡವರು. ಉತ್ತಮ ಚಾತುರ್ಯ, ಬೌದ್ಧಿಕ ಪ್ರಜ್ಞೆ, ಆಲೋಚನಾಶಕ್ತಿ, ತರ್ಕ ಸಾಮರ್ಥ್ಯ ಅವರಲ್ಲಿ ಅಧಿಕವಾಗಿದೆ ಎಂಬುದಕ್ಕೆ ಒಗಟುಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಜನಪದರು ಮುಗ್ದರೆಂದಾಕ್ಷಣ ಖಂಡಿತವಾಗಿಯೂ ಮಂದ ಬುದ್ಧಿಯವರಲ್ಲ. ಅಕ್ಷರಜ್ಞಾನ ಬಾರದಿರಬಹುದು ನಿಜ; ಆದರೆ ಅನುಭವ ತಜ್ಞರು. ಬದುಕಿನ ಜ್ಞಾನವನ್ನು ಗಳಿಸಿಕೊಂಡ ವಿದ್ಯಾವಂತರು. ಕವಿರಾಜಮಾರ್ಗಕಾರ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಿಮತಿಗಳ್' ಎಂದು ಹೇಳಿರುವುದನ್ನು ಹೀಗೆ ವ್ಯಾಖ್ಯಾನಿಸಬಹುದೇನೋ. ಕುರಿತೋದದರಿಂದಲೇ ಅವರ ಬುದ್ಧಿ ಗ್ರಹಿಕೆಯಲ್ಲಿ ನಾವೀನ್ಯ, ಸ್ವಪ್ರಕಾಶ, ಸ್ವಂತಿಕೆಯಲ್ಲಿ ಜೀವಂತಿಕೆ ಉಳಿಸಲು ಸಾಧ್ಯವಾಗಿದೆ. ಜನಪದರ ಬೌದ್ಧಿಕ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿ ಒಗಟುಗಳಿವೆ.

ಒಗಟುಗಳ ರಚನೆಯಲ್ಲಿ ಜನಪದರ ಸಾದೃಶ್ಯ ದೃಷ್ಟಿಯನ್ನು ಕಾಣಲು ಸಾಧ್ಯ. ಇಲ್ಲಿ ಬಳಕೆಯಾಗುವ ಸಾದೃಶ್ಯ ಕಲ್ಪನೆಗಳೆಲ್ಲವೂ ಪ್ರಕೃತಿಯಲ್ಲಿರುವ ಮೂರ್ತರೂಪಗಳೇ ಆಗಿರುತ್ತವೆ. ಅಂದರೆ ಒಂದು ವಸ್ತು, ವಿಷಯ, ಸ್ಥಳ ಅಥವಾ ಜೀವಿಯ ವಿಶೇಷವಾದ ಬಾಹ್ಯರೂಪ ಲಕ್ಷಣಗಳೆಲ್ಲ ಒಗಟುಗಳ ರಚನೆಯಲ್ಲಿ ಕಾಣಲು ಸಾಧ್ಯ. ಈ ವಿಶಿಷ್ಟ ರೂಪಲಕ್ಷಣಗಳೆಲ್ಲ ಜನಪದರು ತಮ್ಮ ದಿನನಿತ್ಯದ ಬದುಕಿನಲ್ಲಿ ಬಂದಿರುವ ಅನುಭವ ಸಾಮಾಗ್ರಿಗಳಾಗಿರುತ್ತವೆ.

ಒಗಟುಗಳು ಮನುಷ್ಯನ ಸುತ್ತಮುತ್ತಲಿನ ಭೌತಿಕ ಜಗತ್ತಿನ ವಸ್ತುಗಳಿಗೆ ಸಂಬಂಧಿಸಿರುತ್ತವೆ. ಪ್ರಾಕೃತಿಕ ಪರಿಸರದ ನದಿ, ನೀರು, ಬೆಟ್ಟ, ಗುಡ್ಡ, ಪ್ರಾಣಿ, ಸಸ್ಯ ಮೊದಲಾದವುಗಳ ಜೊತೆಗೆ ಜನರು ನೆಲೆಸುವ ನೆಲೆಗಳು, ಆಚಾರವಿಚಾರ, ಕಲೆ, ಸಾಹಿತ್ಯ, ಉಡುಗೆತೊಡುಗೆ, ಊಟೋಪಚಾರ, ತಾವು ಬಳಸುವ ದಿನನಿತ್ಯದ ಪ್ರತಿಯೊಂದು ವಸ್ತುಗಳು ಕೂಡ ಒಗಟುಗಳಲ್ಲಿ ಸ್ಥಾನ ಪಡೆದುಕೊಂಡಿವೆ. ಅಂತೆಯೇ ವಿವಿಧ ವಸ್ತು ವೈವಿಧ್ಯತೆಯ ಆಗರವಾದ ಒಗಟುಗಳಲ್ಲಿ

ಸ್ಥಳನಾಮ ವಾರ್ಗಿಕಗಳು ಮತ್ತು ಸ್ಥಳನಾಮಗಳೂ ಕೂಡ ಸ್ಥಾನ ಪಡೆದುಕೊಂಡಿವೆ. ಸ್ಥಳನಾಮ ವಾರ್ಗಿಕಗಳನ್ನೊಳಗೊಂಡ ಒಗಟುಗಳು ಇಂತಿವೆ :

1. ಊರಿಗೆಲ್ಲ ಒಂದೆ **ಬಾವಿ** – ಬಾಯಿ
2. **ಕೆರೆ**ತುಂಬಾ ಕುರಿಹೆಜ್ಜೆ – ಚುಕ್ಕಿ (ನಕ್ಷತ್ರ)
3. **ಊರೆಲ್ಲ** ಸುತ್ರೂ ಮನೆಗೆ ಮಾತ್ರ ಬರಲ್ಲ – ಚಪ್ಪಲಿ
4. **ಬಾವೀಲಿ** ಬಟ್ಲು – ಚಂದ್ರ
5. **ಕೆರೆ**ಯೊಳಗೊಂದು ಮರಹುಟ್ಟಿ
   ನೀರ್ನು ಕುಡೀತದೆ ಬೇರ್ನು ತಿಂತದೆ – ದೀಪ
6. ಅಕ್ಕ ಅಕ್ಕ **ಬಾವಿ**ನೋಡು
   ಬಾವಿಯೊಳಗೆ ನೀರು ನೋಡು
   ನೀರಿನೊಳಗೆ ಹಗ್ಗ ನೋಡು
   ಹಗ್ಗದೊಳಗೆ ಬೆಳ್ಕು ನೋಡು – ದೀಪ
7. ಒಂದು ಗುಂಡಾಕಾರದ **ಪಟ್ಟಣ**
   ಪಟ್ಟಣಕ್ಕೆ ನೂರು ಬಾಗಿಲು
   ನೂರು ಬಾಗಿಲಿಗೂ ಕದ ಮಾಡಿಲ್ಲ
   ಹಾಗಾದರೆ ಆ **ಪಟ್ಟಣ** ಯಾವುದು? – ಜೇನುಹುಟ್ಟಿ[34]

ಒಗಟುಗಳು ರಚನೆಯಲ್ಲಿ **ಬಾವಿ, ಕೆರೆ, ಊರು, ಪಟ್ಟಣ** ಮೊದಲಾದ ವಾರ್ಗಿಕಗಳು ಬಂದಿವೆ.

5.5 ಜನಪದ ಗೀತೆಗಳಲ್ಲಿ ಸ್ಥಳನಾಮಗಳು :

ಜಾನಪದದ ಇತರ ಪ್ರಕಾರಗಳಂತೆ ಜನಪದ ಗೀತೆಯೂ ಕೂಡ ಮೌಖಿಕ ಪರಂಪರೆಯ ಮೂಲಕ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದಿದೆ. ಕಂಠಸ್ಥ ಪರಂಪರೆಯೇ ಇದರ ಮುಖ್ಯವಾಹಿನಿಯಾಗಿದೆ. ಜನಪದ ಗೀತೆಗಳು ಜನಪದ ಸಂಸ್ಕೃತಿಯ ಒಂದು ಅಂಗವಾಗಿದೆ. ಜನಪದಗೀತ ಪ್ರಕಾರದಲ್ಲಿ ತ್ರಿಪದಿ, ಕೋಲಾಟದ ಆಟಗಳು, ದೇವರ ಕುರಿತಾದ ಹಾಡು ಮೊದಲಾದವುಗಳು ಅನಾದಿಕಾಲದಿಂದಲೂ ಉಳಿದು ಬಂದಿವೆ. ಕೆಲವೊಂದು ಹಾಡುಗಳಲ್ಲಿ ಸ್ಥಳನಾಮಗಳ ಐತಿಹ್ಯವೂ, ಆ ಸ್ಥಳದ ವಿಶೇಷತೆಯನ್ನು ತಿಳಿಸುವ ಚಿತ್ರಣವೂ ಬಂದಿರುವುದನ್ನು ಕಾಣಬಹುದು.

ಸಾರ್ವತ್ರಿಕತೆ ಜನಪದ ಗೀತೆಯ ಪ್ರಮುಖ ಲಕ್ಷಣ. ನಾದಮಯತೆ, ಲಯಗಾರಿಕೆ ಜನಪದಗೀತೆಗಳ ಆಕರ್ಷಣೆಗೆ ಕಾರಣವಾಗಿರುವ ಅಂಶಗಳಾಗಿವೆ. ಜನಪದರ ಲೋಕಾನುಭವ ಅಥವಾ ವಿಚಾರಶಕ್ತಿ ಪರಿಮಿತವಾದುದಾದರೂ ಅವರ ಅನುಭವ ಮಹತ್ವಪೂರ್ಣವಾದುದು. "ಜನಪದ ಕವಿಗಳ ಕಾವ್ಯ ಪ್ರತಿಭೆಗೆ ಅವರ ಜೀವನಾನುಭವವೇ ಸ್ಫೂರ್ತಿ ಚಿಲುಮೆ. ಅವರು ನೋಡಿಲ್ಲದ, ಕೇಳಿಲ್ಲದ ಅನುಭವಿಸಿಲ್ಲದ ಯಾವುದನ್ನೂ ಕುರಿತು ಹಾಡುವವರಲ್ಲ. ಕೃತಕತೆ ಅವರಿಗೆ ಹೊರಗು. ಅವರ ಪ್ರತಿಯೊಂದು ಮಾತು ಅವರದೇ ಹೃದಯದ ಜೀವಂತ ಮಿಡಿತವಾಗಿದೆ.... ಜನಪದ ಕವಿಗಳು ಸ್ವಯಂಪ್ರಭೆ, ಪ್ರತಿಭೆಯುಳ್ಳವರು, ಜನಪದ ಕಾವ್ಯಗಳಲ್ಲಿ ಜನಪದ ಜೀವನವನ್ನೂ, ಸಾಂಸ್ಕೃತಿಕ ವೈಭವವನ್ನೂ ಕಾವ್ಯದ ಸಹಜ ಪ್ರತಿಭಾ ಪ್ರಖರತೆಯನ್ನೂ ಕಾಣಬಹುದು.......[35] ಹೀಗೆ ತಮ್ಮ ಜೀವನದ ಉದಾತ್ತತೆಗಳನ್ನು ಪ್ರತಿಪಾದಿಸುವಾಗ ಅವರ ಜೀವನದೊಳಗೆ ಹಾಸುಹೊಕ್ಕಾಗಿರುವ ತಮ್ಮ ನೆಲೆ ಹಾಗೂ ತನ್ನ ತವರು ಮನೆಯ, ಊರಿನ ನೆನಪು ಕಾಡದೆ ಇರದು. ತನ್ನ ಸ್ಥಳದ ಮಹತ್ವವನ್ನು ಅದರ ವಿಶೇಷತೆಗಳನ್ನು ತಮ್ಮ ಹಾಡುಗಳಲ್ಲಿ ಅಲ್ಲಲ್ಲಿ ತರುವುದುಂಟು. ಅಲ್ಲದೆ ಗ್ರಾಮ ದೇವತೆಗಳ ಮೇಲಿನ ಹಾಡುಗಳಂತೂ ಗ್ರಾಮಕ್ಕೂ ದೈವಕ್ಕಿರುವ ಅನ್ಯೋನ್ಯತೆಯನ್ನು, ಊರಿನ ಅಂದ ಚೆಂದವನ್ನು, ಪೂಜೆಗೆ ಬೇಕಾದ ವಸ್ತುಗಳು ಯಾವ ಯಾವ ಸ್ಥಳಗಳಿಂದ ತಂದರೆ ದೇವತೆಯನ್ನು ಸಂಪ್ರೀತಿಗೊಳಿಸಲು ಸಾಧ್ಯವೆಂಬ ವಿವರಗಳೆಲ್ಲವೂ ಸಿಗುತ್ತವೆ. ಆ ಮೂಲಕ ಸ್ಥಳನಾಮಗಳ ಜೊತೆಯಲ್ಲಿ ಸ್ಥಳದಲ್ಲಿ ದೊರೆಯಬಹುದಾದ ವಸ್ತು, ಸಂಸ್ಕೃತಿಯನ್ನು ಕಣ್ಣು ಮುಂದೆ ತೆರೆಯುವಂತೆ ಮಾಡುತ್ತದೆ. ಆ ಮೂಲಕ ಆಯಾ ಭೌಗೋಳಿಕ ಪ್ರದೇಶಗಳಲ್ಲಿ ನಡೆಯುವ ಸಾಂಸ್ಕೃತಿಕ ಚಿತ್ರಣದ ಜೊತೆಗೆ ಸ್ಥಳವಿಶೇಷಣವನ್ನು ಹೇಳುವ ಪರಿ ಬೆರಗು ಹುಟ್ಟಿಸುತ್ತದೆ.

ಬೆಂಗಳೂರು ಬಿಳಿಯೆಲೆ ಮೈಸೂರು ಕಳಿಯಡಕೆ

ಚನ್ನಪಟ್ಟಣದ ಕನೆಸುಣ್ಣ / ತಂದಿವ್ನಿ

ಚಿಂತೆ ಬಿಟ್ಟೆಲೆಯ ಮಡಿಸೆಣ್ಣೆ

ಚನ್ನಪಟ್ಟಣದ ಚಿನ್ನದೇರಿಮ್ಯಾಲೆ

ಚಂದಕೆ ನನ್ನಣ್ಣ ಪಗಡೇಯ / ಆಡುಕೋಗಿ

ಸುಣ್ಣಕ್ಕೆ ನೂರಾಳ ಕಳುಗಾನೆ

ಅಣ್ಣನ್ಗೆ ಅರಮನೆ ತಮ್ಮನ್ಗೆ ಕಿರುಮನೆ

ಬೆಡಗಿನ ತಮ್ಮಯ್ಗೆ ಬಿಡದೀಯ / ಕೊಟ್ಟೋರ್‍ಯಾರೆ

ಚನ್ನಪಟ್ಟಣದ ದೊರೆಗಳು

ಹತ್ತುಗಾವಿಂದ ಹಟ್ಟಿಕಾಣದೆ ಬಂದ

ಹಟ್ಟಿ ಮುಂದಿಳಿದ ಕುದುರೇಯ / ಚನ್ನಪಟ್ಟಣದ

ಲಾಯದಲೊಡೆದ ಮಠಿಗುದರೆ

ಕೊಂಬು ಹಿತ್ತಾಳೆ ಚೆಂಬು ಮಾಟದ ಹೆಣ್ಣೆ

ನಾರೀ ನೀನೆಲ್ಲಿ ದೊರಕೀದೆ / ಚನ್ನಪಟ್ಟಣದ

ಬಾಳೇ ತೋಟದ ಅರಗಿಣಿಯೆ

ತಾಮ್ರ ಹಿತ್ತಾಳೆ ಚದರ ಮಾಟದ ಹೆಣ್ಣೆ

ನಾರೀ ನೀನೆಲ್ಲಿ ದೊರಕಿದೆ / ಚನ್ನಪಟ್ಟಣ

ಬಾಳೆ ತೋಟದರಗಿಣಿಯೆ

ಹೂವಿಲ್ಲೆಂದರೆ ಹೂಲ್ಲಿ ದೊರೆತಾವು
ಹೂವ ಬೆಳೆವೋರು ಚನ್ನಪಟ್ಟಣದ / ದೊರೆಗಳು
ಹೂವಿನ ರಥವ ಕಳುಗವರೆ

ಮಾಲೆ ಕಳುಗವರೆ ಮಾಗಡಿ ಓಷ್ಠಮರು

ಮಾಲೆ ನಮ್ಮಗಡಗೀಗಮರಾವು / ಚನ್ನಪಟ್ಟಣದ

ಗಂಧ ಹೊಂಬಾಳೆ ಬರಬೇಕು

ಹಣವೀಗೆ ಹತ್ತಲೆ ಹೊನ್ನೀಗೆ ನೂರೆಲೆ

ಚನ್ನಪಟ್ಟಣದ ಮಳಗೇಲಿ / ಮಾರೋ ಎಲೆ

ಅಣಿಗೊಂದೊಂದೆ ಬೆಲೆಯಾದೋ

ಮಳೂರು ತೋಟದಲ್ಲಿ ಮಲ್ಲಿಗೆ ಗಿಡಹುಟ್ಟಿ

ಮೆಲುಮೆಲುಗೆ ಬೇರು / ಹರಿದಾವೋ

ಕೂಡ್ಲೂರೆಲೋಗಿ ಕುಡಿ ಒಡೆದೋ

ಅಬ್ಲೂರೆಲೋಗಿ ಹಬ್ಬಿಕೊಂಡೋ

ಬೆಂಗಳೂರಲ್ಲಿ ಬೆಲೆಯಾದೋ ಮಲ್ಲಿಗೆ

ಚನ್ನಪಟ್ಟಣದಲ್ಲಿ ಇಳಿದಾವೋ

ಚನ್ನಪಟ್ಟಣದಲ್ಲಿ ಇಳಿದಂತಾ ಮಲ್ಲಿಗೆ

ಒಂದಾಣೆಗೊಂದು ಬೆಲೆಯಾದೋ.

ಕೂಡ್ಲೂರು ಚೆಲ್ಲಮ್ಮ ಏನಂತ ಹೇಳುತಾಳೆ

ಹಬ್ಬಾವ ಅವಳು ಪಡವೋಕೆ / ಬಂದವ್ಳೆ

ಹಬ್ಬಾವ ನೀನು ಮಾಡಿಸಬೇಕು

ಆ ಊರು ಈ ಊರು ದೇವಲೋಕದ ಊರು

ದೇವೇಂದ್ರನಂತಾ ಕೂಡಲೂರು / ರಾಜಬೀದೀಲಿ

ತಾಯಿ ಚೆಲ್ಲವ್ವ ಮೆರೆದಾಳೆ.

ಹೊನ್ನುವರವಾದೋ ತುಪ್ಪದ ದೀವಿಗೆಯಾದೋ

ಪಟ್ಟಣನ್ನೋದು ಕೂಡಲೂರು / ರಾಜಬೀದೀಲಿ

ಗೊಂಬೆ ಚಿತ್ತಾರದ ಮಡೆಕಡೆದೋ

ಬಗ್ಗಿಗಿಂಡಿಯ ಮೊಗೆದಾಳೆ ಚೆಲ್ಲವ್ವ

ಎದ್ದಿನೋಡಾಳೆ ಕೂಡಲೂರು / ರಾಜಬೀದೀಲಿ

ಮೊಗ್ಗಿನಾರುತಿ ಬರುವೋದ

ಆ ಚೆಂದ ಕೂಡಲೂರು ನೀರು ಚಂದ ಚಿಕ್ಕತೊರೆ

ದೇವರು ಚಂದ ಕರಿಯಮ್ಮ / ಮಂಡೆಮ್ಯಾಲೆ

ಹೂ ಚಂದ ಸಣ್ಣ ಗಣಗಲೆ.

ಚಲ್ಲಮ್ಮ ಉಟ್ಟಾಳೆ ಎಳ್ಳುಹೂವಿನ ಬಣ್ಣ

ದಂಡಮ್ಮ ಉಟ್ಟಾಳೆ ದಣಮೇಯ / ಕೋಡಂಬಳ್ಳಿ

ಬಿಸಿಲಮ್ಮ ಉಟ್ಟಾಳೆ ದಸರೇಯ

ಇಪ್ಪತ್ತು ಗಾವುದಕೆ ನೆಪ್ಪು ನನ ಚಕ್ಕೆರೆ

ಇಪ್ಪೇಯ ತೋಪು ಹೊಳೆಸಾಲು / ಒಳ್ಳೇದೆಂದು

ತಾಯಿ ಚೌಡವ್ವ ನೆಲೆಗೊಂಡ್ಲು

ಉದ್ದೀನ ಕಾಯ್ನಂಗೆ ಎದ್ದಲ್ಲೆ ಬಾಗವಾರ

ಒಡದಿ ನಿಲಸವ್ರೆ ಕಲಕಂಬ ಐರ ಮುಂದೆ

ಒಡದಿ ಮೂಡವ್ನೆ ಗುಡಿ ತುಂಬ

ನಾಗವಾರ್ದ ನರಸಯ್ಯ ಭೋಗ ನೋಡುವ ಬನ್ನಿ

ಬಾಗಲೇಲ್ ತೊಂಬ ಗುಡಿತುಂಬು / ನರಸಯ್ಯ

ನಿನ ಭೋಗ ನೋಡೋರು ಗಡುವಿಲ್ಲ

ಕಾಳೆ (ಕಹಳೆ) ಹಿಡಿದಾರೆ ಕಲಿಯಲ್ಲೆ ನಾಗವಾರ

ಆಳುಂಟರಡಿಕೆ ದಸಿಯಂಗೆ / ನರಸಯ್ಯ

ನೀ ಹೊಂಟ್ರೆ ಬಾಳೆ ದಸಿಯಂಗೆ

ನಾಗವಾರನ್ನೋದು ನಾಕು ಸುತ್ತಿನ ಕೋಟೆ

ನಡುವೆ ನರಸಯ್ಯ ಅರಮನೆ / ಅಂಗಡಿ ಬೀದಿ

ಸಾರಿ ಮಾರಾವೆ ಸಿರಿಗಂಧ

ಸ್ವಾತಿ ಮಳೆ ಹೊದಿ ನಾಗ್ವಾರದ ಕೆರೆ ತುಂಬಿ

ಜಾತಿಗೊಂದು ಗಿಡ ವಡಿಯಾಲೋ / ನಮ್ಮೂರ

ಜಾತ್ರೆ ಹೊತ್ತಿಗೆ ಹೊಸಮೊಗ್ಗು

ನಮ್ಮೂರ ನರಸಯ್ಯ ತೋಪೇಲಿ ನೋಡುವ ಬನ್ನಿ
ಧೂಪಾದ ಮರ ಕಿರುನೆಲ್ಲಿ / ನಾಗವಾರ್ದ
ತೋಪು ಹಬ್ಬಾವೆ ಗಗನಾಕೆ

ಉತ್ತು ಬಂದ ಎತ್ತುಹುಳ್ಳಿ ಹೊಲಕೆ ಬಿಟ್ಟು
ನ್ಯಾಯಕೆ ಹೋಗವ್ನೆ ಕುಣಗೆರೆಗೆ / ಅಣ್ಣನ ತಾಕೆ
ಇವ್ನು ಹೋದಲ್ಲೇ ನ್ಯಾಯ ಹರಿಯಾದು

ಇಂಚೆ ಹಣ್ಣುಕೊಟ್ಕೊಂಡ್ರು ವಂಬೈನೂರಳ್ಳಿಯ
ಹೊಂಬಾಳೆ, ಕೊಂಡ್ರು ಮಳೂರು / ನರಸಯ್ಯ
ತುಂಬಿ ಹೂವ್ಗೆ ಕೊಂಡ್ರು ತೊರೆಸಾಲು

ಕುಕ್ಕೂರು ಕುಣಿಗೆರೆ ಹೊತ್ತೇಲೆ ಗೋವಿಂದಳ್ಳಿ
ನೆತ್ತಿಮ್ಯಾಲವ್ನೆ ನರಸಯ್ಯ / ಮಳೂರು
ಹೊಂಬಾಳೆಲವ್ನೆ (ಅಂದಾನಿ) ಅಪ್ರಮೇಯ

ಮಾಲೆ ಕೊಡುರೋ ಮಳೂರು ಒಷ್ಠಮಯ್ಯ
ಮಾಲೆ ಕೊರಳೀಗೆ ವಕ್ಕವಲ್ಲೋ / ಮೈಸೂರ /
ರಾಜಮಲ್ಲಿಗೆಯ ಕಳಗವ್ರೆ /

ಚಿಕ್ಕತಮ್ಮಂಗೆ ಯಾವೂರ ಹೆಣ್ಣಮ್ಮ
ಗಂಧ ಮಾರುವ ಗೌಡಗೆರೆ / ಗೌಡನ ಮಗಳು
ಒಪ್ಪೇನೋ ತಮ್ಮ ಮನಸೀಗೆ

ಕೋಲ ಊರಿಕೊಂಡು ಕೋಲೂರಿಗೋಗೋಳೆ
ಕೋಲೂರ ನಾಯಿ ಬೊಗಳಾವೆ / ಹೆಣ್ಣೋರವ್ವ
ಕೋಲು ಮಡುಗಿಲಿ ಶರಣೆನ್ನಿ
ಪುಟ್ಟಿಹೊತ್ಕೊಂಡು ನಿಟ್ಟೂರಿಗೋಗೋಳೆ

ನಿಟ್ಟೂರನಾಯಿ ಬೊಗಳಾವೆ / ಹೆಣ್ಣೋರವ್ವ

ಪುಟ್ಟೀಯ ಮಡಗಿ ಶರಣೆನ್ನಿ[36]

ಮಾಳೂರು ತೋಟದಲ್ಲಿ ಮಲ್ಲಿಗೆ ಗಿಡಹುಟ್ಟಿ

ಮೇಲು ಮೆಲುಗೆ ಬೇರು ಹರಿದಾವೋ

ಸೋಬನ್ನಿರೇ ಸೋಬಾನ ಎನ್ನೀರೆ //

ಮೇಲು ಮೆಲುಗೆ ಬೇರು ಹರಿದೋಗಿ

ಕೂಡ್ಲೂರೆಲೋಗಿ ಕುಡಿ ವೆಡೆದೋ // ಸೋಬನ್ನಿರೇ //

ಕೂಡ್ಲೂರೆಲೋಗಿ ಕುಡಿ ನಡೆದು ಮಲ್ಲಿಗೆ

ಹಬ್ಬೂರಲೋಗಿ ಹಬ್ಬಿಕೊಂಡು // ಸೋ //

ಕೊಂಗನಾಡ ಸೀಮಿಂದ ಬಂದಳಲ್ಲೆ ಚೆಲ್ಲವ್ವ

ಕೊಂಗಾರು ಕೊಟ್ಟ ಕುದುರೇಯ // ಏರಿಕೊಂಡು //

ಬಂದಾಳು ಕೂಡಲೂರು ರಾಜ ಬೀದಿಗೆ

ಕೂಡ್ಲೂರು ಚಲ್ಲಮ್ಮ ಏನಂತ ಹೇಳುತಾಳೆ

ಹಬ್ಬಾವ ಅವಳು ಪಡೆವಕೆ // ಬಂದವ್ಳೆ ಕಾಣಪ್ಪ //

ಹಬ್ಬಾವ ನೀನು ಮಾಡಿಸಬೇಕು

ಪಟ್ಟಸೀಮಿಂದ ಏನೇನು ತಂದಾಳೆ

ಕಂಚಿನ ಹೆಬ್ಬಾರೆ ಕೈಕುಡ // ತಕ್ಕಂಡು //

ಬಂದಾಳೆ ಕೂಡ್ಲೂರು ರಾಜಬೀದಿಗೆ

ಅವರ ತಂಗೇರು ಒನಗೂಡಿ

ಅಕ್ಕ ತಂಗೇರ ಒನಗೂಡಿ // ಚಲ್ಲವ್ವ //

ಬಂದಾಳು ಕೂಡಲೂರ / ರಾಜಬೀದಿಗೆ

ಆ ಊರು ಈ ಊರು ದೇವಲೋಕದ ಊರು

ದೇವೇಂದ್ರನಂತಾ ಕೂಡಲೂರು // ರಾಜಬೀದೀಲಿ //

ತಾಯಿ ಚೆಲ್ಲವ್ವಮೆರೆದಾಳೆ

ಹೊನ್ನು ವರವಾದೋ ತುಪ್ಪದ ದೀವಿಗೆಯದೋ

ಪಟ್ಟಣನ್ನೋದು ಕೂಡಲೂರು ರಾಜಬೀದೀಲಿ //

ಗೊಂಬೆ ಚಿತ್ತಾರದ ಮಡೆ ಕಡೆದೋ

ಬಗ್ಗಿ ಗಿಂಡಿಯ ಮೊಗೆದಾಳೆ ಚೆಲ್ಲವ್ವ

ಎದ್ದಿ ನೋಡಾಳೆ ಕೂಡಲೂರ // ರಾಜಬೀದೀಲಿ //[37]

ಮೊಗ್ಗಿನಾರತಿ ಬರುವೋದ

ಆ ಚೆಂದ ಕೂಡ್ಲೂರು ನೀರು ಚೆಂದ ಚಿಕ್ಕತೊರೆ

ದೇವರು ಚೆಂದ ಕರಿಯಮ್ಮ // ಮಂಡೆ ಮ್ಯಾಲೆ //

ಹೂ ಚಂದ ಸಣ್ಣಗಣಿಗಲೆ

ಆ ಊರು ಈ ಊರು ದೇವಲೋಕದ ಊರು

ದೇವೇಂದ್ರನಂತಾ ಕೂಡಲೂರು ರಾಜಬೀದೀಲಿ //

ಚಲ್ಲವ್ನ ಹಬ್ಬ ಐಭೋಗ

ಅಕ್ಕ ಕೂಡ್ಲೂರು ಚೆಲ್ಲಿ ತಂಗಿ ಮಳೂರು ಚೆಲ್ಲಿ

ತೆಂಗಿನ ಹಣ್ಣ ಒಲೆ ಹೂಡಿ // ಅಡಿಗೆ ಮಾಡಿ //

ಅಣ್ಣ ಅಪ್ರಮೇಯನ ಮದುವೇಗೆ

ಹಾದಿ ಮಳೂರು ಬೀದಿಯಲದಲ ವಾಲೆ ತೋಪು

ಚಂದಕೆ ಕಟ್ಟಿಸವ್ರೆ ಕೂಡಲೂರ // ರಾಜಬೀದೀಲಿ //

ತಾಯಿ ಚೆಲ್ಲವ್ವ ಮೆರೆದಾಳೆ

ಕನ್ನೆ ಚಲ್ಲವ್ನ ಬೆನ್ನಲ್ಲಿ ಜಿಗಣಿಯು ತೆಗೆದು

ಬಿನ್ನಾಣ ನಾ ಪಗಡೆ ಕೂಡಲೂರು //

ಸಣ್ಣ ರಾಜಣದ ಬಯಲಲ್ಲಿ.
ಗುಂಡಿನ ಪೂಜೆ ಉದ್ದವಾದವೆಂದು
ಎದ್ದು ನೋಡಾರೆ ಶರಣಾರು ಕೂಡಲೂರ //

ಉದ್ದವಾಗುವುದ ಪೂಜೆಯನ್ನು
ಕೋಟಿ ಸುಂಗಾರ ಕೊನೆ ಮುತ್ತು ಬಂಗಾರ
ತೇರು ಸುಂಗಾರ ಕೂಡಲೂರು // ಬೀದೀಲಿ //

ರಾಮರು ಸುಂಗಾರ ಗುಡಿಯಲ್ಲಿ
ಮಲ್ಲಿಗೆ ಮಳೂರು ಸಂಪಿಗೆ ವಾಲೆ ತೋಪು
ಡೆಂಕಣಿ ಕೋಟಿ ಕೂಡಲೂರು // ರಾಜಬೀದೀಲಿ //

ಹಯವಾದಿ ರಾಮರು ಹರಿವಾರು.
ಕೋಟೆಯಲಿ ಬೆಳಕು ಹಗಲಾದೊ ರಾಮದೇವರೆ
ಹಗ್ಗಿನಲಿ ಆದೆ ಕೂಡಲೂರು // ರಾಮದೇವರ್ಗೆ //
ತಗ್ಗಿನಲ್ಲಿ ತೇರು ಹರಿದಾವೋ

ಗ್ರಾಮ ದೇವತೆ ಬಿದರ ಚೆಲ್ಲಮ್ಮನ ಹಾಡಿನಲ್ಲಿ
ಕೂಡ್ಲೂರ ಕೆರೆಯಲ್ಲಿ ಗುಡಗಾಡೋಳಿವಳ್ಯಾರೆ
ಗುರುಗಂಜಿ ಸೀರೆ ನೆರೆಯೋಳು ದೊಡ್ಡಮ್ಮ //

ಗುಡುಗನಾಡಿ ಗುಡಿಗೆ ಹೊರಟಾಳೆ
ಕೂಡೇವಕ್ಕ ನಾವು ಕೂಡ್ಲುರ ಕೆರೆಯಾಗೆ
ಕೊಯ್ದು ಕೇದಿಗೆಯ ಮುಡಿದೇವು ಅಕ್ಕ ನಾವು
ಕೂಡೇವಕ್ಕ ತೌರ ಮನೆಯಾಗೆ //[38]
ಅಕ್ಕ ತಂಗೇರು ಬನಗೂಡಿ ಚಲ್ಲವ್ವ

ಬಂದಾಳು ಕೂಡಲೂರ ರಾಜಬೀದಿಗೆ // ಅಕ್ಕ //

ಆ ಊರಿವೂರು ದೇವಲೋಕದ ಊರು
ದೇವೇಂದ್ರನಂತಾ ಕೂಡಲೂರು ರಾಜಬೀದೀಲಿ
ತಾಯಿ ಚಲ್ಲವ್ವ ಮೆರೆದಾಳೆ ಮೆರೆದಾಳೆ // ದೇವೇಂದ್ರ //

ಹೊನ್ನು ವರವಾದೋ ತುಪ್ಪದ ದೀವಿಗೆಯಾದೋ
ಪಟ್ಟಣನ್ನೋದು ಕೂಡಲೂರು ರಾಜಬೀದೀಲಿ
ಗೊಂಬೆ ಚಿತ್ತಾರದ ಮಡೆ ಕಡೆದೋ ಕಡೆದೋ // ಪಟ್ಟಣ //[39]

ಅಚ್ಚಂದ ಕೂಡಲೂರು ನೀರು ಚಂದ ಚಿಕ್ಕತೊರೆ
ದೇವರು ಚಂದ ಕರಿಯಮ್ಮ ಕರಿಯಮ್ಮ // ಅಚ್ಚಂದ //[40]

ಮಾತಿನಲೋಗಿ ಗೆದ್ದಾಳೆ ಮೈಸೂರ ಮನೆಯ
ಕೂತು ಗೆದ್ದಾಳೆ ಕುದುರೇಯ ಕುದುರೇಯ // ಮಾತಿ //

ಕೂತುಗೆದ್ದಾಳೆ ಕುದುರೇಯ ಚನ್ನಪಟ್ಟಣದ
ಮಾತಿನಲಿ ಗೆದ್ದವಳೆ ಮಲತೇಯ ಮಲಕೇಯ // ಕೂತು //[41]

ಆವೂರು ಈವೂರು ದೇವಲೋಕದ ಊರು
ದೇವೇಂದ್ರನಂತಾ ಕೂಡಲೂರು ಕೂಡಲೂರು // ಆವೂರು //

ಅಕ್ಕ ಕೂಡಲೂರು ಚೆಲ್ಲಿ ತಂಗಿ ಮಳೂರು ಚೆಲ್ಲಿ
ತೆಂಗಿನ ಹಣ್ಣು ಒಲೆ ಹೂಡಿ ಒಲೆ ಹೂಡಿ // ಅಕ್ಕ //

ತೆಂಗಿನ ಹಣ್ಣು ಒಲೆ ಹೂಡಿ ಅಡಿಗೇ ಮಾಡಿ
ಅಣ್ಣ ಅಪ್ರಮೇಯನ ಮದುವೇಗೆ ಮದುವೇಗೆ // ತೆಂಗಿನ //

ಹಾದಿ ಮಳೂರು ಬೀದಿಯಲ್ಲ ವಾಲೆತೋಪು
ಚಂದಾಕೆ ಕಟ್ಟಿಸವ್ರೆ ಕೂಡಲೂರು ಕೂಡಲೂರು // ಹಾದಿ //

ಚಂದಾಕೆ ಕಟ್ಟಿಸವ್ರೆ ಕೂಡಲೂರು ರಾಜಬೀದೀಲಿ

ತಾಯಿ ಚಲ್ಲವ್ವ ಮೆರೆದಾಳೆ ಮೆರೆದಾಳೆ // ಚಂದಾಕೆ //

ಗಂಗವಾಡಿಲವ್ವೆ ಲಿಂಗವಂತೆ ಚಲ್ಲವ್ವ

ಗಂಧಾದ ವಾರ ಹೊಡಕೊಂಡು / ದೊಡ್ಡಮ್ಮ

ರಂಗಾದೊತ್ತಿಗೆ ಬರಬೇಕು[42]

ಕೂಡ್ಲೂರು ಕೆರೆಯಲ್ಲಿ ಗುಡುಗಾಡೋಳು ಇವಳ್ಯಾರೆ

ಗುರುಗಂಜಿ ಸೀರೆ ನೆರಿಯೋಳೆ ದೊಡ್ಡಮ್ಮ

ಗುಡನಾಡಿ ಗುಡಿಗೆ ಹೊರಟಾಳೆ

ಹಾದಿ ಮಳೂರು ಬೀದೆಯೆಲ್ಲ ವಾಲೆ ತೋಪು

ಚಂದಕೆ ಕಟ್ಟಿಸವ್ರೆ ಕೂಡಲೂರ ರಾಜಬೀದೀಲಿ

ತಾಯಿ ದೊಡ್ಡಮ್ಮ ಮೆರೆದಾಳೆ

ಐದು ಶೂಲಬಂದೋ ನಾಕುಹೆಬ್ಬಾರೆ ಬಂದೋ

ರಂಗಕ್ಕೆ ಬಂದೋ ಕೂಡಲೂರ / ರಾಜಬೀದೀಲಿ

ತಾಯಿ ದೊಡ್ಡಮ್ಮ ಮೆರೆದಾಳೆ[43]

** ** ** ** **

ಕೊನೆ ಟಿಪ್ಪಣಿಗಳು :

1) ದೇ.ಜವರೇಗೌಡ : ಜಾನಪದ ಅಧ್ಯಯನ, ಪುಟ–4

2) ಅದೇ : ಪುಟ–20, 21

3) ಸಂ.ಪ್ರೊ.ಡಿ.ಲಿಂಗಯ್ಯ : ಡಾ.ಕೆ.ಆರ್.ಸಂಧ್ಯಾರೆಡ್ಡಿ, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪುಟ–3

4) ದೇ.ಜವರೇಗೌಡ : ಸ್ಥಳನಾಮ ವ್ಯಾಸಂಗ, ಪುಟ–63

5) ಅದೇ : ಪುಟ–111

6) ದೇ.ಜವರೇಗೌಡ : ಜಾನಪದ ಅಧ್ಯಯನ, ಪುಟ–162

7) ಡಾ.ಸುಬ್ಬಣ್ಣ ರೈ : ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಪುಟ–10

8) ಅದೇ : ಪುಟ–10

9) ಡಾ.ವೀರಣ್ಣ ದಂಡೆ, ಡಾ.ಶ್ರೀಪಾದ ಶೆಟ್ಟಿ : ಸುವರ್ಣ ಜಾನಪದ ಲೇಖನಗಳು, ಪುಟ–49

10) ಡಾ.ಸುಬ್ಬಣ್ಣ ರೈ : ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಪುಟ–32

11) ದೇ.ಜವರೇಗೌಡ : ಸ್ಥಳನಾಮ ವ್ಯಾಸಂಗ, ಪುಟ–111,112.

12) ಶಿವಪ್ಪ, ಮಳೂರು (ಸಂದರ್ಶನ)

13) ಶಿವಪ್ಪ, ಅರಳಾಸಂದ್ರ (ಸಂದರ್ಶನ)

14) ಮೋಟಯ್ಯ ವಿದ್ವಾಂಸರು, ಬ್ರಹ್ಮಣಿಪುರ(ಸಂದರ್ಶನ)

15) ಸಿ.ಲಿಂ.ನಾಗರಾಜು, ಸಿಂಗರಾಜಿಪುರ(ಸಂದರ್ಶನ)

16) ನಟರಾಜಮೂರ್ತಿ, ಇಗ್ಗಲೂರು (ಸಂದರ್ಶನ)

17) ದೇವರಾಜು, ಇಗ್ಗಲೂರು (ಸಂದರ್ಶನ)

18) ಎ.ಆರ್.ರಾಜು, ಅಬ್ಬೂರು (ಸಂದರ್ಶನ)

19) ರಾಮಯ್ಯ, ಬೇವೂರು (ಸಂದರ್ಶನ)

20) ಕೆ.ಕೃಷ್ಣಮೂರ್ತಿ, ಶ್ರೀರಾಮದೇವಸ್ಥಾನದ ಅರ್ಚಕರು (ಸಂದರ್ಶನ)

21) ಡಾ.ದೇವರಕೊಂಡಾರೆಡ್ಡಿ : ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಪುಟ–141.

22) ಮುನಿಯಮ್ಮಣ್ಣಿ ಕೋಂ ನರಸಿಂಹರಾಜೇ ಅರಸ್, ಕೂಡ್ಲೂರು (ಸಂದರ್ಶನ)

23) ಸರೋಜಮ್ಮಣ್ಣಿ, ಕೂಡ್ಲೂರು (ಸಂದರ್ಶನ)

24) ಅಪ್ರಮೇಯಅಯ್ಯಂಗಾರ್ : ಶ್ರೀ ಜ್ಞಾನಮಂಟಪಕ್ಷೇತ್ರ ಮಹಾತ್ಮ, ಪುಟ–23

25) ಸಿದ್ದೇಗೌಡ, ದೇವರಹೊಸಹಳ್ಳಿ (ಸಂದರ್ಶನ)

26) ಜಗದೀಶ್, ಗರಕಹಳ್ಳಿ (ಸಂದರ್ಶನ)

27) ರೇವಣ್ಣಸಿದ್ದಯ್ಯ, ಕೆಂಗಲ್ (ಸಂದರ್ಶನ)

28) ದೇ.ಜವರೇಗೌಡ : ಜಾನಪದ ಅಧ್ಯಯನ, ಪುಟ–15

29) ಡಾ.ಎಂ.ಚಿದಾನಂದಮೂರ್ತಿ : ಚಿದಾನಂದಸಮಗ್ರ, ಸಂಪುಟ 2, ಪುಟ–1

30) ಕ್ಯಾತನಹಳ್ಳಿ ರಾಮಣ್ಣ (ಸಂ) : ಕಬ್ಬಾಳು ಕುಳಿಯಲ್ಲಿ ಹುಲಿ, ಪುಟ–15,16

31) ದೇ.ಜವರೇಗೌಡ : ಜಾನಪದ ಅಧ್ಯಯನ, ಪುಟ–256

32) ಸಿ.ಪಿ.ಕೆ : ಜನಪದ ತತ್ವ ಮತ್ತು ಸತ್ವ, ಪುಟ–39

33) ಡಾ.ಕೂಡ್ಲೂರು ವೆಂಕಟಪ್ಪ : ಗೊಂಬೆ ಚಿತ್ತಾರದ ಮಡೆಕಡೆದೂ, ಪುಟ–148

34) ಕೆ.ಸಿ.ಸುರೇಶ್ : ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪುಟ–275

35) ಲಿಂಗಯ್ಯ.ಡಿ., ಸಂಧ್ಯಾರೆಡ್ಡಿ.ಕೆ.ಆರ್.,(ಸಂ) : ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪುಟ–27

36) ಡಾ.ಕೂಡ್ಲೂರು ವೆಂಕಟಪ್ಪ : ಸ್ಥಳನಾಮವೀರರು, ಪುಟ–83,84

37) ಡಾ.ಕೂಡ್ಲೂರು ವೆಂಕಟಪ್ಪ : ಗೊಂಬೆ ಚಿತ್ತಾರದ ಮಡೆ ಕಡೆದೂ, ಪುಟ–146,147

38) ಅದೇ : ಪುಟ–147,148

39) ಅದೇ : ಪುಟ–272

40) ಅದೇ : ಪುಟ–278

41) ಅದೇ : ಪುಟ–281

42) ಅದೇ : ಪುಟ–284

43) ಅದೇ : ಪುಟ–290,291

** ** ** ** **

ಅಧ್ಯಾಯ – 6

ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಭಾಷಿಕ ವಿಶ್ಲೇಷಣೆ

6.1 ಸ್ಥಳನಾಮಗಳ ರಚನಾತ್ಮಕ ಅಂಶಗಳು

"ಸ್ಥಳನಾಮವೆಂದರೆ ಜನವಸತಿ ಇರುವ ಗ್ರಾಮನಾಮ ಮತ್ತು ನಿರ್ವಸತಿ ಇರುವ ಬೇಚರಾಕ್ ಗ್ರಾಮಗಳು ಎಂದರೆ ತಪ್ಪಾಗಲಾರದು. ಸ್ಥಳನಾಮ ವಿಜ್ಞಾನ ಎಂಬುದು ತನ್ನ ನಿಜಾರ್ಥದಲ್ಲಿ ಜನ ವಾಸವಿರುವ ಸ್ಥಳಗಳನ್ನಷ್ಟೇ ಅಲ್ಲದೇ ನಿರ್ವಸಿತ ಸ್ಥಳಗಳ ಹೆಸರಿನ ಅಧ್ಯಯನವನ್ನು ಒಳಗೊಂಡಿದೆ. ಸ್ಥಳಗಳು, ಕ್ಷೇತ್ರಗಳು, ವಸಾಹತುಗಳು ಮುಂತಾದವುಗಳ ಹೆಸರಿಗೆ ಸಂಬಂಧಿಸಿದ ಅತ್ಯಂತ ಸೂಕ್ಷ್ಮ ವಿವರಗಳು ಒಳಗೊಳ್ಳುವ ಈ ಅಧ್ಯಯನಕ್ಕೆ ಸ್ಥಳನಾಮ ವಿಜ್ಞಾನ ಎಂದು ಕರೆಯಲಾಗಿದೆ."[1] ಇದರಿಂದ ಜನವಸತಿ ಇರುವ ಗ್ರಾಮನಾಮ ಮತ್ತು ಜನರು ನೆಲಸದೆ ಇರುವ ನಿರ್ವಸಿತ ಗ್ರಾಮನಾಮಗಳು ಒಟ್ಟಾರೆಯಾಗಿ ಸ್ಥಳನಾಮ ಮತ್ತು ಗ್ರಾಮನಾಮ ಒಂದೇ ಅರ್ಥವನ್ನು ಒಳಗೊಳ್ಳುವುದು.

ಈ ಸ್ಥಳನಾಮಗಳ ರಚನೆಯಲ್ಲಿ ಬಳಸಲ್ಪಟ್ಟಿರುವ ಶಬ್ದಗಳ ಭಾಷಿಕ ಸಾಮಗ್ರಿಯು ಮೂಲ ಘಟಕಗಳಾಗಿವೆ. ಭಾಷೆಯ ಮೂಲಘಟಕಗಳಾದ ಶಬ್ದಗಳಿಂದ ಪದ ರೂಪಗೊಳ್ಳುತ್ತದೆ. ಆ ಪದಗಳಾದರೋ ಸ್ಥಳೀಯ ಭಾಷೆಯ ಪದಗಳಿಂದಲೇ ರೂಪುಗೊಂಡಿರುತ್ತವೆ. ಸ್ಥಳನಾಮಗಳಲ್ಲಿನ ವಿಶಿಷ್ಟ ಪದ ಪ್ರಯೋಗಗಳು ಆಯಾ ಕಾಲದ ಭಾಷೆಯ ಅರ್ಥಕ್ಕನುಗುಣವಾಗಿ ಇರುತ್ತವೆಯಾದರೂ, ಭಾಷೆಯ ವ್ಯವಹಾರಿಕ ಸಾಮಾನ್ಯ ಶಬ್ಧಗಳಿಗಿಂತಲೂ ಭಿನ್ನವಾಗಿರುತ್ತವೆ. ಆದ್ದರಿಂದ ಕಾಲದಿಂದ ಕಾಲಕ್ಕೆ ಅವು ತಮ್ಮ ಮೂಲಾರ್ಥವನ್ನು ಕಳೆದುಕೊಂಡು, ಅರ್ಥಹೀನವಾಗಿ ಬಿಡುತ್ತವೆಯಾದರೂ ಆಯಾಯ ಸ್ಥಳವನ್ನು ಗುರುತಿಸುವ ವಿಶಿಷ್ಟ ಶಬ್ದವಾದುದರಿಂದ ಪರಂಪರಾಗತವಾಗಿ ಬಾಯಿಂದ ಬಾಯಿಗೆ ಉಳಿದು ಬಂದಿರುತ್ತವೆ. ಭಾಷಿಕ ಸಾಮಗ್ರಿಗಳನ್ನು ಬಳಸಿಕೊಂಡು ಸಾಮಾಜಿಕವಾಗಿ ಅರ್ಥವನ್ನು ಪಡೆಯುವ ಶಬ್ದಗಳು ಗ್ರಾಮನಾಮಗಳಾಗಿ ಚಲಾವಣೆಗೊಳ್ಳುವುವು. ಸ್ಥಳನಾಮಗಳ ರಚನೆಯಲ್ಲಿ ಸಾಮಾನ್ಯವಾಗಿ ಕೂಡು ನುಡಿಗಳು ಇಲ್ಲವೇ ಸಮಸ್ತ ಪದಗಳಾಗಿರುತ್ತವೆ. ಅವುಗಳ ರಚನೆಯಲ್ಲಿ ಮೂರು ಮತ್ತು ಮೂರಕ್ಕಿಂತ ಹೆಚ್ಚು ಆಕೃತಿಮಾಗಳು ಘಟಕಗಳನ್ನಾಗಿ ನೋಡಲು ಸಾಧ್ಯವಿದೆ.

1. ಒಂದೇ ಶಬ್ದಗಳಿರುವುದು ಏಕಘಟಕ.
2. ಎರಡು ಶಬ್ದಗಳನ್ನು ಹೊಂದಿರುವುದು ದ್ವಿಘಟಕ.
3. ಮೂರು ಮತ್ತು ಅದಕ್ಕಿಂತಲೂ ಹೆಚ್ಚು ಶಬ್ದಗಳನ್ನು ಹೊಂದಿರುವುದು ಬಹು ಘಟಕಗಳಾಗಿವೆ.

ಬಹುಪಾಲು ಸ್ಥಳನಾಮಗಳು ನಿರ್ದಿಷ್ಟ ಮತ್ತು ವಾರ್ಗಿಕಗಳ ಬಳಕೆಯಿಂದ ಏಕಘಟಕ, ದ್ವಿಘಟಕ, ಬಹುಘಟಕಗಳನ್ನು ಒಳಗೊಂಡಿದ್ದು ಅವುಗಳನ್ನು ಈ ಕೆಳಕಂಡಂತೆ ನೋಡಬಹುದು.

6.1.1. ಏಕ ಘಟಕಾಧಾರಿತ ಸ್ಥಳನಾಮಗಳು

ಚನ್ನಪಟ್ಟಣ ತಾಲ್ಲೂಕಿನಲ್ಲಿ ಏಕ ಘಟಕಾಧಾರಿತ ಸ್ಥಳನಾಮಗಳು ಹಲವಾರಿವೆ. ಆದರೆ ಇವುಗಳ ಸಂಖ್ಯೆ ತೀರ ವಿರಳ. ಪ್ರಾರಂಭದಲ್ಲಿ ಊರ್, ಪಟ್ಟಿ, ಪಾವ್ ಮುಂತಾದ ನೆಲೆವಾಚಿಗಳಾಗಿ ರೂಢನಾಮಗಳಾಗಿದ್ದವು. ನಂತರದ ಹಂತದಲ್ಲಿ ಇವುಗಳನ್ನು ಒಳಗೊಂಡಂತೆ ಗ್ರಾಮನಾಮಗಳು ಬೆಳೆದದ್ದರಿಂದ ದ್ವಿಘಟಕಾಧಾರಿತ ಸ್ಥಳನಾಮಗಳು ಬಳಕೆಗೊಂಡಿರಬೇಕು. ಈ ಏಕ ಘಟಕಾಧಾರಿತ ಸ್ಥಳನಾಮಗಳು ನಿರ್ದಿಷ್ಟ ವಾರ್ಗಿಕ ವ್ಯವಸ್ಥೆಯ ಸ್ಥಳನಾಮಗಳಿಗಿಂತಲೂ ಪ್ರಾಚೀನವಾದವು. ಇವು ಗ್ರಾಮ ಉದಯದೊಂದಿಗಿನ ಮೂಲ ಮತ್ತು ಸಹಜ ಹೆಸರುಗಳಾಗಿರುತ್ತವೆ. ಮನುಷ್ಯ ತನ್ನ ನಾಗರಿಕತೆಯ ಪ್ರಾಚೀನ ಹಂತಗಳಲ್ಲಿ ಪ್ರಕೃತಿಯನ್ನು ಪೂರ್ಣವಾಗಿ ನಂಬಿ ಬದುಕುತ್ತಿದ್ದನು. ತನ್ನ ಸುಖ ಸಂತೋಷಗಳಿಗೆ ಪ್ರಕೃತಿಯನ್ನೇ ಆಶ್ರಯಿಸಿದ್ದ. ಆದ್ದರಿಂದ ನಿಸರ್ಗವನ್ನು ದೇವರೆಂದೆ ಬಗೆದು ಪೂಜಿಸುತ್ತಿದ್ದನು. ಮನುಷ್ಯ ಮತ್ತು ಪ್ರಕೃತಿಯೊಳಗಿನ ಸಂಬಂಧದಲ್ಲಿ ಭಿನ್ನತೆ ಇರಲಿಲ್ಲ. ತನ್ನ ನೆಲೆಗೂ ನಿಸರ್ಗದಲ್ಲಿನ ವಸ್ತುಗಳನ್ನು ಸೂಚಿಸಿ, ತನ್ನ ನೆಲೆಯನ್ನು ಹೆಸರಿಸಿದ್ದರಿಂದ ಸಾಮಾನ್ಯವಾಗಿ ಇವುಗಳು ಪ್ರಾಕೃತಿಕವಾಚಿ ಸ್ಥಳನಾಮಗಳಾಗಿರುತ್ತವೆ. ಅವುಗಳೆಂದರೆ ಹೂಳ್ಯ, ಕಲ್ಯ, ಹರ್ತಿ, ಮತ್ತ ಮುಂತಾದವು ಏಕ ಆಕೃತಿಯಾದ ಸ್ಥಳನಾಮಗಳು.

ಏಕ ಘಟಕಾಧಾರಿತ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ನಿರ್ದಿಷ್ಟ ಮಾತ್ರವಿರುವ ಘಟಕ ಸ್ವತಂತ್ರವಾಗಿ ವ್ಯವಹರಿಸುತ್ತಿರುವುದನ್ನು ಕಾಣಬಹುದಾದರೂ ಇವು ಅಪರೂಪವೆಂದೇ ಹೇಳಬಹುದು. ಉದಾ : ಹೂಳ್ಯ, ಕಲ್ಯ, ಹರ್ತಿ, ಮತ್ತ, ಅಚ್ಚಲು, ದಾಳಿಂಬ, ಬಿಡದಿ, ಪಟ್ಲು, ಮಾಕಳಿ, ಕಳಾರಿ, ಕೂಟ್ಲು ಇಂಥ ನಿರ್ದಿಷ್ಟವಾಚಿ ನಾಮಗಳು ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳಲ್ಲಿ ತೀರ ವಿರಳದಲ್ಲಿ ವಿರಳವಾಗಿ ಸಿಗುತ್ತವೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಂಡುಬರುವ ಮತ್ತೊಂದು ಗ್ರಾಮನಾಮ ಕೊಪ್ಪ; ಕೇವಲ ವಾರ್ಗಿಕವನ್ನೇ ಒಳಗೊಂಡಿರುವ ಸ್ಥಳನಾಮ ಸಿಗುವುದು ತುಂಬಾ ವಿರಳವಾಗಿದೆ. ಸಾಮಾನ್ಯವಾಗಿ ನಿರ್ದಿಷ್ಟದ ಜೊತೆಯಲ್ಲಿ ವಾರ್ಗಿಕವನ್ನೊಳಗೊಂಡ ಸ್ಥಳನಾಮ ಕಂಡುಬರುವುದು ಗಮನಾರ್ಹ. ಅಧ್ಯಯನದಲ್ಲಿ ನಿರ್ದಿಷ್ಟವೇ ಸ್ವತಂತ್ರ ಘಟಕವಾಗಿ ವ್ಯವಹರಿಸುತ್ತಿರುವ ಸ್ಥಳನಾಮಗಳು ವಿರಳವಾಗಿ ಸಿಗಬಹುದಾದರೂ ವಾರ್ಗಿಕವನ್ನೊಳಗೊಂಡ ಸ್ಥಳನಾಮ ಸಿಗುತ್ತಿರುವುದು ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮ ಅಧ್ಯಯನದ ವಿಶೇಷವಾಗಿದೆ.

6.1.2 ದ್ವಿಘಟಕಾಧಾರಿತ ಸ್ಥಳನಾಮಗಳು

ಸ್ಥಳನಾಮಗಳು ಅನೇಕ ಪದ ಮತ್ತು ಪ್ರತ್ಯಯಗಳಿಂದ ಕೂಡಿದ ಒಂದು ಪದ ಸಮೂಹ. ಈ ಪದ ಸಮೂಹದ ರಚನೆಯಲ್ಲಿ ಒಂದು ಕ್ರಮಬದ್ಧತೆ ಇರುವುದು. ಕ್ರಮಬದ್ಧತೆಯಿಂದ ರಚನೆಯಾದ ಪದ ಸಮೂಹವನ್ನು ಅರ್ಥಕ್ಕನುಗುಣವಾಗಿ ಕ್ರಮವಾಗಿ ಬಿಡಿಸಿ ನೋಡುವುದರಿಂದ ಆ ಗ್ರಾಮದ ಅರ್ಥವು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗುತ್ತದೆ.

ಬಹುತೇಕ ಸ್ಥಳನಾಮಗಳು ಎರಡು ಘಟಕಗಳನ್ನು ಒಳಗೊಂಡಿರುತ್ತವೆ. ಇನ್ನು ಕೆಲವು ಸ್ಥಳನಾಮಗಳು ಎರಡಕ್ಕಿಂತ ಹೆಚ್ಚು ಘಟಕಗಳನ್ನು ಒಳಗೊಂಡಿರಬಹುದು. ಎರಡು ಘಟಕಗಳನ್ನು ಹೊಂದಿರುವ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಪೂರ್ವ ಮತ್ತು ಉತ್ತರವೆಂಬ ಘಟಕವನ್ನು ಒಳಗೊಂಡಿರುತ್ತವೆ. ಉದಾ : ಹೊಸ + ಹಳ್ಳಿ = ಹೊಸಹಳ್ಳಿ. ಎರಡು ಘಟಕಗಳಿರುವ ಸ್ಥಳನಾಮಗಳಲ್ಲಿ ಮೊದಲನೆಯದು ನಿರ್ದಿಷ್ಟ ಸ್ಥಳವನ್ನು ಸ್ಪಷ್ಟ ಪರಿಭಾಷೆಯಲ್ಲಿ ವರ್ಣಿಸಿ, ಒಂದು ಊರನ್ನು ಮತ್ತೊಂದು ಊರಿನಿಂದ ಪ್ರತ್ಯೇಕಿಸಿ ತೋರಿಸುವ ಘಟಕವೇ ವಿಶೇಷ ಘಟಕಗಳು. ಇದನ್ನು ಪೂರ್ವಘಟಕವೆಂದೂ ನಿರ್ದಿಷ್ಟ ಎಂತಲೂ ಕರೆಯಲಾಗುತ್ತದೆ.

ನಿರ್ದಿಷ್ಟ	+	**ವಾರ್ಗಿಕ**	–	**ಗ್ರಾಮನಾಮ**
ಕನ್ನ	+	ಸಂದ್ರ	–	ಕನ್ನಸಂದ್ರ
ಚಕ್ಕ	+	ಊರು	–	ಚಕ್ಕಲೂರು
ಹೊಸ	+	ಹಳ್ಳಿ	–	ಹೊಸಹಳ್ಳಿ
ನೀಲ	+	ಸಂದ್ರ	–	ನೀಲಸಂದ್ರ
ಬಾಚ	+	ಹಳ್ಳಿ	–	ಬಾಚಹಳ್ಳಿ
ಬುಕ್ಕ	+	ಸಾಗರ	–	ಬುಕ್ಕಸಾಗರ

ಊರಿನ ಮತ್ತೊಂದು ಘಟಕವಾದ ವಾರ್ಗಿಕದಲ್ಲಿ ಬರುವ ಶಬ್ದಗಳು ಬೇರೆ ಬೇರೆ ನಿರ್ದಿಷ್ಟಗಳೊಂದಿಗೆ ಒಂದು ನಿರ್ದಿಷ್ಟ ಸ್ಥಳವನ್ನು ಸ್ಪಷ್ಟ ಪರಿಭಾಷೆಯಲ್ಲಿ ವರ್ಣಿಸಿದರೆ **'ಹಳ್ಳಿ'** ಎಂಬ ಉತ್ತರ ಘಟಕ ವಿಶೇಷತೆಯಲ್ಲಿಯೇ ಬಂದಿದೆಯಾದರೂ ಆ ಊರಿನ ಸ್ಥಿತಿಗತಿ, ಲಕ್ಷಣಗಳನ್ನು ಉತ್ತರ ಘಟಕಗಳು ಅಭಿವ್ಯಕ್ತಿಗೊಳಿಸುವುದುಂಟು. ಗ್ರಾಮನಾಮಗಳಲ್ಲಿ ವಿಶೇಷತೆಯಿಲ್ಲದೇ ವರ್ಗಗೊಳಿಸುವ ಇವುಗಳಿಗೆ ವಾರ್ಗಿಕ ಎಂದು ಕರೆಯಲಾಗುವುದು.



ಇಲ್ಲಿ ಬಂದಿರುವ ನಿರ್ದಿಷ್ಟವು ಸ್ಥಳನಿರ್ದೇಶಕ ಪ್ರತ್ಯಯವಾಗಿ ಬಂದು, ಗ್ರಾಮಗಳ ವೈಶಿಷ್ಟ್ಯವನ್ನು ತಿಳಿಸುವಲ್ಲಿ ಮಹತ್ವದ ಅಂಶವಾಗಿ ವ್ಯವಹರಿಸಲ್ಪಡುತ್ತದೆ.

ದ್ವಿಘಟಕಾಧಾರಿತ ಸ್ಥಳನಾಮಗಳಲ್ಲಿ ಮುಖ್ಯವಾಗಿ,

1) ನಿರ್ದಿಷ್ಟ – ವಾರ್ಗಿಕವಾಚಿ ನಾಮ

ವಿಶ್ವದಾದ್ಯಂತ ಸ್ಥಳನಾಮಗಳಲ್ಲಿ ನಿರ್ದಿಷ್ಟ – ವಾರ್ಗಿಕ ಘಟಕದಿಂದಾದ ರಚನೆಗಳು ಬಹುಸಂಖ್ಯೆಯಲ್ಲಿವೆ. ಇಲ್ಲಿ ನಿರ್ದಿಷ್ಟ ವಿಶೇಷದಂತೆ, ವಾರ್ಗಿಕ ವಿಶೇಷ್ಯದಂತೆ ವರ್ತಿಸುತ್ತದೆ. ಡಾ.ಎಂ.ಎಂ.ಕಲಬುರ್ಗಿ ಯವರು **'ಕನ್ನಡ ನಾಮವಿಜ್ಞಾನ'** ಕೃತಿಯಲ್ಲಿ ಹೇಳಿರುವಂತೆ, ನಿರ್ದಿಷ್ಟವು ಪ್ರಕೃತಿ ರೂಪ ಇಲ್ಲವೆ ಪದ ರೂಪದಲ್ಲಿರುತ್ತವೆ. ಉದಾ : ಕೃಷ್ಣಾ + ಪುರ, ಬ್ರಾಹ್ಮಣಿ + ಪುರ.

ಕೆಲವೊಮ್ಮೆ ಪದರೂಪದ ನಿರ್ದಿಷ್ಟದಲ್ಲಿ ಪ್ರತ್ಯಯ ವ್ಯಕ್ತವಾಗಿರಬಹುದು. ಉದಾ : ಕಲ್ಲ + ನ + ಕುಪ್ಪೆ, ಬಸವ + ನ + ಪಾಳ್ಯ ಇಲ್ಲವೇ ಪದರೂಪದ ನಿರ್ದಿಷ್ಟದಲ್ಲಿ ಪ್ರತ್ಯಯ ಅವ್ಯಕ್ತವಾಗಿರಬಹುದು. ಉದಾ : ಕೋಡಿ + ಹಳ್ಳಿ, ತಾಮ + ಸಂದ್ರ.

ವ್ಯಕ್ತ ಪ್ರತ್ಯಯದಲ್ಲಿ ಏಕವಚನ ಮತ್ತು ಬಹುವಚನವನ್ನು ಸಹ ಗುರುತಿಸಬಹುದು.

ಏಕವಚನಕ್ಕೆ – ಹೊನ್ನಿಗನ + ಹಳ್ಳಿ, ಸೋಮನಾಥ + ಪುರ.

ಬಹುವಚನಕ್ಕೆ – ಉಜ್ಜನ + ಹಳ್ಳಿ, ದೊಡ್ಡನ + ಹಳ್ಳಿ.

ಏಕವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳನ್ನು ಗುರುತಿಸಲು ಸಾಧ್ಯವಿದೆ.

ಪುಲ್ಲಿಂಗಕ್ಕೆ – ಗೋವಿಂದನ + ಹಳ್ಳಿ, ನೀಲಕಂಠನ + ಹಳ್ಳಿ

ಸ್ತ್ರೀಲಿಂಗಕ್ಕೆ – ನಾಗಲಾ + ಪುರ, ಮಲ್ಲಂ + ಗೆರೆ

ನಪುಂಸಕಲಿಂಗಕ್ಕೆ – ಬ್ಯಾಲದ + ಕೆರೆ

ನಿರ್ದಿಷ್ಟ ಅಂತ್ಯದಲ್ಲಿ 'ರ' ಇದ್ದರೆ ಜನಾಂಗವಾಚಿ ಸ್ಥಳನಾಮವಾಗಿರುತ್ತವೆ. ಉದಾ : ಕುರುಬರ + ಹಳ್ಳಿ, ಮಾದರ + ಹಳ್ಳಿ

2) ವಿಸ್ತೃತ ನಿರ್ದಿಷ್ಟವಾಚಿ ನಾಮ

ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳಲ್ಲಿ ನಿರ್ದಿಷ್ಟವಾಚಿ ನಾಮಗಳು ಅತಿವಿರಳವಾದರೆ, ವಿಸ್ತೃತ ನಿರ್ದಿಷ್ಟವಾಚಿಗಳು ಇನ್ನೂ ಅತಿವಿರಳವಾಗಿ ಕಂಡುಬರುತ್ತವೆ. ಉದಾ : ಗುತ್ತಲ + ಹುಣಸೆ, ತೇರು + ಬೀದಿ, ಬಣ್ಣ + ಆನೆ, ಹರಿ + ಹರ, ಮಲ್ಲಿಗೆ + ಮೆಟ್ಟಿಲು.

3) ವಿಸ್ತೃತ ವಾರ್ಗಿಕವಾಚಿ ನಾಮ

ವಾರ್ಗಿಕವನ್ನೇ ಒಳಗೊಂಡಿರುವ ಗ್ರಾಮನಾಮಗಳು ವಿರಳವಾದರೆ; ಪೂರ್ವ ಮತ್ತು ಉತ್ತರ ಘಟಕಗಳೆರಡೂ ವಾರ್ಗಿಕಗಳಾಗಿ ಸಿಗುವುದು ತುಂಬಾ ವಿರಳವೆಂದೇ ಭಾವಿಸಬಹುದು.

ಎರಡಕ್ಕಿಂತ ಹೆಚ್ಚು ಘಟಕಗಳುಳ್ಳ ಸ್ಥಳನಾಮಗಳು ಕೆಲವೊಮ್ಮೆ ಪ್ರಧಾನವಾಗಿ ಇಲ್ಲವೆ ಗಾತ್ರದಲ್ಲಿ ದೊಡ್ಡ ಘಟಕವಾಗಿರುವ ಊರಿನ ಸಂಬಂಧವುಳ್ಳ ಅಥವಾ ಅದರ ಅಂಗವಾಗಿ, ಸಮೀಪವಿರುವ ಇನ್ನೊಂದು ಕಿರಿಯ ಊರನ್ನು, ಎಡೆಯನ್ನು ಗುರುತಿಸುವ ಉದ್ದೇಶದಿಂದ ಬಂದಿರುತ್ತದೆ. ಇಲ್ಲಿ ಸಾಮಾನ್ಯವಾಗಿ ವಾರ್ಗಿಕವಾಗಿ ಗುರುತಿಸಿಕೊಂಡಿರುವ ವಾರ್ಗಿಕಗಳೇ ನಿರ್ದಿಷ್ಟ ಸ್ಥಾನದಲ್ಲಿ ಬಂದಿರುವ ಸಂಭವವಿರುತ್ತದೆ. ಆದ್ದರಿಂದ ಗ್ರಾಮನಾಮಗಳಲ್ಲಿ ಎರಡು ವಾರ್ಗಿಕಗಳು ಬರುವ ಸಂಭವವಿರುವುದು.

6.1.3. ಬಹುಘಟಕಾಧಾರಿತ ಸ್ಥಳನಾಮಗಳು

ಎರಡು ಘಟಕಗಳಿಗಿಂತಲೂ ಹೆಚ್ಚು ಘಟಕಗಳನ್ನು ಹೊಂದಿರುವ ಸ್ಥಳನಾಮಗಳಿಗೆ ಬಹುಘಟಕಾಧಾರಿತ ಸ್ಥಳನಾಮಗಳೆಂದೂ ಸ್ಥೂಲವಾಗಿ ಹೇಳಬಹುದು. ಮೂರು ಘಟಕಗಳುಳ್ಳ ಸ್ಥಳನಾಮಗಳು ಕಡಿಮೆಯಾದರೂ ಕೆಲವೊಂದು ಸ್ಥಳನಾಮಗಳು ಈ ತಾಲ್ಲೂಕಿನಲ್ಲಿ ಸಿಗುತ್ತವೆ. ಉದಾ : ಚೋಳ + ಮಾರನ + ಹಳ್ಳಿ, ಚಿಕ್ಕ + ಮಣ್ಣು + ಗುಡ್ಡೆ, ಭೈರ + ಸೆಟ್ಟಿ + ಹಳ್ಳಿ, ಬಂದೂರು + ವಳಗೆರೆ + ಹಳ್ಳಿ, ನೆಲ + ಮಾಕನ + ಹಳ್ಳಿ. (ನಿರ್ದಿಷ್ಟ + ನಿರ್ದಿಷ್ಟ + ವಾರ್ಗಿಕ – ಗ್ರಾಮನಾಮ).

ಮೇಲಿನ ಉದಾಹರಣೆಯಲ್ಲಿ ಬಂದಿರುವ ನಿರ್ದಿಷ್ಟಕಗಳು ಜನಸಂಖ್ಯೆಯ ಹೆಚ್ಚಳ ಮತ್ತು ಜನತೆಯ ಸಂಚಾರದೊಂದಿಗೆ ಭೌಗೋಳಿಕ ಜ್ಞಾನದ ಹೆಚ್ಚಳದೊಂದಿಗೆ ಹುಟ್ಟಿಕೊಂಡ ಹೊಸ ಹೊಸ ವಾಸ್ತವ್ಯಗಳನನ್ನುಸರಿಸಿ ಕಾಲಾಂತರದಲ್ಲಿ ಹೆಚ್ಚಿಸಿಕೊಂಡಿರಬೇಕು. ಸಮೀಪದ ಇನ್ನೊಂದು ಹಳ್ಳಿ ಅಂಥದೇ ಹೆಸರಿನಿಂದ ಪ್ರತ್ಯೇಕಿಸಿಕೊಳ್ಳುವ ಉದ್ದೇಶದಿಂದಲೂ ಇಂಥ ಉಪ ಆಕೃತಿಮಾಗಳು ಅಂಟಿಕೊಂಡಿರಬಹುದು. ಉದಾ : ಕೋಡಿ ಹೊಸಹಳ್ಳಿ, ದೇವರ ಹೊಸಹಳ್ಳಿ.

ಬಹುಘಟಕಾಧಾರಿತ ಸ್ಥಳನಾಮಗಳಲ್ಲಿರುವ ಘಟಕಗಳ ವಿವರ ಹೀಗಿವೆ:

1) ವಿಸ್ತೃತ ನಿರ್ದಿಷ್ಟ – ವಾರ್ಗಿಕವಾಚಿ ನಾಮ

ವಿಸ್ತೃತ ನಿರ್ದಿಷ್ಟಗಳಲ್ಲಿ ಮೊದಲ ಮತ್ತು ಎರಡನೆ ಘಟಕದ ನಿರ್ದಿಷ್ಟದಲ್ಲಿ ಪ್ರತ್ಯಯ ವ್ಯಕ್ತವಾಗಿರಬಹುದು. ಇಲ್ಲವೆ ಅವ್ಯಕ್ತವಾಗಿರಬಹುದು.

ಉದಾ : ವ್ಯಕ್ತ ಪ್ರತ್ಯಯ ∴ ಕಾಡು + ಕೊತ್ತ + ನ + ಹಳ್ಳಿ
∴ ಚೋಳ + ಮಾರ + ನ + ಹಳ್ಳಿ
∴ ಭೈರ + ನಾಯಕ + ನ + ಹಳ್ಳಿ
ಅವ್ಯಕ್ತ ಪ್ರತ್ಯಯ ∴ ಮಂಗಳ + ವಾರ + ಪೇಟೆ
∴ ಚಿಕ್ಕ + ಮಣ್ಣು + ಗುಡ್ಡೆ

2) ನಿರ್ದಿಷ್ಟ – ವಿಸ್ತೃತ ವಾರ್ಗಿಕವಾಚಿ ನಾಮ

ಸಾಮಾನ್ಯವಾಗಿ ಊರಿನ ಸಂಬಂಧವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ನಿರ್ದಿಷ್ಟವು ವಿಸ್ತಾರವಾಗುವುದುಂಟು; ವಾರ್ಗಿಕವು ವಿಸ್ತಾರಗೊಳ್ಳುವುದಿಲ್ಲ. ಆದರೆ ಒಂದು ಗ್ರಾಮಕ್ಕೆ ಕಾಲಾನಂತರದಲ್ಲಿ ಸುಪ್ರಸಿದ್ಧವಾದ ಅಥವಾ ಜನೋಪಕಾರಿಯಾಗಿ ಜನರ ಮಾನಸದಲ್ಲಿ ನೆಲೆ ನಿಲ್ಲುವ ರಚನೆಯೊಂದು ಏರ್ಪಟ್ಟ ಸಂದರ್ಭದಲ್ಲಿ ಮಾತ್ರ ವಾರ್ಗಿಕ ವಿಸ್ತೃತಗೊಳ್ಳುವ ಅವಕಾಶವಿದೆ. ಮುಖ್ಯವಾಗಿ ಇದು ಮಾನವನ ಪ್ರಯತ್ನ ಫಲವಾಗಿ ರೂಪುಗೊಂಡ ರಚನೆಯ ಫಲದಿಂದ ವಾರ್ಗಿಕ ವಿಸ್ತೃತಗೊಳ್ಳಲು ಸಾಧ್ಯತೆ ಇದೆ.

ಉದಾ : ಮಂಗಳ + ವಾರ + ಪೇಟೆ
ಮುದಿ + ಗೆರೆ + ತೋಟ

3) ವಿಸ್ತೃತ ನಿರ್ದಿಷ್ಟ – ವಿಸ್ತೃತ ವಾರ್ಗಿಕವಾಚಿ ನಾಮ

ಗ್ರಾಮನಾಮದ ನಿರ್ದಿಷ್ಟ ಮತ್ತು ವಾರ್ಗಿಕ ಘಟಕದಲ್ಲಿ ವಿಸ್ತೃತವಾದರೆ ಉಚ್ಚಾರಣೆಗೆ ತೊಂದರೆಯಾಗುವುದು ಖಚಿತ. ಮನುಷ್ಯ ತನ್ನ ಸೌಲಭ್ಯಕಾಂಕ್ಷೆಯಿಂದಲೇ ವಿಸ್ತೃತವಾದುದ್ದನ್ನು

ಸಂಕ್ಷೇಪಿಸುವುದನ್ನು ಕಾಣುತ್ತೇವೆ. ಉದಾ : ವೀರರಾಜಪೇಟೆ > ವಿರಾಜಪೇಟೆ ಇಂತಹ ಸಂದರ್ಭದಲ್ಲಿಯೂ ಕೂಡ ಎರಡು ಘಟಕಗಳ ವಿಸ್ತೃತವಾದ ಗ್ರಾಮನಾಮಗಳು ಅಪರೂಪವೆಂದರೂ ಈ ತಾಲ್ಲೂಕಿನಲ್ಲಿ ಅಂಥ ಗ್ರಾಮನಾಮಗಳಿವೆ.

ಉದಾ : ಅಗ್ರಹಾರ + ವಳ + ಕೆರೆ + ಹಳ್ಳಿ – ಅಗ್ರಹಾರವಳಗೆರೆಹಳ್ಳಿ

ಬಂದ + ಊರ + ವಳ + ಕೆರೆ + ಹಳ್ಳಿ – ಬಂದೂರ ವಳಗೆರೆಹಳ್ಳಿ

6.2 ಸ್ಥಳನಾಮಗಳ ಸಂಧಿ ವಿವರ :

ನಾವು ಮಾತನಾಡುವಾಗ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ, ಹೆಸರುಗಳನ್ನು ಹೇಳುವಾಗ ಪದಗಳನ್ನು ಬಿಡಿಸಿ ಹೇಳುವುದಿಲ್ಲ; ಕೂಡಿಸಿಯೇ ಹೇಳುತ್ತೇವೆ. ಇದು ರೂಢಿಯೂ ಆಗಿದೆ. ಹೀಗೆ ಪ್ರಯೋಗಿಸುವುದರಿಂದ ಶ್ರಮ ಮತ್ತು ಕಾಲ ಉಳಿತಾಯವಾಗುತ್ತದೆ. ಹೀಗಾಗಿ ಪದಗಳಲ್ಲಿ ಸಂಧಿಯಾಗುತ್ತದೆ.

ಎರಡು ಅಕ್ಷರಗಳು ಕಾಲ ವಿಳಂಬವಾಗದಂತೆ ಪರಸ್ಪರ ಅರ್ಥಕ್ಕನುಸಾರವಾಗಿ ಸೇರುವುದಕ್ಕೆ 'ಸಂಧಿ' ಎಂದು ಕರೆಯಲಾಗುತ್ತದೆ. ಈ ಪ್ರಯೋಗವನ್ನು ಗ್ರಾಮನಾಮಗಳ ಅಧ್ಯಯನದಲ್ಲಿಯೂ ಕಂಡುಕೊಳ್ಳಬಹುದಾಗಿದೆ.

ಉದಾ : ಗೌಡನ + ಕೆರೆ = ಗೌಡಗೆರೆ
ತಗಚ + ಕೆರೆ = ತಗಚಗೆರೆ

ಆದೇಶಸಂಧಿ :

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರವು ಬಂದು ಸಂಧಿಯಾಗುವುದಕ್ಕೆ ಆದೇಶಸಂಧಿ ಎನ್ನುವರು.

ವರ್ಣಮಾಲೆಯ ಕ, ತ, ಪ ಗಳಿಗೆ ಗ, ದ, ಬ ಅಕ್ಷರಗಳು ಆದೇಶವಾಗಿ ಬಂದಿರುವುದು ಗ್ರಾಮನಾಮಗಳಲ್ಲಿಯೂ ಕಂಡು ಬರುತ್ತದೆ.

ಸಂಕಲ	+	ಕೆರೆ	=	ಸಂಕಲಗೆರೆ
ಗೌಡನ	+	ಕೆರೆ	=	ಗೌಡನಗೆರೆ
ಅಪ್ಪಣ	+	ಕೆರೆ	=	ಅಪ್ಪಗೆರೆ
ತಗಚ	+	ಕೆರೆ	=	ತಗಚಗೆರೆ
ಒಳ	+	ಕೆರೆದೊಡ್ಡಿ	=	ಒಳಗೆರೆದೊಡ್ಡಿ

ಲೋಪಸಂಧಿ :

ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವ ಪದದ ಕೊನೆಯ ಸ್ವರವು ಅರ್ಥಕೆಡದ ರೀತಿಯಲ್ಲಿ ಲೋಪವಾದರೆ ಅದನ್ನು ಲೋಪಸಂಧಿ ಎಂದು ಕರೆಯುವರು. ಅಂತ ಲೋಪಗಳು ಗ್ರಾಮನಾಮಗಳಲ್ಲಿಯೂ ಕಂಡು ಬರುತ್ತವೆ.

ಕೂಡಿದ + ಊರು = ಕೂಡ್ಲೂರು

(ಅ + ಊ)

ಕುಕ್ಕಿದ + ಊರು = ಕುಕ್ಕೂರು

(ಅ + ಊ)

ಆಗಮಸಂಧಿ :

'ಮಿತ್ರನಂತೆ ಆಗಮ' ಇರುವವನೊಂದಿಗೆ ತಾನು ಮಧುರ ಭಾವದಿಂದ ಸೇರುವುದು ಮಿತ್ರತ್ವವಲ್ಲವೆ? ಹಾಗೆಯೇ ಸ್ವರಗಳು ಸೇರುವಾಗ ನಡುವೆ 'ಯ್', 'ವ್'ಗಳು ಬೆರೆಯುತ್ತವೆ. ಇಲ್ಲಿ ಗ್ರಾಮನಾಮಗಳು ಆಗಮಸಂಧಿಯ ನಿಯಮವನ್ನೇ ಹೋಲುತ್ತವೆ.

ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ಮಧ್ಯದಲ್ಲಿ 'ಯ್' ಕಾರವನ್ನೋ ಅಥವಾ 'ವ್'ಕಾರವನ್ನೋ ಹೊಸದಾಗಿ ಸೇರಿಸಿ ಹೇಳುವುದಕ್ಕೆ ಆಗಮಸಂಧಿ ಎನ್ನುವರು.

ಯಲಿ + ಊರು = ಯಲಿಯೂರು

(ಯ್ – ಸೇರಿದೆ = 'ಯ'ಕಾರಗಮ ಸಂಧಿ)

ಗೋ + ಇಂದನಹಳ್ಳಿ = ಗೋವಿಂದನಹಳ್ಳಿ

(ವ್ – ಆಗಮವಾಗಿದೆ = 'ವ'ಕಾರಗಮಸಂಧಿ)

ಸವರ್ಣಧೀರ್ಘ ಸಂಧಿ :

ಸವರ್ಣ ಸ್ವರಗಳು ಒಂದರ ಮುಂದೊಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘ ಸ್ವರವು ಆದೇಶವಾಗಿ ಬರುವುದು ಇದಕ್ಕೆ ಸವರ್ಣದೀರ್ಘಸಂಧಿ ಎನ್ನುವರು.

ಸವರ್ಣದೀರ್ಘ ಸಂಧಿಯಲ್ಲಿ ಬರುವ ಸವರ್ಣಗಳು ಅ,ಆ,ಇ,ಈ,ಉ,ಊ.

ಕೋಲು + ಊರು = ಕೋಲೂರು

ಗುಣಸಂಧಿ :

ಅ, ಆ ಕಾರಗಳಿಗೆ ಇ, ಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಕಾರವೂ, ಉ ಊ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಕಾರವೂ, 'ಋ' ಕಾರವೂ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಕಾರವೂ ಆದೇಶವಾಗಿ ಬರುವ ಸಂಧಿಯನ್ನು ಗುಣಸಂಧಿ ಎಂದು ಕರೆಯುವರು.

ಸುಳ್ಳಿನ + ಏರಿ = ಸುಳ್ಳೇರಿ

6.3. ಸ್ಥಳನಾಮಗಳ ಸಮಾಸ ವಿವರ :

ಗ್ರಾಮನಾಮಗಳೆಲ್ಲ ಗ್ರಾಂಥಿಕವಾಗಿಲ್ಲದಿದ್ದರೂ ಸ್ಥಳೀಯ ಸಮುದಾಯದ ಭಾಷೆಯ ಉತ್ಪತ್ತಿಯಾಗಿದ್ದರೂ ಹಲವು ವ್ಯಾಕರಣಾಂಶಗಳನ್ನು ಇಲ್ಲಿ ಗುರುತಿಸಬಹುದು. ಅವುಗಳಲ್ಲಿ ಸಮಾಸ ಪದಗಳು ಸಹ ಸೇರುತ್ತವೆ.

ತತ್ಪುರುಷ ಸಮಾಸ :

ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸ ಎಂದು ಕರೆಯುವರು. [2]

ಇಲಿಗರ	+	ದೊಡ್ಡಿ	=	ಇಲಿಗರದೊಡ್ಡಿ
ಸಾದರ	+	ಹಳ್ಳಿ	=	ಸಾದರಹಳ್ಳಿ
ಪುಟ್ಟೇಗೌಡನ	+	ದೊಡ್ಡಿ	=	ಪುಟ್ಟೇಗೌಡನದೊಡ್ಡಿ
ದೇವರ	+	ಹಳ್ಳಿ	=	ದೇವರಹಳ್ಳಿ
ವಡ್ಡರ	+	ದೊಡ್ಡಿ	=	ವಡ್ಡರದೊಡ್ಡಿ
ನೀಲಕಂಠನ	+	ಹಳ್ಳಿ	=	ನೀಲಕಂಠನಹಳ್ಳಿ
ಸುಣ್ಣದ	+	ಘಟ್ಟ	=	ಸುಣ್ಣಘಟ್ಟ
ಸೋಮನಾಥನ	+	ಪುರ	=	ಸೋಮನಾಥಪುರ

ಕರ್ಮಧಾರೆಯ ಸಮಾಸ :

ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಲ್ಲಿ ಸಮಾನವಾದ ವಿಶೇಷಣ ವಿಶೇಷ್ಯಗಳಿಂದ ಅನ್ಯೂನ್ಯವಾಗಿ ಕೂಡಿದ್ದ ಸಮಾಸವನ್ನು ಕರ್ಮಧಾರೆಯ ಸಮಾಸ ಎನ್ನುತ್ತೇವೆ.

ದೊಡ್ಡವನದು	+	ಹಳ್ಳಿ	=	ದೊಡ್ಡನಹಳ್ಳಿ > ದೊಡ್ನಳ್ಳಿ
ಬಿಳಿದು	+	ಕೆರೆ	=	ಬೆಳಕೆರೆ > ಬೆಳ್ಕೆರೆ

ದ್ವಿಗುಸಮಾಸ :

ಪೂರ್ವ ಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸ.

ದಶ + ವಾರ = ದಶವಾರ

ಗಮಕ ಸಮಾಸ :

ಪೂರ್ವ ಪದವು ಸರ್ವನಾಮ, ಕೃದಂತಗಳಲ್ಲಿ ಒಂದಾಗಿದ್ದು, ಉತ್ತರದಲ್ಲಿರುವ ನಾಮ ಪದದೊಡನೆ ಕೂಡಿ ಆಗುವ ಸಮಾಸವನ್ನು ಗಮಕ ಸಮಾಸ ಎನ್ನುವರು.

ಕೂಡಿದ + ಊರು = ಕೂಡ್ಲೂರು

ಕಲ್ಲಾದ + ಪುರ = ಕಲ್ಲಾದಪುರ

6.4 ಭಾಷಾ ವೈಜ್ಞಾನಿಕ ಪರಿಶೀಲನೆಗಳು :

ಚನ್ನಪಟ್ಟಣ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳನ್ನು ಈಗಾಗಲೇ ದಾಖಲಿಸಿದ್ದು, ಅದರ ಮುಂದುವರೆದ ಭಾಗವಾಗಿ ಇಲ್ಲಿ ಭಾಷಾ ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಲಾಗಿದೆ. ಈ ಪರಿಶೀಲನೆಯಲ್ಲಿ ಡಾ.ವಿ.ಶಿವಾನಂದ ಅವರ **'ಕಲಬುರಗಿ ಜಿಲ್ಲೆಯ ಶಿಲಾಶಾಸನಗಳು'** ಗ್ರಂಥ ಮಾದರಿಯನ್ನು ಆದರ್ಶವಾಗಿ ಇರಿಸಿಕೊಳ್ಳಲಾಗಿದೆ. ಈ ಪರಿಶೀಲನೆಯಲ್ಲಿ ಅನುಸರಿಸಿರುವ ಕ್ರಮಗಳು ಈ ಕೆಳಗಿನಂತಿವೆ:

1) ಇಲ್ಲಿ ಶಾಸನ ಸಂಖ್ಯೆಯ ಅನುಕ್ರಮಣಿಕೆಯನ್ನು ಅನುಸರಿಸಲಾಗಿದೆಯೇ ಹೊರತು ಕಾಲಾನುಕ್ರಮಣಿಕೆಯನ್ನಲ್ಲ.
2) ಕಾಲಘಟ್ಟಕ್ಕನುಗುಣವಾಗಿ ಭಾಷೆಯ ಸ್ವರೂಪವನ್ನು ಆಯಾಕಾಲದ ಶಾಸನಗಳು ದಾಖಲಿಸಿಕೊಂಡಿರುವುದರಿಂದ ಶಾಸನ ಸಂಖ್ಯೆ ಮತ್ತು ಅದರ ಕಾಲವನ್ನು ಪುನರಾವರ್ತಿಸಲಾಗಿದೆ.
3) ಶಾಸನೋಕ್ತ ಸ್ಥಳನಾಮವಾಗಿದ್ದರೂ, ಈಗ ಅಸ್ತಿತ್ವದಲ್ಲಿಲ್ಲದ ಅಥವಾ ಕ್ಷೇತ್ರ ವಿಂಗಡಣೆಯ ಸಂದರ್ಭದಲ್ಲಿ ಬೇರೆ ತಾಲ್ಲೂಕಿಗೂ ಸೇರ್ಪಡೆಗೊಂಡಿರುವ ಸ್ಥಳನಾಮಗಳನ್ನು ಈ ಅಧ್ಯಯನಕ್ಕೆ ಒಳಪಡಿಸಿಲ್ಲ.
4) ಒಂದು ಸ್ಥಳನಾಮ ಹಲವು ಶಾಸನಗಳಲ್ಲಿ ಉಕ್ತಗೊಂಡಿರುವಾಗ ಪ್ರಾಚೀನ ಶಾಬ್ದಿಕರೂಪವನ್ನು ಮಾತ್ರ ಈ ಭಾಷಾ ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಲಾಗಿದೆ.

5) ಒಂದೇ ಸ್ಥಳನಾಮದ ಭಿನ್ನ ರೂಪಗಳು ಉಲ್ಲೇಖಿತಗೊಂಡಿದ್ದಾಗ, ಶಾಬ್ದಿಕ ರೂಪಗಳನ್ನು ಆಧರಿಸಿ ಆಯಾ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗಿದೆ.

6) ಶಾಸನೋಕ್ತ ಸ್ಥಳನಾಮವು ಆಯಾ ಕಾಲದಲ್ಲಿ ಹೊಂದಿರುವ ಉಚ್ಚಾರಣಾ ರೂಪವನ್ನು ಹೊಂದಿರುವುದರಿಂದ, ಆಗಿರುವ ಶಾಬ್ದಿಕ ರೂಪವನ್ನು ಕೊಟ್ಟು ವರ್ತಮಾನ ಉಚ್ಚಾರಣಾ ರೂಪಕ್ಕೆ ಕರ್ನಾಟಕ ಗ್ರಾಮಸೂಚಿ ಮತ್ತು ಭಾರತ ಸರ್ಕಾರದ ಜನಗಣತಿಯಲ್ಲಿನ ಊರುಗಳ ಪಟ್ಟಿಯನ್ನು ಆಧಾರ ಗ್ರಂಥಗಳಾಗಿ ಇರಿಸಿಕೊಳ್ಳಲಾಗಿದೆ. 'ಶಾ.ಸಂ' ಎಂಬುದು ಶಾಸನಸಂಖ್ಯೆ ಎಂಬುದರ ಸಂಕ್ಷಿಪ್ತ ರೂಪವಾಗಿದೆ.

6.4.1 ಸ್ವರಾರಂಭ ಸ್ಥಳನಾಮಗಳು :

ಕ್ರ.ಸಂ	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ)	ವರ್ತಮಾನ ಉಚ್ಚಾರಣಾರೂಪ	ಶಾಬ್ದಿಕ ವ್ಯತ್ಯಾಸ
1	ಅಂಕನಹಳ್ಳಿ ಶಾ.ಸಂ.53	1535	ಅಂಕನಹಳ್ಳಿ	
2	ಹರಊರು ಶಾ.ಸಂ.36		ಅರೂರು	ಹ>ಅ ಊ–ಲೋಪ
3	ಅತ್ತಿಕುಪ್ಪೇ ಶಾ.ಸಂ.153		ಅತ್ತಿಗುಪ್ಪೇ	ಕು–ಲೋಪವಾಗಿ ಗು ಬಂದಿದೆ (ಆದೇಶ ಸಂಧಿ)
4	ಎಲೆಯಕೇರಿ ಶಾ.ಸಂ.148		ಎಲೆಕೇರಿ	ಯ–ಲೋಪ

6.4.2 ಸಬಿಂದುಕ ಸ್ಥಳನಾಮಗಳು :

ಕ್ರ.ಸಂ	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ)	ವರ್ತಮಾನ ಉಚ್ಚಾರಣಾರೂಪ	ಶಾಬ್ದಿಕ ವ್ಯತ್ಯಾಸ
1	ಬಂನಿಕುಪ್ಪೆ ಶಾ.ಸಂ.2	1667	ಬನ್ನಿಕುಪ್ಪೆ	ಬಿಂದು–ಲೋಪ ದ್ವಿತ್ವಾಗಮನ
2	ಚಂದಿಮಾದಿಯಹಳ್ಳಿ ಶಾ.ಸಂ.12	1319	ಚನ್ನಮಾರನಹಳ್ಳಿ	ಬಿಂದು–ಲೋಪ ನ–ಆಗಮನ ದ–ಲೋಪ ದ>ರ ಯ>ನ
3	ಚಂನಪಟ್ಟಣ ಶಾ.ಸಂ.52	1499	ಚನ್ನಪಟ್ಟಣ	ಬಿಂದು–ಲೋಪ ದ್ವಿತ್ವಾಗಮನ

4	ಕೋಡಂಬಳ್ಳಿ ಶಾ.ಸಂ.52	1499	ಕೋಡಂಬಳ್ಳಿ	
5	ಹೊಂಗನೂರ ಶಾ.ಸಂ.148		ಹೊಂಗನೂರು	ಅ>ಉ
6	ರಾಜರಾಜಚತುರ್ವೇದಿ ಮಂಗಲ ಶಾ.ಸಂ.155	1534	ಕೂಡ್ಲೂರು	ಪುನರ್ ನಾಮಕರಣ
7	ಕಂನಮಂಗಲ ಶಾ.ಸಂ.170–171		ಕನ್ನಮಂಗಲ	ಬಿಂದು–ಲೋಪ ದ್ವಿತ್ವಾಗಮನ
8	ಹಿರಿಯ ಗಂಗವಾಡಿ ಶಾ.ಸಂ.183	1294	ದೊಡ್ಡಗಂಗವಾಡಿ	ಹಿರಿಯ>ದೊಡ್ಡ ಪದ ಬದಲಾವಣೆ

6.4.3 ಸಜಾತಿ ದ್ವಿತ್ವದ ಸ್ಥಳನಾಮಗಳು :

ಕ್ರ.ಸಂ	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ)	ವರ್ತಮಾನ ಉಚ್ಚಾರಣಾರೂಪ	ಶಾಬ್ದಿಕ ವ್ಯತ್ಯಾಸ
1	ಚಂನಪಟ್ಟಣ ಶಾ.ಸಂ.52	1499	ಚನ್ನಪಟ್ಟಣ	ಬಿಂದು–ಲೋಪ ದ್ವಿತ್ವಾಗಮನ
2	ಬನ್ನಿಕುಪ್ಪೆ ಶಾ.ಸಂ.18	1767	ಬನ್ನಿಕುಪ್ಪೆ	
3	ಸಾಗುವಳ್ಳಿ ಶಾ.ಸಂ.26		ನಾಗೋಹಳ್ಳಿ	ಉ>ಜ ವ>ಹ
4	ಮೊಗೇಹಳ್ಳಿ ಶಾ.ಸಂ.49	1760	ಮೋಗೇನಹಳ್ಳಿ	ಒ>ಓ ನ–ಆಗಮನ
5	ಮಾಳಿಗೆಹಲ್ಳಿ ಶಾ.ಸಂ.51		ಮಾಳಗಾಳು	ಇ>ಅ ಎ>ಆ ಳ–ಆಗಮನ ವಾರ್ಗಿಕ ಬದಲಾವಣೆ
6	ಕೋಡಂಬಳ್ಳಿ ಶಾ.ಸಂ.52	1499	ಕೋಡಂಬಳ್ಳಿ	
7	ಅಂಕನಹಳ್ಳಿ ಶಾ.ಸಂ.53	1535	ಅಂಕನಹಳ್ಳಿ	
8	ಗರಿಖಹಳ್ಳಿ ಶಾ.ಸಂ.56	1666	ಗರಕಹಳ್ಳಿ	ಇ>ಅ ಖ>ಕ
9	ದಾಸರಹಳ್ಳಿ ಶಾ.ಸಂ.57	1666	ದಾಸರಹಳ್ಳಿ	

10	ರಾಮೇನಹಳ್ಳಿ ಶಾ.ಸಂ.56	1666	ರಾಮನಹಳ್ಳಿ	ಏ>ಅ
11	ಗುರುಕೆಹಳ್ಳಿ ಶಾ.ಸಂ.58	1410	ಗರಕಹಳ್ಳಿ	>ರ ಉ>ಅ ಎ>ಅ
12	ಇಗ್ಗಲೂರ ಶಾ.ಸಂ.62	1443	ಇಗ್ಗಲೂರು	ಅ>ಉ
13	ಮಗುವನಹಳ್ಳಿ ಶಾ.ಸಂ.73	1316	ಮಾಗೇನಹಳ್ಳಿ	ಅ>ಆ ಉ>ಏ ವ–ಲೋಪ
14	ಚಕ್ಕರೆ ಶಾ.ಸಂ.155	1534	ಚಕ್ಕರೆ	>ರ
15	ಹೊಸಹಳ್ಳಿ ಶಾ.ಸಂ.156	1513	ಹೊಸಹಳ್ಳಿ	
16	ಚಕ್ಕಲೂರು ಶಾ.ಸಂ.158	1478	ಚಕ್ಕಲೂರು	
17	ಮಾರಚನಹಳ್ಳಿ ಶಾ.ಸಂ.168	1336	ಮಾರ್ಚನಹಳ್ಳಿ	ದ್ವಿತ್ವಾಗಮನ
18	ಚಾಮನಹಳ್ಳಿ ಶಾ.ಸಂ.170		ಚಾಮನಹಳ್ಳಿ	

6.4.4 ವಿಜಾತಿ ದ್ವಿತ್ವದ ಸ್ಥಳನಾಮಗಳು :

ಕ್ರ.ಸಂ	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ)	ವರ್ತಮಾನ ಉಚ್ಚಾರಣಾರೂಪ	ಶಾಬ್ದಿಕ ವ್ಯತ್ಯಾಸ
1	ಕೂಡ್ಲೂರು ಶಾ.ಸಂ.114	1797	ಕೂಡ್ಲೂರು	
2	ರಾಜರಾಜಚತುರ್ವೇದಿ ಮಂಗಲ	1534	ಕೂಡ್ಲೂರು	ಪುನರ್ ನಾಮಕರಣ

6.5 ಸ್ಥಳನಾಮಗಳ ನಿಷ್ಪತ್ತಿ :

1) ಅಕ್ಕೂರು : ಧಾನ್ಯವಾಚಕ

ಅಕ್ಕೂರು = ಅಕ್ಕಿ + ಊರು= ಅಕ್ಕಿಯೂರು > ಅಕ್ಕೂರು

ಅಕ್ಕಿ = Rice deprived of its husk[3]

ಊರು = ಊಱು > ಊರು

= ನೆಲಸು, ನಿಲ್ಲು, ಇರು.

ನಿರ್ದಿಷ್ಟ 'ಅಕ್ಕಿ' ಮತ್ತು ವಾರ್ಗಿಕ 'ಊರು' ಪದಗಳು ಕೂಡಿ ಅಕ್ಕೂರು ಪದವಾಗಿದೆ. ಕೆರೆಯ ಬಯಲಿನಿಂದ ಕೂಡಿದ್ದು, ಕೃಷಿಗೆ ಯೋಗ್ಯವಾದ ಪ್ರದೇಶವಾಗಿರುವುದರಿಂದ ಅಕ್ಕೂರು ಎಂಬ ಹೆಸರು ಬಂದಿದೆ.

2) ಅಗ್ರಹಾರ ವಳಗೆರೆಹಳ್ಳಿ : ವೃತ್ತಿವಾಚಕ ಮತ್ತು ಜಲವಾಚಕ

ಅಗ್ರಹಾರ = ಅಗ್ರ + ಆಹಾರ > ಅಗ್ರಾಹಾರ > ಅಗ್ರಹಾರ

ವಳಗೆರೆಹಳ್ಳಿ = ಒಳ+ ಕೆರೆ+ ಹಳ್ಳಿ > ಒಳಕೆರೆಹಳ್ಳಿ > ವಳಗೆರೆಹಳ್ಳಿ

ಅಗ್ರ + ಆಹಾರ + ಒಳ +ಕೆರೆ + ಹಳ್ಳಿ = ಅಗ್ರಾಹಾರಒಳಗೆರೆಹಳ್ಳಿ > ಅಗ್ರಹಾರವಳಗೆರೆಹಳ್ಳಿ

ಅಗ್ರಹಾರ = ಅಗ್ರ + ಆಹಾರ

ಅಗ್ರ = ಶ್ರೇಷ್ಠ, ಆಹಾರ = ಉದ್ಯೋಗ

ಶ್ರೇಷ್ಠವಾದ ಉದ್ಯೋಗವನ್ನು ಮಾಡುವವರು ವಾಸಿಸುವ ಸ್ಥಳ. ಶ್ರೇಷ್ಠವಾದ ಉದ್ಯೋಗ ಎಂದರೆ ಅಧ್ಯಯನ, ಅಧ್ಯಾಪನ, ಬೋಧನೆ ಮಾಡುವ ವರ್ಣವ್ಯವಸ್ಥೆಯ ಅಗ್ರನೆಲೆಯಲ್ಲಿ ಗುರುತಿಸಿಕೊಂಡಂತಹ ಬ್ರಾಹ್ಮಣರು. ಇಂತಹ ಉದ್ಯೋಗವನ್ನು ಮಾಡುತ್ತಿದ್ದು ಆ ಕಾರಣಕ್ಕಾಗಿ ಆಳುವವರ ಕೃಪಾಪೋಷಣೆಗೆ ಒಳಗಾಗಿ ದಾನವಾಗಿ ಪಡೆದ ಊರುಗಳನ್ನು ಅಗ್ರಹಾರಗಳೆಂದು ಕರೆಯಬಹುದು.

= Villages or Land assigned to Brahmins[4]

ಒಳ = ಒಳಗೆ, ಒಳಗಡೆ

= ಒಳಭಾಗ, ಒಳ ಪ್ರದೇಶ

ಕೆರೆ = ಏರಿ ಕಟ್ಟಿ ನೀರು ನಿಲ್ಲಿಸುವ ಸ್ಥಳ

= ಜಲವಾಚಕ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

'ಒಳ' ಮತ್ತು 'ಕೆರೆ' ಪದಗಳು ಸಂಧಿಯಾಗುವಾಗ 'ಗ' ಕಾರಾದೇಶವಾಗಿ 'ಒಳಗೆರೆ' ಎಂದಾಗಿದೆ. ಸ್ವರ 'ಒ' > 'ವ' ಕಾರವಾಗಿ ಧ್ವನಿ ಬದಲಾವಣೆಯಾಗಿ 'ವಳಗೆರೆ' ಎಂದಾಗಿದೆ. ಕೆರೆಯ ಒಳಗಿನ ಪ್ರದೇಶದ ಪಕ್ಕದ ನೆಲೆ ಎಂದರ್ಥವಾಗುತ್ತದೆ. 'ಅಗ್ರಹಾರ' ಪೂರ್ವದಲ್ಲಿ 'ಒಳಗೆರೆ' ಪದ ಸೇರಿ 'ಅಗ್ರಹಾರ ವಳಗೆರೆಹಳ್ಳಿ' ಸ್ಥಳವಾಗಿದೆ. 'ಅಗ್ರಹಾರ', 'ವಳಗೆರೆಹಳ್ಳಿ' ಎರಡು ಸ್ಥಳನಾಮಗಳು ಸೇರಿ ಒಂದು ಸ್ಥಳನಾಮವಾಗಿದೆ.

ಅಗ್ರಹಾರಗಳು ವೈದಿಕ ಸಂಪ್ರದಾಯದ ವಿದ್ಯಾಕೇಂದ್ರಗಳು. ಮಹಾಜನರೆಂಬ ಬ್ರಾಹ್ಮಣ ಶ್ರೇಷ್ಠರಿಗೆ ದಾನಕೊಟ್ಟ ಭೂಮಿ, ಭೂಮಿ ಜೊತೆ ಕೆರೆಯನ್ನು ದಾನಕೊಟ್ಟಿರಬಹುದು. ಬ್ರಾಹ್ಮಣರಿಗೆ ದತ್ತಿಕೊಟ್ಟ ಭೂಮಿ, ಸ್ಥಳ, ಕೆರೆ ಎಂಬರ್ಥದಲ್ಲಿ ಈ ಸ್ಥಳನಾಮವಿದೆ. ಆಡುನುಡಿಯಲ್ಲಿ 'ಎ.ವಿ.ಹಳ್ಳಿ' ಎಂದು ಕರೆಯುತ್ತಾರೆ.

3) ಅಜ್ಜನಹಳ್ಳಿ : ವ್ಯಕ್ತಿವಾಚಕ ಮತ್ತು ಸಸ್ಯವಾಚಕ

ನಿಷ್ಪತ್ತಿ : 1. ಅಜ್ಜ+ನ+ಹಳ್ಳಿ > ಅಜ್ಜಹಳ್ಳಿ > ಅಜ್ಜನಹಳ್ಳಿ.

ಅಜ್ಜ = ವೃದ್ಧ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ಅಜ್ಜ = ವೃದ್ಧ, ಹಿರಿಯವನು, ತಾತ, ಹಿರಿಯವನ ನೆಲೆ ಎಂದರ್ಥದಲ್ಲಿ ಈ ಸ್ಥಳನಾಮ.

ನಿಷ್ಪತ್ತಿ :2. ಅಜ್ಜ = ಅಜ್ಜು

= A Light Substance, The dry filaments of the 'ekke' and 'hale' capsules[5].

ಆಲೆ ಅಥವಾ ಎಕ್ಕೆಯ ಹತ್ತಿಯಂತಹ ಹಗುರವಾದ ಬೀಜದ ಸುತ್ತ ಆವರಿಸಿದ ವಸ್ತು. ಗಾಳಿ ಬಂದಾಗ ಗಾಳಿಯಲ್ಲಿ ತೇಲಿ ಹೋಗಿ

ಬೀಜಪ್ರಸರಣ ಕಾರ್ಯ ನಡೆಯುತ್ತದೆ. ಈ ಊರಿನ ಸುತ್ತ ಮುತ್ತ ಹಿಂದೆ ಈ ತರಹದ ಸಸ್ಯಗಳು ದಟ್ಟವಾಗಿದ್ದು ಅವುಗಳ ಕಾರಣದಿಂದಾಗಿ ಈ ಹೆಸರು ಬಂದಿರಬಹುದಾಗಿದೆ.

ಅಜ್ಜ+ಹಳ್ಳಿ > ಅಜ್ಜಹಳ್ಳಿ > ಅಜ್ಜೆಹಳ್ಳಿ > ಅಜ್ಜೇಯಹಳ್ಳಿ > ಅಜ್ಜನಹಳ್ಳಿ ಎಂದಾಗಿರಬಹುದು. ಇಲ್ಲಿ ನಿರ್ದಿಷ್ಟ 'ಅಜ್ಜ' ಮತ್ತು ವಾರ್ಗಿಕ 'ಹಳ್ಳಿ' ಕೂಡಿ ಪದ ನಿರ್ಮಾಣವಾದಾಗ ಬಿಡಿ–ಬಿಡಿಯಾಗಿಯೇ ಉಚ್ಚಾರಣೆಗೆ ಬರುತ್ತಿದ್ದ ಕಾರಣಕ್ಕೆ ಮಧ್ಯದಲ್ಲಿ 'ನ' ಕಾರ ಆಗಮವಾಗಿ ಅಜ್ಜನಹಳ್ಳಿಯಾದಂತೆ ಕಾಣುತ್ತದೆ.

4) ಅಣ್ಣಿಗೆರೆ : ವ್ಯಕ್ತಿವಾಚಕ

ಅಣಿ + ಯ + ಕೆ= ಅಣ್ಣಿಯಕೆ > ಅಣ್ಣಿಕೆರೆ > ಅಣ್ಣಿಗೆರೆ

ನಿಷ್ಪತ್ತಿ : 1. ಅಣ್ಣಿಗೆರೆ = ಅಣಿಗೆ = ಒಂದು ಊರಿನ ಹೆಸರು

ಅಣ್ಣಿ = ಅಣ್ಣಿಗ= ಒಬ್ಬಾತನ ಹೆಸರು ಅಣ್ಣಿಗನೆಂಬುವನ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮ

ನಿಷ್ಪತ್ತಿ : 2. ಅಣ್ಣಿ : The Corner of a house, A limit, boundary, the edge of a sword

ಕೆರೆ = ಕೆಱೆ < ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

= ವಾರ್ಗಿಕವಾಗಿದೆ

= ಕೆಲವು ಸಂದರ್ಭದಲ್ಲಿ ಸಸ್ಯ ಸಮೂಹವನ್ನು ಕುರಿತು ಹೇಳುವಾಗಲು ಕೆರೆ, ವನ ಪದಗಳನ್ನು ಬಳಸುವುದು ರೂಢಿಯಲ್ಲಿದೆ.

ಅಣ್ಣಿ + ಕೆರೆ > ಅಣ್ಣಿಗೆರೆ

'ಕ' ಕಾರಕ್ಕೆ 'ಗ' ಕಾರ ಆದೇಶವಾಗಿ ಬಂದಿದೆ. ಅಂದರೆ ಊರಿನ ಅಂಚಿನ ಸ್ಥಳವಾಗಿರುವುದರಿಂದ, ಕೆರೆಯು ಇರುವ ಸ್ಥಳವಾಗಿರುವುದರಿಂದ ಈ ಹೆಸರು ಬಂದಿರಬಹುದು.

5) ಅತ್ತಿಗುಪ್ಪೆ : ಸಸ್ಯವಾಚಕ

ಅತ್ತಿ+ ಕುಪ್ಪೆ > ಅತ್ತಿಕುಪ್ಪೆ > ಅತ್ತಿಗುಪ್ಪೆ

ಅತ್ತಿ = ಅತ್ತಿಮರ

ಕುಪ್ಪೆ = ರಾಶಿ, ಗುಂಪು

ಭೌಗೋಳಿಕವಾಗಿ ನೋಡಿದಾಗ 'ಅತ್ತಿ' ಸಸ್ಯದ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿದೆ. ಗ್ರಾಮದ ಸುತ್ತ ಹಾಗೂ ಒಳಗೆಲ್ಲಾ ಅತ್ತಿಮರಗಳು ಸಾಕಷ್ಟು ಇರುವುದು ಇದಕ್ಕೆ ನಿದರ್ಶನವಾಗಿದೆ. ಅತ್ತಿಮರಗಳು ಗುಂಪಾಗಿ ಬೆಳೆಯುತ್ತಿದ್ದ ಸ್ಥಳ 'ಅತ್ತಿಗುಪ್ಪೆ' ಆಗುತ್ತದೆ.

ನಿರ್ದಿಷ್ಟ 'ಅತ್ತಿ' ಮತ್ತು ವಾರ್ಗಿಕ 'ಕುಪ್ಪೆ' ಪದದೊಡನೆ ಸೇರಿದಾಗ 'ಅತ್ತಿಗುಪ್ಪೆ' ಎಂದಾಗುತ್ತದೆ. 'ಕ' ಕಾರಕ್ಕೆ ಬದಲಾಗಿ 'ಗ' ಕಾರ ಆದೇಶವಾಗಿ ಬಂದಿದೆ. ಕುಪ್ಪೆಗೆ ಬದಲಾಗಿ ಗುಪ್ಪೆಯಾಗಿದೆ.

6) ಅಬ್ಬೂರು : ದೈವವಾಚಕ

ಅಬ್ಬೆ+ ಯ+ ಊರು = ಅಬ್ಬೆಯೂರು > ಅಬ್ಬೂರು

ಅಪಿ = A short form of[6]

ಅಪ್ರಮೇಯ > ಅಪ್ಪಯ್ಯ > ಅಬ್ಬಯ್ಯ > ಅಬ್ಬ

ಅಬ್ಬೂರು = ಅಪ್ರಮೇಯನಊರು > ಅಪ್ಪಯ್ಯನೂರು >ಅಪ್ಪೂರು > ಅಬ್ಬೂರು.

ಅಪ್ರಮೇಯ ಎಂಬ ಪದದಲ್ಲಿ ಇರುವ 'ಪ್ರ' ಎಂಬ ವಿಜಾತೀಯ ಸಂಯುಕ್ತಾಕ್ಷರವು ಸಜಾತೀಯ ಸಂಯುಕ್ತಾಕ್ಷರವಾಗಿದೆ. ಸಂಸ್ಕೃತ ಭಾಷೆಯ ಪದಗಳನ್ನು ಕನ್ನಡದ ಸ್ಥಳೀಯರು ಉಚ್ಚಾರಣೆ ಮಾಡುವಾಗ ಈ ರೀತಿಯ ಬದಲಾವಣೆಯು ಸಹಜ.

ಅಪ್ಪೂರು > ಅಬ್ಬೂರು ಆಗುವಾಗ ದ್ವಿತ್ವ ಸಹಿತ 'ಪ' ಕಾರಕ್ಕೆ 'ಬ'ಕಾರ ಆದೇಶವಾಗಿದೆ.

ಊರು = ಊಱು > ಊರು

= ನೆಲಸು, ನಿಲ್ಲು, ಇರು.

ಈ ಹಿನ್ನೆಲೆಯಲ್ಲಿ ನೋಡಿದಾಗ ಊರಗುಡ್ಡದ ಮೇಲೆ ಇರುವ ಅಪ್ರಮೇಯನ ಕಾರಣದಿಂದಾಗಿ ಈ ಊರಿಗೆ ಅಬ್ಬೂರು ಎಂದು ಹೆಸರು ಬಂದಂತೆ ಕಾಣುತ್ತದೆ.

7) **ಅಮ್ಮಲ್ಲಿದೊಡ್ಡಿ : ಸಸ್ಯವಾಚಕ**

ನಿಷ್ಪತ್ತಿ : 1. ಅಮಲೆ + ಯ + ದೊಡ್ಡಿ > ಅಮಲೆಯದೊಡ್ಡಿ > ಅಮಲೆದೊಡ್ಡಿ > ಅಮ್ಮಲೆದೊಡ್ಡಿ > ಅಮ್ಮಲ್ಲಿದೊಡ್ಡಿ.

ಅಮಲೆ = ಅಮಳೆ = ಲಕ್ಷ್ಮೀ, ಪರಿಶುದ್ಧಳು.

ದೊಡ್ಡಿ = ದನಕರು ಹಾಗೂ ಕುರಿಗಳನ್ನು ಕೂಡುವ ಜಾಗ, ಕೊಟ್ಟಿಗೆ, ಪ್ರಾಥಮಿಕ ಹಂತದ ವಸತಿ ನೆಲೆ

= A cow-pen, a cattle-pound, a stable, a stockade for impaling wild elephants,

= a settler's first house[7]

ಲಕ್ಷ್ಮಿಯ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮ

ನಿಷ್ಪತ್ತಿ : 2. ಅಮಲೆ = A tree, Emblica officinales Gaertn[8]

(ನೆಲನೆಲ್ಲೀಗಿಡ)

ನಿರ್ದಿಷ್ಟ 'ಅಮ್ಮಲಿ' ಪದದೊಡನೆ ವಾರ್ಗಿಕ 'ದೊಡ್ಡಿ' ಪದ ಸೇರಿ 'ಅಮ್ಮಲ್ಲಿದೊಡ್ಡಿ' ಸ್ಥಳವಾಗಿದೆ. ಈ ಹಿನ್ನೆಲೆಯಲ್ಲಿ ಇದು ಸಸ್ಯವಾಚಿಯಾಗಿ ಕಂಡುಬರುತ್ತದೆ.

8) **ಅವ್ವೇರಹಳ್ಳಿ : ವ್ಯಕ್ತಿವಾಚಕ**

ಅವ್ವೆ+ ಅರ+ ಹಳ್ಳಿ > ಅವ್ವೆಯರಹಳ್ಳಿ > ಅವ್ವೇರಹಳ್ಳಿ
ಅವ್ವೆ = ಅವ್ವ, ತಾಯಿ

ಹಳ್ಳಿ = ಪಳ್ಳಿ > ಹಳ್ಳಿ
= ಚಿಕ್ಕ ಊರು, ಗ್ರಾಮ.

ಅವ್ವೆ = ಅವ್ವೇರು = mother's Matrons, wet nurses[9]

ಅವ್ವೆಯರಹಳ್ಳಿ > ಅವ್ವೇರಹಳ್ಳಿ, ಇಲ್ಲಿ 'ಯ' ಲೋಪವಾಗಿ ಮುಂದೆ ಆ ಲೋಪಕ್ಕೆ ಪರಿಹಾರವಾಗಿ ದೀರ್ಘ ಬಂದಿದೆ. ಭಾಷಾಶಾಸ್ತ್ರದ ಪರಿಭಾಷೆಯಲ್ಲಿ ಇದನ್ನು ಪರಿಹಾರ ದೀರ್ಘೀಕರಣ ಎಂದು ಕರೆಯಲಾಗುತ್ತದೆ. ಅವ್ವೇರು ಎಂದರೆ ಸೇವಕರು ಎಂದರ್ಥ.

‘ಸಾರಂಗಧರ ಎಂಬ ರಾಜನ ಆಸ್ಥಾನಕ್ಕೆ ಹೋಗುತ್ತಿದ್ದ ಸೇವಕ ಮತ್ತು ಸೇವಕಿಯರು ಒಂದೇ ಕಡೆ ನೆಲೆಸಿದರು. ಅವರು ನೆಲೆಸಿದ್ದ ಸ್ಥಳವೇ ಅವ್ವೇರಹಳ್ಳಿ”[10] ಎಂದು ಹೇಳಲಾಗಿದೆ.

ನಿರ್ದಿಷ್ಟ ‘ಅವ್ವೇರ’ ಪದ, ವಾರ್ಗಿಕ ‘ಹಳ್ಳಿ’ ಪದದೊಡನೆ ಸೇರಿ ಅವ್ವೇರಹಳ್ಳಿ ಸ್ಥಳನಾಮವಾಗಿದೆ.

9) ಅರಳಾಪುರ : ಸಸ್ಯವಾಚಕ

ನಿಷ್ಪತ್ತಿ : 1. ಅರಳ+ಪುರ > ಅರಳಪುರ > ಅರಳಾಪುರ.

ಅರಳಿ = “The tree Ficus religiosa Lin”[11]

= ಅಶ್ವತ್ಥ ವೃಕ್ಷ, ಬೋಧಿವೃಕ್ಷ[12]

ಪುರ = ಪಟ್ಟಣ, ನಗರ.

ಭೌಗೋಳಿಕವಾಗಿ ನೋಡಿದಾಗ ‘ಅರಳಿ’ ಸಸ್ಯದ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿದೆ. ಗ್ರಾಮದ ಸುತ್ತ ಹಾಗೂ ಒಳಗೆಲ್ಲಾ ಅರಳಿಮರಗಳು ಸಾಕಷ್ಟು ಇರುವುದು ಇದಕ್ಕೆ ನಿದರ್ಶನವಾಗಿದೆ. ನಿರ್ದಿಷ್ಟ ‘ಅರಳಿ’ ಪದ ವಾರ್ಗಿಕ ‘ಪುರ’ ಪದದೊಡನೆ ಸೇರಿದಾಗ ‘ಅರಳಾಪುರ’ ಎಂದಾಗುತ್ತದೆ. ‘ಅರಳಿ’ ಪದದ ಅಂತ್ಯ ‘ಇ’ ಕಾರ ‘ಆ’ ಕಾರವಾಗಿದೆ.

ನಿಷ್ಪತ್ತಿ : 2. ಅಲರ್ > ಅರಲ್ > ಅರಳು

ಅಲರ್ = ಪುಷ್ಪ, ಹೂ

ಅರಲ್ > ಅರಳು. ಇಲ್ಲಿ ‘ಲ’ ಕಾರಕ್ಕೆ ಬದಲಾಗಿ ‘ಳ’ ಕಾರ ಬಂದಿದೆ. ಇದನ್ನು ವರ್ಣಪಲ್ಲಟ ಎಂದು ಕರೆಯುತ್ತೇವೆ. ‘ಲ’ಕಾರ ಹೋಗಿ ‘ಳ’ಕಾರ ಬಂದು ಕುಳಂತವಾಗಿದೆ.

ಅಲ್ಲು > ಅರಳು

ಅರಳು = A flowr[13]

= ಹೂವಿನ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮ

10) **ಅರಳಾಸಂದ್ರ : ಸಸ್ಯವಾಚಕ**

ನಿಷ್ಪತ್ತಿ : 1. ಅರುಳ ಸಂದ್ರ > ಅರಳಾಸಂದ್ರ

= ಅಲ್ಲು > ಅರಳು

ಅರಳು = A red Lotus[14]

ಸಂದ್ರ = ಸಮುದ್ರ > ಸಂದ್ರ

= ಜಲವಾಚಕ.

ತಾವರೆ ಹೂ ಹೆಚ್ಚಾಗಿ ಈ ಸ್ಥಳದ ಕೆರೆಯಲ್ಲಿ ಇದ್ದುದ್ದರಿಂದ ಈ ಹೆಸರು ಬಂದಿದೆ.

ನಿಷ್ಪತ್ತಿ : 2. ಅರಲ್ + ಸಂಸ್ರ > ಅರಲ್‌ಸಂದ್ರ > ಅರಳಸಂದ್ರ> ಅರಳಾಸಂದ್ರ.

ಅರಳು = ಅರಳ್ > ಅರಳು

= ನೆಲ್ಲು, ಜೋಳ ಮುಂತಾದ ಧಾನ್ಯಗಳನ್ನು ಹುರಿದ ಮೇಲೆ ಆಗುವ ರೂಪ, ಅವಲು, ಪುರಿ[15]

ಭತ್ತದಿಂದ ಅರಳನ್ನು ತಯಾರು ಮಾಡಿ ಮಾರುತ್ತಿದ್ದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಿದೆ.

'ಅರಳಾಸಂದ್ರ' ಪದದಲ್ಲಿ ನಿರ್ದಿಷ್ಟ 'ಅರಳಾ'ಪದ ವಾರ್ಗಿಕ 'ಸಂದ್ರ' ಪದದೊಡನೆ ಸೇರಿದಾಗ ಅರಳಾಸಂದ್ರ ಎಂದಾಗುತ್ತದೆ.

11) **ಅರಳಾಳಸಂದ್ರ : ಸಸ್ಯವಾಚಕ**

ಶಾಸನದಲ್ಲಿ 'ಅಲ್ಲಾಳ ಸಮುದ್ರ' ಎಂದಿದೆ[16]

ಅಲ್ಲಾಳ > ಅಲಾಳ > ಅಳ್ಳಾಳ > ಅರುಳಾಳ

ಅಲ್ಲಾಳ + ಸಮುದ್ರ > ಅಲಾಳ + ಸಮುದ್ರ > ಅಳ್ಳಾಳ + ಸಮುದ್ರ > ಅರಳಾಳ + ಸಂದ್ರ > ಅರಳಾಳಸಂದ್ರ

ಅಲ್ಲಾಳ = ಅಲ್ಲಾಹ + ಆಳು. ಅಂದರೆ = ಅಲ್ಲಾಹುವಿನ ಭಕ್ತ.

ಸಂದ್ರ = ಸಮುದ್ರ > ಸಂದ್ರ.

"ಮುಸಲ್ಮಾನ ಗುರುಗಳು ತಪಸ್ಸನ್ನು ಆಚರಿಸುವ ಸಲುವಾಗಿ ಪ್ರಶಸ್ತವಾದ ಸ್ಥಳವನ್ನುಹುಡುಕುತ್ತಿದಾಗ ಈ ಸ್ಥಳವು ಕಂಡುಬಂದು, ಈ ಸ್ಥಳದಲ್ಲಿ ಗುರುಗಳು ಭಕ್ತಿ, ಶ್ರದ್ಧೆಯಿಂದ ಮರವೊಂದರ ಕೆಳಗೆ ತಪಸ್ಸು

ಮಾಡುತ್ತಿದ್ದ ಸಂದರ್ಭದಲ್ಲಿ ಪಕ್ಷಿಯೊಂದು ಬಂದು ತನ್ನ ಕಾಲಿನಿಂದ ನೆಲ ಕೆರೆದಾಗ ನೀರು ಬರಲಾರಂಭಿಸಿತು. ಸ್ವಾಮಿಗಳು ತಮ್ಮ ಕೈಯಿಂದ ಗುಂಡಿ ತೋಡಿದಾಗ ಮತ್ತಷ್ಟು ನೀರು ಉಕ್ಕಿ ಬಂತು. ಈ ಮುಸಲ್ಮಾನ ಗುರುಗಳ ನೆನಪಿಗಾಗಿ ಈ ಊರಿಗೆ 'ಅಲ್ಲಾ ಸಮುದ್ರ' ಎಂಬ ಹೆಸರು ಬಂದಿದೆ". [17]

ಈ ಅಲ್ಲಾ ಸಮುದ್ರವೇ ಮುಂದೆ ಅರಳಾಸಂದ್ರವಾಗಿದೆ.

ನಿರ್ದಿಷ್ಟ 'ಅರಳಾಳ' ಪದ ವಾರ್ಗಿಕ 'ಸಂದ್ರ' ಪದದೊಡನೆ ಸೇರಿದಾಗ 'ಅರಳಾಳಸಂದ್ರ' ಎಂದಾಗುತ್ತದೆ.

12) **ಅಂಕುಶನಹಳ್ಳಿ : ವ್ಯಕ್ತಿವಾಚಕ**

ಅಂಕುಶನಹಳ್ಳಿ = ಅಂಕುಶ+ನ+ಹಳ್ಳಿ

ಅಂಕುಶ = ಆನೆಯನ್ನು ನಡೆಸುವಾಗ ಅದನ್ನು ಹದ್ದಿನಲ್ಲಿಡಲು ಉಪಯೋಗಿಸುವ ಆಯುಧ, ಮಲ್ಲಯುದ್ಧದ ಒಂದು ಪಟ್ಟು.[18]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

'ಅಂಕುಶನ' ಪದದ ಜೊತೆ ವಾರ್ಗಿಕ ಪದ 'ಹಳ್ಳಿ' ಸೇರಿ 'ಅಂಕುಶನಹಳ್ಳಿ' ಸ್ಥಳನಾಮವಾಗಿದೆ.

"ಸಾರಂಗಧರನ ಆಸ್ಥಾನದ ಆನೆಗಳನ್ನು ಸಾಕುತ್ತಿದ್ದ ಮಾವಟಿಗರು ಇಲ್ಲಿ ನೆಲೆಸಿದ್ದರಿಂದ ಅಂಕುಶನಹಳ್ಳಿ ಎಂಬ ಹೆಸರು ಬಂತು"[19] ಎಂದು ಹೇಳಲಾಗಿದೆ.

13) ಅಂಬಾಡಹಳ್ಳಿ : ಸಸ್ಯವಾಚಕ

ಅಂಬಾಡ+ದ+ಹಳ್ಳಿ = ಅಂಬಾಡದಹಳ್ಳಿ > ಅಂಬಾಡಹಳ್ಳಿ

ಅಂಬಾಡ = ಅಂಬಟೆ = ಒಂದು ಬಗೆಯ ಹುಳಿಯಾದ ಕಾಯಿ

ಅಮಟೆ > ಅಂಬಟೆ > ಅಂಬಡೆ > ಅಂಬಾಡೆ

ಅಮಟೆ = ಅಮ್ಬಾಡೆ, A hog- plum[20]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ಅಮಟೆ ಕಾಯಿಯನ್ನು ಬೆಳೆಯುತ್ತಿದ್ದ ಸ್ಥಳವಾಗಿದ್ದರಿಂದ ಅಂಬಾಡಹಳ್ಳಿ ಎಂಬ ಹೆಸರು ಬಂದಿದೆ. ಆದರೆ ಈಗ ಈ ಸ್ಥಳದಲ್ಲಿ ಅಮಟೆಕಾಯಿ ಬೆಳೆಯುವುದನ್ನು ನಿಲ್ಲಿಸಿ, ತುಳಸಿಯನ್ನು ಹೆಚ್ಚಾಗಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಈ ಸ್ಥಳದಲ್ಲಿ ವಾಸವಾಗಿರುವ ಜನರ ವೃತ್ತಿಯು ತುಳಸಿ ವ್ಯಾಪಾರಾಗಿರುವುದು ಕಂಡುಬರುತ್ತದೆ. ನಿರ್ದಿಷ್ಟ 'ಅಂಬಾಡ' ಎಂಬ ಪದಕ್ಕೆ 'ಹಳ್ಳಿ' ಎಂಬ ವಾರ್ಗಿಕ ಪದಸೇರಿ 'ಅಂಬಾಡಹಳ್ಳಿ' ಎಂಬ ಸ್ಥಳನಾಮವಾಗಿದೆ.

14) ಇಗ್ಗಲೂರು : ವಸತಿವಾಚಕ

ನಿಷ್ಪತ್ತಿ : 1. ಇಗ್ಗಲೂರು ಶಾಸನದಲ್ಲಿ ಉಲ್ಲೇಖಕೊಂಡಿದೆ.[21]

ಇಗ್ಗಲೂರು = ಇರ್ + ಕಲ್ಲು + ಊರು > ಇರ್ಗಲ್ಲೂರು > ಇಗ್ಗಲ್ಲೂರು >ಇಗ್ಗಲೂರು

ಇರ್ಗಲ್ಲು = ಎರಡು ಕಲ್ಲು

ಊರು = ಊಱು >ಊರು

ನೆಲಸು, ನಿಲ್ಲು, ಇರು

ನಿರ್ದಿಷ್ಟ 'ಇರ್ಗಲ್ಲು' ಪದವು ವಾರ್ಗಿಕ 'ಊರು' ಪದದೊಡನೆ ಸೇರಿ 'ಇರ್ಗಲ್ಲೂರು' ಸ್ಥಳನಾಮವಾಗಿದೆ. ಕಾಲಕ್ರಮೇಣ ವಿಜಾತೀಯ ಒತ್ತಾಕ್ಷರ 'ರ್'ಕಾರವು ಲೋಪವಾಗಿ ಸಜಾತೀಯ ಒತ್ತಾಕ್ಷರ 'ಗ'ಕಾರವು ಆಗಮವಾಗಿ 'ಇಗ್ಗಲೂರು' ಸ್ಥಳನಾಮರೂಪವಾಗಿದೆ.

"ಶೆಟ್ಟರು ಬಳೆ ವ್ಯಾಪಾರಕ್ಕಾಗಿ ಬಂದು ಶಿಂಷಾನದಿಯ ದಡದಲ್ಲಿ ವಿಶ್ರಾಂತಿ ಪಡೆಯುತ್ತಿದ್ದು, ಅಲ್ಲೇ ಇದ್ದ ಕಲ್ಲುಗಳನ್ನು ಜೋಡಿಸಿ ಒಲೆ ಮಾಡಿ ಅಡುಗೆ ಮಾಡಲು ಸಿದ್ದಪಡಿಸಿ ಒಣಸೌದೆಗಳನ್ನು ಇಟ್ಟು ಬೆಂಕಿ ಉರಿಸಿದರಂತೆ. ಸೌದೆ ಉರಿದು ಕೆಂಡವಾಗದೆ ಬರಿ ಕರಕಲು ಇದ್ದಲುಗಳಾಗುತ್ತಿದವಂತೆ. ಆಗ ಕಲ್ಲುಗಳನ್ನು

ಬೇರ್ಪಡಿಸಿ ನೋಡಿದಾಗ ಆ ಕಲ್ಲಿನಿಂದ ರಕ್ತ ಸುರಿಯುತ್ತಿದ್ದು, ಇದನ್ನು ನೋಡಿ ಭಯಭೀತರಾದ ವ್ಯಾಪಾರಿಗಳು ರಕ್ತ ಬರುತ್ತಿದ್ದ ಕಲ್ಲು ದೇವರ ಕಲ್ಲೆಂದು ಅದನ್ನು ಸ್ವಚ್ಛ ಮಾಡಿ ಪೂಜಿಸಿದ್ದರು. ಇದೇ ಸೋಮೇಶ್ವರದೇವರೆಂದು ಪ್ರಸಿದ್ಧಿ ಹೊಂದಿದೆ. ಈ ಕಲ್ಲುಗಳ ಕಾರಣದಿಂದ 'ಇಗ್ಗಲೂರು' ಎಂದು ಹೆಸರು ಬಂದಿತು."[22]

ನಿಷ್ಪತ್ತಿ : 2. ಹಿಗ್ಗಲಿ + ಊರು > ಹಿಗ್ಗಲೂರು > ಇಗ್ಗಲೂರು

ಹಿಗ್ಗ= Backwards and forwards

ಊರು = ಊಱು > ಊರು

= ನೆಲಸು, ನಿಲ್ಲು, ಊರು

ನಿರ್ದಿಷ್ಟ 'ಹಿಗ್ಗ' ಮತ್ತು ವಾರ್ಗಿಕ 'ಊರು' ಪದಗಳು ಸೇರಿ ಹಿಗ್ಗಲೂರು ಸ್ಥಳನಾಮವಾಗಿದೆ. 'ಹಿ' ಕಾರವು ಲೋಪವಾಗಿ 'ಇ' ಕಾರ ಆಗಮವಾಗಿ ಇಗ್ಗಲೂರು ರೂಪುಗೊಂಡಿದೆ. ಈ ಸ್ಥಳದ ಹಿಂದೆ ಮತ್ತು ಮುಂದೆ ನೀರು ಹರಿಯುತ್ತಿದ್ದು, ಮಧ್ಯೆ ಈ ಸ್ಥಳ ನೆಲೆಯಾಗಿದ್ದರಿಂದ ಇಗ್ಗಲೂರು ಎಂಬ ಹೆಸರು ಬಂದಿದೆ.

15) ಉಜ್ಜನಹಳ್ಳಿ : ವೃತ್ತಿವಾಚಕ

ಉಜ್ಜನಹಳ್ಳಿ = ಉಜ್ಜುಗ+ನ+ ಹಳ್ಳಿ > ಉಜ್ಜುಗನಹಳ್ಳಿ > ಉಜ್ಜಗನಹಳ್ಳಿ > ಉಜ್ಜನಹಳ್ಳಿ.

ಉಜ್ಜುಗ = ಕೆಲಸಗಾರ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಉಜ್ಜುಗ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಉಜ್ಜುಗನಹಳ್ಳಿ' ಸ್ಥಳನಾಮವಾಗಿದೆ. 'ಉ' ಕಾರ 'ಅ' ಕಾರವಾಗಿದೆ. 'ಗ' ಕಾರ ಲೋಪವಾಗಿ 'ನ' ಕಾರಾಗಮವಾಗಿ 'ಉಜ್ಜನಹಳ್ಳಿ' ಸ್ಥಳನಾಮರೂಪವಾಗಿದೆ. ಪಕ್ಕದಲ್ಲಿ ಇರುವ ಭೂಹಳ್ಳಿಯ ಬೇಸಾಯದ

ಕೆಲಸಗಾರರು ವಾಸವಾಗಿದ್ದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

16) **ಎಲೆತೋಟದಹಳ್ಳಿ : ಸಸ್ಯವಾಚಿ**

ಎಲೆ + ತೋಟ+ದ+ಹಳ್ಳಿ = ಎಲೆತೋಟದಹಳ್ಳಿ

ಎಲೆದೋಂಟ > ಎಲೆದೋಟ > ಎಲೆತೋಟ

ಎರೆ = Soil of a dark colour, black soil

= ಭೂವಿಶೇಷ, ಕ್ಷಿತಿ ಭೇದ, ಕೃಷ್ಣ ಮೃತ್ತಿಕೆ.[23]

= ಕಪ್ಪಾದ ಮಣ್ಣಿನ ಭೂಮಿ, ಎರೆಭೂಮಿ, ಜೇಡಿಮಣ್ಣು.

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಎಲೆತೋಟದ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ ಎಲೆತೋಟದಹಳ್ಳಿ ಎಂದಾಗಿದೆ. ಎರೆಯ ಮಣ್ಣಿನಿಂದ ಕೂಡಿದ್ದ ಸ್ಥಳವಾಗಿದ್ದು, ಇದು ವೀಳ್ಯೆದೆಲೆ ಬೆಳೆಯಲು ಯೋಗ್ಯವಾದ ಮಣ್ಣಾಗಿದೆ. ಹೀಗಾಗಿ ಇಲ್ಲಿ ಹೆಚ್ಚಾಗಿ ವೀಳ್ಯೆದೆಲೆ ಬೆಳೆಯುತ್ತಿದ್ದರಿಂದ 'ಎಲೆತೋಟದಹಳ್ಳಿ' ಎಂಬುದೇ ಸ್ಥಳನಾಮವಾಗಿ ಬಳಕೆಯಾಗಿದೆ.

17) ಎಲೆಹೊಸಹಳ್ಳಿ : ಸಸ್ಯವಾಚಕ

ಎಲೆಹೊಸಹಳ್ಳಿ = ಎಲೆ+ಹೊಸ+ಹಳ್ಳಿ

ಎಲೆಹೊಸಹಳ್ಳಿ = ಹಿಂದಿನ ಪದದ ನಿಷ್ಪತ್ತಿಯೇ ಅನ್ವಯಿಸುತ್ತದೆ.

ಹೊಸತು + ಹಳ್ಳಿ > ಹೊಸತು ಹಳ್ಳಿ > ಹೊಸಹಳ್ಳಿ

ಹೊಸದಾ + ಹಳ್ಳಿ > ಹೊಸದುಹಳ್ಳಿ > ಹೊಸಹಳ್ಳಿ

ಹೊಸದಾದ ನೆಲೆ ಎಂಬರ್ಥದಲ್ಲಿ 'ಹೊಸಹಳ್ಳಿ' ಸ್ಥಳನಾಮವಾಗಿದೆ. ವೀಳ್ಯೆದೆಲೆ ಬೆಳೆವ ಹೊಸದಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮ ಕಂಡುಬರುತ್ತದೆ.

18) ಕದರಮಂಗಲ : ಸಸ್ಯವಾಚಕ

ಕದರಮಂಗಲ : ಕದರ + ಮಂಗಲ > ಕದರ ಮಂಗಲ

ಕದರ = ಬಿಳೀಕಾಚಿನಗಿಡ

= A white sort of mimosa [24]

ಮಂಗಲ = ಮಂಗಳ ಶುಭಕರವಾದ

= ಬ್ರಾಹ್ಮಣರಿಗೆ ಉಂಬಳಿಕೊಟ್ಟ ನೆಲೆ ಎಂಬರ್ಥ[25]

ನಿರ್ದಿಷ್ಟ 'ಕದರ' ಪದ, ವಾರ್ಗಿಕ 'ಮಂಗಲ' ಪದದೊಡನೆ ಸೇರಿ 'ಕದರಮಂಗಲ' ಎಂದಾಗಿದೆ.

19) ಕನ್ನಮಂಗಲ : ವ್ಯಕ್ತಿವಾಚಕ

ಕನ್ನಮಂಗಲ = ಕನ್ನ + ಮಂಗಲ

ಶಾಸನದಲ್ಲಿ ಕಂನಮಂಗಲ ಎಂದು ಉಕ್ತಗೊಂಡಿದೆ.[26]

'ಕಣ್ಣ' ಪದ ಸಂಸ್ಕೃತ 'ಕೃಷ್ಣ' ಪದದ ತದ್ಭವ ರೂಪ

ಕಣ್ಣ > ಕನ್ನ = ಕೃಷ್ಣ

ಮಂಗಲ = ಮಂಗಳ, ಶುಭಕರವಾದ

= ಬ್ರಾಹ್ಮಣರಿಗೆ ಉಂಬಳಿಕೊಟ್ಟ ನೆಲೆ ಎಂಬರ್ಥ

ಕನ್ನಮಂಗಳ ಸ್ಥಳನಾಮವು ನಿರ್ದಿಷ್ಟ 'ಕನ್ನ' ಪದ, ವಾರ್ಗಿಕ 'ಮಂಗಲ' ಪದದೊಡನೆ ಸೇರಿ 'ಕನ್ನಮಂಗಲ' ಎಂದಾಗಿದೆ.

ಕನ್ನ > ಕೃಷ್ಣ ಎಂಬ ವ್ಯಕ್ತಿಗೆ ಉಂಬಳಿಯಾಗಿ ಬಂದ ಸ್ಥಳವಾದುದರಿಂದ ಈ ಸ್ಥಳಕ್ಕೆ ಕನ್ನಮಂಗಲ ಎಂದು ಹೆಸರು ಬಂದಿದೆ.

20) ಕನ್ನಸಂದ್ರ : ವ್ಯಕ್ತಿವಾಚಕ

ಕನ್ನಸಂದ್ರ = ಕನ್ನ+ ನ + ಸಮುದ್ರ > ಕನ್ನನ ಸಮುದ್ರ > ಕನ್ನಸಮುದ್ರ > ಕನ್ನಸಂದ್ರ.

'ಕಣ್ಣ' ಪದ ಸಂಸ್ಕೃತ 'ಕೃಷ್ಣ' ಪದದ ತದ್ಭವ ರೂಪ.

ಕಣ್ಣ>ಕನ್ನ = ಕೃಷ್ಣ

ಸಂದ್ರ = ಸಮುದ್ರ

= ಜಲವಾಚಕ

ಕನ್ನಸಂದ್ರ ಸ್ಥಳನಾಮವು ನಿರ್ದಿಷ್ಟ 'ಕನ್ನ' ಪದ, ವಾರ್ಗಿಕ 'ಸಂದ್ರ' ಪದದೊಡನೆ ಸೇರಿ 'ಕನ್ನಸಂದ್ರ' ಎಂದಾಗಿದೆ. ಕನ್ನಸಂದ್ರವು ವ್ಯಕ್ತಿ ಮತ್ತು ಜಲವಾಚಕವಾಗಿ ಕಂಡುಬರುತ್ತದೆ.

21) ಕಲ್ಲಾಪುರ : ಶಿಲಾವಾಚಕ

ಕಲ್ಲಾಪುರ = ಕಲ್ಲ +ಪುರ

ಕಲ್ಲು = ಕಲ್ > ಕಲ್ಲು

= ಬಂಡೆ, ಶಿಲೆ, ಅರೆ

ದೇಶೀಯ ಪದ = ತಮಿಳು–ಕಲ್; ಮಲೆಯಾಳಂ–ಕಲ್; ತುಳು–ಕಲ್ಲು; ಕೊಡವ–ಕಲ್ಲೀ; ತೆಲಗು–ಕಲ್ಲು; ಬ್ರಾಹೂಈ–ಕಲ್[27]

ಪುರ = ಪಟ್ಟಣ, ನಗರ.

ನಿರ್ದಿಷ್ಟ 'ಕಲ್ಲು' ಪದ, ವಾರ್ಗಿಕ 'ಪುರ' ಪದದೊಡನೆ ಸೇರಿದಾಗ ಪದಾಂತ್ಯದ 'ಉ'ಕಾರ 'ಆ'ಕಾರವಾಗಿ 'ಕಲ್ಲಾಪುರ' ಎಂದಾಗಿದೆ. ಈ ಸ್ಥಳವು ಕಲ್ಲುಗಳಿಂದ ಕೂಡಿರುವುದರಿಂದ ಕಲ್ಲಾಪುರ ಎಂಬರ್ಥದಲ್ಲಿ ಈ ಸ್ಥಳನಾಮವಿದೆ.

22) ಕೃಷ್ಣಾಪುರ : ವ್ಯಕ್ತಿವಾಚಕ

ಕೃಷ್ಣಾಪುರ = ಕೃಷ್ಣ +ನ+ ಪುರ > ಕೃಷ್ಣನಪುರ > ಕೃಷ್ಣಾಪುರ

ಕೃಷ್ಣ = ಒಬ್ಬಾತನ ಹೆಸರು

ಪುರ = ಪಟ್ಟಣ, ನಗರ.

ನಿರ್ದಿಷ್ಟ 'ಕೃಷ್ಣ' ಪದ, ವಾರ್ಗಿಕ 'ಪುರ' ಪದದೊಡನೆ ಸೇರಿ 'ಕೃಷ್ಣಾಪುರ' ಎಂದಾಗಿದೆ. ಕೃಷ್ಣನೆಂಬ ವ್ಯಕ್ತಿ ನೆಲೆಯಾಗಿದ್ದ ಹಳ್ಳಿ, ಕೃಷ್ಣಾಪುರ ಎಂಬರ್ಥದಲ್ಲಿ ಈ ಸ್ಥಳನಾಮವಿದೆ.

23) ಕಾರೇಕೊಪ್ಪ : ಸಸ್ಯವಾಚಕ

ಕಾರೆಕೊಪ್ಪ = ಕಾರೆ + ಕೊಪ್ಪ > ಕಾರೆಕೊಪ್ಪ > ಕಾರೇಕೊಪ್ಪ

ಕಾರೆ = ಒಂದು ಬಗೆಯ ಹಣ್ಣು ಬಿಡುವ ಮುಳ್ಳಿನಗಿಡ

= ಕಾರೆಕಾಯಿಗಿಡ

ಕೊಪ್ಪ = ಕೊಪ್ಪಲು

ಕೊಪ್ಪಲು = ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಕಾರೇ' ಮತ್ತು ವಾರ್ಗಿಕ 'ಕೊಪ್ಪ' ಪದದೊಡನೆ ಸೇರಿ 'ಕಾರೇಕೊಪ್ಪ' ಸ್ಥಳನಾಮವಾಗಿದೆ. ಕಾರೆಕಾಯಿಗಿಡದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

24)ಕುಕ್ಕೂರು : ಸಸ್ಯವಾಚಕ

ಕುಕ್ಕೂರು = ಕುಕ್ಕ + ದ+ ಊರು > ಕುಕ್ಕದೂರು > ಕುಕ್ಕೂರು

ಶಾಸನದಲ್ಲಿ ಕುಕ್ಕು ಎಂದು ಬಂದಿದೆ[28]

ಕುಕ್ಕ = See, ಕಳ್ಳಕುಕ್ಕನ ಬಳ್ಳಿ [29]

ಊರು = ಊಱು > ಊರು

= ನೆಲೆಸು, ನಿಲ್ಲು, ಇರು.

ಕುಕ್ಕನ ಬಳ್ಳಿಗಳು ಹೇರಳವಾಗಿ ಬೆಳೆದಿದ್ದ ಸ್ಥಳದಲ್ಲಿ ಜನ ವಾಸ್ತವ್ಯ ಮಾಡಲು ತೊಡಗಿದಾಗ ಆ ಬಳ್ಳಿಯ ಹೆಸರನ್ನೇ ತಮ್ಮ ಸ್ಥಳಕ್ಕೂ ಅನ್ವಯಿಸಿದರು. ಹಾಗಾಗಿ ಈ ಸ್ಥಳವು ಕುಕ್ಕೂರು ಎಂದಾಗಿದೆ.

25)ಕೂಡ್ಲೂರು : ಜಲವಾಚಕ

ಚೋಳರ ಕಾಲದ ಶಾಸನದಲ್ಲಿ 'ರಾಜರಾಜ ಚರ್ತುರ್ವೇದಿ ಮಂಗಲಂ' ಎಂದಿದ್ದು, ಈಗ ಕೂಡ್ಲೂರು ಎಂದು ಪುನರ್ ನಾಮಕರಣಗೊಂಡ ಸ್ಥಳನಾಮ[30]

ನಿಷ್ಪತ್ತಿ : 1. ಕೂಡ್ಲೂರು = ಕೂಡಲ್ + ಊರು > ಕೂಡಲೂರು > ಕೂಡ್ಲೂರು.

ಕೂಡಲ್ = ಜೊತೆ, ಸಂಗಮ

ನದಿಗಳ ಸಂಗಮವಾಗುವ ಸ್ಥಳ

ಊರು = ಊಱು > ಊರು

= ನೆಲೆಸು, ನಿಲ್ಲು, ಇರು

ಎರಡು ನದಿಗಳು ಸಂಗಮದ ನೆಲೆ ಆಗಿದ್ದರಿಂದ 'ಕೂಡ್ಲೂರು' ಸ್ಥಳನಾಮವಾಗಿದೆ.

ನಿಷ್ಪತ್ತಿ :2. "ಗಂಗವಂಶದ ದೊರೆ ಭೂವಿಕ್ರಮ ರಾಜನ ಮಗ ಸಾರಂಗಧರನನ್ನು ಅಬ್ಬೂರಿನ ಗುಡ್ಡೆಯ ಮೇಲೆ ಅವನ ಅಂಗಾಂಗಳನ್ನು ಕತ್ತರಿಸಿದ ಕಾವಲು ಭಟರು, ಅವನ್ನೆಲ್ಲಾ ಕಣ್ವ ಹೊಳೆಯಲ್ಲಿ ಹಾಕಿದಾಗ ಹಾಗೆ ಹರಿದು ಬಂದ ಅಂಗಾಂಗಗಳು ಈ ಸ್ಥಳದಲ್ಲಿ ಕೂಡಿದವು. ಅದಕ್ಕೆ ಈ ಸ್ಥಳವು

ಕೂಡ್ಲೂರಾಯಿತು."[30]

ಎರಡು ನದಿಗಳ ಸಂಗಮದನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

26) ಕೂರ್ಣಗೆರೆ : ಜಲವಾಚಕ

ಕೂರ್ಣಗೆರೆ = ಕೂರುಮ + ಕೆ > ಕೂರುಮಕೆ > ಕೂರ್ಮಕೆ

ಕೂರ್ಣಕೆರೆ > ಕೂರ್ಣಗೆರೆ

ಕೂರ್ಮ > ಕುರುವು (ತದ್ಭವ) = ಆಮೆ.[31]

ಕೆರೆ = ಕೆಱೆ > ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

= ಆಮೆಯ ಆಕಾರದ ಕೆರೆ ಇರುವ ಸ್ಥಳವಾಗಿದ್ದರಿಂದ ಕೂರ್ಣಗೆರೆ ಎಂಬರ್ಥದಲ್ಲಿ ಈ ಸ್ಥಳನಾಮವಿದೆ.

27)ಕೆಳಗೆರೆ : ಜಲವಾಚಕ

ಕೆಳಗೆರೆ = ಕೆಳ + ಕೆರೆ

ಕೆಳಗೆ–ಮೇಲೆ ಇವುಗಳು ಮಾರ್ಗ ಸೂಚಕಗಳು

ಕೆಳಗೆ – ಕೆಳಗಿರುವ ಪ್ರದೇಶ

ಕೆರೆ = ಕೆಱೆ > ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

ನಿರ್ದಿಷ್ಟ 'ಕೆಳ' ಮತ್ತು ವಾರ್ಗಿಕ 'ಕೆರೆ' ಪದಗಳು ಸೇರಿದಾಗ 'ಕ' ಕಾರಕ್ಕೆ 'ಗ' ಕಾರಾದೇಶವಾಗಿ 'ಕೆಳಗೆರೆ' ಸ್ಥಳನಾಮವಾಗಿದೆ.

ಕೆರೆಯ ಕೆಳಗೆ ಇದ್ದ ನೆಲೆ ಎಂಬರ್ಥದಲ್ಲಿ 'ಕೆಳಗೆರೆ' ಸ್ಥಳನಾಮವಾಗಿದೆ.

28)ಕೊಂಡಾಪುರ : ಪ್ರಕೃತಿವಾಚಕ

ಕೊಂಡಾಪುರ = ಕೊಂಡ + ದ + ಪುರ > ಕೊಂಡದಪುರ > ಕೊಂಡಾಪುರ

ಕೊಂಡ = ಬೆಟ್ಟ, ದಿಣ್ಣೆ

ಪುರ = ಪಟ್ಟಣ, ನಗರ.

ನಿರ್ದಿಷ್ಟ 'ಕೊಂಡ' ಪದವು ವಾರ್ಗಿಕ 'ಪುರ' ಪದದೊಡನೆ ಸೇರಿದಾಗ 'ಅ'ಕಾರವು ದೀರ್ಘವಾಗಿ 'ಕೊಂಡಾಪುರ' ಎಂದಾಗಿದೆ. ಬೆಟ್ಟಗಳಿಂದ

ಆವೃತ್ತವಾದ ಸ್ಥಳ ಎಂಬರ್ಥದಲ್ಲಿ 'ಕೊಂಡಾಪುರ' ಎಂಬ ಸ್ಥಳನಾಮವಾಗಿದೆ.

29)ಕೋಡಂಬಳ್ಳಿ : ಪ್ರಕೃತಿವಾಚಕ

ಶಾಸನದಲ್ಲಿ ಕೋಡಂಬಳ್ಳಿ ಎಂದೇ ಉಕ್ತಗೊಂಡಿದೆ.[32]

ಕೋಡಂಬಳ್ಳಿ = ಕೋಡು + ಅಂಬು + ಹಳ್ಳಿ > ಕೋಡು ಅಂಬುಹಳ್ಳಿ > ಕೋಡಂಬಳ್ಳಿ

ಕೋಡು = The Peak of a hill, ಬೆಟ್ಟದ ಕೋಡು, ಕೋಡುಗಲ್ಲು[33]

ಅಂಬು = ಚೂಪಾದ ಆಯುಧ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ.

ನಿರ್ದಿಷ್ಟ 'ಕೋಡು' ಪದ, ವಾರ್ಗಿಕ ಪದ 'ಹಳ್ಳಿ' ಪದದೊಡನೆ ಸೇರಿದಾಗ 'ಹ' ಕಾರಕ್ಕೆ 'ಬ'ಕಾರವು ಆದೇಶವಾಗಿ ಬಂದು 'ಕೋಡಂಬಳ್ಳಿ' ಸ್ಥಳವಾಗಿದೆ. ಚೂಪಾದ ಬೆಟ್ಟ, ಗುಡ್ಡದಿಂದ ಆವೃತ್ತವಾದ ಸ್ಥಳ ಎಂಬುದಾಗಿದೆ.

30) ಕೋಡಿಪುರ : ಜಲವಾಚಕ

ಕೋಡಿಪುರ = ಕೋಡಿ +ಪುರ > ಕೋಡಿಪುರ

ಕೋಡಿ = A passage to carry off excess of water, the outlet of a tank

= ಕೊಡಗೋಡಿ[34]

= ಕೆರೆ ಕಟ್ಟೆಗಳಲ್ಲಿ ಹೆಚ್ಚಿನ ನೀರು ಹರಿದು ಹೋಗಲು ಮಾಡಿರುವ ದಾರಿ

= ಉಕ್ಕಿ ಹರಿಯುವ ನೀರು[35]

ಪುರ = ಪಟ್ಟಣ, ನಗರ

'ಕೋಡಿ' ಮತ್ತು 'ಪುರ' ಪದಗಳು ಸೇರಿ 'ಕೋಡಿಪುರ' ಸ್ಥಳನಾಮವಾಗಿದೆ. ಕೆರೆಯ ಕೊಂಡಿಯ ಬಳಿಯಲ್ಲಿದ್ದ ವಾಸ್ತವ್ಯದ ನೆಲೆ ಎಂಬರ್ಥದಲ್ಲಿ 'ಕೋಡಿಪುರ' ಸ್ಥಳನಾಮವಾಗಿದೆ.

31) ಕೋಡಿಹೊಸಹಳ್ಳಿ : ಜಲವಾಚಕ

ಕೋಡಿಹೊಸಹಳ್ಳಿ = ಕೋಡಿ + ಹೊಸ + ಹಳ್ಳಿ > ಕೋಡಿಹೊಸಹಳ್ಳಿ

ಕೋಡಿ = ಹಿಂದಿನ ಪದದ ನಿಷ್ಪತ್ತಿಯೇ ಅನ್ವಯಿಸುತ್ತದೆ.

ಹೊಸಹಳ್ಳಿ = ಹೊಸತು + ಹಳ್ಳಿ > ಹೊಸಹಳ್ಳಿ

ಹೊಸದಾದ ನೆಲೆ ಎಂಬರ್ಥ.

'ಕೋಡಿ' ಮತ್ತು 'ಹೊಸಹಳ್ಳಿ' ಪದಗಳು ಸೇರಿ 'ಕೋಡಿಹೊಸಹಳ್ಳಿ' ಸ್ಥಳನಾಮವಾಗಿದೆ. ಕೆರೆಯ ಕೊಂಡಿಯಲ್ಲಿ ಹೊಸದಾಗಿ ವಾಸ್ತವ್ಯ ಹೂಡಿದ ನೆಲೆ ಎಂಬರ್ಥದಲ್ಲಿ 'ಕೋಡಿಹೊಸಹಳ್ಳಿ' ಸ್ಥಳನಾಮವಾಗಿದೆ.

32) ಕೋಮನಹಳ್ಳಿ : ಜಲವಾಚಕ

ಕೋಮನಹಳ್ಳಿ = ಕೋಮ +ನ+ಹಳ್ಳಿ > ಕೋಮನಹಳ್ಳಿ

ಕೋಮ = A potter[36]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

'ಕೋಮ' ಮತ್ತು 'ಹಳ್ಳಿ' ಪದಗಳು ಕೂಡಿ ಪದವಾಗುವಾಗ 'ವ' ಕಾರದ ಬದಲಾಗಿ 'ಮ'ಕಾರ ಆಗಮವಾಗಿ 'ಕೋಮನಹಳ್ಳಿ' ಎಂದಾಗಿದೆ. ಕೇಶೀರಾಜನು ತನ್ನ ಶಬ್ದಮಣಿದರ್ಪಣದಲ್ಲಿ ಉಲ್ಲೇಖಿಸಿರುವ ವ >ಮ ಮಾದರಿಯಲ್ಲಿಯೇ ಈ ಅಕ್ಷರಪಲ್ಲಟ ಜರುಗಿದೆ. ಕೆರೆಯಕೊಂಡಿಯ ಬಳಿಯಲ್ಲಿ ವಾಸ್ತವ್ಯದ ನೆಲೆ ಎಂಬರ್ಥದಲ್ಲಿ 'ಕೋಮನಹಳ್ಳಿ' ಸ್ಥಳನಾಮವಾಗಿದೆ.

33) ಕೋಳೂರು : ವಸತಿವಾಚಕ

ಕೋಳೂರು = ಕೋಳ +ಊರು

ಕೋಳು = To become a Prey[37]

= ಅಂಚಿನ ಗ್ರಾಮ, ಕಡೆಯ ಪ್ರದೇಶ

ಊರು = ಊಱು > ಊರು

= ನೆಲಸು, ನಿಲ್ಲು, ಇರು.

ನಿರ್ದಿಷ್ಟ 'ಕೋಳು' ಮತ್ತು ವಾರ್ಗಿಕ 'ಊರು' ಪದಗಳು ಕೂಡಿ 'ಕೋಳೂರು' ಸ್ಥಳನಾಮವಾಗಿದೆ. ಕೋಳೂರು ಸ್ಥಳವು ಊರಿನ ಅಂಚಿನಗ್ರಾಮ, ಊರಿನ ಕಡೆಯ ಪ್ರದೇಶ ಎಂಬರ್ಥದಲ್ಲಿ 'ಕೋಳೂರು' ಸ್ಥಳನಾಮವಾಗಿದೆ.

34)ಗರಕಹಳ್ಳಿ : ಸಸ್ಯವಾಚಕ

ಗರಕಹಳ್ಳಿ = ಗರಿಖ + ಹಳ್ಳಿ = ಗರಿಖಹಳ್ಳಿ > ಗರುಕೆಹಳ್ಳಿ >ಗರಕಹಳ್ಳಿ.

ಶಾಸನದಲ್ಲಿ ಗರಿಖಹಳ್ಳಿ ಎಂಬ ಉಲ್ಲೇಖ ಕಂಡುಬರುತ್ತದೆ.[38]

ಗರಕ > ಗರ್ಕು– ಏರುತಗ್ಗಾಗಿರುವುದು, ಸಮತಲವಲ್ಲದ್ದು.

"ಶ್ರೀ ಸಿದ್ದೇಶ್ವರರು ಊರಿನ ಬೆಟ್ಟದಲ್ಲಿ ವಾಸವಿದ್ದು, ಅವರು ಗರಿಕೆ ರಸದಿಂದ ಔಷಧವನ್ನು ತಯಾರಿಸುತ್ತಾ ಸುತ್ತಲ ಊರಿನ ಜನರಿಗೆಲ್ಲರಿಗೂ ಔಷಧಿಯನ್ನು ನೀಡುತ್ತಿದ್ದರು. ಆದ್ದರಿಂದ 'ಗರಕೆಹಳ್ಳಿ'ಯೆಂದು ಕರೆಯಲಾಗುತ್ತಿದೆ."[39]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಗರಕ' ಪದ, ವಾರ್ಗಿಕ ಪದ 'ಹಳ್ಳಿ' ಪದದೊಡನೆ ಸೇರಿದಾಗ 'ಗರಕಹಳ್ಳಿ' ಆಗಿದೆ. ಇಲ್ಲಿ 'ಕೆ' ಕಾರಕ್ಕೆ ಬದಲಾಗಿ 'ಕ' ಕಾರವು ಆಗಮವಾಗಿದೆ.

35)ಗುಡ್ಡೆಹೊಸೂರು : ನಿಸರ್ಗವಾಚಕ

ಗುಡ್ಡೆಹೊಸೂರು = ಗುಡ್ಡೆ + ಹೊಸ + ಊರು

ಗುಡ್ಡೆ = ಬೆಟ್ಟ, ಎತ್ತರವಾದ ಸ್ಥಳ

ಹೊಸೂರು = ಹೊಸ + ಊರು

ಹೊಸ = ಪೊಸ > ಹೊಸ

= ನವೀನ, ಹೊಸದು

ಊರು = ಚಿಕ್ಕ ಗ್ರಾಮ, ಹಳ್ಳಿ

'ಹೊಸ' ಮತ್ತು 'ಊರು' ಪದಗಳು ಸೇರಿ 'ಹೊಸೂರು' ನಾಮವಾಚಕವಾಗಿದೆ. ಹಳೆಯ ಊರಿನಿಂದ ಬಂದು ಹೊಸದಾಗಿ ನೆಲೆಯಾದ ಸ್ಥಳಕ್ಕೆ 'ಹೊಸೂರು' ಎಂದು ಕರೆಯಲಾಗುತ್ತದೆ. ಗುಡ್ಡ,

ಬೆಟ್ಟದ ಕೆಳಗೆ ಹೊಸದಾಗಿ ಬಂದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

36)ಗೆಂಡೇಮಡು : ಪ್ರಾಣಿವಾಚಕ

ಗೆಂಡೇಮಡು = ಗೆಂಡೆ + ಮಡು > ಗೆಂಡೆ ಮಡು

ಗೆಣ್ಡೆ = A sort of fish, ಗೆಣ್ಡೆ ಮೀನ್[40]

ಮಡು = ಮಡವು > ಮಡುವು > ಮಡುಹು

= Deep water: a deep place in a river, a pool[41]

ನಿರ್ದಿಷ್ಟ 'ಗೆಂಡೆ' ಪದವು ವಾರ್ಗಿಕ 'ಮಡು' ಪದದೊಡನೆ ಸೇರಿ 'ಗೆಂಡೇಮಡು' ಸ್ಥಳವಾಗಿದೆ. ಮೀನನ್ನು ಸಾಕುತ್ತಿದ್ದ ಸ್ಥಳ ಎಂಬರ್ಥದಲ್ಲಿ ಈ ಸ್ಥಳವಾಗಿದೆ.

37)ಗೋವಿಂದನಹಳ್ಳಿ : ವ್ಯಕ್ತಿವಾಚಕ

ಗೋವಿಂದನಹಳ್ಳಿ = ಗೋವಿಂದ + ನ+ ಹಳ್ಳಿ > ಗೋವಿಂದನಹಳ್ಳಿ

ಗೋವಿನ್ದ = ಕೃಷ್ಣ, Krishna[42]

= ಗೋವುಗಳನ್ನು ಸಾಕುತ್ತಿರುವಂತಹ ಗೊಲ್ಲ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಗೋವಿಂದ' ಪದವು ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಗೋವಿಂದನಹಳ್ಳಿ' ಸ್ಥಳವಾಗಿದೆ. ಗೋವಿಂದ ಎಂಬ ವ್ಯಕ್ತಿಯು ಕಟ್ಟಿದಂತಹ ಸ್ಥಳ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

38)ಗೌಡಗೆರೆ : ಅಧಿಕಾರವಾಚಕ

ಗೌಡಗೆರೆ = ಗೌಡ + ಕೇರಿ > ಗೌಡಕೇರಿ > ಗೌಡಗೇರಿ > ಗೌಡಗೆರಿ > ಗೌಡಗೆರೆ

ಗೌಡ = ಗಾಮುಂಡ > ಗಾವುಂಡ > ಗಾವುಡ > ಗಾವಡ > ಗೌಡ

= ಊರಿನ ಹಿರಿಯ, ಊರಿನ ಮುಖ್ಯಸ್ಥ.

= ಯಜಮಾನ.

ಕೇರಿ = ಬೀದಿ, ಮನೆಗಳ ಸಾಲುಗಳ ನಡುವಿನ ಬೀದಿ

= ಊರು, ಊರಿನ ಭಾಗ.

'ಗೌಡಗೆರೆ' ಸ್ಥಳನಾಮದಲ್ಲಿ 'ಗೌಡ' ನಿರ್ದಿಷ್ಟವಾದರೆ, 'ಕೇರಿ' ವಾರ್ಗಿಕ ಪದವಾಗಿದೆ. ಈ ಎರಡು ಪದಗಳು ಸೇರುವಾಗ 'ಕ' ಕಾರಕ್ಕೆ 'ಗ' ಕಾರಾದೇಶವಾಗಿ 'ಗೌಡಗೇರಿ' ಎಂದಾಗಿದೆ. ಗೌಡಗೇರಿ ಪದ ಉಚ್ಚಾರಣೆಯ ಗತಿಯಲ್ಲಿ 'ಗೇರಿ' ಪದದಲ್ಲಿನ 'ಏ' ಕಾರ ದೀರ್ಘಸ್ವರ ಹ್ರಸ್ವವಾಗಿದೆ. ಹಾಗೂ ಪದಾಂತ್ಯದ 'ಇ' ಕಾರ 'ಎ' ಕಾರ ಆಗುವುದರಿಂದ 'ಗೌಡಗೆರೆ' ಸ್ಥಳನಾಮರೂಪವಾಗಿದೆ. 'ಗೌಡಗೆರೆ', ಗೌಡರ ಬೀದಿ ಅಥವಾ ಗೌಡನ ಬೀದಿ ಎಂಬರ್ಥದ ಸ್ಥಳನಾಮವಾಗುತ್ತದೆ.

39)ಚಕ್ಕಲೂರು : ಸಸ್ಯವಾಚಕ

ಶಾಸನದಲ್ಲಿ ಚಕ್ಕಲೂರು ಎಂಬ ಉಲ್ಲೇಖ ಕಂಡುಬರುತ್ತದೆ[43]

ಚಕ್ಕಲೂರು = ಚಕ್ಕಳ + ಊರು > ಚಕ್ಕಳೂರು > ಚಕ್ಕಲೂರು

ಚಕ್ಕಳ = A small cot or oblong low couch of came-work.

= ಬಿದಿರ ಚಕ್ಕಳ[44]

ಊರು = ಊಱು > ಊರು

= ನೆಲೆಸು, ನಿಲ್ಲು, ಇರು.

ನಿರ್ದಿಷ್ಟ 'ಚಕ್ಕಳ' ಪದದೊಡನೆ ವಾರ್ಗಿಕ 'ಊರು' ಪದ ಸೇರಿದಾಗ 'ಚಕ್ಕಳೂರು' ಆಗಿದೆ. ಇಲ್ಲಿ 'ಳ' ಕಾರದ ಬದಲಾಗಿ 'ಲ' ಕಾರ ಆದೇಶವಾಗಿ 'ಚಕ್ಕಲೂರು' ಎಂದಾಗಿದೆ. ಬಿದಿರಿನ ಮರಗಳು ಅಧಿಕವಾಗಿದ್ದ ಸ್ಥಳದಲ್ಲಿದ್ದ ವಾಸ್ತವ್ಯ ಚಕ್ಕಲೂರುವಾಗಿದೆ.

40) ಚಕ್ಕೆರೆ : ಸಸ್ಯವಾಚಕ

ಶಾಸನದಲ್ಲಿ 'ಚಕ್ಕೆ' ಎಂಬ ಉಲ್ಲೇಖ ಕಂಡುಬರುತ್ತದೆ.[45]

ಚಕ್ಕೆರೆ = ಚಕ್ಕೆ + ಕೆರೆ > ಚಕ್ಕೆರೆ

ಚಕ್ಕೆ = ಚೆಕ್ಕೆ, A chip of wood

= ಚಕ್ಕೆಗಲ್ಲು–ಕಲ್ಲು[46]

ಕೆರೆ = ಕೆಱೆ > ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

ಚಕ್ಕೆ ಕಲ್ಲಿನ ಪ್ರದೇಶದ ಕೆರೆಯ ಬಳಿಯ ನೆಲೆ ಎಂಬರ್ಥದಲ್ಲಿ 'ಚಕ್ಕೆರೆ' ಸ್ಥಳನಾಮವಾಗಿದೆ. ನಿರ್ದಿಷ್ಟ 'ಚಕ್ಕೆ' ಪದವು ವಾರ್ಗಿಕ 'ಕೆರೆ' ಪದದೊಡನೆ ಸೇರಿ 'ಚಕ್ಕೆರೆ' ಸ್ಥಳವಾಗಿದೆ.

41) ಚನ್ನಪಟ್ಟಣ : ವಸ್ತುವಾಚಕ

ಶಾಸನದಲ್ಲಿ 'ಚಂನಪಟ್ಟಣ' ಎಂಬ ಉಲ್ಲೇಖ ಕಂಡುಬರುತ್ತದೆ. [47]

ಚನ್ನಪಟ್ಟಣ = ಚಂನ + ಪಟ್ಟಣ > ಚಂನಪಟ್ಟಣ > ಚಂದಪಟ್ಟಣ > ಚಿನ್ನಂಪಟ್ಟಣ > ಚಿನ್ನಾರಿಪಟ್ಟಣ >ಚೆನ್ನಾರಿಪಟ್ಟಣ>ಚೆನ್ನಪಟ್ಟಣ> ಚನ್ನಪಟ್ಟಣ

ಚನ್ನ = A beauty[48]

ಪಟ್ಟಣ = ಪತ್ತಿನ > ಪಟ್ಟಣ

= ನಗರ, ಶಹರ ಎಂಬರ್ಥಗಳಿವೆ.

= ಎಂ.ಎಂ.ಕಲಬುರ್ಗಿ ಅವರು " ಪ್ರಾಚೀನ ಕಾಲದಲ್ಲಿ ಯಾವುದಾದರೂ ಗ್ರಾಮದಲ್ಲಿ ಸಂತೆ ನಡೆಯುತ್ತಿದ್ದರೆ ಪಟ್ಟಣ ಎನಿಸಿಕೊಳ್ಳುತ್ತಿತ್ತು. ಕೆಲವು ಸಲ ಸಂತೆ ಕಟ್ಟಿಸಿ, ಗ್ರಾಮವನ್ನೇ ಪಟ್ಟಣವನ್ನಾಗಿ ಪರಿವರ್ತಿಸುತ್ತಿದ್ದರು. ಹೀಗೆ ಪೇಟೆ, ಪಟ್ಟಣಗಳನ್ನು ಕಟ್ಟಿಸಿ ಸಂತೆ ಕೂಡಿಸುವುದರಿಂದ ರಾಜ್ಯದ ಆದಾಯ, ಉದ್ಯೋಗ ಅವಕಾಶ, ಸಾರಿಗೆ, ಸಂಪರ್ಕ, ಜೀವನ ಮಟ್ಟ ಉನ್ನತ ಸ್ಥಿತಿಗೇರುತ್ತಿತ್ತು. ಗ್ರಾಮದ ಹಿರಿಯ ಹಾಗೂ ಪ್ರಮುಖ ಆಡಳಿತಾಧಿಕಾರಿಗಳಾದ ಗೌಡ, ಪ್ರಭುಗಳು ಪಟ್ಟಣ ಕಟ್ಟಿಸುವುದರಲ್ಲಿ ಆಸಕ್ತಿ ತೋರಿಸುತ್ತಿದ್ದರು. ಈ ಪಟ್ಟಣ ಅಂದರೆ ಸಂತೆ ನೆರೆಯಿಸುವ ವ್ಯವಸ್ಥೆ ನೋಡಿಕೊಳ್ಳುತಿದ್ದರು ಪಟ್ಟಣಶೆಟ್ಟಿಗಳು. ಇದರಿಂದಾಗಿಯೇ 'ಸೆಟ್ಟಿ ಸಿಂಗಾರ ಆಗೋದರಲ್ಲಿ ಪಟ್ಟಣ ಹಾಳಾಯಿತು'; 'ಸೆಟ್ಟಿ ಇಳಿದಲ್ಲಿ ಪಟ್ಟಣ' ಎಂಬ ಗಾದೆ ಮಾತುಗಳು ಹುಟ್ಟಿಕೊಂಡಿವೆ. ಆದರೆ ಕಾಲಕ್ರಮದಲ್ಲಿ ಪಟ್ಟಣವೆಂಬುದೂ ಸಾಮಾನ್ಯ ವಾರ್ಗಿಕವಾಗಿ ಬಳಕೆಯಾಗತೊಡಗಿತೆಂದು ತೋರುತ್ತದೆ."[49] ಎಂದು ಅಭಿಪ್ರಾಯಪಡುತ್ತಾರೆ. ನಿರ್ದಿಷ್ಟ 'ಚನ್ನ' ಪದದೊಡನೆ ವಾರ್ಗಿಕ

'ಪಟ್ಟಣ' ಪದ ಸೇರಿ 'ಚನ್ನಪಟ್ಟಣ' ಸ್ಥಳನಾಮವಾಗಿದೆ. ಚಂದವಾದ ಗೊಂಬೆಯನ್ನು ಮಾರಾಟ ಮಾಡುತ್ತಿದ್ದ ಸ್ಥಳ ಎಂಬರ್ಥವಾಗಿದೆ.

42)ಚಿಕ್ಕೇನಹಳ್ಳಿ : ವ್ಯಕ್ತಿವಾಚಕ

ಚಿಕ್ಕೇನಹಳ್ಳಿ = ಚಿಕ್ಕ + ನ + ಹಳ್ಳಿ > ಚಿಕ್ಕನಹಳ್ಳಿ > ಚಿಕ್ಕೇನಹಳ್ಳಿ

ಚಿಕ್ಕ = ಒಬ್ಬಾತನ ಹೆಸರು

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಚಿಕ್ಕ' ಪದವು ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಚಿಕ್ಕೇನಹಳ್ಳಿ' ಸ್ಥಳವಾಗಿದೆ. ಚಿಕ್ಕ ಎಂಬ ವ್ಯಕ್ತಿಯು ಕಟ್ಟಿದಂತಹ ಸ್ಥಳ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

43)ಚಿಕ್ಕಮಳೂರು : ಪ್ರಮಾಣವಾಚಕ

ಚಿಕ್ಕಮಳೂರು = ಚಿಕ್ಕ + ಮೊಳ + ಊರು

ಚಿಕ್ಕ = ಕಿರಿದಾದ ಜಾಗ

ಮಳೂರು = ಮರಳೂರು > ಮಳಲೂರು > ಮಳೂರು

ಊರು = ಊಱು > ಊರು

= ನೆಲಸು, ನಿಲ್ಲು, ಇರು

ಮರಳು ಹೆಚ್ಚಾಗಿ ದೊರೆಯುತ್ತಿದ್ದ ಸ್ಥಳ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ. ನಿರ್ದಿಷ್ಟ 'ಚಿಕ್ಕ' ಪದವು ವಾರ್ಗಿಕ 'ಮಳೂರು' ಪದದೊಡನೆ ಸೇರಿ 'ಚಿಕ್ಕಮಳೂರು' ಸ್ಥಳವಾಗಿದೆ.

44)ತಗಚಗೆರೆ : ಸಸ್ಯವಾಚಕ

ತಗಚಗೆರೆ = ತಗಚ + ಕೆರೆ > ತಗಚೆಕೆರೆ > ತಗಚೆಗೆರೆ > ತಗಚಗೆರೆ

ತಗಚೆ = The Indian mulberry tree[50]

= ಹಿಪ್ಪನೇರಳೆ ಗಿಡ.

ಗೆರೆ = ಕೇರಿ > ಗೆರೆ

= ಈ ವಾರ್ಗಿಕವು ಊರು, ಊರಿನ ಭಾಗ ಎಂಬರ್ಥವನ್ನು

ಕೊಡುತ್ತದೆ. ನಿರ್ದಿಷ್ಟ 'ತಗಚ' ಪದವು ವಾರ್ಗಿಕ 'ಗೆರೆ' ಪದದೊಡನೆ ಸೇರಿ 'ತಗಚಗೆರೆ' ಸ್ಥಳವಾಗಿದೆ. ಹಿಪ್ಪನೇರಳೆ ಗಿಡವನ್ನು ಹೆಚ್ಚಾಗಿ ಬೆಳೆಯುತ್ತಿದ್ದ ಸ್ಥಳ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

45) ತಟ್ಟೇಕೆರೆ : ಸಸ್ಯವಾಚಕ

ತಟ್ಟೇಕೆರೆ = ತಟ್ಟೆ+ ಕೆರೆ > ತಟ್ಟೆಕೆರೆ > ತಟ್ಟೇಕೆರೆ

ತಟ್ಟೆ = A thick bamboo, or an area palm stem.[51]

= ಬಿದಿರು

ಕೆರೆ = ಕೆಱೆ > ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ.

ನೀರಿನ ಹರಿವಿದ್ದು ಅದರ ದಡದಲ್ಲಿ ಬಿದಿರು ಬೆಳೆದಿರುವ ಪ್ರದೇಶ. ನಿರ್ದಿಷ್ಟ 'ತಟ್ಟೆ' ಪದವು ವಾರ್ಗಿಕ 'ಕೆರೆ' ಪದದೊಡನೆ ಸೇರಿ 'ತಟ್ಟೇಕೆರೆ' ಸ್ಥಳವಾಗಿದೆ. ಬಿದಿರನ್ನು ಬೆಳೆಯುತ್ತಿದ್ದ ಸ್ಥಳ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

46) ತೂಬಿನಕೆರೆ : ಜಲವಾಚಕ

ತೂಬಿನಕೆರೆ = ತೂಬು + ಇನ + ಕೆರೆ > ತೂಬುನಕೆರೆ > ತೂಬಿನಕೆರೆ

ತೂಬೂ = The nave of a wheel, the sluice, of a bank[52]

ಕೆರೆ = ಕೆಱೆ > ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ ನಿರ್ದಿಷ್ಟ 'ತೂಬೂ' ಪದವು ವಾರ್ಗಿಕ 'ಕೆರೆ' ಪದದೊಡನೆ ಸೇರಿ 'ತೂಬಿನಕೆರೆ' ಸ್ಥಳವಾಗಿದೆ. ತೂಬೂ ಇರುವ ಕೆರೆಯ ಸನಿಹದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

47) ತೊರೆಹೊಸೂರು : ಜಲವಾಚಕ

ತೊರೆಹೊಸೂರು = ತೊರೆ + ಹೊಸ + ಊರು > ತೊರೆಹೊಸೂರು

ತೋರೆ > ತೊರೆ

ತೊರೆ = A river[53]

= ನದಿ, ಹೊಳೆ.

ಹೊಸೂರು = ಹೊಸ + ಊರು

ಹೊಸ = ಪೊಸ > ಹೊಸ

= ನವೀನ, ಹೊಸದು

ಊರು = ಚಿಕ್ಕಗ್ರಾಮ, ಹಳ್ಳಿ

'ಹೊಸ' ಮತ್ತು 'ಊರು' ಪದಗಳು ಸೇರಿ 'ಹೊಸೂರು' ನಾಮವಾಚಕವಾಗಿದೆ.

ಹಳೆಯ ಊರಿನಿಂದ ಬಂದು ಹೊಸದಾಗಿ ನೆಲೆಯಾದ ಸ್ಥಳಕ್ಕೆ 'ಹೊಸೂರು' ಎಂದು ಕರೆಯಲಾಗುತ್ತದೆ. ನದಿ, ಹೊಳೆ, ತೊರೆಯ ಹತ್ತಿರ ಹೊಸದಾಗಿ ನಿರ್ಮಾಣವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

48)ದಶವಾರ : ವ್ಯಕ್ತಿವಾಚಕ

ನಿಷ್ಪತ್ತಿ : 1. ದಶವಾರ = ದಾಸ + ವಾರ > ದಾಸವಾರ > ದಸವಾರ > ದಶವಾರ

ದಾಸವಾರ > ದಸವಾರ = ದಾಸ + ಪುರ

ದಾಸ = ಭಕ್ತ, ಭೃತ್ಯ, ಸೇವಕ

ಪುರ = ವುರ > ವರ > ವಾರ

ನಿರ್ದಿಷ್ಟ 'ದಾಸ' ಪದದೊಡನೆ ವಾರ್ಗಿಕ 'ವಾರ' ಪದ ಸೇರಿ 'ದಾಸವಾರ' ಪದವಾಗಿದೆ. 'ಸ' ಕಾರದ ಬದಲಿಗೆ 'ಶ' ಕಾರವು ಆಗಮವಾಗಿ 'ದಶವಾರ' ಎಂಬ ಪದವಾಗಿದೆ. ಸೇವಕರು, ಭಕ್ತರು, ನೆಲೆಸಿದ ಸ್ಥಳ ಎಂಬರ್ಥ ಕೊಡುತ್ತದೆ.

ನಿಷ್ಪತ್ತಿ : 2. ದಶವರಹ > ದಶವರಹ > ದಶವಾರ

ಜಗದೇವರಾಯನು ಮಗಳಿಗೆ ಉಡುಗೊರೆಯಾಗಿ ದಶವರಹವನ್ನು ಬಳುವಳಿಯಾಗಿ ನೀಡಿದನಂತೆ. ಅಂದಿನಿಂದ ಈ ಪ್ರಾಂತ್ಯಕ್ಕೆ ದಶವರಹ ಎಂದು ಹೆಸರು ಬಂದಿದೆ.[54]

49)ದ್ಯಾವಪಟ್ಣ : ವ್ಯಕ್ತಿವಾಚಕ

ದ್ಯಾವಪಟ್ಣ = ದ್ಯಾವ + ಪಟ್ಟಣ

ದ್ಯಾವ = ದೇವ = ಒಬ್ಬಾತನ ಹೆಸರು

ಪಟ್ಟಣ = ಪತ್ತನ > ಪಟ್ಟಣ

= ನಗರ, ಶಹರ ಎಂಬರ್ಥಗಳಿವೆ.

ನಿರ್ದಿಷ್ಟ 'ದೇವ' ಪದವು ವಾರ್ಗಿಕ 'ಪಟ್ಟಣ' ಪದದೊಡನೆ ಸೇರಿ 'ದೇವಪಟ್ಟಣ' ಸ್ಥಳನಾಮವಾಗಿದೆ. ದೇವ > ದ್ಯಾವ ರೂಪವಾಗಿ, ದ್ಯಾವಪಟ್ಟಣ ಎಂದಾಗಿದೆ. ತ್ವರಿತವಾಗಿ ಉಚ್ಛರಿಸುವಾಗ ಪದಾದಿ ಧ್ವನಿ ದೀರ್ಘವಾಗಿ 'ದ್ಯಾವಪಟ್ಣ' ರೂಪವಾಗಿದೆ.

50)ದೇವರಹೊಸಹಳ್ಳಿ : ದೈವವಾಚಕ

ದೇವರಹೊಸಹಳ್ಳಿ = ದೇವರು+ಹೊಸ+ಹಳ್ಳಿ> ದೇವರುಹೊಸಹಳ್ಳಿ > ದೇವರಹೊಸಹಳ್ಳಿ

ದೇವರು = ದೇವ + ಅರ್ > ದೇವರ್ > ದೇವರು

ದೇವ = ದೇವಲೋಕಕ್ಕೆ ಸೇರಿದ, ಪ್ರಕಾಶಿಸುವ

= ದೇವಲೋಕದಲ್ಲಿ ವಾಸಿಸುವವನು.

ಅರ್ = ಬಹುವಚನ ಪ್ರತ್ಯಯ

ದೇವರು= ಪರಮಾತ್ಮ, ಭಗವಂತ

= ರಾಜ ಗುರು ಮುಂತಾದ ಹಿರಿಯರನ್ನು ಗೌರವದಿಂದ ಕರೆಯುವ ಮಾತು.[55]

= ದೇವತೆ

ಹೊಸ = ಹೊಸತು

ಹಳ್ಳಿ = ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ದೇವರು' ಪದ, ವಾರ್ಗಿಕ 'ಹೊಸಹಳ್ಳಿ' ಪದದೊಡನೆ ಸೇರಿ ಉಚ್ಚಾರಣೆಗೊಳ್ಳುವಾಗ, ದೇವರು ಪದಾಂತ್ಯದ 'ಉ' ಕಾರ ಲೋಪವಾಗಿ 'ದೇವರಹೊಸಹಳ್ಳಿ' ಸ್ಥಳನಾಮರೂಪವಾಗಿದೆ. ದೇವರ ಹೊಸಹಳ್ಳಿಯು ವೈಷ್ಣವ ಕ್ಷೇತ್ರವಾಗಿದ್ದು ವಿಜಯನಗರ ಕಾಲದಲ್ಲಿ ನಿರ್ಮಾಣವಾದ ದೇವಸ್ಥಾನವೆಂದು ಹೇಳುವುದಕ್ಕೆ

ದೇವಸ್ಥಾನದ ಕಂಬದ ಮೇಲೆ ವಿಜಯನಗರ ರಾಜಲಾಂಛನವನ್ನು ಕಾಣಬಹುದಾಗಿದೆ.[56] ವಿಜಯನಗರದ ದೇವಸ್ಥಾನ ನೆಲೆನಿಂತ ಸ್ಥಳದಲ್ಲಿ ಹೊಸದಾಗಿ ನಿರ್ಮಾಣವಾದ ಹಳ್ಳಿ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

51) ದೊಡ್ಡನಹಳ್ಳಿ : ವ್ಯಕ್ತಿವಾಚಕ

ದೊಡ್ಡನಹಳ್ಳಿ = ದೊಡ್ಡ + ನ + ಹಳ್ಳಿ > ದೊಡ್ಡನಹಳ್ಳಿ

ದೊಡ್ಡ = ಉಪ ಆಕೃತಿಮ

= ಗಾತ್ರದಲ್ಲಿ ಹಿರಿದಾದ, ದಪ್ಪವಾದ

= ವಿಸ್ತಾರವಾದ, ವಿಶಾಲವಾದ, ಅಗಲವಾದ, ಮುಖ್ಯವಾದ.

ದೇಶೀಯಪದ = ತಮಿಳು–ತೊಟ್ಟ; ತುಳು–ದೊಡ್ಡ, ದೊಡ್ಡು; ತೆಲಗು–ದೊಡ್ಡ; ಕೊಡವ–ದೊಡ್[57]

ನ = ನಿರ್ದಿಷ್ಟ ಕೊನೆಯಲ್ಲಿ 'ನ' ಇದ್ದರೆ ಅದು ವ್ಯಕ್ತಿವಾಚಕ ಆಗಿರುತ್ತದೆ.[58]

ಹಳ್ಳಿ = ಚಿಕ್ಕ ಊರು ಗ್ರಾಮ

ನಿರ್ದಿಷ್ಟ 'ದೊಡ್ಡ' ಪದದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ 'ದೊಡ್ಡನಹಳ್ಳಿ' ಸ್ಥಳನಾಮವಾಗಿದೆ. ದೊಡ್ಡಣ್ಣ ಎಂಬುವರು ಊರಿನ ಹಿರಿಯ ವ್ಯಕ್ತಿಯಾಗಿ ಪ್ರಧಾನರಾಗಿದ್ದು ಅವರ ಹೆಸರಿನಲ್ಲಿ ನಿರ್ಮಾಣವಾದ ಸ್ಥಳನಾಮವಾಗಿದೆ.

52)ದೊಡ್ಡಮಳೂರು : ಪ್ರಮಾಣವಾಚಕ

ದೊಡ್ಡಮಳೂರು = ದೊಡ್ಡ + ಮೊಳ + ಊರು

ಚಿಕ್ಕಮಳೂರಿನ ನಿಷ್ಪತ್ತಿ ದೊಡ್ಡಮಳೂರಿಗೂ ಅನ್ವಯಿಸುತ್ತದೆ. ಇದು ದೊಡ್ಡದಾದ ಪ್ರಮಾಣದಲ್ಲಿ ಮರಳು ಸಿಗುವ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

53) ನಾಗಪುರ : ವ್ಯಕ್ತಿವಾಚಕ

ನಾಗಪುರ = ನಾಗ + ಪುರ > ನಾಗಪುರ

ನಾಗ = ಒಬ್ಬಾತನ ಹೆಸರು

ಪುರ = ಪಟ್ಟಣ, ನಗರ

ನಿರ್ದಿಷ್ಟ 'ನಾಗ' ಪದದೊಡನೆ ವಾರ್ಗಿಕ 'ಪುರ' ಪದ ಸೇರಿ 'ನಾಗಪುರ' ಸ್ಥಳನಾಮವಾಗಿದೆ. ನಾಗಣ್ಣ ಎಂಬ ವ್ಯಕ್ತಿಯಿಂದ ನಿರ್ಮಾಣವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

54) ನಾಗವಾರ : ದೈವವಾಚಕ

ನಾಗವಾರ = ನಾಗ + ವರ = ನಾಗವರ > ನಾಗಾವರ > ನಾಗಾವಾರ

ನಾಗ = ಹಾವು, ಸರ್ಪ

ವಾರ = ಪುರ

ಪುರ = ಪಟ್ಟಣ, ನಗರ.

ನಿರ್ದಿಷ್ಟ 'ನಾಗಾ' ಪದದೊಡನೆ ವಾರ್ಗಿಕ 'ವಾರ' ಪದ ಸೇರಿ 'ನಾಗಾವಾರ' ಸ್ಥಳನಾಮವಾಗಿದೆ. ಮಕ್ಕಳಿಲ್ಲದ ದಂಪತಿಗೆ ನಾಗರಶಾಸ್ತ್ರ ಪೂಜೆ ಮಾಡಿದಕ್ಕೆ ವರ ಫಲಿಸಿ ಗಂಡು ಮಗು ಹುಟ್ಟಿತಂತ್ತೆ. ಈ ನಾಗರವರರಿಂದ ಹುಟ್ಟಿದ ಸುದ್ದಿ ಸುತ್ತಲು ಹಬ್ಬಿ 'ನಾಗರವರ' ಎಂಬ ಸ್ಥಳನಾಮವಾಗಿದೆ. ಆಡುನುಡಿಯಲ್ಲಿ 'ನಾಗಾವಾರ' ಎಂದು ಕರೆಯುತ್ತಾರೆ.

55) ನೀಲಕಂಠನಹಳ್ಳಿ : ದೈವವಾಚಕ

ನೀಲಕಂಠನಹಳ್ಳಿ = ನೀಲ + ಕಂಠ + ನ+ ಹಳ್ಳಿ = ನೀಲಕಂಠನಹಳ್ಳಿ

ನೀಲಕಂಠ = ಶಿವ, ಈಶ್ವರ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ನೀಲಕಂಠ' ಪದದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ 'ನೀಲಕಂಠನಹಳ್ಳಿ' ಸ್ಥಳನಾಮವಾಗಿದೆ. ಚನ್ನಪಟ್ಟಣದಲ್ಲಿರುವ ಪುರಾತನವಾದ ನೀಲಕಂಠೇಶ್ವರ ದೇವಾಲಯದ ಉಂಬಳಿ ಜಮೀನಿನಲ್ಲಿ ನಿರ್ಮಾಣವಾದ ಗ್ರಾಮಕ್ಕೆ ನೀಲಕಂಠನಹಳ್ಳಿ ಎಂಬ ಸ್ಥಳನಾಮವಾಗಿದೆ.[59]

56) ನೀಲಸಂದ್ರ : ಜಲವಾಚಕ

ನೀಲಸಂದ್ರ = ನೀಲ + ಸಂದ್ರ > ನೀಲಸಂದ್ರ

ನೀಲ = ಕಡು ನೀಲಿ ಅಥವಾ ಕಪ್ಪು ಬಣ್ಣ

= Dark blue or black.[60]

ಸಂದ್ರ = ಸಮುದ್ರ > ಸಂದ್ರ

= ಜಲವಾಚಕ

ನಿರ್ದಿಷ್ಟ 'ನೀಲ' ಪದದೊಡನೆ ವಾರ್ಗಿಕ 'ಸಂದ್ರ' ಸೇರಿ 'ನೀಲಸಂದ್ರ' ಸ್ಥಳನಾಮವಾಗಿದೆ. ಕಪ್ಪು ಮಣ್ಣಿನಿಂದ ಕೂಡಿದ, ಕಡು ನೀಲಿ ಬಣ್ಣದ ಕೆರೆಯ ಪಕ್ಕದಲ್ಲಿ ನಿರ್ಮಾಣವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

57) ನುಣ್ಣೂರು : ಪ್ರಕೃತಿವಾಚಕ

ನುಣ್ಣೂರು = ನುಣ್ಣು + ಊರು > ನುಣ್ಣೂರು

ನುಣು = smoothness, softness[61]

ಊರು = ಊಱು > ಊರು

= ನೆಲಸು, ನಿಲ್ಲು, ಇರು

ನಿರ್ದಿಷ್ಟ 'ನುಣ್ಣು' ಪದದೊಡನೆ ವಾರ್ಗಿಕ 'ಊರು' ಸೇರಿ 'ನುಣ್ಣೂರು' ಸ್ಥಳನಾಮವಾಗಿದೆ. ಈ ಸ್ಥಳದಲ್ಲಿ ವಿಜಯನಗರ ಕಾಲದ ವೈದ್ಯನಾಥೇಶ್ವರ ದೇವಾಲಯ ಕಂಡುಬರುತ್ತದೆ.

58) ನೆರಳೂರು : ಸಸ್ಯವಾಚಕ

ನೆರಳೂರು = ನೆರಲೆ + ಊರು > ನೆರಲೆಊರು > ನೆರಳೆಊರು > ನೆರಳೂರು

ನೆರಳೆ = ಒಂದು ಬಗೆಯ ಸಸ್ಯ

ಊರು = ಊಱು > ಊರು

= ನೆಲಸು, ನಿಲ್ಲು, ಇರು.

ನಿರ್ದಿಷ್ಟ 'ನೆರಲೆ' ಪದದೊಡನೆ ವಾರ್ಗಿಕ 'ಊರು' ಸೇರಿ 'ನೆರಲೂರು' ಆಗಿದೆ. 'ಲ' ಕಾರಕ್ಕೆ 'ಳ' ಕಾರಾಗಮವಾಗಿ 'ನೆರಳೂರು' ಆಗಿದೆ.

59) ನೆಲಮಾಕನಹಳ್ಳಿ : ವ್ಯಕ್ತಿವಾಚಕ

ನೆಲಮಾಕನಹಳ್ಳಿ = ನೆಲ + ಮಾಕ + ನ + ಹಳ್ಳಿ > ನೆಲಮಾಕನಹಳ್ಳಿ

ನೆಲ = Ground, soil, Land, ground floor, a portion of the earth; the earth[62]

= ಭೂಪ್ರದೇಶ, ಭೂಮಿ, ಭೂತಳ, ಮಣ್ಣು,ಸ್ಥಳ, ಜಾಗ, ಕೃಷಿಯ ಭೂಮಿ, ಜಮೀನು

ದೇಶೀಯ ಪದ = ತಮಿಳು–ನೆಲ; ಮಲಯಾಳಂ–ನಿಲ; ತೆಲುಗು–ನೆಲ; ತುಳು–ನೆಲ; ಕೊಡವ–ನೆಲ.[63]

ಮಖ = ಒಬ್ಬಾತನ ಹೆಸರು

ಹಳ್ಳಿ = ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ನೆಲಮಖ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ನೆಲಮಖನಹಳ್ಳಿ' ಸ್ಥಳರೂಪವಾಗಿದೆ. 'ಖ' ಕಾರದ ಬದಲಾಗಿ 'ಕ' ಕಾರಾಗಮವಾಗಿ 'ನೆಲಮಾಕನಹಳ್ಳಿ' ಸ್ಥಳನಾಮವಾಗಿದೆ.

60) ಪಟ್ಲು : ಜಲವಾಚಕ

ಪಟ್ಲು = ಪಟಲ > ಪಟೋಲ > ಪಟ್ಲು > ಪಡಲ > ಹಡಲ್ > ಹಡ್ಲು

ಪಟೋಲ = ಅಡಲ > ಅಡ್ಲ > ಪಟಲ > ಪಟ್ಲ[64]

ಮಳೆಗಾಲದಲ್ಲಿ ನೀರಿನಲ್ಲಿ ಪೂರ್ಣ ಮುಳುಗಿದ್ದು ಅನಂತರ ಒಂದು ಬೆಳೆಯಲ್ಲಿ ಹೆಚ್ಚು ಉತ್ಪತ್ತಿ ಕೊಡುವ ಗದ್ದೆ.

= ಅತಿ ಹೆಚ್ಚು ಗದ್ದೆಗಳಿಂದ ಕೂಡಿದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

61) ಬಾಣಂತಹಳ್ಳಿ : ವ್ಯಕ್ತಿವಾಚಕ

ಶಾಸನದಲ್ಲಿ ಬಾಣತಿಹಳ್ಳಿ ಎಂಬ ಉಲ್ಲೇಖವಿದೆ[65]

ಬಾಣಂತಹಳ್ಳಿ = ಬಾಣತಿ + ಹಳ್ಳಿ > ಬಾಣತಿಹಳ್ಳಿ > ಬಾಣಂತಿಹಳ್ಳಿ > ಬಾಣಂತಹಳ್ಳಿ

ಬಾಣತಿ = ಬಾಣತ್ತಿ, ಬಾಣನ್ತಿ A puerperal woman, a woman recently delivered, a woman just brought to bed, a lying in woman. [66]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ.

ನಿರ್ದಿಷ್ಟ 'ಬಾಣತಿ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ ' ಬಾಣತಿಹಳ್ಳಿ' ಸ್ಥಳರೂಪವಾಗಿದೆ. ಇಲ್ಲಿ 'ಇ' ಕಾರದ ಬದಲಾಗಿ 'ಅ' ಕಾರಾಗಮವಾಗಿ 'ಬಾಣಂತಹಳ್ಳಿ' ಸ್ಥಳನಾಮವಾಗಿದೆ.

62) ಬಳ್ಳಾಪಟ್ಟಣ : ವ್ಯಕ್ತಿವಾಚಕ

ಬಳ್ಳಾಪಟ್ಟಣ = ಬಳ್ಳ + ಪಟ್ಟಣ > ಬಳ್ಳ ಪಟ್ಟಣ > ಬಳ್ಳಾಪಟ್ಟಣ

ಬಳ್ಳ = ಒಬ್ಬಾತನ ಹೆಸರು

ಪಟ್ಟಣ = ಪತ್ತನ > ಪಟ್ಟಣ

= ನಗರ, ಶಹರ ಎಂಬರ್ಥಗಳಿವೆ.

ನಿರ್ದಿಷ್ಟ 'ಬಳ್ಳ' ಪದ, ವಾರ್ಗಿಕ 'ಪಟ್ಟಣ' ಪದದೊಡನೆ ಸೇರಿ 'ಬಳ್ಳಪಟ್ಟಣ' ಸ್ಥಳರೂಪವಾಗಿದೆ. ಇಲ್ಲಿ 'ಅ' ಕಾರದ ಬದಲಾಗಿ 'ಆ' ಕಾರಾಗಮವಾಗಿ 'ಬಳ್ಳಾಪಟ್ಟಣ' ಸ್ಥಳನಾಮವಾಗಿದೆ.

63) ಬಂಡೂರು ವಳಗೆರೆಹಳ್ಳಿ : ಜಲವಾಚಕ

ಬಂಡೂರು = ಬಂದು + ಊರು > ಬಂದೂರು > ಬಂಡೂರು

ಒಳ = ಒಳಗೆ, ಒಳಗಡೆ

= ಒಳಭಾಗ, ಒಳಪ್ರದೇಶ

ಕೆರೆ = ಏರಿ ಕಟ್ಟಿ ನೀರು ನಿಲ್ಲಿಸುವ ಸ್ಥಳ

= ಜಲವಾಚಕ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

'ಒಳ' ಮತ್ತು 'ಕೆರೆ' ಪದಗಳು ಸಂಧಿಯಾಗುವಾಗ 'ಗ' ಕಾರಾದೇಶವಾಗಿ 'ಒಳಗೆರೆ' ಎಂದಾಗಿದೆ. ಸ್ವರ 'ಒ' > 'ವ' ಕಾರವಾಗಿ ಧ್ವನಿ ಬದಲಾವಣೆಯಾಗಿದೆ. 'ವಳಗೆರೆ' ಕೆರೆಯ ಒಳಗಿನ ಪ್ರದೇಶದ ಪಕ್ಕದ ನೆಲೆ ಎಂದರ್ಥವಾಗುತ್ತದೆ. ಪೂರ್ವದ 'ಬಂಡೂರು' ಎಂಬ ಶಬ್ದಕ್ಕೆ, ಉತ್ತರದಲ್ಲಿ 'ಒಳಗೆರೆ' ಪದ ಸೇರಿ 'ಬಂಡೂರು ವಳಗೆರೆಹಳ್ಳಿ'

ಸ್ಥಳವಾಗಿದೆ. ಕೆರೆಯ ಪಕ್ಕದಲ್ಲಿ ನಿರ್ಮಾಣವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

64) ಬಾಚಹಳ್ಳಿ : ವ್ಯಕ್ತಿವಾಚಕ

ಬಾಚಹಳ್ಳಿ = ಬಾಚ + ಹಳ್ಳಿ > ಬಾಚಹಳ್ಳಿ

ಬಾಚ(ತೆ) = ವೈಶ್ಯ, ವ್ಯಾಪಾರಿ, ಕೋಮಟಿಗ,

ದೇವಾಂಗ ಇದರಲ್ಲಿ ಒಂದು ಕುಲನಾಮ[67]

ಬಾಚ = ಚಾಚಿ = A coat of Mail[68]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಬಾಚ' ಪದವು ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಬಾಚಹಳ್ಳಿ' ಸ್ಥಳನಾಮವಾಗಿದೆ.

65) ಬಾಣಗಹಳ್ಳಿ : ಜನಾಂಗವಾಚಕ

ಬಾಣಗಹಳ್ಳಿ = ಬಾಣಗ + ಹಳ್ಳಿ > ಬಾಣಗಹಳ್ಳಿ

ಬಾಣ = Am arrow[69]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಬಾಣಗ' ಪದವು ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಬಾಣಗಹಳ್ಳಿ' ಸ್ಥಳನಾಮವಾಗಿದೆ. ಬೇಡರು ವಾಸವಾಗಿದ್ದ ಸ್ಥಳ ಎಂಬರ್ಥವಾಗಿದೆ. ಈಗ ಬೇಡರು ಕಂಡುಬರುವುದಿಲ್ಲ. ತಿಗಳರು (ದ್ರಾವಿಡ ಸಮುದಾಯ) ಜನರು ನೆಲೆಗೊಂಡಿರುವುದು ಕಂಡುಬರುತ್ತದೆ.

66) ಜೆ.ಬ್ಯಾಡರಹಳ್ಳಿ : ಜನಾಂಗವಾಚಕ

ಬ್ಯಾಡರಹಳ್ಳಿ = ಬೇಡರ + ಹಳ್ಳಿ > ಬೇಡರಹಳ್ಳಿ > ಬ್ಯಾಡರಹಳ್ಳಿ

ಬೇಡರು = 'Bedas', 'Bedar' are the hunting and agriculture tride of Mysore[70]

ಬೇಡ = ಬೇಟೆಯನ್ನು ವೃತ್ತಿಯನ್ನಾಗಿ ಉಳ್ಳವನು

= ಬಿಲ್ಲರ ಜಾತಿಗೆ ಸೇರಿದವನು; ಶಬರ

ದೇಶೀಯ ಪದ = ತಮಿಳು–ವೇಟನ್, ವೇಟ್ಟುವನ್; ಮಲಯಾಳಂ–ವೇಟನ್; ತುಳು–ಬೇಡದ[71]

ರು = ಬಹುವಚನ ಪ್ರತ್ಯಯ

= ಜನಾಂಗ ವಾಚಕ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಬೇಡರು' ಮತ್ತು ವಾರ್ಗಿಕ 'ಹಳ್ಳಿ' ಪದಗಳು ಕೂಡಿ 'ಬೇಡರಹಳ್ಳಿ' ಸ್ಥಳನಾಮವಾಗಿದೆ. ಬೇಡರಹಳ್ಳಿ ಎಂಬ ಎರಡು ಸ್ಥಳನಾಮಗಳಿದ್ದು ಪ್ರತ್ಯೇಕವಾಗಿ ಗುರುತಿಸುವ ಸಲುವಾಗಿ ಜಗದಾಪುರ ಬೇಡರಹಳ್ಳಿ ('ಜೆ' ಬೇಡರಹಳ್ಳಿ) ಎಂದು ಗುರುತಿಸಲಾಗುತ್ತಿದೆ. ಆಡುನುಡಿಯಲ್ಲಿ 'ಜೆ.ಬ್ಯಾಡರಹಳ್ಳಿ', 'ಜೆ.ಬ್ಯಾಡ್ರಳ್ಳಿ' ಎಂದು ಕರೆಯಲಾಗುತ್ತಿದೆ. ಇದು ವಿರೂಪಾಕ್ಷಿಪುರ ಹೋಬಳಿಯಲ್ಲಿ ಕಂಡುಬರುತ್ತದೆ.

67) ಹೆಚ್.ಬ್ಯಾಡರಹಳ್ಳಿ : ಜನಾಂಗವಾಚಕ

ಬ್ಯಾಡರಹಳ್ಳಿ = ಬೇಡರ + ಹಳ್ಳಿ > ಬೇಡರಹಳ್ಳಿ > ಬ್ಯಾಡರಹಳ್ಳಿ

ಬೇಡರಹಳ್ಳಿ = ಹಿಂದಿನ ಪದದ ನಿಷ್ಪತ್ತಿಯೇ ಅನ್ವಯಿಸುತ್ತದೆ.

ಹೆಚ್.ಬ್ಯಾಡರಹಳ್ಳಿ = ಹುಲುವಾಡ ಬ್ಯಾಡರಹಳ್ಳಿ. ಇದು ಮಳೂರು ಹೋಬಳಿಯಲ್ಲಿ ಕಂಡುಬರುತ್ತದೆ.

68) ಬ್ರಾಹ್ಮಣಿಪುರ : ಜನಾಂಗವಾಚಕ

ಬ್ರಾಹ್ಮಣಿಪುರ = ಬ್ರಾಹ್ಮಣ + ಪುರ > ಬ್ರಾಹ್ಮಣಪುರ > ಬ್ರಾಹ್ಮಣಿಪುರ

ಬ್ರಾಹ್ಮಣ = ಜನಾಂಗವಾಚಕ

ಪುರ = ಪಟ್ಟಣ, ನಗರ

ನಿರ್ದಿಷ್ಟ 'ಬ್ರಾಹ್ಮಣ' ಪದ, ವಾರ್ಗಿಕ 'ಪುರ' ಪದದೊಡನೆ ಸೇರಿ 'ಬ್ರಾಹ್ಮಣಪುರ' ಪದವಾಗಿದೆ. ಜನರ ಉಚ್ಚಾರಣೆಯ ಗತಿಯಲ್ಲಿ ಪದಮಧ್ಯದಲ್ಲಿ 'ಇ' ಸ್ವರಾಗಮವಾಗಿ 'ಬ್ರಾಹ್ಮಣಿಪುರ' ಎಂದಾಗಿದೆ. ಪುರುಷೋತ್ತಮ ತೀರ್ಥರ ಶಿಷ್ಯರಾದ ಬ್ರಾಹ್ಮಣ್ಯತೀರ್ಥರು ಈ

ಸ್ಥಳದಲ್ಲಿ ನೆಲೆಸಿ ಲೋಕ ಪ್ರಸಿದ್ದರಾಗಿದ್ದರು. ಇವರು ನೆಲೆ ನಿಂತ ಸ್ಥಳಕ್ಕೆ ಬ್ರಹ್ಮಣ್ಯತೀರ್ಥಪುರವೆಂದು ಹೆಸರು ಬಂದಿತು. ಕಲಾನಂತರದಲ್ಲಿ ಬ್ರಾಹ್ಮಣಿಪುರವಾಯಿತು. ಆಡುನುಡಿಯಲ್ಲಿ 'ಬ್ರಹ್ಮಣಿಪುರ' ಎಂದು ಕರೆಯಲಾಗುತ್ತಿದೆ.

69) ಬುಕ್ಕಸಾಗರ : ಸಸ್ಯವಾಚಕ, ಜಲವಾಚಕ

ಬುಕ್ಕಸಾಗರ = ಬುಕ + ಸಾಗರ > ಬುಕಸಾಗರ > ಬುಕ್ಕಸಾಗರ

ಬುಕ = ಮಕ, ಗೋಳೀ ಹೂವು[72]

ಸಾಗರ = ಕಡಲು, ಸಮುದ್ರ

= ಜಲವಾಚಕ

ಕೆಲವು ಊರುಗಳ ಹೆಸರುಗಳ ಕೊನೆಯಲ್ಲಿ ಸೇರುವ ಶಬ್ದ[73]

= "ಕೆರೆ ನದಿಗಳಿಗಿಂತ ದೊಡ್ಡದಾದುದು–ಸಮುದ್ರ < ಸಂದ್ರ= ಕೆರೆ, ಜಲಾಶಯ, ಸಾಗರ, ಹೆಚ್ಚು, ನೀರು ಶೇಖರಣೆಯಾಗುವ ತಾಣ ಎಂದು ಅರ್ಥೈಸಬಹುದು."[74]

ನಿರ್ದಿಷ್ಟ 'ಬುಕ್ಕ' ಪದ, ವಾರ್ಗಿಕ 'ಸಾಗರ' ಪದದೊಡನೆ ಸೇರಿ 'ಬುಕ್ಕಸಾಗರ' ಸ್ಥಳನಾಮವಾಗಿದೆ. ಗೋಳೀ ಹೂವು ಬೆಳೆಯುತ್ತಿದ್ದ ಕೆರೆ ಎಂಬರ್ಥದ ಸ್ಥಳನಾಮವಾಗಿದೆ.

70) **ಭೂಹಳ್ಳಿ : ವಸತಿವಾಚಕ**

ಭೂಹಳ್ಳಿ = ಬು + ಹಳ್ಳಿ > ಬುಹಳ್ಳಿ > ಭುಹಳ್ಳಿ > ಭೂಹಳ್ಳಿ.

ಭೂ = ಬೂ, ಭು, The Place of being or abiding; the earth[75]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಭೂ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಭೂಹಳ್ಳಿ' ಸ್ಥಳನಾಮವಾಗಿದೆ.

71) ಬೆಳಕೆರೆ : ಜಲವಾಚಕ

ಬೆಳಕೆರೆ = ಬೆಳ್ + ಗೆರೆ = ಬೆಳಗೆರೆ > ಬೆಳಕೆರೆ

ಬಿಳಿ < ಬೆಳ್

ಬೆಳ = Growth, growing, A Man of a certain agricultural caste[76]

ಕೆರೆ = ಕೆಱೆ < ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

ನಿರ್ದಿಷ್ಟ 'ಬೆಳ' ಪದ, ವಾರ್ಗಿಕ 'ಕೆರೆ' ಪದದೊಡನೆ ಸೇರಿ 'ಬೆಳಕೆರೆ' ಸ್ಥಳನಾಮವಾಗಿದೆ.

ವ್ಯವಸಾಯಕ್ಕಾಗಿ ಕೆರೆ ಕಟ್ಟಿಸಿದ್ದು ಅದರ ಸಮೀಪ ಸೃಷ್ಟಿಯಾಗಿರುವ ಗ್ರಾಮ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

72) ಬೇವೂರು : ಸಸ್ಯವಾಚಕ

ಬೇವೂರು = ಬೇವು + ಊರು > ಬೇವುಊರು > ಬೇವೂರು

ಬೇವು = The neem tree or margosa tree[77]

= ಔಷಧಿಯ ಗುಣವುಳ್ಳ ಕಹಿರುಚಿಯ ಒಂದು ಬಗೆಯ ಮರ.

ದೇಶೀಯ ಪದ = ತಮಿಳು–ವೇಮ್ಬು; ಮಲಯಾಳಂ–ವೇಮ್ಬು; ತುಳು–ಬೇವು; ತೆಲುಗು–ವೇಪ, ವೇಮು; ಕುವಿ–ವೇಪ. [78]

ಊರು = ಊಱು > ಊರು

= ನೆಲಸು, ನಿಲ್ಲು, ಇರು.

ನಿರ್ದಿಷ್ಟ 'ಬೇವು' ಮತ್ತು ವಾರ್ಗಿಕ 'ಊರು' ಪದಗಳು ಸೇರಿ 'ಬೇವೂರು' ಸ್ಥಳನಾಮವಾಗಿದೆ. ಬೇವಿನ ಮರವನ್ನು ಬೆಳೆಯುತ್ತಿದ್ದ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

73) ಬೊಮ್ಮನಹಳ್ಳಿ : ವ್ಯಕ್ತಿವಾಚಕ

ಬೊಮ್ಮನಹಳ್ಳಿ = ಬೊಮ್ಮ + ನ + ಹಳ್ಳಿ > ಬೊಮ್ಮನಹಳ್ಳಿ

ಬೊಮ್ಮ < ಬ್ರಹ್ಮ[79]

= ಒಬ್ಬಾತನ ಹೆಸರು

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ.

ನಿರ್ದಿಷ್ಟ 'ಬೊಮ್ಮ' ಮತ್ತು ವಾರ್ಗಿಕ 'ಹಳ್ಳಿ' ಪದಗಳು ಸೇರಿ 'ಬೊಮ್ಮನಹಳ್ಳಿ' ಸ್ಥಳನಾಮವಾಗಿದೆ. ಬೊಮ್ಮ ಎಂಬ ನಾಯಕ ಈ ಗ್ರಾಮ ಸೃಷ್ಟಿಗೆ ಕಾರಣನಾಗಿದ್ದು ಅವರ ಹೆಸರಿನಿಂದಲೇ ಈ ಸ್ಥಳನಾಮ ರೂಪುಗೊಂಡಿದೆ.

74) ಭೈರನಾಯಕನಹಳ್ಳಿ : ವ್ಯಕ್ತಿವಾಚಕ

ಭೈರನಾಯಕನಹಳ್ಳಿ = ಭೈರ + ನಾಯಕ + ನ + ಹಳ್ಳಿ > ಭೈರನಾಯಕನಹಳ್ಳಿ

ಭೈರ = ಒಬ್ಬಾತನ ಹೆಸರು

ನಾಯಕ = ಮುಂದಾಳು, ಮುಖಂಡ,ಅಧಿಕಾರ ಮಾಡುವವನು.[80]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಭೈರನಾಯಕ' ಪದವು ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಭೈರನಾಯಕನಹಳ್ಳಿ' ಸ್ಥಳನಾಮವಾಗಿದೆ. ಭೈರನಾಯಕ ಎಂಬ ಹೆಸರಿನವರು ಅಧಿಕಾರಿಯಾಗಿದ್ದು ಅವನ ಹೆಸರಿನಲ್ಲಿ ಈ ಸ್ಥಳನಾಮ ರೂಪುಗೊಂಡಿದೆ.

75) ಭೈರಶೆಟ್ಟಹಳ್ಳಿ : ವ್ಯಕ್ತಿವಾಚಕ

ಭೈರಶೆಟ್ಟಹಳ್ಳಿ = ಭೈರ + ಶೆಟ್ಟಿ + ಹಳ್ಳಿ > ಭೈರಶೆಟ್ಟಹಳ್ಳಿ

ಭೈರ = ಒಬ್ಬಾತನ ಹೆಸರು

ಶೆಟ್ಟಿ = ಶ್ರೇಷ್ಠಿನ > ಶೆಟ್ಟಿ

= ವ್ಯಾಪಾರಗಾರ, ವರ್ತಕ, ವ್ಯಾಪಾರವನ್ನು ವೃತ್ತಿಯನ್ನಾಗಿ ಉಳ್ಳವನು.

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ.

ನಿರ್ದಿಷ್ಟ 'ಭೈರಶೆಟ್ಟಿ' ಪದದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ 'ಭೈರಶೆಟ್ಟಿಹಳ್ಳಿ' ಸ್ಥಳನಾಮ ರೂಪುಗೊಂಡಿದೆ. ವ್ಯಾಪಾರವನ್ನು ವೃತ್ತಿಯನ್ನಾಗಿ ಮಾಡುತ್ತಿದ್ದ 'ಭೈರಶೆಟ್ಟಿ' ನೆಲೆಯಾಗಿದ್ದ ಸ್ಥಳ ಎಂಬರ್ಥದಲ್ಲಿ ಭೈರಶೆಟ್ಟಿಹಳ್ಳಿ ಸ್ಥಳನಾಮ ರೂಪುಗೊಂಡಿದೆ.

76) ಮತ್ತೀಕೆರೆ : ಸಸ್ಯವಾಚಕ

ಮತ್ತೀಕೆರೆ = ಮತ್ತಿ + ಕೆರೆ > ಮತ್ತೀಕೆರೆ

ಮತ್ತಿ = The timber tree shorea robusta Roxb, or vatica Robusta steud[81]

ಕೆರೆ = ಕೆಱೆ < ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

ನಿರ್ದಿಷ್ಟ 'ಮತ್ತಿ' ಪದದೊಡನೆ ವಾರ್ಗಿಕ 'ಕೆರೆ' ಪದ ಸೇರಿ 'ಮತ್ತೀಕೆರೆ' ಸ್ಥಳನಾಮ ರೂಪುಗೊಂಡಿದೆ. ಮತ್ತಿ ವೃಕ್ಷದ ಬಳಿ ಇರುವಂತ ಕೆರೆಯ ಹತ್ತಿರ ನಿರ್ಮಾಣವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

72) ಮಳಗಾಳು : ಜಲವಾಚಕ

ಶಾಸನದಲ್ಲಿ ಮಾಳಿಗೆಹಳ್ಳಿ ಎಂಬ ಉಲ್ಲೇಖವಿದೆ[82]

ಮಳಗಾಳು = ಮಳ + ಗಾಳು > ಮಳಗಾಳು

ಮಳಗಾಳು = ಮುಳುಗು ಪಾರೆ > ಮುಳುಗುಗಾಳು > ಮುಳುಗಾಳು > ಮಳಗಾಳು

ಮುಳುಗು = ನೀರಲ್ಲಿ ಅದ್ದಿಮರೆಯಾಗುವುದು

ಆಳು = ಪಾರೆ > ಪಾಳು > ಹಾಳು > ಆಳು

ನಿರ್ದಿಷ್ಟ 'ಮಳ' ಪದ, ವಾರ್ಗಿಕ 'ಆಳು' ಪದ ಸೇರಿ 'ಮಾಳಗಾಳು' ಸ್ಥಳನಾಮ ರೂಪುಗೊಂಡಿದೆ. ಈ ಸ್ಥಳದ ಪಕ್ಕದಲ್ಲಿ ತೊರೆಯು ಇದ್ದು ಮಳೆಗಾಲದಲ್ಲಿ ಈ ಸ್ಥಳವು ಮುಳುಗುತ್ತಿದ್ದರಿಂದ ಮುಳುಗಾಳು ಎಂಬ ಸ್ಥಳನಾಮವಾಗಿದೆ. ಇಲ್ಲಿ ಪದ ಮಧ್ಯದಲ್ಲಿ 'ಉ'ಕಾರವು ಲೋಪವಾಗಿ 'ಮಳಗಾಳು' ಎಂಬ ಸ್ಥಳನಾಮ ರೂಪುಗೊಂಡಿದೆ.

78) ಮಲ್ಲಂಗೆರೆ : ವ್ಯಕ್ತಿವಾಚಕ

ಮಲ್ಲಂಗೆರೆ = ಮಲ್ಲ + ಕೆರೆ > ಮಲ್ಲಕೆರೆ > ಮಲ್ಲಗೆರೆ

ಮಲ್ಲ = A wrestler, a boxer by profession; a very strongman, an athlete[83]

ಕೆರೆ = ಕೆಱೆ < ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

ನಿರ್ದಿಷ್ಟ 'ಮಲ್ಲ' ಪದವು, ವಾರ್ಗಿಕ 'ಕೆರೆ' ಪದದೊಂದಿಗೆ ಸೇರಿ 'ಮಲ್ಲಗೆರೆ' ಸ್ಥಳನಾಮ ರೂಪುಗೊಂಡಿದೆ. ಪದದ ಮಧ್ಯದಲ್ಲಿ 'ಅನುಸ್ವಾರ' ಆಗಮವಾಗಿ 'ಮಲ್ಲಂಗೆರೆ' ಎಂಬ ಸ್ಥಳನಾಮ ರೂಪುಗೊಂಡಿದೆ. ಮಲ್ಲ ಎಂಬ ವ್ಯಕ್ತಿ ಕಟ್ಟಿಸಿದ ಕೆರೆಯ ಪಕ್ಕದಲ್ಲಿ ಊರಿನ ವಾಸ್ತವ್ಯ ನೆಲೆಯಾಗಿದ್ದರಿಂದ ಈ ಸ್ಥಳಕ್ಕೆ 'ಮಲ್ಲಂಗೆರೆ' ಎಂಬ ಸ್ಥಳನಾಮ ರೂಪುಗೊಂಡಿದೆ.

79) ಮಳೂರುಪಟ್ಟಣ : ವ್ಯಾಪಾರವಾಚಕ

ಶಾಸನದಲ್ಲಿ ಮಳಲೂರಪಟ್ಟಣ ಎಂಬ ಉಲ್ಲೇಖವಿದೆ[84]

ಮಳೂರುಪಟ್ಟಣ = ಮಳೂರು = ಮಳಲೂರು > ಮಳೂರು

ಮಳಲು = ಮರಲ್, sand[85]

ಊರು = ಚಿಕ್ಕ ಗ್ರಾಮ, ಹಳ್ಳಿ

ಪಟ್ಟಣ = ಪತ್ತಿನ > ಪಟ್ಟಣ

= ನಗರ, ಶಹರ ಎಂಬರ್ಥಗಳಿವೆ.

ನಿರ್ದಿಷ್ಟ 'ಮಳೂರು' ಪದ, ವಾರ್ಗಿಕ 'ಪಟ್ಟಣ' ಪದದೊಡನೆ ಸೇರಿ 'ಮಳೂರುಪಟ್ಟಣ' ಸ್ಥಳನಾಮ ರೂಪುಗೊಂಡಿದೆ. ಮರಳು ಹೆಚ್ಚಾಗಿ ದೊರೆಯುತ್ತಿದ್ದು ಅದನ್ನು ವ್ಯಾಪಾರ ಮಾಡುತ್ತಿದ್ದರಿಂದ ಈ ಸ್ಥಳನಾಮಕ್ಕೆ 'ಮಳೂರು ಪಟ್ಟಣ' ಎಂದು ಕರೆಯಲಾಗಿದೆ.

80) ಮಂಕುಂದ : ವ್ಯಕ್ತಿವಾಚಕ

ಮಂಕುಂದ = ಮಂ+ಕುಂದ > ಮಂಕುಂದ

ಮುಕುಂದ = ಒಬ್ಬಾತನ ಹೆಸರು

ಮುಕುಂದರಾಯ ಎಂಬುವವನು ಈ ಪ್ರದೇಶವನ್ನು ಆಳುತ್ತಿದ್ದರಿಂದ ಮುಕುಂದರಾಯ ಪಟ್ಟಣವೆಂದು ಖ್ಯಾತಿ ಪಡೆದು 'ಮುಕುಂದ' ಎಂಬ ಸ್ಥಳನಾಮರೂಪುಗೊಂಡಿದೆ. ಈ ಗ್ರಾಮದ ಮುಂಭಾಗದ ಫಲಕದಲ್ಲಿ 'ಮುಕುಂದ' ಎಂದು ಬರೆಯಲಾಗಿದ್ದು, ಆದರೆ ಈಗ ಎಲ್ಲರ ಉಚ್ಚಾರದಲ್ಲಿ ಅದು 'ಮಂಕುಂದ'ವಾಗಿ ರೂಪುಗೊಂಡಿದೆ.

81) ಮಂಗಳವಾರಪೇಟೆ : ವ್ಯಾಪಾರವಾಚಕ

ಮಂಗಳವಾರಪೇಟೆ= ಮಂಗಳ + ವಾರ + ಪೇಟೆ > ಮಂಗಳವಾರಪೇಟೆ

ಮಂಗಳವಾರ = Tuesday

ಪೇಟೆ = an emporium, a mart, a market town, a long street of shops in a town[86]

ನಿರ್ದಿಷ್ಟ 'ಮಂಗಳವಾರಪೇಟೆ' ಪದ, ವಾರ್ಗಿಕ 'ಪೇಟೆ' ಪದದೊಂದಿಗೆ ಸೇರಿ 'ಮಂಗಳವಾರಪೇಟೆ' ಸ್ಥಳನಾಮರೂಪುಗೊಂಡಿದೆ. ಮಂಗಳವಾರದಂದ್ದು ಸಂತೆ, ವ್ಯಾಪಾರ ನಡೆಯುತ್ತಿದ್ದ ನೆಲೆ ಎಂಬರ್ಥದಲ್ಲಿ 'ಮಂಗಳವಾರಪೇಟೆ' ಸ್ಥಳನಾಮವಾಗಿದೆ.

82) ಮಾಕಳಿ : ದೈವವಾಚಕ

ಮಾಕಳಿ = ಮಾ + ಕಾಳಿ > ಮಾಕಾಳಿ > ಮಾಕಳಿ

ಮಾ = Great, excellent Mother[87]

ಕಾಳಿ = ಕಾಳಮ್ಮ, ಕಾಳಿದೇವಿ

= ದೈವವಾಚಕ

ನಿರ್ದಿಷ್ಟ 'ಮಾ' ಪದ, ವಾರ್ಗಿಕ 'ಕಾಳಿ' ಪದದೊಡನೆ ಸೇರಿ 'ಮಾಕಾಳಿ' ಸ್ಥಳನಾಮವಾಗಿದೆ. ಉಚ್ಚಾರಣೆಯಲ್ಲಿ 'ಮಾಕಳಿ' ಎಂದಾಗಿ ಇಲ್ಲಿ 'ಆ' ಕಾರದ ಬದಲಾಗಿ 'ಅ' ಕಾರಾಗಮವಾಗಿ 'ಮಾಕಳಿ' ಸ್ಥಳನಾಮವಾಗಿದೆ. ಕಾಳಿದೇವಿಯ ನೆಲೆ ಎಂಬರ್ಥದಲ್ಲಿ 'ಮಾಕಳಿ' ರೂಪುಗೊಂಡಿದೆ.

83) ಮಾರ್ಚನಹಳ್ಳಿ : ವ್ಯಕ್ತಿವಾಚಕ

ಮಾರ್ಚನಹಳ್ಳಿ = ಮಾರ್ಜ + ನ+ ಹಳ್ಳಿ > ಮಾರ್ಜನಹಳ್ಳಿ > ಮಾರ್ಚನಹಳ್ಳಿ.

ಮಾರ್ಜ = Cleaning, a cleaner, a scourer.[88]

= ಅಗಸ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಮಾರ್ಜ' ಪದದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ 'ಮಾರ್ಜನಹಳ್ಳಿ'ಯಾಗಿದೆ. ಪದಮಧ್ಯದ 'ಜ' ಕಾರಕ್ಕೆ 'ಚ' ಕಾರಾದೇಶವಾಗಿ ಮಾರ್ಚನಹಳ್ಳಿಯಾಗಿದೆ. ಅಗಸರು ವಾಸವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

84) ಮಾದಾಪುರ : ಜನಾಂಗವಾಚಕ

ಮಾದ + ಪುರ > ಮಾದಪುರ > ಮಾದಾಪುರ

ಮಾದ = ಮಾದರ > ಮಾದಿಗ

= ಜನಾಂಗವಾಚಕ

ಪುರ = ಪಟ್ಟಣ, ನಗರ

ನಿರ್ದಿಷ್ಟ 'ಮಾದ' ಪದದೊಡನೆ ವಾರ್ಗಿಕ 'ಪುರ' ಪದ ಸೇರಿ 'ಮಾದಪುರ' ಸ್ಥಳನಾಮವಾಗಿದೆ. 'ಅ' ಕಾರಕ್ಕೆ 'ಆ' ಕಾರಾಗಮವಾಗಿ 'ಮಾದಾಪುರ' ಸ್ಥಳರೂಪವಾಗಿದೆ. ಮಾದಿಗ ಜನಾಂಗದವರು ವಾಸವಾದ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

85) ಮುದಿಗೆರೆ : ಜಲವಾಚಕ

ಮುದಿಗೆರೆ = ಮುದು + ಕೆರೆ > ಮುದುಕೆರೆ > ಮುದುಗೆರೆ > ಮುದಿಗೆರೆ.

ಮುದು = To advance in growth, to Increase; to become full grown; to mature.[89]

ಕೆರೆ = ಕೆಱೆ > ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

ನಿರ್ದಿಷ್ಟ 'ಮುದು' ಪದ, ವಾರ್ಗಿಕ 'ಕೆರೆ' ಪದದೊಡನೆ ಸೇರಿ 'ಮುದುಕೆರೆ' ಸ್ಥಳರೂಪವಾಗಿ ಪದಮಧ್ಯದ 'ಉ'ಕಾರವು ಲೋಪವಾಗಿ 'ಇ' ಕಾರಾಗಮನವಾಗಿ 'ಮುದಿಕೆರೆ' ಆಗಿದೆ. 'ಕ' ಕಾರ 'ಗ' ಕಾರವಾಗಿ 'ಮುದಿಗೆರೆ' ಸ್ಥಳನಾಮರೂಪವಾಗಿದೆ. ಕೆರೆಯ ಬಳಿ ನಿರ್ಮಾಣವಾದ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

86) ಮೆಣಸಿಗನಹಳ್ಳಿ : ಸಸ್ಯವಾಚಕ

ಮೆಣಸಿಗನಹಳ್ಳಿ = ಮೆಣಸಿಗ + ನ + ಹಳ್ಳಿ > ಮೆಣಸಿಗೆನಹಳ್ಳಿ > ಮೆಣಸಿಗನಹಳ್ಳಿ

ಮೆಣಸಿಗೆ = of a plant[90]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಮೆಣಸಿಗೆ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಮೆಣಸಿಗೆನಹಳ್ಳಿ' ಸ್ಥಳರೂಪವಾಗಿದೆ. ಪದಮಧ್ಯದ 'ಎ' ಕಾರವು ಲೋಪವಾಗಿ 'ಅ' ಕಾರಾಗಮವಾಗಿ 'ಮೆಣಸಿನಗನಹಳ್ಳಿ' ಸ್ಥಳನಾಮವಾಗಿದೆ. ಮೆಣಸಿನಕಾಯಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

87) ಮೈಲನಾಯಕನಹಳ್ಳಿ : ವ್ಯಕ್ತಿವಾಚಕ

ಮೈಲನಾಯಕನಹಳ್ಳಿ = ಮೈಲ + ನಾಯಕ + ನ + ಹಳ್ಳಿ > ಮೈಲನಾಯಕನಹಳ್ಳಿ

ಮೈಲ = ಒಬ್ಬಾತನ ಹೆಸರು

ನಾಯಕ = ಮುಂದಾಳು, ಮುಖಂಡ,

= ದೊರೆ, ರಾಜ

= ದಳಪತಿ, ಒಡೆಯ, ಯಜಮಾನ

ಹಳ್ಳಿ = ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಮೈಲನಾಯಕ' ವ್ಯಕ್ತಿವಾಚಕದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ ಮೈಲನಾಯಕನಹಳ್ಳಿ' ಸ್ಥಳನಾಮವಾಗಿದೆ. ಮೈಲನಾಯಕನೆಂಬುವವನ ನೆಲೆ ಎಂಬ ಅರ್ಥದಲ್ಲಿ 'ಮೈಲನಾಯಕನಹಳ್ಳಿ' ಸ್ಥಳನಾಮವಿದೆ.

88) ಮೊಗೇನಹಳ್ಳಿ : ಜನಾಂಗವಾಚಕ

ಮೊಗೇನಹಳ್ಳಿ = ಮೊಗೆ + ನ + ಹಳ್ಳಿ

ಮೊಗೇರ = ಬೆಸ್ತರು, ಮೀನುಗಾರರು

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಮೊಗೇರ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಮೊಗೇನಹಳ್ಳಿ' ಸ್ಥಳನಾಮವಾಗಿದೆ. ಬೆಸ್ತರು, ಮೀನುಗಾರರ ವಾಸ್ತವ್ಯದ ನೆಲ ಎಂಬರ್ಥದ ಸ್ಥಳನಾಮವಾಗಿದೆ.

89) ಯಲಿಯೂರು : ಸಸ್ಯವಾಚಕ

ಯಲಿಯೂರು = ಎಲಿ+ಊರು>ಎಲಿಯೂರು > ಎಲೆಯೂರು > ಯಲಿಯೂರು

ಎಲೆ = ಎಲೆತೋಟದಹಳ್ಳಿಯ ನಿಷ್ಪತ್ತಿಯನ್ನೇ ಹೋಲುತ್ತದೆ.

ಊರು = ಚಿಕ್ಕ ಗ್ರಾಮ, ಹಳ್ಳಿ

ನಿರ್ದಿಷ್ಟ 'ಎಲೆ' ಪದ, ವಾರ್ಗಿಕ 'ಊರು' ಪದದೊಡನೆ ಸೇರಿ 'ಎಲಿಯೂರು' ಆಗಿದೆ. 'ಎ' ಸ್ವರವು ಲೋಪವಾಗಿ 'ಯ' ವ್ಯಂಜನಾಕ್ಷರದ ಆಗಮದಿಂದ 'ಯಲಿಯೂರು' ಸ್ಥಳನಾಮರೂಪವಾಗಿದೆ. ವಿಳ್ಯೆದೆಲೆಯನ್ನು ಹೆಚ್ಚಾಗಿ ಬೆಳೆಯುತ್ತಿದ್ದ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

90) ರಾಂಪುರ : ದೈವವಾಚಕ

ರಾಂಪುರ = ರಾಮ + ಪುರ > ರಾಮಪುರ > ರಾಮ್‌ಪುರ > ರಾಂಪುರ

ರಾಮ = ದೈವವಾಚಕ

= ಶ್ರೀರಾಮನ ಹೆಸರು

ಪುರ = ಪಟ್ಟಣ, ನಗರ.

ನಿರ್ದಿಷ್ಟ 'ರಾಮ' ಮತ್ತು ವಾರ್ಗಿಕ 'ಪುರ' ಪದಗಳು ಸೇರಿ 'ರಾಮಪುರ' ಸ್ಥಳನಾಮವಾಗಿದೆ. 'ಮ' ಕಾರದ ಬದಲು ವರ್ಗದ ಅನುನಾಸಿಕದ ಸ್ಥಾನದಲ್ಲಿ ಬರುವ ಬಿಂದು (ಂ) ಬಂದು 'ರಾಂಪುರ' ಸ್ಥಳನಾಮರೂಪವಾಗಿದೆ. ರಾಮನ ದೇವಸ್ಥಾನವು ಊರಿನಲ್ಲಿ ಇರುವುದರಿಂದ 'ರಾಂಪುರ' ಎಂಬರ್ಥದ ಸ್ಥಳನಾಮವಾಗಿದೆ.

91) ಲಾಲಘಟ್ಟ : ಸಸ್ಯವಾಚಕ ಮತ್ತು ಪ್ರಕೃತಿವಾಚಕ

ಲಾಲಘಟ್ಟ = ಲಾಲ+ಘಟ್ಟ > ಲಾಲಘಟ್ಟ.

ಲಾಲ = ಒಂದು ಬಗೆಯ ಅರಲೆ.

ಘಟ್ಟ = ಗಟ್ಟ. ಘಟ್ಟ

= ಬೆಟ್ಟಗಳ ಇಳಿಜಾರು ಪ್ರೇಶ.

ನಿರ್ದಿಷ್ಟ 'ಲಾಲ' ಪದ, ವಾರ್ಗಿಕ 'ಘಟ್ಟ' ಪದದೊಡನೆ ಸೇರಿ 'ಲಾಲಘಟ್ಟ' ಸ್ಥಳನಾಮವಾಗಿದೆ. ಪ್ರಾಣಿಗಳಿಗೆ ಲಾಲವನ್ನು ಹಾಕುತ್ತಿದ್ದ ನೆಲೆ ಎಂಬರ್ಥದ ಸ್ಥಳನಾಮರೂಪವಾಗಿದೆ.

92) ವಡ್ಡರಗುಪ್ಪೆ : ಜಾತಿವಾಚಕ

ವಡ್ಡರಗುಪ್ಪೆ = ವಡ್ಡರ + ಗುಪ್ಪೆ > ವಡ್ಡರಗುಪ್ಪೆ

ವಡ್ಡರು = ವಡ್ಡ + ರು > ವಡ್ಡರು

ವಡ್ಡ = ಕಲ್ಲು ಒಡೆಯುವ, ಬಾವಿ ತೋಡುವ ಕೆಲಸ ಮಾಡುವ ಜನ

ರು = ಬಹುವಚನ ಸೂಚಕ

= ಜಾತಿವಾಚಕ.

ಕುಪ್ಪೆ = ರಾಶಿ, ಗುಂಪು

ನಿರ್ದಿಷ್ಟ 'ವಡ್ಡರು' ಪದ, ವಾರ್ಗಿಕ 'ಕುಪ್ಪೆ' ಪದದೊಡನೆ ಸೇರಿ 'ವಡ್ಡರಕುಪ್ಪೆ' ಸ್ಥಳನಾಮವಾಗಿದೆ.

'ಕ' ಕಾರಕ್ಕೆ 'ಗ' ಕಾರಾದೇಶವಾಗಿದೆ. ಮಣ್ಣಿನ ಕೆಲಸ ಮತ್ತು ಮನೆಕಟ್ಟುವ ವೃತ್ತಿಯುಳ್ಳ ವಡ್ಡರು ಇರುವ ನೆಲೆ ಎಂಬರ್ಥದಲ್ಲಿ 'ವಡ್ಡರಹಳ್ಳಿ' ಸ್ಥಳನಾಮವಿದೆ.

93) ವಡೇರಹಳ್ಳಿ : ಜಾತಿವಾಚಕ

ವಡ್ಡೇರಹಳ್ಳಿ = ವಡ್ಡರ + ಹಳ್ಳಿ > ವಡ್ಡರಹಳ್ಳಿ > ವಡ್ಡೇರಹಳ್ಳಿ

ವಡ್ಡರು = ಮೇಲಿನ ಸ್ಥಳದ ನಿಷ್ಪತ್ತಿಯ್ನೇ ಹೋಲುತ್ತದೆ

ಹಳ್ಳಿ = ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ವಡ್ಡರು' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ವಡ್ಡರಹಳ್ಳಿ' ಸ್ಥಳನಾಮವಾಗಿದೆ. 'ಅ' ಕಾರಕ್ಕೆ 'ಏ' ಕಾರಾದೇಶವಾಗಿ 'ವಡ್ಡೇರಹಳ್ಳಿ' ಸ್ಥಳನಾಮ ರೂಪುಗೊಂಡಿದೆ.

94) ವಂದರಗುಪ್ಪೆ : ಸಸ್ಯವಾಚಕ

ವಂದರಗುಪ್ಪೆ = ವಂದರ+ಕುಪ್ಪೆ > ವಂದರಕುಪ್ಪೆ > ವಂದರಗುಪ್ಪೆ.

ವಂದರ = ಒಂದು ಬಗೆಯ ಸಸ್ಯ.

ಗುಪ್ಪೆ > ಕುಪ್ಪೆ

ಕುಪ್ಪೆ = ರಾಶಿ, ಗುಂಪು

ನಿರ್ದಿಷ್ಟ 'ವಂದರ' ಪದ, ವಾರ್ಗಿಕ 'ಕುಪ್ಪೆ' ಪದದೊಡನೆ ಸೇರಿ 'ವಂದರಕುಪ್ಪೆ' ಸ್ಥಳನಾಮವಾಗಿದೆ. 'ಕ'ಕಾರದ ಬದಲಾಗಿ 'ಗ' ಕಾರಾಗಮವಾಗಿದೆ.

95) ವಿಟಲೇಶಹಳ್ಳಿ : ದೈವವಾಚಕ

ವಿಟಲೇಶಹಳ್ಳಿ = ವಿಟಲ +ಹಳ್ಳಿ > ವಿಟಲಹಳ್ಳಿ > ವಿಟಲೆಹಳ್ಳಿ > ವಿಟಲೇಶಹಳ್ಳಿ

ವಿಟಲ = ವಿಷ್ಣು, ಕೃಷ್ಣ

= ದೈವವಾಚಕ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ವಿಟಲ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ವಿಟಲಹಳ್ಳಿ' ಸ್ಥಳನಾಮವಾಗಿದೆ. 'ಅ' ಕಾರಕ್ಕೆ 'ಏ' ಕಾರಾದೇಶವಾಗಿದೆ. ಪದಮಧ್ಯದಲ್ಲಿ 'ಶ' ಕಾರಾಗಮವಾಗಿ 'ವಿಟಲೇಶಹಳ್ಳಿ' ಸ್ಥಳನಾಮರೂಪವಾಗಿದೆ. ವಿಟಲದೇವರ ನೆಲೆ ಎಂಬರ್ಥದಲ್ಲಿ ಸ್ಥಳನಾಮವಾಗಿದೆ.

96) ವಿರುಪಸಂದ್ರ : ದೈವವಾಚಕ

ವಿರುಪಸಂದ್ರ = ವಿರುಪ + ಸಂದ್ರ > ವಿರುಪಸಂದ್ರ

ವಿರುಪ = ವಿರೂಪಾಕ್ಷ, ಶಿವ

ಸಂದ್ರ = ಸಮುದ್ರ, ಸಾಗರ

ನಿರ್ದಿಷ್ಟ 'ವಿರುಪ' ಪದ, ವಾರ್ಗಿಕ 'ಸಂದ್ರ' ಪದದೊಡನೆ ಸೇರಿ 'ವಿರುಪಸಂದ್ರ'ವಾಗಿದೆ. ಕೆರೆಯ ಪಕ್ಕದಲ್ಲಿ ವಿರೂಪಾಕ್ಷ

ದೇವಸ್ಥಾನವಿರುವುದರಿಂದ 'ವಿರೂಪಸಂದ್ರ' ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

97) ವಿರೂಪಾಕ್ಷಿಪುರ : ದೈವವಾಚಕ

ವಿರೂಪಾಕ್ಷಿಪುರ = ವಿರೂಪಾಕ್ಷ + ಪುರ > ವಿರೂಪಾಕ್ಷಪುರ > ವಿರೂಪಾಕ್ಷಿಪುರ

ವಿರೂಪಾಕ್ಷ = ಶಿವ

= ದೈವವಾಚಕ

ಪುರ = ಪಟ್ಟಣ, ನಗರ

ನಿರ್ದಿಷ್ಟ 'ವಿರೂಪಾಕ್ಷ' ಪದದೊಡನೆ ವಾರ್ಗಿಕ 'ಪುರ' ಪದ ಸೇರಿ 'ವಿರೂಪಾಕ್ಷಿಪುರ' ಸ್ಥಳನಾಮವಾಗಿದೆ. 'ಅ' ಕಾರಕ್ಕೆ 'ಇ' ಕಾರಾಗಮನವಾಗಿ 'ವಿರೂಪಾಕ್ಷಿಪುರ' ಸ್ಥಳನಾಮವಾಗಿದೆ. ವಿರೂಪಾಕ್ಷದೇವರು ನೆಲೆ ನಿಂತಿರುವ ಸ್ಥಳ ಎಂಬರ್ಥದ ಸ್ಥಳನಾಮವಾಗಿದೆ.

98) ಶಾನುಭೋಗನಹಳ್ಳಿ : ವ್ಯಕ್ತಿವಾಚಕ

ಶಾನುಭೋಗನಹಳ್ಳಿ = ಶಾನುಭೋಗ + ನ + ಹಳ್ಳಿ > ಶಾನುಭೋಗನಹಳ್ಳಿ

= ಶಾನುಭಾಗ > ಶ್ಯಾನುಭೋಗ > ಶಾನಭೋಗ > ಶಾನುಭೋಗ

ಶಾನಭೋಗ = The clerk of a village or of some villages.[91]

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ.

ನಿರ್ದಿಷ್ಟ 'ಶಾನಭೋಗ' ಪದದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ 'ಶಾನಭೋಗನಹಳ್ಳಿ' ಸ್ಥಳನಾಮವಾಗಿದೆ. 'ಅ' ಕಾರದ ಬದಲಿಗೆ 'ಉ' ಕಾರಾಗಮನವಾಗಿ 'ಶಾನುಭೋಗನಹಳ್ಳಿ' ಸ್ಥಳನಾಮರೂಪವಾಗಿದೆ. ಶಾನುಭೋಗತನವನ್ನು ಮಾಡುತ್ತಿದ್ದ ವ್ಯಕ್ತಿಯ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

99) ಸಣಬನಹಳ್ಳಿ : ಸಸ್ಯವಾಚಕ

ಸಣಬನಹಳ್ಳಿ = ಸಣಬ + ನ + ಹಳ್ಳಿ > ಸಣಬನಹಳ್ಳಿ

ಸಣಬ = The sun hemp plant, Crotolarla Juncea, and the common hemp plant.[92]

= ಒಂದು ಬಗೆಯ ಸಸ್ಯ ಮತ್ತು ಅದರ ನಾರು

= ಇದರ ನಾರಿನಿಂದ ಹಗ್ಗ ಮೊದಲಾದವನ್ನು ಮಾಡುತ್ತಾರೆ

ನಿರ್ದಿಷ್ಟ 'ಸಣಬನ' ಪದದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ 'ಸಣಬನಹಳ್ಳಿ' ಸ್ಥಳನಾಮವಾಗಿದೆ. 'ಸಣಬ' ಒಂದು ಬಗೆಯ ಸಸ್ಯ. ಈ ಸಸ್ಯಭಾಗಗಳನ್ನು ನೀರಿನಲ್ಲಿ ನೆನೆ ಹಾಕಿ, ಕೊಳೆಯಿಸಿ ನಂತರ ಇದರಿಂದ ನಾರನ್ನು ತೆಗೆದು ಹಗ್ಗ ಮಾಡುತ್ತಾರೆ. ಪ್ಲಾಸ್ಟಿಕ್ ಹಗ್ಗ ಬರುವ ಮೊದಲು ತೆಂಗು ಮತ್ತು ಸಣಬದ ನಾರಿನಿಂದ ತಯಾರು ಮಾಡಿದ ಹಗ್ಗ, ಹುರಿಗಳು ಬಳಕೆಯಲ್ಲಿದ್ದವು. 'ಸಣಬು' ಸಸ್ಯದ ಸಮೀಪದ ನೆಲೆ ಎಂಬರ್ಥದಲ್ಲಿ 'ಸಣಬನಹಳ್ಳಿ' ರೂಪುಗೊಂಡಿದೆ.

100) ಸರಗೂರು : ಜಲವಾಚಕ

ಸರಗೂರು = ಸರಕ+ಊರು > ಸರಕೂರು > ಸರಗೂರು

ಸರಕ = A lake, a pond.[93]

ಊರು = ಊೞು > ಊರು

= ನೆಲೆಸು, ನಿಲ್ಲು, ಇರು

ನಿರ್ದಿಷ್ಟ 'ಸರಕ' ಪದ, ವಾರ್ಗಿಕ 'ಊರು' ಪದದೊಡನೆ ಸೇರಿ 'ಸರಕೂರು' ಸ್ಥಳನಾಮವಾಗಿದೆ. 'ಕ' ಕಾರ ಹೋಗಿ 'ಗ' ಕಾರಾಗಮವಾಗಿ 'ಸರಗೂರು' ಸ್ಥಳನಾಮರೂಪವಾಗಿದೆ. ಕೆರೆಯ ಪಕ್ಕದಲ್ಲಿ ಇರುವ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

101) ಸಂಕಲಗೆರೆ : ಜಲವಾಚಕ

ಸಂಕಲಗೆರೆ = ಸಂಕಲ + ಕೆರೆ > ಸಂಕಲಗೆರೆ

ಸಂಕ = ಶಂಕು > ಸಂಕು > ಸಂಕ

'ಸಂಕ' ಪದ ಸಂಸ್ಕೃತದ 'ಶಂಕು' ಪದದಿಂದ ನಿಷ್ಪನ್ನಗೊಂಡಿದೆ.

= ಸೇತುವೆ, ಸಣ್ಣತೊರೆ, ಹೊಳೆ ಮುಂತಾದವುಗಳನ್ನು ದಾಟಲು ಅಡ್ಡಮರವನ್ನಿಟ್ಟು ಮಾಡುವ ಸೇತುವೆ.

ಕೆರೆ = ಕೆಱೆ > ಕೆರೆ

= ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ

ನಿರ್ದಿಷ್ಟ 'ಸಂಕ' ಪದ, ವಾರ್ಗಿಕ 'ಕೆರೆ' ಪದದೊಡನೆ ಸೇರಿ 'ಸಂಕಕೆರೆ' ಸ್ಥಳರೂಪವಾಗಿದೆ. ಪದಮಧ್ಯದಲ್ಲಿ 'ಲ'ಕಾರಾಗಮವಾಗಿ 'ಸಂಕಲಕೆರೆ' ಆಗಿದೆ. 'ಕ' ಕಾರ 'ಗ' ಕಾರವಾಗಿ 'ಸಂಕಲಗೆರೆ' ಸ್ಥಳನಾಮರೂಪವಾಗಿದೆ. ಕೆರೆಯ ಬಳಿ ನಿರ್ಮಾಣವಾದ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

102) ಸಂತೆಮೋಗೇನಹಳ್ಳಿ : ಜನಾಂಗವಾಚಕ, ವ್ಯಾಪಾರ ವಾಚಕ

ಸಂತೆಮೋಗೇನಹಳ್ಳಿ = ಸಂತೆ + ಮೋಗೇ + ನ + ಹಳ್ಳಿ > ಸಂತೆಮೋಗೇನಹಳ್ಳಿ

ಸಂತೆ = ನಿರ್ದಿಷ್ಟ ದಿನಗಳಲ್ಲಿ ಜನರು ಸೇರುವ ಸ್ಥಳ

ಮೋಗೇರ = ಬೆಸ್ತರು, ಮೀನುಗಾರರು

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಸಂತೆಮೋಗೇನ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಸಂತೆಮೋಗೇನಹಳ್ಳಿ' ಸ್ಥಳನಾಮವಾಗಿದೆ. ಮೀನುಗಾರರು, ವ್ಯಾಪಾರ ಮಾಡುತ್ತಿದ್ದ ಸ್ಥಳ ಎಂಬರ್ಥದ ಸ್ಥಳನಾಮವಾಗಿದೆ.

103) ಸಾದಹಳ್ಳಿ : ಜಾತಿ ಸೂಚಕ

ಸಾದಹಳ್ಳಿ = ಸಾದರ + ಹಳ್ಳಿ > ಸಾದರಹಳ್ಳಿ > ಸಾದನಹಳ್ಳಿ > ಸಾದಹಳ್ಳಿ

ಸಾದರು = ಒಂದು ಜಾತಿಯ ಹೆಸರು ಮತ್ತು ಅದಕ್ಕೆ ಸೇರಿದ ವ್ಯಕ್ತಿ.[94]

= ಹಂಪ ನಾಗರಾಜಯ್ಯನವರು " ಚತುರ್ಥಕುಲ ಎಂಬುದು ಜೈನ ಸಮಾಜದಲ್ಲಿ ಇರುವ ಒಳಜಾತಿಗಳಲ್ಲಿ ಒಂದು. ಚತುರ್ಥ ಬೋಗಾರರು, ಸಾದರು, ಪಂಚಮರು, ವೈಶ್ಯರು ಎಂಬ ಕುಲಗಳು ಜೈನರಲ್ಲಿವೆ"[95]ಎಂದು ಹೇಳುತ್ತಾರೆ.

ಹಳ್ಳಿ = ಚಿಕ್ಕ ಊರು, ಗ್ರಾಮ.

ನಿರ್ದಿಷ್ಟ 'ಸಾದರ' ಮತ್ತು ವಾರ್ಗಿಕ 'ಹಳ್ಳಿ' ಪದಗಳು ಸೇರಿ 'ಸಾದರಹಳ್ಳಿ' ಸ್ಥಳನಾಮವಾಗಿದೆ.

ಸಾದರ ಪದದಲ್ಲಿನ 'ರ' ಕಾರ ಲೋಪವಾಗಿ 'ಸಾದಹಳ್ಳಿ' ಸ್ಥಳನಾಮರೂಪವಾಗಿದೆ.

104) ಸಿದ್ದನಹಳ್ಳಿ : ವ್ಯಕ್ತಿವಾಚಕ

ಸಿದ್ದನಹಳ್ಳಿ = ಸಿದ್ದ + ನ + ಹಳ್ಳಿ > ಸಿದ್ದನಹಳ್ಳಿ

ಸಿದ್ದ = ಒಬ್ಬಾತನ ಹೆಸರು

= ವ್ಯಕ್ತಿವಾಚಕ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಸಿದ್ದ' ಮತ್ತು ವಾರ್ಗಿಕ 'ಹಳ್ಳಿ' ಪದಗಳು ಸೇರಿ 'ಸಿದ್ದನಹಳ್ಳಿ' ಸ್ಥಳನಾಮವಾಗಿದೆ. ಸಿದ್ದ ಎಂಬ ವ್ಯಕ್ತಿಯಿಂದ ನಿರ್ಮಾಣವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

106) ಸಿಂಗರಾಜಪುರ : ವ್ಯಕ್ತಿವಾಚಕ

ಸಿಂಗರಾಜಪುರ = ಸಿಂಗರಾಜ + ಪುರ > ಸಿಂಗರಾಜಪುರ

ಶೃಂಗರಾಜ > ಸಿಂಗರಾಜ

ಶೃಂಗರಾಜ = ಒಬ್ಬ ಋಷಿಯ ಹೆಸರು

ಪುರ = ಪಟ್ಟಣ, ನಗರ.

ನಿರ್ದಿಷ್ಟ 'ಶೃಂಗಾರರಾಜ' ಪದ, ವಾರ್ಗಿಕ 'ಪುರ' ಪದದೊಡನೆ ಸೇರಿ 'ಶೃಂಗರಾಜಪುರ' ಸ್ಥಳನಾಮವಾಗಿದೆ. 'ಶೃ'ಕಾರ ಹೋಗಿ 'ಸಿ' ಕಾರಾಗಮವಾಗಿ 'ಸಿಂಗರಾಜಪುರ' ಸ್ಥಳನಾಮರೂಪವಾಗಿದೆ. ಶೃಂಗರಾಜ ಮಹರ್ಷಿಗಳು ಆ ಸ್ಥಳದಲ್ಲಿ ನೆಲೆಸಿದರಿಂದ ಅವರ ನೆನಪಿಗಾಗಿ ನಿರ್ಮಾಣವಾದ ಸ್ಥಳ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

106) ಸೀಬನಹಳ್ಳಿ : ವ್ಯಕ್ತಿವಾಚಕ

ಸೀಬನಹಳ್ಳಿ = ಸೀಬ + ನ + ಹಳ್ಳಿ > ಸೀಬನಹಳ್ಳಿ

ಸೀಬ > ಸೀನ

ಸೀನ = ಒಬ್ಬಾತನ ಹೆಸರು

= ವ್ಯಕ್ತಿವಾಚಕ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಸೀನ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಸೀನಹಳ್ಳಿ' ಸ್ಥಳನಾಮವಾಗಿದೆ. ಪದಮಧ್ಯದಲ್ಲಿ 'ಬ' ಕಾರಾಗಮನದಿಂದ 'ಸೀಬನಹಳ್ಳಿ' ಸ್ಥಳನಾಮರೂಪವಾಗಿದೆ. ಸೀನನೆಂಬಾತನ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಿದೆ.

108) ಸುಣ್ಣಘಟ್ಟ : ಶಿಲಾವಾಚಕ

ಸುಣ್ಣಘಟ್ಟ = ಸುಣ್ಣ + ಘಟ್ಟ > ಸುಣ್ಣಘಟ್ಟ

ಸುಣ್ಣ = ನುಣ್ಣ > ಚೂರ್ಣ

ಸುಣ್ಣ = ಸುಣ್ಣದ ಕಲ್ಲು, ಒಂದು ಬಗೆಯ ಬಿಳಿಯ ರೀತಿಯ ಕಲ್ಲು.

ಘಟ್ಟ = ನದಿ, ಕೆರೆ ಮುಂತಾದವುಗಳ ತೀರ, ದಡ ಎಂಬರ್ಥಗಳಿವೆ.

= ಬೆಟ್ಟದ ಇಳಿಜಾರು ಪ್ರದೇಶ.[96]

ನಿರ್ದಿಷ್ಟ 'ಸುಣ್ಣ' ಪದ, ವಾರ್ಗಿಕ 'ಘಟ್ಟ' ಪದದೊಡನೆ ಸೇರಿ 'ಸುಣ್ಣಘಟ್ಟ' ಸ್ಥಳನಾಮವಾಗಿದೆ.

ಬಿಳಿಯಕಲ್ಲಿನ ಬೆಟ್ಟದ ಕೆಳಗಿನ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

108) ಸುಳ್ಳೇರಿ : ವ್ಯಕ್ತಿವಾಚಕ

ಸುಳ್ಳೇರಿ = ಸೂಳೆ + ಏರಿ > ಸೂಳೇರಿ > ಸೂಳ್ಳೇರಿ > ಸುಳ್ಳೇರಿ

ಸೂಳೆ = A harlot, a Prostitute.[97]

= ರಾಜನಿಗೆ ಮೀಸಲಾದ ವೇಶ್ಯೆಯರು

ಏರಿ = ಏಱಿ > ಏರಿ

= A Raised bank, The bank of a tank.[98]

= ನೀರನ್ನು ನಿಲ್ಲಿಸುವುದಕ್ಕಾಗಿ ಹಾಕುವ ಎತ್ತರವಾದ ಕಟ್ಟೆ, ಎತ್ತರವಾದ ದಂಡೆ.

ದೇಶೀಯ ಪದ = ತಮಿಳು–ಏರಿ; ಮಲಯಾಳಂ–ಏರಿ; ತುಳು –ಏರಿ; ಕೊಡವ–ಏರಿ[99]

ನಿರ್ದಿಷ್ಟ 'ಸೂಳೆ' ಪದ, ವಾರ್ಗಿಕ 'ಏರಿ' ಪದದೊಡನೆ ಸೇರಿ 'ಸೂಳ್ಳೇರಿ' ಸ್ಥಳನಾಮವಾಗಿದೆ. ಈ ಸ್ಥಳದ ಕೆರೆಗೆ ಸೂಳೆಯರು ಏರಿಯನ್ನು ಕಟ್ಟಿಸಿದಕ್ಕೆ ಈ ಸ್ಥಳಕ್ಕೆ 'ಸುಳ್ಳೇರಿ' ಎಂಬರ್ಥದಲ್ಲಿ ಸ್ಥಳನಾಮವಾಗಿದೆ.

109) ಶೆಟ್ಟಹಳ್ಳಿ : ವರ್ತಕವಾಚಕ

ಶೆಟ್ಟಹಳ್ಳಿ = ಶೆಟ್ಟಿ + ಹಳ್ಳಿ > ಶೆಟ್ಟಿಹಳ್ಳಿ > ಶೆಟ್ಟಹಳ್ಳಿ

ಶೆಟ್ಟಿ = ಶ್ರೇಷ್ಠನ್ > ಶೆಟ್ಟಿ

= ವ್ಯಾಪಾರಗಾರ, ವರ್ತಕ, ವ್ಯಾಪಾರವನ್ನು ವೃತ್ತಿಯನ್ನಾಗಿ ಉಳ್ಳವನು, ವೈಶ್ಯಕುಲದವನು.

= ವಾಣಿಜ್ಯೋದ್ಯಮ ಸಂಘದ ಮುಖ್ಯಸ್ಥ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕಊರು, ಗ್ರಾಮ, ನೆಲಸುವಿಕೆ

ನಿರ್ದಿಷ್ಟ 'ಶೆಟ್ಟಿ' ಪದದೊಡನೆ ವಾರ್ಗಿಕ 'ಹಳ್ಳಿ' ಪದ ಸೇರಿ 'ಶೆಟ್ಟಿಹಳ್ಳಿ' ಸ್ಥಳನಾಮರೂಪುಗೊಂಡಿದೆ.

'ಇ' ಕಾರ ಹೋಗಿ 'ಅ' ಕಾರಾಗಮವಾಗಿ 'ಶೆಟ್ಟಹಳ್ಳಿ' ಸ್ಥಳನಾಮರೂಪವಾಗಿದೆ. ವ್ಯಾಪಾರವನ್ನು ವೃತ್ತಿಯನ್ನಾಗಿ ಉಳ್ಳ ಶೆಟ್ಟಿ ಜನರು ನೆಲೆಯಾಗಿದ್ದ ಸ್ಥಳ ಎಂಬರ್ಥದಲ್ಲಿ 'ಶೆಟ್ಟಿಹಳ್ಳಿ' ಸ್ಥಳನಾಮವಿದೆ.

110) ಸೋಗಾಲ : ದೈವವಾಚಕ

ಸೋಗಾಲ = ಸೋ + ಗಾಲ > ಸೋಗಾಲ

ಸೋ = ಸೋಮೇಶ್ವರ ದೇವಸ್ಥಾನ

ಗಾಲ > ಮಂಗಲ

ಮಂಗಲ = fortunate, prosperous, anspicious, faring well, happy; beautiful, pleasing[100]

ನಿರ್ದಿಷ್ಟ 'ಸೋ' ಪದ, ವಾರ್ಗಿಕ 'ಮಂಗಲ' ಪದದೊಡನೆ ಸೇರಿ 'ಸೋಮಂಗಲ' ಸ್ಥಳನಾಮವಾಗಿದೆ. 'ಮಂ' ಕಾರ ಲೋಪವಾಗಿ

'ಸೋಗಲ' ಸ್ಥಳನಾಮರೂಪವಾಗಿದೆ. 'ಅ' ಕಾರಕ್ಕೆ 'ಆ' ಕಾರಾಗಮವಾಗಿ 'ಸೋಗಾಲ' ಸ್ಥಳನಾಮವಾಗಿದೆ. ಸೋಮೇಶ್ವರ ದೇವಸ್ಥಾನದ ನೆಲೆ ಎಂಬರ್ಥದ ಸ್ಥಳನಾಮವಾಗಿದೆ.

111) ಸೋಮನಾಥಪುರ : ದೈವವಾಚಕ

ಸೋಮನಾಥಪುರ = ಸೋಮ + ನಾಥ + ಪುರ > ಸೋಮನಾಥಪುರ

ಸೋಮನಾಥ = shiva, or his linga.[101]

ಪುರ = ಪಟ್ಟಣ, ನಗರ.

ನಿರ್ದಿಷ್ಟ 'ಸೋಮನಾಥ' ಪದದೊಡನೆ ವಾರ್ಗಿಕ 'ಪುರ' ಪದ ಸೇರಿ 'ಸೋಮನಾಥಪುರ' ಸ್ಥಳನಾಮವಾಗಿದೆ.

'ಸೋಮನಾಥೇಶ್ವರ ದೇವಾಲಯ'ದ ನೆಲೆ ಎಂಬರ್ಥದಲ್ಲಿ ಈ 'ಸೋಮನಾಥಪುರ' ಸ್ಥಳನಾಮವಾಗಿದೆ.

112) ಹನಿಯೂರು : ಜಲವಾಚಕ

ಹನಿಯೂರು = ಹನಿ + ಊರು > ಹನಿಯೂರು

ಹನಿ = To fall in drops, to drop[102]

ಹನಿ > ಪನಿ

ಊರು = ಊಱು > ಊರು

= ನೆಲಸು, ನಿಲ್ಲು, ಇರು

ನಿರ್ದಿಷ್ಟ 'ಹನಿ' ಪದ, ವಾರ್ಗಿಕ 'ಊರು' ಪದದೊಡನೆ ಸೇರಿ 'ಹನಿಯೂರು' ಸ್ಥಳನಾಮವಾಗಿದೆ. ಶೃಂಗರಾಜ ನೆಲೆಸಿದ ಬೆಟ್ಟದ ಹತ್ತಿರವಿದ್ದ ಹಳ್ಳಿಯಲ್ಲಿ ಯಾವಾಗಲೂ ಮಳೆ ಹನಿಯುತ್ತಿರಲಿ ಎಂದು ಹೇಳಿ ಹೊರಟ ಸ್ಥಳವೇ ಈಗ 'ಹನಿಯೂರು' ಎಂಬರ್ಥದ ಸ್ಥಳನಾಮರೂಪವಾಗಿದೆ.

113) ಹಳೆಹಳ್ಳಿ : ವಸತಿವಾಚಕ

ಹಳೆಹಳ್ಳಿ = ಹಳೆ + ಹಳ್ಳಿ

ಹಳೆ = ಪ್ರಾಚೀನವಾದದ್ದು

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಹಳೆ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಹಳೆಹಳ್ಳಿ' ಸ್ಥಳನಾಮರೂಪವಾಗಿದೆ.

114) ಹಾರೋಕೊಪ್ಪ : ಜಾತಿವಾಚಕ

ಹಾರೋಕೊಪ್ಪ = ಹಾರುವರ + ಕೊಪ್ಪ > ಹಾರುವರಕೊಪ್ಪ > ಹಾರುವಕೊಪ್ಪ > ಹಾರೋಕೊಪ್ಪ

ಹಾರುವ = ಪಾರ್ವ > ಪಾರುವ > ಹಾರುವ

= ವೇದ ಮೊದಲಾದ ಧರ್ಮಗ್ರಂಥಗಳನ್ನು ಓದಿ ತಿಳಿದಿರುವವನು.

= ಬ್ರಾಹ್ಮಣ

ಕೊಪ್ಪ < ಕೊಪ್ಪಲು

ಕೊಪ್ಪಲು = ಚಿಕ್ಕ ಊರು, ಉಪಗ್ರಾಮ.

ನಿರ್ದಿಷ್ಟ 'ಹಾರುವ' ಮತ್ತು ವಾರ್ಗಿಕ 'ಕೊಪ್ಪ' ಪದ ಸೇರಿ 'ಹಾರುವರಕೊಪ್ಪ' ಸ್ಥಳನಾಮವಾಗಿದೆ. ಏಕಸ್ಥಾನೀಯಗಳಾದ 'ರ' ಕಾರಗಳಲ್ಲಿ ಒಂದು 'ರ' ಧ್ವನಿ ಲೋಪವಾಗಿ 'ಹಾರುವಕೊಪ್ಪ' ರೂಪವಾಗಿದೆ. 'ಹಾರುವಕೊಪ್ಪ' ಪದದ 'ವ' ಕಾರ 'ಒ'ಕಾರವಾಗಿ ಪರಿವರ್ತನೆಯಾಗುವಾಗ 'ಹಾರೋಕೊಪ್ಪ' ಸ್ಥಳನಾಮರೂಪವಾಗಿದೆ. ಹಾರುವರ ನೆಲೆಯೆಂಬರ್ಥದಲ್ಲಿ 'ಹಾರೋಕೊಪ್ಪ' ಸ್ಥಳನಾಮವಿದೆ.

115) ಹಾರೋಹಳ್ಳಿದೊಡ್ಡಿ : ಜಾತಿವಾಚಕ

ಹಾರೋಹಳ್ಳಿದೊಡ್ಡಿ = ಹಾರುವರ + ಹಳ್ಳಿ + ದೊಡ್ಡಿ > ಹಾರುವರಹಳ್ಳಿದೊಡ್ಡಿ > ಹಾರುವಹಳ್ಳಿದೊಡ್ಡಿ > ಹಾರೋಹಳ್ಳಿದೊಡ್ಡಿ

ಹಾರುವ = ಮೇಲಿನ ನಿಷ್ಪತ್ತಿಯನ್ನೇ ಹೋಲುತ್ತದೆ

ಹಳ್ಳಿ = ಚಿಕ್ಕ ಊರು, ಗ್ರಾಮ

ದೊಡ್ಡಿ = ಪ್ರಾಥಮಿಕ ಹಂತದ ವಸತಿ ನೆಲೆ.

ನಿರ್ದಿಷ್ಟ 'ಹಾರುವ' ಮತ್ತು ವಾರ್ಗಿಕ 'ಹಳ್ಳಿ', 'ದೊಡ್ಡಿ' ಪದ ಸೇರಿ 'ಹಾರುವಹಳ್ಳಿದೊಡ್ಡಿ' ಸ್ಥಳನಾಮವಾಗಿದೆ.

ಏಕಸ್ಥಾನೀಯಗಳಾದ 'ರ' ಕಾರಗಳಲ್ಲಿ ಒಂದು 'ರ' ಧ್ವನಿ ಲೋಪವಾಗಿ 'ಹಾರುವಹಳ್ಳಿದೊಡ್ಡಿ' ರೂಪವಾಗಿದೆ. 'ಹಾರುವಹಳ್ಳಿದೊಡ್ಡಿ' ಪದದ 'ವ' ಕಾರ 'ಒ' ಕಾರವಾಗಿ ಪರಿವರ್ತನೆಯಾಗುವಾಗ 'ಹಾರೋಹಳ್ಳಿದೊಡ್ಡಿ' ಸ್ಥಳನಾಮರೂಪವಾಗಿದೆ. ಹಾರುವವರು ಒಂದು ಕಡೆಯ ನೆಲೆನಿಂತ ಹಳ್ಳಿ ಎಂಬರ್ಥದಲ್ಲಿ 'ಹಾರೋಹಳ್ಳಿದೊಡ್ಡಿ' ಸ್ಥಳನಾಮವಿದೆ.

116) ಹುಣಸನಹಳ್ಳಿ : ಸಸ್ಯವಾಚಕ

ಹುಣಸನಹಳ್ಳಿ = ಹುಣಸೆ + ನ + ಹಳ್ಳಿ > ಹುಣಸೆನಹಳ್ಳಿ > ಹುಣಸನಹಳ್ಳಿ

ಹುಣಸೆ = ಪುಣಸೆ > ಹುಣಸೆ > ಹುಣಸೆ

= The tamarind, a ripe tamarind fruit.[103]

= ಹುಣಸೆಹಣ್ಣು

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಹುಣಸೆ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಹುಣಸೆನಹಳ್ಳಿ' ಸ್ಥಳನಾಮವಾಗಿದೆ. 'ಎ' ಕಾರ 'ಅ' ಕಾರಾಗಮವಾಗಿ 'ಹುಣಸನಹಳ್ಳಿ' ಸ್ಥಳನಾಮರೂಪವಾಗಿದೆ. ಹುಣಸೆಮರಗಳ ಹತ್ತಿರದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ.

117) ಹೊಟ್ಟಿಗನಹೊಸಹಳ್ಳಿ : ವ್ಯಕ್ತಿವಾಚಕ

ಹೊಟ್ಟಿಗನಹೊಸಹಳ್ಳಿ = ಹೊಟ್ಟಿಗ + ನ + ಹೊಸ +ಹಳ್ಳಿ > ಹೊಟ್ಟಿಗನಹೊಸಹಳ್ಳಿ

ಹೊಟ್ಟಿಗ = A gorbeilied, Corpulent man[104]

ಹೊಸ = ಪೊಸ > ಹೊಸ

= ನೂತನ, ನವೀನ

= ಹೊಸದಾದ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಹೊಟ್ಟಿಗ' ಪದ, ವಾರ್ಗಿಕ 'ಹೊಸಹಳ್ಳಿ'

ಪದದೊಡನೆ ಸೇರಿ 'ಹೊಟ್ಟಿಗನಹೊಸಹಳ್ಳಿ' ಸ್ಥಳನಾಮವಾಗಿದೆ.

118) ಹೊನ್ನಿಗನಹಳ್ಳಿ : ವ್ಯಕ್ತಿವಾಚಕ

ಹೊನ್ನಿಗನಹಳ್ಳಿ = ಹೊನ್ನೇನ + ಹಳ್ಳಿ > ಹೊನ್ನೇನಹಳ್ಳಿ > ಹೊನ್ನೀನಹಳ್ಳಿ > ಹೊನ್ನಿಗನಹಳ್ಳಿ.

ಹೊನ್ನೇ = ವ್ಯಕ್ತಿಯ ಹೆಸರು

= ಪೊನ್ + ಅಯ್ಯ > ಪೊನ್ನಯ್ಯ > ಹೊನ್ನಯ್ಯ

= (ಹೊನ್ನ+ ಅಯ್ಯ) > ಹೊನ್ನಯ್ಯ > ಹೊನ್ನಯ

ಹೊನ್ನ = ಹೊನ್ನಮ್ಮ ದೇವತೆಯ ಪೂರ್ವಘಟಕ

ಅಯ್ಯ = ತಂದೆ, ಅಪ್ಪ ಮೊದಲಾದವುಗಳಂತೆ ಗಂಡಸಿನ ಹೆಸರಿನ ಕೊನೆಯಲ್ಲಿ ಸೇರುವ ಪದ 'ಹೊನ್ನ' ಮತ್ತು 'ಅಯ್ಯ' ಪದಗಳು ಕೂಡಿ ಹೊನ್ನಯ್ಯ ವ್ಯಕ್ತಿವಾಚಕವಾಗಿದೆ. ಸಂಕೀರ್ಣಗೊಂಡು 'ಹೊನ್ನಿ' ಪದವಾಗಿದೆ. 'ಹೊನ್ನಿ' ಪದದೊಡನೆ 'ಹಳ್ಳಿ' ಸೇರಿ 'ಹೊನ್ನಿನಹಳ್ಳಿ' ಪದವಾಗಿದೆ. ಪದಮಧ್ಯದಲ್ಲಿ 'ಗ' ಕಾರಾಗಮನವಾಗಿ 'ಹೊನ್ನಿಗನಹಳ್ಳಿ' ಸ್ಥಳನಾಮರೂಪವಾಗಿದೆ.

119) ಹೊಸಹಳ್ಳಿ : ವಸತಿವಾಚಕ

ಹೊಸಹಳ್ಳಿ = ಹೊಸತು + ಹಳ್ಳಿ > ಹೊಸತುಹಳ್ಳಿ > ಹೊಸಹಳ್ಳಿ

ಹೊಸ = ಪೊಸ > ಹೊಸ

= ನೂತನ, ನವೀನ

= ಹೊಸದಾದ

ಹಳ್ಳಿ = ಪಳ್ಳಿ > ಹಳ್ಳಿ

= ಚಿಕ್ಕ ಊರು, ಗ್ರಾಮ

ನಿರ್ದಿಷ್ಟ 'ಹೊಸ' ಪದ, ವಾರ್ಗಿಕ 'ಹಳ್ಳಿ' ಪದದೊಡನೆ ಸೇರಿ 'ಹೊಸಹಳ್ಳಿ' ಸ್ಥಳನಾಮವಾಗಿದೆ. ಹೊಸದಾದ ನೆಲೆ ಎಂಬರ್ಥದಲ್ಲಿ 'ಹೊಸಹಳ್ಳಿ' ಸ್ಥಳನಾಮವಿದೆ. ಆಡುನುಡಿಯಲ್ಲಿ 'ಹೊಸಳ್ಳಿ' ಎಂದು ಕರೆಯುತ್ತಾರೆ.

120) ಹೊಂಗನೂರು : ವ್ಯಕ್ತಿವಾಚಕ

ಹೊಂಗನೂರು = ಪುಂಗನ+ಊರು>ಪುಂಗನೂರು>ಪೊಂಗನೂರು > ಹೊಂಗನೂರು.

ಪುಂಗವ = ಶ್ರೇಷ್ಠ, ಬ್ರಾಹ್ಮಣ

ಊರು = ಊಱು > ಊರು

= ನೆಲಸು, ನಿಲ್ಲು, ಇರು

ನಿರ್ದಿಷ್ಟ 'ಪುಂಗವ' ಪದ, ವಾರ್ಗಿಕ 'ಊರು' ಪದದೊಡನೆ ಸೇರಿ 'ಪುಂಗವನೂರು' ಸ್ಥಳನಾಮವಾಗಿದೆ. 'ಉ' ಕಾರಕ್ಕೆ 'ಒ' ಕಾರಾಗಮವಾಗಿ 'ಪೊಂಗವನೂರು' ಆಗಿದೆ. ಪದಮಧ್ಯದ 'ವ' ಕಾರ ಲೋಪವಾಗಿ 'ಪೊಂಗನೂರು' ಸ್ಥಳನಾಮವಾಗಿದೆ. 'ಪ' ಕಾರ ಲೋಪವಾಗಿ 'ಹ' ಕಾರಾಗಮವಾಗಿ 'ಹೊಂಗನೂರು' ಸ್ಥಳನಾಮರೂಪವಾಗಿದೆ. ಬ್ರಾಹ್ಮಣರು ವಾಸವಾದ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮವಾಗಿದೆ. ಈಗ ಮುಸಲ್ಮಾನರು ಹೆಚ್ಚಾಗಿ ಈ ಊರಿನಲ್ಲಿ ವಾಸವಾಗಿದ್ದಾರೆ.

** ** ** ** **

ಕೊನೆ ಟಿಪ್ಪಣಿಗಳು :

1. ಆರ್ಕೆ ಮಣಿಪಾಲ : ಹೆಸರಿನಲ್ಲೇನಿದೆ? ಪುಟ–20
2. ಎಂ.ಈಶ್ವರಪ್ಪ : ಕನ್ನಡ ವ್ಯಾಕರಣ ಕೈಪಿಡಿ, ಪುಟ–44
3. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–6
4. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–16
5. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–25
6. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–77
7. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–810
8. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–88
9. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–125

10. ವಕ್ತೃ : ತಮ್ಮಯ್ಯ, 70ವರ್ಷ, ಒಕ್ಕಲಿಗರು, ಅವ್ವೇರಹಳ್ಳಿ.

11. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–99

12. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ–379

13. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–99

14. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–99

15. ಕನ್ನಡ ಜಾನಪದ ಕೋಶ : ಪುಟ: 43

16. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ–9, ಶಾ.ಸಂ.9, ಪುಟ–56

17. ವಕ್ತೃ : ಶಿವಣ್ಣ, 60ವರ್ಷ, ಆದಿಕರ್ನಾಟಕ, ಅರಳಾಳಸಂದ್ರ

18. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ–6

19. ವಕ್ತೃ : ಕೃಷ್ಣ, 60ವರ್ಷ, ಒಕ್ಕಲಿಗರು, ಅಂಕುಶನಹಳ್ಳಿ

20. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–85

21. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂ–9, ಶಾ.ಸಂ.62, ಪುಟ–320

22. ವಕ್ತೃ : ನಟರಾಜಮೂರ್ತಿ, 48ವರ್ಷ, ಒಕ್ಕಲಿಗರು, ಇಗ್ಗಲೂರು

23. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–278

24. ಎಫ್.ಕಿಟಲ್ : ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–357

25. ಚಿದಾನಂದಮೂರ್ತಿ : ಭಾಷಾ ವಿಜ್ಞಾನ ಮತ್ತು ಛಂದಸ್ಸು ಸಂಪುಟ–3, ಪುಟ–16

26. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂಪುಟ–9, ಶಾ.ಸಂ. 120, ಪುಟ–40.

27. ಕನ್ನಡ ಸಾಹಿತ್ಯ ಪರಿಷತ್ತಿನ, ಕನ್ನಡ ನಿಘಂಟು, ಪುಟ–3084.

28. ಬಿ.ಎಲ್.ರೈಸ್ : ಎಫಿಗ್ರಫಿ ಕರ್ನಾಟಕ, ಸಂಪುಟ–9, ಶಾ.ಸಂ.162, ಪುಟ–344.

29. ಎಫ್ : ಕಿಟಲ್: ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–430.

30. ವ್ಯಕ್ತೃ : ಕೆ.ಕೃಷ್ಣಮೂರ್ತಿ, ಶ್ರೀರಾಮದೇವಸ್ಥಾನದ ಅರ್ಚಕರು, ಕೂಡ್ಲೂರು.

31. ಕನ್ನಡ ಸಾಹಿತ್ಯ ಪರಿಷತ್ತು : ಕನ್ನಡ ನಿಘಂಟು, ಸಂ–8, ಪುಟ–195

32. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಕರ್ನಾಟಕ, ಸಂಪುಟ–9, ಶಾ.ಸಂ.52, ಪುಟ–316

33. ಎಫ್.ಕಿಟಲ್: ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–497

34. ಎಫ್.ಕಿಟಲ್: ಕನ್ನಡ –ಇಂಗ್ಲೀಷ್ ಡಿಕ್ಷನರಿ, ಪುಟ–497

35. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ–2231

36. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–500

37. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–501

38. ಬಿ.ಎಲ್.ರೈಸ್: ಎಫಿಗ್ರಾಫಿಯಾ ಕರ್ನಾಟಕ, ಸಂಪುಟ–9, ಶಾ.ಸಂ. 56/58, ಪುಟ–318

39. ವ್ಯಕ್ತಿ : ಜಗದೀಶ, 40ವರ್ಷ, ಒಕ್ಕಲಿಗರು, ಗರಕಹಳ್ಳಿ

40. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–562

41. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–1191

42. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–574

43. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂಪುಟ–9, ಶಾ.ಸಂ.158, ಪುಟ–342

44. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–583

45. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂಪುಟ–9, ಶಾ.ಸಂ.11, ಪುಟ–215

46. ಎಫ್. ಕಿಟಲ್: ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–584

47. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ, ಸಂಪುಟ–9, ಶಾ.ಸಂ.23, ಪುಟ–400

48. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–592

49. ಎಂ.ಎಂ.ಕಲಬುರ್ಗಿ: ಗ್ರಾಮನಾಮ, ಪುಟ–88

50. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–678

51. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–682

52. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–737– 738

53. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–754

54. ವ್ಯಕ್ತಿ: ನಾರಾಯಣ್, 40ವರ್ಷ, ಒಕ್ಕಲಿಗರು,ದಶವಾರ

55. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು : ಪುಟ–4060

56. ವಕ್ತೃ : ಸಿದ್ದೇಗೌಡ, 60ವರ್ಷ, ಒಕ್ಕಲಿಗರು, ದೇವರಹೊಸಹಳ್ಳಿ

57. ಧನರಾಜ : ಪಾಂಡವಪುರ ತಾಲ್ಲೂಕಿನ ಸ್ಥಳನಾಮಗಳು: (ಅಪ್ರಕಟಿತ ಮಹಾಪ್ರಬಂಧ) ಪುಟ–176

58. ಎಂ.ಎಂ.ಕಲಬುರ್ಗಿ : ಕನ್ನಡನಾಮ ವಿಜ್ಞಾನ, ಪುಟ–67

59. ವಕ್ತೃ : ಚಿಕ್ಕರಂಗಯ್ಯ, 60ವರ್ಷ,ಒಕ್ಕಲಿಗರು, ನೀಲಕಂಠನಹಳ್ಳಿ

60. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷನರಿ, ಪುಟ–892

61. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–895
62. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–906
63. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು : ಪುಟ–4926
64. ಎಫ್.ಕಿಟಲ್: ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–926
65. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ: ಸಂಪುಟ–9, ಶಾಸನಸಂಖ್ಯೆ 65, ಪುಟ–321
66. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1101
67. ವಿ.ಗೋಪಾಲಸ್ವಾಮಿ : ಸ್ಥಳನಾಮ ಅಧ್ಯಯನ, ಪುಟ–59
68. ಎಫ್.ಕಿಟಲ್ :ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1100
69. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1101
70. ಧನರಾಜ್ : ಪಾಂಡವಪುರ ತಾಲ್ಲೂಕಿನ ಸ್ಥಳನಾಮಗಳು (ಅಪ್ರಕಟಿತ ಮಹಾಪ್ರಬಂಧ) ಪುಟ–128
71. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ: 6628
72. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1129
73. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ–8453
74. ವಿಶ್ವನಾಥ : ಸಕಲೇಶಪುರದ ಸ್ಥಳನಾಮಗಳು, ಪುಟ–126
75. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1174
76. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1143
77. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1151
78. ಕನ್ನಡ ಸಾಹಿತ್ಯ ಪರಿಷತ್ತಿನ, ಕನ್ನಡ ನಿಘಂಟು ಪುಟ–6638
79. ಎಫ್.ಕಿಟಲ್ : ಕನ್ನಡ–ಇಂಗ್ಲೀಷ್ ಡಿಕ್ಷ್ನರಿ, ಪುಟ–1155
80. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ–4498
81. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷ್ನರಿ, ಪುಟ–1196
82. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ–ಸಂಪುಟ 9, ಶಾ.ಸಂ.15, ಪುಟ–315
83. ಎಫ್. ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷ್ನರಿ, ಪುಟ–1222
84. ಬಿ.ಎಲ್.ರೈಸ್ : ಎಫಿಗ್ರಾಫಿಯಾ ಕರ್ನಾಟಕ: ಸಂಪುಟ–9, ಶಾ.ಸಂ.147, ಪುಟ–335
85. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷ್ನರಿ, ಪುಟ–1230
86. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷ್ನರಿ, ಪುಟ–1015

87. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1231

88. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1247

89. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1267

90. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1289

91. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1452

92. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1491

93. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1521

94. ಜನಪದ ಕೋಶ : ಪುಟ–728

95. ಹಂಪ ನಾಗರಾಜಯ್ಯ : ಚಂದ್ರಕೊಡೆ, ಪುಟ–94

96. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ–2681

97. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1586

98. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–292

99. ಕನ್ನಡ ಸಾಹಿತ್ಯ ಪರಿಷತ್ತಿನ : ಕನ್ನಡ ನಿಘಂಟು, ಪುಟ–1158

100. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1185

101. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1600

102. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1629

103. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–992

104. ಎಫ್.ಕಿಟಲ್ : ಕನ್ನಡ ಇಂಗ್ಲೀಷ್ ಡಿಕ್ಷನರಿ, ಪುಟ–1689

** ** ** ** **

ಸಮಾರೋಪ

ಸಂಶೋಧನೆಯ ವಿವಿಧ ಪ್ರಕಾರಗಳಲ್ಲಿ ಸ್ಥಳನಾಮಗಳ ಅಧ್ಯಯನ ಕುತೂಹಲಕರವಾದುದು. ಹಾಗೂ ಆ ಕ್ಷೇತ್ರದಲ್ಲಿ ತೊಡಗಿರುವವರಿಗೆ ವಿವಿಧ ಅನುಭವಗಳ ಜೊತೆ ಸಂಶೋಧನೆಯ ತರುವಾಯ ರೋಮಾಂಚನವನ್ನು ತಂದು ಕೊಡುವಂತದ್ದಾಗಿದೆ.

ಕರ್ನಾಟಕದ ಜನಜೀವನ, ಸಂಸ್ಕೃತಿ, ವೃತ್ತಿ, ಕಸುಬು ಇದರ ಹಿನ್ನೆಲೆಯಲ್ಲಿ ಎಲ್ಲಾ ಸ್ಥಳನಾಮಗಳು ಊರು, ಕೇರಿ, ಆಲ, ಅರೆ, ಕಲ್ಲು, ಪಟ್ಟ, ಕೋಡು, ಮರ, ಗೂಡು, ವರ, ಕೊಪ್ಪಲು, ಕಳಲೆ, ಗಳಲೆ, ಕೋಟೆ, ಬೈಲು, ವಾಡಿ, ಹಾಡಿ, ಕಾಲ, ಗರಿ, ಪಟ್ಟಣ, ಸಮುದ್ರ, ಸೋಗೆ, ಸಂತೆ, ಮಠ ಈ ಬಗೆಯ ಅಂತ್ಯ ಪ್ರತ್ಯಯಗಳೊಡನೆ ಬರುತ್ತವೆ. ಈ ಅಂತ್ಯ ಪ್ರತ್ಯಯಗಳ ಹಿಂದೆ ವ್ಯಕ್ತಿ, ದೈವದ, ಪ್ರಕೃತಿಯ ಅಂಗೋಪಾಂಗಗಳ ಹೆಸರುಗಳು ಇದ್ದೇ ಇರುತ್ತವೆ. ಕೊಪ್ಪಲು ಅತಿ ಚಿಕ್ಕ ಜನವಸತಿ ಪ್ರದೇಶವಾದರೆ ಹಳ್ಳಿ, ಪಲ್ಲಿ, ಪಟ್ಟಿ ಇವು ಕೊಪ್ಪಲಿಗಿಂತ ಸ್ವಲ್ಪ ದೊಡ್ಡ ಪ್ರಮಾಣದ ಜನವಸತಿಗಳು. ಗ್ರಾಮವೆಂಬುದು ಹಳ್ಳಿಗಿಂತ ಹಿರಿದು. ಪಟ್ಟಣ, ನಗರ ಇವು ನಾಗರಿಕತೆ ಮತ್ತು ಸಕಲ ಸೌಲಭ್ಯಗಳುಳ್ಳ ಸ್ಥಳಗಳೆಂದು ಕಳೆದ ಶತಮಾನದಲ್ಲಿ ಹೆಸರು ಗಳಿಸಿದ್ದವು. ಸ್ಥಳನಾಮಗಳು ಪುಟ್ಟ ಪುಟ್ಟ ಸಂಸ್ಕೃತಿ ಕೋಶಗಳು ಎಂಬ ಮಾತು ಅತ್ಯಂತ ಸಮಂಜಸವಾದುದಾಗಿದೆ. ಆದರೆ ಸ್ಥಳನಾಮಗಳು ಈಗಾಗಲೇ ಗಮನಿಸಿದಂತೆ ಮಾನವಶಾಸ್ತ್ರ, ಇತಿಹಾಸ, ಪುರಾಣ, ಕತೆಗಳು, ದಂತಕತೆ ಇವುಗಳ ನಡುವೆ ಮುಚ್ಚಿಹೋಗಿರುವುದರಿಂದ ಸಂಶೋಧಕರಿಗೆ ಅನೇಕ ಸ್ಥಳನಾಮಗಳ ನಿಜ ನಿಷ್ಪತ್ತಿ ದೊಡ್ಡ ಸಾವಾಲಾಗಿಬಿಟ್ಟಿದೆ.

ಸ್ಥಳನಾಮಗಳ ಹೆಸರುಗಳು ಮಾನವನ ಹುಟ್ಟಿನೊಂದಿಗೆ ಗುರುತಿಸಿಕೊಂಡಿರುವುದರಿಂದ ಸ್ಥಳನಾಮಗಳ ಸಂಸ್ಕೃತಿ ಮತ್ತು ಸಾಮಾಜಿಕ ಹಿನ್ನೆಲೆಯಿಂದ ಅವುಗಳ ಆಳ, ವಿಸ್ತಾರಕ್ಕೆ ಇಳಿದು ಗರಡಿ ಹಾಕಿ ಅವುಗಳಲ್ಲಿ ಹುದುಗಿರುವ ಜ್ಞಾನದ ಮುತ್ತುಗಳನ್ನು ಹೊರತೆಗೆಯಬೇಕಿದೆ. ಒಂದು ಸ್ಥಳನಾಮದಲ್ಲಿ ಭೂಗೋಳ, ಸಂಸ್ಕೃತಿ, ಭಾಷೆ, ನಾಗರಿಕತೆ, ರಾಜತ್ವ, ಆಳ್ವಿಕೆ, ಸಂಸ್ಥಾನ, ಧಾರ್ಮಿಕತೆ, ವಿಜ್ಞಾನ, ಮಾನವಿಕ ವಿಜ್ಞಾನ ಶಾಖೆಗಳೆಲ್ಲವು ಅಡಕವಾಗಿರುತ್ತವೆ. ಆದ್ದರಿಂದ ನಾಡಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ತಿಳಿದುಕೊಳ್ಳಲು ಸ್ಥಳನಾಮಗಳು ಮಹತ್ವದ ಸಾಧನಗಳಾಗಿವೆ.

ವ್ಯಕ್ತಿಯ ಹಿರಿಮೆಯಿಂದ, ದೇವಾಲಯಗಳ ಪ್ರಭಾವದಿಂದ, ಪ್ರಾಕೃತಿಕ ವೈಶಿಷ್ಟ್ಯತೆಗಳಿಂದ, ಗ್ರಾಮ್ಯ ಭಾಷೆಯ ರೂಪಾಂತರದಿಂದ ಮೂಲ ಸ್ಥಳನಾಮಗಳು ಹೊಸರೂಪ ತಾಳುತ್ತಿವೆ.

ಸ್ಥಳನಾಮಗಳಿಗೆ ಅವುಗಳದೇ ಆದ ಅರ್ಥವಿರುತ್ತದೆ. ಸ್ಥಳನಾಮಗಳ ಉಗಮಕ್ಕೆ ಪ್ರಾಕೃತಿಕ, ಜನಾಂಗೀಯ, ಪೌರಾಣಿಕ, ಐತಿಹಾಸಿಕ ಕಸುವು ಮತ್ತು ವ್ಯಕ್ತಿಗತ ಕಾರಣಗಳು ಮುಖ್ಯವಾಗಿವೆ.

ನಗರಿಕರಣದ ಪ್ರಭಾವದಿಂದಾಗಿ ಹಿಂದೆ ಹೆಸರುಗಳು ಬಿದ್ದು ಹೋಗಿ, ಹೊಸ ಹೆಸರುಗಳನ್ನು ಪಡೆದು ಎದ್ದು ನಿಲ್ಲುತ್ತವೆ. ಆದರೂ ಹಿಂದೆ ಇದ್ದ ಆ ಸ್ಥಳಮಹಿಮೆಯ ವಿವರ ಅಷ್ಟಾಗಿ ಅಳಿದು ಹೋಗುವುದಿಲ್ಲ. ಒಂದು ಊರು, ಗ್ರಾಮ, ಪುರ, ಹಳ್ಳಿಗಳಿಗೆ ಅಥವಾ ಒಂದು ನಿಶ್ಚಿತ ಪ್ರದೇಶಕ್ಕೆ ಕಾಟಾಚಾರದ ಹೆಸರನ್ನು ಇಡುವುದಿಲ್ಲ. ಆ ಸ್ಥಳ ಮಹಿಮೆಗೆ ತಕ್ಕಂತೆ ಅನೇಕ ಪೂರಕ ಅಂಶಗಳು ಕಾರಣೀಬೂತವಾಗಿರುತ್ತವೆ. ಅವುಗಳು ಪ್ರಾಕೃತಿಕ, ಭೌಗೋಳಿಕ ಅಂಶಗಳಾಗಿರಬಹುದು. ಮಾನವನ ಸಾಂಸ್ಕೃತಿಕ ಹಿನ್ನೆಲೆಯು ಸಂಸ್ಕೃತಿಯ ಹೆಸರುಗಳಾಗಿ ಅಂಕಿತ ಪಡೆದು ಪ್ರಚಾರಕ್ಕೆ ಬಂದು ಠಂಕಶಾಲೆಯ ಹಣದಂತೆ ಪ್ರಸರಣಗೊಳ್ಳಬಹುದು.

ಪ್ರಾಕೃತಿಕ ಪರಿಸರವಿರುವ ಕರ್ನಾಟಕದಂತಹ ರಾಜ್ಯದಲ್ಲಿ ಒಂದೊಂದು ಪ್ರಾಂತ್ಯ ಮತ್ತು ಊರಿನ ಹೆಸರುಗಳು ವೈವಿಧ್ಯಮಯ ಹೆಸರುಗಳಿಂದ ಮತ್ತು ವರ್ಣನೆಗಳಿಂದ ಕೂಡಿದವುಗಳಾಗಿವೆ. ಈ ಹಿನ್ನೆಲೆಯಲ್ಲಿ ಸ್ಥಳನಾಮಗಳ ಅಧ್ಯಯನದ ವಿವರಣಾತ್ಮಕ ಮಹತ್ವವನ್ನು ತಿಳಿಯಬಹುದಾಗಿದೆ.

ಸ್ಥಳನಾಮಗಳ ಮಹತ್ವ ಅಪರಿಮಿತ, ಅನಂತ. ಮನುಕುಲದ ಸರ್ವಸಮಸ್ತವೂ ಸ್ಥಳನಾಮಗಳಲ್ಲಿ ಅಡಗಿವೆ. ಇದರಲ್ಲಿ ನೋಟದ ಸವಿ ಇದೆ; ಕ್ಷೇತ್ರದ ಹರವಿದೆ; ಮಣ್ಣಿನ ಗುಣವಿದೆ; ಬಣ್ಣದ ಬೆಡಗಿದೆ; ಭಾಷೆಯ ಸೊಗಡಿದೆ; ಸಂಸ್ಕೃತಿಯ ಪ್ರತಿಬಿಂಬವಿದೆ. ಇಂತಹ ಅಧ್ಯಯನದಿಂದ ವೈಚಾರಿಕ, ಭಾಷಿಕ, ಸಾಹಿತ್ಯಕ, ಜೈವಿಕ, ಮಾನವಿಕ ಮತ್ತು ಸಾಂಸ್ಕೃತಿಕ ವಿವರಗಳು ದೊರೆಯುತ್ತವೆ.

ಕಲೆ, ಸಂಗೀತ, ಕಸೂತಿ, ಭೂಗೋಳ, ಪರಿಸರ, ಜೀವವಿಜ್ಞಾನ, ಸಸ್ಯವಿಜ್ಞಾನ, ಐತಿಹಾಸಿಕ ಪರಂಪರೆ, ಗತಕಾಲದ ಪಳೆಯುಳಿಕೆಗಳ ಹಿನ್ನೆಲೆ ಜಾನಪದಿಯ ವಿವರಗಳನ್ನು ಸ್ಥಳನಾಮಗಳಿಂದ ಮಾತ್ರ ತಿಳಿಯಬಹುದಾಗಿದೆ. ಅವುಗಳೇ ಊರು, ಕೇರಿ, ಗ್ರಾಮ, ಪುರ, ಹೋಬಳಿ, ತಾಲ್ಲೂಕು, ಜಿಲ್ಲೆ ಆಡಳಿತಾತ್ಮಕ ವಿಭಾಗ ಕೇಂದ್ರಗಳು. ಮಹಾನಗರ ಪಾಲಿಕೆ ವ್ಯವಸ್ಥೆ, ಪುರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಗಳ ಅಸ್ತಿತ್ವ ಮತ್ತು ಉಗಮಕ್ಕೆ ನಗರ, ಪಟ್ಟಣ, ಮೊಹಲ್ಲಾ, ಬಡಾವಣೆಗಳ ಉಗಮಕ್ಕೆ ಸ್ಥಳನಾಮಗಳೇ ಕಾರಣವಾಗುತ್ತವೆ.

ಸ್ಥಳನಾಮಗಳ ಮಹತ್ವಗಳನ್ನು ಈ ಕೆಳಗಿನ ಅಂಶಗಳಿಂದ ತಿಳಿಯಬಹುದಾಗಿದೆ.

1. ಮಾನವನ ಹುಟ್ಟು ಮತ್ತು ನೆಲೆಗಳ ವಿಕಾಸ.
2. ನಾಗರಿಕತೆಯ ಬೆಳವಣಿಗೆ.
3. ಪ್ರಕೃತಿ ಸಂಪತ್ತಿನ ಅನುಭೋಗ ಮತ್ತು ವಿನಿಯೋಗ.
4. ಪ್ರಾಕೃತಿಕ ಭೌಗೋಳಿಕ ಪರಿಸರದ ನೆಲೆ ಮತ್ತು ವಾಸ್ತವ್ಯದ ಕುರುಹುಗಳನ್ನು ತಿಳಿಯಬಹುದಾಗಿದೆ.
5. ಪಶುಪಾಲನೆ ಪೋಷಣೆಗಳು ಆರಂಭವಾದದ್ದು.
6. ಐತಿಹಾಸಿಕ ಪರಂಪರೆಯ ವಿವರಗಳು.
7. ಮಾನಸಿಕ ವಿಜ್ಞಾನಗಳ ಪರಿಚಯ.
8. ಆಯಾಯಾ ಕಾಲದ ರಾಜರ ಸಾಂಸ್ಕೃತಿಕ ವಿವರಗಳನ್ನು ಕೆತ್ತಿರುವ ಶಾಸನಗಳು ಮತ್ತು ಅವುಗಳ ಭಾಷೆ, ಸಿದ್ದಿ, ಸಾಧನೆ, ದಾನಧರ್ಮಾಧಿಗಳು ಇತ್ಯಾದಿ.
9. ಕೃಷಿಗಾರಿಕೆ, ಮೀನುಗಾರಿಕೆ, ಬೇಟೆ ಇತ್ಯಾದಿ ವೃತ್ತಿಗಳ ಇತಿಹಾಸ.
10. ವೃತ್ತಿ ಮತ್ತು ಜನಾಂಗದ ವಿವರಗಳು.
11. ಭೂ ಸಂಪತ್ತಿನಲ್ಲಿ ದೊರೆಯುವ ಲೋಹಗಳ ಬಳಕೆ.
12. ಪಶುಪಕ್ಷಿಗಳ ನಡುವೆ ಮಾನವರ ಅವಿನಾಸಂಬಂಧ.
13. ಸಸ್ಯ ಸಂಪತ್ತು ಮತ್ತು ಸಮೃದ್ಧಿಯ ವಿವರಗಳು.
14. ಮಾನವ ಮತ್ತು ಪ್ರಕೃತಿಯ ಸಂಬಂಧ.
15. ಸಾಮಾಜಿಕ ಏಣಿಶ್ರೇಣಿಯ ಉಗಮ. (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ)
16. ಕೈಗಾರಿಕೆಯ ಬೆಳವಣಿಗೆಗಳು.
17. ನಗರೀಕರಣ.
18. ಆರ್ಥಿಕ ಸ್ವಾವಲಂಬನೆ ಮತ್ತು ವಸ್ತುಗಳ ವಿನಿಮಯ ಪದ್ಧತಿ.
19. ರಾಜ ಪ್ರಭುತ್ವದ ಸಿದ್ದಿ ಸಾಧನೆ ಮತ್ತು ಕೌಶಲ್ಯಗಳು.
20. ಮತ ಧರ್ಮದ ವಿವರಗಳು.
21. ಉಡುಗೆ-ತೊಡುಗೆ, ಊಟೋಪಚಾರ ಪದ್ಧತಿಗಳು.
22. ಲೋಕರೂಢಿ ಸಂಪ್ರದಾಯಗಳು.
23. ವಾಸ್ತವ್ಯದ ಮಾದರಿ, ವಿವಿಧ ಶೈಲಿಗಳು (ನಾಗರ, ವೇಸರ, ದ್ರಾವಿಡ)
24. ಕಲೆ, ಸಂಗೀತ, ಕಸೂತಿ.

ಇನ್ನು ಮುಂತಾದ ವಿಚಾರಗಳು ಊರು, ಸ್ಥಳ ವಿವರಗಳಿಂದ ಮಾತ್ರ ತಿಳಿಯಲು ಸಾಧ್ಯ. ಆದ್ದರಿಂದಲೇ ಊರು, ಹಳ್ಳಿಗಳ ಹಿನ್ನೆಲೆಯಲ್ಲಿ ಸ್ಥಳನಾಮಗಳಿಗೆ ಅಷ್ಟೊಂದು ಮಹತ್ವ ಬಂದಿರುವುದು.

ಜನತೆಯ ಭಾಷೆ, ಊಟೋಪಚಾರಗಳು, ಗ್ರಾಮದೇವತೆ, ರಾಜರ ಆಳ್ವಿಕೆ, ಗ್ರಾಮವೀರರ ಸಿದ್ಧಿ–ಸಾಧನೆ, ಹೋರಾಟ, ವೀರಮರಣ, ವೀರಗಲ್ಲುಗಳ ಸ್ಥಾಪನೆ, ಶಾಸನಗಳ ರಚನೆ, ಭೌಗೋಳಿಕ ವಿಶೇಷ, ಅರ್ಥವಂತಿಕೆ, ಪರಿಭಾಷೆ, ಕೆರೆಕಟ್ಟೆ, ಗುಡಿ–ಗೋಪುರಗಳ ನಿರ್ಮಾಣದ ವಿವರಗಳನ್ನು ಸ್ಥಳನಾಮಗಳ ಅಧ್ಯಯನದಿಂದ ತಿಳಿಯಬಹುದು. ಯಾವುದೇ ಜಿಲ್ಲೆ, ತಾಲ್ಲೂಕು ಚಿಕ್ಕದಿರಬಹುದು. ಆದರೆ ಸ್ಥಳನಾಮವಿಲ್ಲದೆ ಯಾವುದೇ ಸ್ಥಳ ಅಥವಾ ಊರು ಭಾರತಾದ್ಯಂತ ಇಲ್ಲವೇ ಇಲ್ಲ.

ಇಂಥ ಹಿನ್ನೆಲೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನದಿಂದ ಆ ಪ್ರದೇಶದ ಭಾಷೆ, ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ ಸ್ಥಿತಿಗತಿ ಮುಂತಾದವುಗಳನ್ನು ಪುನಾರಚಿಸುವಲ್ಲಿ ಸ್ಥಳನಾಮಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ ಎಂಬುದನ್ನು ಗಮನಿಸಲಾಗಿದೆ.

ಸ್ಥಳನಾಮಗಳು ಬಹಳ ಹಿಂದಿನಿಂದಲೂ ಭಾರತೀಯರ ಆಸಕ್ತಿಯನ್ನು ಕೆರಳಿಸಿವೆ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಪಾಣಿನಿ ಸ್ಥಳನಾಮಳ ಸಾಂಸ್ಕೃತಿಕ ಲಕ್ಷಣಗಳನ್ನು ಗುರುತಿಸಿದ್ದ. ಅಲ್ಲದೆ ನಮ್ಮ ಪೂರ್ವಿಕರು ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಕಟ್ಟಿರುವ ಕಟ್ಟು ಕತೆಗಳನ್ನು ಹೆಣೆದಿರುವ ಸ್ಥಳ ಪುರಾಣಗಳು, ಸ್ಥಳನಾಮಗಳ ಬಗ್ಗೆ ಅವರಿಗಿದ್ದ ವಿಶೇಷ ಆಸಕ್ತಿಯನ್ನು ತಿಳಿಸುತ್ತವೆ. ಆದರೂ ಪಾಣಿನಿ ಪ್ರತಿಯೊಂದು ಸ್ಥಳನಾಮಗಳಿಗೂ ನಿರುಕ್ತ ನೀಡುವ ಸಂಕಲ್ಪವನ್ನಷ್ಟೆ ಹೊಂದಿದ್ದ. ಅಲ್ಲದೆ ಸ್ಥಳನಾಮಗಳು ಬಹಳಷ್ಟು ಸಲ ಆ ಸ್ಥಳವನ್ನು ವೈಭವೀಕರಿಸುವ ಕಟ್ಟುಕತೆಗಳಾಗಿವೆ. ಇಲ್ಲವೆ ಸ್ಥಳನಾಮಗಳನ್ನು ಸಂಸ್ಕೃತೀಕರಣಗೊಳಿಸಿ ಯಾವುದೋ ದೇವತೆ ಇಲ್ಲವೆ ಋಷಿ ಮೂಲಕ್ಕೆ ಅಂಟಿಸುವ ತಪ್ಪು ವಿವರಣೆಗಳು ಆಗಿವೆ.

ಸ್ಥಳನಾಮಗಳ ಶಾಸ್ತ್ರೀಯ ಅಧ್ಯಯನ ನಮ್ಮಲ್ಲಿ ಪ್ರಾರಂಭವಾದದ್ದು 19ನೇ ಶತಮಾನದಿಂದೀಚೆಗೆ. ಇಂದು ಭಾರತದ ಎಲ್ಲಾ ಕಡೆಯಲ್ಲು ಸ್ಥಳನಾಮಗಳ ಬಗ್ಗೆ ಅಧ್ಯಯನ ನಡೆಯುತ್ತಿವೆ. ಪ್ರಾಚೀನ ಸಂಸ್ಕೃತಿಯನ್ನು ಪುನಾರಚಿಸುವಲ್ಲಿ ಶಾಸನ, ಕಾವ್ಯಗಳಂತೆ ಸ್ಥಳನಾಮಗಳೂ ಸಹಾಯಕ ಸಾಮಾಗ್ರಿಗಳಾಗಿವೆ. ಇವುಗಳ ಮೂಲಕ ಪ್ರಾಚೀನ ಜನಾಂಗದ

ಭಾಷಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಜೀವನ ಸ್ವರೂಪವನ್ನು ಹಾಗೂ ಒಂದು ಪ್ರದೇಶದ ಭೌಗೋಳಿಕ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

ಸುಮಾರು 125 ಗ್ರಾಮಗಳನ್ನು ಒಳಗೊಂಡಿರುವ ಚನ್ನಪಟ್ಟಣ ತಾಲ್ಲೂಕಿನಲ್ಲಿ ವ್ಯಕ್ತಿನಾಮವಾಚಿ ಗ್ರಾಮ ಸಂಖ್ಯೆಗಳು ವಿಫುಲವಾಗಿವೆ. ಸಿದ್ದೇಗೌಡನದೊಡ್ಡಿ, ಭೈರಶೆಟ್ಟಿಹಳ್ಳಿ, ಮೈಲನಾಯಕನಹಳ್ಳಿ, ನಿಂಗೇಗೌಡನದೊಡ್ಡಿ, ಚನ್ನಂಕೇಗೌಡನದೊಡ್ಡಿ ಮುಂತಾದವು ಬೇರೆ ಬೇರೆ ಜಾತಿಗಳಿಗೆ ಸೇರಿರುವ ಊರಿನ ನಿರ್ಮಾಪಕರ ಹಾಗೂ ಪ್ರಮುಖರ ಹೆಸರನ್ನೇ ಹೊಂದಿರುವ ಗ್ರಾಮಗಳಾಗಿವೆ.

ಬೇಡರಹಳ್ಳಿ, ನಾಯಕರದೊಡ್ಡಿ, ಗೊಲ್ಲರದೊಡ್ಡಿ, ಬ್ರಾಹ್ಮಣಪುರ, ಕುಂಬಾರಹಳ್ಳಿ, ಐನೋರದೊಡ್ಡಿ, ವಾಜರಹಳ್ಳಿ ಮುಂತಾದ ಜನಾಂಗ ಸೂಚಕ ಗ್ರಾಮನಾಮಗಳೂ ಕಂಡುಬರುತ್ತವೆ. ಇಂದು ಕೆಲವು ಗ್ರಾಮಗಳಲ್ಲಿ ಈ ಜನಾಂಗಗಳು ಇಲ್ಲದೆ ಹೋದರೂ ಸಹ ಒಂದು ಕಾಲದಲ್ಲಿ ಈ ಜನಾಂಗಗಳು ಅಧಿಕ ಪ್ರಮಾಣದಲ್ಲಿ ಇದ್ದುದನ್ನೋ ಅಥವಾ ಪ್ರಮುಖ ಸ್ಥಾನವನ್ನು ಪಡೆದಿದ್ದುದರ ಅಂಶವನ್ನೋ ಈ ಗ್ರಾಮನಾಮಗಳು ತಿಳಿಸುತ್ತವೆ.

ಸುಮಾರು 50ಕ್ಕೂ ಹೆಚ್ಚು ಗ್ರಾಮನಾಮಗಳು ತಾಲ್ಲೂಕಿನ ಭೌಗೋಳಿಕ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಕೀರಗುಡ್ಡೆ, ಕಣವೆದೊಡ್ಡಿ, ಅರಳಾಸಂದ್ರ, ಗೆಂಡೇಮಡು, ಮೋಳೆ, ಲಾಲಘಟ್ಟ, ವೊಡ್ಡರಗುಪ್ಪೆ, ದಾಬನಗುಂಡು ಮುಂತಾದ ಗ್ರಾಮನಾಮಗಳು ಚನ್ನಪಟ್ಟಣ ತಾಲ್ಲೂಕಿನ ಭೂಮಿ ಸಮತಟ್ಟಾಗಿದೆ, ಏರು ತಗ್ಗುಗಳಿಂದ ಕೂಡಿರುವ ಭೂಭಾಗ ಎಂಬುದನ್ನು ತಿಳಿಸುತ್ತವೆ.

ಮತ್ತೀಕೆರೆ, ಅತ್ತಿಗುಪ್ಪೆ, ನೇರಳೂರು ಮುಂತಾದವು ಇಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ವಿವಿಧ ಬಗೆಯ ಸಸ್ಯ ಜಾತಿಯ ಬಗ್ಗೆ ಮಾಹಿತಿ ನೀಡುವಂತೆಯೇ; ಮೆಣಸಿಗನಹಳ್ಳಿ, ಎಲೆತೋಟದಹಳ್ಳಿ ಮುಂತಾದ ಗ್ರಾಮನಾಮಗಳು ಇಲ್ಲಿ ಬೆಳೆಯುತ್ತಿದ್ದ ಆರ್ಥಿಕ ಬೆಳೆಗಳ ಬಗ್ಗೆಯೂ ಮಾಹಿತಿ ನೀಡುತ್ತವೆ.

ತಾಲ್ಲೂಕಿನಲ್ಲಿ ಹಲವು ಗ್ರಾಮಗಳು ದೇವರ ಹೆಸರನ್ನು ಪಡೆದಿದ್ದು, ಜನರು ಧರ್ಮ ಮತ್ತು ದೇವರ ಬಗೆಗೆ ಇಟ್ಟಿದ್ದ ವಿಶ್ವಾಸದ ಬಗ್ಗೆ ಬೆಳಕು ಚೆಲ್ಲುತ್ತವೆ. ಸೋಗಾಲಪಾಳ್ಯ, ಯಲಚಿಪಾಳ್ಯ, ಬಿ.ವಿ.ಪಾಳ್ಯ (ಬಂಡೂರವಳಗೆರೆಹಳ್ಳಿ ಪಾಳ್ಯ) ಮುಂತಾದವು ತಾಲ್ಲೂಕಿನ ಸೈನಿಕ ಕೇಂದ್ರಗಳನ್ನು ನಿರ್ದೇಶಿಸುವಂತೆಯೇ ಕನ್ನಮಂಗಲ, ಕದರಮಂಗಲ, ನಾಗವಾರ, ದಶವಾರ

ಮುಂತಾದ ಗ್ರಾಮನಾಮಗಳು ತಾಲ್ಲೂಕಿನಲ್ಲಿದ್ದ ಅಗ್ರಹಾರಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುತ್ತವೆ.

ಒಟ್ಟಿನಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಾಧ್ಯಯನ ತಾಲ್ಲೂಕಿನ ಭಾಷಿಕ, ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ ಸ್ವರೂಪಗಳ ಅಧ್ಯಯನವೇ ಆಗಿದೆ. ಆದ್ದರಿಂದ ಚನ್ನಪಟ್ಟಣ ತಾಲ್ಲೂಕಿನ ಇತಿಹಾಸ ಹಾಗೂ ಸಂಸ್ಕೃತಿಯನ್ನು ಪುನಾರಚಿಸುವಲ್ಲಿ ತಾಲ್ಲೂಕಿನ ಸ್ಥಳನಾಮಗಳು ಪ್ರಮುಖ ಆಧಾರಗಳಾಗಿವೆ. ಅನುಲ್ಲೇಖಿತ ಗ್ರಂಥಗಳಾಗಿ ಇಂದಿಗೂ ಉಳಿದಿವೆ.

1. ಅಧ್ಯಯನದ ಫಲಿತಗಳು :

ಒಂದನೆಯ ಅಧ್ಯಾಯದಲ್ಲಿ ಸ್ಥಳನಾಮಗಳ ಅರ್ಥ, ಉಗಮ, ಸ್ವರೂಪವನ್ನು ತಿಳಿಸುವುದರೊಂದಿಗೆ ಸ್ಥಳನಾಮ ಅಧ್ಯಯನದ ಇತಿಹಾಸವನ್ನು ಪಾಶ್ಚಾತ್ಯ, ಭಾರತೀಯ ಮತ್ತು ಕನ್ನಡ ಸ್ಥಳನಾಮಾಧ್ಯಯನಗಳ ವಿಂಗಡಣೆಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಸ್ಥಳನಾಮಗಳ ನಿಜ ನಿಷ್ಪತ್ತಿಯ ನೆಲೆಯಿಂದ ಪ್ರಸ್ತುತ ಅಧ್ಯಾಯವನ್ನು ರೂಪಿಸಲಾಗಿದ್ದು, ಈ ಕ್ಷೇತ್ರದಲ್ಲಿ ಇದುವರೆವಿಗೂ ನಡೆದ ಸಂಶೋಧನೆಗಳ ಒಟ್ಟು ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ಸ್ಥಳನಾಮಾಧ್ಯಯನವು ಸಂಪ್ರದಾಯ ಹಂತವನ್ನು ದಾಟಿ ವಿಜ್ಞಾನದ ಶಾಖೆಯಾಗಿ ವ್ಯವಸ್ಥಿತವಾಗಿ ಬೆಳೆದು ಬಂದ ರೀತಿಯನ್ನು ಗುರುತಿಸಲಾಗಿದೆ. ಸಾಹಿತ್ಯ, ಕಲೆ, ಧರ್ಮ, ಸಂಸ್ಕೃತಿ, ವಿಜ್ಞಾನ ಮುಂತಾದ ಕ್ಷೇತ್ರಗಳು ಸ್ಥಳನಾಮಗಳಿಂದ ಪ್ರಭಾವಿತಗೊಂಡವು ಎಂಬದನ್ನು ಇಲ್ಲಿ ವಿವರಿಸಲಾಗಿದೆ. 19ನೇ ಶತಮಾನದ ಪೂರ್ವಾರ್ಧದಲ್ಲಿ ಪಾಶ್ಚಾತ್ಯರಿಂದ ಆರಂಭಗೊಂಡ ಸ್ಥಳನಾಮಾಧ್ಯಯನವು ಮುಂದೆ ಹಲವು ಸಂಶೋಧಕರ ಆಸಕ್ತಿಯ ಕ್ಷೇತ್ರವಾಗಿ ಮಾರ್ಪಟ್ಟ ವಿಷಯವನ್ನು ಸ್ಪಷ್ಟಪಡಿಸಲಾಗಿದೆ. ಇದೇ ಸಂದರ್ಭದಲ್ಲಿಯೇ ಭಾರತೀಯ ವಿದ್ವಾಂಸರು ಈ ಕ್ಷೇತ್ರದಲ್ಲಿ ಕೈಗೊಂಡ ಸಾಧನೆಗಳ ಇತಿಹಾಸವನ್ನು ಹಾಗೂ ಮಹಾಭಾರತ, ರಾಮಾಯಣ ಮುಂತಾದ ಧರ್ಮಗ್ರಂಥಗಳು, ಐತಿಹ್ಯಗಳು, ಪುರಾಣಗಳು ಈ ಅಧ್ಯಯನಕ್ಕೆ ಕಾರಣವಾದ ಐತಿಹಾಸಿಕ ವಿಚಾರಗಳನ್ನು ವಿವರಿಸಲಾಗಿದೆ.

ಕನ್ನಡ ಸ್ಥಳನಾಮಗಳ ಅಧ್ಯಯನಕ್ಕೆ ಪ್ರೇರಣೆ ನೀಡಿದ ಪಾಶ್ಚಿಮಾತ್ಯ ವಿದ್ವಾಂಸರ ಸೇವೆಯನ್ನು ನೆನೆಯಲಾಗಿದೆ. ಈ ಕ್ಷೇತ್ರದಲ್ಲಿ ಗಣನೀಯ ಸಂಶೋಧನೆ ನಡೆಸಿದ ಕನ್ನಡದ ವಿದ್ವಾಂಸರಾದ ಶಂ.ಬಾ.ಜೋಶಿ, ಎಂ.ಚಿದಾನಂದಮೂರ್ತಿ, ವಿ.ಗೋಪಾಲಕೃಷ್ಣ,

ಎಂ.ಎಂ.ಕಲಬುರ್ಗಿ, ದೇಜಗೌ, ಕೆಮ್ತೂರು ರಘುಪತಿಭಟ್ಟ, ವಿಶ್ವನಾಥ ಮುಂತಾದವರ ಕೃತಿಗಳ ವೈಶಿಷ್ಟ್ಯತೆಗಳನ್ನು ಪರಿಚಯಿಸಲಾಗಿದೆ. ಸ್ಥಳನಾಮ ಅಧ್ಯಯನದ ಚರಿತ್ರೆಯನ್ನು ರೂಪಿಸಲು ನೆರವಾದ ಈ ಕೃತಿಗಳ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಭೌಗೋಳಿಕ, ಪ್ರಾಕೃತಿಕ, ಭಾಷಿಕ, ಸಾಮಾಜಿಕ, ಐತಿಹಾಸಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಜಾನಪದೀಯ ಮೊದಲಾದ ಅಂಶಗಳನ್ನು ಸ್ಥಳನಾಮಗಳ ಮೂಲಕ ಅರಿಯುವ ಪ್ರಯತ್ನವನ್ನು ಮಾಡಲಾಗಿದೆ. ಇದುವರೆವಿಗೂ ಕನ್ನಡದಲ್ಲಿ ನಡೆದ ಸ್ಥಳನಾಮ ಅಧ್ಯಯನಗಳ ಉಪಲಬ್ಧ ಕೃತಿಗಳನ್ನು, ಶಾಸನಗಳನ್ನು, ಮೌಖಿಕ ಆಕರಗಳನ್ನು ಇಟ್ಟುಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ಸಿದ್ದಪಡಿಸಲಾಗಿದೆ. ಹಿಂದೆ ನಡೆದಿರುವ ಬಹುತೇಕ ಅಧ್ಯಯನ ಮಾದರಿಗಳು ಭಾಷಾಶಾಸ್ತ್ರದ ನೆಲೆಯಲ್ಲಿ, ವರ್ಣನಾತ್ಮಕ ಮಾದರಿಯಲ್ಲಿ ಸಿದ್ದಗೊಂಡವುಗಳಾಗಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಜಾನಪದೀಯ ಮೊದಲಾದ ವಿವಿಧ ಅಂಶಗಳನ್ನು ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಸ್ವರೂಪದ ಜೊತೆ ಚನ್ನಪಟ್ಟಣದ ಇತಿಹಾಸವನ್ನು ವಿದೇಶದಲ್ಲೂ ಪ್ರಸಿದ್ದವಾಗಲು ಕಾರಣವಾದ ಚಂದದಗೊಂಬೆಗಳ ಹಿನ್ನೆಲೆಯನ್ನು ತಿಳಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನು ವರ್ಗೀಕರಿಸಲಾಗಿ ಜಲವಾಚಿ, ಶಿಲಾವಾಚಿ, ಸಸ್ಯವಾಚಿ, ಪ್ರಾಣಿವಾಚಿ, ಪಕ್ಷಿವಾಚಿ ಮೊದಲಾದ ಪ್ರಾಕೃತಿಕ ಮೂಲದ ಸ್ಥಳನಾಮಗಳೊಂದಿಗೆ ಭೌಗೋಳಿಕ, ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಚಹರೆಯನ್ನು ಪ್ರತಿನಿಧಿಸುವ ಸ್ಥಳನಾಮಗಳನ್ನು ಗುರುತಿಸಲಾಗಿದೆ. ಅಧ್ಯಯನ ವ್ಯಾಪ್ತಿಯ ಪ್ರದೇಶ ಬೆಟ್ಟ, ಗುಡ್ಡ, ಬಂಡೆ ಹಾಗೂ ಕೆಂಪು ಮಣ್ಣಿನ ರಚನೆಯನ್ನು ಹೊಂದಿರುವ ಬಯಲು ಪ್ರದೇಶವಾಗಿದೆ. ನೈಸರ್ಗಿಕವಾಗಿ ಕೆಂಪು ಮಣ್ಣಿನ ಒಣ ಭೂಮಿಯಾದರೂ ಕೆರೆ, ಕಟ್ಟೆ, ಸಮುದ್ರ (ಸಂದ್ರ), ಕೆರೆ, ಕೋಡಿ, ಗುಂಡಿ, ಸಾಗರ ಎಂಬ ಜಲವಾಚಿ ವಾರ್ಗಿಕವನ್ನೊಳಗೊಂಡ ಸ್ಥಳನಾಮಗಳಿರುವುದು ವಿಶೇಷ ಸಂಗತಿ. ವಿಶಿಷ್ಟ ಅಥವಾ ವಾರ್ಗಿಕವನ್ನೊಳಗೊಂಡ ಜಲವಾಚಿ ಹೊಂದಿರುವ ಗ್ರಾಮ ಅಥವಾ ಅದರ ಸುತ್ತಮುತ್ತಲು ನೀರಿನ ಸಲೆ ಇರುವುದನ್ನು ಗುರುತಿಸಲಾಗಿದೆ. ಉದಾ: ತೊರೆಹೊಸೂರು, ಆಲೂರು, ತೊರೆರಾಮನಹಳ್ಳಿ.

ಸ್ಥಳನಾಮಗಳಲ್ಲಿ ಶಿಲವಾಚಿಯಾದ ಅಂಶಗಳು ಕಂಡುಬಂದಿದ್ದು, ಇದು ಸ್ಥಳನಾಮದ ನಿರ್ದಿಷ್ಟ ಆಕೃತಿಮಾ ಮತ್ತು ವಾರ್ಗಿಕ ಆಕೃತಿಮಾಗಳಲ್ಲೂ ಕಂಡುಬಂದಿರುವುದನ್ನು

ಗುರುತಿಸಲಾಗಿದೆ. ಇದರಿಂದ ತಾಲ್ಲೂಕಿನ ಭೌಗೋಳಿಕ ಚಹರೆಯು ನೇರವಾಗಿ ಸ್ಥಳನಾಮಗಳಲ್ಲಿ ಬಳಕೆಯಾಗಿರುವುದನ್ನು ಗುರುತಿಸಲಾಗಿದೆ. ಉದಾ: ಚಿಕ್ಕಮಣ್ಣಗುಡ್ಡೆ, ಸುಣ್ಣಘಟ್ಟ, ಗುಡ್ಡೆಹೊಸೂರು.

ಸ್ಥಳನಾಮಗಳಲ್ಲಿ ಕಂಡುಬರುವ ಗಿಡಮರಗಳ ಹೆಸರನ್ನು ಸೂಚಿಸುವ ಅಂಶಗಳು ನಿರ್ದಿಷ್ಟ ಮತ್ತು ವಾರ್ಗಿಕಗಳೆರಡರಲ್ಲೂ ಕಂಡುಬಂದಿರುವುದನ್ನು ಗುರುತಿಸಲಾಗಿದೆ. ಆದಿ ಮಾನವನ ಕಾಲದಿಂದಲೂ ಗಿಡ ಮರಗಳಿಗೆ ನೀಡುತ್ತಿದ್ದ ಪ್ರಾಶಸ್ತ್ಯ ಸ್ಥಳನಾಮಗಳಲ್ಲಿ ವ್ಯಕ್ತಗೊಂಡಿದೆ. ಹಿಂದೆ ಊರಿಗೆ ಹೆಸರು ಬಂದಾಗ ಆ ಪರಿಸರದಲ್ಲಿದ್ದ ಗಿಡ ಮರಗಳನ್ನು ಸೂಚಿಸಿರಬಹುದು. ಈಗ ಅವು ಮಾಯವಾಗಿದ್ದರೂ ಊರ ಹೆಸರುಗಳಲ್ಲಿ ಭದ್ರವಾಗಿರುವುದನ್ನು ಗುರುತಿಸಲಾಗಿದೆ. ಉದಾ: ಅತ್ತಿಗುಪ್ಪೆ, ಎಲೆತೋಟದಹಳ್ಳಿ, ಬೇವೂರು, ಯಲಿಯೂರು.

ಕೆಲವೊಂದು ಪ್ರಾಣಿ ಪಕ್ಷಿಗಳನ್ನು ಮನುಷ್ಯ ತನ್ನ ಆಹಾರಕ್ಕಾಗಿ ಉಪಯೋಗಿಸಿದರೆ ಮತ್ತೆ ಕೆಲವುಗಳಿಗೆ ದೈವತ್ವದ ಸಂಕೇತಗಳನ್ನು ಕೊಟ್ಟು, ಸಾಂಸ್ಕೃತಿಕವಾಗಿ ಕಂಡಿರುವ ವಿಚಾರಗಳೆಲ್ಲವನ್ನು ಸ್ಥಳನಾಮಗಳಲ್ಲಿ ಕಾಣಿಸಿಕೊಂಡಿರುವುದನ್ನು ಗುರುತಿಸಲಾಗಿದೆ. ಉದಾ: ನಾಗವಾರ, ನಾಗಪುರ, ಕೃಷ್ಣಪುರ, ರಾಂಪುರ, ವಿರೂಪಾಕ್ಷಪುರ.

ಸಂಕೀರ್ಣ ಸ್ಥಳನಾಮಗಳನ್ನು ವಿಶ್ಲೇಷಣೆಗೊಳಪಡಿಸಿದಾಗ ಸಾಪೇಕ್ಷ, ವಿಶೇಷಣಯುಕ್ತ, ವರ್ಣಸೂಚಕ ಸ್ಥಳನಾಮಗಳನ್ನು ಗುರುತಿಸಲಾಗಿದೆ. ಸಮುದಾಯವಾಚಿ, ವೃತ್ತಿವಾಚಿ, ವ್ಯಕ್ತಿವಾಚಿ, ಜಲಸಂಬಂಧಿವಾಚಿ, ಸಸ್ಯವಾಚಿ, ನಿಸರ್ಗವಾಚಿ ಮೊದಲಾದ ಅಂಶಗಳು ಸ್ಥಳನಾಮಗಳಲ್ಲಿ ಕಂಡುಬಂದಿವೆ.

ಸಾಪೇಕ್ಷ ಸ್ಥಳನಾಮಗಳನ್ನು ಗುರುತಿಸಲಾಗಿದ್ದು, ಅವು ಚಿಕ್ಕ, ದೊಡ್ಡ, ಹೊಸ, ಕಿರಿಯ ಮೊದಲಾದ ಸಾಪೇಕ್ಷ ವಿಶೇಷಣಗಳನ್ನು ಒಳಗೊಂಡ ಸ್ಥಳನಾಮಗಳು ಈ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬಳಕೆಗೊಂಡಿವೆ. ಉದಾ: ಚಿಕ್ಕಮಳೂರು, ಹೊಸಹಳ್ಳಿ, ಹಳೆಹಳ್ಳಿ, ಚಿಕ್ಕಮಣ್ಣಗುಡ್ಡೆ.

ವಿಶೇಷಣಯುಕ್ತ ಸ್ಥಳನಾಮಗಳನ್ನು ಗುರುತಿಸಿ, ವಿಶ್ಲೇಷಣೆಗೆ ಒಳಪಡಿಸಿದಾಗ, ಭೂ ವಿವರಣೆ, ವಸ್ತು, ಜಾತಿ, ವೃತ್ತಿ, ವ್ಯಕ್ತಿಯ ಗುಣ, ಗಾತ್ರ, ಬಣ್ಣ, ಪ್ರಾಣಿ, ಪಕ್ಷಿ, ದೈವ ಮೊದಲಾದ ವಿಶೇಷಣಗಳು ಕಾಣಿಸಿಕೊಂಡಿರುವುದನ್ನು ಗುರುತಿಸಲಾಗಿದೆ. ಉದಾ: ಎಲೆತೋಟದಹಳ್ಳಿ, ಎಲೆಹೊಸಹಳ್ಳಿ, ಕೋಡಿಹೊಸಹಳ್ಳಿ, ಗುಡ್ಡೆಹೊಸೂರು, ಹೊಟ್ಟಿಗನ ಹೊಸಹಳ್ಳಿ.

ವರ್ಣಸೂಚಕ ಸ್ಥಳನಾಮಗಳಲ್ಲಿ ಕಪ್ಪು, ಬಿಳಿ, ಕೆಂಪು, ಬಣ್ಣಗಳು ಬಂದಿದ್ದು ಇವು ಮಣ್ಣು, ಕಲ್ಲು, ಸಸ್ಯ ಮೊದಲಾದ ವಸ್ತುವಿನ ಜೊತೆಗೆ ಬಂದಿರುವುದನ್ನು ಗುರುತಿಸಲಾಗಿದೆ. ಉದಾ: ಬೆಳೆಕೆರೆ, ಕೆಂಗಲ್.

ನಾಲ್ಕನೆಯ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಂಡುಬರುವ ಶಾಸನೋಲ್ಲೇಖಿತ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಶಾಸನಗಳಲ್ಲಿ ದೊರೆಯುವ ಗ್ರಾಮನಾಮಗಳ ರೂಪ, ಅವುಗಳ ಹಿಂದಿನ ಅರ್ಥ ಮತ್ತು ಬದಲಾದ ಗ್ರಾಮನಾಮಗಳು, ಅವುಗಳ ನಿಷ್ಪತ್ತಿಯ ವಿವರಗಳನ್ನು ಕೊಡಲಾಗಿದೆ. ಪ್ರಾಚೀನ ಮತ್ತು ಇಂದಿನ ಗ್ರಾಮನಾಮಗಳ ರೂಪದ ಪಟ್ಟಿಯನ್ನು ಸಹ ಕೊಡಲಾಗಿದೆ.

ಉದಾ: ಚಂನಪಟ್ಟಣ > ಚನ್ನಪಟ್ಟಣ

ಮೊಗೆಹಳ್ಳಿ > ಮೋಗೇನಹಳ್ಳಿ

ಹರಊರ > ಅರೂರು

ಮಾಳಿಗೆಹಳ್ಳಿ > ಮಾಳಗಾಳು

ಐದನೆಯ ಅಧ್ಯಾಯದಲ್ಲಿ ಜಾನಪದ ಅಂಶಗಳಾದ ಪುರಾಣ, ಐತಿಹ್ಯ, ಕಥೆ, ಗಾದೆ, ಒಗಟು, ಕಥನಗೀತೆಗಳಲ್ಲಿ ಉಕ್ತಗೊಂಡಿರುವ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಿಂದ ಜನಪದರ ಆಡುಭಾಷೆಯ ಚಹರೆಯವನ್ನು ಗುರುತಿಸಲು ಸಾಧ್ಯವಾಗುತ್ತದೆ. ಸ್ಥಳಪುರಾಣ ಮತ್ತು ಸ್ಥಳೈತಿಹ್ಯಕ್ಕೆ ಭೌಗೋಳಿಕ, ಪ್ರಾಕೃತಿಕ ವೈಲಕ್ಷಣಗಳೇ ಕಾರಣವಾಗಿದ್ದರೂ ಇವುಗಳ ನಿಷ್ಪತ್ತಿಗೆ ಜನಪದರು ದೈವ, ಪೌರಾಣಿಕ ವ್ಯಕ್ತಿ ಅಥವಾ ರಾಜಕೀಯ ವ್ಯಕ್ತಿಗೆ ಸಂಬಂಧಿಸಿದ್ದ ಅತಿಮಾನುಷ ಪವಾಡಗಳನ್ನು ಆರೋಪಿಸಿ ಕಥೆಯನ್ನು ಕಟ್ಟುವುದರಲ್ಲಿ ನಿಸ್ಸೀಮರೆಂಬುದನ್ನು ಗುರುತಿಸಲಾಗಿದೆ. ಇವು ಅಸಂಭಾವ್ಯ ಘಟನೆಯಾದರೂ ಜನಪದರು ವಿಶ್ಲೇಷಣೆಗೆ ಒಳಪಡಿಸಿರುವುದಕ್ಕೆ ಜನರಿಗಿರುವ ಪಾರಂಪರಿಕ ನಂಬಿಕೆಯೇ ಮುಖ್ಯ ಕಾರಣವಾಗಿರುವುದನ್ನು ಸಹ ಗುರುತಿಸಲಾಗಿದೆ. ಕಥೆ, ಗಾದೆ, ಒಗಟು, ಗೀತೆಗಳಲ್ಲಿ ಬಂದಿರುವ ಸ್ಥಳನಾಮಗಳಲ್ಲಿ ಆ ಸ್ಥಳದಲ್ಲಿನ ವಸ್ತು–ವೈವಿಧ್ಯತೆಯನ್ನು, ಜನರ ಆಚಾರ–ವಿಚಾರ, ಸಾಹಸಪ್ರಿಯತೆ, ಸಂಪ್ರದಾಯ, ನಂಬಿಕೆ ಮೊದಲಾದ ಜಾನಪದೀಯ ಮತ್ತು ಸಾಂಸ್ಕೃತಿಕ ಕೋಶವಾಗಿರುವುದನ್ನು ಸಹ ಗುರುತಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನು ಭಾಷಿಕ ವಿಶ್ಲೇಷಣೆ ಮಾಡುವುದಕ್ಕೆ ತಾಲ್ಲೂಕಿನ ಒಟ್ಟು ಸ್ಥಳನಾಮಗಳ ರಚನಾತ್ಮಕ ಸ್ವರೂಪವನ್ನು

ಅಧ್ಯಯನಕ್ಕೊಳಪಡಿಸಿದಾಗ ಕೆಲವೊಂದು ವಿಶೇಷತೆಗಳಿಂದ ಕೂಡಿರುವುದು ಕಂಡುಬಂದಿದೆ. ಸ್ಥಳನಾಮಗಳಲ್ಲಿರುವ ಘಟಕಗಳ ಸಂಖ್ಯೆ ಒಂದರಿಂದ ಮೂರು ಘಟಕಗಳವರೆಗೆ ಇರುವುದನ್ನು ಗುರುತಿಸಲಾಗಿದೆ.

ಏಕ ಘಟಕಾಧಾರಿತ ಸ್ಥಳನಾಮಗಳು ಸಂಖ್ಯೆಯಲ್ಲಿ ಕಡಿಮೆ ಇರುವುದನ್ನು ಗುರುತಿಸಲಾಗಿದೆ. ಏಕ ಘಟಕಾಧಾರಿತ ಸ್ಥಳನಾಮಗಳಲ್ಲಿ ವಾರ್ಗಿಕ ಆಕೃತಿಮಾಗಳೇ ಸ್ವತಂತ್ರ ಸ್ಥಳವಾಚಕವಾಗಿ ಬಂದಿರುವುದನ್ನು ಗುರುತಿಸಲಾಗಿದೆ. ಉದಾ: ಪುರ.

ವಾರ್ಗಿಕವಾಗಿ ಬಳಕೆಯಾಗುವ ಆಕೃತಿಗಳು ಕೆಲವೊಮ್ಮೆ ನಿರ್ದಿಷ್ಟಗಳಾಗಿ ಬಳಕೆಯಾಗಬಹುದು. ಉದಾ : ಕೊಪ್ಪ.

ದ್ವಿಘಟಕಾಧಾರಿತ ಸ್ಥಳನಾಮಗಳಲ್ಲಿ ವಿಶಿಷ್ಟ ವಾರ್ಗಿಕಗಳಿರುವುದು ಸಾಮಾನ್ಯ ಸಂಗತಿಯಾಗಿರುವುದು ಕಂಡುಬರುತ್ತದೆ. ಉದಾ: ಸಂದ್ರ, ಊರು, ಹಳ್ಳಿ, ಸಾಗರ.

ತಾಲ್ಲೂಕಿನ ಸ್ಥಳನಾಮಗಳನ್ನು ಸಂಧಿ ಮತ್ತು ಸಮಾಸಗಳಿಗೆ ಸಂಬಂಧಿಸಿದಂತೆ ಗುರುತಿಸಿ ವಿಂಗಡಿಸಲಾಗಿದೆ. ಜೊತೆಗೆ ಭಾಷಾ ವೈಜ್ಞಾನಿಕ ಅಧ್ಯಯನಕ್ಕೊಳಪಡಿಸಲಾಗಿದೆ.

ತಾಲ್ಲೂಕಿನ ಸ್ಥಳನಾಮಗಳ 'ಅ'ಕಾರಾದಿ ಪಟ್ಟಿಯನ್ನು ಮತ್ತು ಅವುಗಳ ನಿಷ್ಪತ್ತಿಯ ವಿವರಗಳನ್ನು ನೀಡಲಾಗಿದೆ. ಸ್ಥಳನಾಮಗಳ ಹುಟ್ಟಿಗೆ ಕಾರಣವಾಗಿರುವ ಕಸುಬುಗಳು ಮತ್ತು ಕಸುಬನ್ನು ನಡೆಸುವ ಜನರ ಜೀವನ ವಿಧಾನ, ಈ ನೆಲದ ಮೂಲ ನಿವಾಸಿಗಳು, ದೈವವಾಚಕ, ಜಲವಾಚಕ, ಭೂವಾಚಕ, ವ್ಯಕ್ತಿವಾಚಕ, ಪ್ರಾಣಿವಾಚಕ ಮೊದಲಾದ ಸ್ಥಳನಾಮಗಳ ನಿಷ್ಪತ್ತಿಯ ಹಿನ್ನಲೆಯಲ್ಲಿ ಗುರುತಿಸಲಾಗಿದೆ.

2. ಮುಂದಿನ ಅಧ್ಯಯನದ ಸಾಧ್ಯತೆಗಳು

1) ಚನ್ನಪಟ್ಟಣ ತಾಲ್ಲೂಕಿನ ಕೆಲವು ಪ್ರಸಿದ್ಧ ಸ್ಥಳಗಳನ್ನು ಕುರಿತು ಪ್ರತ್ಯೇಕವಾಗಿ ಅಧ್ಯಯನ ಮಾಡಲು ಅವಕಾಶವಿದೆ.
2) ಚನ್ನಪಟ್ಟಣ ತಾಲ್ಲೂಕು ಬೆಟ್ಟ-ಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು, ಅಲ್ಲಿನ ಜನಪದರು ಪ್ರತಿಯೊಂದು ಕಲ್ಲು ಬಂಡೆಯನ್ನು ತೋರಿಸಿ ಅದಕ್ಕೊಂದು ಕಥೆಯನ್ನು ಹೇಳುತ್ತಾರೆ. ಆದ್ದರಿಂದ ಕಲ್ಲುಗಳು ಹೇಳುವ ಕಥೆಗಳನ್ನೇ ಪ್ರತ್ಯೇಕವಾಗಿ, ವಿಸ್ತೃತವಾಗಿ ಅಧ್ಯಯನ ಮಾಡಲು ಅವಕಾಶವಿದೆ.

3) ಕರ್ನಾಟಕದ ಪ್ರತಿಯೊಂದು ಜಿಲ್ಲೆ ಅಥವಾ ತಾಲ್ಲೂಕು, ಇಡೀ ಕರ್ನಾಟಕವನ್ನು ಅನುಲಕ್ಷಿಸಿ ಮೌಖಿಕ ಪರಂಪರೆಯ ಪುರಾಣ, ಐತಿಹ್ಯ, ಕಥೆ, ಜನಪದಗೀತೆ, ಗಾದೆ, ಒಗಟು ಹಾಗೂ ಜನಪದ ಹೇಳಿಕೆಗಳ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲು ಸಾಧ್ಯವಿದೆ.

4) ಭಾಷೆಯ ಚಾರಿತ್ರಿಕ ಬೆಳವಣಿಗೆ, ಭಾಷೆಯ ಅವಸ್ಥೆ ಮತ್ತು ಬದಲಾವಣೆ, ಪ್ರತಿನಾಮಕರಣ ಹಾಗೂ ಐತಿಹಾಸಿಕ ಸಂಗತಿಗಳ ಜೊತೆಗೆ ಸ್ಥಳನಾಮಗಳ ಜೊತೆಯಲ್ಲಿ ಬಂದಿರುವ ವೀರರ, ತ್ಯಾಗಿಗಳ, ಧರ್ಮವಂತರ ಹಾಗೂ ಪ್ರಾದೇಶಿಕ ವಿಭಾಗಗಳು, ಮಾಸ್ತಿಗಲ್ಲು, ವೀರಗಲ್ಲು ಮೊದಲಾದ ಅಂಶಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಲು ಅವಕಾಶಗಳಿವೆ.

5) ಚನ್ನಪಟ್ಟಣ ತಾಲ್ಲೂಕು ಜಾನಪದದ ಅಕ್ಷಯ ಪಾತ್ರೆಯಿದ್ದಂತೆ. ಮೌಖಿಕ ಪರಂಪರೆಯ ಪುರಾಣ, ಐತಿಹ್ಯ, ಕಥೆ, ಗಾದೆ, ಒಗಟು, ಗೀತೆ ಮೊದಲಾದವನ್ನು ಸಾಧ್ಯವಾದಷ್ಟು ಮಾತ್ರ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಹಬ್ಬ, ಜಾತ್ರೆ, ಆಚರಣೆಯನ್ನು ಸ್ವಲ್ಪ ಪ್ರಮಾಣದಲ್ಲಿ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಇನ್ನೂ ಲಭ್ಯವಾಗುವ ಎಲ್ಲ ಮೌಖಿಕ ಪರಂಪರೆಯ ಸ್ಥಳನಾಮ ಆಕರಗಳನ್ನು ಹಾಗೆ ಸಮಗ್ರವಾಗಿ ಹಬ್ಬ, ಜಾತ್ರೆ, ಆಚರಣೆಗಳನ್ನು ಬಳಸಿಕೊಂಡು ವಿಸ್ತೃತವಾದ ಚರ್ಚೆ ನಡೆಸಲು ಸಾಧ್ಯವಿದೆ.

** ** ** ** **

ಅನುಬಂಧ–1

ಗ್ರಂಥಸೂಚಿ :

1. ಅಪ್ರಮೇಯ ಅಯ್ಯಂಗಾರ್ : ಶ್ರೀ ಜ್ಞಾನಮಂಟಪ ಕ್ಷೇತ್ರ ಮಹಾತ್ಮ್ಯವು, 2000.
2. ಅಬ್ದುಲ್ ಬಷೀರ್. ಜಿ : ಸೆರಗುಕಣ್ಣೊತ್ತಿ ಅಳುತ್ತಾಳೆ, ಸನಾ ಪ್ರಕಾಶನ, ಬೆಂಗಳೂರು, 1998.
3. ಅರವಿಂದಮಾಲಗತ್ತಿ : ಕನ್ನಡ ವಿಶ್ವಕೋಶ, ಸಂ.1, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 2005.
4. ಅಂಕನಹಳ್ಳಿಪಾರ್ಥ : ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಅಂಕನಹಳ್ಳಿ ಪ್ರಕಾಶನ, ಬನ್ನಿಕುಪ್ಪೆ, 2008.
5. ಆರ್ಕೆ ಮಣಿಪಾಲ : ಹೆಸರಿನಲ್ಲೇನಿದೆ?, ನ್ಯೂಸ್ಟಾರ್ ಪಬ್ಲಿಕೇಷನ್, ಬೆಂಗಳೂರು, 1989.
6. ಕಲಬುರ್ಗಿ.ಎಂ.ಎಂ (ಡಾ) : ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಸಂ.1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.
7. ಕರಿಬಸಪ್ಪ ಎ : ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಪಿಎಚ್.ಡಿ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003.
8. ಕಲಬುರ್ಗಿ.ಎಂ.ಎಂ (ಡಾ) : ಕನ್ನಡ ನಾಮವಿಜ್ಞಾನ, ಸೌಜನ್ಯ ಕಲ್ಯಾಣನಗರ, ಧಾರವಾಡ, 1996.
9. ಕಲಬುರ್ಗಿ.ಎಂ.ಎಂ (ಡಾ) : ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1989.
10. ಕಾಳೇಗೌಡ ನಾಗವಾರ : ಬೀದಿ ಮಕ್ಕಳು ಬೆಳೆದೊ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, 1977.
11. ಕಾಳೇಗೌಡ ನಾಗವಾರ : ಪ್ರೀತಿ ಮತ್ತು ನರ್ಭೀತಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು, 2006.
12. ಕುಮಾರಸ್ವಾಮಿ.ಕೆ.ಎಸ್ : ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1996.
13. ಕುಲಕರ್ಣಿ.ವಿ.ಪ್ರೊ : ಜೀವವಿಕಾಸ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2001.

14. ಕಲಬುರ್ಗಿ.ಎಂ.ಎಂ (ಡಾ) : ಮಾರ್ಗ, ಸಂ–2, ನರೇಶ್ ಅಂಡ್ ಕಂಪನಿ, ಬೆಂಗಳೂರು, 1988.
15. ಕುಳ್ಳಿ.ಜೆ.ಎಸ್ : ಆಧುನಿಕ ಭಾಷಾ ವಿಜ್ಞಾನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1970.
16. ಕೆಂಪೇಗೌಡ.ಕೆ. (ಡಾ) : ಕನ್ನಡ ಭಾಷಾ ಸ್ವರೂಪ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು, 1997.
17. ಕುಮಾರಸ್ವಾಮಿ.ಕೆ.ಎಸ್ : ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1996.
18. ಕೃಷ್ಣಯ್ಯ.ಡಿ.ಎನ್ (ಸಂ) : ಕೊಡಗಿನ ಇತಿಹಾಸ, ಪ್ರಸಾರಾಂಗ, ಮೈಸೂರು, 1995.
19. ಕೃಷ್ಣಪ್ಪ.ಎಸ್ : ಪಿರಿಯಾಪಟ್ಟಣ ತಾಲ್ಲೂಕು ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ (ಅಪ್ರಕಟಿತ), ಮೈಸೂರು ವಿಶ್ವವಿದ್ಯಾನಿಲಯ, 2007.
20. ಕೂಡ್ಲೂರು ವೆಂಕಟಪ್ಪ : ಗೊಂಬೆ ಚಿತ್ತಾರದ ಮಡೆಕಡೆದೊ, ಧಾತ್ರಿ ಪುಸ್ತಕ 27, ಬೆಂಗಳೂರು, 2009.
21. ಕೂಡ್ಲೂರು ವೆಂಕಟಪ್ಪ : ಸ್ಥಳನಾಮವೀರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2002.
22. ಕೃಷ್ಣರಾವ್.ಎಂ.ಬಿ : ಬೆಂಗಳೂರು ಕೆಂಪೇಗೌಡ, ಕಾರ್ಪೋರೇಷನ್ ಪ್ರಕಾಶನ, ಬೆಂಗಳೂರು, 1964.
23. ಗುರುಮೂರ್ತಿ ಪೆಂಡಕೂರು : ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2006.
24. ಗೋಪಾಲ.ಹೆಚ್.ಎಸ್ : ನಾಗಾಭಿನಂದನ, ಎಂ.ಜಿ.ನಾಗರಾಜ ಅಭಿನಂದನಾ ಗ್ರಂಥ, ಬೆಂಗಳೂರು, 1994.
25. ಗೋಪಾಲಕೃಷ್ಣ.ವಿ : ಕೋಲಾರ ಜಿಲ್ಲೆಯ ಸ್ಥಳನಾಮಗಳ ಸಮಾಜೋಭಾಷಿಕ ಅಧ್ಯಯನ, ಪಿಎಚ್.ಡಿ. (ಅಪ್ರಕಟಿತ) ಬೆಂಗಳೂರು ವಿಶ್ವವಿದ್ಯಾನಿಲಯ, 1989.
26. ಚಂದ್ರಶೇಖರ್.ಟಿ.ಎಸ್ : ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001.
27. ಗೋಪಾಲಕೃಷ್ಣ.ವಿ : ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ ದಾರಿನಾಯಕನ ಪಾಳ್ಯ, ಗೌರಿಬಿದನೂರು ತಾಲ್ಲೂಕು, ಕೋಲಾರ ಜಿಲ್ಲೆ, 1986.

28. ಚಿದಾನಂದಮೂರ್ತಿ.ಎಂ (ಡಾ) : ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1993.

29. ಚಿದಾನಂದಮೂರ್ತಿ.ಎಂ (ಡಾ) : ಸಂಶೋಧನೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, 2002.

30. ಚಿದಾನಂದಮೂರ್ತಿ.ಎಂ (ಡಾ) : ಭಾಷಾ ವಿಜ್ಞಾನದ ಮೂಲತತ್ವಗಳು, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, 1986.

31. ಚಿದಾನಂದಮೂರ್ತಿ.ಎಂ (ಡಾ) : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

32. ಚಿದಾನಂದಮೂರ್ತಿ.ಎಂ (ಡಾ) : ಸಮಗ್ರ ಸಂಪುಟ–3, ಸಪ್ನಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು–9.

33. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರಿ ಸಮಾಜ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1990.

34. ಜಗದೀಶ ಮಠದ : ಕೈಫಿಯತ್ತುಗಳಲ್ಲಿ ನಿರೂಪಿತ ಸ್ಥಳನಾಮಗಳು, ಎಂ.ಫಿಲ್ (ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ, ಹಂಪಿ, 1995.

35. ಜವರೇಗೌಡ.ದೇ : ಜಾನಪದ ಅಧ್ಯಯನ, ಚೇತನ ಬುಕ್ ಹೌಸ್, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು, 1991.

36. ಜವರೇಗೌಡ.ದೇ : ಬೆಂಗಳೂರು ಕೆಂಪೇಗೌಡ, ಬೆಂಗಳೂರು, 1950–51.

37. ಜವರೇಗೌಡ.ದೇ : ಜಾನಪದ ಸೌಂದರ್ಯ, ಸಹ್ಯಾದ್ರಿ ಪ್ರಕಾಶನ, ಮೈಸೂರು, 1977.

38. ಜವರೇಗೌಡ.ದೇ : ಬೆರಕೆಸೊಪ್ಪು, ಸುರಚಿ ಪ್ರಕಾಶನ, ಮೈಸೂರು, 1971,

39. ಜವರೇಗೌಡ.ದೇ : ಸ್ಥಳನಾಮಗಳ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು, 1990.

40. ಜವರೇಗೌಡ.ದೇ : ನಂಜುಂಡ ಕವಿ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು, 1964.

41. ಜಾರ್ಜ್.ಕೆ.ಎಂ : ಬೀದರ್ ಜಿಲ್ಲೆಯ ಸ್ಥಳನಾಮಗಳು, ಪಿಎಚ್.ಡಿ (ಅಪ್ರಕಟಿತ) ಗುಲಬರ್ಗಾ ವಿಶ್ವವಿದ್ಯಾನಿಲಯ.

42. ಜಾನಪದ ಜಗತ್ತು : ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು,1996.

43. ಡಿ.ವಿ.ಜಿ. : ಕನ್ನಡ ಐತಿಹ್ಯಗಳು, ತೇಜಸ್ವಿನಿ ಪ್ರಕಾಶನ, ಮಡಿಕೇರಿ, 1978.

44. ತಿಪ್ಪೇಸ್ವಾಮಿ.ಜಿ.ಆರ್, ರಂಗಾರೆಡ್ಡಿ ಕೋಡಿರಾಂಪುರ (ಸಂ) : ಜಾನಪದ ಅನ್ವಯಿಕತೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು, 2003.

45. ತಿಪ್ಪೇರುದ್ರಸ್ವಾಮಿ.ಹೆಚ್ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು,1974.

46. ತೈಲೂರು ವೆಂಕಟಕೃಷ್ಣ : ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ, ಭಾನುಪ್ರಕಾಶನ, 2004.

47. ದೇಶಪಾಂಡೆ.ಎಸ್.ಎಲ್ : ಕರ್ನಾಟಕ ಸ್ಥಳನಾಮಗಳು ಒಂದು ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008.

48. ನಂಜಯ್ಯ.ಎಂ. : ಚಾಮರಾಜ ತಾಲ್ಲೂಕಿನ ಸ್ಥಳನಾಮಗಳು, ಪಿಎಚ್.ಡಿ (ಅಪ್ರಕಟಿತ) ಮೈಸೂರು ವಿಶ್ವವಿದ್ಯಾಲಯ, 2000.

49. ನಟರಾಜ.ಡಿ.ಕೆ. : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪಿಎಚ್.ಡಿ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.

50. ನಾಗೇಗೌಡ.ಎಚ್.ಎಲ್ : ಕನ್ನಡ ಜಾನಪದ ಕೋಶ, ಕರ್ನಾಟಕ ಜಾಪನದ ಪರಿಷತ್ತು, ಬೆಂಗಳೂರು, 1998.

51. ನಾಗಭೂಷಣಸ್ವಾಮಿ.ಓ.ಎಲ್ : ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು,1994.

52. ನಾರಾಯಣ.ಕೆ.ವಿ : ಸ್ಥಳನಾಮಗಳ ಪರಿವರ್ತನೆ ಮತ್ತು ಪ್ರಭಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ,1999.

53. ನಾರಾಯಣ.ಕೆ.ವಿ (ಸಂ). : ಭಾಷೆ ವಿಶ್ವಕೋಶ 1, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.

54. ನಾರಾಯಣ.ಕೆ.ವಿ : ವ್ಯಕ್ತಿನಾಮಗಳು, ಸ್ವರೂಪ ಮತ್ತು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ,2000.

55. ನೇಗಿನಹಾಳ.ಎಂ.ಬಿ.:ನೇಗಿನಹಾಳರ ಪ್ರಬಂಧಗಳು, ಕನ್ನಡ ವಿಶ್ವವಿದ್ಯಾಲಯ,ಹಂಪಿ,1999.

56. ಪಾಲಾಕ್ಷ : ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಶಶಿ ಪ್ರಕಾಶನ, ತಿಪಟೂರು, 1987.

57. ಪುಟ್ಟಸ್ವಾಮಿ.ಬಿ.ಎಸ್ : ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ, ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಪುರದೊಡ್ಡಿ, ಬೆಂಗಳೂರು, 2007.
58. ಪುರುಷೋತ್ತಮ ಬಿಳಿಮಲೆ (ಸಂ) : ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1997.
59. ಪ್ರೊ.ಡಿ.ಲಿಂಗಯ್ಯ (ಸಂ) ಡಾ.ಚಕ್ಕರೆ ಶಿಚಶಂಕರ್ : ಸ್ಥಳನಾಮಗಳ ಅಧ್ಯಯನ (ಲೇಖನಗಳ ಸಂಗ್ರಹ), ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, 2008.
60. ಭೈರೇಗೌಡ.ಎಂ.(ಡಾ), ತಿಮ್ಮಯ್ಯ, ತಾ.ಸಿ. (ಸಂ) : ಅರ್ಕಾವತಿ, ಅಖಿಲ ಭಾರತ 67ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕನಕಪುರ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999.
61. ಭೈರೇಗೌಡ.ಎಂ.(ಡಾ) : ನಮ್ಮ ದೇಶಕ್ಕೆ, ಸುಮುಖ ಪ್ರಕಾಶನ, ಬೆಂಗಳೂರು, 2004.
62. ಬೊಮ್ಮೇಗೌಡ : ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು, ಎಂ.ಫಿಲ್ (ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯ, 1998.
63. ಮಂಜುನಾಥ.ಎಂ.ಜಿ (ಸಂ) : ಬೆಂಗಳೂರಿನ ಬಖೈರುಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, 2006.
64. ಮಲ್ಲೇಪುರಂ.ಜಿ.ವೆಂಕಟೇಶ (ಸಂ) : ಶಂಬಾ ಕೃತಿ ಸಮೀಕ್ಷೆ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1992.
65. ಮುಗುಳಿ.ರಂ.ಶ್ರೀ : ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ಮೈಸೂರು, 1978.
66. ರಘುಪತಿಭಟ್ಟ ಕೆಮ್ತೂರು (ಡಾ) : ಹೆಸರಿನಲ್ಲೇನಿದೆ, ನ್ಯೂಸ್ಟಾರ್ ಪಬ್ಲಿಕೇಷನ್ಸ್, ಸಾರಕಿ, ಬೆಂಗಳೂರು, 1989.
67. ರಘುಪತಿಭಟ್ಟ ಕೆಮ್ತೂರು (ಡಾ) : ತುಳುನಾಡಿನ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು,1979.
68. ರಘುಪತಿಭಟ್ಟ ಕೆಮ್ತೂರು (ಡಾ) : ಸ್ಥಳನಾಮಗಳು, ಮಾನವಿಕ ಕರ್ಣಾಟಕ ಪ್ರಕಾಶನ,1976.
69. ರಾಜೇಗೌಡ.ಹ.ಕ. : ಬೆಂಗಳೂರು ಕೆಂಪೇಗೌಡ ಮತ್ತು ಅವನ ವಂಶಸ್ಥರು, ಕೆಂಪೇಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 2005.
70. ರಾಮೇಗೌಡ.ಡಾ : ಜನಪದ ಸಾಹಿತ್ಯ ರೂಪಗಳು, ಸಂವಹನ, ಶಿವರಾಂಪೇಟೆ, ಮೈಸೂರು, 1999.

71. ಲಿಂಗಯ್ಯ.ಡಿ : ಜನಪದ ಜಗತ್ತು, ಕರ್ನಾಟಕ ಜಾನಪದ ಪರಿಷತ್, 1993.
72. ಲಕ್ಕಪ್ಪಗೌಡ.ಎಚ್.ಜೆ:ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1997.
73. ಲಲಿತ.ಎ.ಸಿ. : ಕಾಡು ಕುರುಬರು ಮತ್ತು ಜೇನು ಕುರುಬರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
74. ಲಿಂಗಯ್ಯ.ಡಿ, ಸಂಧ್ಯಾರೆಡ್ಡಿ.ಕೆ.ಆರ್ : ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2006.
75. ವಿಶ್ವನಾತಯ್ಯ.ಸಿ.ಎಂ : ಕಡೂರು ತಾಲ್ಲೂಕಿನ ಸ್ಥಳನಾಮಗಳು, ಜ್ಞಾನಭಾರತಿ ಪ್ರಕಾಶನ, ಕಡೂರು, 2006.
76. ವಿಶ್ವನಾಥ (ಡಾ) : ಸಕಲೇಶಪುರ ಪರಿಸರದ ಸ್ಥಳನಾಮಗಳು, ದೇವಿ ಪ್ರಕಾಶನ, ಮೈಸೂರು,1996.
77. ವಿಶ್ವನಾಥ (ಡಾ) : ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ, ದೇವಿ ಪ್ರಕಾಶನ, ಮೈಸೂರು, 2000.
78. ವೆಂಕಟಾಚಲಶಾಸ್ತ್ರಿ.ಟಿ.ವಿ : ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಸ್ತಕಶಕ್ತಿ ಪ್ರಕಾಶನ, ಬೆಂಗಳೂರು, 2007.
79. ಶರ್ಮ.ತಿ.ತಾ (ಸಂ) : ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1990.
80. ಶಿವರುದ್ರಪ್ಪ.ಜಿ.ಎಸ್ : ವಿಮರ್ಶೆಯ ಪೂರ್ವ–ಪಶ್ಚಿಮ, ಸಾಹಿತ್ಯ ಬಂಡಾರದ ಪ್ರಕಾಶನ, ಬೆಂಗಳೂರು, 1999.
81. ಶಿವಶಂಕರ್ ಚಕ್ಕರೆ : ಗೊರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
82. ಶಿವರಾಮ ಕಾರಂತ: ಸಿರಿಗನ್ನಡ ಅರ್ಥಕೋಶ, ಸಪ್ನಬುಕ್‌ಹೌಸ್, ಬೆಂಗಳೂರು, 2009.
83. ಶ್ರೀಧರ ಅಡಿಗ : ಕರ್ನಾಟಕ ಪ್ರೇಕ್ಷಣೀಯ ಸ್ಥಳಗಳು, ಕೃಷಿ ವಿಕಾಸ ಪಬ್ಲಿಕೇಷನ್ಸ್, ಬೆಂಗಳೂರು, 2006.
84. ಶೇಷಶಾಸ್ತ್ರಿ.ಆರ್ : ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1982.
85. ಸಂಗಮೇಶ ಸವದತ್ತಿಮಠ : ದ್ರಾವಿಡ ಭಾಷಾ ವಿಜ್ಞಾನ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ, 1990.

86. ಸಂಗಮೇಶ ಸವದತ್ತಿ ಮಠ : ದ್ರಾವಿಡ ಭಾಷಾ ವ್ಯಾಸಂಗ, ರೂಪರಶ್ಮಿ ಪ್ರಕಾಶನ, ಕಲಬುರ್ಗಿ, 1990.
87. ನಾಗಾಚಾರಿ.ಎಸ್ : ಮೈಸೂರು ಜಿಲ್ಲಾ ಗ್ರಾಮನಾಮಗಳ ಅಧ್ಯಯನ, ಪಿಎಚ್.ಡಿ (ಅಪ್ರಕಟಿತ), ಮೈಸೂರು ವಿಶ್ವವಿದ್ಯಾಲಯ, 2006.
88. ಸಾಧನೆ : ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1980.
89. ಸಿದ್ದಲಿಂಗಯ್ಯ : ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು, 1997.
90. ಸಂಗಮೇಶ ಸವದತ್ತಿಮಠ : ಕನ್ನಡ ಮತ್ತು ಭಾಷಾ ವ್ಯಾಸಂಗ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ, 1993.
91. ಸುರೇಶ್.ಕೆ.ಸಿ : ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪಿಎಚ್.ಡಿ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.
92. ಸಿ.ಪಿ.ಕೆ:ಜಾನಪದ ತತ್ವ ಮತ್ತು ಸತ್ವ, ತುಳುಕಿನ ವೆಂಕಣಯ್ಯ ಸ್ಮಾರಕ, ಗ್ರಂಥಮಾಲೆ, 2004.
93. ಸುಬ್ಬಣ್ಣರೈ.ವಿ:ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಮುಂಬಯಿ ವಿಶ್ವವಿದ್ಯಾಲಯ,1994.
94. ಸೇಡಿಯಾಪು ಕೃಷ್ಣಭಟ್ಟ : ಕೆಲವು ದೇಶನಾಮಗಳು, ಸಾಹಿತ್ಯ ಸಂಘ, ಮಣಿಪಾಲ, 1975.
95. ಸೋಮಶೇಖರ ಇಮ್ರಾಪುರ : ಜನಪದ ಒಗಟುಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1989.
96. ರಸಿಗ ಪುತ್ತಿಗೆ : ಚನ್ನಪಟ್ಟಣ ತಾಲ್ಲೂಕು ದರ್ಶನ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು,1985.
97. ಶಂ.ಬಾ.ಜೋಶಿ : ಎಡೆಗಳು ಹೇಳುವ ಕಂನಾಡ ಕತೆ, ಧಾರವಾಡ, 1942,
98. Studies in Indian Place Names : The Place Names Society of India, Mysore – 2003.

ನಿಘಂಟು ಮತ್ತು ವಿಶ್ವಕೋಶಗಳು :

1. ಕನ್ನಡ ರತ್ನಕೋಶ : ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, 1994.
2. ಕನ್ನಡ–ಕನ್ನಡ ಶಬ್ದಕೋಶ : ಬಿ.ಜಿ.ಸಂಕೇಶ್ವರ ಆ್ಯಂಡ್ ಕಂಪನಿ, ಗದಗ, 1993.
3. ಕನ್ನಡ ನಿಘಂಟು ಸಂಪುಟ–2 : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 1976.
4. ಕನ್ನಡ ವಿಶ್ವಕೋಶ ಸಂಪುಟಗಳು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕರ್ನಾಟಕ ವಿಷಯ ವಿಶ್ವಕೋಶ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1975.
6. ಕಿಟೆಲ್.ಆರ್.ಎಫ್ : ಕನ್ನಡ ಇಂಗ್ಲಿಷ್ ನಿಘಂಟು,
7. ನಾಗೇಗೌಡ.ಎಚ್.ಎಲ್ : ಕನ್ನಡ ಜನಪದ ಕೋಶ, ಕರ್ನಾಟಕ ಜನಪದ ಪರಿಷತ್ತು, ಬೆಂಗಳೂರು, 1998.
8. ಬಿ.ಎಲ್.ರೈಸ್ : ಎಪಿಗ್ರಾಫಿಯಾ ಕರ್ನಾಟಕ, ಸಂಪುಟ–9, ಬೆಂಗಳೂರು ಜಿಲ್ಲೆ, ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, 1975.
9. ಕನ್ನಡ ವಿಷಯ ವಿಶ್ವಕೋಶ : ಕರ್ನಾಟಕ ಸಂಪುಟ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1979.
10. ಕರ್ನಾಟಕ ಗ್ರಾಮಸೂಚಿ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1985.
11. ಕರ್ನಾಟಕ ಸಂಗಾತಿ : ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, 2002.

ಶಾಸನ ಸಂಪುಟಗಳು :

1. ಮಂಜುನಾಥ.ಎಂ.ಜಿ.(ಸಂ) : ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, 2006.
2. ಎಫಿಗ್ರಾಫಿಯಾ ಕರ್ನಾಟಕಾದ ಎಲ್ಲಾ ಸಂಪುಟಗಳು.

ಪತ್ರಿಕೆಗಳು :

1. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು.
2. ಜಾನಪದ ಜಗತ್ತು.
3. ರೇಷ್ಮೆ ಸೀಮೆ.
4. ಬಯಲು ಸೀಮೆ.
5. ಕೆಂಗಲ್ ಪತ್ರಿಕೆ.
6. ಪ್ರಜಾವಾಣಿ.
7. ವಿಜಯವಾಣಿ.

ಇಂಗ್ಲೀಷ್ :

1) ಸೂರ್ಯನಾಥಕಾಮತ(ಸಂ) : ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಗೆಜೆಟಿಯರ್, ಬೆಂಗಳೂರು, 1989.
2) ಕರ್ನಾಟಕ ಗೆಜೆಟಿಯರ್ : ಬೆಂಗಳೂರು, 1984.
3) ಅಭಿಶಂಕರ್.ಕೆ : ತುಮಕೂರು ಜಿಲ್ಲಾ ಗೆಜೆಟಿಯರ್, ಬೆಂಗಳೂರು, 1968.

ಅನುಬಂಧ–2

ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಅಕರಾದಿ ಪಟ್ಟಿ :

ಕ್ರ.ಸಂ.	ಊರಿನ ಹೆಸರು	ಕ್ರ.ಸಂ.	ಊರಿನ ಹೆಸರು
1.	ಅಕ್ಕೂರು	21	ಕೃಷ್ಣಾಪುರ
2.	ಅಗ್ರಹಾರ ವಳಗೆರೆಹಳ್ಳಿ	22	ಕಾರೇಕೊಪ್ಪ
3.	ಅಜ್ಜನಳ್ಳಿ	23	ಕುಕ್ಕೂರು
4.	ಅಣ್ಣಿಗೆರೆ	24	ಕೂಡ್ಲೂರು
5.	ಅತ್ತಿಗುಪ್ಪೆ	25	ಕೂರ್ಣಗೆರೆ
6.	ಅಬ್ಬೂರು	26	ಕೆಳಗೆರೆ
7.	ಅಮ್ಮಲ್ಲಿದೊಡ್ಡಿ	27	ಕೊಂಡಾಪುರ
8.	ಅವ್ವೇರಹಳ್ಳಿ	28	ಕೋಡಂಬಳ್ಳಿ
9.	ಅರಳಾಪುರ	29	ಕೋಡಿಪುರ
10.	ಅರಳಾಸಂದ್ರ	30	ಕೋಡಿಹೊಸಹಳ್ಳಿ
11.	ಅಂಕುಶನಹಳ್ಳಿ	31	ಕೋಮನಹಳ್ಳಿ
12.	ಅಂಬಾಡಹಳ್ಳಿ	32	ಕೋಳೂರು
13.	ಇಗ್ಗಲೂರು	33	ಗರಕಹಳ್ಳಿ
14.	ಉಜ್ಜನಹಳ್ಳಿ	34	ಗುಡ್ಡೆಹೊಸೂರು
15.	ಎಲೆತೋಟದಹಳ್ಳಿ	35	ಗೆಂಡೇಮಡು
16.	ಎಲೆಹೊಸಹಳ್ಳಿ	36	ಗೋವಿಂದನಹಳ್ಳಿ
17.	ಕದರಮಂಗಲ	37	ಗೌಡಗೆರೆ
18.	ಕನ್ನಮಂಗಲ	38	ಚಕ್ಕಲೂರು
19.	ಕನ್ನಸಂದ್ರ	39	ಚಕ್ಕರೆ
20.	ಕಲ್ಲಾಪುರ	40	ಚನ್ನಪಟ್ಟಣ

41	ಚಿಕ್ಕೇನಹಳ್ಳಿ	64	ಬಾಣಗಹಳ್ಳಿ
42	ಚಿಕ್ಕಮಳೂರು	65	ಬ್ಯಾಡರಹಳ್ಳಿ (ಮಾ.ಹೊ)
43	ತಗಚಗೆರೆ	66	ಬ್ಯಾಡರಹಳ್ಳಿ (ವಿ.ಹ)
44	ತಟ್ಟೇಕೆರೆ	67	ಬ್ರಾಹ್ಮಣಿಪುರ
45	ತೂಬಿನಕೆರೆ	68	ಬುಕ್ಕಸಾಗರ
46	ತೊರೆಹೊಸೂರು	69	ಭೂಹಳ್ಳಿ
47	ದಾಸವಾರ	70	ಬೆಳಕೆರೆ
48	ದ್ಯಾವಪಟ್ಣ	71	ಬೇವೂರು
49	ದೇವರಹೊಸಹಳ್ಳಿ	72	ಬೊಮ್ಮನಹಳ್ಳಿ
50	ದೊಡ್ಡನಹಳ್ಳಿ	73	ಭೈರನಾಯಕನಹಳ್ಳಿ
51	ದೊಡ್ಡಮಳೂರು	74	ಭೈರಸೆಟ್ಟಿಹಳ್ಳಿ
52	ನಾಗಪುರ	75	ಮತ್ತೀಕೆರೆ
53	ನಾಗಾವರ	76	ಮಳಗಾಳು
54	ನೀಲಕಂಠನಹಳ್ಳಿ	77	ಮಲ್ಲಂಗೆರೆ
55	ನೀಲಸಂದ್ರ	78	ಮಾಳೂರು ಪಟ್ಟಣ
56	ನುಣ್ಣೂರು	79	ಮಂಕುಂದ
57	ನೆರಳೂರು	80	ಮಂಗಳವಾರಪೇಟೆ
58	ನೆಲಮಾಕನಹಳ್ಳಿ	81	ಮಂಗಾಡಹಳ್ಳಿ
59	ಪಟ್ಲು	82	ಮಾಕಳಿ
60	ಬನಂತನಹಳ್ಳಿ	83	ಮಾರ್ಚನಹಳ್ಳಿ
61	ಬಳ್ಳಾಪಟ್ಟಣ	84	ಮಾದಪುರ
62	ಬಂದೂರು ವಳಗೆರಹಳ್ಳಿ	85	ಮುದಿಗೆರೆ
63	ಬಾಚಹಳ್ಳಿ	86	ಮೆಣಸಿಗನಹಳ್ಳಿ

87	ಮೈಲನಾಯಕನಹಳ್ಳಿ	105	ಸಿದ್ಧಾಪುರ
88	ಮೋಗೇನಹಳ್ಳಿ	106	ಸಿಂಗರಾಜಪುರ
89	ಯಲಿಯೂರು	107	ಸೀಬನಹಳ್ಳಿ
90	ರಾಮಪುರ	108	ಸುಣ್ಣಘಟ್ಟ
91	ಲಾಲಘಟ್ಟ	109	ಸುಳ್ಳೇರಿ
92	ವಡ್ಡರಗುಪ್ಪೆ	110	ಸೆಟ್ಟಹಳ್ಳಿ
93	ವಡೇರಹಳ್ಳಿ	111	ಸೋಗಾಲ
94	ವಂದರಗುಪ್ಪೆ	112	ಸೋಮನಾಥಪುರ
95	ವಿಟಲೇಶಹಳ್ಳಿ	113	ಹನಿಯೂರು
96	ವಿರುಪಸಂದ್ರ	114	ಹಳೇಹಳ್ಳಿ
97	ವಿರೂಪಾಕ್ಷಿಪುರ	115	ಹಾರೋಕೊಪ್ಪ
98	ಶಾನುಭೋಗನಹಳ್ಳಿ	116	ಹಾರೋಹಳ್ಳಿದೊಡ್ಡಿ
99	ಸಣಬನಹಳ್ಳಿ	117	ಹುಣಸನಹಳ್ಳಿ
100	ಸರಗೂರು	118	ಹೊಟ್ಟಿಗನಹೊಸಹಳ್ಳಿ
101	ಸಂಕಲಗೆರೆ	119	ಹೊನ್ನಿಗನಹಳ್ಳಿ
102	ಸಂತೇಮೋಗೇನಹಳ್ಳಿ	120	ಹೊಸಹಳ್ಳಿ
103	ಸಾದಹಳ್ಳಿ	121	ಹೊಂಗನೂರ
104	ಸಿದ್ದನಹಳ್ಳಿ	122	ಸಿದ್ಧಾಪುರ

ಅನುಬಂಧ – 3

ವಕ್ತೃಗಳ ವಿವರ :

'ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳು–ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಸ್ಥಳನಾಮಗಳನ್ನು ಅಧ್ಯಯನ ಮಾಡಲು ಕ್ಷೇತ್ರಕಾರ್ಯ ಕೈಗೊಂಡಾಗ ಸ್ಥಳೀಯರು ನನ್ನೊಂದಿಗೆ ಸ್ಪಂದಿಸುತ್ತಾ, ನಾನು ಕೇಳಿದ ಪ್ರಶ್ನಾವಳಿಗೆ ಉತ್ತರಿಸಿದರು. ವಯಸ್ಸಾದ ಅನುಭವಿಗಳು, ಪುರೋಹಿತರು ನನಗೆ ಸಹಕರಿಸಿದರು. ಈ ನಿಟ್ಟಿನಲ್ಲಿ ಸ್ಥಳನಾಮಗಳನ್ನು ಅಧ್ಯಯನ ಮಾಡಿ ಇಡೀ ಸಮೂಹವನ್ನೇ ಅಧ್ಯಯನಕ್ಕೆ ಒಳಪಡಿಸಿಕೊಳ್ಳಬೇಕಾಯಿತು. ಕ್ಷೇತ್ರಕಾರ್ಯ ಮಾಡುವಾಗ ಕೇಳಿದ ಪ್ರಶ್ನೆಗಳಿಗೆ ವಕ್ತೃಗಳು ಆದಷ್ಟು ಸಹಕರಿಸಿದರು; ಮತ್ತಷ್ಟು ಜನ ಗಲಿಬಿಲಿಗೊಂಡರು. ಆದರೂ ಹಲವಾರು ಅನುಭವಗಳೊಂದಿಗೆ ಕ್ಷೇತ್ರಕಾರ್ಯ ಮಾಡಿ ವಿಷಯ ಸಂಗ್ರಹಿಸಲಾಗಿದೆ. ಆ ವಕ್ತೃಗಳು ವಿವರ ಕೆಳಕಂಡತಿವೆ.

ಕ್ರ. ಸಂ	ಹೆಸರು	ವಯಸ್ಸು	ಜಾತಿ	ವಿದ್ಯಾಭ್ಯಾಸ	ಊರು	ವೃತ್ತಿ
1	ಸು.ತ.ರಾಮೇಗೌಡರು	70	ಒಕ್ಕಲಿಗ	ಬಿ.ಎ	ಚನ್ನಪಟ್ಟಣ	ಸಂಪಾದಕರು
2	ಶಿವಪ್ಪ	40	ಒಕ್ಕಲಿಗ	ಬಿ.ಇ	ಮಳೂರು	ಫ್ಯಾಕ್ಟರಿಕೆಲಸ
3	ಮೋಟೇಗೌಡ	65	ಒಕ್ಕಲಿಗ	5ನೇತರಗತಿ	ವಿರುಪಾಕ್ಷಪುರ	ವ್ಯವಸಾಯ
4	ಸಿಂ.ಲಿಂ.ನಾಗರಾಜು	65	ಒಕ್ಕಲಿಗ	ಬಿ.ಎ	ಸಿಂಗರಾಜಿಪುರ	ಊರಿನ ಮುಖ್ಯಸ್ಥರು
5	ಬಿ.ಟಿ.ಜಯಮುದ್ದಪ್ಪ	80	ಒಕ್ಕಲಿಗ	5ನೇತರಗತಿ	ಬಂಡೂರು ವಳಗೆರೆಹಳ್ಳಿ	ವ್ಯವಸಾಯ
6	ಪಾಪಣ್ಣ	60	ಕುರುಬ	ಅವಿದ್ಯಾವಂತ	ಸುಣ್ಣಘಟ್ಟ	ವ್ಯವಸಾಯ
7	ಬೊಮ್ಮಯ್ಯ	55	ಆದಿಕರ್ನಾಟಕ	ಅವಿದ್ಯಾವಂತ	ಲಾಳಘಟ್ಟ	ಕೂಲಿಕೆಲಸ
8	ಅಣ್ಣಯ್ಯ	80	ಒಕ್ಕಲಿಗ	4ನೇತರಗತಿ	ನೀಲಸಂದ್ರ	ವ್ಯವಸಾಯ
9	ಗುರುಸ್ವಾಮಿ	60	ಆದಿಕರ್ನಾಟಕ	ಅವಿದ್ಯಾವಂತ	ನೀಲಕಂಠನಹಳ್ಳಿ	ಕೂಲಿಕೆಲಸ
10	ವಿಶ್ವ	75	ಆದಿಕರ್ನಾಟಕ	ಅವಿದ್ಯಾವಂತ	ವಂದಾರಗುಪ್ಪೆ	ಕೂಲಿಕೆಲಸ
11	ಎಸ್.ರವಿ	60	ಆದಿಕರ್ನಾಟಕ	ಅವಿದ್ಯಾವಂತ	ಮಂಕುಂದ	ವ್ಯವಸಾಯ
12	ಬಸವರಾಜು	45	ಒಕ್ಕಲಿಗ	ಪಿಯುಸಿ ಟಿ.ಸಿ.ಹೆಚ್	ನಾಗವಾರ	ಶಿಕ್ಷಕರು

13	ರಾಮಯ್ಯ	40	ಆದಿಕರ್ನಾಟಕ	ಪಿಯುಸಿ	ಬೇವೂರು	ಪ್ಯಾಕ್ಟರಿಕೆಲಸ
14	ಪ್ರಸನ್ನಕುಮಾರ್	60	ಒಕ್ಕಲಿಗ	5ನೇತರಗತಿ	ಬ್ರಹ್ಮಣಿಪುರ	ಪುರೋಹಿತರು
15	ವೆಂಕಟಪ್ಪ	50	ಒಕ್ಕಲಿಗ	ಎಂ.ಎ	ಕೂಡ್ಲೂರು	ಉಪನ್ಯಾಸಕರು
16	ಚನ್ನಪ್ಪ	75	ಒಕ್ಕಲಿಗ	ಬಿ.ಎ	ಚಕ್ಕಲೂರು	ಸಂಪಾದಕರು
17	ನಾರಾಯಣ್	40	ಒಕ್ಕಲಿಗ	10ನೇತರಗತಿ	ದಶವಾರ	ವ್ಯವಸಾಯ
18	ಕೃಷ್ಣ	60	ಒಕ್ಕಲಿಗ	ಅವಿದ್ಯಾವಂತ	ಮಾಕಳಿ	ಕೂಲಿಕೆಲಸ
19	ಎಸ್.ಮರಿಗೌಡ	55	ಒಕ್ಕಲಿಗ	ಬಿ.ಎ ಬಿ.ಇಡಿ	ಸುಳ್ಳೇರಿ	ಶಿಕ್ಷಕರು
20	ಶಿವಶಂಕರ್	60	ಒಕ್ಕಲಿಗ	ಎಂ.ಎ	ಚಕ್ಕೇರಿ	ಉಪನ್ಯಾಸಕರು
21	ಕೆಂಪಣ್ಣ	50	ಒಕ್ಕಲಿಗ	10ನೇತರಗತಿ	ಬಲ್ಲಾಪಟ್ನ	ವ್ಯವಸಾಯ
22	ರೇವಣಸಿದ್ದಯ್ಯ	45	ಲಿಂಗಾಯಿತ	5ನೇತರಗತಿ	ಕೆಂಗಲ್	ದೇವಸ್ಥಾನದ ಅರ್ಚಕರು
23	ಚಿಕ್ಕಣ್ಣ	45	ಒಕ್ಕಲಿಗ	ಅವಿದ್ಯಾವಂತ	ನಿಡಗೋಡಿ	ವ್ಯವಸಾಯ
24	ಜಗದೀಶ್	40	ಒಕ್ಕಲಿಗ	ಎಂ.ಎ	ಗರಕಹಳ್ಳಿ	ಶಿಕ್ಷಕರು
25	ರಾಮಯ್ಯ	65	ಬುಡಬುಡಿಕೆ	5ನೇತರಗತಿ	ಪೌಳಿದೊಡ್ಡಿ	ಕೂಲಿಕೆಲಸ
26	ರಾಮಚಂದ್ರ	55	ಒಕ್ಕಲಿಗ	ಬಿ.ಎ ಬಿ.ಇಡಿ	ಕೂರಣಗೆರೆ	ಶಿಕ್ಷಕರು
27	ಕೃಷ್ಣಪ್ಪ	50	ಒಕ್ಕಲಿಗ	ಬಿ.ಎ	ಹೊನ್ನಬೊಮ್ಮ ನಾಯಕನಹಳ್ಳಿ	ಸಂಪಾದಕರು
28	ನಾರಾಯಣಗೌಡ	60	ಒಕ್ಕಲಿಗ	5ನೇತರಗತಿ	ನೆಲಮಾಕನಹಳ್ಳಿ	ವ್ಯವಸಾಯ
29	ಕಾಂತರಾಜ್‌ಅರಸು	30	ಅರಸು	ಎಂ.ಎ	ಹೊಂಗನೂರು	ಗ್ರಾಮ ಪಂಚಾಯ್ತಿ ಅಧ್ಯಕ್ಷರು
30	ಶಿವಪ್ಪ	60	ಆದಿಕರ್ನಾಟಕ	ಅವಿದ್ಯಾವಂತ	ಅರಳಾಸಂದ್ರ	ಕೂಲಿಕೆಲಸ
31	ವಿ.ಆರ್.ರಾಜು	60	ಒಕ್ಕಲಿಗ	5ನೇತರಗತಿ	ಅಬ್ಬೂರು	ವ್ಯವಸಾಯ
32	ಪುಟ್ಟಲಿಂಗಯ್ಯ	60	ಮಡಿವಾಳ ಶೆಟ್ಟರು	ಅವಿದ್ಯಾವಂತ	ಚಿಕ್ಕಮಳೂರು	ಕೂಲಿಕೆಲಸ
33	ಸಿದ್ದೇಗೌಡ	60	ಒಕ್ಕಲಿಗ	10ನೇತರಗತಿ	ದೇವರ ಹೊಸಹಳ್ಳಿ	ಕೆಎಸ್ಐಸಿ
34	ನಟರಾಜಮೂರ್ತಿ	48	ಒಕ್ಕಲಿಗ	ಅವಿದ್ಯಾವಂತ	ಇಗ್ಗಲೂರು	ವ್ಯವಸಾಯ
35	ಶಂಕರೇಗೌಡ	50	ಒಕ್ಕಲಿಗ	10ನೇತರಗತಿ	ಹಾರೋಕೊಪ್ಪ	ವ್ಯವಸಾಯ
36	ಪುಟ್ಟಸ್ವಾಮಿಗೌಡ	65	ಒಕ್ಕಲಿಗ	ಪಿಯುಸಿ	ಮಳೂರುಪಟ್ಟಣ	ವ್ಯವಸಾಯ
37	ಸಿದ್ದೇಗೌಡ	80	ಒಕ್ಕಲಿಗ	10ನೇತರಗತಿ	ನೂಣ್ಣೂರು	ವ್ಯವಸಾಯ

38	ಕೃಷ್ಣಪ್ಪ.ಎಸ್	50	ಒಕ್ಕಲಿಗ	10ನೇತರಗತಿ	ಸೋಗಾಲ	ವ್ಯವಸಾಯ
39	ಚಿಕ್ಕರಂಗಯ್ಯ	40	ಒಕ್ಕಲಿಗ	ಅವಿದ್ಯಾವಂತ	ನೀಲಕಂಠನಹಳ್ಳಿ	ವ್ಯವಸಾಯ
40	ಬಸವೇಗೌಡ	65	ಒಕ್ಕಲಿಗ	ಅವಿದ್ಯಾವಂತ	ವಿರುಪಾಕ್ಷಿಪುರ	ವ್ಯವಸಾಯ
41	ನಂಜುಂಡೇಗೌಡ	38	ಒಕ್ಕಲಿಗ	ಅವಿದ್ಯಾವಂತ	ಕೂರಣಗೆರೆ	ವ್ಯವಸಾಯ
42	ರೇವಣಸಿದ್ದಯ್ಯ	45	ಲಿಂಗಾಯಿತ	5ನೇತರಗತಿ	ಅಕ್ಕೂರು ಹೊಸಹಳ್ಳಿ	ದೇವಸ್ಥಾನ ಅರ್ಚಕರು
43	ಭಾಗ್ಯಮ್ಮ	55	ವಿಶ್ವಕರ್ಮ	ಅವಿದ್ಯಾವಂತ	ನಾಗವಾರ	ಲಕ್ಷ್ಮೀದೇವಸ್ಥಾನ ಅರ್ಚಕರು
44	ನಾಗರಾಜು	55	ಮಡಿವಾಳ	5ನೇತರಗತಿ	ನಿಡಗೋಡಿ	ಬಟ್ಟೆ ಶುಚಿ ಗೊಳಿಸುವುದು
45	ಕೆ.ಪ್ರಕಾಶ	33	ಆದಿಕರ್ನಾಟಕ	ಎಂ.ಎ	ಕುಡ್ಲೂರು	ಉಪನ್ಯಾಸಕರು
46	ನಾರಾಯಣಪ್ಪ	50	ಉಪ್ಪಾರ	5ನೇತರಗತಿ	ಮಂಗಳವಾರ ಪೇಟೆ	ಅರ್ಚಕರು
47	ಮಾಯಮ್ಮ	40	ಆದಿಕರ್ನಾಟಕ	ಅವಿದ್ಯಾವಂತೆ	ನೀಲಸಂದ್ರ	ಗ್ರಾಮ ಪಂಚಾಯ್ತಿ ಸದಸ್ಯೆ
48	ರಮೇಶ	35	ಒಕ್ಕಲಿಗ	ಬಿ.ಎ	ಕೋಡಂಬಹಳ್ಳಿ	ಹಾಲಿನ ವ್ಯಾಪಾರಿ
49	ಮೋಟಯ್ಯ	75	ಉಪ್ಪಾರ	7ನೇತರಗತಿ	ಬ್ರಹ್ಮಣಿಪುರ	ಜ್ಯೋತಿಷ್ಯ ವಿದ್ವಾಂಸ
50	ಕಾಳೇಗೌಡ	65	ಒಕ್ಕಲಿಗ	ಬಿ.ಎ ಬಿ.ಇಡಿ	ಚನ್ನಪಟ್ಟಣ	ಶಿಕ್ಷಕರು

ಅನುಬಂಧ – 4

ಪ್ರಶ್ನಾವಳಿ :

1. ನಿಮ್ಮ ಹೆಸರು, ವಯಸ್ಸು, ಜಾತಿ, ಊರು, ಏನಾಗಿದ್ದೀರಿ?
2. ಊರಿನ ಹೆಸರೇನು? ಈ ಹೆಸರು ಬರಲು ಕಾರಣವೇನು?
3. ಊರಿನ ಹೆಸರನ್ನು ಜನ ಹೇಗೆ ಉಚ್ಚರಿಸುತ್ತಾರೆ? ಹಿಂದೆ ಹೇಗೆ ಉಚ್ಚರಿಸುತ್ತಿದ್ದರು?
4. ಈ ಊರಿನಲ್ಲಿ ಮಾತನಾಡುವ ಭಾಷೆ ಯಾವುದು?
5. ಈ ಊರಿನ ಅಧಿದೇವತೆ ಮತ್ತು ದೇವಸ್ಥಾನಗಳು ಯಾವುವು?
6. ಈ ಊರಿನಲ್ಲಿರುವ ಸಮುದಾಯಗಳು ಮತ್ತು ಪ್ರಮುಖ ವೃತ್ತಿಗಳು ಯಾವುವು?
7. ಈ ಊರಿನಲ್ಲಿ ಆಚರಿಸುವ ಪ್ರಮುಖ ಹಬ್ಬ ಯಾವುದು?
8. ಈ ಊರಿನ ದೇವತೆಗೆ ಸಂಬಂಧಿಸಿದ ಕೆರೆ, ಕಟ್ಟೆಗಳೇನಾದರೂ ಇವೆಯೇ?
9. ಈ ಊರಿನ ಹೆಸರೊಡನೆ ಬೆರೆತ ಗಾದೆ, ಒಗಟು, ಕಥೆಗಳೇನಾದರೂ ಇವೆಯೇ?
10. ಈ ಊರಿಗೆ ಸಂಬಂಧಿಸಿದ ಶಾಸನಗಳು ಇವೆಯೇ?
11. ಈ ಊರಿಗೆ ಹೆಸರು ಬರಲು ಏನಾದರು ಐತಿಹ್ಯ ಇದೆಯೇ?
12. ಈ ಊರು ಯಾವಾಗ ಹುಟ್ಟಿತು? ಅದಕ್ಕೆ ದಾಖಲೆಗಳಿವೆಯೇ?
13. ಈ ಊರಿನ ಹೆಸರು ಯಾವಾಗಲಾದರೂ ಬದಲಾವಣೆ ಹೊಂದಿತೆ?
14. ಈ ಊರಿನಲ್ಲಿ ಬೆಳೆಯುವ ಬೆಳೆಗಳು ಯಾವುವು? ವಿಶಿಷ್ಟವಾದ ಬೆಳೆ ಯಾವುದಾದರೂ ಉಂಟೆ?
15. ಈ ಊರಿನ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಅನುಬಂಧ–5

ಚನ್ನಪಟ್ಟಣ ತಾಲ್ಲೂಕಿನ ನಕ್ಷೆ :



ಅನುಬಂಧ – 6

ಛಾಯಾಚಿತ್ರಗಳು :

ಸಿಂಗರಾಜಪುರ ಬೆಟ್ಟದ ಮೇಲಿರುವ ಶ್ರೀ ಗವಿರಂಗಸ್ವಾಮಿ ದೇವಸ್ಥಾನ

ಸಿಂಗರಾಜಪುರ ಬೆಟ್ಟದ ಮೇಲಿರುವ ಶ್ರೀ ಗವಿರಂಗಸ್ವಾಮಿ ಪಾದವಿಟ್ಟ ಸ್ಥಳ

ಅರಳಾಸಂದ್ರದಲ್ಲಿರುವ ಹಿಂದೂ–ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಮಸೀದಿ

ಸಿಂಗರಾಜಪುರ ಬೆಟ್ಟದ ಕೆಳಗಿರುವ ಹನಿಯೂರು

ಕೆಂಗಲ್’ ಎಂದು ಹೆಸರು ಬರಲು ಕಾರಣವಾದ ಕೆಂಪು ಕಲ್ಲು

ಕೆಂಗಲ್‌ನಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ

ಅಬ್ಬೂರಿನಲ್ಲಿರುವ ಬ್ರಹ್ಮಣ್ಯತೀರ್ಥ ಮಠ

ದೊಡ್ಡಮಳೂರಿನಲ್ಲಿರುವ ಶ್ರೀ ಅಪ್ರಮೇಯಸ್ವಾಮಿ ದೇವಸ್ಥಾನ

ಕಣ್ವ ಜಲಾಶಯ

ಕೂಡ್ಲೂರಿನಲ್ಲಿರುವ ಗಂಗರ ಕಾಲದ ಶಾಸನ ಮತ್ತು ಮಂಗಳೇಶ್ವರ ದೇವಸ್ಥಾನ

ಕೂಡ್ಲೂರಿನಲ್ಲಿರುವ ಗಂಗರ ಕಾಲದ ಶಾಸನ ಮತ್ತು ಮಂಗಳೇಶ್ವರ ದೇವಸ್ಥಾನ

ಚನ್ನಪಟ್ಟಣದ ಬೊಂಬೆಗಳು